UNIVERSAL
LIBRARY
OU_200390
UNIVERSAL
LIBRARY

ಸಂಪುಟ ೨]　　1918　　[ಸಂಚಿಕೆ [illegible]

The Kannada Academy Journal

(April, July, October)

ಕರ್ಣಾಟಕ
ಸಾಹಿತ್ಯಪರಿಷತ್ಪತ್ರಿಕೆ

ಕಾಳಯುಕ್ತಿ ಸಂ॥ ಚೈತ್ರ, ಆಷಾಢ, ಆಶ್ವಯುಜ

ವಾರ್ಷಿಕಚಂದಾ ರೂ. ೩　　ಬಿಡಿಸಂಚಿಕೆ ರೂ. ೧

ವಿಷಯಸೂಚಿಕೆ.

ಚಾವುಂಡರಾಯ ಪುರಾಣಂ	೩— ೪೬
ಕವಿಚರಿತೆ	೪೭— ೫೧
ಕನ್ನಡ ಜೈಮಿನಿಭಾರತ ವಿಮರ್ಶೆ	೫೨— ೬೪
ಕನ್ನಡ ಕವಿತೆಯ ಭವಿತವ್ಯತೆ	೬೫— ೬೮
ಪ್ರಚಲಿತವಾದ ಕನ್ನಡಭಾಷೆಗೆ ತಕ್ಕ ವ್ಯಾಕರಣರಚನೆ ...	೬೯— ೮೩
ಆಧುನಿಕ ಮಹಾರಾಷ್ಟ್ರ ಸಾಹಿತ್ಯ	೮೪— ೯೧
ಕವಿತಾ ಕಲಾಪ	೯೨— ೯೩
ಆಧುನಿಕ ಕವಿತೆಗಳು ಮುಂತಾದುವು	೯೪— ೯೯
ಪತ್ರವ್ಯವಹಾರ	೧೦೦—೧೦೫
ನಾಲ್ಕನೆಯ ಕರ್ಣಾಟಕಸಾಹಿತ್ಯಸಮ್ಮೇಳನ	೧೦೬—೧೧೪
ಪಿಂಗಳಸಂವತ್ಸರದ ವರದಿ	೧೧೫—೧೨೬
ಸಮ್ಮೇಳನದ ಅಧ್ಯಕ್ಷರ ಭಾಷಣ	೧೨೭—೧೪೬
ಸಮ್ಮೇಳನದ ವಿಷಯ	೧೪೭—೧೪೮
ಅಧ್ಯಕ್ಷರ ಉಪಸಂಹಾರಭಾಷಣ	೧೪೯—೧೫೨
ತೃತೀಯವಾರ್ಷಿಕಸಭೆಯ ವಿವರ	೧೫೩—೧೬೬
ಉದ್ಧೃತಲೇಖನಗಳು	೧೬೭
ಮಾತೃಭಾಷಾ ಭಕ್ತಿ	೧೬೮—೧೬೯
ಕನ್ನಡ—ಮಹಾರಾಷ್ಟ್ರ	೧೭೦
ಕನ್ನಡನುಡಿ	೧೭೧—೧೭೩
ಕಿತ್ತೂರ ಮುತ್ತಿಗೆ	೧೭೪—೧೭೬
ವಿಜಯನಗರಸಾಮ್ರಾಜ್ಯವೂ, ಕನ್ನಡಿಗರೂ	೧೭೭—೧೮೨

☞ ಈ ಸಂಚಿಕೆಯು ೪೬ ನೇ ಪುಟದಿಂದ ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ.

ಕರ್ಣಾಟಕ

ಸಾಹಿತ್ಯ ಪರಿಷತ್ ಪತ್ರಿಕೆ.

ಸಂಪುಟ ೨. ಪಿಂಗಳ ಸಂವತ್ಸರ, ೧೯೧೭—೧೯೧೮.

Journal of the Kannada Academy.

VOLUME II, 1917-1918.

ಬೆಂಗಳೂರು ಸಿಟಿ.

ಐರಿಷ್ ಪ್ರೆಸ್ ಮತ್ತು ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ
ಮುದ್ರಿತವಾಗಿದೆ.

೧೯೧೮.

(ವಾರ್ಷಿಕ ಚಂದಾ ರೂ. ೩.)

FOREWORD.

In the following 402 pages of the Parishat Journal there are four contributions written by the Editorial Board, 14 original articles written by scholars, and several reviews of books and journals together with the Annual Report for the year Nala (1916 17) and an account of the Third Literary Conference held at Mysore in the month of June 1917. The following nine articles evince critical acumen and wide reading, viz:

(1) Asoka's Inscriptions with notes by Mahavidwan K. Rajagopalachakravarti Saralakavisuri;

(2) Euphony in Kannada by Mr. R. Raghunatha Rao, B. A.;

(3) Outlines of the History of the Kannada Language by Mr. R. Raghunatha Rao, B. A.;

(4) Rare and Obsolete Tadbhava words by Mr. H. Narayana Rao, B. A., B. L.;

(5) Kannada words and Desiya words by Mr. H. Narayana Rao, B. A., B. L.;

(6, 7, 8) Unification of Kannada literary forms by Mr. S. N. Naraharaiya, B. A., LL.B.; Mr. Srinivasa Rajapurohit, Anewatti, Shimoga District; and Mr. J. Balavanta Rao, Bhagalkote;

(9) Adipampa and his Works by Pandit S. Thimmappaiya Sastry.

Mr. H. Narayana Rao's articles in connection with the origin of several Kannada words evince his anxiety to produce an improved Dictionary of the Kannada Language. Mr. R. Raghunatha Rao's article 'Euphony in Kannada' attempts to give a comprehensive and historical view of the subject. His "Outlines of the History of the Kannada Language" contains several facts relating to the development of the Kannada Language in different centres of culture. Pandit S. Thimmappaiya Sastry's contribution contains numerous facts relating to Pampa and his works.

ಪೂರ್ವವಚನ.

ಈ ದ್ವಿತೀಯ ಸಂಪುಟದಲ್ಲಿರುವ ೪೦೩ ಪುಟಗಳನ್ನು ಪರಿಶೀಲಿಸುವಲ್ಲಿ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯ ೪ ಲೇಖನಗಳೂ ಕನ್ನಡ ಪಂಡಿತರುಗಳು ಬರೆದ ೧೪ ಲೇಖನಗಳೂ ಕಾಣಬರುವುವು. ಇವುಗಳ ಜತೆಗೆ ಗ್ರಂಥವಿಮರ್ಶೆ, ವಿವಿಧ ವಿಷಯ ವಿಮರ್ಶೆ, ನಳಸಂವತ್ಸರದ ವರದಿ, ದ್ವಿತೀಯವಾರ್ಷಿಕ ಸಭೆಯ ವಿವರ ಮತ್ತು ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನದ ವಿಷಯ ಎಂಬುವು ಇರುವುವು. ಶೋಧನಾ ಚಾತುರ್ಯವನ್ನು ತೋರಿಸುವ ಒಂಬತ್ತು ಲೇಖನಗಳು ಇರುವುವು. ಯಾವುವೆಂದರೆ :—

(1) ಆಸ್ಥಾನ ಮಹಾವಿದ್ವಾನ್ ಸರಳಕವಿಸೂರಿ ರಾಜಗೋಪಾಲಚಕ್ರವರ್ತಿಗಳು ಬರೆದ ಅಶೋಕಮಹಾರಾಜನ ಶಾಸನಗಳು (ಸಶೇಷ);

(2 ಮತ್ತು 3) ಮ॥ ರಾ॥ ಆರ್ ರಘುನಾಥರಾಯರು ಬರೆದ ಸಂಧಿ ಕಾರ್ಯಗಳ ವಿಚಾರ ಮತ್ತು ಕರ್ಣಾಟಕಭಾಷಾಚರಿತ್ರೆಯ ಹೆಗ್ಗುರುತುಗಳು;

(4 ಮತ್ತು 5) ಮ॥ ರಾ॥ ಎಚ್. ನಾರಾಯಣರಾಯರು ಬರೆದಿರುವ ಅಜ್ಞಾತ ತದ್ಭವಗಳು ಮತ್ತು ಕರ್ಣಾಟಕ ಮತ್ತು ದೇಶೀಯ ಪದಗಳು;

(6. 7. ಮತ್ತು 8) ಗ್ರಾಂಥಿಕ ರೂಪಗಳ ಏಕೀಕರಣದ ವಿಷಯದಲ್ಲಿ ಮ॥ ರಾ॥ ಗಳಾದ ಎಸ್. ಜಿ. ನರಹರ್ಶೆಯನವರು, ಶ್ರೀನಿವಾಸರಾಜ ಪುರೋಹಿತರು, ಮತ್ತು ಬಿ. ಬಲವಂತರಾಯರು ಬರೆದ ಲೇಖನಗಳು;

(9) ಬ್ರ॥ ಪಂ॥ ತಿಮ್ಮಪ್ಪಯ್ಯ ಶಾಸ್ತ್ರಿಗಳು ಬರೆದ ಆದಿಪಂಪಮಹಾಕವಿಯ ವಿಷಯಗಳು.

ಮ॥ ರಾ॥ ಎಚ್. ನಾರಾಯಣರಾಯರವರು ಪ್ರಥಮ ಸಂಪುಟದಲ್ಲಿ ಮುದ್ರಿತವಾಗಿರುವ ಕರ್ಣಾಟಕ ಧಾತುಗಳ ಜತೆಗೆ ಈ ದ್ವಿತೀಯ ಸಂಪುಟದಲ್ಲಿ ಅಜ್ಞಾತ ತದ್ಭವಗಳ, ಕರ್ಣಾಟಕ ಮತ್ತು ದೇಶೀಯ ಪದಗಳ ವಿಚಾರವನ್ನು ಮಾಡಿ ನಿಘಂಟುವಿನ ಸಂಸ್ಕರಣಕ್ಕಾಗಿ ಬಹು ಪ್ರಯಾಸಪಡುತ್ತಿರುವರು. ಮ॥ ರಾ॥ ಆರ್. ರಘುನಾಥರಾಯರು ಬರೆದ ಸಂಧಿಕಾರ್ಯಗಳ ವಿಚಾರವು ಕರ್ಣಾಟಕ ಸಂಧಿಕಾರ್ಯದ ಮುಖ್ಯಾಂಶಗಳೆಲ್ಲವನ್ನೂ ತೋರಿಸುತ್ತದೆ. ಕರ್ಣಾಟಕ ಭಾಷಾಚರಿತ್ರೆಯ ಹೆಗ್ಗುರುತುಗಳು ಎಂಬ ಲೇಖನವು ಕರ್ಣಾಟಕ ಭಾಷೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಒಳಕೊಂಡಿದೆ. ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳವರು ಆದಿಪಂಪನ ವಿಷಯವಾಗಿ ಬರೆದಿರುವ ಲೇಖನವು ಆದಿಪಂಪನ ವಿಷಯವನ್ನು ಚೆನ್ನಾಗಿ ತಿಳಿಸುವುದು.

ವಿಷಯ ಸೂಚಿಕೆ.

———:o:———

ಪ್ರಥಮಸಂಚಿಕೆ

ಪುಟ.

ನವವರ್ಷ ನಿವೇದನ

The New Year. ... ... 1 - 2

ಅಶೋಕಮಹಾರಾಜನ ಶಾಸನಗಳು

ಮಹಾವಿದ್ವಾನ್ ಕೆ. ಆರ್. ಚಕ್ರವರ್ತಿ ಸರಳಕವಿಸೂರಿ

Asoka's Inscriptions by Mahavidwan
K, R. Chakravarti Sarala Kavi Suri. ... ... 3 - 26

ಸಂಧಿಕಾರ್ಯಗಳ ವಿಚಾರ—ಮ॥ ರಾ॥ ಆರ್. ರಘುನಾಥರಾಯರು. ಬಿ. ಎ.

Euphony in Kannada by Mr. R. Raghunatha Rao B. A. ... 27 - 65

ಅಜ್ಞಾತ ತದ್ಭವಗಳು-ಮ॥ ರಾ॥ ಎಚ್. ನಾರಾಯಣರಾಯರು ಬಿ. ಎ., ಬಿ. ಎಲ್.

Rare and ob-olete Tadbhavas by
Mr. H. Narayana Rao. B. A, B. L. ... ... 66 - 71

ಜಗದ್ವಿಖ್ಯಾತರಾದ ಮೂರು ಕವಿಗಳು.

Three world-famous Poets. ... ... 70 - 79

ಮಹಾರಾಷ್ಟ್ರೀಯ ಪ್ರಾಚೀನಸಾಹಿತ್ಯ-ಮ॥ ರಾ॥ ಶ್ರೀಷ. ಭೀ. ಪಾರಿಶ್ವಾಡ.

Early Marathi Literature by Mr. S. B. Parishwad ... 79 - 85

ಕನ್ನಡ ಮರಾಠಿಗಳಲ್ಲಿರುವ ಗಾರ್ ಫೀಲ್ಡ್ ಚರಿತೆಗಳು

Life of President James A.Garfield in Kannada and in Marathi 86 - 90

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಷಯ

The affairs of the Karnataka Sahitya Parishat. ... 90 - 95

ಗ್ರಂಥವಿಮರ್ಶೆ

Reviews of books and periodicals ... ... 96 - 98

ವಿವಿಧ ವಿಷಯ ವಿಮರ್ಶೆ

Editorial Notes. ... ... 99 - 100

ದ್ವಿತೀಯ ಸಂಚಿಕೆ

ಪರಿಷತ್ತಿನ ನಳಸಂವತ್ಸರದವರದಿ (೧೯೧೬-೧೭)

The Report of the Karnataka Sahitya Parishat
for Nala. (1916 17) ... ... 101 - 115

ಪುಟ.

ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನ
The Third Kannada Literary Conference. ... 116 - 128

ಕರ್ಣಾಟಕಸಾಹಿತ್ಯ ಪರಿಷತ್ತಿನ ದ್ವಿತೀಯವಾರ್ಷಿಕ ಸಭೆಯ
ಕಾರ್ಯವಿವರ
The Proceedings of the Second Annual Meeting of the Karnataka
Sahitya Parishat. ... ... 128 - 138

ಗ್ರಾಂಥಿಕ ರೂಪಗಳ ಏಕೀಕರಣ
ಮ॥ ರಾ॥ ಎಸ್. ಎನ್. ನರಹರಯ್ಯ, ಬಿ. ಎ., ಎಲ್. ಎಲ್. ಬಿ.
Unification of Kannada Literary Forms by
Mr. S. N. Narabaraiya B. A., L.L. B. ... 138 - 162

ಆದಿಪಂಪಮಹಾಕವಿಯ ವಿಷಯವು, ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳು
Adipampa & his works by Pandit S. Thimmappaiva Sastry 162 - 177

ಕರ್ಣಾಟಕ ಮತ್ತು ದೇಶೀಯ ಪದಗಳು
ಮ॥ ರಾ॥ ಎಚ್. ನಾರಾಯಣರಾಯರು
Kannada and Desiya Words by Mr.
H. Narayara Rao, B. A., B. L .. ... 177 - 184

ಗೋಖಲೆಯವರ ಜೀವಚರಿತೆಯಸಾರ
Lessons from the Life of Professor Gokhale ... 185 - 193

ಕರ್ಣಾಟಕ ಸಾಹಿತ್ಯ ಪರಿಷತ್ತಿನವಿಷಯ
The affairs of the Karnataka Sahitya Parishat ... 193 - 197

ಗ್ರಂಥ ವಿಮರ್ಶೆ
Reviews of Books and Journals ... ... 197 - 199

ವಿವಿಧವಿಷಯ ವಿಮರ್ಶೆ
Editorial Notes. 200

ತೃತೀಯ ಸಂಚಿಕೆ

ಪರಶುರಾಮ ರಾಮಾಯಣಂ
Parasurama Ramayanam. ... ... 201 - 234

ಕರ್ಣಾಟಕ ಭಾಷೆಯ ಬೆಳೆಗೆಯೂ ಅದರ ಏಕೀಕರಣದ ಉತ್ಕೃಷ್ಟೋಪಾಯಗಳು- ಮ॥ ರಾ॥ ಜೆ. ಬಲವಂತರಾಯರು
Unification of Kannada Literary Forms by
Mr. J. Balavanta Rao ... [illegible]

ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂ
ಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು
ಮ॥ ರಾ॥ ಶ್ರೀನಿವಾಸ ರಾಜ ಪುರೋಹಿತರು

Unification of Kannada Literary Forms by
Mr. Srinivasa Raja Purohit. ... ... 261 - 282

ಪುಸ್ತಕ ಪರಿಚಯ

Recent Marathi Literature. ... ... 282 - 286

ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಷಯ

The affairs of the Karnataka Sahitya Parishat ... 286 - 291

ಗ್ರಂಥ ವಿಮರ್ಶೆ

Reviews of Books and Journals ... ... 291 - 294

ಚತುರ್ಥ ಸಂಚಿಕೆ

ಚಾವುಂಡರಾಯ ಪುರಾಣಂ

Chavundaraya Purana in Kannada ... ... 295 - 326

ಕರ್ಣಾಟಕ ಭಾಷಾಚರಿತ್ರೆಯ ಹೆಗ್ಗುರುತುಗಳು-
ಮ॥ ರಾ॥ ಆರ್. ರಘುನಾಥರಾಯರವರು

Outlines of the History of the Kannada Language by
Mr. R. Raghunatha Rao. B. A. 327 - 397

ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಷಯ

The affairs of the Karnataka Sahitya Parishat ... 398 - 401

ವಿವಿಧ ವಿಷಯ ವಿಮರ್ಶೆ

Editorial Notes 402

ಪುರಾತನ ಗ್ರಂಥಾವಳಿ, ನಂಬರು ೧.

ಶ್ರೀ.

ಚಾವುಂಡರಾಯ ಪುರಾಣದ

ಆದಿಪುರಾಣ ಭಾಗಂ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪಂಡಿತರುಗಳಿಂದ
ಪರಿಷ್ಕೃತವಾಗಿ ಮುದ್ರಿಸಲ್ಪಟ್ಟಿವೆ.

——:0:——

ಬೆಂಗಳೂರು,

ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ ಮುದ್ರಿತವಾಗಿರುವುದು.

೧೯೧೮

ಕ್ರಯ—ಅಂಚೆಯವೆಚ್ಚವಿಲ್ಲದೆ ಒಂದುರೂಪಾಯಿ.

ಪೀಠಿಕೆ.

೧. ಚಾವುಂಡರಾಯ ಪುರಾಣವೆಂಬ ಹೆಸರು ಗ್ರಂಥಕರ್ತನಾದ ಚಾವುಂಡ ರಾಯನ ಹೆಸರಿನಿಂದ ಬಂದಿದೆ. ಗ್ರಂಥದ ಆದಿಯಲ್ಲಿ ಹೇಳಿರುವಂತೆ, ಇದೇ ಪುರಾಣ ವನ್ನು ಕೂಚಿಭಟ್ಟಾರಕರೇ ಮೊದಲಾದವರು ಮೊದಲು ಬರೆದಿದ್ದರು. ಮೊದಲಲ್ಲಿ ಇಪ್ಪತ್ತು ನಾಲ್ಕು ಮಂದಿ ತೀರ್ಥಂಕರರ ಚರಿತ್ರೆಯನ್ನೊಳಕೊಂಡಿದ್ದ ಗ್ರಂಥಕ್ಕೆ ಕೃಷ್ಣ ಬಲರಾಮರೇ ಮೊದಲಾದವರ ಚರಿತ್ರೆಯನ್ನೂ ಸೇರಿಸಿ ಗುಣಭದ್ರ ಕವಿಯು ತ್ರಿಷಷ್ಟಿ ಪುರುಷ ಪ್ರತಿಬದ್ಧ ಪುರಾಣವೆಂಬ ಹೆಸರಿನಲ್ಲಿ ಸಂಸ್ಕೃತದಲ್ಲಿ ಬರೆದನು. ಚಾವುಂಡ ರಾಯನು ಈ ಸಂಸ್ಕೃತದ ಗ್ರಂಥದ ಆಧಾರದಮೇಲೆ ತಾನು ಈ ಪುರಾಣವನ್ನು ಕನ್ನ ಡದಲ್ಲಿ ರಚಿಸಿದನು. ಶ್ರವಣಬೆಳ್ಗೊಳದ ೧೦೯ನೆಯ ಶಾಸನದಲ್ಲಿರುವ (ಕ್ರಿ. ಶ ೯೮೪)

ಶಾ॥ ವಿ॥ ಬ್ರಹ್ಮಕ್ಷತ್ರ ಕುಲೋದಯಾಚಲಶಿರೋಭೂಷಾ ಮಣಿರ್ಭಾನುಮಾನ್
ಬ್ರಹ್ಮಕ್ಷತ್ರ ಕುಲಾಬ್ಧಿವರ್ಧನ ಯಶೋರೋಚಿಸ್ಸುಧಾದೀಧಿತಿಃ ॥
ಬ್ರಹ್ಮಕ್ಷತ್ರ ಕುಲಾಕರಾಚಲ ಭವಶ್ರೀ ಹಾರವಲ್ಲೀ ಮಣಿಃ ।
ಬ್ರಹ್ಮಕ್ಷತ್ರ ಕುಲಾಗ್ನಿ ಚಂಡ ಪವನಶ್ಚಾವುಂಡರಾಜೋ ಜನಿ ॥

* * * *

ಆಕ್ರಷ್ಟುಂ ಭುಜವಿಕ್ರಮಾದಭಿಲಷನ್ ಗಂಗಾಧಿರಾಜ್ಯಶ್ರಿಯಂ ।
ಯೇನಾದೌ ಚಲದಂಕಗಂಗ ನೃಪತಿ ರ್ವ್ಯರ್ಥಾಭಿಲಾಷೀಕೃತಃ ॥
ಕೃತ್ವಾ ವೀರಕಪಾಳ ರತ್ನಚಷಕೇ ವೀರದ್ವಿಷಃ ಶೋಣಿತಂ ।
ಪಾತುಂ ಕೌತುಕಿನಶ್ಚ ಕೋಣಪಗಣಾಃ ಪೂರ್ಣಾಭಿಲಾಷೀಕೃತಾಃ ॥

ಎಂಬ ವೃತ್ತಗಳೂ ೧೩೭ನೆಯ ಶಾಸನದಲ್ಲಿರುವ (ಕ್ರಿ. ಶ. ೧೧೬೦)

ಚಂ॥ ವೃ॥ ಸ್ಥಿರಜಿನ ಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲ ಭೂ ।
ವರ ವರಮಂತ್ರಿರಾಯನೆ ಬಳಿಕ್ಕೆ ಬುಧಸ್ತುತನಪ್ಪ ವಿಷ್ಣು ಭೂ ॥
ವರ ವರಮಂತ್ರಿಗಂಗಣನೆ ಮತ್ತೆ ಬಳಿಕ್ಕೆ ನೃಸಿಂಹ ದೇವ ಭೂ ।
ವರ ವರಮಂತ್ರಿ ಹುಲ್ಲನೆ ಪೆಱಂಗಿ ನಿತುಳ್ಳೊಡೆ ಪೇೞಲಾಗದೇ ॥

ಎಂಬ ವೃತ್ತವೂ ಚಾವುಂಡರಾಯನ ಯಶಸ್ಸನ್ನು ಪ್ರಕಟಿಸುತ್ತವೆ. ಪುರಾಣದ ಆದಿಭಾಗದಲ್ಲಿ ತನ್ನ ಗುರುಗಳ ವಿಷಯವನ್ನೂ ತನಗಿದ್ದ ಬಿರುದಿನ ವಿಷಯಗಳನ್ನೂ ಇಪ್ಪತ್ತನೆಯ ಪದ್ಯದ ಮುಂದಿನ ಗದ್ಯದಲ್ಲಿಯೂ ೨೧, ೨೨, ೨೪ನೆಯ ಪದ್ಯಗಳಲ್ಲಿ ಯೂ ಕವಿಯು ತಿಳಿಸಿರುತ್ತಾನೆ.

೨. ಗಂಗವಾಡಿ ತೊಂಬತ್ತಾರು ಸಾಸಿರ ಸೀಮೆಗೆ ರಾಜರಾಗಿದ್ದ ನೊಳಂಬ ಕುಲಾಂತಕನೆಂಬ ಬಿರುದನ್ನು ಪಡೆದಿದ್ದ ಮಾರಸಿಂಹನ (ಕ್ರಿ. ೯೬೧-೯೭೪) ಜಗದೇ ಕವೀರನೆಂಬ ಬಿರುದನ್ನು ಪಡೆದಿದ್ದ ನಾಲ್ವಡಿ ರಾಚಮಲ್ಲ ಸತ್ಯವಾಕ್ಯನ (ಕ್ರಿ. ೯೭೪- ೯೭೭) ರಕ್ಕಸಗಂಗ ರಾಚಮಲ್ಲನ (ಕ್ರಿ. ೯೭೭-೯೮೪) ಆಳಿಕೆಗಳಲ್ಲಿ ಚಾವುಂಡರಾ ಯನು ಸೇನಾಧಿಪತಿಯಾಗಿಯೂ ಮಂತ್ರಿಯಾಗಿಯೂ ಇದ್ದಂತೆ ತಿಳಿಯಬರುತ್ತದೆ. ತನ್ನ ಪುರಾಣದ ಕೊನೆಯ ಭಾಗದಲ್ಲಿ—

'ಆಳ್ವನ ಬೆಸದಿಂ ಖೇಡಗಕಾಳೆಗದೊಳ್ ವಜ್ಜಳದೇವನಂ ಗೆಲ್ದ ಸಾಹಸದಿಂ ಸಮರಧುರಂಧರಂ, ಗೋನೂರ ಬಯಲೊಳ್ ಬಂದೊಡ್ಡಿದ ನೊಳಂಬರ ಕಾಳೆಗದೊಳ್ ಜಗದೇಕವೀರನ ಮುಂತೆ ತನ್ನ ಬಲಮಂ ಮೆಱೆದುದಱಿಂ ವೀರ ಮಾರ್ತಾಂಡಂ, ಉಚ್ಚಂಗಿಯ ಕೋಟೆಯೊಳ್ ರಾಜಾದಿತ್ಯನೊಳ್ ಒರ್ವನೆ ರಣಮಂ ಮೆಱೆದುದಱಿಂದೆ ರಣರಂಗಸಿಂಗಂ, ಬಾಯಿಲೂರ ಕೋಟೆಯೊಳ್ ತ್ರಿಭುವನ ವೀರನಂ ಕೊಂದು ಗೋವಿಂದರಸಂ ಪುಗಿಸಿದುದಱಿಂ ವೈರಿಕುಲಕಾಲದಂಡಂ, ನೃಪಕಾಮನ ಕೋಟೆಯೊಳ್ ರಾಜ ಬಾಸ ಸಿವರಕುಣಾಂಕ ಮೊದಲಾದ ಕಲಿಗಳಂ ಒಂದೆ ಮೆಯ್ಯೊಳ್ ಪೆಣೆದಿಱಿದುದಱಿಂ ಭುಜವಿಕ್ರಮಂ, ತನ್ನ ತಮ್ಮನಂ ನಾಗವರ್ಮನಂ ಕೊಂದ ಪಗೆಗೆಚಲದಂಕೆಗಂಗಂ., ಗಂಗರ ಭಟನೆನಿಸಿದ ಮುದುರಾಚಯನಂ ಕೊಂದುದಱಿಂ ಸಮರ ಪರಶುರಾಮಂ, ಜಟ್ಟಿಗರನಟ್ಟಿದ ದಂಡಿನೊಳೆ ನಿಷ್ಕಂಟಕಂ ಮಾಡಿದುದಱಿಂ ಪ್ರತಿಪಕ್ಷರಾಕ್ಷಸಂ, ವೀರ ಭಟಕೋಟಿಯುಂ ತವೆಕೊಂದುದಱಿಂ ಭಟಮಾರಿ, ನಿಶ್ಶಂಕಾದಿ ಗುಣಪರಿ ರಕ್ಷಣೈಕ ಕಾರಣನಪ್ಪುದಱಿಂ ಗುಣಮ ಕಾವಂ, ಸತ್ಯತ್ಯಾಗಾದಿ ಸಮನ್ವಿತನಪ್ಪುದಱಿಂ ಸಮ್ಯಕ್ತ್ವ ರತ್ನಾಕರಂ,ಪರಾಂಗನಾಪರದ್ರವ್ಯ ಪರಾಙ್ಮುಖನಪ್ಪುದಱಿಂ ಶೌಚಾಭರಣಂ, ಪರಿಹಾಸದೊಳಂ ಸೂನೃತವಚನನಪ್ಪುದಱಿಂ ಸತ್ಯಯುಧಿಷ್ಠಿರಂ, ಅತಿಪ್ರಚಂಡ ವೀರಮಂಡಲಿಕಶಿಖಂಡ ಮಂಡನಮಣಿಯಪ್ಪುದಱಿಂ ಸುಭಟ ಚೂಡಾಮಣಿ' ಎಂದು ಹೇಳಿಕೊಂಡಿದ್ದಾನೆ.

ಶ್ರವಣಬೆಳ್ಗೊಳದಲ್ಲಿರುವ ಗುಮ್ಮಟೇಶ್ವರನ ಪ್ರತಿಮೆಯನ್ನು ಅಪರಿಮಿತ ಧನವ್ಯಯದಿಂದ ಮಾಡಿಸಿದುದಕ್ಕಾಗಿ ರಾಜಮಲ್ಲ ಸತ್ಯವಾಕ್ಯನು ಈತನಿಗೆ ರಾಯ ಎಂಬ ಬಿರುದನ್ನು ಕೊಟ್ಟನೆಂದು ತಿಳಿಯ ಬರುತ್ತದೆ. ತಿರಮಕೂಡಲು ನರಸೀಪುರದ ೭೯ ನೆಯ ಶಾಸನದಲ್ಲಿಯೂ ಈತನ ಪ್ರಶಂಸೆಯು ವರ್ಣಿಸಲ್ಪಟ್ಟಿದೆ.

೩ ಚಾವುಂಡರಾಯ ಪುರಾಣದ ಕೊನೆಯಲ್ಲಿ

ಚಂ॥ ವೃ॥ ನವಶತಸಂಖ್ಯೆಯಾಗೆಶಕಕಾಲಸಮಂ ನೆಗಱ್ದೀಶ್ವರಾಬ್ದಮುಂ ।
ತ್ಸವಕರಮಾಗೆ ಫಾಲ್ಗುಣಸಿತಾಷ್ಟಮಿ ರೋಹಿಣಿ ಸೋಮವಾರ ಮೆಂ ॥
ಬಿವು ಶುಭದಂಗಳಾಗೆ ಪರಮೋತ್ಸವದಿಂಗುಣರತ್ನ ಭೂಷಣಂ ।
ಕವಿಜನ ಶೇಖರಂ ಬರೆದು ಪುಸ್ತಕ ಕೇಱಿಸಿದಂ ಪುರಾಣಮಂ ॥

ಎಂದಿರುವುದರಿಂದ ಈ ಪುರಾಣವು ಕ್ರಿ. ಶ. ೯೭೮ ರಲ್ಲಿ ಹುಟ್ಟಿದಂತೆ ವ್ಯಕ್ತವಾಗುತ್ತದೆ.

೪. ಈಗ ಮುದ್ರಿತವಾಗಿರುವ ಆದಿಪುರಾಣದಲ್ಲಿ ಆಶ್ವಾಸಾದಿ ವಿಭಾಗಗಳಾವುವೂ ಇಲ್ಲ. ಆದಿಪುರಾಣ ವೆಂಬ ಚಂಪುವನ್ನು ಬರೆದ ಆದಿಪಂಪನು (ಕ್ರಿ. ೯೪೧) ಚಾವುಂಡರಾಯನ ಸಮಕಾಲಿಕನಾಗಿದ್ದರೂ ಇರಬಹುದು. ಪಂಪನು ಆದಿಪುರಾಣವನ್ನು ಚಾವುಂಡರಾಯಪುರಾಣಕ್ಕೆ ಮೊದಲೇ ಎಂದರೆ ಕ್ರಿ. ೯೪೧ ರಲ್ಲಿ ಬರೆದನೆಂದು ತಿಳಿಯಬರುತ್ತದೆ. ಚಾವುಂಡರಾಯನ ಆದಿಪುರಾಣದಲ್ಲಿ ಅಲ್ಲಲ್ಲಿ ಸಂಸ್ಕೃತ ಪದ್ಯಗಳೂ ಪ್ರಾಕೃತ ಪದ್ಯಗಳೂ ಕಾಣಬರುವುದರಿಂದ ಆಕಾಲದಲ್ಲಿ ಸಂಸ್ಕೃತವೂ ಪ್ರಾಕೃತವೂ ದಕ್ಷಿಣದೇಶದಲ್ಲಿಯೂ ಬಹಳವಾಗಿ ಬಳಕೆಯಲ್ಲಿತ್ತೆಂದು ತೋರಬರುತ್ತದೆ. ಕ್ರಿ. ಶ. ೧೨-೧೩ ನೆಯ ಶತಮಾನದಿಂದೀಚೆಗೆ ಪ್ರಾಕೃತದ ವ್ಯಾಸಂಗವು ಕಡಿಮೆಯಾಗಿ ಸಂಸ್ಕೃತದ ವ್ಯಾಸಂಗವೇ ಹೆಚ್ಚಿತು. ಹೀಗಿದ್ದುದರಿಂದಲೇ ಹನ್ನೆರಡನೆಯ ಶತಮಾನಕ್ಕೆ ಹಿಂದೆ

ಬಾಳಿದ ಕರ್ಣಾಟಕವಿಗಳು ಸಂಸ್ಕೃತ ಪದಗಳನ್ನು ಕರ್ಣಾಟ ಗ್ರಂಥಗಳಲ್ಲಿ ವಿಶೇಷವಾಗಿ ಉಪಯೋಗಿಸಕೂಡದೆಂದು ಅಭಿಪ್ರಾಯಪಡುತ್ತಿದ್ದರು.

೫. ಕ್ರಿ. ಶ. ಒಂಬತ್ತನೆಯ ಶತಮಾನದಲ್ಲಿ ಹುಟ್ಟಿದ ಕವಿರಾಜ ಮಾರ್ಗವೆಂಬ ಗ್ರಂಥದಲ್ಲಿ ದಕ್ಷಿಣ ಮಾರ್ಗ,ಉತ್ತರಮಾರ್ಗ, ಉತ್ತರೋತ್ತರ ಮಾರ್ಗಎಂಬುವು ಕಾಣಬರುತ್ತವೆ.ದಕ್ಷಿಣ ದಕ್ಷಿಣ ಮಾರ್ಗವೆಂಬುದೊಂದು ಇತ್ತೆಂದು ಊಹಿಸಬಹುದಾಗಿದೆ. ಈದಕ್ಷಿಣ ದಕ್ಷಿಣ ಮಾರ್ಗದಲ್ಲಿ ತಮಿಳಿನ ಪ್ರಯೋಗಗಳು ಅನೇಕವಾಗಿ ಸೇರಿ ಕೊಂಡಿದ್ದುವು.ತಂಗೆ, ಮಾಡಿದೊಂ, ಗೆಯ್ದುದು, ಎಂಬೊಂ, ಮಾಡಿದೊಳ್ (ಮಾಡಿದವಳು) ಮುಂತಾದ ಪ್ರಯೋಗಗಳು ಈ ಆದಿಪುರಾಣದಲ್ಲಿ ಹೇರಳವಾಗಿರುವುವು. ದಕ್ಷಿಣಮಾರ್ಗವೆಂಬುದು ತಮಿಳು ಮಾರ್ಗವಾಗಿತ್ತೆಂದು ಈ ಗ್ರಂಥದಿಂದ ವ್ಯಕ್ತವಾಗುತ್ತದೆ. ಉತ್ತರಮಾರ್ಗವೆಂಬುದು ತೆಲುಗಿನ ಪ್ರಯೋಗಗಳನ್ನೊಳಕೊಂಡಿತ್ತು. ಚಾವುಂಡರಾಯನ ಆದಿಪುರಾಣವನ್ನು ದಕ್ಷಿಣಮಾರ್ಗಕ್ಕೆ ಆದರ್ಶವಾಗಿರುವಂತೆ ಇಟ್ಟುಕೊಳ್ಳಬಹುದು.ನೃಪತುಂಗನ ಕವಿರಾಜ ಮಾರ್ಗವನ್ನು ನಡುವಣ ಕನ್ನಡಕ್ಕೆ (ತಿರುಳ್ಗನ್ನಡಕ್ಕೆ) ಆದರ್ಶವಾಗಿರುವಂತೆ ಇಟ್ಟು ಕೊಳ್ಳಬಹುದು. ಕೃಷ್ಣಾನದಿಗೆ ಉತ್ತರದಲ್ಲಿ ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ಹುಟ್ಟಿದ ವೀರಶೈವರ ಕರ್ಣಾಟ ಗದ್ಯ ಗ್ರಂಥಗಳನ್ನು ಉತ್ತರಮಾರ್ಗಕ್ಕೆ ಆದರ್ಶವಾಗಿರುವಂತೆ ಭಾವಿಸಬಹುದು.

೬. ಚಾವುಂಡರಾಯನಿಗೆ ಕನ್ನಡದಲ್ಲಿಯೂ ಪ್ರಾಕೃತದಲ್ಲಿಯೂ ಸಂಸ್ಕೃತದಲ್ಲಿಯೂ ಅದ್ಭುತವಾದ ಪಾಂಡಿತ್ಯ ವಿದ್ದಿತೆಂಬುವು ಗ್ರಂಥದ ಆದಿಯಲ್ಲಿ ಇರುವ ಪದ್ಯಗಳಿಂದಲೂ ೨೮ ನೆಯ ಮತ್ತು ೪೩ ನೆಯ ಪುಟಗಳಲ್ಲಿರುವ ಪದ್ಯಗಳಿಂದಲೂ ಅಲ್ಲಲ್ಲಿ ಬರೆದಿರುವ ಗಾಹೆಗಳಿಂದಲೂ ವ್ಯಕ್ತವಾಗುವುದು. ಇಪ್ಪತ್ತೊಂಬತ್ತನೆಯ ಪುಟದಲ್ಲಿರುವ ಮರುದೇವಿಯ ಸ್ವಪ್ನಕ್ಕೆ ಸಂಬಂಧಿಸಿದ ಅರ್ಥಸಮುವೃತ್ತವರ್ಗಕ್ಕೆ ಸೇರಿದ ಪದ್ಯಗಳ ಹೆಸರೇನೆಂಬುದು ಗೊತ್ತಾಗಲಿಲ್ಲ. ಚಾವುಂಡರಾಯ ಪುರಾಣದ ೪೭ ನೆಯ ಪುಟದಲ್ಲಿ ಹೇಳಿರುವ

ದಿವ್ಯಾಪುರೀರತ್ನ ಮತೋನಿಧಿಶ್ಚ ।
ದಿವ್ಯಾಚಮೂ ಭೋಜನ ಭಾಜನೇಚ ॥
ದಿವ್ಯಾನಿ ಶಯ್ಯಾಸನ ವಾಹನಾನಿ ।
ನಾಟ್ಯೇನಸಾರ್ಧಂತು ದಶಾಂಗ ಭೋಗಂ ॥

ಎಂಬ ದಶಾಂಗ ಭೋಗದ ಕ್ರಮಕ್ಕೂ ಆದಿಪಂಪನ ಆದಿಪುರಾಣದಲ್ಲಿ ಹೇಳಿರುವ

ಕಂ॥ ಪುರನಿಧಿ ಶಯ್ಯಾಸನರಾ ।
ಚರತ್ನ ವಾಹನವರೂಥಿನೀನಾಟ್ಯಸಭಾ ॥
ಪರಿಕರಸಹಿತಂ ಭರತೇ ॥
ಶ್ವರಂಗೆ ಸಮಸಂದುದೀ ದಶಾಂಗಂ ಭೋಗಂ ॥

ಎಂಬ ಪದ್ಯದ ಕ್ರಮಕ್ಕೂ ವ್ಯತ್ಯಾಸವಿರುತ್ತದೆ:

೭. ಈ ಚಾವುಂಡರಾಯ ಪುರಾಣದ ಆದಿಪುರಾಣ ಭಾಗವನ್ನು ಪರಿಷ್ಕರಿಸಲು ಪಂಡಿತ ಎಂ. ಕೃಷ್ಣಪ್ಪನವರನ್ನೂ ಪಂಡಿತ ಎಂ ರಾಮಶೇಷ ಶಾಸ್ತ್ರಿಗಳನ್ನೂ ನಿಯಮಿಸಲಾಯಿತು. ಮೈಸೂರ್ ಗ ॥ ಓರಿಯಂಟಲ್ ಲೈಬ್ರರಿಯವರು ದಯೆಯಿಟ್ಟು ಕಳುಹಿಸಿಕೊಟ್ಟಿದ್ದ ಚಾವುಂಡರಾಯಪುರಾಣದ ಪ್ರತಿಯೊಂದರಿಂದಲೆ ಇದನ್ನು ಪರಿ

ಷ್ಕರಿಸುವುದು ಅಸಾಧ್ಯವೆಂದು ಮೇಲಿಕಂಡ ಪಂಡಿತರುಗಳು ಸೂಚಿಸಿದರು. ಬಳಿಕ ಪಂಡಿತ ರಾಮಶೇಷ ಶಾಸ್ತ್ರಿಗಳು ಕಾರ್ಯಾಂತರದಿಂದ ತಮಗೆ ಪರಿಷತ್ತಿನಕೆಲಸಕ್ಕೆ ಬರಲಾಗುವುದಿಲ್ಲವೆಂದು ಸೂಚಿಸಿದರು. ಪಂಡಿತ ಎಂ. ಕೃಷ್ಣಪ್ಪನವರು ಚಾವುಂಡರಾಯಪುರಾಣದ ಬೇರೆ ಪ್ರತಿಗಳನ್ನು ಗೊತ್ತುಮಾಡಲು ಸಾಲಿಗ್ರಾಮಕ್ಕೆ ಹೋಗಿಅಲ್ಲಿನ ಮ॥ರಾ॥ ಸರಾಫ್ ಪದ್ಮರಾಜಯ್ಯನವರು ಮತ್ತು ಮ॥ರಾ॥ ನಾಗರಾಜಯ್ಯನವರಲ್ಲಿರುವ ಒಂದು ಪ್ರತಿಯನ್ನೂ (ಘ) ಹೊಳಲ್ಕೆರೆಯಲ್ಲಿರುವ ಮ॥ರಾ॥ ನಗರದ ಬ್ರಹ್ಮಯ್ಯನವರಿಂದ ಎರಡು ಪ್ರತಿಗಳನ್ನೂ (ಗ,ಙ)ಬರಮಾಡಿಕೊಟ್ಟರು.

ಶ್ರವಣಬೆಳ್ಗೊಳದಲ್ಲಿರುವ ಆಸ್ಥಾನದ ಮಹಾಪಂಡಿತ ಜಿನದಾಸ ದೋರ್ಬಲಿ ಶಾಸ್ತ್ರಿಗಳಿಂದ ಬಂದ ಪ್ರತಿಯೂ(ಚ)ಸೇರಿ ಪರಿಷ್ಕರಣಕ್ಕೆ ಐದುಪ್ರತಿಗಳಾದುವು. ಇವುಗಳ ಆಧಾರದಿಂದ ಪಂಡಿತ ಎಂ. ಕೃಷ್ಣಪ್ಪನವರೊಬ್ಬರೇ ಆದಿಪುರಾಣಭಾಗದ ಪ್ರತಿಲಿಪಿಯಾಗುವವರೆಗೂ ಪರಿಷ್ಕರಿಸಿ ಗ್ರಂಥವನ್ನು ಸಿದ್ಧಪಡಿಸಿದರು. ಈ ಗ್ರಂಥವನ್ನು ಪಂಡಿತ ಕೆ. ನಂಜುಂಡ ಶಾಸ್ತ್ರಿಗಳವರು ಸಮೂಲಾಗ್ರವಾಗಿನೋಡಿ ತಮಗೆ ಸೂಕ್ತತೋರಿದ ಬದಲಾವಣೆಗಳನ್ನು ಮಾಡಿದರು. ಬಳಿಕ ಮೈಸೂರಿನ ಪಂಡಿತ ತಿಮ್ಮಪ್ಪಯ್ಯ ಶಾಸ್ತ್ರಿಗಳವರೂ ಪಂಡಿತ ಶ್ರೀನಿವಾಸರಾಘವಾಚಾರ್ಯರವರೂ ಈ ಆದಿ ಪುರಾಣಭಾಗವನ್ನು ದಯೆಯಿಟ್ಟು ನೋಡಿ ಕೆಲವ ತಿದ್ದುಪಾಡುಗಳನ್ನು ಮಾಡಿದರು. ಈ ಗ್ರಂಥದ ಪರಿಷ್ಕರಣಕ್ಕೆ ಸಹಾಯಮಾಡಿರುವ ಮಹನೀಯರಿಗೆಲ್ಲರಿಗೂ ಪರಿಷತ್ತಿನವರು ಕೃತಜ್ಞರಾಗಿರುತ್ತಾರೆ.

೮. ಗ್ರಂಥವನ್ನು ಅಚ್ಚುಹಾಕುವುದರಲ್ಲಿ ವಿಷಯಗಳನ್ನು ವಿಂಗಡಿಸುವುದಕ್ಕಾಗಿ ಇಂಗ್ಲೀಷಿನ ಪದ್ಧತಿಯ ಪ್ರಕಾರ ವಾಕ್ಯಗಳನ್ನು ವಿಂಗಡಿಸಿ ಅರ್ಥವಿಸ್ಪಷ್ಟವಾಗುವುದಕ್ಕಾಗಿ ಅಲ್ಲಲ್ಲಿ ಕೆಲವು ವಿರಾಮಚಿಹ್ನೆಗಳನ್ನು ಉಪಯೋಗಿಸಿದೆ. ಮೂಲಗ್ರಂಥದಲ್ಲಿ ಈ ವಿರಾಮಗಳಾವುವೂ ಕಾಣುವುದಿಲ್ಲ. ಸಂಸ್ಕೃತ ಗ್ರಂಥದಲ್ಲಿ ಉಪಯೋಗಿಸುವ ಗೀಟುಗಳನ್ನು ಕೂಡಾ ಮೂಲಪ್ರತಿಗಳಲ್ಲಿ ಉಪಯೋಗಿಸಿಲ್ಲ.

ಈ ಗ್ರಂಥವು ದೀರ್ಘವಾದ ಸಂಸ್ಕೃತ ಸಮಾಸಗಳಿಂದಲೂ ಅಪೂರ್ವ ಸಂಸ್ಕೃತಪದಗಳಿಂದಲೂ, ಪ್ರಚಾರವಾಗದ ಪುರಾತನ ವ್ಯಾಕರಣಪ್ರಯೋಗಗಳಿಂದಲೂ ತುಂಬಿರುವುದರಿಂದ ಪೂರ್ತಿಯನ್ನು ಓದುವವರಿಗೆ ಸ್ಪಷ್ಟ ಅರ್ಥವಾಗದೆ ಪ್ರೂಫನ್ನು ತಿದ್ದುವವರಿಗೂ ಕಷ್ಟವಾಗಿ ಅಲ್ಲಲ್ಲಿ ತಪ್ಪುಗಳಿರುವುದಕ್ಕಾಗಿ ವಿಷಾದಿಸುತ್ತೇವೆ. ಈ ಕಾರಣದಿಂದ ಶುದ್ಧಾಶುದ್ಧ ಪತ್ರಿಕೆಯೊಂದನ್ನು ಸೇರಿಸಲಾಯಿತು,

R. Raghunatha Rao

ಜಂಟಿ ಗೌರವ ಕಾರ್ಯದರ್ಶಿ,

ಮೈಸೂರು ಓರಿಯಂಟಲ್ ಲೈಬ್ರರಿ ಪ್ರತಿಗೆ "ಕ" ಶ್ರವಣಬೆಳ್ಗೊಳದ ಪ್ರತಿಗೆ "ಚ" ಎರಡನೆ ಪ್ರತಿಗೆ "ಗ" ಸಾಲಿಗ್ರಾಮದ ಪ್ರತಿಗೆ "ಘ" ಹೊಳಲ್ಕೆರೆಯ ಪ್ರತಿಗೆ "ಙ"

ಎಂದು ಬೇರೆ ಬೇರೆ ಪ್ರತಿಗಳಿಗೆ ಹೆಸರಿಟ್ಟು ಪಾಠಾಂತರಗಳನ್ನು ತೋರಿಸಿರುತ್ತದೆ.

ಶುದ್ಧಿಪತ್ರಂ.

ಪುಟ.	ಪಙ್ಕ್ತಿ.	ಅಶುದ್ಧ	ಶುದ್ಧ.
3	21	ವಸೀತ	ವಸೀಶ
5	23	ಪಾನಸುಂ	ಸ್ನಾನಸುಂ
6	19	ಶರೀರನು	ಶರೀರನುಂ
7	5	ಸಪ್ರಣೀತ	ಸತ್ಪ್ರಣೀತ
,,	29	ಪದಾಥ	ಪದಾರ್ಥ
8	12	ನಮುಸ್ಕಾರಂ	ಮಹಾಮುಸ್ಕಾರುಗ
9	16	ಸಹಸ	ಸಹಸ್ರ
10	22	ಸಂಚಾಕಮುತ್ತರ	ಸಂಚಾರಮುತ್ತರ
14	9	ಪ್ರತಿಷ್ಠಾಂಕನ	ಪ್ರತಿಷ್ಠಾಂಕಮನೆ
,,	27	ತಸ್ಯ	ವಿರಕ್ತನಾಗಿತಸ್ಯ
,,	30	ಬಿಟ್ಟತಸಂಬಿಟ್ಟ	ತಸಂಬಿಟ್ಟ
,,	,,	ಪರಣದಿಂ	ಹರಣದಿಂ
16	8	ಅತನು	ಅತನ
,,	,,	ಮಹಾಸುಬು	ಮಹಾಸುಬಿ
,,	13	ಯೋಗಿತ್ರಿಪ್ರದಕ್ಷಿಣಂ	ಪ್ರೋಗಿತ್ರಿಃಪ್ರದಕ್ಷಿಣಂ
,,	20	ಸಾಮ್ಯತ್ವ	ಸಾಮ್ಯತಾ
,,	29	ಮುಕುಳೀಕೃತ	ಕುಳಿತು ಮುಕುಳೀಕೃತ
,,	,,	ಬಂದು	ಮಸ್ತಕ್ಕನಾಗಿಬಂದು
,,	,,	ಸದಿಯು	ನದಿಯು
17	1	ಪೃಕ್ಕಿಣಿ	ಪೃಕ್ಕರೀಕಿಣೀಯು
,,	31	ಪ್ರೋಚಯು	ಪ್ರೋಪಚಯು
19	11	ಫಥ್ಯ	ಪಥ್ಯ
,,	21	ಗೊಂಡ	ಗೊಂಡಂ
20	3	ಪುಟ್ಟಿದಳ್	ದೇವನಾಗಿಪುಟ್ಟಿದಳ್
20	17	ಮೂವರುಮಂ ಶಿಸ್ಯ	ಮೂವರ ಮುನ್ಸಿನ
22	29	ವಿಥ್ಯಾ	ವಿದ್ಯಾ
23	26	ಸಿಃಃಸಿ	ಸಿಙ್ಘಸಿ
,,	29	ಕೂಷೆದಿಸ	ಕೂಟದಿಸ
24	23	ಕೋಷಪಟ್ಟು	ಕೋಷುಬಿಟ್ಟು
26	14	ಅಮುಹಾಂಕ್ಷ	ಅಮುಹಾಂತ
27	11	ನಮುಸ್ಕಾರಗಂ	ನಮುಸ್ಕಾರಂ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
32	21	ಪ್ರಷಭ	ವೃಷಭ
37	19	ಜಿಸಪತಿ	ಜಿನಪತಿ
38	23	ಬೆಳಗಾಗಿ	ಬೆಳಗಿ ಬೆಳಗಾಗಿ
39	6	ಬಲಧಿ	ಬಲದಿ
41	32	ಸಮನ್ವಿತಮಂ	ಸಮನ್ವಿತಮುಂ
42	32	ಸ್ಥೂಪಲ	ಸ್ಥೂಲ
43	3	ನಾಲ್ಕುಂ ದಂಡೊಳ್ಪು	ನಾಲ್ಕುಂ ನಾಲ್ಕುಂದಂಡೊಳ್ಕೆ
44	8	ಘೂಮಾ	ಘೂಸಾ
46	33	ರತ್ನ ಮುಂ	ರತ್ನಮುಂ
51	33	ಮೇಳ್ಗೊಂಡು	ಮೇಳ್ಕೊಂಡು
54	2	ವ್ಯಾಪಾತ	ವ್ಯಾಪಾರ
,,	6	ಕ್ಷೋತ್ರ	ಕ್ಷೇತ್ರ
,,	,,	ಪರಸಂ	ಪರತ
,,	22	ಸಖ	ಸುಖ
,,	35	ಮಧ	ಮಧ್ಯ
66	12	ತಿರೋ	ತಿರೋ
56	18	ಸುಗಿವೆಂಬ	ಸುಗನೆಂಬ
,,	23	ಮಮುರ್ಬಸು ದಂಬ	ಮಮುರ್ಬಸು ವೆಂಬ
60	13	ಪ್ರವಸೆ	ಪ್ರರುಷನೆ
61	5	ಸಪಾರ್ಗಿ	ಸಪಾರ್ಗ್ನಿ
64	,,	ಕ್ರ್ಯಕೊಡಂ	ಕ್ರ್ಯಕೊಂಡಂ
,,	11	ಸೇಜರ	ಸೇಜರ
,,	19	ಸುರವೇಪ	ಸುರದೇವ
68	4	ಕುಮಾರನೆಂದುಂ	ಕುಮಾರನೆಂದಂ
,,	15–16	ಬಂದಾಕುಲತ್ತೆ	ಬಂದಾಕುಲ ಚಿತ್ತೆ
70	10	ಪ್ರದ್ಯೋತಮಾನು	ಪ್ರದ್ಯೋತಮಾನ
,,	32	ಪತ್ರಿಬೋಧಿಸೆ	ಪ್ರತಿಬೋಧಿಸೆ

ಚಾವುಂಡರಾಯಪುರಾಣಂ.

(ದ್ವಿತೀಯ ಸಂಪುಟದ ಚತುರ್ಥ ಸಂಚಿಕೆಯ ೩೨೬ ನೆಯ ಪುಟದಿಂದ ಸಾಗಿಸಿದೆ).

ವಾಸ್ತುವಿದ್ಯೆಯುಮಂ ಬಾಹುಬಲಿಗೆ ಕಾಮತಂತ್ರಸಾಮುದ್ರಿಕಾಯುರ್ವೇದ ಹಸ್ತ್ಯಶ್ವತಂತ್ರರತ್ನ ಪರೀಕ್ಷೆಯುಮಂ ಮತ್ತಮಿವು ಮೊದಲಾಗಿ ಪೆಱವುಂ[1] ಲೋಕೋಪಕಾರಿಗಳಪ್ಪ ಶಾಸ್ತ್ರಂಗಳುಮಂ ಮತ್ತಿನಮಕ್ಕಳ್ಗೆಲ್ಲಮುಪದೇಶಂಗೆಯ್ದಾದಿ ಬ್ರಹ್ಮಂಗೆ ವಿಂಶತಿಲಕ್ಷಪೂರ್ವಂ ಕುಮಾರಕಾಲಂ ಸಲ್ವಿನಂ ಅಪ್ರಸ್ತಾವದೊಳ್ ಫಲಪಾಕವಿರಾಮಂಗಳಪ್ಪ ಗರ್ಭಷಷ್ಟಿ ವ್ರೀಹಿಯವಗೋಧೂಮಾದಿ ಮಹೌಷಧಿಗಳುಮಂ ತಿಲಾತಸೀ ಕುಸುಂಭಾದಿ ದಿವ್ಯೌಷಧಿಗಳುಮಂ ಯವನಾಳಕಂಗುಕೋದ್ರವಾದಿ ಸರ್ವೌಷಧಿಗಳುಮಂ ಮತ್ತಮಕೃಷ್ಟಪಚ್ಯಂಗಳಪ್ಪುದಱಿಂದವರಳಂಗಳಾಗಿಯುಂ ಕಲ್ಪವೃಕ್ಷಂಗಳಪಗತರಸವೀರ್ಯವಿಪಾಕಂಗಳಾಗಿಯುಂ ಆಧಿವ್ಯಾಧಿವ್ಯಾಕುಲಿಗರ್ಕಳಾಗೆ[2] ಮನುಜರೆಲ್ಲಂ ನಾಭಿರಾಜನನುಮತದಿನಾದಿಬ್ರಹ್ಮನಲ್ಲಿಗೆ ವಂದು ಪೃಯ್ಯಲಿಪೆ ತತ್ಪ್ರಜಾಜೀವನೋಪಾಯಮುಮಂ ಪೂರ್ವಾಪರವಿದೇಹಸ್ಥಿತಿ ಸಮಾನಮಾಗೆ ಷಟ್ಕರ್ಮಂಗಳುಮಂ ವರ್ಣಾಶ್ರಮ ವಿಭಾಗಂಗಳುಮಂ ಗ್ರಾಮಗೃಹಾದಿ ಭೇದಂಗಳುಮಂ ಮಾಳ್ಪಂತೆ ಇಂದ್ರಂಗೆ ಬೆಸಸಿದೊಡೆ ಅಯೋಧ್ಯೆಯೊಳ್ ಮುನ್ನಂ ಜಿನಮಂದಿರಂಗಳಂ ನಿರ್ಮಿಸಿ ಕೌಶಲಾದಿದೇಶಂಗಳುಮಂ ರಾಜಧಾನಿಗಳುಮಂ ಸಮಕಟ್ಟಿ ಪುರಂಗಳನಾದಿ ಬ್ರಹ್ಮನ ಬೆಸದೊಳ್ ಮಾಡಿ ಪುರಂದರವೆಸರಂ ಪಡೆದಿಂದ್ರಂ ಪೋದಂ.

ಆದಿದೇವನುಂ ಅಸಿಮಷಿಕೃಷ್ಯಾದಿಗಳುಮಂ ತನ್ನ[3] ಪಡೆದ ಕ್ಷತ್ರಿಯ ವೈಶ್ಯ ಶೂದ್ರರೆಂಬ ವರ್ಣತ್ರಯಕ್ಕೆ ಮಾಡಿಸಿ ಯುಗಾರಂಭಮಾಷಾಢ ಬಹುಳ ಪ್ರತಿಪತ್ತಿನದಂದು ಕೃತಮಾದುದಱಿಂ ಕೃತಯುಗಮೆಂಬುದಾಗೆ ತದನಂತರಂ ದೇವರಾಜನಿಂ ಪ್ರಥಮ ಪ್ರಜಾಪತಿಕೃತ ರಾಜ್ಯಾಭಿಷೇಕಂ ಅಧಿರಾಜಪದವಿಯೊಳ್[4] ನಿಂದು ಮಕುಟಾದಿ ವಿಭೂಷಣಧರಂ ಮಾಗಧವರ ತನು ಪ್ರಭಾ ಸತ್ಕೃತಮಾಲಾದಿ ದೇವಾರ್ಚಿತಂ ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಯಥೋಚಿತ ವೃತ್ತಿಗಳಂ ಅಱಿಪಲೆಂದು ಕ್ಷತ್ರಿಯರ್ಗೆ ಶಸ್ತ್ರಾದಿಗಳುಮಂ, ಬಲಿಸ್ಥಲ ಪಾತ್ರಾದಿಯುಂ ವೈಶ್ಯರ್ಗೆ, ಶುಶ್ರೂಷಾದಿಯಂ ಶೂದ್ರರ್ಗೆ ವರ್ತನಂಮಾಡಿ ವಂಶಧರರಿಲ್ಲದಂದು ಮತ್ತನ್ಯಾಯ ಮಕ್ತಮೊಂದು ಮೂರ್ಧಾಭಿಷಿಕ್ತರಂ, ಸೋಮಪ್ರಭ ಹರ್ಯಕಂಪನ ಕಾಶ್ಯಪರಂ ಬರಿಸಿ ಸೋಮಪ್ರಭಂಗೆ ಕುರುರಾಜಾಭಿಧಾನಮನಿತ್ತು ಕುರುಕುಲಾಗ್ರಗಣ್ಯನಂ ಮಾಡಿ

---

1 ಬ. ವಲ್ಲಿ ಪಲವುಂ ಎಂದಿದೆ

2 ಅಧಿವ್ಯಾಧಿಪರೀತರಾಗೆ ಎಂದು ಗ. ಘ. ಗಳಲ್ಲಿದೆ.

3 ಗ. ಘ. ಗಳಲ್ಲಿ 'ತನ್ನ ಕುಲದ, ಎಂದಿದೆ.

4 ಗ, ಘಗಳಲ್ಲಿ, ಮಕುಟಾದಿ ವಿಭೂಷಣಾಲಂಕಾರ ಚರಮಾಗಧವರತನು ಪ್ರಭಾಸತ್ಕೃತ ಮಾಲಾದಿ ದೇವಾರ್ಚಿತಂ ಎಂದಿದೆ.

ಹರಿಗೆ ಹರಿಕಾಂತನಾಮಮುನಿಪ್ಪ ಹರಿವಂಶಾಗ್ರಗಣ್ಯನಂ ಮಾಡಿ ಅಕಂಪಂಗೆ ಶ್ರೀಧರನಾಮಮುನಿಪ್ಪ ನಾಥಾನ್ವಯ ಪ್ರರಸ್ಸರನಂ ಮಾಡಿ ಕಾಶ್ಯಪಂಗೆ ಮಗಧನಾಮಮುನಿಪ್ಪ ಉಗ್ರವಂಶಲಲಾಮನಂ ಮಾಡಿ ಆವರಂ ಮಾಂಡಳಿಕ ಪದದೊಳ್ ನಿಲಿಸಿ ಚತುಸ್ಸಹಸ್ರ ಮುಕುಟಬದ್ಧ ಪರಿವೃತರಂ ಮಾಡಿ ಕಚ್ಛ ಮಹಾಕಚ್ಛ ಪ್ರಮುಖರಂ ಅಧಿರಾಜಪದವಿಯೊಳ್ ನಿಱಿಸಿ ನಿಜನಂದನರ್ಗೆಲ್ಲಂ ಯಥೋಚಿತಮಪ್ಪ ನಿತ್ತು ಅಱುವತ್ತು ಮೂಱು ಲಕ್ಷ ಪೂರ್ವಂ ರಾಜ್ಯಕಾಲಂ ಸಲ್ವಿನಂ ಕಾಶ್ಯಪವೆಂಬುದು ಲೀಲಂ ಅವಂ ಸಾಲಿಸುವದಱಿಂದೆ ಕಾಶ್ಯಪನುಂ ಇಕ್ಷ್ವಾಕುಟಿಕಾ ಮಮುದಲ್ನ ಸಮುಚ್ಛ್ರಿತ ರಸಸಂಗ್ರಹಣ ಪ್ರಯೋಗಮುಂ ಪ್ರಜೆಗೆ ತೋಱಿದುದಱಿಂ ಇಕ್ಷ್ವಾಕುವೆಂ ಷಟ್ಕರ್ಮಮುಂ ಪ್ರಜೆಗೆ ಉಪದೇಶಂಗೆಯ್ದುದಱಿಂ ಪ್ರಜಾಪತಿಯುಂ ಸ್ವರ್ಗಂಗಳೊಳ್ ಉತ್ಕೃಷ್ಟಮಪ್ಪ ಸರ್ವಾರ್ಥಸಿದ್ಧಿಯಿಂ ಬಂದುದಱಿಂ ವೀರವನುಂ ಕುರುಕುಮಾರರುಗಳಂ ಮಾಡಿದುದಱಿಂ ಕುಲಧರನುಂ ವಿಶ್ವಕರ್ಮ ವಿಧಾನದಿಂ ಶ್ರೇಷ್ಠನುಮೆನಿಸಿ ಸುಖಮಿರ್ಪನಂ ಒಂದು ದಿವಸಂ ಅಮರೇಶನ ಪರಿನಿಷ್ಕ್ರಮಣ ಕಲ್ಯಾಣಮಾಸನ್ನಮೆಂಬುದಂ ನಿಜಾವಧಿಯಿಂದಱಿದು ಇಂದ್ರಂ ಬಂದು ದೇವನನುಪತಮ ಸಂಗೀತಕೋತ್ಸವದೊಳ್ ನೀಳಾಂಜನೆಯೆಂಬೊಳ್ ಪ್ಸರಸೆ ನರ್ತಿಸುತ್ತಿರ್ದು ತನಗಾಗಳಾಯುಷ್ಯಾವಸಾನಮಾಗೆ ರಂಗದೊಳ್ ಪೋಂಕನದೃಶ್ಯಮಪ್ಪುದು ಮುಂದ್ರಂ ರಸಭಂಗಮಪ್ಪ ಭಯದಿಂ ಮತ್ತೊಂದು ಪಾತ್ರಮಂ ಸಂಕ್ರಮಿಸಿದೊಡೆ ಅದನಾರು ಮಱಿಯದಿರೆ ದೇವನಱಿದು ದೇಹಾನಿತ್ಯತೆಯುಮಂ ಭಾವಿಸಿ ಸಂಸಾರಭೋಗ ವಿರಕ್ತನಾಗಿಪ್ಪನಂ ಪ್ರತಿಕಲ್ಪದ ಕರೆಯೊಳಪ್ಪ ಸಾರಸ್ವತಾದಿತ್ಯಾಗ್ರೃರುಣಗರ್ದ ತೋಯತುಷಿತಾವ್ಯಾಬಾಧಾರಿಷ್ಟರೆಂಬೆಣ್ಬರ್ ಲೌಕಾಂತಿಕ ದೇವರ್ ಬಂದು ಪದಿನೆಂಟು ಕೋಟಿಕೋಟಿ ಸಾಗರೋಪಮಕಾಲಂ ಮಸುಳ್ದ ಧರ್ಮಮಂ ದೇವಾ! ನೀನುದ್ಧಾರಂ ಮಾಳ್ಪುದೆಂದು ತನ್ನಂ ಪ್ರತಿಬೋಧಿಸಿ ಪೋದರ್.

ಅತ್ಯನಂತರಂ ಭರತಬಾಹುಬಲಿಗಳ್ ಅಯೋಧ್ಯಾ ಪೌದನಪುರಾಧಿಪತ್ಯದೊಳ್ ಧರಾಜ ಯುವರಾಜರಂ ಮಾಡಿ ನಿಱಿಸಿ ವೃಷಭಸೇನಾದಿಗಳ್ಗೆ ಮಂಡಳತ್ವಮುಂ ಪಚ್ಚುಕೊಟ್ಟು ನಾಭಿರಾಜನಂ ಬೀಳ್ಕೊಂಡು ಪರಿನಿಷ್ಕ್ರಮಣ ಕಲ್ಯಾಣಮಹಾಭಿಷೇಕಮುಂ ಸೌಧರ್ಮೇಂದ್ರಂ ಮಾಡೆ ಮಂತ್ರಿ ಸಾಮಂತ ಪ್ರಭೃತಿಗಳಂ ಬೀಳ್ಕೊಳಿಸಿ ಸುದರ್ಶನವೆಂಬ ಶಿಬಿಗೆಯನೇಱಿ ಮಣಿತೋರಣವಮುಂ ಬಿಯಚ್ಚರರೆಯ್ದಿಯುಮನುಮುಂ ಬಿಯ್ಯಮುಂ ಸುರಾಸುರರ್ ಕೀರ್ತಿಸೆಯುಂ ಸುಯ್ಯ ಬಿಯ್ಯಮುಂದ್ರುರುಯ್ದು ಯುಕ್ತಿಯುಮಂ ಸುನಂದೆಯುಮಂ ಬಿಯ್ಯಮುಂ ತಂಗಳೊಡನೆ ಸರಸೀಗಳ್ ಬಕ್ಕುಳಮೆಂದು ಅಂತಃಪುರ ಪ್ರದಕ್ಷಿಣಮಿರ್ದರ್.

ಅತ್ತ ನಾಭಿರಾಜನಂ ಭರತೇಶ್ವರ ಕಚ್ಛಮಹಾಕಚ್ಛ ಪ್ರಭೃತಿಗಳುಂ ಮರುದೇವಿಯರುಂ ಪರಿನಿಷ್ಕ್ರಮಣಮುಂ ನೋಡಲೊಡನೆ ಬರೆ ಸಿದ್ಧಾರ್ಥವನದ ನಡುವಣ ಚಂದ್ರ

೧ ಗ, ಪ ಗಳಲ್ಲಿ 'ಗೌತಮನುಂ' ಎಂದಿದೆ.

೨ ಗದಲ್ಲಿ 'ಕೋಟಿ ಕೋಟಿ' ಎಂದಿದೆ

೩ ಚ, ಪ ಗಳಲ್ಲಿ 'ತಗುಳ್ದ ತರಸಲುಗಳ್' ಎಂದಿದೆ. ಗ, ದಲ್ಲಿ 'ತಗುಳ್ದ ನರಸೀಗಳೀ'

ಕಾಂತಶಿಲಾತಳದೊಳ್ ಶಿವಿಗೆಯನಿೞಿಸಿ ಶುಭಭಾವನೆಯುಂ ತ್ರಿರಾತ್ರೋಪವಾಸದಿಂ ಸಮಿತಿಯಿಂ ಭಾವಿಸಿ ಬಾಹ್ಯಾಭ್ಯಂತರ ಪರಿಗ್ರಹಮಂ ತೊಱೆದು ವಸ್ತ್ರಾಭರಣಾದಿಗಳಂ ತೊಲಗಿಸಿ ಪೂರ್ವಾಭಿಮುಖನಾಗಿ ಪರ್ಯಂಕಾಸನದೊಳಿರ್ದು 'ನಮಃ ಸಿದ್ಧೇಭ್ಯಃ' ಎಂದು ಕಮಳದಳೇರಂಪಱಿವಂತೆ ಪಂಚಮುಷ್ಟಿಯಿಂ ಕೇಶಪಾಶಮಂ ಪಱಿದು ಚೈತ್ರಬಹುಳ ನವಮಿಯೊಳುತ್ತರಾಷಾಢದೊಳ್ ಮೂಱುಜಾವದಾಗಳ್ ದೀಕ್ಷೆಯಂ ಕೈಕೊಂಡಂ, ಆಗಳ್ ಮನಃಪರ್ಯಯಜ್ಞಾನಮಾದುದು. ಅಂತು ಚತುರ್ಜ್ಞಾನಧರನ ಕುಂತಳಮಂ ಸುರಪತಿ ರತ್ನದ ಪಡಲಿಗೆಯೊಳಾಂತು ಕೊಂಡು ಪಾಲ್ಗಡಲೊಳಿಕ್ಕಿ ಪರಿನಿಷ್ಕ್ರಮಣ ಕಲ್ಯಾಣಮಂ ಮಾಡಿಪೋದಂ.

ಇತ್ತ ತದನಂತರಮೆ ಭರತಂ ಪರಿಜನಂ ವೆರಸು ಪೊಡಮಟ್ಟು ನಿಜರಾಜಧಾನಿಗೆ ಪೋದಂ. ಇತ್ತ ಕಚ್ಛಮಹಾಕಚ್ಛರುಂ ಭರತನ ಮಗಂ ಮರೀಚಿಯುಂ ಮೊದಲಾಗೆ ನಾಲ್ಸಾಸಿರ್ವರರಸುಮಕ್ಕಳ್ ಪೋಗಲೊಲ್ಲದೆ ಅರಸನಾದುದನಪ್ಪೆವೆಂದು ಜಾತರೂಪಮಂ ಕೈಕೊಂಡು ದ್ರವ್ಯಲಿಂಗಿಯರಾಗಿರ್ದರ್. ಅವರ್ಗಳ್ ಮುನಿಲಿಂಗಿಗಳ್ಗೆ ಕ್ರಿಯೆಯನೆತ್ತನೆಂದು ಅಱಿಯದೆ ಪ್ರತಿಮಾಯೋಗದೊಳ್ ನಿಲ್ವುದುಂ ಪಸಿವಿಂದ ಪದ್ಮಪಷ್ಕರಮಂ ಸಹಿಯಿಸಿ ಧವಳಾತಪತ್ರಮಂ ಪಿಡಿವಿಸ್ತೀರ್ಣಮಪ್ಪ ಕ್ಷೇತ್ರ ಪರಿಷ ಪರಾಯಣನಾಗಿ ಗುಂಬಪ್ಪ ಮಹಾಮಹೀಧರಕ್ಕೆ ಸಮಾನಮಾದಾಡದೆ ಸತ್ತ್ವಸಂಪನ್ನನಾಗಿ ಯೋಗದೊಳೊಂದೆರಡು ತಿಂಗಳ್ ನಿಲೆ ಕಚ್ಛಮಹಾಕಚ್ಛಮರೀಚ್ಯಾದಿಗಳ್ ಮೊಗಮಂ ನೋಡಿ ಕೈಮುಗಿದೆತ್ತಿ ಕೊಳ್ವುದುಮಂ ಕಾಣದೆ ಕ್ಷುತ್ಪಿಪಾಸಾಪೀಡಿತರಾಗಿ ಪಣ್ಣಂ ತಿನಲುಂ ನೀರುಂ ಕುಡಿಯಲುಂ ಕೈನೀಡುವುದಂ ಕಂಡು ನೀಮೀ ನಿರವದ್ಯಮಪ್ಪ ರೂಪಿನೊಳಿಂತು ನೆಗೞಲಾಗದೆಂದು ವನದೇವತೆಗಳ್ ನುಡಿದೊಡಂ ವಲ್ಕಲವಸನರುಂ ಭಸ್ಮಧೂಳಿತಾಂಗರುಂ ಕೌಪೀನಧರರುಂ ಜಟಾಧರರುಂ ಏಕದಂಡಿತ್ರಿದಂಡಿಗಳುಮಪ್ಪ ಪರಿವ್ರಾಜಕರುಮಾಗಿ ಫಲಮೂಲಂಗಳಂ ಸ್ವೀಕರಿಸಿ ವನಕುಸುಮಂಗಳಿಂ ದೇವರ ಪೂಜಿಸುತ್ತುಮಿರೆ ಭರತನ ಮಗಂ ಮರೀಚಿ ಪರಿವ್ರಾಜಕವೇಷದ ಸಿದ್ಧಾಂತದಿಂ ಮಿಥ್ಯಾತ್ವಪ್ರವೃತ್ತಿಯಂ ಮಾಡಿ ತಪ್ಪ ಮಾಡಿದ ಸಾಂಖ್ಯಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಱಿ ಲೋಕಮಂ ಸನ್ಮಾರ್ಗದಿಂ ಪರಾಙ್ಮುಖಮಂ ಮಾಡಿದಂ.

ಇತ್ತಲ್ ಆದಿತೀರ್ಥಂಕರನ ತಪಃಪ್ರಭಾವದಿಂ ಕ್ರೂರಮೃಗಂಗಳುಮನ್ಯೋನ್ಯವೈರಮಂ ಮಱೆದು ಉಪಶಾಂತಂಗಳಾಗೆ, ಆದಿದೇವನ ಕುಂತಳಂಗಳುಂ ಬೆಳೆದು ಜಡೆಗಳಾಗೆ ನಿಶ್ಚಲಿತ ನಿಷ್ಕಂಪನ್ನಿರೆ ಕಚ್ಛಮಹಾಕಚ್ಛರ ಮಕ್ಕಳ್ ನಮಿವಿನಮಿಗಳ್ ಬಂಧುಜನಕ್ಕೆಲ್ಲಂ ದೇವರ್ ನೆಲನಂ ಪಡೆಗೆದ್ದು ಯಮ್ಮ ಭಾಗಮಂ ಪಡೆಗೆಯ್ವೆವೆಂದಾಗ್ರಹಂ ಗೆಯ್ದು ಯೋಗ ವ್ಯಾಘಾತಮಂ ಮಾಡುವ ಸಮಯದೊಳ್ ಧರಣೇಂದ್ರನಱಿದು ವಿಕ್ರಿಯೆಯಿಂ ದೇವರ್ ಬೆಸಸಿದಂತುಮಾಡಿ ವಿಜಯಾರ್ಧದ ದಕ್ಷಿಣೋತ್ತರ ಶ್ರೇಣಿಯ ಗಗನವಲ್ಲಭ ರಥನೂಪುರ ಚಕ್ರವಾಳಂಗಳಂ ಬೆರಸು ರಾಜಧಾನಿಗಳ್ ಮೊದಲಾಗೆ ನೂಱೆಪತ್ತು ಪ್ರಭುಲ್ಲಿನರಸರಸುಮಾಡಿ ವಿದ್ಯಾವತಂ ನಾಗರಾಪತಂಗಳೆಂಬ ವಿದ್ಯೆಗಳಂ ಗಾಂಧಾರಪನ್ನಗ ವಿದ್ಯೆಗಳನಿತ್ತು ಪೋದಂ.

ಅನ್ನೆಗಂ ಇತ್ತ ಆಱುದಿಂಗಳಂ ನೆಱಪಿ ಕೈಯ್ಯನೆತ್ತಿಕೊಂಡು ಚರ್ಯಾಮಾರ್ಗಮಂ ತೋಱಲ್ ಗ್ರಾಮನಗರ ಖೇಡಖರ್ವಡಮಡಂಬಂಗಳೊಳ್ ನಡೆಯೆ ಕಂಡರ್ ಕಂಡಲ್ಲಿಯೆ ಮುಸುಱಿ ನಮ್ಮ ಪರಮಸ್ವಾಮಿ ಬಂದನೆಂದು ವಸ್ತುವಾಹನಮಂ ತಂದು ಮುಂದಿಡುವುದು ಮಪರಂತಪೆಳ ಜನಾಶ್ಚರ್ಯಪರ್ಯಟನದೊಳ್ ಮತ್ತ ಱುದಿಂಗಳ್ ಪೋಗೆ ಬರಿಸಂ ನೆಱೆದಂದು ಕುರುಜಾಂಗಣ ವಿಷಯದ ಹಸ್ತಿನಾಪುರಮನಾಳ್ವ ಕುರುವಂಶದ ಸೋಮಪ್ರಭಂಗೆ ಧನದೇವಂ ಸರ್ವಾರ್ಥಸಿದ್ಧಿಯಿಂ ಬಂದು ಶ್ರೇಯಾಂಸನೆಂಬ ತಮ್ಮನಾಗಿ ತನಗಂದಿನ ಬೆಳಗಪ್ಪ ಜಾವದೊಳ್ ಮಂದರಾದ್ರಿಯುಂ ಕಲ್ಪವೃಕ್ಷಂಗಳುಂ ಸಿಂಹವೃಷಭಂಗಳುಂ ಸೂರ್ಯೇಂದುಗಳುಂ ಸಮುದ್ರಮುಂ ಅಷ್ಟಮಂಗಲಧಾರಿಭೂತರೂಪಂಗಳುಂ ತನ್ನ ಮನೆಯ ಮುಂದೆ ಬಂದಿರ್ದುದಂ ಸ್ವಪ್ನದೊಳ್ ಕಂಡು ಸೋಮಪ್ರಭಂಗೆ ಪೇೞ್ದಾದಿಬ್ರಹ್ಮಂ ಬರ್ಪುದಂ ಪುರೋಹಿತರಿಂದಱಿದಿರ್ಪುದುಂ ಆ ಮುನೀಶ್ವರನು ಮಾಪುರಮಂ ಪೊಕ್ಕು ಜಘನ್ಯೋತ್ತಮ ಗೃಹಂಗಳೊಳ್ ಚಂದ್ರಗತಿಯಿಂ ಸಲುತ್ತಂ ಸೋಮಪ್ರಭನ ಮನೆಗೆ ಬರೆ ಸಿದ್ಧಾರ್ಥನೆಂಬ ಪಡಿಯಱನಱಿಪೆ ತಮ್ಮನವರುಮಪ್ಪ್ಯಸಾಧ್ಯಂಗಳ್ವೆರಸಿ ಪಿರಿದೆೞ್ದು ಸಾಷ್ಟಾಂಗವೆಱಗಿ ಪೊಡಮಟ್ಟು ಇದಿರಂಬರೆ ದಿಗಂಬರರೂಪಮಂ ಕಾಣಲೊಡಂ ಶ್ರೀಮತಿಯಾದ ಭವದೊಳ್ ವಜ್ರಜಂಘನಂ ತಾನುಂ ಸರ್ಪಸರೋವರದೊಳ್ ಚಾರಣಯುಗಳಕ್ಕೆ ವಿಧಿಪೂರ್ವಕಂ ಮಹಾದಾನಮಂ ಕೊಟ್ಟುದನಾಗಳ್ ಪುಟ್ಟಿದ ಭವಸಂಸ್ಕಾರದಿಂದಱಿದಾದಿ ತೀರ್ಥಂಕರಂ

ಶ್ಲೋಕ|| ಶ್ರದ್ಧಾ ಶಕ್ತಿರಲುಬ್ಧತ್ವಂ ಭಕ್ತಿರ್ಜ್ಞಾನಂ ದಯಾಕ್ಷಮಾ ||
ಇತಿ ಶ್ರದ್ಧಾದಯಸ್ಸಪ್ತಗುಣಾಃ ಸ್ಯುರ್ಗೃಹಮೇಧಿನಾಂ ||

ಎಂಬ ಸಪ್ತಗುಣಾನ್ವಿತನುಂ

ಗಾಹೆ|| ಪಡಿಗಹಮುಂ ಚಟ್ಠಾಣಂ ಪಾದೋದಕಂ ಮಚ್ಚಣಚ್ಚಪಣಮಚ್ಚ ||
ಮಣವಯಣ ಕಾಯಸುದ್ಧೀ ಎಸ್ಸಣಸುದ್ಧೀಯ ಣವವಿಹಂಪುಣ್ಣಂ ||

ಎಂಬ ನವವಿಧ ಪುಣ್ಯಂ ಪರಸ್ಪರನುಮಾಗಿ ನಿಲಿಸಿ ಕರ್ಮಭೂಮಿಯ ಮೊದಲೊಳಾದಿದಾನ ತೀರ್ಥಪ್ರವರ್ತಕಂ ಶ್ರೇಯಾಂಸಂ ತಮ್ಮಣ್ಣನಪ್ಪ ಸೋಮಪ್ರಭನು ಮಾತನರಸಿ ಲಕ್ಷ್ಮೀಮತಿಯುಂ ಬೆರಸು ಕನಕ ಕಲಶದೊಳ್ ತೀವಿದ ಕಬ್ಬಿನರಸಮಂ ಪಾಣಿಪಾತ್ರದೊಳೆಱೆದುದುಂ

ಕಂದ|| ವಸುಧಾರೆ ದೇವದುಂದುಭಿ |
ಕುಸುಮಾಸಾರಂ ಸುರಪ್ರಶಂಸಾಧ್ವನಿ ಬಂ ||
ದೆಸಗುವಸುರಭಿಸಮೀರಂ |
ಪೊಸತಾಗಿರೆ ತೊಟ್ಟನಾಯ್ತು ಪಂಚಾಶ್ಚರ್ಯಂ ||

ಅಂತು ಪಂಚಾಶ್ಚರ್ಯಂ ನೆಗೞೆ ನಿಮಗಕ್ಷಯ ದಾನಮಕ್ಕೆಂದು ಪರಸಿದೊಡಾ ಪುಣ್ಯದಿನಂ ವೈಶಾಖಶುದ್ಧ ತದಿಗೆಯಕ್ಷಯತೃತೀಯೆ ಯೆಂಬ ಪುಣ್ಯದಿನಮಾಯ್ತು. ಅಂತವರಿರ್ವರು ಮಾದಿದೇವರಂ ಕಳಿಪಿ ಮಗುೞ್ವುತ್ತಾದಿ ದೇವರ ಚಿತ್ತವೃತ್ತಿಯನಾತನಾವ ಪಾಟಿಯ ನಱಿದನೆಂದು ಭರತೇಶ್ವರನ ಕಂಪನಾದಿ ರಾಜಕಂಬೆರಸು

ಬಂದು ಪೂಜಿಸಿ ಬೆಸಗೊಳೆ ಕುರುಧ್ವಜಂ ಪೂರ್ವಭವದೊಳ್ ಚಾರಣಯುಗಳಕ್ಕಾಹಾರ ದಾನಮಂ ಕೊಟ್ಟುದಂ ಜಾತಿಸ್ಮರತ್ವದಿನಱಿದು ನೆಗೞ್ದನೆನೆ ಭರತಂ ಶ್ರೇಯಾಂಸನಂ ನೀನೆ ಪುಣ್ಯವಂತನೆಂದು ಪೊಗೞ್ದು ಪೂಜಿಸಿ ಪೋದಂ

ಇತ್ತ ವೃಷಭನಾಥನುಂ ಮೌನವ್ರತದಿಂ ಯೋಗಯೋಗ್ಯ ಪ್ರದೇಶದೊಳ್ ಅಪ್ರಹಿತ,ಧ್ಯಾನನಾಗಿ ವಿಹಾರಿಸಿ ಸಂವತ್ಸರ ಸಹಸ್ರಂಗಳಂ ಕಳಿಪಿ ಪೂರ್ವತಾಳ ನಗರ ನಿಕಟೋದ್ಯಾನ ವಾಲದ ಮರದ ಕೆಳಗೆ ನಿರ್ಮಳಶಿಲಾ ಪಟ್ಟದೊಳ್ ಅಷ್ಟೋಪವಾಸದಿಂ ಪಲ್ಯಂಕಾಸನದೆ ಪೂರ್ವಾಭಿಮುಖನಾಗಿ ಯೋಗನಿಯೋಗದೊಳ್ ಶುಕ್ಲಧ್ಯಾನದಿಂ ಘಾತಿಗಳಂ ಕಿಡಿಸಿ ಫಾಲ್ಗುಣ ಬಹುಳೈಕಾದಶಿಯೊಳುತ್ತರಾಷಾಢ ನಕ್ಷತ್ರದೊಳ್ ಪೂರ್ವಾಹ್ನದೊಳ್ ಕೇವಲಜ್ಞಾನೋತ್ಪತ್ತಿಯಾಗೆ ಸೌಧರ್ಮೇಂದ್ರಂ ಬಲಾಹಕವಿಕೃತ ಕಾಮುಕ ವಿಮಾನವನೇಱಿಬಂದಂ ಈಶಾನೇಂದ್ರಂ ನಾಗದತ್ತ ವಿಕ್ರಿಯಾಸಮುಪಧ್ವಾಕ್ಷ್ಯೈರಾವತಮನೇಱಿಬಂದಂ ಉೞಿದ ದೇವನಿಕಾಯಮುಂ ತಂತಮ್ಮ ವಾಹನವನೇಱಿಬರೆ ಸಪ್ತಾನೀಕಸಮೇತಂ ಕೇವಲಜ್ಞಾನೋತ್ಪತ್ತಿಯ ಮಹಾ ಕಲ್ಯಾಣಮಂ ಮಾಡಿದಂ

ಇತ್ತ ಭರತೇಶ್ವರಂಗೆ ಪುರೋಹಿತಾಯುಧಾಧ್ಯಕ್ಷಾಂತಃಪುರವೃದ್ಧ ಕಂಚುಕಿಗಳ್ ಪುರುದೇವನ ಕೇವಲಜ್ಞಾನೋತ್ಪತ್ತಿಯುಮಂ ಚಕ್ರೋತ್ಪತ್ತಿಯುಮಂ ಅರ್ಕಕೀರ್ತಿ ಕುಮಾರೋತ್ಪತ್ತಿಯುಮಂ ನಱಿಪೆ ಮುನ್ನಮುಪ್ಪ ಕೇವಲ ಜ್ಞಾನಪೂಜೆಯಂ ಮಾಡಿಪ್ಪೆನೆಂದು ಚತುರಂಗಬಲಂ ಬೆರಸು ಮೂಱು ಸೂೞ್ ಬಲಗೊಂಡು ಗಂಧಮಾಲ್ಯಾದಿಗಳನರ್ಚಿಸಿ ಪಲವುಂ ಸ್ತುತಿಗಳಿಂ ಸ್ತುತಿಯಿಸಿ ನಿಜೋಚಿತಸ್ಥಾನದೊಳ್ ಕುಳ್ಳಿರ್ದು ವಸ್ತುಸ್ಥಿತಿಯುಂ ಬೆಸಗೊಳೆ ದಿವ್ಯಭಾಷೆಯೊಳ್ ಬೆಸಸಿದ ತದನಂತರಂ ಭರತನಂಕಿಱಿಯಂ ವೃಷಭಸೇನಂ ಸುರಪತಿಗಳಿಂದ ಮುಖ್ಯಾರ್ಚಮಾನನಾಗಿ ಆದಿ ಜಿನಪತಿಯ ಸಮೀಪದೊಳ್ ಸಂಯಮಮಂ ಕೈಕೊಂಡು ಬುದ್ಧಿ ವಿಕ್ರಿಯಾ ತಪೋಬಲ ರಸೌಷಧ ಕ್ಷೇತ್ರ ವಿಕ್ರಿಯಾಭೇದಮಪ್ಪ ಅಷ್ಟವಿಧರ್ಧಿಸಂಪ್ರಾಪ್ತಂ ಪ್ರಥಮಗಣಧರನಾದಂ.

ತದನಂತರಂ ಸೋಮಪ್ರಭಂ ಶ್ರೇಯಾಂಸಾನಂತವೀರ್ಯಾದಿಗಳುಂ ದೀಕ್ಷಿತರಾಗೆ ಬ್ರಾಹ್ಮಿಯುಂ ಸೌಂದರಿಯುಂ ವಿವಾಹ ವಿಮುಖೆಯರಾಗಿ ತಪಮಂ ಕೈಕೊಂಡು ಸೌಂದರಿಪ್ರಭೃತಿಗಳೆಲ್ಲಂ ಬ್ರಾಹ್ಮಿಯರ್ ಗಣಿನೀಪ್ರಧಾನೆಯರಾದರ್ ಶ್ರುತಕೀರ್ತಿ ಶ್ರಾವಕಾಗ್ರಣಿಯಾದಂ ಪ್ರಿಯವ್ರತೆ ಶ್ರಾವಿಕಾಪ್ರಧಾನೆಯಾದಳ್ ಭರತಪುತ್ರಂ ಮರೀಚಿಪ್ರೋಱಗಾಗೆ ಮುನ್ನಂ ಭಗ್ನತಪರಾದ ಕಚ್ಛಮಹಾಕಚ್ಛಾದಿಗಳುಂ ಸಂಯಮಮಂ ಕೈಕೊಂಡರ್ ಅನಂತವೀರ್ಯಂ ಮುಕ್ತಿಗೆ ಸಂದಂ ಭರತನುಂ ಜಿನಪದಪದ್ಮಕ್ಕೆಱಗಿ ನಿಜರಾಜಧಾನಿಗೆ ಪೋಗಿ ಚಕ್ರಪೂಜೆಯುಂ ಮಾಡಿ ಶರತ್ಕಾಲ ಪ್ರವೇಶದೊಳ್ ದಿಗ್ವಿಜಯೋದ್ಯುಕ್ತನಾಗಿ ಮುನ್ನಂ ಪೂರ್ವಾಭಿಮುಖನೆ ಗಂಗಾತಟಂಬಿಡಿದು ನಡೆದು ಪುರುದೇವನೆಂಬ ಮನುವಿನ ಕಾಲದಿಂ ತಗುಳ್ದು ಪರಿವೃದ್ಧಮಾಗಿರ್ದ್ದಪ ಸಮುದ್ರಮುಂ ಪುಗದೆ ಗಂಗಾವನವೇದಿಕಾದ್ವಾರದಿಂ ವನಮಂ ಪೊಕ್ಕು ನಾಲ್ವತ್ತೆಣ್ಗಾವುದದನೀಳದ ಮೂವತ್ತಾಱು ಗಾವುದದ ಅಗಲದ ವನಂಬಿಡಿದು ಪುರೋಹಿತಾದಿ ಕುಲವೃದ್ಧರುಪರೋ

1 ಚ. ಪು. ಶಕಟೋದ್ಯಾನ [illegible].

ಧದಿಂ ತ್ರಿರಾತ್ರೋಪವಾಸಂಗೆಯ್ದು ದರ್ಭಶಯನದೊಳಿರ್ದು ಪಂಚಪರಮೇಷ್ಠಿಗುರುಗಳ್ಗೆ ಪೂಜೆಯಂಮಾಡಿ ಪಡೆವಳನಂ ಪಡೆಗಳ್ಗೆ ಕಾಪುವೇಟ್ಟು ದಶತುರಗ ಸಂವಾಹ್ಯಮಪ್ಪ ಜಿತಂಜಯಮೆಂಬ ರಥಮನೇಱಿ ಗಂಗಾದ್ವಾರದೊಳಗಿನೆ ಲವಣ ಜಲಧಿಯಂ ಪೊಕ್ಕು ಪನ್ನೆರಡು ಯೋಜನಂ ಪೋದಾಗಳ್ ರಥಂ ಪಿಡಿದಂತೆ ಪೋಣ್ಕೆ ಮುಳಿದು ವೃಷಭನಾಥನಂದನಂ ಪ್ರಥಮಚಕ್ರವರ್ತಿ ಭರತಂಗೆ ತದ್ದೇಶ ಮಧ್ಯವರ್ತಿಗಳ್ ಬಂದೆಱಗುವುದೆಂಬಕ್ಕರ ಮನಮೋಘ ಶರದೊಳ್ ಬರೆದಿಸುವುದು ಮದಂಕಂಡು ಮಾಗಧನೆಂಬೊಂ ವ್ಯಂತರಾಧೀಶ ನಾಸ್ಫಾಟಿಸೆ ನುಡಿಸಿಮಾರ್ಕೊಂಡು ಕುಲವೃದ್ಧರ್ ತಂದೆಱಗಿಸೆ ರತ್ನಕುಂಡಲ ಹಾರಾದಿಗಳನಲ್ಲಿಂ ಕೊಂಡು ದಕ್ಷಿಣದಿಗ್ವಿಜಯ ಕೊಡಚೀವೈಜಯಂತ ದ್ವಾರದಿಂ ಪೋಗಿ ವರತನುವಂ ವಂಶಗತಂಮಾಡಿ ಕವಚಕಂಠಾಭರಣ ಚೂಡಾರತ್ನ ಮಣಿಮಕುಟಾದಿಗಳಂ ಪಡೆದು ಪಡುವಣ ದಿಗ್ವಿಜಯ ಕೊಡಚೀಸಿಂಧು ಮುಖದೊಳ್ ಪ್ರಭಾಸಾಮರನಂ ಸಾಧಿಸಿ ಸಂತಾನ ಕಮಲಮುಕ್ತಾಹೇಮ ಜಾಲಂಗಳನವನಲ್ಲಿಕೊಂಡು ಸಿಂಧು ನದೀತೀರಂ ಬಡಿದು ವಿಜಯಾರ್ಧ ಪರ್ವತಮನೆಯ್ದೆವರೆ ವಿಜಯಾರ್ಧಕುಮಾರನಭಿಷೇಕ ಪೂರ್ವಕಂ ಕನಕಭೃಂಗಾರು ಸಿತಾತಪತ್ರ ಸಿಂಹಾಸನ ಚಾಮರಂಗಳಂ ಕುಡೆಕೊಂಡು ಭರತೇಶ್ವರಂ ಮಗುಳ್ದು ಬಂದು ತಮಿಸ್ರಗುಹೆಯ ಮೊದಲೊಳ್ ಬಲಮನಿರಿಸಿ ಕೃತಮಾಳಾಮರನಂ ವಿಧೇಯಂಮಾಡಿ ತಿಳಕಾದಿ ಚತುರ್ದಶ ಭೂಷಣಂಗಳಂ ಕೈಗೆಮಾಡಿ ಸಿಂಧುವನವೇದಿಕೆಯ ತೋರಣದ್ವಾರದಿಂ ಪೊಕ್ಕು ವಿಜಯಾರ್ಧವೇದಿಕೆಯ ನೇಱಿ ಸಿಂಧುನದಿಯ ಪಡುವಣವೇದಿಕೆಯ ತೋರಣದ್ವಾರದಿಂ ಪೊಱಮಟ್ಟು ಪಶ್ಚಿಮಖಂಡಮ ನಱದಂಗಳ್ಗೆ ಸೇನಾನಾಯಕ ವಶಂಮಾಡಿ ಮಗುಳ್ದುಬರೆ ದಕ್ಷಿಣ ಭರತದ ದೇವರು ಮನರಸುಗಳುಮಂ ವಿದ್ಯಾಧರರುಮನೆಱಗಿಸಿ ಮ್ಲೇಚ್ಛ ಖಂಡಮಂ ಬಾಯ್ಕೇಳಿಸಿ ಚಕ್ರಪೂಜೆಗೆಯ್ದು ಕಟಕಮಂ ನಡೆಯಿಸಿ ಸಿಂಧುನದಿಯ ದ್ವಿತೀಯಭಾಗದ ಮಹಾವೇಧಿದ್ವಿತಯದಿಂದಂ ಗುಹಾದ್ವಾರಮನೆಯ್ದಿ ಮುಂದೆಗಟ್ಟಲೆಯೊಳ್ ಮಾಣಿಕಾಕಿಣಿಯ ರತ್ನಂಗಳೊಳ್ ಬರೆದ ಚಂದ್ರಾದಿತ್ಯರ ಬೆಳಗಾಗೆ ಸಿಂಧುವನದ ತಡಿವಿಡಿದು ಚತುರಂಗಬಲಂ ಬೆರಸುನಡೆದು ಸ್ಥಪತಿರತ್ನನಿರ್ಮಿತಮಪ್ಪ ಸೇತುವಿಂದಂ ಉನ್ಮಗ್ನ ಜಳೆಯುಂ ನಿಮಗ್ನಜಳೆಯುಂ ಮೆಂಬೆರಡು ತೊಱೆಯುಮಂಪಾಯ್ದು ಗುಹೆಯಂಪೊಱಮಟ್ಟು ವಿಜಯಾರ್ಧದುತ್ತರವನೋಪಕಂಠದೊಳ್ ಬೀಡಂ ಬಿಟ್ಟು ಮುನ್ನಿನಂತೆ ಪಶ್ಚಿಮ ಖಂಡಮಂ ಸೇನಾಪತಿಯನಟ್ಟಿ ಬಾಯ್ಕೇಳಿಸಿ ತಾನು ಮುತ್ತರಾರ್ಧ ಮಧ್ಯಮ ಖಂಡಮನೌಂಕಿ ನಿಂದಾಗಳ್ ಬಳಾಕಾವರ್ತರೆಂಬಿರ್ವರ್ ಮ್ಲೇಚ್ಛರಾಜರ್ ಉಚ್ಚವಿಗ್ರಹಮನೆತ್ತಿಕೊಂಡು ಕಳಕಳದಿಂ ಕಟಕಮಂ ಬೆಸಱಿಸಿ ತಮ್ಮ ಕುಲದೈವಮಪ್ಪ ಮೇಘ ಮುಖರೆಂಬ ನಾಗರಾಜರ್ ಬೆಸಸಿದೊಡವರ್ ನೆಲವೆಲ್ಲಮನೇ ಕಾರ್ಣವಂ ಮಾಡಿದೊಡಡಿಯೊಳ್ ಪಾಸಿದ ಚರ್ಮರತ್ನಮುಂ ಮೇಗೆ ಪಿಡಿದ ಛತ್ರರತ್ನಮುಮಂ ಕಾಯೆ ಚಕ್ರರತ್ನದ ಬೆಳಗಿನೊಳೇೞುದಿವಸಮಿರೆ ಕುರುಕುಲಾಗ್ರಣಿಯಪ್ಪ ಸೋಮಪ್ರಭನಮಗಂ ಜಯಕುಮಾರಂ ಸ್ಥಪತಿ ರತ್ನವಿರಚಿತ ಗಗನಗೋಚರ ರಥಂಗಳುಂ ವಜ್ರದ ಗಿರಿಗಳುಂ ಬೆರಸು ಮೇಘಮುಖಾಮರರೊಳ್ ಕಾದೆ ಜಯಕುಮಾರನ ಸಿಂಹನಾದಕ್ಕಂ ಗಣಬದ್ಧ ದೇವರ ಜೃಂಭಣಕ್ಕಮಳ್ಕಿ ಮೇಘಮುಖರ್ ಪೋಗೆ ಬಳಾಕಾವರ್ತರ್ ಬಳ್ಕುತ್ತುಂ ತಮ್ಮ ಮಗಳ್ದಿರಪ್ಪ

ಎಣ್ಬರ್ ಕನ್ನೆಯರಂ ಮುಂದಿಟ್ಟು ತಂದು ಚಕ್ರವರ್ತಿಗೆವಿಗೆ ಜಯಸರಿಪುಜಯಕೆ ಮೆಚ್ಚಿ ಮೇಘೇಶ್ವರನಾಮಮುಮಂ ವೀರಾಗ್ರಗಣ್ಯ ಪದಮುಮನಿತ್ತುಹಿಮವತ್ಪರ್ವತದ ಸಿಂಧುಪ್ರಪಾತಮನೆಯ್ದಿ ಸಿಂಧುದೇವಿಯಿಂದಭಿಷಿಕ್ತನಾಗಿ ಭದ್ರಾಸನಮುಂ ಪಡೆದು ಹಿಮವತ್ಕೂಟದೊಳ್ ಮುನ್ನಿನಂತೆ ಕೃತೋಪವಾಸನಾಗಿ ತದ್ವಿಷಯವಾಸಿಗಳಪ್ಪ ನಾಗಯಕ್ಷಾದಿಗಳ್ ಬಂದು ಕಾಣ್ಬುದೆಂದು ನಿಜನಾಮಾಂಕಿತ ಶರದಿನಿಸೆ ಹಿಮವತ್ಕುಮಾರಪ್ರಭೃತಿಗಳ್ ಬಂದು ತೀರ್ಥಜಲಧಿ ನಭಿಷೇಕಂಗೆಯ್ದು ಗೋಶೀರ್ಷ ಚಂದನಮುಮಂ ಮಹೌಷಧಿಗಳುಮಂ ಕೊಟ್ಟು ಪೋದರ್.

ಭರತೇಶ್ವರನುಂ ತೆಂಕವೊಗದೆ ಬಂದು ಉತ್ತರ ಭರತದ ಮಧ್ಯಮ ಖಂಡದ ನಡುವೆ ವೃಷಭಾಚಳಮುಂ ಕಂಡು ನಿಜವಿಜಯ ಪ್ರಶಸ್ತಿಯನಲ್ಲಿ ಬರೆಯಿಸುವೆನೆಂದು ಪೋಗಿ ಪೂರ್ವಚಕ್ರವರ್ತಿಗಳ ವಿಜಯಪ್ರಶಸ್ತಿಯುಮಂ ಕಂಡು ಗಳಿತಮದನಾಗಿ ಕಿಱಿದೆಡೆಯುಂ ದಂಡರತ್ನದಿನೊರಸಿ ಕಳೆದು ವಿಜಯಪ್ರಶಸ್ತಿಯುಮಂ ಕಾಕಿಣೀರತ್ನದಿಂ ಬರೆಯಿಸಿ ಗಂಗಾಕೂಟಕ್ಕೆ[1] ಪೋಗಿ ಗಂಗಾದೇವಿಯಿಂದಭಿಷಿಕ್ತನಾಗಿ ಸಿಂಹಾಸನಮುಂ ಕೊಟ್ಟೊಡಮಂ ಕೊಂಡು ಬಂದು ವಿಜಯಾರ್ಧದ ಕಾಂಡಕ[2] ಪ್ರಪಾತಗುಹೆಯ ಬೆಂಕೆಯಾಱುವನ್ನೆಗಂ ಪೂರ್ವದಿಗ್ಭಾಗದ ಮ್ಲೇಚ್ಛಖಂಡಮುಂ ಬಾಯ್ದೊಳಿಸಲ್ ಪೋಗೆ ದಕ್ಷಿಣೋತ್ತರಶ್ರೇಣಿಗಳ ವಿದ್ಯಾಧರರಾಜರ್ ನಮಿ ವಿನಮಿಗಳ್ ತಮ್ಮೊಡವುಟ್ಟಿದ ಸುಭದ್ರೆಯೆಂಬ ಕನ್ಯಾರತ್ನಮುಂ ಕೊಟ್ಟು ಅನರ್ಘ್ಯರತ್ನಂಗಳಂ ಬಱಿವಱಿಗೊಟ್ಟು ಪೋಗೆ ಮುನ್ನಮೆ ತೆಱೆದಱುದಿಂಗಳಾಱದ ಕಾಂಡಕಪ್ರಪಾತಗುಹೆಯೊಳಗಣಿಂದಂ ಪೊಱಮಡುವಾಗಳ್ ಮಹಾಕೂಟನಿವಾಸಿ[3] ನಾಟ್ಯಮಾಲಾಮರ ನಿಧಿಗೊಂಡುವ* ಕಕ್ಷಮುಂ ಕುಂಡಲದ್ವಯಮುಂ ಕೊಡೆಕೊಂಡು ಪೂರ್ವದಿಗ್ಭಾಗದ ಮ್ಲೇಚ್ಛಖಂಡಮುಂ ಬಾಯ್ದೊಳಿಸಿ ವನವೇದಿಕೆಯ ತೋರಣದ್ವಾರದಿಂ ಪೊಱಮಟ್ಟು ಸಿದ್ಧ ದಿಗ್ವಿಜಯನಾಗಿ ಆದಿ ತೀರ್ಥೇಶ್ವರನಂ ಕಾಣಲ್ಕೆ ಕೈಲಾಸಕ್ಕೆ ವಂದು ಮೇದಿನೀತಳದಿಂ ಕೊಟ್ಟ ಮೇಲೆ ಪಂಚಸಹಸ್ರ ಚಾಪಾಂತರಮಪ್ಪ ನಭೋಭಾಗದೊಳ್ ಸೌಧರ್ಮೇಂದ್ರನ ಬೆಸದೊಳ್ ಧನದನಿರ್ಮಿತಮಪ್ಪ ಸಮವಸರಣಮನೆಯ್ದೆವಂದು ದ್ವಾದಶಯೋಜನ ಸಮವೃತ್ತ ಸಂಸ್ಥಾನಮುಂ ಮೇಕಪಂಚೇಂದ್ರ ನೀಳೋಪಲರಚಿತಮುಂ ಪೂರ್ವಾದಿ ದಿಕ್ಚತುಷ್ಟಯ ಪ್ರತ್ಯೇಕವಿರಾಜಮಾನಮಾದರ್ಶೀ ಪೌಷಧಿ ಸಾಮರ್ಥ್ಯ ಸಂಪನ್ನ ಸುರಮನುಜತಿರ್ಯಗ್ಭವ್ಯ ಸುಖಾರೋಹಣ ಹೇತುಭೂತ ಮಣಿಮಯ ವಿಂಶತಿ ಸಹಸ್ರಸೋಪಾನ ಶೋಭಮಾನಮುಂ ಬಹಿರ್ಭಾಗಸ್ಥಿತಮಕರತೋರಣ ಶತಾನ್ವಿತಮುಂ ರತ್ನಮಯ ಸೋಪಾನ ನಾನಾವಿಧ ಧ್ವಜವಿರಾಜಮಾನಮುಂ ಬಾಹ್ಯಜಗತೀತಲಯುಗಳ್ ಪ್ರತಿಯುಗಳ[4] ಪ್ರತಿಷ್ಠಾಪಿತ ಪ್ರತ್ಯೇಕಾಷ್ಟೋತ್ತರ ಶತಸುಪ್ರತಿಷ್ಠ ಭೃಂಗಾರು ಕಳಶದರ್ಪಣವ್ಯಜನ ಧ್ವಜಚಾಮರ ಚ್ಛತ್ರಾಷ್ಟಮಂಗಳಾಲಂಕೃತಮುಂ ರತ್ನದಂಡಧರಜ್ಯೋತಿಷ್ಕ ದೇವದೌವಾರಿಕ ಮನೋಹರಮುಂ ಮಂತರ್ಜಗತೀತಳಯುಗಳಸ್ಥಿತ ಪ್ರತ್ಯೇಕಾಷ್ಟೋ

1 ಗ. ಗಂಗಾಕುಂಡಕ್ಕೆ. 2 ಮ. ಖಾಂಡಕ ಪ್ರಪಾತಗುಹೆಯ.
3 ಮ. ಗುಹಾಕುಟೀನಿವಾಸಿ. 4 ಗ. ಪ್ರತ್ಯೇಕಾಷ್ಟೋತ್ತರ ಶತಸಹಸ್ರ.

ತ್ತರ ಶತಕಾಳಮಹಾಕಾಳ ಪಾಂಡುಕ ಪಿಂಗಳ ನೈಸರ್ಪಮಾಣವ ಶಂಖಪದ್ಮ ಸರ್ವರತ್ನ ನವನಿಧಿ ಪರೀತಮುಮಪ್ಪ ನಾಲ್ಕುಂ ಕಾಂಚನಮಯ ಗೋಪುರದ್ವಾರಂಗಳಿಂದಮೊಪ್ಪುವ ಸರ್ವರತ್ನಚೂರ್ಣ ಘಟಿತಮುಮಟ್ಟಾಳಕಾದ್ಯಳಂಕೃತಮುಮಪ್ಪ ಧೂಳೀಪ್ರಾಕಾರಮುಮಲ್ಲಿಂದೊಳಗೆ ನಾಲ್ಕುಂ ಮಹಾವೀಧಿಮಧ್ಯದೊಳ್ ಪ್ರಥಮ ಗೋಪುರದ್ವಾರಕ್ಕೆ ಗವ್ಯೂತ್ಯಂತರದೊಳ್ ಪ್ರತ್ಯೇಕ ಕನಕ ಗೋಪುರ ಚತುಷ್ಟಯ ಪ್ರಾಕಾರತ್ರಯಂಗಳೊಳ್ ಪ್ರಥಮ ಪ್ರಾಕಾರಾಭ್ಯಂತರ ವನಮಹಾದಿಕ್ಕುಗಳೊಳ್ ಇಂದ್ರಯಮವರುಣ ಕುಬೇರ ಕೇಳೀಹರ್ಮ್ಯ ಪ್ರಾಸಾದಂಗಳಿಂ ದ್ವಿತೀಯಪ್ರಾಕಾರಾಭ್ಯಂತರ ವನಮಧ್ಯವಿದಿಕ್ಕುಗಳೊಳ್ ಅಗ್ನಿ ನಿರೃತಿ ಪವನೇಶಾನಕ್ರೀಡಾರಮ್ಯ ಹರ್ಮ್ಯಂಗಳಿಂದ ಮಿಂತಷ್ಟಲೋಕಪಾಲ ನಿಳಯಂಗಳಿಂದಂ ತ್ರಿಕೋಣ ಚತುಷ್ಕೋಣಸಮವೃತ್ತವಾಪೀಕಳಾಪದಿನೊಪ್ಪುವ ವನದ್ವಯಾನಂತರಂ ತೃತೀಯ ಪ್ರಾಕಾರದಿಂದೊಳಗೆ ವೈಡೂರ್ಯ ಕಾಂಚನ ಸರ್ವರತ್ನಮಯಂಗಳಾಗಿ ಕ್ರಮದಿನೆಂಟು ನಾಲ್ಕು ನಾಲ್ಕುಂ ಪನ್ನಿಡಿದಪ್ಪಮೂಱುಂ ಪೀಠಂಗಳಮೇಲೆ ಜಿನಬಿಂಬ ಚತುಷ್ಟಯಾಲಂಕೃತ ಚತುರಸ್ರಮೂಲಭಾಗಂಗಳೊಳಂ ಸಮವೃತ್ತಾಗ್ರಭಾಗದಮೇಗೆ ರತ್ನಫಲಕೋಪರಿಮತಳ ದಿಕ್ಚತುಷ್ಟಯಸ್ಥಿತ ಪ್ರರಾಭಿಷಿಕ್ತ ಜಿನಬಿಂಬಂಗಳೊಳಂ ಆಂದೋಳಿತ ಕೇತುಚಾಮರ ಮಣಿಘಂಟಾ ಜಾಲಂಗಳೊಳಂ ಛತ್ರತ್ರಯಾಲಂಕೃತ ಶಿಖರಂಗಳೊಳಂ ನೆರೆದು ಜಾಂಬೂನದರತ್ನಮಯದಿ ನೊಪ್ಪುವ ನಾಲ್ಕುಂ ಮಾನಸ್ತಂಭದ ಪ್ರಾಕಾರಂಗಳವೊಱಗೆ ದಿವಿಜ ನಾರೀಜನ ಮಜ್ಜನೋಚಿತಂಗಳುಂ ಮಣಿಮಯ ಸೋಪಾನಸ್ಫಟಿಕಮಯತಳಂಗಳುಮಪ್ಪ ನಂದೆನಂದೋತ್ತರೆ ನಂದವತಿ ನಂದಘೋಷೆ ವಿಜಯೆವೈಜಯಂತೆ ಜಯಂತೆ ಅಪರಾಜಿತೆ ಅಶೋಕೆ ಸುಪ್ರತಿಷೆ[1] ಕುಮುದೆಪುಂಡರೀಕೆ ಪ್ರಭಾಕರ ಆನಂದೆಹೃದಯಾನಂದೆ ಮಹಾನಂದೆ ಸುಪ್ರಬುದ್ಧೆಯೆಂದು ಪೂರ್ವಾದಿಯಾಗೆ ಒಂದೊಂದುಮಾನಸ್ತಂಭಕ್ಕೆ ನಾಲ್ಕುಗೆಯ್ದು ಸಮಚತುರಸ್ರಂಗಳಪ್ಪ ಪದಿನಾಱು ಬಾವಿಗಳನಱವಱ ಬಾಹ್ಯ ಕೋಣದ್ವಯಸ್ಥಿತ ಪಾದಪ್ರಕ್ಷಾಳನಾರ್ಥ ಕಾಂಚನಕುಂಡದ್ವಯಂಗಳಿಂ ನೆಱೆದು ನೃತ್ಯದಮರ ಕಾಮಿನೀ ನಿಕಾಯಂಗಳಿಂ ನುತಿಪ ಶತಮುಖ ಪ್ರಮುಖಸುರಸಮೂಹಂಗಳಿನೊಪ್ಪುತಿರ್ದ್ದ ಮಿಥ್ಯಾಜ್ಞಾನಿಯ ಮಾನಮಂ ಸ್ತಂಭಿಸುವ ಮಾನಸ್ತಂಭಂಗಳಿಂ ಮಾನಸ್ತಂಭಂಬಿರ ಮೇಕೈಕ ಜಿನಾಲಯಾಂತರಿತ ವಾಪೀಕೂಪ ಸರೋವರ ಸಮನ್ವಿತ ವನಷಂಡ ಮಧ್ಯಗತ ಪಂಚಪಂಚ ಪ್ರಾಸಾದ ಪಙ್ಕ್ತಿಗಳುಮಂ, ಮಾನಸ್ತಂಭ ದುಭಯಪಾರ್ಶ್ವಸ್ಥಿತ ರತ್ನತೋರಣಶತಂಗಳುಮಂ, ಮಾನಸ್ತಂಭದಿಂಗವ್ಯೂತಿಮಾತ್ರಂ ಪೋದಲ್ಲಿ ಪೂರ್ವೋಕ್ತಕ್ರಮದೊಳ್ ಮಣಿಮಯ ಸೋಪಾನಬಹುವಿಧ ಧ್ವಜಾಭಿರಾಮ ಬಹಿರಂತರ್ಜಗತೀತಳ ಪ್ರತಿಷ್ಠಾಪಿತಾಷ್ಟಮಂಗಳ ನವನಿಧಿಪರೀತಮುಂ ಜ್ಯೋತಿಷ್ಕ ದೌವಾರಿಕ ಸಮೇತಮುಮಪ್ಪ ರೂಪ್ಯಮಯ ಗೋಪುರದ್ವಾರದ ಸುವರ್ಣವೇದಿಕಾಭ್ಯಂತರದೊಳ್ ಸ್ಫಟಿಕಮಣಿವಿಳಸ ದುಭಯತಟಘಟಿತ ಸುವರ್ಣಮಣಿಮಯಸೋಪಾನಶ್ರೇಣಿಯುಂ ಜಲಕ್ರೀಡಾನಿರತ ಸುರಖಚರನಾರೀಮನೋಹರಮುಮನೇಕಜಲಚರ ಜಲಕುಸುಮರಮಣೀಯಮುಮ ಮಹೀಯಮಾನ ನಿರ್ಮಳ ಸುಗಂಧಿ ಸಲಿಲ

1 ಪ. ಸುಪ್ರತಿಬದ್ಧೆ.

ಭರಿತಮುಮಪ್ಪ ಜಲಖಾತಿಕೆಯುಮುಂ ದ್ವಿತೀಯ ಗೋಪುರದ್ವಾರದಿಂದತ್ತ ರತ್ನತೋರಣಶತಸಮೇತ ಗವ್ಯೂತಿ ದ್ವಯಾಂತರದೊಳ್ ಪೂರ್ವೋಕ್ತಕ್ರಮದೊಳ್ ರತ್ನಮಯ ಸೋಪಾನಮುಮನೇಕ ವಿವಿಧ ಧ್ವಜವಿರಾಜಮಾನಮುಮಪ್ಪ ಮಂಗಳ ನವನಿಧಿಬ್ಯೋತಿರಮ್ಯ ದೌವಾರಿಕಸಮೇತ ನಾನಾರತ್ನ ರಚಿತ ರಜತಮಯ ಗೋಪುರದ್ವಾರದ ಹೇಮಮಯ ವೇದಿಕಾಭ್ಯಂತರದೊಳತಿಮುಕ್ತ ಪ್ರನ್ನಾಗನಾಗಲತಾಲತಾಂತ ಪರಿಮಳಾಸಕ್ತ ಮತ್ತಮಧುಕರಕೋಕಿಲ ಶುಕಸಂಕುಳಕಳರವ ಮನೋಹರಮುಂ ಮಮರಖಚರ ಮಿಥುನಕೇಳೀವಿಳಾಸಾಲಂಕೃತ ಕೃತಕಾಚಳ ವಿರಾಜಮಾನಮುಮಪ್ಪ ವಲ್ಲೀವನಂಗಳುಮಂ ತೃತೀಯಗೋಪುರದ್ವಾರದಿಂದತ್ತ ರತ್ನತೋರಣ ಶತಸಮನ್ವಿತಯೋಜನಾಂತರದೊಳ್ ಮಣಿಖಚಿತಸೋಪಾನ ಬಹುವಿಧಪತಾಕಾಮಯಮುಮ ಮಷ್ಟಮಂಗಳ ನವನಿಧಿಸಮಧಿಷ್ಠಿತಮುಂ ಯಕ್ಷದೌವಾರಿಕ ರಕ್ಷಿತಮುಮಪ್ಪ ರಜತಗೋಪುರದ್ವಾರದ ತಪನೀಯಪ್ರಾಕಾರಾಭ್ಯಂತರದೊಳಶೋಕ ತಿಲಕವಕುಳ ಹಿಂತಾಳತಾಳತಮಾಲಜಂಬೂ ಜಂಬೀರಲವಂಗ ನಾರಂಗಾದಿ ವಿವಿಧ ತರುನಿಕರಮುಂ ಕೃತಕಗಿರಿನದೀಪುಳಿನತಳ ಕೇಳೀವಿಲಸಿತ ಕಳಹಂಸ ಚಕ್ರವಾಕ ಬಕಬಲಾಕಾದಿಜಲವಿಹಗಸಹಿತಸರೋವರ ಶೋಭಮಾನಮುಮಾಗಿ ಹೇಮಪ್ರಾಕಾರತ್ರಯ ಪರಿವೇಷ್ಟಿತ ಪೀಠತ್ರಯಾಧಿಷ್ಠಿತ ಪ್ರಾತಿಹಾರ್ಯೋಪೇತ ಭಗವದರ್ಹದಭಿಮುಖ ಪರ್ಯಂಕಸ್ಥಿತ ಜಿನಬಿಂಬಾಲಂಕೃತ ಮೂಲಭಾಗ ಚೈತ್ಯವೃಕ್ಷೋಪಲಕ್ಷಿತಂಗಳಾಗಿ ನಾಲ್ಕುಂದೆಸೆಯೊಳಮೊಪ್ಪುವ ಅಶೋಕಸಪ್ತಚ್ಛದ ಚಂಪಕಚೂತವನಂಗಳುಮಂ, ರತ್ನತೋರಣ ಶತಂಗಳಿನೆಸೆವ ಮಹಾವೀಥಿಯಿಕ್ಕೆಲದೊಳ್ ವೊಂದೊಂದು ನೆಲೆಯೊಳಂ ಮೂವತ್ತೆರಡುಗೆಯ್ದು ನಾಟಕಂ, ಒಂದೊಂದು ನಾಟಕದೊಳ್ ಮೂವತ್ತಿರ್ವರ್ ನರ್ತಿಪರ್ ದೇವಾಂಗನೆಯರಿಂದೊಪ್ಪುವ ಮೂಱುಮೂಱುನೆಲೆಯ ಧವಳವರ್ಣದೆರಡೆರಡು ನಾಟಕಶಾಲೆಗಳುಮಂ ಅವಱಮುಂದಣಿಕ್ಕೆಲದೆರಡೆರಡು ಧೂಪಘಟಂಗಳುಮಂ ಚತುರ್ಥಗೋಪುರದ್ವಾರದಿಂದೊಳಗೆ ಯೋಜನಾಂತರದೊಳ್ ಸರ್ವರತ್ನ ಘಟಿತಮಣಿಮಯ ಸೋಪಾನನಾನಾಧ್ವಜವಿರಾಜಮಾನಮುಂ ಅಷ್ಟಮಂಗಳ ನವನಿಧಿಪರೀತಮುಂ ಯಕ್ಷದೌವಾರಿಕರಕ್ಷಿತಮುಮಪ್ಪ ರೂಪ್ಯಗೋಪುರದ್ವಾರದ ಹೇಮಮಯವೇದಿಕಾಭ್ಯಂತರದೊಳ್ ಪಂಚವಿಂಶತಿ ಚಾಪಾಂತರಮಾಗಿ ಗಜಗರುಡ ಮೃಗೇಂದ್ರ ಗವೇಂದ್ರ ಹಂಸಮಯೂರ ಕಮಳಮಾಲಾಚಕ್ರವಸ್ತ್ರ ಲಾಂಛನಮಪ್ಪ ದಶವಿಧವಿನಿಮಂಚರತ್ನಮಯ ಸ್ತಂಭಾಗ್ರದೊಳಪ್ಪತ್ತೀಕ್ಷ್ಯಂಗುಲ ವಿಷ್ಕಂಭದೊಳೊಂದೊಂದಕ್ಕೆ ನೂಱೆಂಟಾಗೆ ಸಾಸಿರದೆಣ್ಬತ್ತಸ್ತುಂ ಅವೆಲ್ಲಂ ನಾಲ್ಕುದೆಶೆಯೊಳಮಾಗಿ ನಾಲ್ಸಾಸಿರದಮುನ್ನೂಱಿಪ್ಪತ್ತು ಪ್ರಧಾನಧ್ವಜಂಗಳೊಳೊಂದೊಂದಕ್ಕೆ ನೂಱೆಂಟಾಗೆ ನಾಲ್ಕುಲಕ್ಕೆಯು ಮೂವತ್ತಾಱು ಸಾಸಿರದೈನೂಱುಪತ್ತು ಪರಿವಾರಧ್ವಜಂಗಳುಮಂ, ಪಂಚಮಗೋಪುರದ್ವಾರದಿಂ ರತ್ನತೋರಣ ಶತಸಹಸ್ರಸಹಿತ ಯೋಜನಾಂತರದೊಳ್ ಮಣಿಖಚಿತಸೋಪಾನಮುಂ ಅನೇಕವಿಧಧ್ವಜಾಭಿರಾಮಮುಮುಂ ಅಷ್ಟಮಂಗಳ ನವನಿಧಿಸಮನ್ವಿತಮುಂ ನಾಗಪ್ರತೀಹಾರಪಾಲಿತಮುಮಪ್ಪ ರಜತಮಯಗೋಪುರದ್ವಾರದ ಅರ್ಜುನಸುವರ್ಣಶಾಲಾಭ್ಯಂತರದೊಳ್ ಪೂರ್ವೋಕ್ತವರ್ಣನೋಪೇತಮುಂ ದಶವಿಧಕಲ್ಪವೃಕ್ಷಸಮೇತಮುಂ ಪ್ರಾಕಾರತ್ರಯಾಭ್ಯಂತರ ಪೀಠತ್ರಯಾಧಿಷ್ಠಿತಮುಮಪ್ಪ ನಾಲ್ಕುಂದೆಸೆಯುಮಮೇರುಮುಂ ಮಂದಾರ ಸಂತಾನಪಾರಿಜಾತ ತರುಮೂಲಸ್ಥಿತ ಭಗವದರ್ಹದಭಿಮುಖ ಕಾಯೋತ್ಸರ್ಗ

ಸಿದ್ಧಪ್ರತಿಮೆಗಳುಮಂ, ರತ್ನತೋರಣ ಶತಶೋಭಿತಮಹಾವೀಥೀ ವಿಭಾಗೋಭಯಪಾ
ರ್ಶ್ವಸ್ಥಿತ ತ್ರಿತಲಧವಳಂಗಳುಂ ದ್ವಾತ್ರಿಂಶನ್ನಟದಮರ ಸೌಂದರೀನಯನ ಸುಂದರ
ದ್ವಾತ್ರಿಂಶತ್ಪ್ರೇಕ್ಷಣಕ ರಮಣೀಯಮುಮಪ್ಪ ನಾಟ್ಯಶಾಲಾ ದ್ವಯಂಗಳುಮಂ,
ಅವಱ ಮುಂದಣೆಕ್ಕೆಲದೊಳಂ ಅತಿಬಹುಳಕಾಳಾಗರು ಧೂಪಧೂಮ ಶ್ಯಾಮಲಿತ
ವ್ಯೋಮತಿಮಿರಂಗಳೆರೆಡೆರಡು ಧೂಪಘಟಂಗಳುಮಂ, ಷಷ್ಠ ಗೋಪುರದ್ವಾರದಿನೊಳಗೆ
ಯೋಜನಾಂತರಂಪೋಪಲ್ಲಿ ರತ್ನಮಯಸೋಪಾನ ಬಹುಪ್ರಕಾರ ಧ್ವಜವಿರಾಜಮಾ
ನಮುಂ ಮಂಗಳನಿಧಿಸಮೇತಮುಂ ರತ್ನದಂಡಧರಧರಣೀಂದ್ರರಕ್ಷಿತಮುಮಪ್ಪ [1] ರಜತ
ಗೋಪುರದ್ವಾರದ ಕನಕಮಯ ವೇದಿಕಾಭ್ಯಂತರದೊಳ್ ವಜ್ರಾಧಿಷ್ಠಾನ ಬಂಧುರ
ಮುಂ ಶಾತಕುಂಭಮಯಸ್ತಂಭಮುಂ ಚಂದ್ರಕಾಂತೋಪಲಭಿತ್ತಿಯುಂ ದ್ವಿತಳ ತ್ರಿತಳಚ
ತುಸ್ತಳ ಸಪ್ತತಳಾದಿ ವಿರಾಜಿತಮುಂ ಜಿನಾಭಿಷೇಕ ಜಿನಚರಿತ ಗೀತನರ್ತನನಿರತ ಸುರ
ಮಿಥುನ ಶತಸನಾಥಮುಂ ಆಂದೋಳಿತಾನೇಕ ಪತಾಕಾಕೀರ್ಣಮುಂ ಸ್ವಸ್ತಿಕ ಸರ್ವ
ತೋಭದ್ರ ಧವಳಾಭಿ[2]ಚ್ಛಂದನಾನಾಚ್ಛಂದ ಸೌಂದರಮುಮಪ್ಪ ಪ್ರಾಸಾದಪಙ್ಕ್ತಿಗ
ಳುಮಂ ಮಹಾವೀಥೀಮಧ್ಯದೊಳ್ ರತ್ನತೋರಣ ಶತಾಂತರಿತಂಗಳುಂ ಛತ್ರತ್ರಯ ಚ
ಮರರುಹ ಕಿಂಕಿಣೀ ಮಾಳಿಕಾಳಂಕಾರಂಗಳುಮಪ್ಪ ಜಿನಸಿದ್ಧಪ್ರತಿಮಾಸಂಕೀರ್ಣ
ಸಕಲಜನಾರ್ಚಿತ ಪದ್ಮರಾಗಮಾಣಿಕ್ಯಮಯನವ ನವಸ್ತೂಪಂಗಳುಮಂ, ಸಪ್ತಗೋಪು
ರದ್ವಾರದಿಂ ಕೊಳಗರ್ಧ ಯೋಜನಾಂತರದೊಳ್ ರತ್ನಮಯ ಸೋಪಾನ ನಾನಾಧ್ವಜ
ವಿರಾಜಮಾನಮುಂ ಮಂಗಲನಿಧಿಪರಿಪೂರ್ಣಮುಂ ಮಣಿಖಚಿತ ದಂಡಧರಕಲ್ಪಾ
ಮರ ದೌವಾರಿಕ ಪರಿಪಾಳಿತಮುಮಪ್ಪ ಮರಕತಮಯ ಗೋಪುರದ್ವಾರದಾಕಾಶ
ಸ್ಫಟಿಕ ಪ್ರಾಕಾರಾಭ್ಯಂತರದೊಳ್ ಶ್ರೀಮಂಟಪಂ ಆಕಾಶಸ್ಫಟಿಕನವಮವೇದಿಕೆಯಿಂ
ತೊಟ್ಟು ಧೂಳೀಪ್ರಾಕಾರಂಬರಂ ನೀಳ್ದ ಮಹಾವೀಥಿಗಳಿಕ್ಕೆಲದೊಳಂ ಕ್ಷುಲ್ಲಕ ದ್ವಾರ
ರಾಜವಿರಾಜಮಾನಮಮಲಸ್ಫಟಿಕ ಭಿತ್ತಿಗಳೊಳಂ ಉಭಯೋಭಯ ವೀಥ್ಯಂತರಾಳಂ
ಗಳೊಳ್ ನವಮವೇದಿಕೆಯಿಂತೊಟ್ಟು ಆಕಾಶಸ್ಫಟಿಕ ಪ್ರಾಕಾರಂಬರಂ ಒಳಗೆರಡಾ
ಕಾಶಸ್ಫಟಿಕಭಿತ್ತಿಗಳೊಳಂ ವಿಭಾಗಂಬಡೆದ ಪನ್ನೆರಡು ಕೋಷ್ಠಂಗಳೊಳಂ ದಕ್ಷಿಣಾ
ನುಕ್ರಮದೊಳ್ ಗಣಧರಾದೀಶ್ವರವರ್ಗಮುಂ, ಕಲ್ಪಾಮರ ಕಾಂತಾನಿಕಾಯಮುಂ
ಉಪಾಸಕಾಂಗನಾಸಂಗಿ ಜನಸಮಾಜಮುಂ ಜ್ಯೋತಿರಮರಯುವತಿ ಸಮಿತಿಯುಂ
ವಾನವ್ಯಂತರ ನಿತಂಬಿನೀನಿಕುರುಂಬಮುಂ ಭವನ ವಾಸಿವನಿತಾಸಮೂಹಮುಂ ಭವನ
ಜನಸಮಾಜಮುಂ, ವಾನವ್ಯಂತರ ಸಂತತಿಯುಂ ಜ್ಯೋತಿರ್ದೇವಸಮುದಯಮುಂ
ಕಲ್ಪದಿವಿಜಸಮುದಯಮುಂ ನರನಿಕುರುಂಬಮುಂ ತಿರ್ಯಕ್ತತಿಯುಮೆಂಬೀದ್ವಾದಶ
ಗಣಂಗಳುಮಂ ಇಂತನುಕ್ರಮದೊಳಿರ್ದ ಸಮವಸರಣ ಭೂಮಂಡಲದೊಳ್ ತೀರ್ಥ
ಕರಪರಮದೇವೋತ್ಸೇಧ ದ್ವಾದಶಗಣೋತ್ಸೇಧಂಗಳುಮಪ್ಪ ಗೋಪುರಮಾನಸ್ತಂಭ
ಪ್ರಾಸಾದ ಚೈತ್ಯಾಲಯ ಕೃತಕಪರ್ವತ ಚೈತ್ಯವೃಕ್ಷ ಧ್ವಜಸ್ತಂಭ ಸಿದ್ಧಾರ್ಥ ದ್ರುಮ
ಸ್ತೂಪಲಕ್ಷ್ಮೀಮಂಟಪಾಶೋಕ ವೃಕ್ಷಮೆಂಬಿವುಮಂ ತೀರ್ಥಕರೋತ್ಸೇಧಕ್ಕೆ ಚತು
ರ್ಗುಣೋತ್ಸೇಧಮುಂ ಕ್ರಮಹಾನಿಯುಮಪ್ಪ ಪ್ರಾಕಾರಂಗಳುಮಂ ಸಮರುಂದ್ರಮು

1 ಘ. ಪಲ್ಲಿ ಬಂಧಮುಂ 2 ಗ. ವಲಭಿಚ್ಛಂದ

ಮಪ್ಪವೇದಿಗಳುಮನವರ್ಕ್ಕೆ ಸಾತಿರೇಕ ಮೆಸೆವ ತೋರಣಂಗಳುಮಂ ನೋಡುತ್ತಮ ಷ್ಟಮಗೋಪುರ ದ್ವಾರದಿಂದೊಳಗೆ ಗವ್ಯೂತ್ಯಂತರ ದೊಳಿರ್ದ ವೈಡೂರ್ಯಕನಕ ಸರ್ವರತ್ನಮಯಂಗಳುಮಾಗಿ ಯಥಾಕ್ರಮದಿನೆಂಟುಂ ನಾಲ್ಕುಂ ದಂಡೋಚ್ಛ್ರಿತಂ ಗಳುಂ ಪಂಚಾಶದಧಿಕ ಸಪ್ತಶತಾಧಾರ್ಷ್ಟ ಶತಸಹಸ್ರ ಚಾಪವಿಷ್ಕಂಭಂಗಳು ಮಪ್ಪವ ಱಮೇಗೆ ಕ್ರಮದಿಂ ನಾಲ್ಕುಂ ದೆಸೆಯೊಳೇಕ ಚಾಪೋಚ್ಛ್ರಿತ ಧರ್ಮಚಕ್ರಧರಯಕ್ಷರಿಂ ದಶವಿಧಮಹಾಧ್ವಜಂಗಳಿ ನಷ್ಟಮಂಗಳ ನವನಿಧಿಗಳಿನೊಪ್ಪುವ ಮೂಱುಂಪೀ ಠಂಗಳುಮಂ ತ್ರಿಃ ಪ್ರದಕ್ಷಿಣಂಗೆಯ್ದು ತೃತೀಯ ಪೀಠದಮೇಗೆ ಷಟ್ಟಂತ ಶತವಿಸ್ತಾ ರಮುಂ ನವನಂತ ಶತೋತ್ಸೇಧಮುಮಪ್ಪ ಗಂಧಕುಟಿಯ ಮಧ್ಯಮಭಾಗಮನಲಂ ಕರಿಸಿರ್ದ ನಾನಾ ರತ್ನಮಯಮಪ್ಪ ಸಿಂಹಾಸನಮುಂ ನಾಲ್ಕೆರಳಂತರದೊಳ್ ಮುಟ್ಟದೆ ಪಂಚಶತ ಚಾಪೋತ್ಸೇಧನುಂ ಸಮಚತುರಸ್ರಸಂಸ್ಥಾನನುಂ ಅಷ್ಟೋತ್ತರ ಶತಲಕ್ಷಣ ನವಶತವ್ಯಂಜನಾಲಂಕಾರ ಕಾಯನು ಮಖಿಲ ಭುವನ ಭವ್ಯಜನ ನಯನ ಶರದಮೃತಕರ ನಿಕರಾಯಮಾಣ ಶಾತಕುಂಭಸ್ತಂಭ ಶುಂಭದ್ವಪುಃ ಪ್ರಭಾವಳಿಯ ವಿಜಿತ ಸಕಲ ಜ್ಯೋತಿರ್ಲೋಕ ವಿಳಸದಂ[1]ಶುಮಂಡಲನುಂ, ಜಗತ್ತ್ರಯೈಶ್ವರ್ಯ ಪ್ರಕಾಶನಕರಾತಪತ್ರತ್ರಯನುಂ ಯಕ್ಷಕುಮಾರ ಕರಾಂದೋಳಿತ ಕ್ಷೀರಾಂಭೋನಿಧಿ ವೀಚಿ ರುಚಿರ ಚತುಷ್ಷಷ್ಟಿ ಚಾಮರನುಂ ವಿನೇಯವಿಲೋಚನ ಚಂಚರೀಕ ನಿಚಯ ನಿಚಿತಾ ಶೋಕಾನೋಕಹನುಂ ಸಾನಂದ ವೃಂದಾರಕ ವಾದ್ಯಮಾನಮಂದ್ರ ನಿನದ ಗಂಭೀರ ದುಂದುಭಿಯುಂ [2]ಸುನೃತ್ಯತ್ರಿಭುವನೋದ್ಯಾನ ಮಧುಕರಾರಬ್ಧ ಮಧು ಸುಧಾಪಾನಕ ಸನ್ಮಾನಕ ಪ್ರಭೃತಿ ಸುರಕುಸುಮಾಸಾರನುಂ ಅಶೇಷಭಾಷಾಸ್ವಭಾವ ಸರ್ವಾರ್ಧ ಮಾಗಧೀಯ ಪರಾರ್ಧ್ಯಭಾಷಾಸುಧಾಸಾರ ಸಂತತ ಸಂತರ್ಪಿತ ದಿವಿಜ ದನುಜತಿರ್ಯಗ್ವಿನೇಯನುಂ ಅಪಭೂತ ಚತುಸ್ತ್ರಿಂಶದತಿಶಯನುಂ, ಅಮರಪತಿ ಸಹಸ್ರ ಚಕ್ಷುರಪರ್ಯಾಪ್ತ ಸೌಂದರ್ಯಾವಲೋಕನುಂ, ಅಹಮಹಮಿಕಾವಿನಮ ದಮರ ನಿವಹ ಮುಕುಟ ಸಂಘಟ್ಟ ವಿಘಟ್ಟಮಾನ ಮುಕ್ತಾಮಣಿ ಪ್ರಕರ ಪಿಹಿತಪಾದ ಪೀಠೋಪಕಂಠ ಮಹೀತಳೋಪಹಾರನು ಮಾಗಿರ್ದ ಶೇಷಜಗದತಿಶಯಮಹಾಪುಣ್ಯ ಪುಂಜಮೂರ್ತಿಯ ನಮರಪತಿ ಸಂಗೀತ ಸಂಗೀಯಮಾನ ಕೀರ್ತಿಯನರ್ಹದ್ವೃಂದಾ ರಕನನಾದಿ ಭಟ್ಟಾರಕನಂ ಪ್ರಥಮಚಕ್ರೇಶ್ವರಂ ಕಂಡು ಉತ್ತಮಾಂಗೋತ್ತಂಸೀಕೃ ತಾಂಜಲಿ ಪುಟಕಂಜ ಕುಟ್ಮಲಾಲಂಕೃತ ಭೂತಳನಾಗಿ,

ಶಾ॥ವಿ॥ಸ್ವಾಮಿನ್ನದ್ಯ ವಿನಿರ್ಗತೋಸ್ಮಿ ಜನನೀ ಗರ್ಭಾಂಧಕೂಪೋದರಾ
ದದ್ಯೋದ್ಘಾಟಿತದೃಷ್ಟಿರಸ್ಮಿ ಫಲವಜ್ಜನ್ಮಾಸ್ಮಿ ಚಾದ್ಯಸ್ಫುಟಂ
ತ್ವಾಮದ್ರಾಕ್ಷಮಹಂ ಯದಕ್ಷಯಪದಾನಂದಾಯ ಲೋಕತ್ರಯೀ ।
ನೇತ್ರೇಂದೀವರಕಾನನೇಂದು ಮಮೃತಸ್ಯಂದಿ ಪ್ರಭಾಚಂದ್ರಿಕಂ ॥ ॥೧॥
ನಿಶ್ಶೇಷತ್ರಿದಶೇಂದ್ರಶೇಖರ ಶಿಖಾರತ್ನಪ್ರದೀಪಾವಳೀ ।
ಸಾಂದ್ರೀಭೂತಮೃಗೇಂದ್ರವಿಷ್ಟರತಟೀಮಾಣಿಕ್ಯದೀಪಾವಳಿಃ ॥

1 ಗ. ದಲ್ಲಿ ವಿಳಸದಂಶು ಮಾಲಿಮಂಡಲನು.

2 ಸನ್ನಿಹಿತ ತ್ರಿಭುವನ

ಕ್ಷೇಯಂ ಶ್ರೀಃ ಕ್ಷಪಣನಿಸ್ಪೃಹತ್ವಮಿದಮಿತ್ಯೂಹಾತಿಗೋ ನ್ಯಾದೃಶಃ ।
ಸರ್ವಜ್ಞಾನದೃಶಶ್ಚರಿತ್ರಮಹಿಮಾ ಲೋಕೇಶ ಲೋಕೋತ್ತರಃ ||೨||

ರಾಜ್ಯಂ ಶಾಸನಕಾರಿ ನಾಕಪತಯೋ ತ್ಯಕ್ತಂ ತೃಣಾವಜ್ಞಯಾ ।
ಹೇಲಾನಿರ್ದಳಿತ ತ್ರಿಲೋಕಮಹಿಮಾ ಯನ್ಮೋಹಮಲ್ಲೋ ಜಿತಃ ॥
ಲೋಕಾಲೋಕಮಪಿ ಪ್ರಬೋಧಮುಕುರಸ್ಯಾಂತಃ ಕೃತಂ ಯತ್ತ್ವಯಾ ।
ಸ್ವೈಪಾಶ್ಚರ್ಯ ಪರಂಪರಾ ಜಿನವರ ! ಕ್ವಾನ್ಯತ್ರ ಸಂಭಾವ್ಯತೇ ॥ ||೩||

ಪ್ರಜ್ಞಾಪಾರಮಿತಸ್ಸ್ವಯಂ ಗತವಾಕ್ಪಾರಂ ಸಮಸ್ತಶ್ರುತ
ಸ್ಕಂಧಾಬ್ಧೇಃ ಗುಣರತ್ನಭೂಷಣ ಇತಿ ಶ್ಲಾಘ್ಯಸ್ಸ ಏವ ಧ್ರುವಂ ॥
ನೀಯಂ ತೇ ಜಿನ ಯೇನ ಕರ್ಣಹೃದಯಾಲಂಕಾರತಾಂ ತ್ವದ್ಗುಣಾಃ
ಸಂಸಾರಾಹಿವಿಷಾಪಹಾರ ಮಣಯಸ್ತ್ರೈಲೋಕ್ಯಚೂಡಾಮಣೇ ॥ || ೪ ||

ಎಂದಿಂತು ಚಕ್ರೇಶ್ವರನಮರಜನ ಕರ್ಣಾಂಜಲಿನಿಪೇಯಮಾನಸ್ವರಾಮೃತಂಗಳಪ್ಪತಿಶಯ ಸ್ತುತಿಗಳಿಂ ಸ್ತುತಿಯಿಸಿ ವೃಷಭಸೇನ ಗಣಾಗ್ರಣಿಗಳಿಂ ನಿಟಿಲತಟಶಿಖರಘಟಮಾನ ಕರಪುಟಂ ಬಂದಿಸಿ ನಿಜೋಚಿತಸ್ಥಾನದೊಳ್ ಕುಳ್ಳಿರ್ದು ಸಮಸ್ತವಸ್ತುಸ್ಥಿತಿಯಂ ಬೆಸಗೊಂಡು ನಿಸ್ಸಂಶಯನಾಗಿ ಸಮವಸರಣಮಂಡಲದಿಂ ಪೊಱಮಟ್ಟು ಅಱುವತ್ತು ಸಾಸಿರವರ್ಷಂ ದಿಗ್ವಿಜಯಂಗೆಯ್ದು ಅಯೋಧ್ಯೆಯಂ ಪುಗುವಾಗಳ್ ಚಕ್ರರತ್ನಂ ಪುಗದೆ ನಿಂದುದಂ ಕಂಡು ಆ ಚಕ್ರಸ್ಖಲನಕ್ಕೆ ಮನಸ್ಖಲನಮಾಗೆ ಪುರೋಹಿತರತ್ನಮಂ ಬೆಸಗೊಂಡೊಡಾತನಿಂತೆಂದಂ-

ದೇವಾ ! ನಿನಗೆ ರಾಜಕಮೆಲ್ಲಂ ಎಱಗಿದುದದೊಂದೀ ಬಾಹುಬಲಿ ಕುಮಾರಂ ಮೊದಲಾಗೆ ನಿನ್ನ ತಮ್ಮಂದಿರೆಲ್ಲಂ ನಿನಗೆಱಗೆವೆಂಬ ಮದದೊಳಿರ್ದರ್; ಅದಱಿಂದಿಲ್ಲಿ ಚಕ್ರಂ ಪುಗದೆ ಮಾಣ್ದುದೆನೆ ಕುಮಾರರಲ್ಲಿಗೆ ಶಾಸನಹರರನಟ್ಟಿದೊಡೆ ಅಭಿಮಾನಧನರಪ್ಪ ನಿಬರುಂ ಎಱಗಲೊಲ್ಲದೆ ಸಂಕ್ಷೋಭಿಸಿ ನಿಜಗುರು ಚರಣಮೂಲದೊಳ್ ತಪಮಂ ಕೈಕೊಳ್ವುದುಂ ಅದಂ ಕೇಳ್ದು ಭರತನಾಶ್ಚರ್ಯಂ ಬಟ್ಟು ಮನದೊಳೆ ಮೆಚ್ಚಿ ಬಾಹುಬಲಿ ಕುಮಾರನಲ್ಲಿಗಾಸ್ಥಿತಿಯೊಳ್ ಪೆಱಿಯುಮಂ ದೂತರುಮನಟ್ಟಿದೊಡೆ ಲೇಖಾರ್ಥಾಕರ್ಣನದೊಳ್ ಅತಿಕುಪಿತನುಂ ಸಮರಸನ್ನದ್ಧನುಮಾಗಿ ಬಂದುದೂತರಂ ಕಳಿಪೆ ಭರತೇಶ್ವರಂ ಮುಳಿದು ನಡೆದೆರಡುಂ ಪಡೆಯುಮೊಡ್ಡಿ ಕಾದುವಾಗಳ್ ಉಭಯಬಲದ ಮಂತ್ರಿಗಳಿರ್ವರು ಮನಸುಗಳಪ್ಪೊಡೆ ಚರಮದೇಹಧಾರಿಗಳ್ ಇವರ್ ತಮ್ಮೊಳ್ ಒಗೋರ್ವನಂ ನೋಯಿಸಲುಂ ಕೊಲಲುಂ ಆಱರ್ ಆದಱಿಂದಿವರ ಯುದ್ಧಮೆಂಬುದು ಕ್ರೂರಗ್ರಹಯುದ್ಧದಂತೆ ಸಕಲಜನಕ್ಷಯಕರಮದಱಿಂ ಬೇಡವಪ್ಪುದೆಂದು ತನಿಯಸಮುಕಟ್ಟಿ ಧರ್ಮಯುದ್ಧಕ್ಕೆ ಭರತಬಾಹುಬಲಿಗಳನೊಡಂಬಡಿಸಿ ಬಲಮೆರಡಂ ಮಿಡುಕದೆ ನೋಡುವಂತು ನಿಯಮಿಸಿದಾಗಳ್ ಪೊಣರ್ದು ಮಿಲಿಗಾಪಂಗಳೊಳ್ ಪ್ರಾಣಮುರ್ಶ್ರಾಂತಮಾದಾಗಳ್ ಭರತನಂ ಪಿಡಿದೆತ್ತಿ ಬಾಹುಬಲಿ ಭರತನಂ ದೃಷ್ಟಿಯುದ್ಧ ಜಲಯುದ್ಧದೊಳ್ಗೆಲ್ದು ಮಲ್ಲಯುದ್ಧದೊಳ್ ನೆಲಕ್ಕಿಕ್ಕುವುದುಂ ಭರತಂ ಸಿಗ್ಗಾಗಿ ಚಕ್ರರತ್ನಮಂ ಬೆಸಸಿದೊಡದು ಬಂದು ಬಾಹುಬಲಿಯುಂ

ಬಲಗೊಂಡು ನಿಲೆ ತನ್ನಣ್ಣನರಾಜ್ಯಮೋಹದೊಳಾದ ಅಜ್ಞತೆಗಂ ಸಂಸಾರದ ಅಸಾರತೆಗಂ ಪೇಸಿ ಭರತನಲ್ಲಿಗೆ ಬಂದು ಅಣ್ಣಾ! ಸಿಗ್ಗನುೞಿವುದು, ನೀನೀ ಸಾಮ್ರಾಜ್ಯಮನಾವಗಂ ಕೈಕೊಳ್ವುದು, ಎನಗಿದೇನುಂ ಬಾರ್ತೆಯಲ್ಲ, ಎಂದು ತಪಶ್ಚರಣನಿರತಮನನಾದಂ.

ಆಗಳ್ ಭರತಂ ಪಶ್ಚಾತ್ತಾಪಮಾಗೆ ಬಾಹುಬಲಿಯ ಕಾಲಂಪಿಡಿದು ಎಂತುಮೊಡಂಬಡಿಸಲಾಱದೆ ಮಹಾಬಲಿಯೆಂಬ ತನ್ನ ಮಗನಂ ಪದವಿಯೊಳ್ ನಿಱಿಸಿ ಪುರುದೇವನಲ್ಲಿಗೆ ಬಂದು ವಿನಮಿತನಾಗಿ ದೀಕ್ಷೆಯುಂ ಕೈಕೊಂಡು ಗುರುಮತದಿಂದ್ವಾದಶಾಂಗ ಚತುರ್ದಶ ಪೂರ್ವಮುಂ ಕಲ್ತೇಕ ವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ ನಿಂದ ಬಾಹುಬಲಿಯ ಮೆಯ್ಯನಡರ್ದ ಬಳ್ಳಿಗಳಂ ಖೇಚರಿಯರ್ ಬ್ರಾಹ್ಮೀಸೌಂದರಿಯರ್ ರೂಪುಗೊಂಡು ಸರಸಂ ನುಡಿದು ಬಿಡಿಸಿಕಳೆದರ್.

ಅನ್ನೆಗಂ ಬಾಹುಬಲಿ ಮುನೀಂದ್ರಂಗೆ ಕೇವಲ ಜ್ಞಾನೋತ್ಪತ್ತಿಯಾಗದುದರ್ಕೆ ಭರತಂ ವಿಸ್ಮಯಂಬಟ್ಟು ಪೋಗಿ ವೃಷಭನಾಥನಂ ಬೆಸಗೊಂಡೊಡೆ ಇಂದು ಭರತನ ನೆಲನ ನಿನ್ನಂ ಮೆಟ್ಟಿರ್ದೆನೆಂಬ ಮಾನಕಷಾಯಮುಂ ಕಳೆಯಲೊಡಂ ಕೇವಲಜ್ಞಾನೋತ್ಪತ್ತಿಯಾಗಿ ಯನಗಾರ ಕೇವಲಿಯಕ್ಕುಮೆಂದು ಬೆಸಸೆ ಭರತಂ ಬಾಹುಬಲಿ ಮುನಿಯಲ್ಲಿಗೆ ಬಂದೆಱಗಿ ಮಾನಕಷಾಯಮುಂ ಕಳೆಯೆ ಜ್ಞಾನೋತ್ಪತ್ತಿಯಾಗೆ ಮುನೀಂದ್ರರಂ ಪೂಜಿಸಿ ಬಂದಯೋಧ್ಯೆಯಂ ಪೊಕ್ಕು ಮಾಗಧಾಮರ ಪ್ರಭೃತಿಗಳಪ್ಪ ದೇವರುಂ ವಿದ್ಯಾಧರರುಂ ಮಕುಟಬದ್ಧರುಮಿರ್ದು ಷೋಡಶಮನುವುಂ ಚಕ್ರಧರನುಂ ರಾಜರಾಜನುಂ ಷಟ್ಖಂಡಪತಿಯುಮೆಂದು ಸಿಂಹಾಸನಮೇಱಿಸಿ ತೀರ್ಥಜಲಂಗಳನಭಿಷೇಕಂಗೆಯ್ಯೆ ಭರತಮಹೀಶಂ ಗ್ರಾಮನಗರಖೇಟಖರ್ವಟಮಡಂಬಪತ್ತನ ದ್ರೋಣಾಮುಖ ಸಂವಾಹನ ಪ್ರಜಾದಿಸ್ಥಾನ ಸಹಿತಮಪ್ಪ ತ್ರಿಸಮಾಗಧಲಾಟ ವತ್ಸಗೌಡ ಮಹಾರಾಷ್ಟ್ರಕುರ್ದಕ ಲಕ್ಷಣಮಪ್ಪಷ್ಟಾದಶ ಭಾಷಾಜನಪರಿವೃತ ಷಟ್ಖಂಡ ಭರತಮನೇಕಚ್ಛತ್ರಚ್ಛಾಯಾಯತ್ತಮುಂ ಆಜ್ಞಾವಿಧೇಯಮುಂ ಮಾಡಿ ವಜ್ರವೃಷಭನಾರಾಚ ಶರೀರಸಂಹನನುಂ ಸಮಚತುರಸ್ರ ಸಂಸ್ಥಾನನುಂ ನಿಷ್ಟಪ್ತಕನಕವರ್ಣನುಂ ಪಂಚಶತಶರಾಸನೋತ್ಸೇಧನುಂ ಚತುಷ್ಷಷ್ಟಿ ಲಕ್ಷಣಧರನುಂ ಅನೇಕ ವ್ಯಂಜನಾಲಂಕೃತನುಂ ಚತುರಶೀತಿಲಕ್ಷಪೂರ್ವಾನಪವರ್ತ್ಯಾಯುಷ್ಯನುಂ ಅನಂತವೀರ್ಯನುಮಪ್ರತಿಹತಶಾಸನನುಮಾಗಿ ಮೂವತ್ತಿರ್ಛಾಸಿರ ಜನಪದಕ್ಕಂ ಮೂವತ್ತಿರ್ಛಾಸಿರ್ವರ್ ಮಕುಟಬದ್ಧರ್ಗಂ ಮೂವತ್ತಿರ್ಛಾಸಿರ್ವರ್ ವಿದ್ಯಾಧರದೇವಿಯರ್ಗಂ ಮೂವತ್ತಿರ್ಛಾಸಿರ್ವರ್ ಜನಪದಕಲ್ಯಾಣಿಯರ್ಗಂ ಮೂವತ್ತಿರ್ಛಾಸಿರ್ವರುಮ ಕಲ್ಯಾಣಿಯರ್ಗಂ ಅಂತು ತೊಂಬತ್ತಾಱುಸಾಸಿರಮಂತಃಪುರಕ್ಕಂ ಮೂವತ್ತಿರ್ಛಾಸಿರ ಸಂಗೀತಕಸಂಗತ ನಾಟ್ಯಶಾಲೆಗಳ್ಗಂ ಎಪ್ಪತ್ತುಸಾಸಿರ ಪುರಂಗಳ್ಗಂ ತೊಂಬತ್ತಾಱುಕೋಟಿ ಗ್ರಾಮಂಗಳ್ಗಂ ತೊಂಬತ್ತೊಂಬದುಸಾಸಿರ ದ್ರೋಣಾಮುಖಂಗಳ್ಗಂ ನಾಲ್ವತ್ತೆಣ್ಛಾಸಿರ ಪತ್ತನಂಗಳ್ಗಂ ಪದಿನಾಱುಸಾಸಿರ ಖೇಡಂಗಳ್ಗಂ ಐವತ್ತಾಱಂತರ ದ್ವೀಪಂಗಳ್ಗಂ ಪದಿನಾಲ್ಸಾಸಿರ ಸಂವಾಹನಂಗಳ್ಗಂ ಏಕಕೋಟಿ ಪ್ರಮಾಣಸ್ಥಾಯಿಗಳ್ಗಂ ಒಂದುಲಕ್ಷಕೋಟಿ ಹಲಂಗಳ್ಗಂ ಮೂಱುಕೋಟಿ ಗೋಮಂಡಲಂಗಳ್ಗಂ ಏೞ್ನೂಱುಕುಕ್ಷಿನಿವಾಸಿಗಳ್ಗಂ ಇರ್ಪತ್ತೆಣ್ಛಾಸಿರ

ಮಗರ್ಟಪಗಳ್ಗಂ ಪದಿನೆಣ್ಸಾಸಿರ ಮ್ಲೇಚ್ಛರಾಜರ್ಗಂ ಎಂಬತ್ತುನಾಲ್ಕುಲಕ್ಷಭದ್ರಹಸ್ತಿಗಳ್ಗಂ ಅನಿತೆರಥಂಗಳ್ಗಂ ಪದಿನೆಂಟುಕೋಟಿ ಜಾತ್ಯಶ್ವಂಗಳ್ಗಂ ಎಂಬತ್ತುನಾಲ್ಕುಕೋಟಿ ಪದಾತಿಗಳ್ಗಮಧಿಪತಿಯಾಗಿ ಮತ್ತಂ ಲೌಕಿಕವಾರ್ತಾನಿರ್ವರ್ತನಪುಷ್ಪಫಲಪಂಪಣಿಗಳುಂ ಷಟ್ಕರ್ಮಸಾಧನವಸ್ತುಗಳುಂ ದಿವ್ಯಶಯ್ಯಾಸನ ನಾನಾಸದನಂಗಳುಂ ಗೋಧೂಮಾದಿ ಧಾನ್ಯಂಗಳುಂ ಘೃತಾದಿರಸಂಗಳುಂ ಕ್ಷೌಮದುಕೂಲಾದಿ ವಿವಿಧವಸ್ತ್ರವಿಶೇಷಂಗಳುಂ ಸ್ತ್ರೀಪುರುಷಯೋಗ್ಯ ವಿವಿಧಾಭರಣಂಗಳುಂ ಸೀತಿಶಾಸ್ತ್ರಪ್ರಹರಣಂಗಳುಂ ಅಕೋರ್ವಿಸ್ಫುರಿತಂತಪದ ಕನಕರಾಶಿಗಳುಂ ಪದ್ಮರಾಗಮರಕತವಜ್ರ ಮುಕ್ತಾಫಲಾದಿ ರತ್ನಂಗಳುಂ ಅನುಕ್ರಮದಿಂದಂ ಶ್ರೀಗೃಹದೊಳ್ ಪುಟ್ಟಿದುವು ಕಾಲಮಹಾಕಾಲನೈಸರ್ಪಪಾಂಡುಕ ಪದ್ಮಪಿಂಗಳ ಮಾಣವಕಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ ಆಯುಧಶಾಲೆಯೊಳ್ ಪುಟ್ಟಿದ ಚಕ್ರಾಸಿದಂಡ ಛತ್ರರತ್ನಂಗಳುಂ ಶ್ರೀಗೃಹದೊಳ್ ಪುಟ್ಟಿದ ಮಣಿಚರ್ಮಕಾಕಿಣೀರತ್ನಂಗಳುಂ ವಿಜಯಾರ್ಧದೊಳ್ ಪುಟ್ಟಿದ ಗಜಾಶ್ವ ಸ್ತ್ರೀರತ್ನಂಗಳುಂ ಅಯೋಧ್ಯೆಯೊಳ್ ಪುಟ್ಟಿದ ಸೇನಾಪತಿ ಗೃಹಪತಿ ಸ್ಥಪತಿಪುರೋಹಿತರತ್ನಂಗಳುಂ ಇಂತು ಪದಿನಾಲ್ಕು ಜೀವಾಜೀವರತ್ನಂಗಳುಂ ಪದಿನಾಱುಸಾಸಿರ್ವರ್ ಗಣಬದ್ಧದೇವರುಂ ಕ್ಷಿತಿಸಾಗರಮೆಂಬ ಪ್ರಾಕಾರಮುಂ ಸರ್ವತೋಭದ್ರಮೆಂಬ ಗೋಪುರಮುಂ ನಂದ್ಯಾವರ್ತಮೆಂಬ ಶಿಬಿರನಿವೇಶಮುಂ ವೈಜಯಂತಿಯೆಂಬ[1] ಪ್ರಾಸಾದಮುಂ ದಿಕ್ಸ್ವಸ್ತಿಕಮೆಂಬ ಸಭಾಭೂಮಿಯುಂ ಸುವಿಧಿಯೆಂಬ ಚಂಕ್ರಮಣಯಷ್ಟಿಯುಂ ಗಿರಿಕೂಟಮೆಂಬ ದಿಗವಲೋಕನಗೃಹಮುಂ ವರ್ಧಮಾನಮೆಂಬ ಪ್ರೇಕ್ಷಾಗೃಹಮುಂ ಮಹಾಘರ್ಮಾಂತಮೆಂಬ ಧಾರಾಗೃಹಮುಂ ಗೃಹಕೂಟಮೆಂಬ ವರ್ಷಾವಾಸಮುಂ ಪುಷ್ಕರಾವತಿಯೆಂಬ ಶಯನಸದನಮುಂ ಕುಬೇರಕಾಂತಮೆಂಬ ಭಂಡಾರಮುಂ ವಸುಧಾರಕಮೆಂಬ ಕೋಷ್ಠಾಗಾರಮುಂ ಜೀಮೂತಮೆಂಬ ಮಜ್ಜನಗೃಹಮುಂ ವತಂಸಿಕೆಯೆಂಬ ರತ್ನಮಾಳೆಯುಂ ದೇವರಮ್ಯಮೆಂಬ ಪಟಕುಟಿಯುಂ ಸಿಂಹವಾಹಿನಿಯೆಂಬ ಶಯ್ಯೆಯುಂ ಅನುತ್ತರಮೆಂಬ ಸಿಂಹಾಸನಮುಂ ಯಕ್ಷಕರವಿಧೂಯಮಾನಂಗಳಪ್ಪ ಅನುಪಮಂಗಳೆಂಬ ಮೂವತ್ತೆರಡು ಚಾಮರಂಗಳುಂ ವಿದ್ಯುತ್ಪ್ರಭಂಗಳೆಂಬ ಮಣಿಕುಂಡಲಂಗಳುಂ ವಿಷಮೋಚಿಕೆಗಳೆಂಬ ಪಾದುಗೆಗಳುಂ ಅಭೇದ್ಯಮೆಂಬ ಕವಚಮುಂ ಅಜಿತಂಜಯಮೆಂಬ ರಥಮುಂ ವಜ್ರಕಾಂಡಮೆಂಬ ಚಾಪಮುಂ, ಅಮೋಘಮೆಂಬ ಶರಮುಂ ವಜ್ರದಂಡಮೆಂಬ ಶಕ್ತಿಯುಂ ಸಿಂಹಾಟಕಮೆಂಬ ಕೊಂತಮುಂ ಲೋಹವಾಹಿನಿಯೆಂಬ ಸುರಿಗೆಯುಂ ಮನೋವೇಗಮೆಂಬ ಕಣೆಯುಂ ಭೂತಮುಖಮೆಂಬ ಖೇಟಕಮುಂ ಸುದರ್ಶನಮೆಂಬ ಚಕ್ರರತ್ನಮುಂ ಚಂಡವೇಗಮೆಂಬ ದಂಡರತ್ನಮುಂ ವಜ್ರಮಯಮೆಂಬ ಚರ್ಮರತ್ನಮುಂ ಚೂಡಾಮಣಿಯೆಂಬ ಮಣಿರತ್ನಮುಂ ಚಿಂತಾಮಣಿಯೆಂಬ ಕಾಕಿಣೀರತ್ನಮುಂ ಸೂರ್ಯಪ್ರಭಮೆಂಬ ಛತ್ರರತ್ನಮುಂ ಸೌನಂದಕಮೆಂಬ ಖಡ್ಗರತ್ನಮುಂ ಅಯೋಧ್ಯನೆಂಬ ಸೇನಾಪತಿರತ್ನಮುಂ ಬುದ್ಧಿಸಾಗರನೆಂಬ ಪುರೋಹಿತರತ್ನಮುಂ ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ ಭದ್ರಮುಖನೆಂಬ ಸ್ಥಪತಿರತ್ನಮುಂ ವಿಜಯಾರ್ಧಪರ್ವತಮೆಂಬ ಗಜರತ್ನಮುಂ ಪವನಂಜಯಮೆಂಬ ಅಶ್ವರತ್ನಮುಂ ಸುಭ

1 ಗ. ದಕ್ಷಿ ಸಂಕ್ರಮ. [illegible]

ದ್ರಿಯೆಂಬ ಕನ್ಯಾರತ್ನಮುಂ ದ್ವಾದಶಯೋಜನಂಬರಮೆಸೆವಾನಂದಿಗಳೆಂಬ ಪನ್ನೆರಡು ಭೇರಿಗಳುಂ ಅನಿತೆ ವಿಜಯಘೋಷಂಗಳೆಂಬ ಪಟಹಂಗಳುಂ ಗಂಭೀರಾವರ್ತಂಗಳೆಂಬಿಪ್ಪತ್ತನಾಲ್ಕು ಶಂಖಂಗಳುಂ ನಾಲ್ವತ್ತೆಂಟುಕೋಟಿ ಪತಾಕೆಗಳುಂ ವೀರಾಂಗದಂಗಳೆಂಬ ಹಸ್ತಕಟಕಂಗಳುಂ ಮಹಾಕಲ್ಯಾಣಮೆಂಬ ದಿವ್ಯಾಹಾರಮುಂ ಅಮೃತರೂಪಂಗಳೆಂಬ ಭಕ್ಷ್ಯರೂಪಂಗಳುಂ ಅಮೃತಕಲ್ಪಮೆಂಬ ಪಾನಮುಂ ಬೆಱಸಿಂತು ಚಕ್ರವರ್ತಿಸಾಮ್ರಾಜ್ಯಸಹಿತನಾಗಿ

ಇಂದ್ರವಜ್ರವೃತ್ತ॥ ದಿವ್ಯಾಪ್ಪುರೀ ರತ್ನಮಹೋನಿಧಿಶ್ಚ
ದಿವ್ಯಾಚಮೂ ಭೋಜನಭಾಜನೇಚ ॥
ದಿವ್ಯಾನಿ ಶಯ್ಯಾಸನ ವಾಹನಾನಿ
ನಾಟ್ಯೇನ ಸಾರ್ಧಂತು ದಶಾಂಗಭೋಗಂ ॥

ಎಂಬ ದಶಾಂಗ ಭೋಗದೊಳ್ ಕೂಡಿ ಸುಖದಿನಿರ್ದೊರ್ಮೆ ದಾನಂಗುಡುವೊಡೆ ತಪೋಧನರ್ ಕೊಳ್ವರಲ್ಲರ್ ಗೃಹಸ್ಥರೊಳ್ ದಾನಯೋಗ್ಯರಾರೆಂ ದಾರಯ್ವುಮೊಂದೊಂದು ಪುಣ್ಯದಿನದೊಳ್ ಬಗೆಯುಂನೆಪಂಮಾಡಿ ಹರಿತಾಂಕುರ ಫಲಪುಷ್ಪಾದಿಗಳ್ ಅರಮನೆಯೊಳಗಂ ಭೋಂಗಂ ಕೆದಱಿಸಿ ಮಕುಟಬದ್ಧ ಪ್ರಭೃತಿಗಳ್ ನೊಸಗೆಗೆ ಬರಿಸಿದೊಡೆಲ್ಲರುಮವಂ ಮೆಟ್ಟಿ ಬರೆ ಕೆಲರ್ ವಿವೇಕಿಗಳ್ ಪ್ರಾಸುಕಮೆಂದು ಮೆಟ್ಟಿ ಬರಲೊಲ್ಲದೆ ಪ್ರಾಸುಕಮಪ್ಪ ಮಾರ್ಗದೊಳವರಂ ತರಿಸಿ ನೀಮಿವರಂತೇಕೆ ಬಂದುದಿಲ್ಲೆನೆ ಹರಿತಾಂಕುರ ಪುಷ್ಪಪಲ್ಲವಾದಿಗಳೇಕೇಂದ್ರಿಯ ಶರೀರಂಗಳವಱೊಳ್ ಸೂಕ್ಷ್ಮಬಾದರ ನಿಗೋದಪ್ರಾಣಿಗಳ್ ಪ್ರತಿಕ್ಷಣಂ ಅನಂತಾನಂತಂ ಸಾಯುತ್ತಂ ಪುಟ್ಟುತ್ತಮಿರ್ಕುಮೆಂದು ಆದಿಭಟ್ಟಾರಕರಲ್ಲಿ ಕೇಳ್ದವಱಿಂ ಪರಿಗ್ರಹೀತೋಪಾಸಕವ್ರತರುಂ, ತ್ರಸಪರಿಹಾರ ಪ್ರಯತ್ನಪರಾಯಣರುಮಪ್ಪೆಮಗೆ ಪರ್ವದಿನದೊಳಗೆ ಸ್ಥಾವರಮರ್ದನನಿವೃತ್ತಿ ಪೂರ್ವಕೋಪವಾಸಮುಂ ಬ್ರಹ್ಮಚರ್ಯವ್ರತಮುಂ ನಿರಂತರ ದೇವಪೂಜಾವಿಧಾನಮುಂ ಬೆಱಸಿಪ್ಪೆವದಱಿಂ ಮಹಾವ್ರತಂಗಳೊಳ್ ಸ್ಥಾವರಂಗಳುಮಂ ಪರ್ವದಿನದೊಳಂದೆ ಮಗೋವಲ್ವೇಳ್ಕುಮೆಂದೇಕೇಂದ್ರಿಯ ಬಾಧಾಪರಿಹಾರಾರ್ಥಂ ಸಾವದ್ಯಪಥದೊಳ್ ಬಾರದೆ ನಿರವದ್ಯಪಥದೊಳ್ ಬಂದೆವೆಂಬುದಂ, ಅವರ ನುಡಿಯಂ ಕೇಳ್ದು ಮೆಚ್ಚಿ ಪದ್ಮನಿಧಿಯಿಂ ತಂದ ಸೂತ್ರದೊಳ್ ಅವರವರ ನೆಲೆಗಳನಱಿವಂತೇಕಸೂತ್ರಮಾದಿಯಾಗೇಕಾದಶ ಸೂತ್ರಮುಂತಮಪ್ಪ ಯಜ್ಞೋಪವೀತಮಂ ಅವರ್ಗಿತ್ತು ಮನ್ನಿಸಿ ಭರತೇಶ್ವರಂ ಮುನ್ನಮಾದಿ ದೇವರಲ್ಲಿ ಸಮಾಕರ್ಣಿತೋಪಾಸಕಾಧ್ಯಯನನಪ್ಪುದಱಿಂ ಅರ್ಹತ್ಪೂಜಾಲಕ್ಷಣಮಪ್ಪ ಇಜ್ಯೆಯುಂ ಅಸಿಮಷಿ ಕೃಷ್ಯಾದಿ ಶುದ್ಧಪ್ರವೃತ್ತಿಯಿಂ ಧನಾರ್ಜನಂಗೆಯ್ವವಾರ್ತೆಯುಂ ದಯಾದತ್ತಿ ಮೊದಲಾದ ಚತುರ್ವಿಧದತ್ತಿಯುಂ ತತ್ವಜ್ಞಾನಲಕ್ಷಣಮಪ್ಪ ಸ್ವಾಧ್ಯಾಯನಮುಂ ಅಣುವ್ರತ ಪ್ರವರ್ತನಮಪ್ಪ ಸಂಯಮಮುಂ ಅನಶನಾದಿ ಲಕ್ಷಣಮಪ್ಪ ತಪಮುಮೆಂಬಾರ್ಯಷಟ್ಕರ್ಮಂಗಳುಮಂ ಮತ್ತಮೈವತ್ತುಮೂಱು ಗರ್ಭಾಧಾನಾದಿ ಗರ್ಭಾನ್ವಯಕ್ರಿಯೆಗಳುಮಂ ನಾಲ್ವತ್ತೆಂಟವತಾರಾದಿ ದೀಕ್ಷಾನ್ವಯಕ್ರಿಯೆಗಳುಮಂ ಸಪ್ತವಿಧಮಪ್ಪ ಜಾತ್ಯಾದಿ ಪರಮಸ್ಥಾನ ಕರ್ತ್ರನ್ವಯ ಕ್ರಿಯೆಗಳುಮಂ ಅವಱ ವಿಧಿಗಳುಮಂ ಮಂತ್ರಂಗಳುಮಂ ಸಪ್ರಪಂಚಮುಂ ಪೇೞ್ದವರ್ಗೆ

ಬ್ರಾಹ್ಮಣರುಂ, ಸುಶ್ರುತರುಂ, ಮಾನಾರ್ಹರುಂ, ನಿಸ್ತಾರಕೋತ್ತಮರುಂ, ದ್ವಿಜರುಂ ಭೂಮಿದೇವರುಮೆಂದು ಪೆಸರನಿಟ್ಟು ನಿಮ್ಮ ಪುತ್ರ ಪೌತ್ರಾದಿಗಳೆಲ್ಲಮಾಯುಂದದೊಳ್ [1] ನೆಗೞ್ವುದೆಂದಪ್ಪಯ್ಸಿ ಪೋಗಲ್ವೇೞ್ದು ಮತ್ತೊಂದುದಿವಸಂ ನಿಶಾವಸಾನಸಮಯದೊಳ್ ದುಸ್ಸ್ವಪ್ನಂಗಳಂ ಕಂಡು ಆದಿಭಟ್ಟಾರಕನಂ ಬೆಸಗೊಳಲೆಂದು ಕೈಲಾಸಕ್ಕೆ ಬಂದು ದೇವರ್ಗೆ ಭಕ್ತಿಪೂರ್ವಕಮೆಱಗಲೊಡಮವಧಿ ಪುಟ್ಟಿತ್ತು ಆಗಳ್ ಭರತನೆಂದು ದೇವರ ಬೆಸನಿಲ್ಲದೆಯುಂ ಎನ್ನ ಮಾಡಿದ ವಿಪ್ರಕುಲಮಿನ್ನೇನಕ್ಕುಮೆಂಬುದನೆನ್ನ ಕಂಡ ಪದಿನಾಱುಂ ದುಸ್ಸ್ವಪ್ನಂಗಳ ಫಲಮುಮಂ ಬೆಸಸಿಮೆನೆ ನೀನಾ ದ್ವಿಜನ್ಮಜಾತಿಯಂ ಒಳ್ಳಿತ್ತಂ ಮಾಡಿದೆಯದೆನ್ನೆವರೆಗಂ ಒಳ್ಳಿತ್ತಾಗಿ ನಡೆಗುಂ ? ಕಾಲಾಂತರದೊಳ್ ದ್ರವ್ಯಲೋಭದಿಂ ಪಾಪಿಗಳುಂ ಕ್ರೂರರುಮಪ್ಪರ್ ಆದಱಿಂ ಆನ್ನೆಗಂ ಸದಾಚಾರರಾಗಿ ನಡೆವರಂ ನಡೆಯಿಸಲ್ವೇೞ್ಪುದೆಂದು ದುಸ್ಸ್ವಪ್ನಂಗಳುಮ ನಿಂತೆಂದು ಬೆಸಸಿದರ್.

ಭರತಮಂಡಲದೊಳ್ ಇಪ್ಪತ್ತ್ಮೂಱು ಸಿಂಹಂ ಕ್ರೀಡಿಸುತ್ತಿರ್ದುದಂ ಕಂಡುದರಿಂದೆ ಭರತದೊಳನ್ನಿಬರ್ ತೀರ್ಥಂಕರರ ವಿಹಾರದೊಳ್ ಪ್ರಾಚುರ್ಯದಿಂ ಪಾಷಂಡಿಗಳಾಗರ್ ಆದರಪ್ಪೊಡಂ ಪೆರ್ಚಲಾಱರ್. ಕಿಶೋರ ಕೇಸರಿಯ ಸಮ್ಮುಖಕ್ಕೆ ಬಾರದೆ ಪೆಱಗೆ ಪೆಱಗೆ ಬರ್ಪ ಮೃಗಂಗಳಂ ಕಂಡುದಱಿಂ ಪಶ್ಚಿಮತೀರ್ಥಂಕರ ಕಾಲದೊಳ್ ಅಪಗತ ವಿಜೃಂಭಿತರಾಗಿಯುಂ ಮತ್ತಂ ಪ್ರಬಲರಪ್ಪರ್ ಮದಗಜಭಾರಮನಾನಲಾಱದೆ ಬೆನ್ನನೇಱಿದು ನಡೆವ ಕಪಿಯುಮಂ ಕಂಡುದಱಿಂ ಮನೋವಾಕ್ಕಾಯಬಲದಿಂ ಮಹಾಪುರುಷರ್ ನಿರ್ವಹಿಸುವ ಮೂಲೋತ್ತರ ಗುಣಂಗಳಂ ತದ್ಬಲಹೀನರುಮಪ್ಪ ಸತ್ವರುಂ ನಿರ್ವಹಿಸಲಾಱದೆ [2] ಗುರುಕುಲಮಂ ದೂಷಿಸುವರ್, ವಿವಿಧ ತರುಲತಾಕ್ಷುಪವೀರುತ್ಪತ್ರಪಲ್ಲವಾಂಕುರಂಗಳನೊಲ್ಲದೆ ಶುಷ್ಕಪತ್ರಂಗಳಂ ಮೇವ ಅಜಕುಲಮುಂ ಕಂಡುದಱಿಂ ಲೌಕಿಕಜನಂಗಳುಂ ತಂತಮ್ಮ ಸಾಮಾಸಿಕ ಜನಂಗಳುಂ ತಮ್ಮ ಸಮುಚಿತಾಚರಣಮನಪಮಾಸಿಸಿ ಲೋಲುಪರಾಗಿ ದುಶ್ಚರಿತ್ರದೊಳೆಸಗುವರ್, ಮದಗಜಮನೇಱಿದ ಕೋಡಗಮಂ ಕಂಡುದಱಿಂದಾದಿ ಕ್ಷತ್ರಿಯ ವಿನಾಶದೊಳ್ ವ್ಯಾಧರುಂ ದುಷ್ಕುಲೀನರುಮರಸುಗಳಾಗಿ ಹಿತಾಹಿತವಿವೇಕ ವಿಕಲಮತಿಗಳನ್ಯಾಯದೊಳ್ ಪ್ರವರ್ತಿಸುವರ್, ಕಾಗೆಗಳ್ ಗೂಗೆಗಳಂ ಮುಸುಱಿ ಬಾಧಿಸುವುದಂ ಕಂಡುದಱಿಂ [3] ಅನ್ಯಲಿಂಗಿಗಳ್ ಲೌಕಿಕ ಧರ್ಮತತ್ವಮನಪ್ರತಿಬಂಧದಿಂ ಪ್ರಕಟಂ ಮಾಳ್ಪರ್, ಮರುಳಳಾಡುವುದಂ ಕಂಡುದಱಿಂ ದೇವತಾ ಮೂಢರಪ್ಪ ಜನಂಗಳ್ ಆತ್ಮೀಯ ಕುಲಗುಣನಾಮಂಗಳಂ ಪತ್ತುವಿಟ್ಟು ಪಾಪಸಹಿತ ನಾಮಕರಣದೊಳ್ ಯುಕ್ತರಪ್ಪರ್, ತೀವಿದಕೆಱೆಯು ನಡುವತ್ತಿದುದಂ ಕಂಡುದಱಿನ್ನಿದನೆಯ [4] ಕಡೆಯ ಕಾಲದೊಳ್ ಪ್ರತ್ಯಂತವಾಸಂಗಳೊಳಲ್ಲದೆ ನಡುನಾಡೊಳಱನಾಗದು, ಧೂಳೀ ಧೂಸರಿತಮಾದ ರತ್ನರಾಶಿಯುಂ ಕಂಡುದಱಿಂ ಋದ್ಧಿತಪೋವಿಕ್ರಿಯೌಷಧಿ ರಸಬಲಾಕ್ಷೀಣ ಋದ್ಧಿಪರರಪ್ಪ ತಪೋಧನರಾಗರ್, ಗಂಧಮಾಲ್ಯಾದಿಗಳೆ ನರ್ಚಿಸಿದ್ದ ಸಿಂಹಾಸನಮನೇಱಿ ನಾಯ್ ಸರುಗನುಣ್ಗೆ ಕಂಡುದಱಿಂ ವಿರತಿಪ್ರಮಾದ ಕಷಾಯಾದಿ ದೋಷ ದುಷ್ಟರಪ್ಪರನೆ ಪಾತ್ರಭೂತ

1 ಸಾ. ನಡೆವುದಿ. 2 ಸ. ಗುರುಗಳುಮಂ. 3 ಪ. ಅಣ್ಣ ನ.
4 ಗ, ಪ. ಕಾಲದಕಡೆಯೊಳ್.

ರೆಂದು ಮನ್ನಿಸಿ ಜನಂಗಳ್ ದಾನಂಗುಡುವರ್, ಕೆಲೆಯುತ್ತಂಬಪ್ಪ ತರುಣವೃಷಭನಂ ಕಂಡುದಱಿಂ ಧರ್ಮಾರ್ಥ ಕಾಮ ಮೋಕ್ಷ ಪ್ರಯೋಜನಂಗಳೊಳ್[1] ಮನುಷ್ಯರಾಹಾರ ಭಯಷ್ಟೈಷಜ್ಯ ಮೈಥುನ ಪರಿಗ್ರಹ ಸಂಜ್ಞಾಪ್ರಕೃಷ್ಟ ಬಲಮಿಲ್ಲದುದಱಿಂ ಬಾಲಕಾಲದೊಳ್ ವೈರಾಗ್ಯದೆ ನೆಗೞ್ವರ್, ಮಧ್ಯವಯಸದೊಳಂ ವಾರ್ಧಿಕ್ಯದೊಳಂ ನೆಗೞರ್, ಪರಿವೇಷಂಗೊಂಡ ಚಂದ್ರನಂ ಕಂಡುದಱಿಂ ದವಧಿಮನಃ ಪರ್ಯಯಾತ್ಮಕ ಪ್ರತ್ಯಕ್ಷಜ್ಞಾನಿಗಳಾಗರ್, ಎರಡು ವೃಷಭಮೊಡನೆ ಬಪ್ಪುದಂ ಕಂಡುದಱಿಂ ಆದ್ಯಕೃತಿ ಸಂಹನನಾಗಮದೊಳ್ ಬಲಮಿಲ್ಲದುದಱಿನೇಕವಿಹಾರಮುಂ ಪತ್ತುವಿಟ್ಟು ಮುನಿಗಳ್ ಸಮುದಾಯವಾಸಿಗಳಪ್ಪರ್, ಮುಗಿಲಂ ಮುಸುಱಿದನೇಸಱಂ ಕಂಡುದಱಿಂ ಕೇವಲಜ್ಞಾನಿಗಳಾಗರ್, ಪತ್ರಪಲ್ಲವಾಂಕುರವಿರಹಿತ ತರುವಂ ಕಂಡುದಱಿಂ ಸ್ತ್ರೀಪುರುಷರ್ ಧೃತಿಶೌಚ ಸತ್ಯಾದಿಸಾಧುವೃತ್ತ ವಿಮುಖರಪ್ಪರ್, ತಱಗೆಲೆಯ ಪುಂಜಮಂ ಕಂಡುದಱಿಂದಮೃತ ಮಧುಜೀವನರುಜಾಹರಾದಿ ಸಾರದ್ರವ್ಯಂಗಳಲ್ಲದ ಅಸಾರದ್ರವ್ಯ ವಿಕಲ್ಪಂಗಳೆ ಮನುಷ್ಯರ್ಗುಪಭೋಗ ಪರಿಭೋಗ ಹೇತುಗಳಕ್ಕುಂ, ಎಂದು ಮುಂದಪ್ಪ ಸ್ವಪ್ನಫಲಂಗಳನಾದಿ ಭಟ್ಟಾರಕರ್ ಬೆಸಸೆ ಕೇಳ್ದು ಭರತರಾಜಂ ದೇವರ್ಗೆ ವಿನಯ ವಿನಮಿತೋತ್ತಮಾಂಗನಾಗಿ ಪೋಗಿ ತನ್ನ ಪೊೞಲ ಗೋಪುರದ್ವಾರದೊಳ್ ಚತುರ್ವಿಂಶತಿ ತೀರ್ಥಕರರನಾವೊೞ್ತುಂ ಸ್ಮರಿಸಲೆಂದು ಹೇಮನಿರ್ಮಿತಂಗಳುಂ ರತ್ನಖಚಿತಂಗಳುಮಪ್ಪ ಇರ್ಪತ್ತುನಾಲ್ಕು ಘಂಟಾಜಾಲಂಗಳೊಳಂ ನಿಱಿಸಿ ಮೊಡದಂ ಕಂಡು ಜನಂಗಳೆಲ್ಲಂ ಮಂಗಳಕ್ರಿಯೆಗಳೊಳ್ ವಂದನಮಾಲೆಗಳಂ ಮಾಡಲ್ ತಗುೞ್ವರ್.

ಮತ್ತೊಂದು ದಿವಸಂ ಭರತೇಶ್ವರಂ ಕೈಲಾಸಕ್ಕೆ ಪೋಗಿ ದೇವರಂ ಗಣಧರದೇವರಂ ವಂದಿಸಿ ತದನಂತರಂ ವೃಷಭಸೇನರುಂ ಕುಂಭರುಂ ದೃಢರಥರುಂ ಶತಧನರುಂ ದೇವಶರ್ಮರುಂ ದೇವಭಾವರುಂ ನಂದನರುಂ ಸೋಮದತ್ತರುಂ [2]ಸೂರದತ್ತರುಂ ವಾಯುಶರ್ಮರುಂ ಯಶೋಬಾಹುವುಂ ದೇವಾಗ್ನಿಯುಂ ಅಗ್ನಿದೇವರುಂ ಅಗ್ನಿಗುಪ್ತರುಂ, ಮಿತ್ರಾಗ್ನಿಯುಂ, ಹಲಧರರುಂ ಮಹೀಧರರುಂ, ಮಹೇಂದ್ರರುಂ ವಸುದೇವರುಂ ವಸುಂಧರರುಂ ಅಚಳರುಂ ಮೇರುವುಂ ಮೇರುಧನರುಂ ಸರ್ವಯಶರುಂ ಮೇರು ಭೂತಿಯುಂ ಸರ್ವಜ್ಞರುಂಸರ್ವಗುಪ್ತರುಂ ಸರ್ವಪ್ರಿಯರುಂ ಸರ್ವದೇವರುಂ ಸರ್ವವಿಜಯರುಂ ವಿಜಯಗುಪ್ತರುಂ ವಿಜಯ ಮಿತ್ರರುಂ ವಿಜಯಭದ್ರರುಂ ವಿಚಳರುಂ ಅಪರಾಜಿತರುಂ ವಸುಮಿತ್ರರುಂ ವಿಶ್ವಸೇನರುಂ ಸಾಧುಷೇಣರುಂ ಸತ್ಯದೇವರುಂ ದೇವಸತ್ಯರುಂ ಸತ್ಯಗುಪ್ತರುಂ ಸತ್ಯಮಿತ್ರರುಂ ಶರ್ಮಿಲರುಂ ವಿನೀತರುಂ ಸಂವರರುಂ ಮುನಿಗುಪ್ತರುಂ ಮುನಿದತ್ತರುಂ ಮುನಿಯಜ್ಞರುಂ ಮುನಿದೇವರುಂ,ದೇವಗುಪ್ತರುಂ, ಯಜ್ಞಮಿತ್ರರುಂ, ಯಜ್ಞರುಂ,ಸ್ವಯಂಭುವುಂ ಭಗದೇವರುಂ ಭಗದತ್ತರುಂ ಭಗಫಲ್ಗುವುಂ ಗುಪ್ತಫಲ್ಗುವುಂ ಪ್ರಜಾಪತಿಯುಂ ಸರ್ವಸಿಂಹರುಂ ವರುಣರುಂ ಧನಪಾಲರುಂ ತೇಜೋರಾಶಿಯುಂ ಮಹಾವೀರರುಂ ಮಹಾರಥರುಂ ವಿಶಾಲರುಂ ಮಹಾಬಲರುಂ ಸುವಿಶಾಲರುಂ ವಜ್ರರುಂ ವಜ್ರಸಾರರುಂ ಚಂದ್ರಚೂಡರುಂ ಮೇಘಸ್ವರರುಂ

1 ಪ, ಪ್ರಯೋಜನಂಗಳುಮಂ. 2 ಗ. ಮಯೂರ ಶರ್ಮರುಂ.

ಮಹಾಸ್ವರರುಂ ಕಚ್ಛರುಂ ಮಹಾಕಚ್ಛರುಂ ನಮಿಯುಂ ವಿನಮಿಯುಂ ಬಳನು ಮತಿಬಳನುಂ ಭದ್ರಬಳನುಂ ನಂದಿಯುಂ ಮಹಾಭಾಗಿಯುಂ ನಂದಿಮಿತ್ರರುಂ ಕಾಮದೇವರುಂ ಅನುಪಮರು ಮೆಂಬೆಣ್ಬತ್ತು ನಾಲ್ವಗ್ಗಣಧರರ ಪುರಾಣಂಗಳಂ ಕೇಳ್ವಲ್ಲಿ ಮೇಘಸ್ವರರೆಂಬೆಪ್ಪತ್ತೊಂಭತ್ತನೆಯ ಗಣಧರದೇವರ ಪುರಾಣಮಂ ವಿನಯ ಪೂರ್ವಕಂ ಭರತರಾಜಂ ಬೆಸಗೊಳೆ ಗಣಧರ ದೇವೇಂದ್ರ ಚಕ್ರವರ್ತಿಗಳ್ಗೆಲ್ಲಂ ಪ್ರೋಕ್ಷಮಡದ ದಿವ್ಯಧ್ವನಿಯೊಳ್ ಆದಿ ಭಟ್ಟಾರಕರಿಂತೆಂದು ಬೆಸಸಿದರ್.

(ಜಯ ಪುರಾಣಂ) ಜಂಬೂದ್ವೀಪದ ಭರತಕ್ಷೇತ್ರದ ಕಾಶೀವಿಷಯದ ವಾರಾಣಸೀ ಪುರಮನಾಳ್ವನಾಥ ವಂಶಾಗ್ರಗಣ್ಯನಕಂಪನನೆಂಬೊಂ, ಆತನ ಮಹಾ ದೇವಿ ಸುಮಿತ ಪ್ರಭೆಯೆಂಬಳ್ ಅವರಿರ್ವರ್ಗಂ ಹೇಮಾಂಗದ ರತ್ನಾಂಗದ ಸುಕೇತು ಸುಕಾಂತ ಪ್ರಮುಖರ್ ಸಾಸಿರ್ವರ್ ತನುಜರುಂ ಸುಲೋಚನೆಯುಂ ಲಕ್ಷ್ಮೀಮತಿಯು ಮೆಂಬಿರ್ವರ್ ತನೂಜೆಯರು ಮಾದರ್. ಅಲ್ಲಿಸುಲೋಚನೆಸುಮತಿಯೆಂಬ ದಾದಿ ಯೋದಿಸೆ ಸರ್ವಕಲಾಕುಶಲೆಯಾಗಿ ನವಯೌವನೋದಯದೊಳ್ ಕಾರ್ತಿಕ ನಂದೀಶ್ವರದೊಳ್ ಅರಮನೆಯ ಕೆಲದ ಸ್ನಾನವಸದ ಜಿನಭವನ ದೊಳೆಂಟುದಿವಸಂ ಜಿನಪೂಜೆಯುಂ ನಿರ್ವರ್ತಿಸಿ ಸಿದ್ಧಶೇಷೆಯಂ ಕೊಂಡು ಬಂದು ಸಿಂಹಾಸನಾಸೀನನಾಗಿರ್ದ ತನ್ಮಯ್ಯಂಗೆ ಕುಡುವಾಗಳಾ ತನುಮಾಸನದಿಂದಿೞಿದು ಕರಕಮಲಸಂಪುಟಕರಣ ಪ್ರಕಟೀಕೃತಜಿನಪತಿಭಕ್ತಿವಿಶೇಷದಿಂ ಶೇಷಮಾಲ್ಯಾದಾನ ಪೂರ್ವಕಂ ತಲೆಯೊಳಿಟ್ಟುಕೊಂಡು ಪವಾಸ ಪರಿಶ್ರಮ ಪರಿಶ್ರಾಂತೆ ನಂತರಂ ಪಾರಿಸಲ್ ಪೋಗವೇೞೆ ಕನ್ಯಾಭವನಕ್ಕೆ ಪೋದಳ್.

ಇತ್ತಲಕಂಪನನುಂ ತನ್ನಮಗಳ್ ವಿವಾಹ ಯೋಗ್ಯೆಯಾದು ದನಱಿದು ಚಿಂತಾಕ್ರಾಂತನಾಗಿ ಶ್ರುತಾರ್ಥ ಸಿದ್ಧಾರ್ಥ ಸರ್ವಾರ್ಥಸುಮತಿಗಳೆಂಬ ನಾಲ್ವರುಂ ಮಂತ್ರಿಗಳಂ ಬೆಸಗೊಳೆ ಶ್ರುತಾರ್ಥನೆಂದಂ, ಷಟ್ಖಂಡ ಪತಿಯುಂ ತ್ರಿಭುವನ ಪತಿಸುತನುಂ ಚರಮದೇಹಧರನು ಮೆನಿಸಿದ ಭರತರಾಜಂಗೆ ಕುಡುವುದೆನೆ, ಸಿದ್ಧಾರ್ಥನೆಂದಂ ಭರತನ ಪ್ರೀತಿ ಪರಿಣತವಯ ನದಱಿಂ ಸಮವಯಸನಪ್ಪ ಭರತನಂದನಂಗರ್ಕಕೀರ್ತಿಗೆ ಕುಡುವುದು, ಅಲ್ಲದಂದು ಪೌದನ ಪುರಾಧೀಶ್ವರ ಬಾಹುಬಲಿದೇವನ ಮಗಂದಿರ್ ಸುಬಲಿ, ರತ್ನಬಲಿ ಸಹಸ್ರಬಲಿ ಪ್ರಮುಖರೊಳೊರ್ವಂಗೆ ಕುಡುವುದು, ಮೇಣ್ ಪೂರ್ವತಾಳಪುರಮನಾಳ್ವ ಮಹಾಮಂಡಲೇಶ್ವರಂ ವೃಷಭಸೇನಂಗೆ ಪುಟ್ಟಿದ ಅನಂತಸೇನಂಗೆ ಕುಡುವುದು, ಅಲ್ಲದಂದು ಕುರುಕುಲತಿಲಕಂ ಸೋಮಪ್ರಭನ ಮಕ್ಕಳಪ್ಪ ವಿಜಯ ಸಂಜಯಂತ ಜಯಂತ ಪ್ರಭೃತಿಗಳಿಂ ಹಿರಿಯಂ ಜಯಕುಮಾರಂಗೆ ಕುಡುವುದು, ಕೊಟ್ಟಂದು ಕುರುಕುಲಸಂಬಂಧ ಮವಿಚ್ಛಿನ್ನವಾಗಿ ನಡೆಗುಂ, ಮತ್ತಂ ಧೀಮರಥ ರಥವರ ವಜ್ರಾಯುಧ ಧೀಮಭುಜಾದಿಗಳಿರ್ಪರ್, ಅವರೊಳೊರ್ವಂಗೆ ಕುಡುವುದೆನೆ, ಸರ್ವಾರ್ಥನೆಂದಂ, ಭೂಚರಸಂಬಂಧಂ ನಮಗೆಂದು ಮುಂಟು, ಖೇಚರಸಂಬಂಧಮಪೂರ್ವಂ, ಅದಱಿಂ ಕಚ್ಛ ಮಹಾಕಚ್ಛಾನ್ವಯದ ನಮಿವಿನಮಿಗಳೊಳಗೊರ್ವಂಗೆ ಕುಡುವುದೆನೆ, ಸುಮತಿಯೆಂದಂ, ಆರೊಳಂ ವಿರೋಧವಾಗದಂತು ಸ್ವಯಂವರಮಂ ಮಾಳ್ಪುದು. ಅವಸರ್ಪಿಣಿಯೊಳೊರ್ವಂ ವೃಷಭನಾಥನೆಂತು ತೀರ್ಥಕರಾಗ್ರಗಣ್ಯಂ ಶ್ರೇಯಾಂಸನೆಂತು ದಾನತೀರ್ಥಪ್ರವರ್ತಕಂ ಭರತನೆಂತು ಚಕ್ರಧರಮುಖ್ಯಂ ಅಂತೆ ಸುಲೋಚನೆಯುಂ ಸ್ವಯಂವರಕ್ಕಗ್ರಣಿಯಕ್ಕುಮೆಂದೊಡೆ ಅದನ

ಕಂಪನನೊಡಂಬಟ್ಟು ಎಲ್ಲಾದೆಸೆಗಳೊಳಂ ಭೂಚರ ಖೇಚರ ಕುಮಾರರ್ಕಳ್ಗೆ ಓಲೆಯು ನಟ್ಟಿಪರನ್ನೆಗಮಕಂಪನನ ಪೂರ್ವಭವಪುತ್ರಂ ಚಿತ್ರಾಂಗದಂ ಸೌಧರ್ಮಕಲ್ಪದಿಂ ಬಂದ ಕಂಪನ ಮಹಾರಾಜನಂ ಕಂಡು ತದನುಮತದಿಂ ಸ್ವಯಂವರಮಂಟಪಮಂ ಸಮೆಯೆ ವಸಂತ ಸಮಯದೊಳ್ ಬಂದ ಅರ್ಕಕೀರ್ತಿ ಮೇಘಸ್ವರ ಪ್ರಮುಖ ಭೂಚರರುಮಂ ಸುನಮಿ ವಿನಮಿಪ್ರಭೃತಿ ಖೇಚರರುಮಂ ಯಥೋಚಿತಪ್ರತಿಪತ್ತಿಯಿಂ ಮನ್ನಿಸಿ ಶುಭದಿನದೊಳ್ ಅಷ್ಟಾಹ್ನಿಕ ಜಿನಪೂಜಾಪುರಸ್ಸರಂ ಕನ್ನೆಯುಂ ಕೆಯ್ಗೆಯ್ದು ಸಿವಿಗೆಯನೇಱಿಸಿ ಮಹೇಂದ್ರನೆಂಬ ವೃದ್ಧಕಂಚುಕಿಯಿಂದರಸಂ ಸ್ವಯಂವರ ಮಂಟಪಕ್ಕೆತರಿಸೆ, ಸುಲೋಚನೆಯುಂ ವೃದ್ಧಕಂಚುಕಿ ವ್ಯಾವರ್ಣಿತರಪ್ಪ ವನಿಚರಗಗನಚರ ಕುಮಾರರನಪಹರಿಸಿ ಕುರುಕುಲಾಗ್ರಗಣ್ಯನು ಮುದ್ವೃತ್ತ[1] ಬಲಾಕಾವರ್ತ ಸಮರ ಸಂಪ್ರಾಪ್ತ ಜಯನುಮೆನಿಸಿದ ಜಯಂಗೆ ಜನ್ಮಾಂತರ ಪ್ರೇಮ ಪ್ರೇರಣೆಯಿಂ ಸ್ವಯಂವರಮಾಲೆಯ ನಿಕ್ಕಿದಳ್, ಅಕಂಪನನುಂ ವಧೂವರರಂ ಮುಂದಿಟ್ಟು ಪೊಱಲಂ ಪೊಕ್ಕಂ, ಅನ್ನೆಗಂ ಸಿಗ್ಗಾಗಿ ಪೋಪ ಅರ್ಕಕೀರ್ತಿಯುಂ ದುರ್ಮರ್ಷಣನೆಂಬ ದುರ್ಮಂತ್ರಿ ನೀನಿರೆ ಕನ್ಯಾರತ್ನಂಪೆಱರಕ್ಕೆಗೆ ಪೋಗಲ್ ತಕ್ಕುದಲ್ಲೆನೆ ಸಿರವರ್ಮನೆಂಬ ಮಂತ್ರಿ ಮಾಕೋಱಂತು ನೀನೀ ಸ್ವಯಂವರ ಮಂಟಪಮಾರ್ಗಮುಂ ಪೇಱಲಾಗದೆಯುಂ ಮಹಾದರ್ಕಕೀರ್ತಿ ಸುಲೋಚನೆಯು ನೊಪ್ಪಿಸುವುದಲ್ಲದಂಗೊಟ್ಟು ನಿಲ್ವುದೆಂದು ದುರ್ಮರ್ಷಣನ ನಟ್ಟು ಭರತೇಶ್ವರನಮಗಂ ತಾನೆನಗೆ ಸ್ವಾಮಿಯೆಂದು ಜಯಂ ನುಡಿದೊಡಮರ್ಕಕೀರ್ತಿದರ್ಪಮಂ ನುಡಿದೊಡೆಂ ತನ್ನ ಸಂಧಿಪಿಯುಂಬೇಟ ಯಟ್ಟಿವಸಂತ ನೆಱಿನೊಟ್ಟು ನಿಲ್ಕೆಂದಾತನಲ್ಲಿಯೆ ದೂತರ ನಟ್ಟಿ ವಿಜಯಾದಿಗಳಪ್ಪ ಸಹೋದರರ ಬಲಮು ಸುಲೋಚನಾಗ್ರಜರತ್ನಾಂಗದಾದಿ ಬಂಧು ಬಲಮುಂ ಬೆರಸು ಅಷ್ಟಾದಶಾ ಕ್ಷೋಹಿಣೀಬಲಾಧಿನಾಥನ ಕಂಪನ ಸಮೇತಂ ಮುಖ್ಯ ಸನ್ನದ್ಧನಾಗಿ ಮೇಘಸ್ವರ ನಿರ್ಗಮಂ ಅರ್ಕಕೀರ್ತಿಯುಂ ಸಂಗ್ರಾಮ ಭೇರಿಯಂ ಪೊಯ್ಸಿ ಕೈದುಪಿಸುತಾಗಿದಾಗಳ್ ಅರ್ಕಕೀರ್ತಿಯುಮನೇವೇಸನಂ ಜೇಡಿ ತಾಗುವಷ್ಟು ಚಂದ್ರಕಂಬಂಬರ ಚರರಿಸುವಂ ಬಗಳ್ ನಿಚರಂಗಳಂ ಮಿಂಟಿಸೆ ನಾಗರಾಜನಿತ್ತರ್ಥ ಚಂದ್ರಮೆಂಬ ಮೋಘಶರದಿಂ ಸುಸ್ವಚಂದ್ರರತಲೆಯುಮನರ್ಕಕೀರ್ತಿಯ ಪಿಡಿದ ಬಿಲ್ಲುಮನಾತನ ವಿಜಯಘೋಷಮೆಂಬಗಜದತಲೆಯುಮುಮಂ ಪಱಿಯೆಚಾಲ್ಗಳ್ ಕರ್ಕೀರ್ತಿಸುನಮಿವಿನಮಿಗಳ್ವೆರಸು ಖೇಚರರುಂ ಸೇೞ್ಕೊಂಡೆ ಅವರಂ ಜಯಪುತ್ರಂ ಮೇಘಪ್ರಭಂಗೆಸೆ ಮುಳಿಸರ್ಕೆ ಕೀರ್ತಿ ರಥಮನೇಱಿ ಬರೆ ಜಯಂ ತನ್ನೇರಿದ ವಿಜಯಾರ್ಧಪರ್ವತಗಜದಿಂದಿೞಿದು ನಾಗರಾಜನಿತ್ತಪಿತಂಬಯುಮೆಂಬರಥಮನೇಱಿ ವಜ್ರಕವಚಮಂ ತೊಟ್ಟು ವಜ್ರಕಾಂಡ ಕೋದಂಡಮುಂ ಪಿಡಿದ ಮೋಘಶರಮಂ ತಿರಿಪಿ ನಿಲೆತನಗಾದಾಸನ ಕಂಪದೊಳ್ ನಾಗರಾಜಂ ಪಿಭಂಗಜ್ಞಾನೋಪಯೋಗದಿಂ ಮೇಘಸ್ವರನ ಸಮರಮನಱಿದು ಬಂದು ಮುಂದೆ ನಿಂದು ಬೆಸನೇನೆಂದಾಗಳ್, ಈತನೆನಗೆ ನಿತನ್ನಾಯನೊಳ್ ನೆಗೞ್ಗೊಂಡ ಮಾತಂಗೆ ತಪ್ಪಲಾಗದು; ಈತನ ದರ್ಪಹತಂಗೆಯ್ಯನಿತ್ತೆ ಸಾಲ್ವುದೆನೆ ನಾಗೇಂದ್ರಂ ನಾಗಪಾಶದಿಂದರ್ಕಕೀರ್ತಿಯಂ ಕಟ್ಟಿ ತಂದು ಮುಂದಿಟ್ಟು ಪೇೞ್ಕೊಂಡು ಪೋದಂ.

1 ಪಾ. ಚಿಲಾತಾ ವರ್ತನ.

ಜಯನುಂ ಕೊಳ್ಗಳಂಕೊಂಡಕಂಪನಂ ಬೆರಸುರಾಜಧಾನಿಯಂ ಪೊಕ್ಕುಮುನ್ನಮೆನಿತ್ಯಮಂಡಿತ ಜಿನಾಲಯದೊಳ್ ಉಪಸರ್ಗಂ ಪಿಂಗುವನ್ನೆಗಂ ಶಾಂತಿಕಾಯೋತ್ಸರ್ಗದೊಳ್ ನಿಂದಸುಲೋಚನೆಯಲ್ಲಿಗೆ ಬಂದು ಕೈಯ್ಯನೆತ್ತಿಕೊಳಿಸಿ ಮೇಘಸ್ವರನರ್ಕಕೀರ್ತಿಯುಗೆಯ್ದ ದುಶ್ಚರಿತಕ್ಕೆ ತಕ್ಕುದುಗೆಯ್ದನೆಂದು ಮೆಚ್ಚಿ ಭರತೇಶ್ವರನಟ್ಟಿದ ಲೇಖವಾರ್ತಾಶ್ರವಣದಿಂ ಸಂತುಷ್ಟನಾಗಿ ಸುಲೋಚನೆಯ ತಂಗೆಯುಂ ಲಕ್ಷ್ಮೀಮತಿಯ ನರ್ಕಕೀರ್ತಿಗೊಡಂಬಡಿಸಿ ಕೊಟ್ಟು ಕಳಿಸಿ ಜಯಕುಮಾರನುಂ ಸುಲೋಚನೆಯು ವಿವಾಹಾನಂತರಮಂ ಕಂಪನನಂ ಮಹಾವಿಭೂತಿಯಿಂ ಕಳಿಪೆ ಪಯಣಂಬೋಗಿ ಗಂಗಾ ಸರಯೂ ತರಂಗಿಣೀ ಸಂಗಮದೊಳ್ ಚಕ್ರವ್ಯೂಹರೂಪದಿಂಬಲಮನಿರಿಸಿ ಹೇಮಾಂಗದಾದಿಗಳಂ ಸುಲೋಚನೆಗೆ ಕಾಪುವೇಟ್ಟು ಚಕ್ರವರ್ತಿಯುಂ ಕಾಣಲ್ ಮೇಘಸ್ವರನುಂ ಸಾಕೇತಪುರಕ್ಕೆ ಪೋಗಿ ವಿನಮ್ರನಾಗಿ ಕಂಡುಲಬ್ಧಸ್ತುತಿ ಪೂಜಾಮಣಿಮಕುಟನಾಗಿ ಕೆಲವುದಿವಸಮಿರ್ದುಬರೆ ಗಂಗಾತೀರಮನೆಯ್ದಿದಾಗಳ್ ಅಂದಿನಿರುಳ್ ಸುಲೋಚನೆ ಗಂಗೆಯ ಪೊನಲೊಳ್ ಪೋಪ ಕಲ್ಪವೃಕ್ಷಮಂ ತಾನೆಪಿಡಿದು ತೆಗೆದು ತಡಿಗೆಸಾರ್ಚಿ ಸುರಾಂಗನೆಯರೊಡನರ್ಚಿಸುವುದುಂ ಕನಸುಗಂಡು ದುಸ್ಸ್ವಪ್ನೋಪಶಾಂತಿ ನಿಮಿತ್ತಂ ಜಿನಾಭಿಷೇಕಂಮಾಡಿ ಮೇಘಸ್ವರನ ಬರವನಱಿದು ಪಾರುತ್ತಿರ್ದಳ್.

ಅನ್ನೆಗಂ ಗಂಗಾ ಸರಯೂ ತರಂಗಿಣೀ ಸಂಗಮಮಂ ಜಯಂ ಗಜಮನೇಱಿ ಪಾಯ್ವಲ್ಲಿ ಕಾಳಿಯೆಂಬ ಜಲದೇವತೆ ಪೂರ್ವಭವ ಬದ್ಧವೈರದೊಳ್ ಉಗ್ರಗ್ರಾಹಾಕಾರದಿಂ ತೆಗೆಯೆ ಮದಗಜಂ ಮುೞುಂಗುವಾಗಳ್ ಕಂಡು ಜಯಕುಮಾರನೆನಗೀ ಮಹೋಪಸರ್ಗಂ ಪಿಂಗುವನ್ನೆಗ ಮಾಹಾರಶರೀರ ನಿವೃತ್ತಿಯೆಂದಿರ್ಪ್ಪ ನಮದಂ ಕಂಡು ಸುಲೋಚನೆಬಂದು ಸಿದ್ಧಭಕ್ತಿಗೆಯ್ದು ಅರಸಂಗುಪಸರ್ಗಂ ಪರಿಸುವನ್ನಂ ಸಾವಧಿ ಪ್ರತ್ಯಾಖ್ಯಾನಂಗೊಂಡು ಪಂಚನಮಸ್ಕಾರಮನುಚ್ಚರಿಸುತ್ತ ಮಿರೆ ಹೇಮಾಂಗದಾದಿಗಳಪ್ಪೊಡವುಟ್ಟಿದರುಂ ವಿಜಯಾದಿಗಳಪ್ಪ ಮೈದುನರುಂ ಬೆರಸುಮಡುವಿನೊಳ್ ಮಯ್ಯನಿಕ್ಕುವುದುಂ ಆಕೆಯ ಶೀಲಮಾಹಾತ್ಮ್ಯದಿಂ ಗಂಗಾದೇವಿಗಾಸನಕಂಪಮಾಗೆ ಸುಲೋಚನೆಗಾದವಸ್ಥೆಯನಱಿದು ನೀರಿಲ್ಲ ಮುೞುತುಪೋಪಂತುಮಾಡೆ ದೇವತೆಯುಂ ನಕ್ರಾಕಾರಂಗೆಟ್ಟು ಪೋದುದು ಸುಲೋಚನೆಯುಂ ಜಯನೊಡನಾನೆಯನೇಱಿ ಗಂಗಾದೇವಿ ಮಾಡಿದ ವಿಭೂತಿವೆರಸುತಡಿಗೆ ಪೋಗೆ ತನ್ನ ವಿಗುರ್ವಿಸಿದ ಮಣಿಮಂಡಪದೊಳ್ ಒಳಗಣ ಮಣಿಪೀಠದ ಮೇಲೆ ಇರ್ವರುಮನಿರಿಸಿ ಮಹಾಗಂಗಾಜಲದೊಳ್ ತೀವಿದ ಕನಕಕಲಶಂಗಳಿಂ ಗಂಗಾದೇವಿ ಮಹಾಭಿಷೇಕಂಗೆಯ್ದು ಸಿಂಹಾಸನದೊಳಿರಿಸಿ ದಿವ್ಯ ವಸ್ತ್ರಂಗಳಿಂ ಪೂಜಿಸೆ ನೀನೀಕೆಯ ನೇಂಕಾರಣಂ ಪೂಜಿಸಿದೆಯೆಂದು ಜಯಂ ಬೆಸಗೊಳೆ ಗಂಗಾದೇವಿ ಪೇೞಲ್ತಗುಳ್ದಳ್.

ಪೂರ್ವಜನ್ಮದೊಳ್ ವಿಂಧ್ಯಪುರಮನಾಳ್ವ ವಿಂಧ್ಯಶಕ್ತಿಗಂ ವಿಂಧ್ಯಶ್ರೀಗಂ ಆಂ ಶ್ರೀಕಾಂತೆಯೆಂಬ ಮಗಳಾಗೆ ನಮ್ಮಯ್ಯನೆನ್ನಂ ಕಲಾಶಿಕ್ಷೆಗೆಂದು ಸುಲೋಚನೆಯ ಪಕ್ಕದೊಳಿರಿಸಿದೊಡೆ ಅನುಪವಾಸಂಗೆಯ್ದು ವಿಪಾಸಾಶ್ರಮದಿಂ ಸತ್ತು ಗಂಗಾಪಾತದೊಳ್ ದೇವಿಯಾದೆಂ, ಬನಗಿಸಿತು ವಿಭವಮೆಂಬುದು ಈಕೆಯ ಪ್ರಸಾದದಿಂದಾದುದು

ಅದಱಿಂ ಪೂಜಿಸಿದೆನೆಂದು ತನ್ನ ಪ್ರಪಂಚಮಂ ಪೇೞ್ದು ಮಾಯಾನಕ್ರದ ವೈರಸಂಬಂ[1]ಧಮಾಗಿ ಇಂತೆಂದು ಪೇೞಲ್ಪುಗುಳ್ದಳ್. ಹಸ್ತಿನಪುರದುದ್ಯಾನದೊಳ್ ಶೀಲಗುಪ್ತ ಮುನಿಯಸಾರೆ ನಿನ್ನೊಡನೆ ಧರ್ಮಮಂ ಕೇಳ್ದನಾಗಮಿಥುನದೊಳ್ ಆ ನಾಗನಂಕಾಱ ಸಿಡಿಲ್ವೊಡೆಯೆ ಸತ್ತು ಧರಣೇಂದ್ರನಾದಂ, ಆ ಒನದೊಳ್ ನಾಗಾಂಗನೆಯೊಳ್ ನೆರೆವ ಕೇರೆಯುಂ ಕಂಡು ದುರಾಚಾರಕ್ಕೆ ನೀಂಕಡುಮುಳಿದು ಅಪತಾಸ ನೀಲೋತ್ಪಲದಿ ನಿಡಲೊಡಂ ಅಲ್ಲಿದ್ದರೆಲ್ಲ ಮಿಡೆಯುಂ ಬಡಿಯೆಯುಂ ಸತ್ತಲ್ಲಿಕೇರೆ ಕಾಳಿಯೆಂಬ ಜಲದೇವತೆಯಾಗಿ ಪುಟ್ಟಿತ್ತು, ನಾಗಾಂಗನೆಯುಂ ತನ್ನ ದುಶ್ಚರಿತಕ್ಕೆ ನೇಸಿ ಶುಭಪರಿಣಾಮದಿಂ ಸತ್ತು ಧರಣೇಂದ್ರಂಗೆ ದೇವಿಯಾಗಿ ವಿಭಂಗಜ್ಞಾನದಿಂ ತನ್ನ ಸತ್ತತೆಱನನಱಿದು ನಿನ್ನ ಪರೋಕ್ಷದೊಳ್ ವೈಧವ್ಯವ್ರತಮಂ ಸಲಿಸುತ್ತಿರ್ದನ್ನಂ ಜಯಂ ಕೊಂದನೆನೆ ಧರಣೇಂದ್ರಂ ಮುಳಿದುಬಂದು ನಿನ್ನ ಮಂಚದ ಕೆಳಗೆ ನಿನ್ನಂ ಕೊಲಲೆಂದು ಪಟ್ಟಿರ್ದನಂನಿನ್ನರಸಿ ಶ್ರೀಮತಿದೇವಿ ನೀ ನಿಂತೇಕೆ ಚಿಂತಿಸುತ್ತಿರ್ದಯೆಂದು ನಿನ್ನಂ ಬೆಸಗೊಳೆ ನಾಗಿಣಿಯ ದುಶ್ಚರಿತಮನಾಗಳಾಕೆಗೆ ನೀಂ ಪೇೞ್ವುದುಂ ಕೇಳ್ದು ಧರಣೇಂದ್ರಂಮೆಚ್ಚಿ ನಿನಗೆ ದಿವ್ಯಾಸ್ತ್ರಮಂ ಕೊಟ್ಟುಪೋದಂ ಅವರೊಳ್ ನೀನು ಮುಷ್ಟಿಚಂದ್ರರಂ ಕೊಂದೊಡವರ ಮಕ್ಕಳ್ ತಮ್ಮ ಕುಲದೈವಕ್ಕೆ ಶರಣೆಂದೊಡಾದೇವತೆಯ ಚೆಸದೊಳಂ ತನ್ನ ವೈರದೊಳಂ ಕಾಳಿಮಾಯಾನಕ್ರ ಸ್ವರೂಪದಿಂ ನಿನಗೆ ಮಹೋಪಸರ್ಗಮಂ ಮಾಡಿದೊಡಾಂ ಸುಲೋಚನೆಯ ಶೀಲಪ್ರಭಾವದಿಂ ಬಂದು ಬಿಡಿಸಿ ಕಳೆದೆನೆಂದು ಪೇೞೆ ಇವರ್ಗಳುಂ ಸಂತುಷ್ಟರಾಗಿ ಗಂಗಾದೇವಿಯುಂ ಪ್ರಿಯವಚನಪೂರ್ವಕಂ ಪೂಜಿಸಿ ರಮ್ಯವನಾದಿಪ್ರದೇಶಂಗಳಂ ಸುಲೋಚನೆಗೆ ತೋಱುತ್ತೆ ಜಯಂ ಹಸ್ತಿನಪುರಮಂ ಪೊಕ್ಕು ಸುಲೋಚನೆಗೆ ಮಹಾದೇವಿಪಟ್ಟಮಂ ಕಟ್ಟಿ ಹೇಮಾಂಗದಾದಿಗಳಂ ಮನ್ನಿಸಿ ವಿಸರ್ಜಿಸಿ ಮಹಾಮಂಡಲೇಶ್ವರ ಶ್ರೀಯುಮನನುಭವಿಸುತಿರ್ದೊರ್ಮೆ ತನ್ನ ವರ್ಷವರ್ಧದಿನದೊಳ್ ಪರಿವಾರಸಹಿತಂ ಹರ್ಮ್ಯತಳದೊಳಿರ್ದು ವಿದ್ಯಾಧರಮಿಥುನಂಗಳ್ ನಾಕಾಶದೊಳ್ ಪೋಪುದಂ ಕಂಡು ಮೂರ್ಛಾಗತನಾಗಿ ನಿಡಲಿಂದೆೞ್ದು ಹಾ! ಪ್ರಭಾವತಿ! ಎಂದು ಪ್ರಲಾಪಂಗೆಯ್ದು ತನ್ನ ಚಿರಮ್ಯಾಪರ್ಮನಾದ ಭವಸಂಬಂಧಮನಂತಃಪುರಕ್ಕಱಿಪೆ ಸುಲೋಚನೆಯುಂ ಕಪೋತಮಿಥುನಮಂ ಕಂಡು ಪೂರ್ವಭವಮಂ ನೆನೆದು ಮೂರ್ಛೆಗೆ ಸಂದಟ್ಟುತುಳ್ ದೇವಾ! ನಿನ್ನ ಪೇೞ್ವ ಪ್ರಭಾವತಿಯ ನಾನೆಂದು ಪೇೞೆ ಅಂತಪ್ಪೊಡೆ ನಮ್ಮ ಪೂರ್ವಸಂಬಂಧಮೆಲ್ಲಮಂ ಪೇೞೆಂಬುದುಂ ಸುಲೋಚನೆ ಪೇೞಲ್ ತಗುಳ್ದಳ್.

ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಲಾವತೀ ವಿಷಯದ ಪುಂಡರೀಕಿಣಿಯ ನಾಳ್ವಂ ಪ್ರಜಾಪಾಲನೆಂಬರಸಂ ಆತನ ಸೆಟ್ಟಿ ಕುಬೇರಮಿತ್ರಂ ಆತಂಗೆ ಧನವತಿ ಮೊದಲಾಗಿ ಮೂವತ್ತಿರ್ವರ್ ಪೆಂಡಿರಾಗೆ ತದೀಯ ಸೌಧೋಪರಿಮತಳದೊಳ್ ರತಿವರನುಂ ರತಿಷೇಣೆಯುಂ ಎಂಬ ಕಪೋತಮಿಥುನಮಾದಲ್ಲಿ ರತಿವರಂ ಕುತೂಹಲರಪ್ಪವರ್ ಧಾರ್ಮಿಕರ್ಗೆ ಗತಿಯಾವುದೆಂದೊಡೆ ಊರ್ಧ್ವಭಾಗಮಂ, ಪಾಪಿಗಳ್ಗೆ ಗತಿಯಾವುದೆಂದೊಡೆ ಅಧೋಭಾಗಮಂ ತನ್ನ ತುಂಡದೊಳ್ ತೋಱುತ್ತಂ ಎಲ್ಲಿಯಾನುಂ ಮನೆಗೆ

1 ಗ. ಶಿವಗುಪ್ತಮುನಿಯುರ.

ಸಂದ ಮುನಿಜನಂಗಳ ಪಾದಧೂಳಿಯುಂ ಪಕ್ಷದ್ವಯದಿಂ ತೊಡೆದು ಕಳೆದುಮತ್ತಂ ಗೃಹವ್ಯಾಪಾರಮಾದುದೆಲ್ಲಮಂ ಧನವತಿಗೆ ತುಂಡದಿಂದಕ್ಕರಮಂ ಬರೆದು ತೋಱುತ್ತಂ ಪೇೞ್ವಲ್ಲಿ ಸದ್ಧರ್ಮಮಂ ಪೇೞುತ್ತಂ ಮನೆಗೆಲ್ಲಂ ಮುದ್ದಾಗಿ ಒಳೆದು ರತಿಷೇಣೆವೆರಸು ಪಲಕಾಲಂ ಸುಖಮಿರ್ಪಿನಂ ಆ ಕುಬೇರಮಿತ್ರಂಗಂ ಧನವತಿಗಂ ಕುಬೇರಕಾಂತನೆಂಬೊಂ ಮಗನಾದೊಂ. ಆತನ ಪುಟ್ಟಿದಿಂ ಬೞಿಯುಂ ಕಾಮಧೇನು ಮನೋಭಿಲಷಿತಮಪ್ಪುದಂ ಕುಡುವುದು ಗಂಧಶಾಲಿಕ್ಷೇತ್ರಮನವರತಂ ಬೆಳೆವುದು ಇಕ್ಷುಕ್ಷೇತ್ರಂ ರಸಾಯನಮಂ ಪೞಿಯಿಸುವುದು, ವೀಣೆ ತನಗೆತಾನೆ ಮನೋಹರಧ್ವನಿಯನೆಸಗುವುದು, ಆತನ ಸ್ನಾನಸಮಯದೊಳ್ ಮಧುರ ಗಂಭೀರಧ್ವನಿಯಪ್ಪ ಜಳಧರಂ ಸಕಲ ರೋಗಮಲಾಪಹಾರಿ ಸುಗಂಧಿ ಜಲಮಂ ಕಱೆವುದು ನಾಲ್ಕುಕಲ್ಪವೃಕ್ಷಂಗಳುಂ ಕ್ರಮದಿನಭಿಮತ ವಸ್ತ್ರಭೂಷಣಾನ್ನಪಾನಂಗಳಂ ಕುಡುವುದು. ಇಂತು ದೇವನಿರ್ಮಿತಮಪ್ಪ ವಿವಿಧ ಭೋಗಂಗಳ್ ನನುಭವಿಸುತ್ತಂ ನವಯೌವನನಾದ ಕುಬೇರಕಾಂತಂಗೆ ವಿವಾಹಮಂ ಮಾಡಲೆಂದು ಆತನ ಚಿತ್ತವೃತ್ತಿಯಂ ಪ್ರಿಯಸೇನನೆಂಬ ಲೆಂಕನಿಂದ ಮಾತಯ್ಯಲ್ವೇೞ್ದು ನಿತ್ಯಮಂಡಿತ ಜಿನಾಲಯದ ಸುದರ್ಶನರೆಂಬ ಮುನಿಗಳ ಪಕ್ಕದೆ ಗೃಹೀತಾಣುವ್ರತ ಸಮ್ಯಗ್ದರ್ಶನಂ ಕುಬೇರಕಾಂತನೇಕಪತ್ನೀವ್ರತಮಂ ಕೈಕೊಂಡುಡನಱಿದು ಆ ಕುಬೇರಮಿತ್ರಂ ಚಿಂತಾಕ್ರಾಂತನಾಗಿ ನಿಮಿತ್ತಕರವೇೞ್ವಂದದೊಳ್ ನಿತ್ಯಮಂಡಿತ ಜಿನಾಲಯದ ಯಕ್ಷನಮುಂದೆ ಮೂವತ್ತಿರ್ವರ್ ಕನ್ನೆಯರಂ ಪರೀಕ್ಷಿಸಿ ಪಂಚರತ್ನಮಿಕ್ಕಿದ ಲತ್ತುಗೆಯುಬಾಯಿನಂ ಧನವತಿಯಣ್ಣಂ ಸಮುದ್ರದತ್ತಂಗಂ ಕುಬೇರಮಿತ್ರಸೆಟ್ಟಿಯ ತಂಗೆ ಕುಬೇರಮಿತ್ರೆಗಂ ಪುಟ್ಟಿದ ಪ್ರಿಯದತ್ತೆಯ ಕೈಸಾರ್ದುದುಂ ಪ್ರಜಾಪಾಲ ಮಹಾರಾಜಂಗಂ ಕನಕಮಾಲೆಗಂ ಪುಟ್ಟಿದ ಲೋಕಪಾಲನಿಂ ಕಿಱಿಯಳ್ ಗುಣವತಿಯುಂ ಯಶಸ್ವತಿಯುಂ ರತ್ನಮಯದ ಲತ್ತುಗೆಗಳ್ ತಮ್ಮ ಕೈಸಾರದುದಕೆ ಸಿಗ್ಗನೊಳ್ಪಿತಮತಿಯುಮನಂತಮತಿಯುಮೆಂಬ ಕಂತಿಕೆಯರ ಪಕ್ಕದೆ ತಪಮಂ ಕೈಕೊಂಡರ್. ಕುಬೇರ ಕಾಂತನುಂ ಪ್ರಿಯದತ್ತೆಯುಂ ವಿವಾಹವಿಧಿಯಂ ಕೈಕೊಂಡು ಸಮಿಮಾಪ್ತರಾದುಂ ಪ್ರಜಾಪಾಲ ಮಹಾರಾಜಂ ಲೋಕಪಾಲಂಗೆ ಕುಬೇರಕಾಂತನತಂಗೆ ವಸುಮತಿಯುಂ ತಂದು| ಕೆಲವುದಿವಸದಿ ನಾತಂಗೆ ರಾಜ್ಯಂಗೊಟ್ಟು ಸೆಟ್ಟಿಗೆ ಸಮರ್ಪಿಸಿ ತಪಮಂ ಕೈಕೊಂಡಂ.

ಇತ್ತ ಲೋಕಪಾಲಂಗೆ ಕುಬೇರಮಿತ್ರಂ ಪರಮಾಪ್ತನಾಗಿ ನಡೆಯೆ ಚಪಳಮತಿಯೆಂಬ ಮಂತ್ರಿ ಸ್ವೈರಸಮುಪಾಯಮಂ ಘಟಿಸಿ ಕುಬೇರಮಿತ್ರಂ ವೃದ್ಧಮಂತ್ರಿಮಾಸ್ಕನಾತನನೆಲ್ಲಾ ಪೋೞ್ತುಂ ಸೇವಕರೋಳಿಯೊಳ್ ಬಯಿಸುವುದಯುಕ್ತಮೆಂದು ಲೋಕಪಾಲನಿರುಳ್ ತೂಂಕಡಿಸುವಾಗಳ್ ವಕುಳಮಾಲೆಯೆಂಬ ಗೊಜ್ಜೆಯಿಂದೆ ಮಡಿಯಿಸಿದೊಡರಸನದಂ ಸ್ವಪ್ನಮೆಂದೆ ಬಗೆದೆಲ್ಲಾ ಪೊೞ್ತುಂ ಆವರಂಬಾರದಂತುಮಾಡಿಮುತ್ತೊಂದುದಿವಸ ಮರಸನುಂ ಚಪಲಮತಿಯೆಂಬ ಮಂತ್ರಿಯುಂ ಜಲಕ್ರೀಡೆಯೊಳ್ ಕೊಳದೊಳಗೆ ಸಂಕ್ರಮಿಸಿದ ಪದ್ಮರಾಗಮಣಿಚ್ಛಾಯೆಯುಮಂ ರತ್ನಮಗೆತ್ತುಮಂತ್ರಿಯುಂ ತಾನು ಮಱಸಿ ಕಾಣದೆ ಪಾದಸ್ಖಲನಮಾಗೆ ಪಾದರುಜೆಯಿಂದೆ ಅರಮನೆಗೆ ವಂದಂವಿಸಿರುಳ್ ಪುರುಡಿಸಿ ಮುಳಿದಿರ್ದ ಮಹಾದೇವಿಯುಂ ತಿಳಿಪಲೆಂದು ಕಾಲ್ಗೆಱಗೆ ತಲೆಯನೊದೆದು ಪೋದೊಡರಸನುಂ ಬೆಳಗಾದಾಗಳ್ ಸಿಂಹಾಸನಮಧ ಗತನಾಗಿಬಾಲ

ಮಂತ್ರಿಯನರಸರ ತಲೆಯನೊಡೆದೊಡೇಗೆಯ್ವುದೆನೆ ಕಾಲಂ ಕಡಿವುದೆ ದಂಡಮೆಂದೊಡರಸನವಧಾರಿಸಿ ಮುಗುಳ್ನಗೆನಕ್ಕು ಕುಬೇರಮಿತ್ರಂಗೆ ಬೆಸಸೆಯುಸೆಟ್ಟಿ ರತ್ನಪ್ರಪಂಚಮಂ ಪೇೞ್ಕೊಂಡದು ನೀರ್ಗೊಳ್ಳದಂತರಿಕ್ಷದೊಳಿರ್ದುದರ್ಕ್ಕಂ ಎಂದೊಡೆಸೆಟ್ಟಿ ನೋಡಿ ಮಾಂಸಬುದ್ಧಿಯಿಂ ಪದ್ಮರಾಗಮಣಿಯಂ ಗೃಧ್ರಂ ತಂದು ವೇಣೀಮೂಲದ ವಂಶಸ್ತಂಭದೊಳ್ ಇಕ್ಕಿದುದನಱಿದು ಮತ್ತಮರಸುಗಳ ತಲೆಯನೊಡೆದುದರ್ಕ್ಕೇ ದಂಡಮೇನೆಂದುಬೆಸಗೊಳೆ ದ್ರವ್ಯಕ್ಷೇತ್ರ ಕಾಲಭಾವಂಗಳಂ ಪರೀಕ್ಷಿಸಿ ಕುಬೇರಮಿತ್ರನೆಂದಂ ನಿಮ ನೊಡೆದಕಾಲಂ ಪೂಜಿಸುವುದೆನೆ ಲೋಕಪಾಲಂ ಮೆಚ್ಚಿ ಸೆಟ್ಟಿಯುಂ ಪೂಜಿಸಿ ಸಮ್ಮಾನಿಮ್ಮೊಡೆಯನಾವಳ್ ಗೆಂಟುಮಾಡಿದನೆಂಬುದು ಮರಸನಱಿದನೆಗೆತ್ತು ಕೆಲದೊಳಿರ್ದ ಗೊಷ್ಠಿಭಯಸ್ಥರಾಗಿ ಬಾಲಮಂತ್ರಿಯ ಪ್ರಾಯೋಗಿಕಕ್ರಿಯೆಯಿಂ ತನ್ನ ನುಡಿದುದನಱಿಸಿ ಚಪಲಮತಿಗರಸಂಮುಳಿದು ಗುರುವಚನ ಪರಾಙ್ಮುಖನಾದವೊಲ್ ದಿಗಗೆಯ್ವುದುದಿಲ್ಲೆಂದು ವಿನಯಪೂರ್ವಕಂ ಸೆಟ್ಟಿಯಂ ಮನೆಗೆ ಪೋಗಲ್ವೇೞ್ದು ಒಂದುದಿವಸಂ ಕುಬೇರಸೆಟ್ಟಿಯು ಶಿರೋರುಹದೊಳ್ ಪಲಿತಾಂಕುರಮಂ ಧನಪತಿ ಕಂಡು ನಿನಗೆ ಬೞಿಬಂದುದೆಂದು ನಗುತಂ ತೋಱಿದೊಡದುವೆ ನಿರ್ವೇಗಮಾಗಿ ಕುಬೇರಕಾಂತಂಗೆ ಸೆಟ್ಟಿಪಟ್ಟಂಗಟ್ಟಿ ಲೋಕಪಾಲನಂ ಬೆಸಗೊಂಡು ಸಿದ್ಧಾರ್ಥಮೆಂಬ ನಿಜಗೆಯೊಳ್ ಬಹಿರುದ್ಯಾನಕ್ಕೆ ಪೋಗಿ ತನ್ನ ಮೆಯ್ದುನಂ ಸಮುದ್ರದತ್ತಂ ಮೊದಲಾಗೆ ಪಲಂಬರುಂ ಬೆರಸು ವಿಪುಲಮತಿ ಚಾರಣರಸಾರೆ ಸಂಯಮಮಂ ಕೈಕೊಂಡು ಕಾಲಾಂತರದೊಳ್ ಬ್ರಹ್ಮಕಲ್ಪದೊಳ್ ಲೋಕಾಂತಿಕದೇವರಾದರ್.

ಇತ್ತ ಪ್ರಿಯದತ್ತೆಯುಂ ವಿಪುಲಮತಿ ಚಾರಣರ್ಗಾಹಾರದಾನಮಂ ನವವಿಧಪುಣ್ಯಾನ್ವಿತೆಯಾಗಿ ಕೊಟ್ಟನಗೆ ತಪನಾಸನ್ನದೊಳಕ್ಕು ಮೆಚ್ಚಿಸಿದನೆ ಮಕ್ಕಳಿಲ್ಲದುಚ್ಚೆಗದೊಳ್ ನುಡಿದಳೆಂದಱಿದು ಮುನಿಯರ್ ತಮ್ಮ ದಕ್ಷಿಣಹಸ್ತದೈದು ಬೆರಲುಮನೆಡದಕಿಱುಗುಣಿಕೆಯುಮಂ ತೋಱಿ ಪರಸಿಪೋಗೆ ಕೆಲವುಕಾಲದಿಂ ಕುಬೇರದತ್ತಂ ಕುಬೇರಮಿತ್ರಂ ಕುಬೇರಚಿತ್ರಂ ಕುಬೇರದೇವಂ ಕುಬೇರಪ್ರಿಯನೆಂಬಯ್ವರ್ ಮಗಂದಿರಂ ಕುಬೇರಶ್ರೀಯೆಂಬ ಮಗಳುಮಂ ಪ್ರಿಯದತ್ತೆ ಪಡೆದು ಸುಖದಿನಿರ್ಪ್ಪುದುಂ, ಒಂದು ದಿವಸಂ ಜಗತ್ಪಾಲ ಚಕ್ರವರ್ತಿಯುಮಗಳಿರಪ್ಪ ಅಮಿತಮತಿಯುಮನಂತಮತಿ ಕನ್ನೆಯರುಂ ಪ್ರಜಾಪಾಲನಮಗಳಿರಪ್ಪ ಯಶಸ್ವತಿ ಗುಣವತ್ಯಾರ್ಯೆಯರ್ ವೆರಸು ಪೊಡೆಮ್ವೆಂದು ನಿತ್ಯಮಂಡಿತ ಜಿನಾಲಯದೊಳಿರೆ, ಲೋಕಪಾಲನಂತಃಪುರಮುಂ ಕುಬೇರಕಾಂತನುಂ ಬೆರಸವರಲ್ಲಿ ಧರ್ಮಮಂ ಕೇಳ್ದು ದಾನಪೂಜಾ ಶೀಲೋಪವಾಸಾದಿ ನಿರತರಾಗಿರ್ಪ್ಪಿನಂ ಮತ್ತೊಂದು ದಿವಸಂ ಜಂಘಾಚಾರಣರ್ ಚರಿಗೆವರೆ ಕುಬೇರಕಾಂತನುಂ ಪ್ರಿಯದತ್ತೆಯುಂ ಮಱಿಗೊಂಡು ನಿಲಿಸುವುದುಮವರಂ ಕಾಣಲೊಡಂ ಕಪೋತಮಿಥುನಂ ತಮ್ಮ ಪೂರ್ವಭವಾಂತರಮನಱಿದು ಮುನಿಪದ ಪ್ರಣಾಮಂಗೆಯ್ವುದುಮವಂ ಕಂಡು ಸಂಸಾರಸ್ವರೂಪಮಂ ಭಾವಿಸಿ ಜಂಘಾಚಾರಣರ್ ನಿಲಲೊಲ್ಲದೆ ಪೋದರ್.

ಇತ್ತ ಪ್ರಿಯದತ್ತೆಯುಂ ನಾಕಪೋತ ವಧುವನಿದಿರ್ಗೊಂಡು ನಿನ್ನ ಮುನ್ನಿನ ಭವದ ಪೆಸರೇನೆನೆ ನಿಜತುಂಡದಿಂ ತನ್ನ ನಾಮಾಕ್ಷರಮಂ ಬರೆದು ತೋರ್ಪುದುಮದಂ ಕಪೋತಂ ಕಂಡೆನ್ನ ಮುನ್ನಿನ ಭವದ ಪೆಂಡತಿಯೆಂದಱಿದತಿಪ್ರೀತಿಯಿಂ ಪ್ರಿಯದತ್ತೆಗೆ

ಸುಕಾಂತನೆಂಬ ತನ್ನ ಮುನ್ನಿನ ಭವದ ಪೆಸರಂ ಬರೆದು ತೋರ್ಪುದು ಮದಂ ಕಂಡೆನ್ನ ಮುನ್ನಿನ ಭವದ ಗಂಡನೆಂದು ಕಪೋತಿರತಿವರನಂ ಸಾಭಿಲಾಷದಿಂ ಪೊರ್ದೆ ಮನೆಯ ಮಾನಿಸರ್ಗೆಲ್ಲಂ ಪತಿಪ್ರೀತಿಯಾದುದು. ಆ ಸಂದಿನ ಕಪೋತಿಯೆನೆಂದು ಸುಲೋಚನೆ ನುಡಿಯೆ ಜಯಕುಮಾರ ನಾನು ಮುಂದಿನ ರತಿವರ ಕಪೋತನೆಂದು ಪರಮಾನಂದ ಭರಿತನಾಗಿ ಮತ್ತಂ ದೃಷ್ಟಶ್ರುತ ಪ್ರಕೃತಿಗಳಂ ನೆನೆದೆಯಪ್ಪೊಡೆ ಪೇಳೆಂದು ಜಯಂ ಬೆಸಗೊಳೆ ಸುಲೋಚನೆ ಪೇಳಲ್ ತಗುಳ್ದಳ್.

ಜಂಘಾಚಾರಣರ್ ನಿಲಲೊಲ್ಲದೆ ಪೋದಕಾರಣಮಂ ನಿಱಯದೆ ಲೋಕಪಾಲನುಂ ತಮತಿ ಕಂತಿಯರುಂ ಬೆಸಗೊಂಡೊಡವರುಂ ಭಟ್ಟಾರಕರಲ್ಲಿ ಕೇಳ್ದು ಬಂದರಪ್ಪುದಱಿಂ ದಿಂತೆಂದು ಪೇಳಲ್ ತಗುಳ್ದರ್. ಈ ವಿಜಯಾರ್ಧದ ಕೆಲದ ಧಾನ್ಯಕಮಾಲಾಟವೀ[1] ಸಮೀಪದ ಶೋಭಾನಗರಮನಾಳ್ವಂ ಪ್ರಜಾಪಾಲನೆಂಬರಸಂ. ಆತನರಸಿ ದೇವಶ್ರೀಯೆಂಬೊಳ್. ಆತನ ಪುರೋಹಿತಂ ಶಕ್ತಿಷೇಣನೆಂಬೊಂ ಗಮಟಶ್ರೀಗಂ ಸತ್ಯದೇವನೆಂಬೊಂ ಕೃತಕಪುತ್ರನಾದೊಂ ಅಂತನಿಬರು ಮಮಿತಮತ್ಯಂತಮತಿ ಕಂತಿಯರಪಕ್ಕದೆ ಧರ್ಮಮಂ ಕೇಳ್ದು ಪ್ರಜಾಪಾಲ ಮಹಾರಾಜಂ ದೇವಶ್ರೀವರಸು ಮದ್ಯಮಾಂಸ ನಿವೃತ್ತಿಯುಮಂ ಪರ್ವೋಪವಾಸಮುಮಂ ಕೈಕೊಂಡಂ. ಶಕ್ತಿಷೇಣನು ಮನಗಾರ ಧರ್ಮದೊಳತಿಥಿಗಾಹಾರದಾನಮಂ ಕೊಟ್ಟಲ್ಲದಾನುಣೆನೆಂದು ಕೈಕೊಂಡಂ. ಅಟವಿಶ್ರೀಯುಂ ಜೊನ್ನದ ಪಾಡಿವದೊಳ್ ಕಾಂಬದನ್ನುಮಯೊಳ್ ವ್ರೈದು ವರ್ಷಂಬರಂ ನೋಂಪ ಪ್ರವೃದ್ಧ ಕಲ್ಯಾಣಮನೆತ್ತಿಕೊಂಡಳ್. ಸತ್ಯದೇವನುಂ ದೇವರಂ ವಂದಿಸಿದಲ್ಲದುಣೆನೆಂಬ ವ್ರತಮಂ ಕೈಕೊಂಡಂ. ಅಂತನಿಬರುಂ ಸುಖದಿಂ ಪೀನರೊಂದು ದಿವಸಂ ಮೃಣಾಳಮತಿಯೆಂಬ ನಂಟನೂರ್ಗೆ ದೇವಶ್ರೀಯುಂ ಕಳುಪಲೆಂದು ಶಕ್ತಿಷೇಣಂ ಧಾನ್ಯಕಮಾಲದ ಸರ್ಪಸರೋವರದ ತಡಿಯೊಳ್ ಬೀಡಂ ಬಿಟ್ಟಿರ್ಪನ್ನೆಗಂ ಇತ್ತ ಮೃಣಾಳವತಿಯ ನಾಳ್ವಂ ಸುಕೇತುವೆಂಬೊ ನಾಪ್ಪುರದ ಪರದಂ ರತಿವರ್ಮಂಗಂ ಕನಕಶ್ರೀಗಂ ಭವದೇವನೆಂಬೊಂ ಮಗನಾದೊಡೆ ಆತಂ ವಿರೂಪನಪ್ಪುದಱಿಂದೆ ಬಟ್ಟೊಟ್ಟಿಗನುಂ '[2] ದುಶ್ಚರಿತ್ರಮಪ್ಪುದಱಿಂದೆ ದುರ್ಮುಖನುನೆಂಬ ಪೆಸರ್ಗಳಾಗೆ ತನ್ನ ಸೋದರಮಾವಂ ಶ್ರೀದತ್ತಸೆಟ್ಟಿಗಂ ವಿಮಳಶ್ರೀಗಂ ಪುಟ್ಟಿದ ರತಿವೇಗೆಯುಂ ತನಗೆ ಬೇಡಿದೊಡೆ ಬಡವನೆಂದು ಕುಡದಿರೆ ಪನ್ನೆರಡು ವರ್ಷಮನವಧಿಮಾಡಿ ಬಡವೊವಡೆಯಲ್ ಪೋಗಿ ಅವಧಿಗೆ ಬಾರದಿರ್ದೊಡೆ ಆ ಪೊಳಲ ಪರದನಶೋಕದತ್ತಂಗಂ ಜಿನದತ್ತೆಗಂ ಪುಟ್ಟಿದಸುಕಾಂತಂಗೆ ರತಿವೇಗೆಯುಂ ಕುಡುವುದು ಮೊಟ್ಟೊಟ್ಟಿಗಂ ಬಂದು ಮುಳಿದು ಕೊಲ್ವೆನೆನೆ ಭಯಸ್ಥರಾಗಿ ವಧೂವರರ್ ಪೋಗಿ ಶಕ್ತಿಷೇಣನಮಱಯಂ ಪುಗುವುದು ಮೊಟ್ಟೊಟ್ಟಿಗನುಂ ಬೞಯನೆ ತಗುಳ್ದು ಶಕ್ತಿಷೇಣಂಗಳ್ಕಿ ಮಗುೞ್ದಂ.

ಇತ್ತ ಶಕ್ತಿಷೇಣನುಂ ಚರಿಗೆ ಪೊಕ್ಕ ಚಾರಣಮುನಿಯುಗಕ್ಕೆ ವಿಧಿಪೂರ್ವಕಂ[3] ಅನ್ನದಾನಮಂ ಕೊಟ್ಟು ಪಂಚಾಶ್ಚರ್ಯಮಂ ಪಡೆದು ತಾನು ಮುಂದು ಸುಖದಿಂ

1 ಗ. ಘ. ಶ್ರೀದೇವಿಯೆಂದಳ್.
2 ಪರಮಾದರ್ಶಮುಖ್ಯ.
3 ಗ. ಘ. ಆಹಾರದಾನಮಂ.

ಸಂ ಅಲ್ಲಿಗೆ ಮೇರುದತ್ತನೆಂಬ ಸೆಟ್ಟಿಯ ಸಾರ್ತ್ಥಂ ಬಂದು ಬೀಡಂಬಿಟ್ಟಿರ್ದುದು, ಆ ಶೆಟ್ಟಿಯ ಪೆಂಡಿತಿ ಧಾರಣಿಯೆಂಬಳ್ ಆತಂಗೆ ಶಕುನಿಯುಂ ಬೃಹಸ್ಪತಿಯುಂ ಧನ್ವಂತರಿಯುಂ ಭೂತಾರ್ಥನು ಮೆಂಬ ನಾಲ್ವರ್ ಮಂತ್ರಿಗಳಾಗಿರ್ಪ್ಪರಂ[1] ಒರ್ವಂ ಹೀನಾಂಗನಂ ಕಂಡು ಆವಕಾರಣದಿಂ ದಿಂತಪ್ಪ ರೂಪಾದುದೆಂದು ಸೆಟ್ಟಿ ಬೆಸಗೊಂಡೊಡೆ ಅವರೊಳ್ ಶಕುನಿಯೆಂದಂ, ಈತಂ ಪುಟ್ಟುವಂದವ ಶಕುನಮಾದುದೆನೆ ಬೃಹಸ್ಪತಿಯೆಂದಂ ಪಾಪಗ್ರಹನಿರೀಕ್ಷಣದೋಷಮಾದುದೆನೆ ಧನ್ವಂತರಿಯೆಂದಂ, ತ್ರಿದೋಷ ವೈಷಮ್ಯಮಾದುದೆನೆ ಮೂವರಂ ಮಾಕೊಂಡು ಭೂತಾರ್ಥನೆಂದಂ, ಇವರೆಂದುದಲ್ಲ, ಅನ್ಯಜನ್ಮದೊಳ್ ಹಿಂಸಾದ್ಯುಪಾರ್ಜಿತ ಪಾಪ ಪರಿಪಾಕದಿಂದ ಮಾತಂ ಹೀನಾಂಗನಾದೊಂ ಇವರೆಂದಪಶಕುನಾದಿಗಳು ಮುಪಾರ್ಜಿತ ಶುಭಾಶುಭಕರ್ಮಪರಿಪಾಕ ಪ್ರಕಾಶನಸಾಧನಂಗಳಲ್ಲದೆ ನಿರ್ವರ್ತಕ ಸಾಧನಂಗಳಲ್ಲವೆಂದು ಎಲ್ಲರುಂ ಮೆಚ್ಚಿ ನುಡಿಯುತ್ತಿರ್ಪ್ಪನ್ನೆಗಂ ಆ ಪ್ರಸ್ತಾವದೊಳ್ ಸತ್ಯದೇವನ ಪೆತ್ತತಂದೆ ಸತ್ಯಕಂ ತನ್ನ ಮಗನನಱಸುತ್ತಂ ಬಂದಲ್ಲಿ ಕಂಡು ಮಹಾದುಃಖಂಗೆಯ್ದು ಶಕ್ತಿಷೇಣ ಮೇರುದತ್ತ ಪ್ರಭೃತಿಗಳ್ಗೆ ತನ್ನ ಮಗನ ವೃತ್ತಾಂತಮನಿಂತೆಂದಂ, ಈತಂ ಮನೆಯ ಕೆಱುಕುಳ ವೆಸನಂಮಾಡದಿರೆ ತನ್ನ ಕೆಱೆಯುಚ್ಚಿ ಬಿಡಿದೊಡೆ ಮುಳಿದುಬಂದೊಂ, ಮೂಗು ದುಃಸಲಾರದ ಕಷ್ಟನೆಂದಾತೆಱನಂ ಪೇೞ್ದು ತನ್ನೊಡನಾತಂ ನಿರ್ಮೋಹಿಯಾಗಿ ಬಾರದಿರೆ ಮರುಭವದೊಳಪ್ಪೊಡಂ ನಿನ್ನಂ ಕೂಡಿರಿಸಿಕೊಳ್ವೆನಕ್ಕೆಂದು ನಿಧಾನಂಗೆಯ್ದು ದ್ರವ್ಯಷಿಯಾಗಿ ಕಾಲಾಂತರದೊಳ್ ಲೋಕಪಾಲಕನಾದಂ.

ಇತ್ತ ಮತ್ತೊಂದುದಿವಸಂ ಆಟವಿಶ್ರೀಯುಂ ತನ್ನ ನೋಂಪಿಯ ಜೊನ್ನಪಾಡಿವದೊಳುಪವಾಸಂಗೆಯ್ದು ಶಕ್ತಿಷೇಣಂ ಬೆರಸಾಹಾರದಾನಮಂ ಮುನಿಪತಿಗಿತ್ತು ಪಂಚಾಶ್ಚರ್ಯಮಂ ಪಡೆಯೆ ಸೆಟ್ಟಿ ಮೇರುದತ್ತನುಂ ಧಾರಿಣಿಯುಂ ಅದರ್ಕ್ಕನುಮೋದಂ ಗೆಯ್ದುಮಗೆ ನೀಂ ಮಱುಭವದೊಳ್ ಮಗನಪ್ಪುದಕ್ಕೆಂದು ನಿಧಾನಂಗೆಯ್ದರ್. ಮಱೆವೊಕ್ಕ ವಧೂವರರು ಮನುಮೋದ ಪುಣ್ಯಮಂ ಪಡೆದರ್ ಎಂಬುದುಮದಂ ಕೇಳ್ದು ಲೋಕಪಾಲನ ಮಹಾದೇವಿ ವಸುಮತಿ[2] ತನ್ನ ಪೂರ್ವಸಂಬಂಧಮನಱಿದು ಮೂರ್ಛಾನಂತರ ಮೆಚ್ಚುತ್ತುಂ ಮುನ್ನ ಪೇೞ್ದ ದೇವಶ್ರೀಯೆಂಬ ನಾನಿನಿತೊಂದು ವಿಭೂತಿಯುಂ ನಿಮ್ಮ ಪ್ರಸಾದದಿಂದೆಯ್ದಿದೆ ನೆಮ್ಮರಸಂ ಪ್ರಜಾಪಾಲನೆಲ್ಲಿರ್ದನೆಂಬುದು ಮಾತಂ ಲೋಕಪಾಲನಾದೊನೆನೆ ಪ್ರಿಯದತ್ತೆಯುಂ ತನ್ನ ಪೂರ್ವಭವಮಂ ನೆನೆದು ಕಂತಿಯರ ಬಂದಿಸಿ ನಿಮ್ಮ ಪೇೞ್ದ ಆಟವಿಶ್ರೀಯೆ ನಾನೆಂಬುದುಂ ಶಕ್ತಿಷೇಣನುಮೆಮ್ಮ ನಡಪಿದಮಗಂ ಸತ್ಯದೇವನುಮೆಲ್ಲಿರ್ದಪನೆನೆ ಶಕ್ತಿಷೇಣನೀ ಕುಬೇರಕಾಂತಂ ಸತ್ಯದೇವಂ ನಿನ್ನ ಪಿರಿಯಮಗಂ ಕುಬೇರದತ್ತನಾದೊನಾ ಮೇರುದತ್ತನುಂ ಧಾರಿಣಿಯುಂ ಕುಬೇರಮಿತ್ರನುಂ ಧನವತಿಯುಮಾದರ್, ಶರಣ್ಬೊಕ್ಕ ವಧೂವರರುಂ ನಿಮ್ಮ ಮನೆಯೊಳ್ ಕಪೋತಮಿಥುನಮಾದುವು, ಇನಿತುಮುಂ ವಿಜಯಾರ್ಧ ಸಮೀಪದ ಮಹಾಮಳಯ ಕಾಂಚನ ಗುಹಾವಾಸಿಗಳಪ್ಪ ರಿವರ್ ಚಾರಣರ್ ನಿಮ್ಮ ಮುನ್ನಿನ ಭವದೊಳ್ ಪರ್ಪ ಸರೋವರದೊಳಿರ್ದಂದು ನಿಮ್ಮ ಮನೆಯೊಳ್ ಜಗಿಗೆ ಪೊಕ್ಕಪರುಂ ನಿಮಗೆ ಪ್ರತ್ಯಕ್ಷ

---

1 ಫ. ಮದುಗಬ್ಬಗಳಾಗಿರ್ಪ್ಪರಂ. 2 ಸುಮತಿ.

ತ್ರಿಯುಮುಪದೇಶಂಗೆಯ್ವವರುಂ ಪಂಚಾಶ್ಚರ್ಯಕ್ಕೆ ಹೇತುವಾದವರುಂ ಕಪೋತಂಗಳ್ಗಂ ಕಂಡುಲಾಭಂ ಮಾಡಿ ಪೋದವರುಂ ನಿನ್ನ ತಂದೆಗಂ ಮಾವಂಗಂ ಗುರುಗಳಾದವರುಂ ಆ ಇರ್ವರ್ ನಿಮ್ಮನಿಬರ ವೃತ್ತಾಂತಮನವರಲ್ಲಿ ಕೇಳ್ದಪೆಂ ನಿಮಗಱಿಪಿದೆವೆಂದಿಂತು ಪಲಕಾಲಂ ಸಲೆ ಮತ್ತೊಂದು ದಿವಸಂ ಪ್ರಿಯದತ್ತೆ ಯಶಸ್ವತೀಗುಣವತ್ಯಾರ್ಯೆಯರುಂ ನಿಮ್ಮ ತಪಂಬಟ್ಟ ಕಾರಣಮೇನೆಂದೊಡೆ, ಎಮ್ಮ ಮಾವನಲ್ಲಿ ಅಡ್ಡುಗೆಯ ಬಾಯಿ ಸಮಂ ಸಹೆಯದೆ ವಿರಾಗದೊಳ್ ತಪಂಬಟ್ಟೆವ, ಧನವತಿಯುಂ ಕುಬೇರಕಾಂತೆಯುಂ ಅಂತೆ ಕೆಂಡಕೆಮರಸಾಡಿ ತಪಂಬಟ್ಟರೆಂದು ಪೇಳೆ ಮತ್ತೊಂದು ದಿವಸಂ ಆ ಕಪೋತಮಿಥುನ ಮಹಾಹಾರಾರ್ಥಂ ಪೋಗುತ್ತ ಕೆಲದ ಬಂಡೂಗ್ರಾಮಕ್ಕೆ ಪೋಗೆ ಕದಳೀವನದೊಳ್ ಒಪ್ಪೊಟ್ಟಿಗಂ ಮಾರ್ಜಾರನಾಗಿ ಪುಟ್ಟಿರ್ದ ಕಪೋತಂಗಳಂ ಕಾಣಲೊಡಂ ಪಿಡಿದು ಕೊಲ್ವುದುಂ ಅವಸತ್ತು ವಿಜಯಾರ್ಧದ ದಕ್ಷಿಣಶ್ರೇಣಿಯ ಗಾಂಧಾರವಿಷಯದ ಸುಸೀಮಾನಗರಮನಾಳ್ವ ರತಿಗತಿಯೆಂಬ ವಿದ್ಯಾಧರರಾಜಂಗಂ ಶಶಿಪ್ರಭಾದೇವಿಗಂ ರತಿವರಕಪೋತಂ ಹಿರಣ್ಯವರ್ಮನೆಂಬೊಂ ಮಗನಾದೊಂ, ಆ ವಿಜಯಾರ್ಧದ ಉತ್ತರಶ್ರೇಣಿಯ ಗೌರೀವಿಷಯದ ಭೋಗಪುರಮನಾಳ್ವ ವಾಯುರಥನೆಂಬ ವಿದ್ಯಾಧರಂಗಂ ಸ್ವಯಂಪ್ರಭಾದೇವಿಗಂ ರತಿಸೇನೆ ಪ್ರಭಾವತಿಯೆಂಬ ಮಗಳಾಗಿ ಪುಟ್ಟಿದಳ್.

ಸುಕಾಂತನುಂ ರತಿವೇಗೆಯುಮಾದ ಜನ್ಮದ ತಂದೆವರ ತಮಗಂದು ತಂದೆವರಾಗೆ ಜನ್ಮನಂ ನೋಡದ ಪ್ರಭಾವತಿಯನಾಗ್ರಹ ಕುಡುವೆವೆಂದು ಮಂತ್ರಿಗಳೊಳಾಲೋಚಿಸಿ ತದನುಮತದಿಂ ಸ್ವಯಂವರಕೊಡರ್ಚಿ ಗತಿಯುದ್ಧದಿಂ ತನ್ನ ಗೆಲ್ದಂಗಲ್ಲದೆ ಪ್ರಭಾವತಿ ಮಾಲೆ ಸೂಡಲೆಂಬುದಂ ಪ್ರಿಯಕಾರಿಣಿಯೆಂಬ ಚೇಟಿಯಿಂ ಕೇಳ್ದ ವಾಯುರಥಂ ಪ್ರಭಾವತಿ ವೆರಸು ಸಿದ್ಧಕೂಟಚೈತ್ಯಾಲಯದ ಮುಂದಿರ್ದು ಬಟ್ಟ ಮಾಲೆಯುಂ ನೆಲನಂಮುಟ್ಟದೆಯುವೆ ಮೇರುವಂ ತ್ರಿಃಪ್ರದಕ್ಷಿಣಂಗೆಯ್ದು ಕೊಳಲಾರದೆ ಚಿಂತಾಗತಿ ವೆರಸು ಪಲಂಬರ್ ವಿದ್ಯಾಧರ ಕುಮಾರರ್ ಗತಿಯುದ್ಧದೊಳ್ ಸೋಲೆ ಹಿರಣ್ಯವರ್ಮಂ ತನ್ನಂಗೆಲೆ ಕಂಡು ಮಾಲೆಯಂ ಪ್ರಭಾವತಿಯಕ್ಕೆ ಮತ್ತೊಂದುದಿವಸಂ ಪ್ರಭಾವತಿ ಕಪೋತದರ್ಶನದಿಂ ಜಾತಿಸ್ಮರೆಯಾಗಿ ರತಿವರನಂ ನೆನೆದು ವಿರಕ್ತಮತಿಯಾಗಿಪ್ಪಿನಂ ಹಿರಣ್ಯವರ್ಮನ ಬರೆದ ಪಟಮಂ ಪ್ರಿಯಕಾರಿಣಿ ತಂದು ತೋಱೆ ನೋಡಿದನಲ್ಲಿ ಪಡೆದೆಯೆಂಬುದುಂ ಹಿರಣ್ಯವರ್ಮಂ ಬರೆದ ಪಟಮುಂ ರತಿವೇಗೆಯ ಸುಕಾಂತನ ಕೈಯ್ಯಿಂ ಕೊಂಡುಬಂದೆನೆನೆ ತಾನುಂ ತನ್ನ ಚರಿತಮಂ ಬರೆದಪಟಮನಂ ತಾಳೆಯಕ್ಕೆಯೊಳಿಟ್ಟು ಹಿರಣ್ಯವರ್ಮಂ ಕಂಡಂತಿರ್ವರುಂ ಪರಸ್ಪರ ಪ್ರೀತರಾಗಿಪ್ಪನ್ನೆಗಂ ಬಂಧುಜನಂಗಳೆಲ್ಲಂ ನೆರೆದು ವಿವಾಹಾಭಿಷೇಕ ಕಲ್ಯಾಣಮುಂ ಮಾಡೆ ದಶವಿಧ ಸ್ನಾನದೊಳ್ ಸಿದ್ಧಕೂಟಜಿನಾಲಯದ ಪೂಜೆಗೆ ಪೋದಲ್ಲಿ ಪರಮಾವಧಿ ಸಂಪನ್ನ ಚಾರಣರಂ ಕಂಡು ಬಂದಿಸಿ ಹಿರಣ್ಯವರ್ಮನುಂ ಪ್ರಭಾವತಿಯುಂ ತಮ್ಮ ಪೂರ್ವಭವಮಂ ಬೆಸಗೊಳೆ ಚಾರಣರಿಂತೆಂದು ಬೆಸಸಿದರ್.

ಮೂಱನೆಯ ಭವದೊಳ್ ಮೃಣಾಳವತಿಯೊಳ್ ವಣಿಕ್ಕುಲದೊಳ್ ಪುಟ್ಟಿದ ರತಿವೇಗೆಯುಂ ಸುಕಾಂತನುಮೆನಿಸಿ ದಂಪತಿಗಳಾಗಿದೊಡೊಟ್ಟೆಗಂಗಳ್ ಶಕ್ತಿಸೇನನ ಮುಱಿಸ್ವೆಕ್ಕ ದಾನಾನುಮೋದದ ಪುಣ್ಯಮನೆಯ್ದಿ ಕಾಲಾಂತರದೊಳ್ ಕಪೋ

1 ಪಾ. [illegible]

ತಂಗಳಾಗಿ ಕುಬೇರಮಿತ್ರನ ಮನೆಯೊಳ್ ಸುಖಮಿರ್ದು ತಪೋಧನಾವಲೋಕನಪ್ರೀತಿಯಿಂ ಪೋಗಿ ಸತ್ತು ದಾನಾನುಮೋದನ ಪುಣ್ಯಪರಿಪಾಕದಿಂ ಬಂದಿಲ್ಲಿ ವಿದ್ಯಾಧರಮಿಥುನಂಗಳಾದಿರ್, ಮೂಱನೆಯ ಜನ್ಮದ ಕಂದೆಪಿರೆಂದು ರತಿಷೇಣ ಗುರುಗಳ ಪಕ್ಕದೆ ಪರಿಗೃಹೀತವ್ರೋಪಧರ್ ಪಿತಾನಾದ್ಯುಪಕರಣ ಪೂಜೆಯಂ ಜಿನಭವನಕ್ಕೆ ಮಾಡಿಬಂದಿಲ್ಲಿ ವಿದ್ಯಾಧರಕುಲದೊಳ್ ಪುಟ್ಟಿ ನಿಮಗೆ ತಂದೆವಿರಾದಿರ್. ಅಂದಿನ ಭವದೇವನ ತಂದೆಯೆನಾಂ ರತಿವರ್ಮನೆನಿಲ್ಲಿ ಶ್ರೀವರ್ಮನೆನಾಗಿ ಸಂಯಮಮಂ ಕೈಕೊಂಡು ಚಾರಣಋದ್ಧಿಯುಮಂ ಪರಮಾವಧಿಯುಮಂ ಪಡೆದೆನೆಂಬುದುಂ ಅದಂ ಅಲ್ಲಿ ಕೇಳ್ದತಿಪ್ರೀತಿಯ ನಿವರ್ಗಳ್ ಪಲಕಾಲಂ ಸಲೆ ನಾಯುರಥ ನೊನ್ಮೇಘಮುಗಿಲ್ ಕರಗಿದುದಂ ಕಂಡು ನಿರ್ವೇಗದಿಂ ಮನೋರಥನೆಂಬ ಮಗಂಗೆ ರಾಜ್ಯಮಂ ಕೊಟ್ಟು ತಪಂಬಡುವುದು- ಅದಂ ಕೇಳ್ದು ಬಂಧುಗಳ್ಗೆಲ್ಲಂ ಬರೆ ಮನೋರಥನ ಮಗಂ ಚಿತ್ರರಥಂಗೆ ಪ್ರಭಾವತಿಯ ಮಗಳ್ ರತಿಪ್ರಭೆಯುಂ ಕುಡುವುದೆಂದು ಅಪ್ಪೈಸುವುದುಂ ಅನ್ಯತಿಕರಮಂ ಕೇಳ್ದಾದಿತ್ಯಗತಿ ಹಿರಣ್ಯವರ್ಮಂಗೆ ಸಕಲವಿದ್ಯಾಧರ ರಾಜ್ಯಾಭಿಷೇಕಂಗೆಯ್ದು ಪಲರುಮರಸುಗಳ್ ವೆರಸು ಪುತೀಶ್ವರರ ಪಕ್ಕದೆ ಮುನಿಸರಿಪರಾಂ ತಪಂಬಟ್ಟು ಕಾಲಾಂತರದೊಳ್ ಲೋಕಾಂತಿಕದೇವರಾದರೆಂಬ ಕಥಾವಸಾನದೊಳ್ ರತಿವೇಗೆಯುಂ ರತಿಷೇಣೆಯುಂ ಪ್ರಭಾವತಿಯುಮಪ್ಪಾನೆಂದು ಸುಲೋಚನೆ ನುಡಿದು ಸುಕಾಂತನುಂ ರತಿವರನುಂ ಹಿರಣ್ಯವರ್ಮನು ಮಾಡ ನಾನೆಂದು ಬಯಂ ನುಡಿದು ಇನ್ನೆನ್ನ ಚರಿತಮಂ ಕೇಳೆನೆ ಸುಲೋಚನೆ ಪೇಳಲ್ ತಗುಳ್ದಳ್. ಅಂತು ಹಿರಣ್ಯವರ್ಮಂ ಪುಣ್ಯೋಪಾರ್ಜಿತ ರಾಜ್ಯಸುಖಮನನುಭವಿಸುತ್ತಂ ಪ್ರಭಾವತಿವೆರಸು ವಿಹಾರಿಸುತ್ತಂ ಧಾನ್ಯಕಮಾಳದ ಸರ್ಪಸರೋವರದರ್ಶನದಿಂ ಪೂರ್ವಭವಸಂಬಂಧಮಂ ನೆನೆದು ನಿರ್ವೇಗದಿಂ ಪ್ರೋತ್ಪನ್ನನಾದು ಸುವರ್ಣವರ್ಮನೆಂಬ ಮಗಂಗೆ ರಾಜ್ಯಮಂಕೊಟ್ಟು ಭೂಮಿಗಿಳಿದು ಶ್ರೀಪುರದೊಳ್ ಶ್ರೀಪಾಲಸಂಯಮಿತರ ಪಕ್ಕದೆ ತಪಮಂ ಕೈಕೊಂಡಂ. ಪ್ರಭಾವತಿ ತಮ್ಮಮ್ಮ ಸ್ವಯಂಪ್ರಭೆ ವೆರಸು ಗುಣವತಿಯೆಂಬ ಕಂತಿಕೆಯರ ಪಕ್ಕದೆ ತಪಮಂ ಕೈಕೊಂಡಳ್. ಹಿರಣ್ಯವರ್ಮ ಮುನಿಪ್ರತ್ಯಕ್ಷಸಮ್ಯಗ್ದರ್ಶನಜ್ಞಾನ ಚಾರಿತ್ರಪರಿಣಾಮದಿಂ ವಿಹರಿಸುತ್ತಂ ಪುಂಡರೀಕಿಣಿಗೆಯ್ದಿದಂ, ಗುಣವತಿಯುಂ ಯಶಸ್ವತಿಯುಂ ಪ್ರಭಾವತಿಯುಂ ಮೊದಲಾಗಿರ್ದ ಆರ್ಯಿಕೆಯರುಮಲ್ಲಿಗೆ ಪೋದಮಂ ಅಲ್ಲಿನೆಲೆಯಾಗಿರ್ಪ ಕುಬೇರಕಾಂತನ ಭಾರ್ಯೆ ಪ್ರಿಯದತ್ತೆ ಬಂದು ಗುಣವತಿ ಕಂತಿಕೆಯರಂ ಬಂದಿಸಿ ವಿನಯದಿಂ ಅಮಿತಮತ್ಯಸಂಜ್ಞ ಕಂತಿಕೆಯರೆಲ್ಲರ್ ದುಪೂರಾಧನಾಗಳಿಯಂ ಸುಗತಿಗೆ ಸಂದನೆ ಪ್ರಭಾವತಿ ಕಂತಿಕೆಯರೆಂದರ್. ಬಿಮುಗೆಲ್ಲಂ ಕಣ್ಣಾಗಿರ್ದರವರ ಕೀರ್ತರಾದೆನೆ ನಿವೇತ್ತಲೆಯೆಂದು ಪ್ರಿಯದತ್ತೆ ಬೆಸಗೊಂಡೊಡೆ ರತಿಷೇಣೆಯಾದ ಭವದೊಳಾದ ಸಂಬಂಧಮೆಲ್ಲಮಂ ಪೇಳ್ದು ಪ್ರಿಯದತ್ತೆ ರತಿವರನೆಲ್ಲಿರ್ದನೆನೆ ಹಿರಣ್ಯವರ್ಮನಾಗಿ ತಪಂಬಟ್ಟು ವಿಹಾರಿಸುತ್ತಂ ಇಲ್ಲಿಗೆ ಬಂದನೆ ಪ್ರಿಯದತ್ತೆ ಪೋಗಿ ಹಿರಣ್ಯವರ್ಮ ಮುನಿಯಂ ಬಂದಿಸಿ ಬಂದು ಲೋಕಪಾಲ ಕುಬೇರಕಾಂತ ಪ್ರಭೃತಿಗಳ್ ವೃತ್ತಾಂತಮಂ ಪ್ರಭಾವತಿ ಕಂತಿಕೆಯರಿಗೆಂದು ಪ್ರಿಯದತ್ತೆ ಪೇಳಲ್ ತಗುಳ್ದಳ್.

ಈ ವಿಜಯಾರ್ಧ ಪರ್ವತದ ಗಾಂಧಾರ ನಗರಮನಾಳ್ವಂ ರತಿಷೇಣನೆಂಬೊಂ ವಿದ್ಯಾಧರಂ ತನ್ನ ಕಾಂತೆ ಗಾಂಧಾರಿಯುಂ ಕೆಳೆಯುಂ ಕುಬೇರಕಾಂತನುಂ ಬೆರಸು

ವನವಿಹಾರದೊಳಿರೆ ಗಾಂಧಾರಿ ಕುಬೇರಕಾಂತಂಗಾಟಿಸಿ ಕೃತಕದಿಂ ಪಾವುಕೊಂಡುದೆಂದು ಮೂರ್ಛೆವೋಪ್ಪುದುಂ ಸೆಟ್ಟಿಯುಂ ರತಿಷೇಣನುಂ ಮಣಿ ಮಂತ್ರಗಳಿನೆಟ್ಟುಱಿಸಲಾಱದೆ ರತಿಷೇಣಂ ಮನಃಕ್ಷತಂಬಟ್ಟು ಮಹೌಷಧಮಂ ತರಲ್ ವಿಜಯಾರ್ಧಪರ್ವತಕ್ಕೆ ಪೋಗಿರ್ದಂ, ಇತ್ತ ಗಾಂಧಾರಿಯುಂ ಕುಬೇರಕಾಂತಂಗೆ ತನ್ನಳಿಪಂ ಪ್ರಕಟಂಮಾಡೆ ಕುಬೇರಕಾಂತಂ ನಾಂ ನಪುಂಸಕನೆನೆ ವಿರಕ್ತೆಯಾಗಿರ್ಪನಂ ರತಿಷೇಣಂ ಬರೆ ನಿಮ್ಮ ಮುನ್ನಿನೌಷಧ ಪ್ರಯೋಗದೊಳ್ ತಿದ್ದಿತ್ತೆಂದು ಇವರ್ಗಳುಂ ನಿಜವಾಸಕ್ಕೆ ಪೋದರ್.

ಇತ್ತೊಂದು ದಿವಸಂ ಪ್ರಿಯದತ್ತೆ ತನ್ನರಸರ್ ಮಕ್ಕಳ್ವೆರಸು ಗರ್ಭಿಣಿ ವನವಿಹಾರಕ್ಕೆ ಸಿವಿಗೆಯ ನೇಱಿ ಪೋಪ್ಪುದುಂ ಅಲ್ಲಿಗೆ ಗಾಂಧಾರಿ ಬಂದು ನಿನ್ನ ಸೆಟ್ಟಿ ನಪುಂಸಕನೆಂಬ ರಾವಾತು ಟೆಲ್ಲಿ ಪೇಟೆಂಬುದು ಪ್ರಿಯದತ್ತೆ ಎಂದಳ್, ಆ ನಲ್ಲದವರ್ಗೆಲ್ಲಂ ಆತಂ ನಪುಂಸಕನೆನೆ ಗಾಂಧಾರಿ ತನಗದು ವೆನಿರ್ವೇಗಮಾಗಿ ರತಿಷೇಣಂ ಬೆರಸು ತಪಂಬಟ್ಟು ಪುಂಡರೀಕಿಣಿಗೆ ವಂದಳವಳಂ ಪ್ರಿಯದತ್ತೆ ನಿಲಿಸಿ ನಿಮ್ಮ ತಪಕ್ಕೆ ಕಾರಣಮಾವುದೆನೆ ನಿನ್ನ ಪುರುಷನೆ ಕಾರಣ ಮೆಂಬುದು ಮಾನುಡಿಯುಂ ನಿಗೂಢವೇಷನಾಗಿರ್ದ ಕುಬೇರಕಾಂತಂ ಕೇಳ್ದು ಬಂದು ವಂದಿಸಿ ತಪಂಬಟ್ಟೊಳ್ಳಿಕೆಯಿದ್ದರೆಮ್ಮ ಕೆಳೆಯುಂ ರತಿಷೇಣನೆಲ್ಲಿದ್ದನೆಂಬುದುಂ ಆವರು ಮೆಮ್ಮ ಕಾರಣದಿಂ ತಪಂಬಟ್ಟಲ್ಲಿಗೆ ವಂದರೆಂಬುದುಂ ಕುಬೇರಕಾಂತನುಂ ಲೋಕಪಾಲಕನು ಮವರಲ್ಲಿಗೆ ಪೋಗಿ ಬಂದಿಸಿ ಧರ್ಮಶ್ರವಣಾನಂತರಂ ಸಂವೇಗಪರನಾಗಿ ಲೋಕಪಾಲಂಗೆ ಗುಣಪಾಲಕುಮಾರಂಗೆ ರಾಜ್ಯಮಂ ಕೊಟ್ಟು ಕುಬೇರಕಾಂತಂ ಕುಬೇರಪ್ರಿಯಂಗೆ ಸೆಟ್ಟಿವಟ್ಟಂಗಟ್ಟಿ ರತಿಷೇಣಮುನಿಯರ ಪಕ್ಕದೆ ದೀಕ್ಷಿತರಾದರೆಂತವಱಿಂ ಮತ್ತೊಂದು ದಿವಸಂ ಪ್ರಿಯದತ್ತೆಯುಂ ತನಗೆ ಪುಟ್ಟಿದ ಕುಬೇರಶ್ರೀಯುಂ ಗುಣಪಾಲಂಗೆಕೊಟ್ಟು ಪ್ರಭಾವತಿಕಂತಿಕೆಯರಲ್ಲಿ ಧರ್ಮಮಂಕೇಳ್ದು ಗುಣವತಿಕಂತಿಕೆಯರ ಪಕ್ಕದೆ ತಪಮಂ ಕೈಕೊಂಡಳ್, ಇತ್ತ ಹಿರಣ್ಯವರ್ಮಮುನಿಯುಂ ಪರೇತವನದೊಳ್ ಸಪ್ತದಿನಂಬರಂ ಪ್ರತಿಮಾಯೋಗದೊಳಿರ್ಪುದುಂ ಆವರ ಪೂರ್ವಭವಸಂಬಂಧಮಂ ಪ್ರಿಯದತ್ತೆಕಂತಿಯರ್ ನಗರಜನಂಗಳ್ಗೆ ಪೇಳುತ್ತಾಗಳ್ ಕೇಳುತಿರ್ದ ಪ್ರಿಯದತ್ತೆಯೆಂಬ ಸೂಳೆಯೊಡನಿರ್ಪ ವಿದ್ಯುಚ್ಚೋರನದಂಕೇಳ್ದು ತನಗೆಪುಟ್ಟಿದ ವಿಭಂಗಜ್ಞಾನದಿಂ ತಾನೊಪ್ಪೊಟ್ಟಿಗನಾದ ಭವದಿಂದಿತ್ತಣ ವೈರಮನಱಿದು ಸಿತ್ಯಮಂಡಿತ ಜಿನಾಲಯದಮುಂದೆ ರಾತ್ರಿಪ್ರತಿಮೆಯಿರ್ದ್ದ ಪ್ರಭಾವತಿ ಕಂತಿಕೆಯನೆತ್ತಿಕೊಂಡುಯ್ದು ಪರೇತವನದೊಳ್ ಯೋಗಸ್ಥರಾಗಿರ್ದ ಹಿರಣ್ಯವರ್ಮಮುನಿವರರಿರ್ವರು ಮನೊಂದೆ ಚಿತಕದಮೇಗಿಟ್ಟು ಸುಡುವಾಗಳ್ ಆದಂಸೈರಿಸಿ ವಿಶುದ್ಧಪರಿಣಾಮದಿಂ ಮುಡುಪಿ ಪ್ರಥಮಕಲ್ಪದೊಳ್ ಕನಕಪ್ರಭದೇವನುಂ ಕನಕಪ್ರಭಾದೇವಿಯು ಮಾಗಿಪುಟ್ಟಿದರ್. ಇತ್ತ ಸುವರ್ಣವರ್ಮನಾ ಪ್ರಪಂಚಮಂ ಕೇಳ್ದು ವಿದ್ಯುಚ್ಚೋರಂಗೆ ನಿಗ್ರಹಂಮಾಳ್ಪೆನೆಂದು ಕೃತಪ್ರತಿಜ್ಞನಾದುದನವಧಿ ಜ್ಞಾನದಿನಱಿದು ಕನಕಪ್ರಭದೇವಂ ಮುನ್ನಿನ ಮುನಿರೂಪದಿಂ ಬಂದನು ಪ್ರೇಕ್ಷಾದಿಧರ್ಮತತ್ತ್ವಮನಱಿಪಿ ದಿವ್ಯರೂಪಮಂ ತೋಱಿ ದೇವಲೋಕಕ್ಕೆ ಪೋದಂ. ಅನ್ನೆಗಮಿತ್ತ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣತಡಿಯ ವತ್ಸಕಾವತೀವಿಷಯದ ಸುಸೀಮಾನಗರದೊಳ್ ಶಿವಘೋಷಭಟ್ಟಾರಕರ ಕೇವಲ ಜ್ಞಾನೋತ್ಪತ್ತಿಗೆ ದೇವನಿ

ಕಾಯದೊಡನೆ ಹಿರಣ್ಯವರ್ಮಚರ ಕನಕಪ್ರಭದೇವನುಂ ಪ್ರಭಾವತೀಚರ ಕನಕಪ್ರಭಾದೇವಿಯುಂ ಬಂದು ಬಂದಿಸಿಪರ್ನ್ನೆಗಮಿತ್ತ ಶಾಪುರದೊಳ್ ಪುಷ್ಪಪಾಲಿಕೆಯುಂ[1] ಪುಷ್ಪಾವತಿಯುಮೆಂಬ ಮಾಲೆಗಾರರ ಮಗಳ್ದಿರಿರ್ವರುಂ ಮುನ್ನಿನೊಂದು ದಿವಸದಂದೆ ಪುಷ್ಪಕರಂಡಕಮೆಂಬುದ್ಯಾನದೊಳಗೆ ಗುಣಧರಕೇವಲಿಗಳ ಪಕ್ಕದೆ ದೇವರರ್ಚನೆಯ ಪೂಜಾಧರ್ಮಮಂ ಕೇಳ್ದು ಕೈಕೊಂಡು ಪೋಗುತ್ತುಂ ಪೋಗಿ ಸರ್ಪಾಗ್ನಿನಿಮಿತ್ತದಿಂ ಸತ್ತು ಶತಮಖಂಗೆ ಶಚಿಯುಂ ಪ್ರಿಯರತಿಗೆ ಪಂಗೆ ಮೇನಕೆಯುಮೆಂಬ ದೇವಿಯರಾಗಿ ಬಂದವರುಂ ತೀರ್ಥಕರಂ ಬಂದಿಸಿ ತತ್ಕಥಾಕರ್ಣನಾನಂತರಂ ಹಿರಣ್ಯವರ್ಮದೇವನುಂ ಪ್ರಭಾವತೀಚರದೇವಿಯುಂ ಮಲ್ಲಿಯುತಮ್ಮ ಭವಸಂಬಂಧಮಂ ಕೇಳ್ದು ಪೂರ್ವಭವಸುಖಾನುಭವ ಪ್ರದೇಶಂಗಳಂ ನೋಡುತ್ತುಂ ಸರ್ಪಸರೋವರದ ಸಮೀಪಕ್ಕೆ ಬಂದು ಅಲ್ಲಿಗೆ ಸಾರ್ಥದೊಡನೆ ಬಂದ ಭೀಮರೆಂಬ ಸಾಧುಗಳಂ ಕಂಡು ವಿನಯದಿಂ ಬಂದಿಸಿ ಧರ್ಮಮಂ ಕೇಳ್ದು ತದನಂತರಂ ನೀಮೇಕಾರಣಂ ತಪಂಬಟ್ಟಿರೆನೆ ಭೀಮಸಾಧುಗಳಿಂದರ್.-

ಪುಷ್ಕಳಾವತೀ ವಿಷಯದ ಪುಂಡರೀಕಿಣಿಯೊಳ್ ದರಿದ್ರಕುಲದೊಳ್ ಪುಟ್ಟಿದೆನಾಂ, ಭೀಮನೆಂಬೆನೊಂದು ದಿವಸಮೊರ್ವ ತಪೋಧನರಂ ಸಾರ್ದು ಧರ್ಮಮಂ ಕೇಳ್ದು ಹಿಂಸಾನೃತಸ್ತೇಯ ಪರದಾರ ಗಮನಾತಿಲೋಭ ದ್ಯೂತಮಧುಮಾಂಸತ್ಯಾಗಲಕ್ಷಣಮಪ್ಪ ವ್ರತಮಂ ಕೈಕೊಂಡು ಬಂದೊಡೆನ್ನ ಮುತ್ತಪ್ಪೆ ಬಡವಗೇಮಾಗೀ ವ್ರತಂಗಳ್ ಬಗೆಯ್ವುದು, ಇವಂ ನಿನಗಿತ್ತಂಗೆ ಮಗುಳ್ ಕೊಟ್ಟು ಬಪ್ಪಂ ಬಾಯೆಂದೆನ್ನನೊಡಗೊಂಡು ಬರ್ಪನ್ನೆಗಂ ರಥ್ಯಾಮಾರ್ಗದೊಳ್ ದೇವತಾಗೃಹದ ಕುಕ್ಕುಟಂ ಪಸಿಲೊಳೊಣಗಿಕ್ಕಿದ ಧಾನ್ಯಮಂ ತಿಂದೊಡೆ ಅದಂ ಕೊಂದ ವಜ್ರಕೇತುವೆಂಬನಂ ತಳಾರರ್ ದಂಡಿಸುವುದುಮಂ ಜಿನದೇವನ ಬಯಕೆಯುಂ ಮುರಿಯಿಸಿ ಪ್ರಸಿನುಡಿವ ಧನದೇವನ ಜಿಹ್ವೋತ್ಪಾಟನಂಗೆಯ್ವುದುಮಂ ಸೆಟ್ಟಿ ಮನುಗೆ ಹಾರಮಂ ಕಳ್ದು ಸೂಳೆಗೆ ಕೊಟ್ಟ ರತಿಪಿಂಗಳನೆಂಬೊನಂ ಸೂಲದೊಳಿಕ್ಕುವುದುಮಂ ಇರುಳ್ ಮನೆಯೊಳ್ ವಿವೇಕಮಿಲ್ಲದೆ ತನ್ನತಂಗೆಗಭಿಲಾಷೆಯಾದ ರಕ್ಷಕನೆಂಬಂಗೆ ಲಿಂಗಚ್ಛೇದಂ ಗೆಯ್ವುದುಮಂ, ಕ್ಷೇತ್ರಲೋಭದಿಂ ತಮ್ಮಣ್ಣನಂ ಪಿಡಿದು ಕೊಂದ ಪೋಲನೆಂಬನಂ ಪುರ್ಬ್ಬುಲಿಯೊಳೆ ನಾಲ್ಕಡಿಗಳಿಪುದುಮಂ, ಸಾಗರದತ್ತನೆಂಬನೊಳ್ ಜೂದಾಡಿತಸ್ನು ಕಳ್ದ ದೆಲ್ಲಮಂ ಸೋಲ್ತು ಕುಡಲಿಲ್ಲದೆ ಸಮುದ್ರದತ್ತಂ ಸಾರಮೇಯ ಶಕ್ಯದ್ಯೂವಮಾಂತರ್ಗತನಾಗಿ ಬಿಸಿಲೊಳ್ ತಗೆದಿರ್ದುದುಮಂ, ಒಂದು ಮಗುವನೆತ್ತಿಕೊಂಡು ಪೋಗಿ ಬಾಲತುಂಡಮಂ ಪಿಂಡಿಸಿಕೊಂಡು ಕೊಸಂಕೊಂಡು ಪೊಳ್ದು ಕಳ್ಳಿಕೊಟ್ಟು ಕುಡಿಪ ಕಳ್ಳು ಡಿಪಿಯಗೆಯ್ದು ಅಕೃತ್ಯಮನಾಕೆಯ ಮಗನಿಂದ ಮಡಿದು ಮುಳಿದವಳ್ಗೆ ಮಾಡ್ಪನಿಗ್ರಹಮುಮಂ ಸಾನಂದಕನೆಂಬರಸನಭಯ ಘೋಷಣೆಯುಂ ಮಾಡಿದೊಡೆ ಅರಸನೆಳಗಮಂ ಕಳ್ದು ತಿಂದ ಡಂಕನೆಂಬೊಂಗೆ ಕರಚ್ಛೇದನಮಂ ಮಾಳ್ಪುದುಮಂ ಅವಸರತಗರಂ ಕಳ್ದು ತಿಂದ ಪೌತ್ರಿಕನೆಂಬೊಂಗೆ ಅಮೇಧ್ಯ ಭಕ್ಷಣಂಗೆಯ್ವುದುಮಂ ಅನುಕ್ರಮದೊಳೆ ಕಂಡೆನ್ನ ಕೊಂಡ ವ್ರತಂಗಳ ನವಧಾರಿಸಿ ಹಿಂಸಾದಿಗಳಿಂದೆಯ್ದಿದೆನ.

1 ಪ. ಪುಷ್ಪಾವಳಿಯುಂ.

ಮುನ್ನಿನ ಭವದ ದುಃಖಂಗಳಂ ನೆನೆದು ಹಿಂಸಾದಿಗಳಿಂಗೆಯ್ದೆ ನೆಯ್ಯುವನಿಗ್ರಹಂಗಳಂ ಕಂಡೆನ್ನ ಕೈಕೊಂಡ ವ್ರತಂಗಳಂ ಪತ್ತುವಿಡದೆ ಪೋಗಿ ಗುರುಗಳಂ ಕಂಡು ಏವ್ಮಮುತ್ತಷ್ಟೆಯುಂ ಬಿಸುಟು ದೀಕ್ಷೆಯುಂ ಕೈಕೊಂಡು ಗುರುಪ್ರಸಾದದಿಂ ಸಕಲ ಶಾಸ್ತ್ರಮುಂ ಕಲ್ತು ಮತ್ತೊಂದು ದಿವಸಂ ಕೇವಲಿಗಳ ಪಕ್ಕದೆ ಮುತ್ತಪೂರ್ವ ಭವ ಸಂಬಂಧಮುಂ ಕೇಳ್ದನದೆಂತೆಂದೊಡೆ—ಪುಷ್ಕಳಾವತೀ ವಿಷಯದ ಪುಂಡರೀಕಿಣಿಯುಂ ವಸುಪಾಲನಾಳುತ್ತಿರೆ ವಿದ್ಯುದ್ವೇಗನೆಂಬ ಕಳ್ಳನಂ ಪಿಡಿದುಳ್ಳುದೆಲ್ಲಮುಂ ಕೊಂಡು ಮತ್ತಮಿರ್ದೆತನುಯುಂ ಕೋಟೆಗಿದು ರಾಜಪುರುಷರ್ ನಿಗ್ರಹಿಸೆ ನಿಮ್ಮನಿಗ್ಗಳದೆ ವಿಮತಿಯು ಕಯ್ಯೊಳ್ ಕೊಟ್ಟನೆನೆ ವಿಮತಿಯುಂ ಕಟ್ಟವೆತ್ತ ಕಳ್ಳನೆಲ್ಲಮುಮಂ ಸುಟಿಗುಮೆನ್ನೊಳಂ ತಪ್ಪದಿಕ್ಕೆಂಬುದು ಸುಮಾಯಾಂತರದಿ ನಾಗಮುನಿವನಲ್ಲಿ ಕಂಡು ಧರ್ಮಾಧಿಕರಣರ್ ಪೇಳ್ವತ್ರಿಕಂಸ ಬಾತ್ರೀಪ್ರಮಾಣ ಶಕೃದ್ಭಕ್ಷಣಂ ಮಲ್ಲರಿಂದಂ ತ್ರಿಂಶನ್ಮುಷ್ಟಿಪ್ರಹರಣಂ ಸರ್ವಸ್ವಹರಣಮೆಂಬ ದಂಡತ್ರಯಮುಮಂ ಮಾಡೆ ವಿಮತಿ ಬಾಳ್ವೆನಿಯಮಂದೆಯ್ದೆ ಸತ್ತುನರಕಕ್ಕೆ ಪೋದನಾ ವಿದ್ಯುಚ್ಚೋರನು ಮನರಸಂಕೊಟ್ಟಿಂದು ತಳಾರಂಗೆ ಪೇಳ್ದೊಡೆನಗೆ ಅಹಿಂಸಾವ್ರತಮುಂಟು ದಂಡಂ ಕೊಟ್ಟೆನೆಂದೊಡಿವನವನ ಕೆಯ್ಯೊಳ್ ಬಂಧಂಗೊಂಡನಕುಮೆಂದು ಕಳ್ಳಂಗಂ ತಳಾರಂಗಂ ಕಿಡಿ ಸಂಕಲೆಯನಿಕ್ಕಿದಾಗಳ್ ಕಳ್ಳನಿನ್ನುಕೊಲ್ಲದನಿತು ದುಃಖಮನೆಯ್ದಿದೆಯೆನೆ ತಳಾರಂ ಪೇಳಲ್ ತಗುಳ್ದಂ.

ಈವಸುಪಾಲನಯ್ಯಂ[1] ಗುಣಪಾಲಂ ಆತನ ಸಭೆಯೊಳ್ ನಟ್ಟುವನ ಮಗಳ್ ನಾಟ್ಯಮಾಲೆ ಸಾಧನಮಪಿ ನಾಡುತಿರ್ದೊಡರಸಂ ಮೆಚ್ಚಿ ಹೋದ್ಯಂಬಿತೆ ಕೆಲದೊಳಿರ್ದ ತನ್ನಪಿಪಾಲೆಯೆಂಬ ಗಣಿಕೆ ಗುಣಪಾಲಂಗೆಂದಳ್, ಇದು ಹೋದ್ಯಮಲ್ತು, ನಿಮ್ಮ ಭಾವಂ ಕುಬೇರ ಪ್ರಿಯನುಪವಾಸ ಪೋಷಕಂ ರಾತ್ರಿ ಪ್ರತಿಮೆಯಿಕ್ಕೆ ಪಲಕೆರದಿ ನಾದಳಿವಂಕಾಡ ಚಿತ್ರವಿಕಾರಮಂ ಮಾಡಲಾರದುದರಿಂ ಬ್ರಹ್ಮಚರ್ಯವ್ರತಮುಂ ಕೈಕೊಂಡೆನೆಂದೊಡೆ ಅರಸು ಮೆಚ್ಚಿದಂ ಪೇಡಿಕೊಳ್ವುದು ಮೆನ್ನ ಕೈಕೊಂಡ ಶೀಲ ವ್ರತಮುಂ ಕಾಪದೆ ಸಾಲ್ಗುಂ ಎಂದಿರ್ದನಂ ಒಂದು ದಿವಸಂ ಏಕೆಯಲ್ಲಿಗೆ ಸರ್ವರಕ್ಷಿತನೆಂಬ ತಳಾರಂ ಇರುಳ್ ಒಂದೊಡೆ ಇಂದಿಂಗೆ ನೀಂ ಪೋಗೆಂದು ನುಡಿಯುತ್ತಿರ್ದನ್ನೆಗಂ ಮಹಾಮಂತ್ರಿಯುಮರಸನಪ್ಪುದುಮಂ ಪೃಥುವೆಂಬನಲ್ಲಿಗೆ ಬಂ ತಳಾರನಂ ಮಂದಸಿನೊಳಿಟ್ಟುತ್ತಲವಾಲೆ ಪೃಥುವನೆಂದಳ್ ಎನ್ನ ನಕ್ಷತ್ರಾಭರಣಮುಂ ನಿನ್ನ ತಂಗೆ ಸತ್ಯವತಿ ಗುಪ್ತಿಕೆ ತಂದೆಯಿಕ್ಕೆಂದೊಡೆ ತಂದಪೆನೆಂದು ನುಡಿದು ಪೋಗಿ ಮಱುದಿವಸಂ ಬೇಡಿಯಟ್ಟಿದೊಡೆ ವ್ರತಂಗೊಂಡುದನಱಿದು ಮುಳಿದು ಕುಡದಿರೆ ಗುಣಪಾಲಂಗಱಿಪಿದೊಡೆ ಅರಸಂ ಪೃಥುವಂ ಕಳಕಳಿದು ಕಳಿಯಿಕುಡದಿರೆ ಮಂದಸಿನೊಳಿರ್ದ ತಳಾರನ ಸಾಕ್ಷಿಯುಮಿಯುಸಿದೊಡಂ ಮತ್ತಮಿಕ್ಕೆನೆ ಸತ್ಯವತಿ ತನ್ನಾಭರಣಮುಂ ಕುಡೆ ಮುಳಿದರಸಂ ಆ ಪೃಥುವಂ ಕೊಲಲ್ ಪೇಳ್ವುದುಂ ಅಪ್ರಸ್ತಾವದೊಳ್ ಕುಬೇರಪ್ರಿಯಂ ಬಂದು ಮುನ್ನೊಮ್ಮೆಯಾಗ ಹಸ್ತಿಮುನಿಪತಿಗಳ್ ಪಿಡುವ ಧರ್ಮಶಾಸ್ತ್ರಮುಮಂ

1 ಗ. ಪ. ನಟ್ಟುವನಾಳಗಳಯ್ಯಂ.

ಕೇಳ್ದು ಪೂರ್ವಭವಮಂ ನೆನೆದು ಸಾಂಸಕಪಳಮ[1] ನೊಲ್ಲದಿರೆ ಒಂದು ಉಪಾಯದಿಂ ಸಾಸಱಿದು ಬ್ರಾಹ್ಮಣನುಪ್ಪು ಕವಳಮಂ ಕುಡೆಕೊಂಡೊಡೆ ನಿನಗೆ ಮೆಚ್ಚುಗೊಟ್ಟೆ ರಾ ಮೆಚ್ಚಿಂಗೀತನಂ ಕಾಪೆಂದು ಕಂಪನಾಪೃಥುಪಂ[2] ಪ್ರಮದವನದೊಳ್ ಕ್ಷಿತಿಪನೆಂಬ ವಿದ್ಯಾಧರನಲ್ಲಿ ಕಾಮರೂಪ ಮುದ್ರಿಕೆಯುಂ ಪಡೆದು ತನ್ನ ತನ್ನಂ ನಮಿಸಿನ ಕಯ್ಯೊಳ್ ಕೊಟ್ಟನಿಂ ಸೆಟ್ಟಿಯು ರೂಪುಗೊಂಡುಪೋಗಿ ಸತ್ಯಪತಿಯ ಕೆಲದೊಳ್ ಕಾವಳದೊಳ್ ನುಡಿಯುತ್ತಮಿರೆಂದು ಅಟ್ಟಿತಾನು ಪುರಸನಂ ಕಂಡು ಮದನಾಭಿಲಾಷದಿಂ ಬಂದನೆಂದ ಪಿತಾರದಿಂದ ರಸಂ ಕುಬೇರಪ್ರಿಯನಂ ಪಿಡಿನೆ ಕೊಲ್ಲೆಂದು ಪೃಥುಪಂಗೆ ಬೆಸವೇೞಿಸಿಟ್ಟಿಯು ಮದೊಂದು ಮಸಣಯಿದೆ ಶುಭಪರಿಣಾಮದಿಂ ತನ್ನ ಮನೆಯೊಳ್ ಪ್ರತಿಮಾ ಯೋಗದೊಳಿರ್ದನಂ ರಾತ್ರಿಮಾಸಕ್ಕೆ ತಪ್ಪಿದನೆಂದು ಪೊಱಕ್ಕೆ[3] ಮಸಣಯೆಸಾರಿಪರೀತವನಕ್ಕು ಯಾವರಕ್ಷಿತಂಗೆ ಕೊಲಲೆಂದಪ್ಪುಯಿಸಿದೊಡೆಅಂಗೋಪಾಂಗಂಗಳನಿಱಿದೊಡೆಲ್ಲ ಮಲ್ಲಿಗೆಗಾಭರಣವಾಗೆ ಪೊಱಪೊಳಗುಂ ಪೊಱಗುಂ ಮಹೋತ್ಪಾತಂಗಳಾದೊಡೆ ಅರಸನುಂ ಪುರಜನಮುಂ ಭಯಸ್ಥರಾಗಿ ಶೀಲಾಲಂಕಾರನಪ್ಪ ಸೆಟ್ಟಿಯನೆ ಶರಣ್ಬೊಕ್ಕರ್ ನಗರಾಸೆಟ್ಟಿಯು ಕುಸಗ್ಗೆನಿಂ ಪಿಂಗೆ ನೇಮಕರೆಲ್ಲ ಮಾತನಶೀಲ ಪ್ರಭಾವಮುಂ ಬಣ್ಣಿಸೆ ಒಂದೆಲ್ಲರುಂ ತಾಳ್ದೞಗಿ ನೀಮೆಮ್ಮಂ ಪರೀಕ್ಷಿಸದೆಗೆಯ್ದಪರಾಧಮಂ ಕ್ಷಮಿಯಿಸುವುದೆನೆ ಕುಬೇರಪ್ರಿಯನಿಂತೆನ್ಗು ಪೂರ್ವೋಪಾರ್ಜಿತ ದುಷ್ಕರ್ಮ ಪರಿಪಾಕದಿನಾದುದಕ್ಕೇನುಂ ವಿಷಾದಂಗೆಯ್ಯದಿರಿ ಮೆಂದು ಅವರನಾದರಿಸಿ ಪೊಱಲಂ ಪೊಕ್ಕು ಸುಖಮಿರ್ದು ಕೆಲವು ದಿವಸದಿಂ ಗುಣಪಾಲನಮಗಂ ವಸುಪಾಲಂಗೆ ಸೆಟ್ಟಿಯ ಮಗಳ್ ವಾರಿಷೇಣೆಯಿಂ ಮದುವೆಯಂಮಾಡಿ ಮತ್ತೊಂದು ದಿವಸಂ ಗುಣಪಾಲನಾಸ್ಥಾನದೊಳಿರ್ದು ಧರ್ಮಾರ್ಥ ಕಾಮ ಮೋಕ್ಷಂಗಳ್ ಪರಸ್ಪರ ವಿರುದ್ಧಂಗಳಪ್ಪುವಲ್ಲೆಂದು ಸೆಟ್ಟಿಯುಂ ಬೆಸಗೊಳೆ ಧರ್ಮಾರ್ಥ ಕಾಮಮೋಕ್ಷಂಗಳನುಭವಿಸಲ್ವೇಳ್ಕುಂ ಸಮ್ಯಗ್ದೃಷ್ಟಿಗೆ ಪರಸ್ಪರಾನುಕೂಲಂಗಳ್[4] ಮಿಥ್ಯಾದೃಷ್ಟಿಗೆ ವಿರುದ್ಧತ್ವದಿಂ ಪ್ರತಿಕೂಲಂ ಎಂತೆಂದೊಡೆ"

ಅಯೋ॥ ಧರ್ಮಾರ್ಥ ಕಾಮಮೋಕ್ಷಾಃ
ಸಮ್ಯಗ್ದೃಷ್ಟಿಷು ಪರಸ್ಪರಾನುಗುಣಾಃ
ಸಂಸಾರ ಹೇತು ಭೂತಾ
ಮಿಥ್ಯಾದೃಷ್ಟಿಷು ವಿರುದ್ಧತ್ವಾತ್ ॥

ಎಂಬುದು ಪುರಸಂ ಮೆಚ್ಚಿದೆಂ ಬೇಡಿಕೊಳ್ಳಮೆಂಬುದುಂ ಕುಬೇರ ಪ್ರಿಯನೆನಗೇಂದುಂ ಸಾವಿಲ್ಲದಂತು ಮಾಳ್ಪುದೆಂದೊಡೆ ಅರಸನ ಶಕ್ಯಮಾಗದೊಡೆ ಅದಂ ಪಡೆವ ಉಪಾಯಮನಾನೆ ಬಲ್ಲೆಂ ನಿನ್ನಂ ಬೇಡಿಮೆಂದೊಡೆ ಅರಸನುಂ ಗೃಹತ್ಯಾಗಂಗೆಯ್ವಾತ್ ಬಗೆದು ತನ್ನ ಮಕ್ಕಳ್ ಸ್ವತ್ತರೆಂದು ಚಿಂತಿಸುವ ಪ್ರಸ್ತಾವದೊಳ್ ನೆಲಕ್ಕೆ ಬಿಱಿಪ್ಪಾಡೆದ ಸಲ್ಲಿಸು ತತ್ತ್ರಿಯೊಳಗಿರ್ದ ಮಱಿಕೆಲ್ಗೊಳದ್ದ ಮತ್ಸ್ಯಕಮಂ

1 ಗ. ಪ. ಸಾಂಸಪಿಂಡನುಂ. 2 ಪಾ. ಕಂದನ ಪೃಥುವಂ. 3 ಪ. ೦ ಕ್ಷೆಕೆಂಗೆ.
4 ಪ. ಪ್ರತಿಕೂಲಂಗಳ್.

ಪಿಡಿದು ಕೊಳ್ವುದಂ ಕಂಡೆಲ್ಲಾ ಪ್ರಾಣಿಗಳು ಮುಪದೇಶಮಿಲ್ಲದೆ ಜೀವಿಕೋಪಾಯ ಮನಾಹಾರಾದಿ ಸಂಜ್ಞೋತ್ಕರ್ಷದಿಂ ತಾಮೆ ಬಲ್ಲುವೆಂದು ವಸುಪಾಲ ಶ್ರೀಪಾಲರಿನಧಿರಾಜ ಯುವರಾಜಪದವಿಯೊಳ್ ನಿರಿಸಿ ಗುಣಪಾಲಂ ಕುಬೇರಪ್ರಿಯಂ ಮೊದಲಾಗೆ ಪಲಂಬರುಂ ಬೆರಸು ಸಂಯಮಮುಮಂ ಕೈಕೊಂಡರ್ ಅದಱಿನಂದಾ ಕುಬೇರಪ್ರಿಯನ ವ್ರತದ ಫಲಮಂ ಕಂಡು ಆನು ಮಹಿಂಸಾವ್ರತಮಂ ಕೈಕೊಂಡೆಂ, ಅದಱಿಂ ನಿನ್ನಂ ಹಿಂಸೆಗೆಯ್ವ ನಿಲ್ಲೆಂದು ತಳಾರಂ ವಿದ್ಯುದ್ವೇಗನಂ ಪ್ರತಿಬೋಧಿಸಿದೊಡಾತನುಂ ತನ್ನಗೆಯ್ದ ದುಶ್ಚರಿತಕ್ಕೆ ಭಯಸ್ಥನಾದೊನೆಂದು ಭೀಮಸಾಧುಗಳ್ ಹಿರಣ್ಯವರ್ಮ ಹರದೇವಂಗಂ ಪ್ರಭಾವತೀ ಹರದೇವಿಗಂ ಪೇೞ್ದು ಮತ್ತಮಿಂತೆಂದರ್-

ಶ್ರೀಪಾಲ ಚಕ್ರಿಯ ಕಥೆ. ಮೃಣಾಳವತಿಯೊಳ್ ಭವದೇವನಾದಂದು ರತಿವೇಗೆ ಸುಕಾಂತರೊಳ್ ಬದ್ಧವೈರನಾಗಿ ಕಪೋತಂಗಳಾದ ಭವದೊಳ್ ಮಾರ್ಜಾಲನಾಗಿ ಕೊಂದು ಖೇಚರಜನ್ಮದೊಳ್ ವಿದ್ಯುದ್ವೇಗನಾಗಿ ಮಹೋಪಸರ್ಗಮನವರ್ಗೆ ಮಾಡಿ ನರಕದುಃಖಮನುಂಡು ಬಂದು ನೀನಿಲ್ಲಿ ಪುಟ್ಟಿದೆಯೆಂದು ಜಿನಪತಿಗಳೆನಗೆ ಬೆಸಸಿದರ್ ಆನುಮಸ್ತ ಜನ್ಮಾಂತರ ಮನಱಿದೆನೆಂಬುದುಂ ಅದಂ ಕೇಳ್ದು ನೀಮುಂ ಕೊಲೆ ಸತ್ತವರೆ ನಾವೆಂದಱಿವಿನಿಶ್ಶಲ್ಯಂಗೆಯ್ದು ಬಂದಿಸಿಪೋದರೆಂದು ಸುಲೋಚನೆ ಜಯಕುಮಾರಂಗೆ ಪೇೞ್ದು ಮತ್ತ ಮಿಂತೆಂದಳ್, ಒಂದು ದಿವಸಂ ಭೀಮಸಾಧುಗಳ್ ಪುಂಡರೀಕಿಣಿಯ ಶಿವಂಕರೋದ್ಯಾನದೊಳ್ ಕೇವಳಪೂಜೆಯ ಗೆಯ್ದು ಸ್ವರ್ಗದ ನಾಲ್ವರ್ ದೇವಿಯರ್ ಬಂದು ಬಂದಿಸಿ ಧರ್ಮಶ್ರವಣಾನಂತರ ಮಿಂತೆಂದರ್, ಎಮ್ಮ ಕರ್ಮ ವಶದಿಂ ಪತಿಯಿಲ್ಲದಿರ್ದೆ ಮೆಮಗಾವೊಂ ಪತಿಯಕ್ಕುಂ ಬೆಸಸಿಮೆನೆ ಭೀಮಕೇವಲಿಗಳ್ ಇಂತೆಂದು ಬೆಸಸಿದರ್ ಈ ಪೊೞಲೊಳ್ ಸುರದೇವನೆಂಬೊಂ ಬೊಜಗನಾತಂಗೆ ವಸುಷೇಣೆಯುಂ ವಸುಂಧರೆಯುಂ ಧಾರಿಣಿಯುಂ ಪೃಥ್ವಿಯುಮೆಂಬ ನಾಲ್ವರ್ ಭಾರ್ಯೆಯರ್, ಅವರ ಚೇಟಿಕೆಯರ್ ಶ್ರೀಮತಿಯುಂ ವಿಶೋಕೆಯುಂ ವಿಮಳೆಯುಂ ವಸಂತೆಯುಮೆಂಬರ್, ಅವರೆಲ್ಲಂ ಒಂದು ದಿವಸಂ ಉದ್ಯಾನವನದೊಳ್ ಯತಿವರರ ಸಮೀಪದೊಳ್ ನಾನಾ ದಿವ್ರತಂಗಳಂ ಕೈಕೊಂಡು ತತ್ಫಲದಿಂ ಅಚ್ಯುತಕಲ್ಪದೊಳ್ ಪ್ರತೀಂದ್ರಂಗೆ ರತಿಷೇಣೆಯುಂ ಸುಸೀಮೆಯುಂ ಸುಖಾವತಿಯುಂ ಸುಭಗೆಯುಮೆಂಬ ದೇವಿಯರಾದರ್. ನಿಮ್ಮ ಚೇಟಿಕೆಯರುಂ ಚಿತ್ರಸೇನೆಯುಂ ಚಿತ್ರವೇಗೆಯುಂ ಧನವತಿಯುಂ ಧನಶ್ರೀಯುಮೆಂಬ ವಾನವ್ಯಂತರಕನ್ಯೆಯರಾದರ್ ಮುಂಪೇೞ್ದ ಸುರದೇವಂ ಪಿಂಗಳಕನೆಂಬೊಂ ರಾಕ್ಷಸನಾಗಿ ದೋಷದಿಂ ಸಂಕಲೆಯೊಳಿರ್ದ ಸುರದೇವನ ತಾಯುಮರಸನ ಮಗಳಾಗಿ ಪುಟ್ಟಿ ಶ್ರೀಪಾಲಕುಮಾರಂಗೆ ಕುಡುವಾಗಳ್ಳರ ಸೆಱೆಗಳುಂ ಬಿಡುವಾಗಳ್ ಪಿಂಗಳಕನಸೆಱೆಯುಂ ಬಿಟ್ಟೊಡೆ ಜಿತನುಂ ಸಂನ್ಯಾಸಂಗೆಯ್ದು ಬುಧ ವಿಮಾನದೊಳ್ ಪುಟ್ಟಿದ ದೇವನಿಲ್ಲಿಗೀಗಳೆ ಬಂದು ನಿಮಗೆ ಪತಿಯಕ್ಕುಮೆಂಬುದಂ ಅಸ್ಥಿತಿಯೊಳೆಬಂದು ಪತಿಪಾದಂ. ಅವಾನ ವ್ಯಂತರ ಕನ್ಯೆಯರುಂ ಎಮಗಾವೊಂ ಸ್ವಾಮಿಯಕ್ಕುಮೆಂದು ಬೆಸಗೊಳೆ ಮುಂಪೇೞ್ದ ಪಿಂಗಳಕನ ಮಗಂ ಅತಿಪಿಂಗಳಂ ಸಂನ್ಯಸನ ದೊಳಿರ್ದನಾತನೆನಿಮಗೆ ಪತಿಯಕ್ಕುಮೆನೆ ನಾಲ್ವರುಂ ಪಾತನಂ ಪೋಗಿಪೂಜಿಸುತ್ತಿರ್ದರ್. ಅಲ್ಲಿರತಿಕುಳನೆಂಬೊನ ಮದನ ಸಮ್ಮೋಹನವ್ಯತಿಕರಮುಮಂ ಆತನ ತಂದೆ ಮಣಿನಾಗದತ್ತನ ವೃತ್ತಾಂತಮುಮಂ ಸುಕೇತುವ ಕಥಾಪ್ರಪಂಚಮುಮಂ ಕೇಳ್ದಿರ್ದ. ಅಂತಾತಂ ದೇವ

ನಾದಂದು ಆ ನಾಲ್ವರುಂ ದೇವಿಯರಾದರೆಂದು ದೃಷ್ಟಶ್ರುತಮಪ್ಪುವಂ ಸುಲೋಚನೆ ಪೇೞೆ ಕುರುಪತಿ ಮತ್ತಮೇನಾನುಂ ಕಂಡ ಕೇಳ್ದ ಕಥೆಗಳಂ ಪೇೞಿಂಬುದುಂ, ಶ್ರೀಪಾಲವಸುಪಾಲಾಖ್ಯಾನಮನಿಂತೆಂದು ಪೇೞ್ದಳ್.

ಶ್ರೀಪಾಲವಸುಪಾಲಾಖ್ಯಾನಂ ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯುಂ ಶ್ರೀಪಾಲನುಂ ವಸುಪಾಲನು ಮಾಳುತ್ತಿರೆ ವಸುಪಾಲನ ತಾಯ್ ಕುಬೇರಶ್ರೀಗೆ ವನಪಾಲಕರ್ ಬಂದು ಸುರಗಿರಿಯೊಳ್ ಗುಣಪಾಲಭಟ್ಟಾರಕರ್ಗೆ ಕೇವಲಜ್ಞಾನೋತ್ಪತ್ತಿಯಾದುದೆಂದು ಬಿನ್ನಪಂಗೆಯ್ದೊಡೆ ಏೞಡಿಯುಂ ನಡೆದತ್ತ ಮೊಗದಿರ್ದು ಬಂದಿಸಿ ವನಪಾಲಕಂಗೆ ಮೆಚ್ಚುಗೊಟ್ಟು ಘೋಷಣಾಪೂರ್ವಕಮೆಲ್ಲರುಮಂ ಬರ್ಪಂತು ಬೆಸಸಿ ಕುಬೇರಶ್ರೀಯುಂ ಮುನ್ನಮೆ ಪೋಗಿ ದೇವರಂ ಬಂದಿಸುತ್ತಿರ್ಪನ್ನೆಗಂ ಶ್ರೀಪಾಲವಸುಪಾಲರ್ ಮಹಾವಿಭೂತಿಯಿಂ ಬಂದು ಜಗತ್ಪಾಲ ಚಕ್ರವರ್ತಿ ದೀಕ್ಷೆಗೊಂಡ ಪ್ರಮದವನಜಿನಾಲಯದ ಮುಂದಣ ಯಕ್ಷಪ್ರತಿಮೆಯ ಕೆಲದಾಲದ ಮರದಡಿಯೊಳಿರ್ಪ ರಾಟಮಂ ಕಂಡು ಶ್ರೀಪಾಲಕುಮಾರನೊದಂ, ಈ ಪುರುಷಂ ಸ್ತ್ರೀವೇಷಧರನಲ್ಲದಂದುಂ ಈ ಸ್ತ್ರೀ ಪುರುಷವೇಷಧಾರಿಣಿಯಲ್ಲದಂದುಂ ಇವರ ಆಟಮನೇ ಪೇೞ್ವುದೆಂದು [1] ಉಪಲಕ್ಷಿಸಲೊಡಂ ಪುರುಷವೇಷದೊಳಾಡುತಿರ್ದ ಮದನವೇಗೆ ಮೂರ್ಛೆವೋಪುದುಂ ಎೞ್ಚಱಿಸೆ ಶ್ರೀಪಾಲ ನಿಂದಿಂತೇಕೆನೆ ಪ್ರಿಯರತಿ ಪೇೞಲ್ ತಗುಳ್ದಳ್.

ಸುರಮ್ಯವಿಷಯದ ಶ್ರೀಪುರಮನಾಳ್ವಂ ಶ್ರೀಧರನೆಂಬರಸಂಗಂ ಶ್ರೀಮತಿದೇವಿಗಂ ಜಯಮತಿಯೆಂಬ ಮಗಳಾದಳ್, ಆಕೆಯ ಪುಟ್ಟಿದೆಂದು ನೈಮಿತ್ತಕರ್ ಈಕೆ ಚಕ್ರವರ್ತಿಗೆ ಮಹಾದೇವಿಯಕ್ಕುಮೆಂದೊಡೆ ಆ ನೈಮಿತ್ತಕರ್ ಪೇೞ್ದಂದದೊಳ್ ಪರೀಕ್ಷಿಸಲೆಂದು ನಟನಟೀಭೇದದಿನಱಿಸುತ್ತುಂ ಬಂದು ಕಂಡೆ ಮಾಕೆ ಯೆನ್ನ ಮಗಳ್ ಈ ನಟಂ ವಾಸವನೆಂಬೊಂ ಎಂದೊಡೆ ಅರಸಂ ಪ್ರಿಯರತಿಗೆ ಮೆಚ್ಚುಗೊಟ್ಟು ಸುರಗಿರಿಗೆ ನಿಜಗುರುವಂದನಾರ್ಥಂ ಬರುತ್ತುಮೊರ್ವನೊಂದಶ್ವಮಂ ತಂದುಕೊಟ್ಟೊಡೆ ಅದನೇಱಿದೊಡೆ ಅದು ಗಗನತಳಕ್ಕೊಗೆದು ತನ್ನ ವಿದ್ಯಾಧರರೂಪಮಂ ತೋಱಿಮುಂ ಪೇೞ್ದ ಯಕ್ಷಂ ಬಂದು ಪೊಯ್ಯೆ ಬಗ್ಗಿಸಿದೊಡೆ ಅಶನಿವೇಗ ಖೇಚರಂ ಪಟ್ಟುಪೋಗೆ ಯಕ್ಷಂ ಪರ್ಣಲಘುವಿದ್ಯೆಯಿಂ ರತ್ನಾವರ್ತಗಿರಿಯ ಮೇಲೆ ತಂದಿೞಿಪಿ ಪಲವುಂ ಲಾಭಂಗಳನಿನಿತ ನಿನ್ನೆಯ್ದುಗುಮೆಂದು ಯಕ್ಷಂ ಪೋದಂ, ಇತ್ತ ವಸುಪಾಲನುಂ ಗುಣಪಾಲಜಿನರಂ ಬಂದಿಸಿ ತದುಪದೇಶದಿಂ ಸಪ್ತರಾತ್ರಕ್ಕೆ ನಿಜಾನುಜನ ಬರವನಱಿದು ಸಂತೋಷದಿನಿರ್ದ್ದಂ. ಇತ್ತ ಕುಮಾರನೊಂದು ಕೊಳದೊಳ್ ಮಿಂದು ವನಫಲಂಗಳಂ ತಿಂದು ಪರಿಶ್ರಮಮ ನಾಱಿಸುತ್ತಿರ್ಪನ್ನೆಗಂ ತತ್ಸಮೀಪದ ಸುಧಾಗೃಹದಿಂ ರಾಜಕನ್ನಿಕೆಯರಂತಱುವರ್ ಬಂದು ಈತಂ ರಾಜಪುತ್ರನೆಂದಱಿದು ತಮ್ಮ ವೃತ್ತಾಂತಮನಿಂತೆಂದಱಿಪಿದರ್.

ಸಿಂಹಪುರಮನಾಳ್ವ ನರಪಾಲಂಗಂ ಗುಣಪಾಲನತಂಗೆ ರಾಜಶ್ರೀಗಂ ಪುಟ್ಟಿದೆವಾವುಂ ರತಿಕಾಂತೆ, ರತಿಸೇನೆ, ರತಿ, ರತಿಪ್ರಭೆ, ಜಯಾವತಿ, ಜಯದತ್ತೆ ಎಂಬಱುವರುಮನೆಮ್ಮಂ ಅಶನಿವೇಗಂ ಭೌಮವಿಹಾರದೊಳ್ ಕಂಡಳಿಪಿದೊಡೆ ಆಮುಂ ಶ್ರೀಪಾಲಂಗಲ್ಲದೆ ಪೆಂಡಿರಾಗೆವೆಂದೊಡೆಮ್ಮಂ ಮುಳಿದೀ ಚಾರಣಕೂಟದೊಳ್ ಸೆಱೆಯನಿಟ್ಟು ಶ್ರೀ

1 ಫ. ಪರೀಕ್ಷಿಸಲೊಡ...

ಪಾಲನ ಕುಮಾರನಂ ಕೊಲಲೆಂದು ಪೋದನೆಂಬನ್ನೆಗಂ ಅಶನಿವೇಗನ ತಂಗೆ ವಿದ್ಯುದ್ವೇಗೆ ಯೆಂಬೊಳ್ ತಮ್ಮಣ್ಣನ ಬೆಸದಿಂ ಕೊಲಲೆಂದು ಬಂದು ಕುಮಾರನಂ ಕಾಣಲೊಡ ಮಾಸಕ್ತೆಯಾಗಿ ನಿಜವೃತ್ತಾಂತ ಮನಿಂತೆಂದಱಿಪಿದಳ್. ಕುಂತಳಪುರಮನಾಳ್ವ ಸ್ತನಿತವೇಗಂಗಂ ಜ್ಯೋತಿರ್ವೇಗೆಗಂ ಅಶನಿವೇಗನೆಂಬ ಮಗನೆಮ್ಮಣ್ಣನಾತಂ ನಿನ್ನಲ್ಲಿಗೆ ಬಂದು ಕೊಲಲೆನ್ನ ನಟ್ಟಿದೊಡೆ ಇಲ್ಲಿಗೆ ಬಂದು ನಿನ್ನಂ ಕಂಡು ಮೋಹಿತೆ ನೀಂ ಸೌಧಗೃಹಕ್ಕೆ ಪೋಪಮೆನೆ ಕುಮಾರನೊಲ್ಲದಿರೆ ವಿದ್ಯೆಯಿಂ ಸೌಧಭವನಮನಲ್ಲಿಗೆ ನಿರ್ಮಿಸಿ ಮುನ್ನಿನಱಿವರುಂ ರಾಜಕನ್ನಿಕೆಯರ್ ನೆರಸಿರ್ದನಂ ಅನಂಗಪತಾಕೆಯೆಂಬೊಳ್ ವಿದ್ಯುದ್ವೇಗೆಯು ಕೇಳ್ದು ಬಂದು ಕುಮಾರಂಗಿಂತೆಂದು ಬಿನ್ನಪಂಗೆಯ್ದಳ್, ಭವದ್ಗುರುಗಳಪ್ಪ ಗುಣಪಾಲ ಜಿನರಪಕ್ಷದೊಳ್ ಜ್ಯೋತಿರ್ವೇಗೆಯು ತಂದೆಗೆ[1] ತನ್ನಳಿಯನಂ ಶ್ರೀಪಾಲಕುಮಾರನಂ ಸ್ತನಿತವೇಗನಾ[2] ಉಪಾಯದೊಳಮುಱಿಸುವೆನೆಂದು ಕುಬೇರಶ್ರೀ ಬೆಸಸೆ ತನ್ನ ಮಗನಶನಿವೇಗಂ ತಂದನೆಂಬುದುಂ ಸ್ತನಿತವೇಗನುಂ ಬಂಧುಗಳುಮಱಿದು ಉತ್ತರಶ್ರೇಣಿಯನಾಳ್ವನಿಲವೇಗನೊಳ್ ತಮಗೆ ಪಗೆಯಪ್ಪುದನಾಲೋಚಿಸಿ ಕುಮಾರನಂ ಪ್ರಯತ್ನದಿಂ ಕೊಂಡು ಬಪ್ಪುದೆನೆ ಬಂದೆ ನೀಂ ವಿದ್ಯುದ್ವೇಗೆಯುಂ ನಿನ್ನಂ ಕಂಡು ಸೋಲ್ತಳ್ ಈಕೆಯಂ ಕೈಕೊಳ್ವುದೆನೆ ಶ್ರೀಪಾಲಕುಮಾರನೆಂದಂ, ತಾಯುಂ ತಂದೆಯುಮುದಕ ಕೊಟ್ಟೊಡಲ್ಲದೆ ಪೆಱರಂ ಪರಿಗ್ರಹಿಸೆನೆಂತು ಉಪನಯನಕಾಲದೊಳ್ ಗುರುಸಮೀಪದೊಳ್ ವ್ರತಮಂ ಕೈಕೊಂಡೆನೆನೆ ಕುಮಾರನ ಮನಮಂ ಮುನ್ನಿನಱಿವರುಂ ತಾನುಂ ರಂಜಿಸಲಾರದೆ ವಿದ್ಯುದ್ವೇಗೆ ಸೌಧಭವನದೊಳ್ ಕುಮಾರನಂ ರತ್ನಕಂಬಳಾವೃತನಂ ಹರ್ಮ್ಯತಳಗತನಂ ಮಾಡಿ ಬೀತಿಯ(?)ಬಾಗಿಲಂ ಕೆತ್ತು ತನ್ನ ಗುರುಜನಮಂ ತರಲೆಂದು ಪೋದಳ್. ಅನ್ನೆಗಮಿತ್ತ ಸುಪ್ತನಾಗಿರ್ದ ಕುಮಾರನಂ ಪಿತೃತಾಶಂಕೆಯಿಂ ಭೇರುಂಡಪಕ್ಷಿ ಕೊಂಡುಯ್ದು ಸಿದ್ಧಕೂಟ ಜಿನಾಲಯದ ಚೈತ್ಯವೃಕ್ಷದ ಮೇಗಿಕ್ಕಿದೊಡೆಚ್ಚಱಿಸಚೇತನರಾಗಿರ್ಪರಂ ತಿನ್ನದ ಕಾರಣದಿಂ ಭೇರುಂಡನುಂ ಬಿಸುಟು ಪೋಯ್ತು, ಕುಮಾರನುಂ ಮರದಿಂದಿೞಿದು ಕೊಳದೊಳ್ಮಿಂದು ಸುಗಂಧ ಪುಷ್ಪಂಗಳಂ ಕೊಂಡುಯ್ದು ಜಿನಭವನಮಂ ತ್ರಿಃಪ್ರದಕ್ಷಿಣಂಗೆಯ್ವಾಗಳ್ ತಮ್ಮಂ ತಾವೆ ಪಡಿತೆಱೆಯೆ ಸಂತೋಷದಿಂ ದೇವರನರ್ಚಿಸಿ ಬಂದಿಸಿ ಬಂದಿರ್ಪನ್ನೆಗಂ ಓರ್ವ ವಿದ್ಯಾಧರಂ ಬಂದೆತ್ತಿಕೊಂಡೊಯ್ದು ಮನೋಹರವನದ ಶಿವಂಕರ ಪುರಮನಾಳ್ವನಿಲವೇಗ ವಿದ್ಯಾಧರ ರಾಜಂಗಂ ಕಾಂತಾವತೀದೇವಿಗಂ ಪುಟ್ಟಿದ ಭೋಗವತಿಯೆಂಬೊಳಂ ಆಕಾಶ ಸ್ಫಟಿಕ ಭವನತಳ ಮೃದುಶಯನದೊಳ್ ಪಟ್ಟಿರ್ದಳಂ ತೋಱಿ ಕುಮಾರ ಪೇೞ್ಕೆಯುಮಾವಳೆಂಬುದುಂ ಕುಪಿತ ವಿಷಮ ಭುಜಂಗಿಯೆಂದು ಸರಸಂ ನುಡಿಯೆ ವಿದ್ಯಾಧರನಾ ಕನ್ನೆಯ ತಂದೆಯಲ್ಲಿಗುಯ್ದು ನಿಮ್ಮ ಮಗಳನೀತಂ ವಿಷಮಭುಜಂಗಿಯೆಂದನೆನೆ ಮುಳಿದು ದುರ್ಧರತಪೋಧರ ಮುನಿಜನನಿವಾಸದೊಳೀತನನುಯ್ದುಬಿಸುಟ್ಟುದೆಂಬುದು ಮಾಳ್ಪನ ಬೆಸದೊಳ್ ವಿಜಯಾರ್ಧದುತ್ತರಶ್ರೇಣಿಯ ಮನೋಹರ ನಗರದ ಭೀಷಣಸ್ಮಶಾನದೊಳ್ ಶೀತವೇತಾಳ ವಿದ್ಯೆಯಿಂ ಕುಮಾರನಂ ಜರತೀ ರೂಪಧರನಂ ಮಾಡಿ ಬಿಸುಟುಪೋಪ್ಪುದುಂ

1 ಗ. ತಂಗೆಗೆ 2 ಗ- ತನ್ನ ಸ್ತನಿತವೇಗನಂ

ಒರ್ವಳಸ್ಪೃಶ್ಯ ಕುಲಸಂಭವೆ ತನ್ನಳಿಯನಂ ಗ್ರಾಮ ಮೃಗರೂಪದಿಂ ತನ್ನ ಮಗಳ ಕಾಲ್ಗಳೊಳ್ ಪೊರಳ್ದು ತಿಳಿಸಂತೆ ಮಾಡೆ ಮತ್ತಂ ಪೂರ್ವಸ್ವರೂಪದೊಳಿರ್ದನಂ ಕಂಡು ಕುಮಾರಂ ತನ್ನೊಳ್ ವಿದ್ಯಾಧರರಾದೊರೆಲ್ಲಂ ರೂಪಪರಾವರ್ತ ಸಮರ್ಥರೆಂದು ಬಗೆವನ್ನೆಗಂ ತನ್ನ ಮೆಯ್ಯೊಳ್ ಕೃತಾಂತ ಸೋಪಾನಪಙ್ಕ್ತಿಯಂತಿರ್ದ ತೆರೆಯುಮಂ ಕಾಶಕುಸುಮ ಸನ್ನಿಕಾಶಮಾಗಿರ್ದ ನರೆಯುಮಂ ತೊಟ್ಟನೆ ಕಂಡು ನಾಣ್ಚಿ ವಿಷಣ್ಣನಾಗಿರ್ಪನ್ನೆಗಂ ಮುಂಪೇೞ್ದ ಭೋಗಪತಿಗಳಣ್ಣಂ ಹರಿಕೇತುವೆಂಬೊಂ ಮಹೌಷಧಿ ವಿದ್ಯೆಯಂಸಾಧಿಸೆ[1] ವಿದ್ಯೆ ಮೃತಕರೂಪದೊಳಿರ್ದ ಕುಮಾರನಂ ಕರೆದೆನ್ನ ಬಯಸಿದುದಂ ಶಂಕೆಯಿಲ್ಲದೆ ಕಂಡೆಯೆಂಬುದುಂ ಅದನಾಸ್ಥಿತಿಯೊಳ್ ನೆಗೞ್ ಸರ್ವವ್ಯಾಧಿ ವಿನಾಶಿಯಪ್ಪ ವಿದ್ಯೆ ನಿನ್ನನಾಶ್ರಯಿಸಿದುದೆಂದು ಅತಿಪ್ರೀತಿವಚನಮುಂ ನುಡಿದು ಹರಿಕೇತು ಪೋದಂ.

ಇತ್ತ ಕುಮಾರನುಂ ಪೂರ್ವಸ್ವರೂಪಮುಂ ತಾಳ್ದಿ ಬರುತ್ತುಮೊಂದಾಲದಮರದಡಿಯೊಳಿರ್ದ್ದನೊರ್ವನಂ ಕಂಡು ಈ ಪ್ರದೇಶಮಾವುದೆನೆ ವಿಜಯಾರ್ಧಪರ್ವತದುತ್ತರ ಶ್ರೇಣಿಯ ನೀಳಗಿರಿಯ ದಕ್ಷಿಣ ದಿಗ್ಭಾಗದ ಸುಸೀಮವಿಷಯದ ಮಹಾನಗರದ ಭೂತವನವೆಂಬುದೀಪ್ರದೇಶಂ ಇಲ್ಲಿ ಸಪ್ತಪಾಷಾಣವೆಂಬು ಪೊಳಲ್ ಅದನೊಂದರಮೇಲೊಂದನಡಕಿಲಿಟ್ಟು ನಿಲಿಸಿದಾತಂ ಚಕ್ರವರ್ತಿಯಪ್ಪನೆನೆ ಕುಮಾರನಾಸ್ಥಿತಿಯೊಳೀಱಿಸೆ ಕಂಡು ತತ್ಪುರಾಧಿಪತಿಗೆ ಪೇೞಲಾತಂ ಪೋದಂ, ಇತ್ತ ಕುಮಾರಂ ಸಂಸಾರಶರೀರ ಭೋಗನಿರ್ವೇಗ ಪರಾಯಣನಾಗಿ ಬರುತುಮೊಂದು ಮರದಡಿಯೊಳ್ ಬೃಘತ್ಸಾಕಾರದಿ ನಿರ್ವಕೊಪರ್ವ ವೃದ್ಧಿಯುಂ ಕಂಡು ಪುಷ್ಕಲಾವತೀ ವಿಷಯಕ್ಕೆ ಪೋಪ ಬಟ್ಟೆಯಾವುದೆನೆ ಸಭೋಗಮನದಿ ಸಲ್ಲದಲ್ಲಿಗೆ ಪೋಗಲ್ಬಾರದು ಗವ್ಯೂತಿಶತೋತ್ಸೇಧಮಪ್ಪ ವಿಜಯಾರ್ಧಗಿರಿಯಿಂದಿತ್ತ ಬಿದ್ದಲ್ಲಿಗೆ ಪೋಪಂದಮಾವುದೆಂದು ಮತ್ತಮಿಂತೆಂದಳ್.

ಜಂಬೂದ್ವೀಪದ ವತ್ಸವಿಷಯದ ವಿಜಯಾರ್ಧಗಿರಿಯ ರಾಜಪುರಮನಾಳ್ವ ವಿದ್ಯಾಧರ ಚಕ್ರವರ್ತಿ ಧರಣೀಕಂಪನಂಗಂ ಪ್ರಭಾಕರೀ ದೇವಿಗಂ ಮಗಳೆನಾಂ ಸುಖಾವತಿಯೆನೆಂಬೆಂ, ಜಾತಿ ಕುಲಸಾಧಿತ ವಿದ್ಯಾಕುಮಾರಿಗೆಯೆ ನಾನೊಂದು ದಿವಸಂ ಕಚ್ಛಕಾಕಾವತೀ ವಿಷಯದ ವಿಜಯಾರ್ಧ ಪರ್ವತದ ಮೇಗೆ ಪೋಗುತ್ತುಂ ಅಕಂಪನಮಗಳ್ ಪುಷ್ಪಲೆಯೆಂಬೊಳಂ ಎನ್ನ ಕೆಳದಿಯುಂ ಎನ್ನಲ್ಲಿಗೆ ಬರ್ಪಳಂ ಕಂಡಾಕೆಯ ಕೈಯುಳ್ಳಿರ್ದ ರಕ್ತ ಕಂಬಳ ಮನಿಸನೆಲ್ಲಿ ಪಡೆಯೆಂದೊಡೆ ಇದಾದೇಶ ಕಂಬಳವೆಂಬು ಮದನದಹನ ಸಂತಪ್ತೆಯಾದಳ್ ಅನ್ನೆಗಂ ಪುಷ್ಪಲೆಯುಂ ನೋಡಲ್ ಆಕೆಯ ಕೆಳದಿ ಮದನವತಿಯೆಂಬೊಳ್ ಕಾಂಚನಪುರದಿಂ ಬಂದು ಕಂಬಳದಕಡೆಯೊಳ್ ತಗುಳ್ದಿರ್ದ ರತ್ನಮುದ್ರಿಕೆಯೊಳ್ ಬರೆದ ಶ್ರೀಪಾಲನಾಮಾಕ್ಷರಂಗಳಂ ಕಂಡಾಕೆಯು ಮನಂಗಪರವಶೆಯಾದಳ್ ಅನುಮಾಗಳ್ ಈ ಬರೆದಿರ್ದ ಪೆಸರಾತನೀ ವಿಷಯಕ್ಕೆ ಬಂದ ಕಾರಣಮಾವುದು, ಪುಂಡರೀಕಿಣಿಗೆ ಪೋಗಿ ಸವಿಸ್ತರಮಾರಯ್ವೆನೆಂದು ನಿತ್ಯಮಂಡಿತ ಜಿನಾಲಯದೊಳ್ ದೇವರಂ ಬಂದಿಸಿಕೊಳ್ದೆಂ. ಮತ್ತೆ ಕುಬೇರಶ್ರೀಯೆ ನಿನ್ನ ಪ್ರವಾಸ ವೃತ್ತಾಂತಮನೆನಗೆ ಪೇೞ್ ದೇವನಿನ್ನಂತರದಿಂದು ಬರುತುಂ ವಿದ್ಯಾದ್ವೇಗೆಯುಂ

1 ಗ. ಕೃತಕರೂಪದೊಳಿರ್ದ.

ಕಂಡು ಅಕಪೇಟಿ ನಿಜವಾರ್ತೆಯನಱಿದು ವಿದ್ಯುದ್ವೇಗೆಯನೆಂದೆಂನೀನೇನುಂ ವಿಷಾದಂಗೆಯ್ಯಲ್ವೇಡ, ಕುಮಾರನಂ ತಂದು ನಿನ್ನೊಳ್ ನೆರೆಪುವೆನೆಂದು ಸಂತೈಸಿ ಸಿದ್ಧಕೂಟ ಜಿನಾಲಯದೊಳ್ ಕೃತ ನಮಸ್ಕಾರನಾಗಿದ್ದ ನಿನ್ನಂ ಪುಂಡರೀಕಿಣಿಗುಯ್ಯಲ ಬಂದೆನೆನೆ ಕುಮಾರನೆಂದುಂ, ನೀನೇಕೆ ಜರತಿಯಾದೆಯೆನೆ ನಕ್ಕು ಸುಖಾವತಿನಿನಗೇಕೆ ಮುಪ್ಪಾಯ್ತೆನೆ ನೋಡಿ ತನಗೆ ಮತ್ತಂ ಮುಪ್ಪಾದುದಂ ಕಂಡು ನೀನಿಂತೇಕೆ ಮಾಡಿದೆಯೆನೆ ಸುಖಾವತಿಯೆಂದಳ್, ಪ್ರೊಪ್ಪಿಳೆಯ ಮದನವತಿಯ ಸೋದರದ ಮೈದುನಂ ಧೂಮವೇಗನುಂ ಹರಿವರನು ಮುಂಜವರ್ ನಿನಗೆ ಮುಳಿದುದನಱಿದು ನಿನಗೆ ರೂಪಪರಾವರ್ತನಂ ಮಾಡಿದೆಂ ಎಂದು ತನ್ನ ತಂದ ರಸಾಯನೋಪಮಾನವಾದ ಫಲಂಗಳಂ ಆತನ ಪಸಿವಂಕಿಡಿಸಿ ನಿನ್ನಂ ಪೊತ್ತುಕೊಂಡು ಪೋಪೆನೆನೆ ಸ್ತ್ರೀಯಪ್ಪುದರ್ತ್ತುಯ್ದೊಪೋಪೆನಲ್ಲೆಂ. ಗುರುಸಮಕ್ಷದೊಳ್ ಗೃಹೀತವ್ರತನೆನೆ ಬುದುಂ ಪುರುಷವೇಷದಿಂ ಪೊತ್ತುಕೊಂಡು ಸಿದ್ಧಕೂಟ ಜಿನಾಲಯಮನೈದಿ ಬಂದಿಸಿಪ್ಪನ್ನೆಗಂ ಅಂದಿನ ದಿವಸಮೆ ಭೋಗಾವತಿ ತನ್ನ ಮನೆಗೆ ಚಂದ್ರಂ ಬಂದು ಮಗುಳೆ ಪೋಪುದಂ ಕನಸಂಕಂಡು ದುಸ್ಸ್ವಪ್ನಫಲ ಪ್ರಶಮನಾರ್ಥಂ ಚೈತ್ಯಾಲಯ ಪೂಜೆಗೆ ಕಾಂತವತಿಯುಂ ರತಿವೇಗೆಯುಂ, ಸುವೇಗೆಯುಂ, ಅಮಿತಮತಿಯುಂ, ರತಿಕಾಂತೆಯುಂ, ಚಿತ್ತವೇಗೆಯುಂ, ಪ್ರೊಪ್ಪಿಳೆಯುಂ, ವಿದ್ಯುದ್ವೇಗೆಯುಂ ಮೊದಲಾಗೆ ಪರಿಜನಂ ಬೆರಸು ಬಂದಾಕುಲಕ್ತೆಯರಾಗಿ ದೇವರಂ ಬಂದಿಸುವುದುಮುಂ, ಶಿವಕುಮಾರನೆಂಬೊನವ ಕ್ರಮುಖವಾದೇಶಪುರುಷದರ್ಶನದಿಂ ಸಯ್ತಾದುದುಮಂ ಕಂಡು ಸುಖಾವತಿ ಕುಮಾರನನಲ್ಲಿಂದುಯ್ದುಕಾಮ ರೂಪಮುದ್ರಿಕೆಯುಂ ತನ್ನ ನಾನಾವಿಧ ರೂಪಂಗಳಂ ನೀರೊಳ್ ನೋಡುತ್ತಮಿರ್ಪ ಹರಿವರ ಕುಮಾರನಂ ಕಂಡು ಪಿಡಿದುಯ್ದು ಕಾಳಗುಹೆಯೊಳಿಕ್ಕಿ ದೊಡೆ ಅಲ್ಲಿಪ್ಪರ್ಮಹಾನಾಗಂ ಆತನ ಪುಣ್ಯಪ್ರಭಾವದಿಂ ಅಕಿಂಚಿತ್ಕರನಾಗೆ ನಾಗಶಯನದೊಳ್ ಪಟ್ಟಿರ್ದುಮಱುದಿವಸಂ ಆದೇಶ ಪುರುಷಂ ವೃದ್ಧರೂಪದಿಂ ಪೊಱಮಡುವುದಂ ಪರೀಕ್ಷಕರ್ ಪೇಳೆ ಧೂಮವೇಗಂ ಬಂದು ಚಂದ್ರ ಪುರಶ್ಮಶಾನದೊಳ್ ಕುಮಾರಂಗೆ ನಾನಾವಿಧಾಯುಧಂಗಳಿಂ ಉಪಸರ್ಗಂ ಮಾಡಿದೊಡೆಲ್ಲಮು ಕಿಂಚಿತ್ಕರಂಗಳಾದುವು. ಅನ್ನೆಗಂ ಅತಿಬಳನೆಂಬ ಖೇಚರಂ ತನ್ನರಸಿ ಚಿತ್ರಸೇನೆಯೊಳ್ ತನ್ನಾಳೆ ಪೊಲ್ಲಕೆಯ್ದೊಡವನಂ ಸುಟ್ಟಚಿತಾಗ್ನಿಯೊಳ್ ಕುಮಾರನ ನಿಕ್ಕುವುದುಂ ತನಗೆ ಸಾಧ್ಯಮಾದ ಮಹೌಷಧಿ ಪ್ರಭಾವದಿಂ ಜ್ವಲನ ಶಕ್ತಿಕಿಡೆ ಪೊಱಮಟ್ಟ ಕುಮಾರನಂ ಕಂಡು ಆತನಂ ಮುಟ್ಟಿದ ಕಿಚ್ಚಿಂಗೆ ದಹನ ಶಕ್ತಿಯಿಲ್ಲೆಂಬುದನಱಿದು ಅಲ್ಲಿ ಮುನ್ನ ಸತ್ತ ಬಂಟನ ಪೆಂಡಿತಿ ನಿರ್ದೋಷಿಯೆನ್ನ ಗಂಡನಂ ಕೆಮ್ಮನೆ ಕೊಂದಿರೆಂದು ಶುದ್ಧ ಪ್ರಕಾಶನಿಮಿತ್ತಂ ಆ ಚಿತಾಗ್ನಿಯಂ ಪೊಕ್ಕು ಪೊಱಮಡೆ ಕುಮಾರಂ ಕಂಡು ಯುವತಿಯ ಮಾಯಾವಚನ ಮಾರ್ಗಮಭೇದ್ಯಮೆಂದು ಚೋದ್ಯಂ ಬಟ್ಟುಬರುತುಮಾ ಪೊಳಲನಾಳ್ವ ವಿಮಲಸೇನನ ಮಗಳ್ ಕಮಲವತಿಯ ಕಾಮುಗ್ರಹಮಂ ಕಳಿಪಲ್ಲಿ ನೆರೆದ ಜನದೊಡನೆ ಪೊಕ್ಕು ಕುಮಾರಂ ಕಳೆದೊಡಾದೇಶ ಪುರುಷನೆಂದಱಿದು ತನ್ನ ಮಗಳಂ ಕುಡುವೆನೆಂಬೊಡಾತ ನೊಲ್ಲದಿರೆ ವಾರಿಷೇಣನೆಂಬ ಮಗನಂ ಕುಮಾರಂಗೆ ನೆರಂ ಪೇಳ್ವುದನಂ ಬಂಧುಗಳ ನೆಯ್ದುವೆಂದು ಕಳಿಪೆ ವಿಮಳಪುರೋದ್ಯಾನದೊಳ್ ತೃಷಿತನಾದ ಕುಮಾರನ ನಿರಿಸಿ ನೀರಂ ತರಲ್ ಪೋದಂ. ಇತ್ತ ಸುಖಾವತಿಗುಜ್ಜೆಯಾಗಿ ಬಂದು ಪುಷ್ಪ ಮಾಲೆಯ

ಮೇಲಿಕ್ಕಿ ತೃಷೆಯುಂ ಕಳೆದು ಕುಮಾರಂಗೆ ಕನ್ಯಾರೂಪಮಂ ಮಾಡಿದೊಡೆ ಆ ಪೊಟಲನಾಳ್ವ ರತಿವೇಗ ಖೇಚರಂಗಂ ಕಾಂಚನ ಮಾಲೆಗಂ ಪುಟ್ಟಿದ ಕಾಂತಿಯುಂ ಸುಕಾಂತೆಯುಂ ರತಿಕಾಂತೆಯುಂ ಕಾಂತಮತಿಯು ಮೆಂಬ ನಾಲ್ವರುಂ ಮೊದಲಾಗೆ ಪಲಂಬರುಂ ಬೆರಸಿರ್ದು ಕೃತಕಕನ್ನೆಯ ಕಾರಣಕ್ಕೆ ತಮ್ಮೊಳಿರ್ಪ ಧೂಮವೇಗನುಂ ಹರಿವರನುಂ ಬಂಧುಗಳಂ ಬರಿಸಿ ನಿಮ್ಮಿರ್ವರೊಳಗಾರಸೀ ಕನ್ನೆಯೊಲ್ದಪಳೊ ಕೈಕೊಳ್ವುದೆಂದು ತಿರ್ದಿ ಕಳೆಯೆ ಪೂರ್ವಸ್ವರೂಪದೊಳಿರ್ದ್ದ ಕುಮಾರನಂ ಕಂಡು ಆ ಕನ್ನೆಯರ್ ಲಜ್ಜಿತೆಯರುಂ ಸಂತುಷ್ಟೆಯರು ಮಾಗಿ ಮಱಲುಂದಿ ದೊಡಾತನಂ ಪ್ರಭಾತದೊಳೆತ್ತಿ ಸುಖಾವತಿ ಕೊಂಡುಯ್ದು ಕುಮಾರನೆಚ್ಚೆತ್ತುರ್ದು ನೋಡಿ ಇನ್ನೆಗಮೆಲ್ಲಿರ್ದೆಯೆನೆ ನಿನ್ನನಗಲದೆ ನಿನಗಪ್ಪನವಿ ತಾಲಾಘಮುಮಂ ನಿನಗಮಾಯು ಪುಕ್ಲೆಂಬುದು ಮನಱಿದು ಇನ್ನೆಗಂ ಮೆಯ್ಗರೆದಿರ್ದೆನೆನೆ ಸಂತೋಷಂಬಟ್ಟು ಪೋಗಿ ವಿಜಯಾರ್ಧದ ದಕ್ಷಿಣಶ್ರೇಣಿಯ ಕೆಲದ ಗಜಪುರದೊಳೊಂದು ಮದಗಜಂ ಇರುಳ್ ನಿಸಟಂಬಪ್ಪುದಂ ಕಂಡು ಮೂವತ್ತೆರಡುಂ ಕ್ರೀಡೆಗಳೊಳಪಡಿಸಿ ವಶಂಮಾಡೆ ತತ್ಪುರದ ಜನಮೆಲ್ಲಂ ನೇಸರ್ ಮೂಡಿದಾಗಳ್ ಆದೇಶಪುರುಷಂ ಬಂದನೆಂದು ಅಪ್ಪಶೋಭೆಯಿಂದಿದಿಗೋಳಿ ಮತ್ತಮಂತೆ ನಭೋಗಮನದೊಳ್ ಬರೆ ಹಯಪುರಸಮೀಪದೊಳ್ ಒಂದು ಹಯಂ ವಿಮುಕ್ತಬಂಧನಮಾಗಿ ಬಂದು ಕುಮಾರನಂ ಪ್ರದಕ್ಷಿಣಂಗೆಯ್ಯೆ ತತ್ಪುರದ ಜನಂಗಳಾದೇಶಪುರುಷನೆಂದಱಿದು ಪೂಜಿಸೆ ಚತುಷ್ಪ್ರಜನಪದ ಮಧ್ಯಗತಮಪ್ಪ ಸೀಮಂತಗಿರಿಯನೆಯ್ದಿ ಕಪ್ಪರೆಗೊಂಡು ನೋಡೆ ಜನಮುಂ ಕಂಡಿರ್ದೆನೆಂದು ಬೆಸಗೊಂಡು ಪೆಱರಾಗ್ರಹಂ ಕಿಡಲಾಗದ ಬಾಳಂ ಕಿತ್ತು ಬಟರ ಪೊದರನಿತುಂ ದುಮದಂಕಂತು ಪುರಜನಮಾರ್ಪದುಮವರೊಳೊರ್ವಮಾಗಂ ಜಯಶಬ್ದಪೂರ್ವಕಮೆಱಗಿ ಪೂಜೆವಟ್ಟಂ. ಮತ್ತೊರ್ವಂ ಕುಂಟವೇರಲಾತಂ ತನ್ನ ಬೆರಲುಂ ಸಮನ್ವಾದೊಡೆ ಕೃತಾಂಜಲಿಯಾದಂ. ಮತ್ತೊರ್ವಂ ವಜ್ರಮಣಿಯನಡುತಮಿರ್ದ್ದ ತನದಱ ಪಾಕನೊಳ್ ಕುಮಾರಂಗೆ ವಿನಯಪರನಾದೊಂ, ಅಂತು ಮುಂಪೇಟ್ಟ ಕರ ವಾಳಪತಿ ವಿಜಯಪುರದೊಳ್ಪುಟ್ಟಿದಾತಂ ಭವಿಷ್ಯಚ್ಚಕ್ರವರ್ತಿ ಶ್ರೀಪಾಲಂಗೆ ಸೇನಾಪತಿಯಕ್ಕುಂ, ಆ ಪೊಱಲನಾಳ್ವ ವರಕೀರ್ತಿ ಯೆಂಬನಮಗಳ್ ಕೀರ್ತಿಮತಿಕಾಂತೆಯಕ್ಕುಂ, ಅವರ್ಗೆ ಕರವಾಳೋದ್ಧರಣಮಾದೇಶಂ. ಆಮೂಗಂ ಶ್ರೇಯಃಪುರದೊಳ್ ಪುಟ್ಟಿದೊಂ, ಆತಂ ಕುಮಾರಂಗೆ ಪ್ರಧಾನಪುರುಷನಕ್ಕುಂ, ಆಪೊಟಲನಾಳ್ವ ಶಿವಸೇನನಮಗಳ್ ವೀತಶೋಕೆವನಿತೆಯಕ್ಕುಂ, ಅವರ್ಕ್ಕೆ ಮೂಕಪರಿಭಾಷಣಮಾದೇಶಂ. ಆ ಕುಂಟಂ ಶಿಲ್ಪಪುರದೊಳ್ ಪುಟ್ಟಿದಂ, ಆತಂ ಕುಮಾರಂಗೆಸ್ಥಪತಿರತ್ನಮಕ್ಕುಂ. ಆ ಪೊಟಲನಾಳ್ವ ವರಪತಿಯೆಂಬನಮಗಳ್ ರತಿವಿಮಲೆಲಲನೆಯಕ್ಕುಂ. ಅವರ್ಕೆ ಸಂಕುಚಿತಾಂಗುಲಿ ಪ್ರಸಾರಣಮಾದೇಶಂ, ಆವಜ್ರಮಣಿಪಾಕಿಧಾನ್ಯಪುರದೊಳ್ ಪುಟ್ಟಿದನಾತಂ ಕುಮಾರಂಗೆ ಪ್ರಧಾನಪುರುಷನಕ್ಕುಂ, ಆಪೊಟಲನಾಳ್ವ ವಿಶಾಲನೃಪತಿಯಮಗಳ್ ವಿಮಳಸೇನೆವಧುವಕ್ಕುಂ, ಅವರ್ಗೆ ವಜ್ರಮಣಿಪಾಕಮಾದೇಶಂ, ಅಂತನಿಬರುಂ ತಂತಮ್ಮ ಕಾರ್ಯಸಿದ್ಧಿಯುಂ ಪ್ರಕಟಂ ಮಾಡಲ ತಾತಮ್ಮನೆಲೆಗಳ್ಗೆ ಪೋದರ್, ಇತ್ತ ಸುಖಾವತಿ ವಾಹನಮಾಗಿ ಕುಮಾರಂ ಬರೆ ಪೂರ್ವೋಕ್ತ ವೈರಿಯುಂ ಧೂಮವೇಗನೆಂಬನಷ್ಟ ಬಂದು ಬಗ್ಗಿಸಿ ನಿಲ್ವುದುಂ ಮುಂಪೇಟ್ದ ಪುಂಡರೀಕಿಣಿಯ ಯಕ್ಷಂ ವಿದ್ಯಾಧರರೂಪದಿಂ ಬಂದು ಎಲೆ ಸುಖಾವತಿ! ನೀಂ ಕುಮಾರನ ನಂಜದೆ ಬಿಟ್ಟು ಪೋಗೆನೆ ಧೂಮ

ವೇಗನೊಳ್ ಪೋಣದೋಳ್, ಇತ್ತ ಕುಮಾರನುಂ ಧರಣೀತಳದ ಶಿಲಾತಳಕ್ಕವತರಿಸಿ ಬರ್ಪನ್ನೆಗಮಾತನ ಪೂರ್ವಭವದ ಪಿರಿಯಬ್ಬೆ ದೇವ ಶ್ರೀಯೆಂಬಳ್ ಯಕ್ಷಿಯಾಗಿದಾಕೆ ಬಂದು ನಿಜಕರಕಮಲದಿಂ ಶರೀರಸ್ಪರ್ಶನಂಗೆಯ್ದು ಪರಿಶ್ರಮ ಮನಾರಿಸಿ ಕಾಂಚನಗುಹೆಯೊಳಗಣ ಮಡುವಂ ಪುಗವೇಳ್ದುದುಂ ಯಕ್ಷಿಯುಪಚನಮುಂ ಪ್ರಮಾಣಂ ಮಾಡಿ ಪೊಕ್ಕು ತನ್ಮಧ್ಯ ಶಿಲಾಸ್ತಂಭದ ಮೇಗಿರ್ದೀರುಳೆಲ್ಲಂ ಪಂಚನಮಸ್ಕಾರ ಪದಮ ನೋದುತ್ತಂ ಪ್ರಭಾತದೊಳದರುತ್ತರ ದಿಗ್ಭಾಗದೊಳಿರ್ದ ಜಿನಾಲಯದ ಜಿನಬಿಂಬ ಮನ ಚ್ಚಿಸಿ ನಮಸ್ಕಾರಂಗೆಯ್ದುದುಂ ಅಲ್ಲಿಯ ಸಹಸ್ರ ಪದ್ಮಂಚಕ್ರಮಾಯ್ತು, ಕೂರ್ಮಮಾತಪತ್ರಮಾಯ್ತು, ಸಹಸ್ರ ಫಣಭುಜಂಗಂ ದಂಡರತ್ನಮಾಯ್ತು; ದರ್ದುರಂ ಚೂಡಾಮಣಿಯಾಯ್ತು; ನಕ್ರಂಚರ್ಮರತ್ನಮಾಯ್ತು; ರಕ್ತವೃಶ್ಚಿಕಂ ಕಾಕಿಣೀ ರತ್ನಮಾಯ್ತು. ಯಕ್ಷಿಯೇಳ್ದುಪದೇಶದಿಂ ಚಕ್ರರತ್ನಮನೆತ್ತಿ ದಂಡರತ್ನಮಂಪಿಡಿದು ಪ್ರದ್ಯೋತಮಾಸು ಚರ್ಮರತ್ನೋಪಾಸಹನಾಗಿ ಯಕ್ಷಿಕೊಟ್ಟ ಸರ್ವರತ್ನ ಮಯಾಭರಣಂಗಳಂ ತೊಟ್ಟು ಗುಹೆಯಿಂ ಪೊಱಮಟ್ಟು ಧೂಮವೇಗಂಗೆ ಮಾನಭಂಗಂ ಮಾಡಿದ ಸುಖಾವತಿವೆರಸ ಸುರ ಗಿರಿಯ ನೆಯ್ದಿ ಸಮವಸರಣಮಂಡಲಮಂ ಪೊಕ್ಕು ಗುಣಪಾಲಜಿನಪತಿಯುಂ ಬಂದಿಸಿ ಕುಬೇರ ಶ್ರೀಯುಮಂ ವಸುಪಾಲನುಮಂ ವಿನಯದಿಂ ಕಂಡು ತದಾಶೀರ್ವಾದಮಂ ಕೈಕೊಂಡು ಸುಖಾವತಿಯ ಪ್ರಭಾವದಿಂದಂ ಎನಗಿನಿತು ವಿಭೂತಿಯಾದುದೆಂದು ಆಕೆಯ ಪ್ರಶಂಸೆಗೆಯ್ದು ಪೂರ್ವೋಕ್ತ ಸಪ್ತದಿನದೊಳ್ ಮಹಾವಿಭೂತಿಯಿಂ ಪೊಟಲಂ ಪೊಕ್ಕು ವಸುಪಾಲಂ, ವಾರಿಷೇಣೆ ಮೊದಲಾಗೆ ಪಲಂಬರ್ ಕನ್ನೆಯರಂ ಶ್ರೀಪಾಲನುಂ ಜಯವತಿ ಮೊದಲಾಗಿ ಎಣ್ಬತ್ತುನಾಲ್ವರ್ ಕನ್ನೆಯರಂ ಮದುವೆನಿಲೆ ಜಯವತಿಗೆ ಸ್ವರ್ಗಾವತರಣ ಪೂರ್ವಕಂಗುಣ ಪಾಲನೆಂಬ ಮಗಂಪುಟ್ಟೆ ಶ್ರೀಪಾಲಂಗೆ ಚಕ್ರರತ್ನಂಪುಟ್ಟೆ ದಶಾಂಗಭೋಗಮನನು ಭವಿಸಿ ಗುಣಪಾಲ ಕುಮಾರಂಗೆ ಜಯವತಿಗಳ ಅಣ್ಣನಪ್ಪಜಯವರ್ಮನ ಮಗಳ್ ಜಯಸೇನೆಯುಮಂ ಅಶನಿವೇಗನ ಶನಿವೇಗನ ಮನೋವೇಗನತುರಿಕೇತು ಶಿವಪ್ರಭೃತಿಗಳ ಮಗಳ್ದಿರುಮಂ ತಂದು ವಿವಾಹ ವಿಧಿಯುಂ ಮಾಡೆ ಮತ್ತೊಂದುದಿವಸಂ ಚಂದ್ರಗ್ರಹಣಮುಂ ಕಂಡು ನಿರ್ವೇಗದಿಂಗುಣ ಪಾಲಕುಮಾರಂ, ಆತ್ಮೀಯ ಪೂರ್ವ ಸಂಬಂಧಮುಂ ತನ್ನೊಳೆಂತೆಂದು ಬಗೆದಂ-ಪುಷ್ಕರಾರ್ಧದ ಪರವಿದೇಹದ ಪದ್ಮವಿಷಯದ ಕಾಂತ ಪುರಮನಾಳ್ವ ಕನಕರಥಂಗಂ ಕನಕಪ್ರಭಾದೇವಿಗಂ ಕನಕಪ್ರಭನೆಂಬ ಮಗನಾಗಿ ಬಹಿರುದ್ಯಾನ ಕೇಳಿಯೊಳ್ ನಿಜವಲ್ಲಭೆ ವಿದ್ಯುತ್ಪ್ರಭಾದೇವಿ ಸರ್ಪದಷ್ಟೆಯಾಗೆ ತದ್ವಿಯೋಗದಿಂ ಮಾತೃಪಿತೃಬಂಧುಜನಂ ಬೆರಸುಸಮಾಧಿ ಗುಪ್ತರ ಪಕ್ಕದೆ ದೀಕ್ಷೆಗೊಂಡು ಷೋಡಶಭಾವನೆಗಳಂ ತೀರ್ಥಕರಪುಣ್ಯಮಂ ಕಟ್ಟಿಜೀವಿತಾಂತ್ಯದೊಳ್ ಜಯಂತ ವಿಮಾನದೊಳ ಹಮಿಂದ್ರನಾಗಿ ಪುಟ್ಟಿ ತನ್ನ ಬಂದುದಂ ಬಗೆವನ್ನೆಗಂ ಮುಂಪೇಳ್ದ ಹಿರಣ್ಯವರ್ಮನ ಪ್ರಿಯದತ್ತೆಯ ಪ್ರಭಾವತಿಯ ತಂದೆ ಪಿರಪ್ಪ ಆದಿತ್ಯಗತಿಯುಂ ಸಮುದ್ರದತ್ತನುಂ ವಾಯುರಥನುಂ ಲೋಕಾಂತಿಕ ದೇವರಾಗಿರ್ದವರುಂ ಬಂದು ತನ್ನಂಪತ್ರಿಬೋಧಿಸೆ ಗುಣ ಪಾಲ ಕುಮಾರಂ ಸಂಯಮಮುಂ ಕೈಕೊಂಡು ತೀರ್ಥಕರತ್ವಮುಂ ಪಡೆದಂ. ಸುಖಾವತಿಯುಮಗಂಯಶಃ ಪಾಲಂ ಪ್ರಥಮಗಣಧರ ನಾದಂ ಶ್ರೀಪಾಲ ಚಕ್ರವರ್ತಿಯುಂ ಧರ್ಮಶ್ರವಣ ಪೂರ್ವಕಂ ಅತ್ಮಭವಸಂಬಂಧಮಂಬೆಸಗೊಳೆ ತೀರ್ಥಕರರ್ ಇಂತೆಂದು ಬೆಸಸಿದರೆಂದು ಸುಲೋಚನೆ ಜಯಕುಮಾರಂಗೆ ಪೇಟಲ್ ತಗುಳ್ದಳ್.

ಪುಂಡರೀಕಿಣಿಯುಂ ಯಶಃಪಾಲಂ ಪ್ರತಿಪಾಲಿಸುತ್ತಿರ್ಪಿನಂ ಆಪೊಳಲ ಸೆಟ್ಟಿ ಸರ್ವ ಸಮೃದ್ಧಂ ಆತಂಗೆ ಸಾಗರ ಸೇನನ ಒಡವುಟ್ಟಿದದೇವ ಶ್ರೀಯುಂ ಧನಂಜಯನೊಡವುಟ್ಟಿದ ಧನ ಶ್ರೀಯುಂ ಭಾರ್ಯೆಯರಾದರ್, ಅವರೊಳ್ ದೇವಶ್ರೀಗೆ ವೈಶ್ರವಣದತ್ತನೆಂಬ ಮಗನುಂ ವೈಶ್ರವಣದತ್ತೆಯೆಂಬ ಮಗಳುಂ, ಆ ಧನಶ್ರೀಗೆಸರ್ವದಯಿತನೆಂಬ ಮಗನುಂ ಸರ್ವದಯಿತೆಯೆಂಬ ಮಗಳು ಮಾದರ್ ಸರ್ವ ಸಮೃದ್ಧ ನೊಡವುಟ್ಟಿದ ಸಾಗರಸೇನೆಗಂ ಸಾಗರದತ್ತನುಂ ಸಮುದ್ರದತ್ತನುಮೆಂಬ ಮಗಂದಿರುಂ ಸಾಗರದತ್ತೆಯೆಂಬ ಮಗಳು ಮಾದರ್ ಆಸರ್ವದಯಿತ ಶ್ರೇಷ್ಠಿಗೆ ಸಾಗರಸೇನನಮಗಳ್ ಜಯಸೇನೆಯುಂ ಧನಂಜಯನಮಗಳ್ ಧನದತ್ತೆಯುಂ ಪೆಂಡಿರಾಗೆ ವೈಶ್ರವಣದತ್ತಂಗೆ ಸಾಗರದತ್ತೆ ಭಾರ್ಯೆ ಯಾದಳ್. ಸಾಗರದತ್ತಂಗೆ ವೈಶ್ರವಣದತ್ತೆ ಭಾರ್ಯೆಯಾದಳ್ ಸಮುದ್ರದತ್ತಂಗೆ ಸರ್ವದಯಿತೆ ಭಾರ್ಯೆಯಾದಳ್. ಇಂತೆಲ್ಲರುಂ ಸುಖಮಿರ್ಪಿನಂ ಒಂದುದಿವಸಂಧನಂಜಯಂ ಪರಾರ್ಥ್ಯರತ್ನಮಂ ಪಾಗುಡಮೆಂದು ಯಶಃಪಾಲಂಗೆ ಕೊಂಡುಯ್ದೊಡೆ ಆರಸನಾತನಂ ಮನ್ನಿಸಿ ಪಿರಿದು ಮೊಡವೆಯುಂ ಕೊಟ್ಟೊಡದಂ ಕೇಳ್ದು ಪೊೞಲೊಳ್ ಉಳ್ಳಪರದತ್ತ್ಯಂಫನಾರ್ಜನೆಗೆ ಪೋಗಲೆಂದು ಕೆಲದೂರದೊಳ್ ಬಟ್ಟಿರೆ ಸಮುದ್ರದತ್ತಂ ಮಗುೞ್ದು ಬಂದು ಋತುಕಾಲ ಪ್ರಾಪ್ತೆಯಾಗಿರ್ದ ಸರ್ವದಯಿತೆಯೊಳ್ ನೆರೆದು ಸಾಭಿಜ್ಞಾನಮುಂಗುರಮುಂ ಕೊಟ್ಟು ಆರು ಮಱಿಯದಿರಿರುಳೆ ಸಾರ್ಥಮುಂ ಕೂಡೆ ಪೋದಂ. ಇತ್ತ ಸರ್ವದಯಿತೆ ಗರ್ಭಮಂ ತಾಳ್ದೆ ಸಾಗರ ದತ್ತಂ ಕಂಡು ದುಶ್ಚರಿತೆಯೆಂದು ದೂಱಿ ಸಮುದ್ರದತ್ತಂ ಬಂದು ಪೋದ ವೃತ್ತಾಂತಮುಂ ಆಕೆ ಪೇೞೆಯುಂ ಮನೆಯುಂ ಪೊಱಮಡಿಸಿ ಕಳೆಯೆ ತಮ್ಮಣ್ಣಂ ಸರ್ವದಯಿತ ನಾಕೆಯ ಕೈಯುಂಗುರಮುಂಕಂಡು ತನ್ನ ಮನೆಯುಂ ಪುಗಲೀಯದಿರ್ದೊಡೆ ಆತನ ಮನೆಯ ಕೆಲದೊಳ್ ಒಂದು ಮನೆಯೊಳಿರ್ದು ಮಗನಂ ಪಡೆಯೆ ಸರ್ವದಯಿತನೆಮಗಿದು ಕುಲಪರಿಭವಮೆಂದು ಆ ಮಗನಂ ಒವಳ ಪರಿಚಾರಕನ ಕೈಯೊಳ್ ಕೊಟ್ಟು ಬಿಸುಟು ಬಪ್ಪುದೆಂದಟ್ಟಿದೊಡೆ ಆತಂ ಜಯಧಾಮನೆವೆರಸು ವಿದ್ಯೆಯುಂಸಾಧಿಸಲೆಂದು ಪಿತೃವನಕ್ಕೆ ವಂದ ಜಯಧಾಮನೆಂಬ ಸೆಟ್ಟಿಯ ಕೆಳೆಯನಪ್ಪವಿದ್ಯಾಧರನ ಕೈಯೊಳ್ ಕೊಟ್ಟೊಡೆ ಆತಂ ತನ್ನಾಳ್ವ ಭೋಗಪುರಕ್ಕುಯ್ದು ಜಿತಶತ್ರುವೆಂಬ ಪೆಸರನಿಟ್ಟು ನಡೆಪುತ್ತಿರ್ದಂ. ಇತ್ತ ಸರ್ವದಯಿತೆ ಪುತ್ರವಿಯೋಗ ದುಃಖಿತೆ ಸ್ತ್ರೀನಿಂದೆ ಗೆಯ್ದು ಸತ್ತು ಪುರುಷನಾಗಿ ಪುಟ್ಟಿದೊಳ್. ಇತ್ತ ಸಮುದ್ರದತ್ತಂ ಸಾರ್ಥದೊಡನೆ ಬಂದು ನಿಜಭಾರ್ಯೆಯ ವೃತ್ತಾಂತಮುಂ ಕೇಳ್ದು ತಮ್ಮಣ್ಣಂಗೆ ಕಿನಿಸಿ ನಿರಪರಾಧೆಯನ್ನ ಪೆಂಡತಿಗೆಡೆಗೊಟ್ಟೆ ನಿಲ್ಲೆಂದು ಸರ್ವದಯಿತ ಸೆಟ್ಟಿಗೆ ಕರಂ ಮುಳಿದಿರ್ಪಿನಂ ವೈಶ್ರವಣದತ್ತಂ ಪಿರಿಯನಾಗಿರ್ದಂತೆ ಸೆಟ್ಟಿ ಪದದೊಳ್ ತಾಂ ನಿಂದನೆಂದತಿ ಕ್ರೋಧದಿಂ ಸಾಗರದತ್ತ ಸಮುದ್ರದತ್ತರ್ ವೆರಸು ಮೂವರುಂ ತಪಂಬಟ್ಟರ್, ಇತ್ತೊಂದುದಿವಸಂ ಸರ್ವದಯಿತಸೆಟ್ಟಿ ಜಿತಶತ್ರುವಂ ಸಭೆಯೊಳ್ ಕಂಡು ಸಮುದ್ರದತ್ತನೊಳ್ಸುರೂಪನೆ ನೀನಾರ್ಗೆಂದು(ಪುಟ್ಟಿದೆಯೆಂದು) ಬೆಸಗೊಳೆ ಜಿತಶತ್ರುನಿಜವೃತ್ತಾಂತ ಮೆಲ್ಲಮಂ ಪೇೞೆ ತತ್ಕರ ಮುದ್ರಿಕಾ ದರ್ಶನದಿಂದಂ ನಂಬಿ ತನ್ನಳಿಯನಪ್ಪುದಂ ನಿಶ್ಚಯಿಸಿ ತಾನುಂ ತನ್ನ ಮೈದುನನುಂ ಪರೀಕ್ಷಿಸದೆನೆಗೞ್ದುದಕ್ಕೆನಿರ್ವೇಗಮಾಗಿ ಸರ್ವ ಶ್ರೀಯೆಂಬ ತನ್ನ ಮಗಳುಮಂ ಸರ್ವಸ್ವಮುಮಂ ಸೆಟ್ಟಿವಾಟಮುಮಂ ಜಿತಶತ್ರುಗೆ ಕೊಟ್ಟು ಜಯಧಾಮನುಂಜಯಭಾ

ನೆಯುಮಂ ಜಯಸೇನೆಯ ಬಂಧನದತ್ತೆಯುಮಂ ಸಾಗರದತ್ತೆಯುಮಂ ವೈಶ್ರವಣದತ್ತೆಯುಮಂ ಮೊದಲಾಗೆ ಪಲಂಬರುಂ ಬೆರಸು ಯತಿವರರ ಸಮೀಪದೊಳ್ ಸಂಯಮಮುಮಂ ಕೈಕೊಂಡು ಕಾಲಾಂತರದೊಳ್ ಸುರಲೋಕದೊಳ್ ಪುಟ್ಟಿ ಬಂದಿಲ್ಲಿ ಜಯಧಾಮಂ ವಸುಪಾಲನಾದೊಂ, ಜಯಭಾಮೆ ಜಯಾವತಿಯಾದಳ್, ಜಯಸೇನೆ ವಪ್ಪಿಲೆಯಾದಳ್, ಧನದತ್ತೆ ಮದನವತಿಯಾದಳ್, ಸಾಗರದತ್ತೆ ಸುಖಾವತಿಯಾದಳ್, ವೈಶ್ರವಣದತ್ತೆ ವಿದ್ಯುದ್ವೇಗೆಯಾದಳ್, ಸಾಗರದತ್ತಂ ಪುರೂರವನಮಗಂ ಹರಿವರನಾದೊಂ, ಸಮುದ್ರದತ್ತನುಂ ಜ್ವಲನವೇಗನಮಗಂ ಧೂಮವೇಗನಾದೊಂ, ವೈಶ್ರವಣದತ್ತನ ಶನಿವೇಗನಾದೊಂ, ಸರ್ವದಯಿತಸೆಟ್ಟಿಯೆನೀಂ ಶ್ರೀಪಾಲ ಚಕ್ರವರ್ತಿಯಾದಯ್, ಸರ್ವದಯಿತೆಗೆ ಪುತ್ರವಿಯೋಗಮನಂದು ನೀಂ ಮಾಡಿದುದಱಿಂ ಮಾತೃವಿಯೋಗಮುಂ ಪಿತೃವಿಯೋಗಮುಂ ಬಂಧುವಿಯೋಗಮುಮಾದುದು, ಅಂದಿನ ಶಿಶುವಂ ಕೊಲ್ಲದುದಱಿಂ ಮತ್ತಂ ಮತ್ತಂ ನಿನಗೆ ಬಂಧು ಸಮಾಗಮಮಾದುದು, ಅಂದಿನ ಕೆಳೆಯುಂ ಪಗೆಯುಮೀಗಳ್ ಕೆಳೆಯುಂ ಪಗೆಯುಮಾದರ್ ಅಂದಿನ ತಪದ ಫಲದಿಂ ನೀಂ ಚಕ್ರಧರನುಂ ಚರಮದೇಹಧರನುಂ ಆದಯ್, ಎಂದು ತೀರ್ಥಕರರ್ ಬೆಸಸಿದೊಡನಿಬರುಂ ಪರಸ್ಪರ ವಿರೋಧರಹಿತರಾದರ್, ಶ್ರೀಪಾಲ ಚಕ್ರವರ್ತಿ ಸುಖಾವತಿಯ ಮಗಂ ನರಪಾಲಂಗೆ ರಾಜ್ಯಮಂ ಕೊಟ್ಟು ಜಯವತಿ ಮೊದಲಾಗೆ ಪಲರು ಮರಸಿಯರುಂ ವಸುಪಾಲಂ ಮೊದಲಾಗೆ ಪಲಬರು ಮರಸುಗಳುಂ ಬೆರಸು ಸಂಯಮಮುಮಂ ಕೈಕೊಂಡು ಮುಕ್ತಿಗೆ ಸಂದರ್. ಅರಸಿಯರ್ ಪುರುಷ ಬಂದಿಗಟ್ಟಿ ದೇವರಾದರ್, ಎಂದು ಜಿನಪತಿ ಪೇೞೆ ನಾವು ಮಲ್ಲಿಗೆ ವಂದನಾ ಭಕ್ತಿಗೆ ಪೋಗಿ ಕೇಳ್ದೆವೆಂದು ಸುಲೋಚನೆ ಪೇೞೆ ಸಭೆಯೆಲ್ಲಮಾಶ್ಚರ್ಯಂಬಡೆ ಜಯಕುಮಾರಂಗೆ ಪೂರ್ವಜನ್ಮದ ಪ್ರಜ್ಞಪ್ತಿ ಮೊದಲಾಗೆ ವಿದ್ಯೆಗಳೆಲ್ಲಂ ಬಂದು ಬೆಸಕೆಯ್ಯೆ ತನ್ನೊಡವುಟ್ಟಿದ ವಿಜಯ ಕುಮಾರಂಗೆ ರಾಜ್ಯಭಾರಮನಪ್ಪಿಸಿ ಸುಲೋಚನೆ ವೆರಸು ಯಥೇಷ್ಟವಿವಿಧ ವಿದ್ಯಾ ವಾಹನಂ ಜಲಧಿ ಸರಿಚ್ಛೈಲ ವನನದೀಪುಳಿನಾದಿ ಪ್ರದೇಶಂಗಳೊಳ್ ಜಯಕುಮಾರಂ ವಿಹಾರಿಸುತ್ತಂ ಒಂದು ದಿವಸಂ ಕೈಲಾಸಪರ್ವತದ ವನದೊಳ್ ಸುಲೋಚನೆಯುಂ ಇನಿಸಾನುಂ ಮಗಲ್ದು ವಿಹರಿಸುವನ್ನೆಗಂ ಬರ್ಪಳ್ ಒಂದು ವಿಜಯಾರ್ಧದ ಉತ್ತರ ಶ್ರೇಣಿಯ ಮನೋಹರ ವಿಷಯದ ರತ್ನ ಪುರಮನಾಳ್ವ ಪಿಂಗಳ ಗಾಂಧಾರಂಗಂ ಸುಪ್ರಭಾದೇವಿಗಂ ಪುಟ್ಟಿದ ವಿದ್ಯುತ್ಪ್ರಭೆಯೆನೆಂಬೆಂ ನಮಿವಿದ್ಯಾಧರನ ಪೆಂಡತಿಯೆಂ ಮುನ್ನ ಮಹಾಮೇರು ನಂದನದೊಳ್ ನಿನ್ನಂ ಕಂಡನುರಕ್ತೆಯೆನಾಂ ನಿನ್ನನರಸುತ್ತಂ ಬಂದಿಲ್ಲಿ ಕಂಡೆನೆಂದು ಪರ ಜನಂಗಳ ನಾಗಳೆ ಕರೆದು ನಿಜಾಭಿಲಷಿತಮನಱಿಪೆ ಜಯ ಕುಮಾರಂ ಸ್ವದಾರಸಂತೋಷವ್ರತಮುಂಟದಱಿಂ ಪರಾಂಗನಾ ಸಂಗಮೆನಗಾಗದೆಂಬುದುಂ ಆಕೆ ಮುಳಿದು ರಾಕ್ಷಸೀರೂಪದಿಂದೆತ್ತಿಕೊಂಡು ಪೋಗಲ್ ಬಗೆಯೆ ಪೂಗೊಯ್ಯುತ್ತಿರ್ದ ಸುಲೋಚನೆ ಕಂಡು ಬಗ್ಗಿಸಿದೊಡೆ ಆಕೆಯ ಪತಿವ್ರತಾ ಗುಣಮಾಹಾತ್ಮ್ಯಭಯದಿಂ ಅದೃಶ್ಯೆಯಾಗಿಪೋದಳ್, ದೇವರ್ಕಳುಂ ಅವರಿರ್ವರುಮಂ ಪ್ರಶಂಸೆಗೆಯ್ದು ಪೂಜಿಸಿ ಪೋದೊಡೆ ಆತಂಗಾದುಪಸರ್ಗಮೆಂತಾದುದೆಂದೊಡೆ ಮಹೇಂದ್ರಂ ಸುರಸಭೆಯೊಳ್ ಮೇಘಸ್ವರನ ಸುಲೋಚನೆಯ ಶೀಲ ಮಾಹಾತ್ಮ್ಯಮುಂ ಪೊಗೞೆ ಪರೀಕ್ಷಿಸಲೆಂದು ಸೌಧರ್ಮಕಲ್ಪದ ರವಿಪ್ರಭವಿಮಾನದ ರವಿಪ್ರಭದೇವಂ ತನ್ನ ಕಾಂಚನೆಯೆಂಬ ದೇವಿಯನಟ್ಟಿದೊಡೆ ಆಕೆ ಬಂದು ಇನಿತುಪಸರ್ಗಂ ಮಾಡಿಪೋಗಿ ಪೊಗೞ್ದೊಡೆ ಆ ದೇವಂ ಪರಿಜನಸಹಿತಂ ಬಂದು ಪೂಜಿಸಿ ನಿಮ್ಮನ್ನೆಗೆಯ್ದಪರಾಧಮಂ ಕ್ಷಮಿಸಿ ಸೈರಿಸುವುದೆಂದು ಪೋದಂ.

ಇತ್ತ ಮೇಘೇಶ್ವರನಾದಿಬ್ರಹ್ಮನಲ್ಲಿಗೆ ಬಂದು ವಂದಿಸಿ ಧರ್ಮಮುಮಂ ಸಪ್ರಪಂಚಮುಮಂ ಕೇಳ್ದು ಬೋಧಿಪ್ರಾಪ್ತಿಶಿವಂಕರ ಸೋಮಯಮಗನಪ್ಪ ಸಂತವೀರ್ಯಂಗೆ ರಾಜ್ಯಮುಮಂ ಕೊಟ್ಟು ಬಂಧುಗಳಂ ಬೆಸಕೆಯ್ಸಿ ವಿಜಯ ಜಯಂತ ಸಂಜಯಂತರೆಂಬ ತನ್ನ ತಮ್ಮಂದಿರುಂ ಭರತನ ಮಕ್ಕಳಪ್ಪ ರವಿಕೀರ್ತಿ ವಿಶ್ವಂಜಯಂ ಅರಿಂಜಯಂ ಅರಿಂದಮಂ ಸುಜಯಂ ಸುಕಾಂತಂ ಅಜಿತಂಜಯಂ ಮಹಾಜಯಂ ಶತ್ರುದಮನಂ ವಿರಂಜಯಂ ರತಿವರ್ಮಾದಿಗಳ್ ವೆರಸು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಸಂಯಮಮುಮಂ ಕೈಕೊಂಡು ಬುದ್ಧಿಪ್ರಾಪ್ತನಾಗಿ ಆಗಳ್ ಎಪ್ಪತ್ತೊಂದನೆಯ ಗಣಧರನಾದೊಂ. ಸುಲೋಚನೆಯುಮಂ ಭರತಸ್ತ್ರೀಯರೊಳಗನೊಳ್ ಘನಸಂತಪ್ತೆಯಾಗಿ ಸುಭದ್ರೆಯುಮಂಬೊಳ್ ಬಂದು ಸಂತೈಸೆ ಬ್ರಾಹ್ಮಿಯರಸಕ್ಕದೆ ತಪಮಂ ಕೈಕೊಂಡು ಜೀವಿತಾಂತದೊಳ್ ಅಚ್ಯುತಕಲ್ಪದೊಳ್ ಅನುತ್ತರ ವಿಮಾನದೊಳ್ ದೇವನಾದೊಳೆಂದು ಜಯಗಣಧರಪುರಾಣಮುಮಂ ಸೇೞೆ ಭರತೇಶ್ವರಂ ಕೇಳ್ದು ಪೋದಂ.

ಇತ್ತಲ್ ಅನಘಜಿನೇಶ್ವರಂಗೆ ವೃಷಭಸೇನರ್ ಮೊದಲಾಗೆಣ್ಬತ್ತನಾಲ್ವರ್ (೮೪) ಗಣಧರರುಂ ನಾಲ್ಕು ಸಾಸಿರದೇೞುನೂಱಯ್ವತ್ತರ್ (೪೭೫೦) ಪೂರ್ವಧರರುಂ, ನಾಲ್ಕು ಸಿರದನೂಱಯ್ವತ್ತರ್ (೪೧೫೦) ಶಿಕ್ಷಕರುಂ ಒಂಬತ್ತು ಸಾಸಿರ್ವರ್ (೯೦೦೦) ಅವಧಿಜ್ಞಾನಿಗಳುಂ ಇಪ್ಪತ್ತುಸಾಸಿರ್ವರ್ (೨೦೦೦೦) ಕೇವಲಿಗಳುಂ ಇಪ್ಪತ್ತಾರುಸಾಸಿರ್ವರ್ (೨೦೬೦೦) ವಿಕ್ರಿಯರ್ದ್ಧಿಪ್ರಾಪ್ತರುಂ ಪನ್ನೆರಡು ಸಾಸಿರದೇೞುನೂಱಯ್ವತ್ತರ್ (೧೨೭೫೦) ಮನಃಪರ್ಯಯಜ್ಞಾನಿಗಳುಂ ಅಸಂಖ್ಯಾತಗಳುಂ ಬ್ರಾಹ್ಮೀಪ್ರಮುಖ ಮೂಱುಲಕ್ಕೆಯುಂ ಐವತ್ತುಸಾಸಿರ (೩೫೦೦೦೦) ಆರ್ಯಿಕಾಗಣಮುಂ ದೃಢವ್ರತಂ ಮೊದಲಾಗೆ ಮೂಱುಲಕ್ಕೆ (೩೦೦೦೦೦) ಶ್ರಾವಕರುಂ ಸುವ್ರತೆ ಮೊದಲಾಗೆ ಐದುಲಕ್ಕೆ (೫೦೦೦೦೦) ಶ್ರಾವಿಕೆಯರುಂ ಚತುರ್ನಿಕಾಯದೇವ ನಿಕಾಯಮುಮುಂ ಪಕ್ಷಿಚತುಷ್ಪದ ಸರೀಸೃಪಾದಿತಿರ್ಯಗ್ಜಾತಿಗಳುಂ ಬೆರಸು ಧರ್ಮಕ್ಷೇತ್ರದೊಳ್ ವಿಹರಿಸೆ ಗಗನಗಮನಮುಂ ಉಪಸರ್ಗಾಭಾವಮುಂ ವಿಗತಾಹಾರತ್ವಮುಂ ಅಚ್ಛಾಯತ್ವಮುಂ ಅಪಕ್ಷ್ಮಸ್ಪಂದತ್ವಮುಮೆರ್ ಗವ್ಯೂತಿಶತಚತುಷ್ಟಯ ಸುಭಿಕ್ಷತ್ವಮುಂ ಪ್ರಾಣಿವಧವಿರಹಿತತ್ವಮುಂ ಸಮಪ್ರಸಿದ್ಧನಖಕೇಶತ್ವಮುಂ ಅನಂತಜ್ಞಾನಾನಂತದರ್ಶನತ್ವಮುಮೆಂಬ ಘಾತಿಕ್ಷಯಜಮಪ್ಪ ದಶಗುಣಂಗಳುಮುಂ ಸ್ವಾಭಾವಿಕದಶಗುಣಂಗಳುಂ ಅಪರ್ಯಾಪ್ತಪ್ರತಿಮರತ್ನಮಯ ಮಹೀತಳಮುಂ ತೃಣಧೂಳೀಶರ್ಕರಾಕಂಟಕಾದಿರಹಿತಮಹೀತಳದೊಳ್ ವಾತಕುಮಾರ ಸಂಸ್ಕರಣಮುಂ ಮೇಘಕುಮಾರಸುರಭಿ ಜಲಾಭಿಷೇಚನಮುಂ ಗುಹ್ಯಕುಮಾರಕುಸುಮವೃಷ್ಟಿಪಾತಮುಂ ಸುರಭಿಮೃದುಶೀತಪವನ ವಿಜೃಂಭಣಮುಂ ಆಕಾಶನಿರ್ಮಳತ್ವಮುಂ ವಿವಿಧಭಾಷಾಸ್ವಭಾವತಾರ್ಧಮಾಗಧಧ್ವನಿಯುಂ ಸಮವಸರಣಮಂಡಲಗತವೈರಮಯ ವ್ಯಪೋಹನಮುಂ ವಿವಿಧವಿಷಯಗೋಚರಾನಂದಮುಂ ಶಾಲಿವ್ರೀಹಿಯವಗೋಧೂಮಾದಿ ಪ್ರಕೃಷ್ಟಸಸ್ಯನಿಷ್ಪತ್ತಿಯುಂ ಸರ್ವರ್ತು ಕುಸುಮಫಲಪಲ್ಲವಭರಿತತರುವನಪರಿಣಾಮತ್ವಮುಂ ಭಗವಚ್ಚರಣ ಕಮಲವಿನ್ಯಾಸ ಪುರಸ್ಸೃಷ್ಟ ಕನಕಕಮಲ ಸಂಪತ್ಸನ್ನಿಧಾನಮುಂ ಅಷ್ಟವಿಧಮಂಗಲಧಾರಿವಿಷಯಜನಪ್ರತ್ಯುದ್ಗಮನಮುಂ ಧರ್ಮಚಕ್ರಪುರಸ್ಸರ ಜಿನಪತಿಸದ್ಧರ್ಮ ಘೋಷಣೆಯುಮೆಂಬ ದೇವಕೃತಚತುರ್ದಶಾತಿಶಯಮುಮುಮಂತು ಚತುಸ್ತ್ರಿಂಶದತಿಶಯಸಮನ್ವಿತನುಂ ವೃಷಭಂ ಸ್ವಯಂಭು ಬ್ರಹ್ಮ ವಿಷ್ಣು ಮಹೇಶ್ವರ ಪ್ರಜಾಪತಿ ಪುರದೇವಾದ್ಯನ್ವರ್ಥ ಸಹಸ್ರಾಷ್ಟನಾಮಧರನುಂ ಆಗಿರ್ದ

ಆದಿತೀರ್ಥಕರರಲ್ಲಿಗೆ ಮತ್ತೊಂದುದಿವಸಂ ಭರತೇಶ್ವರಂ ಬಂದು ವಂದಿಸಿ ಧರ್ಮಮಂ ಬೆಸಗೊಳೆ ಭಟ್ಟಾರಕರ್ ದಶಕುಲ ಧರ್ಮಮುಮಂ ದ್ವಾದಶಾನುಪ್ರೇಕ್ಷೆಯುಮಂ ದ್ವಾವಿಂಶತಿಪರೀಷಹಂಗಳುಮಂ ಗುಣಸ್ಥಾನ ಜೀವಸ್ಥಾನಮಾರ್ಗಣಾಸ್ಥಾನಂಗಳುಮಂ ಮೂಲೋತ್ತರವಿಕಲ್ಪಂಗಳುಮಂ ದ್ರವ್ಯಭಾವಲಕ್ಷಣಮುಮಂ ಚತುರ್ವಿಧಬಂಧಮುಮಂ ಮಧುರ ಕಟುಕವಿಪಾಕಮುಮಷ್ಟ ಕರ್ಮಭೇದಮುಮಂ ಕೇಳ್ದು ತ್ರಿಜ್ಞಾನಧರಂ ಕ್ಷಾಯಿಕಸಮ್ಯಕ್ತ್ವಾದಿಗುಣಸಮನ್ವಿತನಾಗಿ ಪೋದಂ.

ಇತ್ತ ವೃಷಭನಾಥನು ಮಹಾಯಾರ್ಯ ಕ್ಷೇತ್ರಂಗಳಂ ವಿಹಾರಿಸಿ ಸಾಸಿರವರ್ಷಂ ಗುಂದಿದೊಂದುಲಕ್ಷೆ ಪೂರ್ವ ಪರಿಪೂರ್ಣಮೊಳ್ ಕೈಲಾಸಕ್ಕೆ ಬಂದು ಸಿದ್ಧಶಿಖರದೊಳ್ ಪರ್ಯಂಕಾಸನ ಪ್ರತಿಮೆಯೊಳ್ ಅಪಗತವಿಕರಣನಾಗಿರ್ದ್ದಂ.

ಇತ್ತ ಭರತೇಶ್ವರನೀಕ್ಷತ್ತಾಗ್ರ್ಯಾರ ಕ್ಷೇತ್ರಮುಂ ಮಂದರಾಚಲಮಹಾಮಹಿಮೆಯ್ದು ನಿಂದುದುಮಂ ಅಂದಿನ ದಿವಸಮೆ ಯುವರಾಜನರ್ಕಕೀರ್ತಿಯುಂ ಸುರಲೋಕದಿಂ ಬಂದು ಮಹೌಷಧಿದ್ರುಮಂ ಮನುಜರಜಾತಿ ಜರಾಮರಣಂಗಳಂ ಕಿಡಿಸಿ ಮಗುಳೆ ಪೋಪುದುಮಂ ಗೃಹಪತಿರತ್ನಂ ಜನಕ್ಕೆಲ್ಲ ಮಭಿಲಷಿತವಸ್ತುಮಂ ಕಲ್ಪವೃಕ್ಷಂ ಕೊಟ್ಟು ದಿವಕ್ಕೆ ಪೋಗಲಿದುದುಮಂ ಮಂತ್ರಿಯುಂ ರತ್ನದ್ವೀಪದ ವಿವಿಧ ರತ್ನಂಗಳ ನಪ್ಪಗೆಯ್ದು ಗಗನತಳಕ್ಕೊಗೆದುದುಮಂ ಸೇನಾಪತಿಯುಂ ವಜ್ರಪಂಜರಮಂ ಭೇದಿಸಿ ಸಿಂಹಪೋತಂ ಕೈಲಾಸದಿಂ ಮೇಲೆ ಲಂಘಿಸುವುದುಮಂ ಕುರುರಾಜನಪ್ಪನಂತವೀರ್ಯನುಂ ಚಂದ್ರಶಾಲೆಗೆಯ್ದರಸು ಸಂಲೋಕದೊಳ್ ಬೆಳಗಿಪೋಪುದುಮಂ ಸ್ತ್ರೀರತ್ನಂ ಸುಭದ್ರೆಯುಮಶಸ್ವತಿಯುಂ ಸುನಂದೆಯುಂ ಬೆರಸು ಇಂದ್ರಸದೇವಿಲೋಕಂಗೆಯ್ದುದುಮಂ ವಾರಾಣಸೀಪತಿ ಚಿತ್ರಾಂಗದನು ಮಹಾದಿತ್ಯಂ ಧರಣೀತಳದೊಳ್ ಬೆಳಗಿ ಗಗನತಳಕ್ಕೊಗೆವುದುಮಂ ಅಂತಲ್ಲರುಂ ಕನಸುಗಂಡು ಬೆಳಗಾದಾಗಳ್ ತಮ್ಮತಮ್ಮ ಕಂಡ ಕನಸುಗಳಂ ಪುರೋಹಿತಂಗಱಿಪೊಡೆ ಆತನುಂ ವೃಷಭಸ್ವಾಮಿ ಕರ್ಮ ನಿರ್ಮೂಲನಂಗೆಯ್ದು ಪಲರುಂ ಮುನಿಗಳ್ ವೆರಸು ಮುಕ್ತಿಗೆ ಸಲ್ವುದುಮಂ ಅಱಿಪುವುದುಮಾಗಳ್ ಭಟ್ಟಾರಕರ್ಮ್ಮಹಸ್ತ್ರಯ ನಾನಂಗನೇಂಬಂ ಪೇಳೆ ಭರತಂ ಚತುರಂಗಬಲಂ ಬೆರಸು ಪೋಗಿ ದೇವರಂ ತ್ರಿಃಪ್ರದಕ್ಷಿಣಂಗೆಯ್ದು ವಂದಿಸಿ ಮಹಾಮಹಮೆಂಬ ಪೂಜೆಯುಮಂ ಮಾಡಿದಂ. ಆ ದೇವನುಂ ಪದಿನಾಲ್ಕು ದಿವಸಂ ಯೋಗನಿರೋಧಂಗೆಯ್ದು ಮಾಘಬಹುಳ ಚತುರ್ದಶಿಯ ಪೂರ್ವಾಹ್ಣದೊಳ್ ಅಭಿಜಿನ್ನಕ್ಷತ್ರದೊಳ್ ಪಲಂಬರ್ ಮುನಿಗಳ್ ವೆರಸು ಪೂರ್ವಾಭಿಮುಖನುಂ ಪರ್ಯಂಕಾಸನನುಮಾಗಿ ಸಕಲಕರ್ಮ ನಿರ್ಮೂಲನಂಗೆಯ್ದು ಮೋಕ್ಷಲಕ್ಷ್ಮೀವಲ್ಲಭನುಂ ತ್ರಿಲೋಕ ಚೂಡಾಮಣಿಯುಂ ಮಾಗಿರ್ದಂ. ಇತ್ತ ದೇವನಿಕಾಯ ಮಗ್ನೀಂದ್ರ ಮಕುಟಾನಲೋದ್ದ್ಯೋತಿತ ದೀಪಧೂಪ ಸುರಭಿ ಮಾಲ್ಯಾದಿಗಳಿಂ ಜಿನಕ್ಷೇತ್ರ ಪೂಜಾವಿಧಿಯುಂ ನಿವರ್ತಿಸಿ ತದ್ಭಸ್ಮಪೂತ ಚೂರ್ಣದಿಂ ಪಂಚಕಲ್ಯಾಣಭಾಗಿಗಳಪ್ಪೆವೆಂದು ಲಲಾಟ ಭುಜದ್ವಯ ಕಂಠ ಹೃದಯಪ್ರದೇಶಂಗಳೊಳ್ ಮುಟ್ಟಿ ಸೌಧರ್ಮೇಂದ್ರಂ ಪರಿನಿರ್ವಾಣ ಕಲ್ಯಾಣದೊಳಾನಂದ ನೃತ್ಯಮನಾಡಿ ಪೋದಂ.

ಭರತರಾಜನುಂ ಸಪ್ತಮೋಪಾಸಕ ಪ್ರಭೃತಿ ಬ್ರಹ್ಮಚಾರಿಗಳನುಪಾಸಕರನೆಂದಂ ಗಾರ್ಹಪತ್ಯಾಹವನೀಯ ದಕ್ಷಿಣಾಗ್ನಿ ಲಕ್ಷಣಮಪ್ಪಗ್ನಿತ್ರಯ ಸಮೀಪ

ದೊಳ್ ಚಕ್ರಾತಪತ್ರ ಜಿನಬಿಂಬತ್ರಯಂಗಳ ನಿಟ್ಟು ಸಮುಚಿತ ಕ್ರಿಯಾಕಾಲದೊಳ್ ಪರಿಗೃಹೀತಾತಿಥಿಗಳಪ್ಪುದೆಂದಱಿಪಿ ಗುರುವಿಯೋಗಾಕ್ರಾಂತನಾಗೆ ವೃಷಭಸೇನಗಣಧರರ್ ಆತನ ಶೋಕಮನಾಱಿಸಲ್ ತಮ್ಮನಿಬರ ಭವಾವಳಿಯುಂ ಪೇೞ್ದಪರ್. ಜಯವರ್ಮನುಂ ಮಹಾಬಲನುಂ ಲಲಿತಾಂಗನುಂ ವಜ್ರಜಂಘನುಂ ಆರ್ಯನುಂ ಶ್ರೀಧರನುಂ ಸುವಿಧಿಯುಂ ಅಚ್ಯುತೇಂದ್ರನುಂ ವಜ್ರನಾಭಿಯುಂ ಅಹಮಿಂದ್ರನುಮಾಗಿ ವೃಷಭನಾಥನಾದೊಂ, ಧನಶ್ರೀಯುಂ, ನಿರ್ನಾಮಿಕೆಯುಂ, ಸ್ವಯಂಪ್ರಭೆಯುಂ, ಶ್ರೀಮತಿ[1]ಯುಂ, ಆರ್ಯೆಯುಂ, ಸ್ವಯಂಪ್ರಭದೇವನುಂ, ಕೇಶವನುಂ, ಪ್ರತೀಂದ್ರನುಂ, ಧನದತ್ತನುಂ ಅಹಮಿಂದ್ರನುಮಾಗಿ ದಾನತೀರ್ಥಕರಂ ಶ್ರೇಯಾಂಸನಾದೊಂ. ಅತಿಗೃದ್ಧ[2]ನುಂ ನಾರಕನುಂ ವ್ಯಾಘ್ರನುಂ ದಿವಾಕರಪ್ರಭನುಂ ಮತಿವರನುಂ ಅಹಮಿಂದ್ರನುಂ ಸುಬಾಹುವುಂ ಅಹಮಿಂದ್ರನುಮಾಗಿ ಸೀಂ ಭರತನಾದಯ್; ಸೇನಾಪತಿಯುಂ ಆರ್ಯನುಂ ಪ್ರಭಾಕರನುಂ ಅಕಂಪನುಂ ಅಹಮಿಂದ್ರನುಂ ಮಹಾಬಾಹುವುಂ ಅಹಮಿಂದ್ರನುಮಾಗಿ ಬಾಹುಬಲಿಯಾದೊಂ. ಮಂತ್ರಿಯುಂ ಆರ್ಯನುಂ ಕನಕಪ್ರಭನುಂ ಆನಂದನುಂ ಅಹಮಿಂದ್ರನುಂ ಪೀಠನುಂ ಅಹಮಿಂದ್ರನುಮಾಗಿ ಬಂದು ಆನೀಗಳ್, ವೃಷಭಸೇನನಾದೆಂ. ಪುರೋಹಿತನುಂ ಆರ್ಯನುಂ ಪ್ರಭಂಜನನುಂ ಧನಮಿತ್ರನುಂ ಅಹಮಿಂದ್ರನುಂ ಮಹಾಪೀಠನುಂ ಅಹಮಿಂದ್ರನುಮಾಗಿ ಬಂದು ಅನಂತವಿಜಯನಾದೊಂ. ಉಗ್ರಸೇನನುಂ ಶಾರ್ದೂಲನುಂ ಆರ್ಯನುಂ ಚಿತ್ರಾಂಗದನುಂ ವರದತ್ತನುಂ ಸಾಮಾನಿಕನುಂ ವಿಜಯನುಂ ಅಹಮಿಂದ್ರನುಮಾಗಿ ಬಂದು ಅನಂತವೀರ್ಯನಾದೊಂ. ಹರಿವರನುಂ ವರಾಹನುಂ ಆರ್ಯನುಂ ಮಣಿಕುಂಡಲನುಂ ವರಸೇನನುಂ ಸಾಮಾನಿಕನುಂ ವೈಜಯಂತನುಂ ಅಹಮಿಂದ್ರನುಮಾಗಿ ಬಂದು ಅಚ್ಯುತನಾದೊಂ. ನಾಗದತ್ತನುಂ[3] ವಾನರನುಂ ಆರ್ಯನುಂ ಮನೋಹರನುಂ ಚಿತ್ರಾಂಗದನುಂ ಸಾಮಾನಿಕನುಂ ಜಯಂತನುಂ ಅಹಮಿಂದ್ರನುಮಾಗಿ ವೀರನಾದೊಂ. ಲೋಲುಪನುಂ ನಕುಳನುಂ ಆರ್ಯನುಂ ಮನೋರಥನುಂ ಶಾಂತಮದನನುಂ ಸಾಮಾನಿಕನುಂ ಅಪರಾಜಿತನುಂ ಅಹಮಿಂದ್ರನುಮಾಗಿ ಸುವೀರನಾದೊಂ. ಸೀಂ ಭವದ ಸಂಸಾರಮಂ ಪ್ರಯಾಣಕ್ರಿಯಾ ಕ್ರಿಯ ಸಂಪ್ರಯೋಗಲಕ್ಷ್ಮಿಯಪ್ಪುದ ನಱಿದು ಶೋಕಾಕುಲಿತನಾಗಲ್ವೇಡ, ಸಮಗಮರಿದ್ಯಾ ನೇನೆಂಬಿಯುಕ್ತಿಯೊಂದು ದುಃಖಮನಾಱಿಸೆ ಭರತರಾಜನುಂ ಮುನೀಂದ್ರನುಂ ಬಂದಿಸಿ ಪೋದ ಬಳಿಕ್ಕೆ ಬಂದು ಬಂದು ದಿವಸಂ ಮುಕ್ತಿದರ್ಪಣದೊಳ್ ನಿಜಪಳಿತ ದರ್ಶನೋತ್ಪನ್ನ ಬೋಧನರ್ಕಕೀರ್ತಿಗೆ ರಾಜ್ಯಮಂ ಕೊಟ್ಟು ಸಂಯಮಮಂ ಕೈಕೊಂಡು ಕೇಶೋತ್ಪಾಟನಾನಂತರಂ ಮನಃಪರ್ಯಯಜ್ಞಾನಮಾಗೆ ತದನಂತರ ಮಂತರ್ಮುಹೂರ್ತದಿಂ ಕೇವಲಿಯಾಗಿ ಪೂರ್ವ ಲಕ್ಷ್ಯಕಾಲಂ ವಿಹಾರಿಸಿ ನಿರ್ವಾಣಕ್ಕೆ ಸಂದಂ. ತದನಂತರಮೆ ವೃಷಭಸೇನಾದಿ ಪುರುದೇವನಂದನರುಂ ಪರಮಪದಮುಮಂ ಪಡೆದರ್.

ಇದು ಸಕಲಶಾಸ್ತ್ರ ಸಂಯಮ ಸಂಪನ್ನ ಶ್ರೀಮದಜಿತಸೇನ ಭಟ್ಟಾರಕ
ಚರಣ ಕಮಲ ಚಂಚರೀಕ ಧರ್ಮವಿಜಯ ಶ್ರೀಮಚ್ಚಾವುಂಡರಾಜ
ವಿರಚಿತ ತ್ರಿಷಷ್ಟಿಲಕ್ಷಣ ಮಹಾಪುರಾಣದೊಳ್ ಆದಿಪುರಾಣಂ

ಸಮಾಪ್ತಂ.

1. ಘ. ಧನದೇವನುಂ. 2. ಘ. ಅತಿವೃದ್ಧನುಂ. 3. ಘ. ನಾಗರದತ್ತನುಂ.

ಕವಿಚರಿತೆ.

ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್ ಬಹದೂರ್

ಶ್ರೀಮಾನ್ ರಾ. ನರಸಿಂಹಾಚಾರ್ಯ,

ಎಂ.ಎ., ಎಂ.ಆರ್.ಎ.ಎಸ್.—ಅವರಿಂದ.

ಈ ಪತ್ರಿಕೆಯ ಒಂದೊಂದು ಸಂಚಿಕೆಯಲ್ಲಿ, ಪ್ರಸಿದ್ಧನಾದ ಒಬ್ಬೊಬ್ಬ ಕರ್ಣಾಟಕ ಕವಿಯ ಚರಿತವನ್ನು ನಿರೂಪಿಸಬೇಕೆಂದು ಉದ್ದೇಶಿಸಿದೆ. ತದನುಸಾರವಾಗಿ ಈ ಸಂಚಿಕೆಯಲ್ಲಿ, ಕನ್ನಡದೊಳಗೆ ಜ್ಯೋತಿಷವನ್ನು ಬರೆದವರಲ್ಲಿ ಪ್ರಥಮಕವಿಯಾಗಿ ಸುಮಾರು ೧೧-ನೆಯ ಶತಮಾನದ ಮಧ್ಯಭಾಗದಲ್ಲಿ ಚಾಲುಕ್ಯರಾಜನಾದ ಆಹವಮಲ್ಲನ ಆಶ್ರಿತನಾಗಿ ಬಾಳಿದ "ಶ್ರೀಧರಾಚಾರ್ಯ"ನೆಂಬ ಜೈನಕವಿಯ ಚರಿತವನ್ನು ಸಂಗ್ರಹವಾಗಿ ನಿರೂಪಿಸಿದೆ. ಈತನ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವು ಜ್ಯೋತಿಶ್ಶಾಸ್ತ್ರವಾದರೂ, ಅನಾವಶ್ಯಕವಾದ ಅಥವಾ ವ್ಯಾಕರಣದುಷ್ಟವಾದ ಪದಗಳನ್ನು ಉಪಯೋಗಿಸದೆ ಬರೆದಿರುವುದನ್ನು ನೋಡಿದರೆ, ಗ್ರಂಥಕರ್ತನ ಅನ್ಯಾದೃಶವಾದ ಕವಿತಾಶಕ್ತಿ ವ್ಯಕ್ತವಾಗುತ್ತದೆ.

ಶ್ರೀಧರಾಚಾರ್ಯ (೧೦೪೯).

ಈತನು 'ಜಾತಕತಿಲಕ' ವನ್ನು ಬರೆದಿದ್ದಾನೆ. ಚಂದ್ರಪ್ರಭಚರಿತೆಯನ್ನೂ ಬರೆದಿರುವಂತೆ ಜಾತಕತಿಲಕದ ಅಂತ್ಯಭಾಗದಲ್ಲಿರುವ,

ಸುಭಗವಚಂ ಕಾವ್ಯಕವಿ ।
ತ್ವಭೂಷಣಂ ಶ್ರೀಧರಾಚಾರ್ಯರಚಿತಂ ಚಂದ್ರ ।
ಪ್ರಭಚರಿತಂ ಶಾಸ್ತ್ರಕವಿ ।
ತ್ವಭೂಷಣಂ ಧರೆಗೆ ನೆಗಟ್ಟ ಜಾತಕತಿಲಕಂ ॥

ಅದಿದೆನ್ನದೆ ಜಾತಕತಿಲ ।
ಕದೊಳಱುವುದು ಗಣಿತಧರ್ಮಮಂ ಸಕಳಜಗ ॥
ದ್ವಿದಿತಂ ಚಂದ್ರಪ್ರಭಚರಿ ।
ತದೊಳಱುವುದು ಕಾವ್ಯಧರ್ಮಮಂ ಬುಧನಿವಹಂ ॥

ಎಂಬ ಪದ್ಯಗಳಿಂದ ತಿಳಿಯುತ್ತದೆ. ಆದರೆ ಈ ಗ್ರಂಥವು ನಮಗೆ ದೊರೆತಿಲ್ಲ.

ಇವನು ಜೈನಕವಿ. ಇವನ ಸ್ಥಳ ಬೆಳುವಳ ನಾಡಿನಲ್ಲಿರುವ ನರಿಗುಂದ. "ವಿಪ್ರಕುಲೋತ್ತಮಂ" ಎಂದು ಹೇಳಿಕೊಂಡಿದ್ದಾನೆ. "ಇದುವರೆಗೂ ಆರೂ ಕನ್ನಡದಲ್ಲಿ ಜ್ಯೋತಿಷವನ್ನು ಬರೆದಿಲ್ಲ; ನೀನು ಜಾತಕತಿಲಕವನ್ನು ಬರೆಯಬೇಕು" ಎಂದು ವಿದ್ವಾಂಸರು ಹೇಳಲು ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಇದರಿಂದ ಕನ್ನಡದಲ್ಲಿ ಜ್ಯೋತಿಷವನ್ನು ಬರೆದವರೊಳಗೆ ಇವನೇ ಪ್ರಥಮ ಕವಿಯೆಂದು ತಿಳಿಯುತ್ತದೆ. ಈ ಅಂಶವನ್ನು **ಬಾಹುಬಲಿ** (ಸು. ೧೫೬೦) ತನ್ನ ನಾಗಕುಮಾರ ಕಥೆಯ ಆದಿಭಾಗದಲ್ಲಿಯ ಈ ಪದ್ಯದಲ್ಲಿ ದೃಢೀಕರಿಸುತ್ತಾನೆ:—

ಜ್ಯೋತಿಷವಿದ್ಯೆಗೆ ಮೊದಲಿಗ ನಲೆವಾದಿ। ವ್ರಾತಭಯಂಕರನೆನಿಪ।
ಖ್ಯಾತಿಗೆ ನೆಲೆಯಾದ ಶ್ರೀಧರಾಚಾರ್ಯರ। ಪ್ರೀತಿ ಕೃತಿಗೆ ಬಲಗೊಂಬೆ॥

ಈ ಗ್ರಂಥವನ್ನು ಕವಿ "ಧರಣಿಗಿರಿನಿಧಿ ಶಕಾಂಕಂ ವಿರೋಧಿ ಸಂವತ್ಸರದಲ್ಲಿ" ಎಂದರೆ ಶಕ ೯೭೧ (ಕ್ರಿಸ್ತ ೧೦೪೯) - ರಲ್ಲಿ ಬರೆದಂತೆ ಹೇಳುತ್ತಾನೆ. ಗ್ರಂಥಾಂತ್ಯದಲ್ಲಿ "ಧಾತ್ರಿಯನಾಹವಮಲ್ಲಭೂಮಿಪಾಳಕನೆಸೆದಾಳ್ಗೆ" ಎಂಬುದರಿಂದ ಕವಿ ಚಾಳುಕ್ಯರಾಜನಾದ ಆಹವಮಲ್ಲನ (೧೦೪೨ - ೧೦೬೮) ಆಳಿಕೆಯಲ್ಲಿದ್ದನೆಂದು ತಿಳಿಯುತ್ತದೆ.

ಈ ಕವಿಗೆ ಗದ್ಯಪದ್ಯವಿದ್ಯಾಧರ, ಬುಧಮಿತ್ರ ಎಂಬ ಬಿರುದುಗಳುಂಟು. ತನ್ನ ಗುಣಾದಿಗಳನ್ನೂ ಕವಿತಾಪ್ರೌಢಿಯನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ವಿಧುವಿಶದಯಶೋನಿಧಿ ಕಾ।
ವ್ಯಧರ್ಮ ಜಿನಧರ್ಮ ಗಣಿತಧರ್ಮ ಮಹಾಂಭೋ॥
ನಿಧಿಯೆನೆ ನೆಗಳ್ದಂ ಜಗದೊಳ್।
ಬುಧಮಿತ್ರಂ ನಿಜಕುಲಾಂಬುಜಾಕರಮಿತ್ರಂ॥

ರಸಭಾವಸಮುಸ್ಥಿತನೆಂ।
ದು ಸುಭಗನೆಂದಖಿಳವೇದಿಯೆಂದಸ್ಮಿತನೆಂ॥
ದು ಸಮಗ್ರನೆಂದು ಸಲೆ ಬ।
ಣ್ಣಿಸುವುದು ಧರೆ ಗದ್ಯಪದ್ಯವಿದ್ಯಾಧರನಂ॥

ಅನವದ್ಯಂ ಕವಿತಾಗುಣಾರ್ಣವನಿಳಾದೇವಾನ್ವಯಾಬ್ಜಾಂಬುಜಾ।
ರಿನಿಭಂ ಪ್ರಾಭವವಿಳಾಸಿನೀ ಮನಸಿಜಂ ಶ್ರೀ ಶೀಲಭದ್ರಂ ದ್ವಿಷ॥
ಜ್ಜನ ದುರ್ವಾರಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕೃತಾ।
ರ್ಥನೊ ಕರ್ಣಾಟ ಕವೀಂದ್ರ ಸದ್ಗುಣ? ಗುಣಾ ಸಂಜ್ಞಾಧರಂ ಶ್ರೀಧರಂ॥

ಕೊನೆಯ ಪದ್ಯದಲ್ಲಿ **ಆದಿಪಂಪ** (ಕವಿತಾ ಗುಣಾರ್ಣವ), **ಚಂದ್ರ** ಅಥವಾ

ಚಂದ್ರಭಟ್ಟ (ಅಂಬುಜಾರಿ), **ಮನಸಿಜ**, ? **ಗುಣವರ್ಮ** (ಶೀಲಭದ್ರ), **ಗಜಾಂಕುಶ**, **ರನ್ನ** ಎಂಬ ಪೂರ್ವಕವಿಗಳ ಹೆಸರನ್ನು ಸೂಚಿಸಿದ್ದಾನೆ. ಇದರಿಂದ ಈ ಕವಿಗಳೆಲ್ಲರೂ ೧೦೪೯ - ಕ್ಕೆ ಹಿಂದೆ ಇದ್ದವರೆಂಬುದು ವ್ಯಕ್ತವಾಗುತ್ತದೆ.

"ಧರಣೀಸ್ತುತಾರ್ಯಭಟನಂ । ನಿರತಿಶಯೋಜ್ಜ್ವಳಯಶಃಪ್ರಕೋರಕನಂ ಶ್ರೀ । ಕರಣ" ಎಂಬ ಅಸಮಗ್ರವಾದ ಪದ್ಯದಲ್ಲಿ ಆರ್ಯಭಟ್ಟನ ಹೆಸರು ಹೇಳಿದೆ.

ಇವನ ಗ್ರಂಥ—

ಜಾತಕತಿಲಕ.

ಇದು ಜ್ಯೋತಿಷಗ್ರಂಥ; ಕಂದವೃತ್ತಗಳಲ್ಲಿ ಬರೆದಿದೆ: ೨೪ ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ. ಅಧಿಕಾರಗಳ ಹೆಸರು—ಸಂಜ್ಞಾ, ಬಲಾಬಲ, ಗರ್ಭ, ಜನ್ಮ, ತಿರ್ಯಗ್ಜನ್ಮ, ಅರಿಷ್ಟ, ಅರಿಷ್ಟಭಂಗ, ಆಯುರ್ದಾಯ, ದಶಾಂತರ್ದಶಾ, ಅಷ್ಟಕವರ್ಗ, ಜೀವ, ರಾಜಯೋಗ, ನಾಭಿಸಂಯೋಗ, ಚಂದ್ರಯೋಗ, ದ್ವಿತ್ರಿಯೋಗ, ದೀಕ್ಷಾಯೋಗ, ರಾಶಿ, ಲಗ್ನಭಾವ, ದ್ರೇಕ್ಕಾಣ, ದೃಷ್ಟ, ಅನಿಷ್ಟ, ಸ್ತ್ರೀಜಾತಕ, ನಿರ್ಯಾಣ, ನಷ್ಟಜಾತಕ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ಪದಪೂರಣಮನಣಂ ಪುಗ ।
ಸದೆ ಕುದಿದು ವೃಥಾಕ್ಷರಂಗಳಂ ಪ್ರಾಸದೊಳೆ ॥
ಕ್ಕದೆ ಶಾಸ್ತ್ರದರ್ಥಮಂ ಬಿಸು ।
ಡದೆ ಪೂಣ್ಕೆಯಿನೋದುವೇಳ್ಪೊಡಾರ್ ಮೆಚ್ಚರಿದಂ ॥

ಅಮಿತಾರ್ಥಂ ಸಕಲಾಚಾ ।
ರ್ಯಮತಾಂತಸ್ಸಾರಮತಿಗಭೀರಂ ಹೃದಯಂ ॥
ಗಮಮನ್ಯಶಾಸ್ತ್ರನಿರಪೇ ।
ಕ್ಷಮೆಂಬಿನಂ ಖ್ಯಾತಮಾಯ್ತು ಜಾತಕತಿಲಕಂ ॥

ಸುಕರಮುಚಿತಕ್ರಿಯಾಕಾ ।
ರಕಮಪಶಬ್ದಪ್ರದೂರಮುಪನೇಯಂ ಸಾ ॥
ರ್ಥಕಪದವಿನ್ಯಾಸಂ ಜಾ ।
ತಕತಿಲಕಮಿದೆಂದು ಕೊಂಡುಕೊನೆಯದರೊಳರೇ ॥

ಲಲಿತವಚೋಲಲನಾನನ ।
ತಿಲಕಂ ದೈವಜ್ಞವದನತಿಲಕಂ ವಿದ್ವ ॥
ತ್ಕುಲಮುಖತಿಲಕಂ ಜಾತಕ ।
ತಿಲಕಂ ತ್ರೈಲೋಕ್ಯತಿಲಕಮಿದು ಕೇವಲಮೇ ॥

ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ. ಅಧಿಕಾರಾಂತ್ಯದಲ್ಲಿ ಈ ಗದ್ಯವಿದೆ :—

ಇದು ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾನಂ ಸರಸಪ್ರಸನ್ನಂ ವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ ಶ್ರೀ ಶ್ರೀಧರಾಚಾರ್ಯಪ್ರಣೀತಮಪ್ಪ ಜಾತಕತಿಲಕದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಜ್ಯೋತಿಷದ ಪ್ರಯೋಜನ.

ಭವಬದ್ಧಶುಭಾಶುಭಕ ।
ರ್ಮವಿಪಾಕದ ಫಲವನಱುಪುಗುಂ ಜ್ಯೋತಿಜ್ಞಾ ॥
ನವದೆಂತೆನೆ ಕತ್ತಲೆವನೆ।
ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆಱದಿಂ ॥

ಗ್ರಹಬಲ.

ಶಸಿಯಿಂದಂ ಮಹಿಜಾತನಾ ಮಹಿಜನಿಂದಂ ಸೌಮ್ಯನಾ ಸೋಮನಂ ।
ದನನಿಂದಂ ಗುರುವಾ ಸುರೇಂದ್ರಗುರುವಿಂದಂ ಶುಕ್ರನಾ ಶುಕ್ರನಿಂ ॥
ವನಜಾತಾಹಿತನಾ ವನೇಜರಿಪುವಿಂ ಪಂಕೇಜಮಿತ್ರಂ ಬಳಾ ।
ಢ್ಯನೆನಿಕ್ಕುಂ ಕ್ರಮದಿಂದಮಾ ಗ್ರಹಬಳಂ ನೈಸರ್ಗಿಕಂ ನಾಮದಿಂ ॥

ಸ್ತ್ರೀಪುಂಜನನ.

ಅಸಮಾಲಯದೊಳ್ ನಿಲೆ ಸೂ ।
ರ್ಯಸುರೇಜ್ಯರ್ ಬಳಯುತರ್ ನರಂ ಪುಟ್ಟುಗುಮಾ ॥
ಅಸಿತೇಂದುಗಳತಿಬಳರಾ ।
ಗಿ ಸಮದೊಳಿರೆ ರಮಣಿ ಪುಟ್ಟುಗುಂ ಬುಧಮಿತ್ರಾ ॥

ಪ್ರಸವದಿನ.

ವಿದಿತಂ ಕಾಂತೆಗೆ ಪೊಟ್ಟುತೀವಿದುದು ಪೇೞುನ್ನಾವುದಕ್ಕುಂ ಪ್ರಸೂ ।
ತದಿನಂ ತಾನೆನೆ ಚಂದ್ರನಾವ ಗೃಹದೊಳ್ ತತ್ಕಾಲದೊಳ್ ನಿಂದನಾ ॥
ಸದನದ್ವಾದಶಭಾಗಮಂತೆನಿತು ಸಲ್ಗುಂ ಮುಂತೆ ತತ್ಸಂಖ್ಯೆ ಗೇ ।
ಹದಿನತ್ತಲ್ ? ನಿಶಚಂದ್ರಮಂ ಪ್ರಸವಕಾಲಂ ಕಾಂತೆಗಂತಾ ದಿನಂ ॥

ಅರಿಷ್ಟನಾಶ.

ಪಿರಿದು ಪಳಾಳದೊಳೇಂ ಸುರ ।
ಗುರುವೊರ್ವನೆ ವೀರ್ಯವಂತನುಂ ಕಾಂತನುಮಾ ॥

ಮುದಿಯ ಮಹಾಫಲವನ್ನು ಬಯಸುವಂತೆ ಹಾಸ್ಯಾಸ್ಪದವೂ ಆಗಿರುವುದೆಂದು ನಂಬಿರುವೆನು.

ಕನ್ನಡ ಕವಿತೆಯ ಭವಿತವ್ಯ.

ಮ॥ ಹ. ನಾರಾಯಣರಾವ್, ಬಿ. ಎ., ಬಿ. ಎಲ್. ಅವರು ಧಾರವಾಡದಲ್ಲಿ ನೆರೆದ ಕರ್ಣಾಟಕ ಸಾಹಿತ್ಯ ಸಮ್ಮೇಳನಕ್ಕೆ ಕಳುಹಿದ "ಕನ್ನಡ ಕವಿತೆಯ ಭವಿತವ್ಯ" ಎಂಬ ಉಪನ್ಯಾಸದಲ್ಲಿ, ಇಂಗ್ಲಿಷ್‌ಮಾರ್ಗಗಳ ಅನುಸರಣದಿಂದ ಇನ್ನು ಮುಂದೆ ಕನ್ನಡಕಾವ್ಯಗಳ ಪ್ರಸಂಗ, ರಚನೆ, ಅಲಂಕಾರ ಇವುಗಳು ಹೇಗೆ ಬದಲಾಗಬಹುದೆಂದು ವಿಚಾರಮಾಡಿತ್ತು. ಕವಿಗಳು ಪಾರಮಾರ್ಥಿಕವಿಷಯಗಳಿಗಿಂತ ರಾಷ್ಟ್ರಿಕ, ಸಾಮಾಜಿಕ, ಚಾರಿತ್ರಿಕ ಮುಂತಾದ ಲೌಕಿಕ ಪ್ರಮೇಯಗಳಿಗೆ ಹೆಚ್ಚು ಗಮನಕೊಡುವರೆಂದೂ ; ದೀರ್ಘಪುರಾಣಗಳ ಬದಲಾಗಿ ಲಘುಕೃತಿಗಳನ್ನು ರಚಿಸುವರೆಂದೂ ; ಛಂದಸ್ಸಿನಲ್ಲಿ ಹೊಸ ಮಾದರಿಗಳನ್ನು ಕಲ್ಪಿಸಬಹುದೆಂದೂ; ಅಲಂಕಾರದಲ್ಲಿ ಅಚೇತನ ಪದಾರ್ಥಗಳಿಗೆ ವಾಕ್‌ಶಕ್ತಿಯನ್ನೂ, ಮಾನಸಿಕಭಾವಗಳಿಗೆ ಮೂರ್ತಿತ್ವವನ್ನೂ ಆರೋಪಿಸುವ ಉತ್ಪ್ರೇಕ್ಷೆಯು ರೂಢಿಯಾಗಬಹುದೆಂದೂ ; ಹಳಗನ್ನಡಕ್ಕಿಂತ ನಡುಗನ್ನಡವನ್ನು ಹೆಚ್ಚಾಗಿ ಪ್ರಯೋಗಿಸುವರೆಂದೂ ಸೂಚಿಸಿತ್ತು. ಈ ವಚನಗಳಿಗೆ ಉದಾಹರಣವಾಗಿ ಮಿಲ್ಟನ್ ಮತ್ತು ಷೆಲ್ಲಿ, ಇವರ ಕಾವ್ಯಗಳಿಂದ ಕೆಲವು ಭಾಗಗಳನ್ನು ಕನ್ನಡಿಸಿಹಾಕಿತ್ತು. ಈ ಎರಡು ಕಾವ್ಯಗಳ ಸಾರಾಂಶವನ್ನೂ ನಿರೂಪಿಸಿದರೆ ಆ ಉಪನ್ಯಾಸದ ತಾತ್ಪರ್ಯವು ವಿಶದವಾದೀತು.

ಚಿಂತನ.

(ಮಿಲ್ಟನ್ ಕವಿಯ 'ಇಲ್ಪೆನ್ಸೆರೋಸೋ' ಎಂಬ ಕಾವ್ಯ.)

ತೊಲಗು ಹೃದಯವ ಮರುಳುಗೊಳಿಸುವಾಮೋದವೇ ।
ಸಲಹುವಳು ನಿನ್ನನೊಬ್ಬಳು ಜನನಿ ಮೋಹವೇ ॥
ಸ್ಥಿರಚಿತ್ತ ನಿನ್ನಾಟಮೊಡವೆಗಳ ನೀಗುವುದು ।
ಬರಿಯ ಸೋಮಾರಿಗಳ ಬಗೆ ನಿನಗೆ ಸಲ್ಲುವುದು ॥

ರವಿಕಿರಣದಲಿ ಕುಣಿಯುವಗಣಿತಕಣಗಳ ಪರಿ ।
ವಿವಿಧಕಲ್ಪನೆಗಳನು ತುಂಬುವುದೆ ನಿನಗೆ ಸರಿ ॥
ಜಯತು ಚಿಂತಾದೇವಿ ಸುವಿವೇಕಿ ಶುದ್ಧಮತಿ ।
ಜಯತು ಗಂಭೀರಾಸ್ಯೆ ನಿಯತಾಕ್ಷಿ ವಿನಯವತಿ ॥

ಸಮಪದದ ಮಂದಗತಿಯಿಂದ ವೈಭವವೆರಸಿ ।
ಸುಮನರಲಿ ಸಂಸರ್ಗಬದ್ಧದೃಷ್ಟಿಯನಿರಿಸಿ ॥

ಧ್ಯಾನಪರನೇತ್ರಗಳಲಾತ್ಮವಡಗಿರುವಂತೆ ।
ತಾನೆನುವ ಬೋಧವಿಲ್ಲದ ಶಿಲಾಕೃತಿಯಂತೆ ॥

ತಿರೆಯಲವತರಿಸಿ ತಣ್ಣಗೆ ನೋಡಿ ನಡೆದು ಬಾ ।
ಬರುತ ಜೊತೆಯಲಿ ಶಾಂತಿವಿಶ್ರಾಂತಿಗಳನು ತಾ ॥
ಜಪದ ತುಷ್ಟಿಯನುಂಬ ಕೃಶತನುವಿನುಪವಾಸ ।
ಉಪವನಗಳಲಿ ತಿರುಗಿ ಸುಖಿಸುವ ನಿರಾಯಾಸ ॥

ಏರಿ ದೀಪ್ತಿಯ ಲೋಕದಲಿ ಚರಿಸುವ ಧ್ಯಾನ ।
ಊರಿನಲಿ ಧರ್ಮವರ್ಧಕಭಿಕ್ಷುಗಳ ಗಾನ ॥
ದುಡಿದು ಹಗಲೆಲ್ಲ ಬಯ್ಗಿನಲಿ ಬಡವರು ಸೋತು ।
ಗುಡಿಸಲನು ಸೇರಿ ಮಕ್ಕಳನಾಡಿಸುವ ಮಾತು ॥

ಕೆರೆಯ ತಡಿಯಲಿ ದೇವಕುಲದ ಘಂಟಾಸ್ವನಿತ ।
ಇರುಳಿನಲಿ ಕೋಗಿಲೆಯ ವಿಲಸನದ ಮಧುರರುತ ॥
ಚಿಂತನೆಗೆ ವಿಹಿತವಿದು ನಿಃಶಬ್ದರಜನಿಯಲಿ ।
ಇಂತಿರುವ ಸಹಕಾರಿಗಳು ನಿನಗೆ ಜೊತೆಯಿರಲಿ ॥

ವ್ಯೋಮದ ಅರಣ್ಯದಲಿ ದಾರಿಮರೆತವನಂತೆ ।
ರೋಮಪಟದಿಂದ ತಲೆಬಗ್ಗಿ ಸಿಣೆಕುವನಂತೆ ॥
ಮೋಡಗಳ ಹಿಂದೆಸೆವ ನಡುವಿರುಳ ಚಂದಿರನ ।
ನೋಡುತ್ತ ನುಣ್ಬಯಲಿನಲಿ ಮುಂದಪರ್ಯಟನ ॥

ಉಡುಗತಿಯನಟ್ಟದಿಂದೀಕ್ಷಿಸುತ ಜಾಗರಣ ।
ಸೊಡರನುರಿಸುತ ಪಠನದೊಳಗಾತ್ಮವಿಸ್ಮರಣ ॥
ಶ್ರುತಿಯಲುಪದಿಷ್ಟಪರಮಾರ್ಥದ ರಹಸ್ಯಗಳ ।
ಸ್ಮೃತಿಪುರಾಣೋಕ್ತಸುಂದರಬೋಧಚರಿತಗಳ ॥

ಇತಿಹಾಸದಲಿ ಧರ್ಮರಕ್ಷಣದ ಮರ್ಮವನು ।
ಅತಿಗಳೆದು ನಡೆಯುವರ ದಂಡಿಸುವ ರೀತಿಯನು ॥
ಕರುಣಪ್ರಧಾನನಾಟಕಕಥಾಯೋಜನವ ।
ಗುರುಭಾವಗಳ ಮನದಲೆಬ್ಬಿಸುವ ಗಾಯನವ ॥

ಚಿಂತಿಸುತ ಮತ್ತೆ ಭಾವಿಸುತ ಗುಪ್ತಾರ್ಥವನು ।
ಇಂತು ನಾನಾಪರಿಯಲಿರುಳೆಲ್ಲ ಕಳೆಯುವೆನು ॥
ಬೆಳಗು ಮುಗಿಲನು ತಳೆದು ಬರಲು ಮರುತನು ಬೀಸಿ
ಗಳಗಳನೆ ಮಳೆಹನಿದು ಹೋಗಲೆಲೆಗಳ ನನಸಿ ॥

ಉರಿಗದಿರುಗಳ ಸುರಿಯುವಿನನ ಪ್ರತಾಪದಲಿ ।
ಕಿರುವೆಳಗಿನುಪವನದ ಸಂಶ್ರಯವು ನನಗಿರಲಿ ॥
ವಟಶಾಖೆಗಳ ತೋರಣಾವಳಿಯ ನೆಳಲಿನಲಿ ।
ಅಟನಪಥಗಳು ಮಂದವಿಹರಣಕೆ ನೀಳ್ದಿರಲಿ ॥

ಅಲ್ಲೊಂದು ತೊರೆಯುಬಳಿ ಹೊಳಪು ನುಸುಳಲು ಬಿಡದೆ ।
ಸಿಲ್ಲುಹಾಸರೆಯೊಳಗೆ ಪಾಮರರು ಕಣ್ಣಿಡದೆ ॥
ನೀರು ಗುಳುಗುಳಿಸಿ ಹೂಗಳ ಬಂಡಿನುಣಿಕೆಯಲಿ ।
ಆರಡಿಯು ಮೊರೆಯೊಡನೆ ಮಂದನಿದ್ರೆಯು ಬರಲಿ ॥

ಅನಿಲವಿಧರೂಪಗಳು ರಂಜಿಸಿ ಸ್ವಪ್ನದಲಿ ।
ವನದೇವಿ ಸುಸ್ವನವ ಜಾಗರದಲೆಬ್ಬಿಸಲಿ ॥
ಆಗಾಗ ಪತನರತಯತಿನಿಲಯಗಳ ಕಡೆಗೆ ।
ಸಾಗಗೊಡು ಭಕ್ತಿಯಿಂದೆನ್ನಕಾಲಿನ ಕಡೆಗೆ ॥

ಕಂಬಗಳ ದಿಂಡು ಮೇಲ್ಮುಚ್ಚಳದ ನಿಡುನಿಲವು ।
ತುಂಬಕೆತ್ತಿದ ದಾರಬಂದಕವಗಳ ಚೆಲುವು ॥
ಭಕ್ತಿಸ್ಫೂರಕಮಂದದಿನರುಚಿಯ ಗಾಂಭೀರ್ಯ ।
ಸೂಕ್ತಪಾಠವ ಕೇಳಿದಾನಂದದೌದಾರ್ಯ ॥

ಇದನೆಲ್ಲ ಚಿಂತಿಸಿ ಸ್ವರ್ಗವಿದಿರಿಗೆ ಬರಲಿ ।
ಮುದಿತನದಲೆನಗೆ ಮುನಿಪದವಿಯೇ ಪ್ರಾಪ್ತಿಸಲಿ ॥

ಮುಗಿಲು.

(ಷೆಲ್ಲಿಕವಿ)

ವಾರಿಧಿನದಿಗಳಲೆದ್ದು ಕುಸುಮಗಳ ।
ಆರಿದಬಾಯಿಗೆ ಹೊಸಮಳೆಗರೆಯುವೆ ॥
ನಡುಹಗಲಲಿ ತೂಕಡಿಸುವ ಕುಡಿಗಳ ।
ಒಡಲಿನ ಹೊದಕೆಗೆ ನೆಳಲನು ಕವಿಸುವೆ ॥ ॥೧॥

ತರುಗಳ ಕರಕಾಹತಿಯಲಿ ಮೊರೆಯಿಸಿ ।
ಮರುತನ ಮೇಲೇರಾಟವ ಮಾಡುವೆ ॥
ಗೂಡುಗಳಲಿ ಹಕ್ಕಿಗಳನು ತೋಯಿಸಿ ।
ಓಡಿ ಗದರಿ ಕದಕದಿಸಿ ನಗಾಡುವೆ ॥ ॥೨॥

ಕುಂಚದೆ ಗಿರಿಪುರಸರಗಳ ತುಳಿಯುತ ।
ಮಿಂಚನು ದಾರಿಬೆಳಗಿಸಲು ಹೂಡುವೆ ॥

ಕಡಲಲಿ ವರುಣನ ಕುಣಿತಕೆ ನಲಿಯುತ ।
ಉಡುಗಳ ನಗೆಯನು ಪವಡಿಸಿ ನೋಡುವೆ ॥ ॥೩॥

ಡೊಂಗರಿಗಳನುದ್ಗಮದಲಿ ಮೆರೆಯಿಸಿ ।
ಕೆಂಗದಿರನು ನನ್ನಂಗಕೆ ನೆಸೆವನು ॥
ಉರಿಬಿಟ್ಟ ಪಳಿರಕೆಗಳನು ಪಸರಿಸಿ ।
ಗರುಡನೆರಗಿದಂತೆಸಕವಿರಿಸುವನು ॥ ॥೪॥

ಕಂತುವರವಿವಿಶ್ರಾಂತಿಯ ರಾಗದಿ ।
ಅಂತರವಾಸದ ಯವನಿಕೆ ಬಿಡುತಲಿ ॥
ಇಕ್ಕೆಯ ಸೇರಿದ ಕಲರವದಂದದಿ ।
ರೆಕ್ಕೆಮುಡಚಿ ನಿಲ್ಲುವೆನಾಗಸದಲಿ ॥ ॥೫॥

ಇರುಳಿನಲೆನ್ನಯ ಶಿಬಿಕೆಯ ಪಟವನು ।
ಸುರರ್ ಕೇಳುವವರಿ ರತಿ ಮುಟ್ಟುತ ॥
ಇರಿಯಲು ತುಪ್ಪಟದಾತೆಳುನೆಲವನು ।
ಕಿರುನಗೆಯುಡುಗಳು ನೋಡುವುವಿಣಿಕುತ ॥ ॥೬॥

ಹೊನ್ನಿನ ತುಂಬಿಗಳಂತವು ಸುಳಿಯಲು ।
ನನ್ನಲಿ ಚಲ್ಲಿದ ತುಳುಕಿಸುತಿರುವುವು ॥
ಅಂಬುಧಿನದಿಗಳ ಕಡೆಯಲಿ ನೋಡಲು ।
ಅಂಬರದೊಡನವು ಬಿದ್ದಂತಿರುವುವು ॥ ॥೭॥

ಬೆಂಗದಿರನ ಬಿತ್ತರಿಗೆಗೆ ಮುಸುಸಿಯು ।
ಇಂಗದಿರಗೆ ಮುತ್ತಿನಗುಡಿಕಟ್ಟುವೆ ॥
ಮರುತನು ಹಾರಿಸಲೆನ್ನ ಪತಾಕೆಯ ।
ಗಿರಿಗಳನಡಗಿಸಿ ಭಗಣವನಟ್ಟುವೆ ॥ ॥೮॥

ನಗಗಳ ಮೇಲಕೆ ಚಪ್ಪರವಡರಿಸಿ ।
ಖಗಕುಲಗಳನೊತ್ತರಿಸೀಡಾಡುವೆ ॥
ಸುರಧನುವರ್ಣದ ತೋರಣವೇರಿಸಿ ।
ಮೆರೆಯುತ ವಿಜಯೋತ್ಸವವನು ಮಾಡುವೆ ॥ ॥೯॥

ಧರೆ ಹುಟ್ಟಿಸುವುದು ದಿವ ಪೋಷಿಸುವುದು ।
ತಿರೆಸರಧಿಗಳ ಸಮಾಧಿಯ ಸೇರುವೆ ॥
ಅತಿಮಾಯಿಕಜೀವನ ಶಾಶ್ವತವಿದು ।
ಕ್ಷಿತಿಯೊಳಗಿಂಗುತನಂತದಲೀರುವೆ ॥ ॥೧೦॥

ಪ್ರಚಲಿತವಾದ ಕನ್ನಡಭಾಷೆಗೆ ತಕ್ಕ ವ್ಯಾಕರಣ ರಚನೆ.

ಪಂಡಿತ ರಾಜಪುರೋಹಿತ ನಾರಾಯಣಾಚಾರ್ಯರಿಂದ.

"ವ್ಯಾಕರಣ" ಶಬ್ದದ ಯೌಗಿಕಾರ್ಥವು "ವಿವೇಚನ" ಎಂದು ಇದೆ. ಆದರೆ ರೂಢಿಯಲ್ಲಿ ಭಾಷೆಯ ವಿವೇಚನಕ್ಕೆ ಮಾತ್ರ ವ್ಯಾಕರಣವೆಂಬ ಹೆಸರುಂಟಾಗಿದೆ. ನಾಗವರ್ಮ, ಕೇಶವ, ಭಟ್ಟಾಕಳಂಕ ಪ್ರಭೃತಿಗಳು, ಭಾಷಾಭೂಷಣ, ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ಗ್ರಂಥಗಳಲ್ಲಿ ಕನ್ನಡಭಾಷೆಯ ವಿವೇಚನವನ್ನು ಮಾಡಿದ್ದಾರೆ. ಭಾಷೆಯಲ್ಲಿ ಪದ್ಯವೆಂದೂ, ಗದ್ಯವೆಂದೂ ಎರಡು ಮುಖ್ಯವಾದ ಭೇದಗಳುಂಟು. ಈ ಪ್ರಾಚೀನ ವೈಯಾಕರಣರು ತಮ್ಮ ವ್ಯಾಕರಣಗಳಲ್ಲಿ ಕೇವಲ ಪದ್ಯಭಾಷೆಯ ವಿವೇಚನವನ್ನು ಮಾಡಿದ್ದಾರೆಯೇ ಹೊರತು ಗದ್ಯಭಾಷೆಯ ವಿವೇಚನವನ್ನು ಮಾಡಿರುವುದಿಲ್ಲ. ಏಕೆಂದರೆ, ಪ್ರಾಚೀನಕಾಲದ ಭಾಷಾವೈಭವವೆಂದರೆ ಪದ್ಯವೇ ಸರಿ. ಕಾವ್ಯನಾಟಕಗಳೇ ಆಗಲಿ, ಛಂದಶ್ಶಾಸ್ತ್ರ, ಅಲಂಕಾರಶಾಸ್ತ್ರ, ವ್ಯಾಕರಣ, ನಿಘಂಟುಗಳೇ ಆಗಲಿ, ವೈದ್ಯಶಾಸ್ತ್ರ, ಪಾಕಶಾಸ್ತ್ರ, ಜ್ಯೋತಿಶ್ಶಾಸ್ತ್ರ ಮುಂತಾದ ಭೌತಿಕಶಾಸ್ತ್ರಗಳೇ ಆಗಲಿ, ಶಿಲಾಲೇಖನಗಳೇ ಆಗಲಿ ಎಲ್ಲವೂ ಪದ್ಯಭಾಷೆಯಲ್ಲಿಯೇ ಬರೆಯಲ್ಪಟ್ಟಿವೆ. ಸಂಸ್ಕೃತದ ಸ್ಥಿತಿಯೂ ಹೀಗೆಯೇ. ಭಾಸ್ಕರಾಚಾರ್ಯನ ಜ್ಯೋತಿಶ್ಶಾಸ್ತ್ರವೂ, ವಾಗ್ಭಟನ ವೈದ್ಯಗ್ರಂಥವೂ, ಅಮರಸಿಂಹನ ಕೋಶವೂ, ಮಮ್ಮಟನ ಕಾವ್ಯಪ್ರಕಾಶವೂ, ಕಾಳಿದಾಸನ ರಘುವಂಶ ಮಹಾಕಾವ್ಯವೂ, ಹೆಚ್ಚೇಕೆ, ಸಮಸ್ತ ಸಂಸ್ಕೃತವಾಙ್ಮಯವೂ ಪದ್ಯಮಯವಾಗಿದೆ. ಹೀಗಾಗುವುದಕ್ಕೆ ಒಂದು ಬಲವಾದ ಕಾರಣವಿದೆ. ಏನೆಂದರೆ, ಪ್ರಾಚೀನಕಾಲದಲ್ಲಿ ಈಗಿನಂತೆ ಕಾಗದ ಮುದ್ರಣಕಲೆ ಮುಂತಾದ ಬರೆವಣಿಗೆಯ ಉತ್ಕೃಷ್ಟವಾದ ಸಾಧನಗಳು ಇರಲಿಲ್ಲವಾದುದರಿಂದ ಎಲ್ಲ ವಿಷಯಗಳೂ ಬಾಯಲ್ಲಿ ಸ್ಥಿರವಾಗಿ ನಿಲ್ಲುವಂತೆ ಅವುಗಳನ್ನು ಬಾಯಿಪಾಠಮಾಡಿಕೊಳ್ಳುವುದು ಆ ಕಾಲದ ಜನರಿಗೆ ಆವಶ್ಯಕವಾಯಿತು. ಬಾಯಿಪಾಠಮಾಡುವುದಕ್ಕೆ ಗದ್ಯಕ್ಕಿಂತ ಪದ್ಯವೇ ವಿಶೇಷ ಅನುಕೂಲವಾದುದರಿಂದ ಎಲ್ಲ ಗ್ರಂಥಗಳೂ ಪದ್ಯಭಾಷೆಯಲ್ಲಿಯೇ ಬರೆಯಲ್ಪಟ್ಟುವು.

ಕನ್ನಡದಲ್ಲಿ ಚಾವುಂಡರಾಯಪುರಾಣವೂ, ಸಂಸ್ಕೃತದಲ್ಲಿ ಬಾಣಭಟ್ಟನ ಕಾದಂಬರಿಯೂ ಗದ್ಯಗ್ರಂಥಗಳಿರುತ್ತವೆಂದು ಯಾರಾದರೂ ಹೇಳಬಹುದು. ಇಲ್ಲಿ ದುಃಖದ ಸಂಗತಿಯೇನೆಂದರೆ, ಈ ಗ್ರಂಥಗಳು ಛಂದೋಬದ್ಧ ಪದರಚನೆಯಿಂದ ರಚಿಸಲ್ಪಟ್ಟಿಲ್ಲವಾದುದರಿಂದ ಇವು ಗದ್ಯಗಳಾಗಿ ತೋರುವುವೇನೋ ನಿಜ: ಆದರೆ ವಸ್ತುತಃ ಇವು ಪದ್ಯಗ್ರಂಥಗಳೇ ಆಗಿವೆ. ಏಕೆಂದರೆ, ಇವುಗಳಲ್ಲಿ ಪದ್ಯಕ್ಕೆ ಯೋಗ್ಯ

ಧಾರವಾಡದಲ್ಲಿ ನಡೆದ ನಾಲ್ಕನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಪ್ರಬಂಧದ ಸಾರಾಂಶ.

ವಾದ ಭಾಷಾಸರಣಿ, ವಾಕ್ಯರಚನೆ, ಅಲಂಕಾರಗಳು ಉಪಯೋಗಿಸಲ್ಪಟ್ಟಿವೆ: ಎಂದರೆ ಇವು "ಛಂದೋರಚಿತಪದ್ಯ" ಗ್ರಂಥಗಳೆಂದು ಧಾರಾಳವಾಗಿ ಹೇಳಬಹುದು.

ಪ್ರಾಚೀನ ವೈಯಾಕರಣರು ಕೇವಲ ಪದ್ಯಭಾಷೆಯ ಗ್ರಂಥಗಳನ್ನೇ ಲಕ್ಷ್ಯವಾಗಿಟ್ಟುಕೊಂಡು, ತಮ್ಮ ವ್ಯಾಕರಣಗಳನ್ನು ರಚಿಸಿರುವುದರಿಂದ ಗದ್ಯಭಾಷೆಯ ನಿಯಮಾನುಶಾಸ್ತ್ರವೇ ಉದಯವಾಗಲಿಲ್ಲ. ಆದಕಾರಣ ಪ್ರಾಚೀನಕಾಲದಲ್ಲಿ ನಿಜವಾದ ಗದ್ಯಗ್ರಂಥಗಳು ಹುಟ್ಟಲಿಲ್ಲ. ಇಷ್ಟೇ ಅಲ್ಲ. ಆ ಪ್ರಾಚೀನಕಾಲದ ಗದ್ಯರಚನೆಯನ್ನು ನಿರ್ಧರಿಸುವುದಕ್ಕೆ ಸಹ ಈ ಪ್ರಾಚೀನ ವ್ಯಾಕರಣಗಳು ಸಮರ್ಥವಾಗಲರಿಯವು. ಉದಾಹರಣಾರ್ಥವಾಗಿ ಶಬ್ದಮಣಿದರ್ಪಣವನ್ನು ಇಟ್ಟುಕೊಳ್ಳುವ :—

ಕೇಶವನು ಶಬ್ದಮಣಿದರ್ಪಣದ ಪೀಠಿಕೆಯಲ್ಲಿ—

ಗಜಗನ ಗುಣನಂದಿಯ ಮನ ।
ಸಿಜನಸಗನ ಚಂದ್ರಭಟ್ಟ ಗುಣವರ್ಮಶ್ರೀ ॥
ವಿಜಯರ ಹೊನ್ನನ ಹಂಪನ ।
ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ ॥ ಪೀಠಿಕೆ ॥ ೫ ॥

ಎಂಬ ಸೂತ್ರದಲ್ಲಿ, ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ಹೊನ್ನ, ಹಂಪ, ಸುಜನೋತ್ತಂಸ ಇವರ ಗ್ರಂಥಗಳ ಪ್ರಯೋಗಗಳನ್ನು ಲಕ್ಷ್ಯವಾಗಿಟ್ಟುಕೊಂಡಿದ್ದೇನೆಂದು ಹೇಳಿದ್ದಾನೆ. ಇವರಲ್ಲಿ ಎಲ್ಲರೂ ಕೇವಲ ಪದ್ಯಗ್ರಂಥಕಾರರಾಗಿದ್ದಾರೆಯೇ ಹೊರತು ಗದ್ಯಗ್ರಂಥಕಾರರು ಒಬ್ಬರೂ ಇಲ್ಲ. ಎಂದ ಬಳಿಕ ಕೇಶವನು ಕೇವಲ ಪದ್ಯಗ್ರಂಥಗಳನ್ನು ಲಕ್ಷ್ಯವಾಗಿಟ್ಟುಕೊಂಡು, ವ್ಯಾಕರಣವನ್ನು ರಚಿಸಿದ್ದಾನೆಂಬುದು ವ್ಯಕ್ತವಾಯಿತು.

ಇನ್ನು ಈ ವ್ಯಾಕರಣದೊಳಗಿನ ನಿಯಮಗಳು ಈಗಿನ ಗದ್ಯಭಾಷೆಗೆ ಹೇಗೆ * ಅನ್ವಯಿಸುವುದಿಲ್ಲವೆಂಬುದನ್ನು ತೋರಿಸುವ :—

ಕೇಶವನು ಶಬ್ದಮಣಿದರ್ಪಣದ—

ವಿದಿತ ವಿಶೇಷಣ ಪದಮುಂ
ನೊಡಲ ವಿಭಕ್ತಿಗಳನಾಂತು ವಾಕ್ಯದ ಮೊದಲೊಳ್ ॥
ಪದವೆತ್ತುವಗ್ರಕಾರಕ
ಪದದ ವಿಭಕ್ತಿಯನೆ ತಳೆವುವನ್ವಯಮುಖದೊಳ್ ॥ ೧೪೦ ॥

* ಈ ವಾಕ್ಯವನ್ನು ನೋಡಿದ ಕೂಡಲೆ ವಾಚಕಮಹಾಶಯರು ಹೀಗೆ ಆಕ್ಷೇಪಿಸಬಹುದು— "ಹಾಗಾದರೆ ಗದ್ಯಭಾಷೆಯ ಸಂಧಿ ಸಮಾಸಗಳು ಭಿನ್ನವಾಗಿರುವುವೋ?" ನಾವು ಇದುವರೆಗೆ ಗದ್ಯಪದ್ಯಗಳ ಭೇದವನ್ನು ಹೇಳುವುದು ಸಂಧಿಸಮಾಸಗಳ ವಿಷಯವಾಗಿ ಅಲ್ಲವೇ ಅಲ್ಲ. ಕೇವಲ ವಾಕ್ಯರಚನೆಯ ಮಾತ್ರ ನಿಘಂಟು ಪ್ರಯೋಗಗಳ ವಿಷಯದಲ್ಲಿ. (ಲೇಖಕ).

ಎಂಬ ಸೂತ್ರದಲ್ಲಿ, ವಿಶೇಷಣಪದಗಳು ಪ್ರಥಮಾವಿಭಕ್ತಿಯನ್ನು ಹೊಂದಿ, ವಾಕ್ಯದ ಆರಂಭದಲ್ಲಿದ್ದು, ಅನ್ವಯಿಸುವಲ್ಲಿ ಕೊನೆಯ ಕಾರಕಪದದ ವಿಭಕ್ತಿಯನ್ನೇ ಧರಿಸುವುವು.

ಪ್ರಯೋಗ:—ವೀರಮುದಾರಂ ಶುಚಿಗಂ ।
ಭೀರಂ ನಯಶಾಲಿ ಕೈದುವೊತ್ತರ ದೇವಂ ।
ಗಾರೆಜಗರ್ ನೃಪತುಂಗಂ ।
ಗೆ ॥

ವೀರಂಗೆ ಉದಾರಂಗೆ ಶುಚಿಗೆ ಗಂಭೀರಂಗೆ ನಯಶಾಲಿಗೆ ಕೈದುವೊತ್ತರ ದೇವಂಗೆ ನೃಪತುಂಗಂಗೆ ಆರೆಜಗರೆಂಬುದನ್ವಯಂ—ಎಂದು ಹೇಳಿದ್ದಾನೆ. ಇದೇ ವಾಕ್ಯವನ್ನೇ ಹೊಸಗನ್ನಡದಲ್ಲಿ ಬರೆದರೆ ಹೀಗಾಗುವುದು. " ವೀರನಿಗೆ ಉದಾರನಿಗೆ ಶುಚಿಗೆ ಗಂಭೀರನಿಗೆ ನಯಶಾಲಿಗೆ, ಕೈದುವೊತ್ತರದೇವನಿಗೆ ನೃಪತುಂಗನಿಗೆ ಯಾರು ನಮಸ್ಕರಿಸರು ?" ಅರ್ವಾಚೀನಕಾಲದಲ್ಲಿ ಗದ್ಯದಲ್ಲಿ ಮೈಸೂರಿನವರಾಗಲಿ ಧಾರವಾಡದವರಾಗಲಿ ಮಂಗಳೂರಿನವರಾಗಲಿ ಹೀಗೆ ಬರೆಯುವರೋ ? ಇಲ್ಲ, ಇಲ್ಲ. ಎಂದಿಗೂ ಇಲ್ಲ. ಈಗಿನಕಾಲದ ಗದ್ಯಗ್ರಂಥಕಾರರು ಬರೆಯುವುದು ಹೇಗೆಂದರೆ, ವೀರನಾದ, ಉದಾರನಾದ, ಶುಚಿಯಾದ, ಗಂಭೀರನಾದ, ನಯಶಾಲಿಯಾದ ಕೈದುವೊತ್ತರದೇವನಾದ (ಧನುರ್ಧಾರಿಗಳಲ್ಲಿ ಶ್ರೇಷ್ಠನಾದ) ನೃಪತುಂಗನಿಗೆ ಯಾರು ನಮಸ್ಕರಿಸರು ? ಅಥವಾ ವೀರನೂ ಉದಾರನೂ ಶುಚಿಯೂ ಗಂಭೀರನೂ ನಯಶಾಲಿಯೂ ಕೈದುವೊತ್ತರ ದೇವನೂ ಆದ ನೃಪತುಂಗನಿಗೆ ಯಾರು ನಮಸ್ಕರಿಸರು ?

ಕೇಶವನು ಇನ್ನೊಂದು ಸ್ಥಳದಲ್ಲಿ.

ವಿದಿತೋಭಯಕರ್ತೃಕಮಾಸ ।
ಸಿದ ಸತಿಸಪ್ತಮಿಗೆಕಾರಮಪ್ಪುದದರ್ಕಂ ।
ಜವೆ ಕೆಲರಲ್ಲಂ ಪೇೞ್ವರ್ ।
ಚದುರರದಂ ಮೆಚ್ಚರಲೊಡಮೆಂದೊಡೆ ಶುದ್ಧಂ ॥

ಎಂಬ ಸೂತ್ರದಲ್ಲಿ " ಉಭಯ ಕರ್ತೃಗಳನ್ನುಳ್ಳ ಸತಿಸಪ್ತಮಿಗೆ 'ಎ' ಕಾರವು ಬರುವುದು. ಆ 'ಎ' ಕಾರಕ್ಕೆ ಕೆಲವರು 'ಅಲ್' ಎಂಬುವನ್ನು ಅಂಜವೆ ಹೇಳುವರು. ಅದನ್ನು ಪಂಡಿತರು ಒಪ್ಪುವುದಿಲ್ಲ. 'ಅಲೊಡಂ' ಎಂದು ಹೇಳುವುದು ಶುದ್ಧವಾಗಿದೆ." ಎಂದು ಹೇಳುತ್ತಾನೆ. ಆದರೆ ಆಧುನಿಕ ಪಂಡಿತರು ತದ್ವಿರುದ್ಧವಾಗಿ 'ಅಲ್' ಎಂಬುವನ್ನೇ ಸಾಧುವೆಂದು ಬರೆಯುತ್ತಾರೆ. "ಅಲೊಡಂ" ಎಂಬುವನ್ನು ಬರೆಯುವುದಿಲ್ಲ. ಉದಾಹರಣೆ :—"ವಸಂತವು * ಬರಲು ಕೋಗಿಲೆಯು ಉಲಿವುದು" ಎಂದು ಬರೆಯುತ್ತಾರೆ. ಆದರೆ ಇದೇ ವಾಕ್ಯವನ್ನು,—" ವಸಂತವು ಬರಲೊಡಂ ಕೋಗಿಲೆಯು ಉಲಿವುದು" ಎಂದು ಬರೆದರೆ ಅರ್ವಾಚೀನ ಪಂಡಿತರು ಮೆಚ್ಚುವುದಿಲ್ಲ.)

* ಬರಲು = ಬರೆ + ಅಲ್ = ಬರಲ್ = ಬರಲು (ಹೊಸಗನ್ನಡ)

ಮುಖ್ಯತಾತ್ಪರ್ಯವೇನೆಂದರೆ :—ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ಪ್ರಾಚೀನ ವ್ಯಾಕರಣಗಳು ಅರ್ವಾಚೀನಕಾಲದ ಕನ್ನಡ ಭಾಷೆಯನ್ನು ನಿರ್ಧರಿಸುವುದಕ್ಕೆ ಅಸಮರ್ಥವಾಗಿವೆ.

ಆದುದರಿಂದ ಪ್ರಚಲಿತವಾದ ಕನ್ನಡ ಭಾಷೆಗೆ ವ್ಯಾಕರಣವನ್ನು ಹೇಗೆ ರಚಿಸಬೇಕು?—ಎಂಬವಿಷಯವನ್ನು ಕುರಿತು ವಿವೇಚಿಸುವುದು ನಮ್ಮ ಕರ್ತವ್ಯವಾಗಿದೆ. ಮುಂದಿನ ವಿವರಣೆಯಲ್ಲಿ ಸುಲಭವಾಗಿ ತಿಳಿಯಬೇಕಾದರೆ, ಮೊದಲು ಪ್ರಚಲಿತವಾದ ಕನ್ನಡಭಾಷೆಯ ಇತಿಹಾಸವನ್ನು ಅರಿತುಕೊಳ್ಳುವುದು ಆವಶ್ಯಕ. ಆದಪ್ರಯುಕ್ತ ಅದನ್ನು ಹೇಳಲುಪಕ್ರಮಿಸುತ್ತೇನೆ.

ಗೌತಮ ಬುದ್ಧನ ಹಿಂದೆ ಎಂದರೆ ಕ್ರಿಸ್ತಪೂರ್ವ ೬ನೆಯ ಶತಮಾನಕ್ಕೆ ಹಿಂದೆ ಆರ್ಯಾವರ್ತದಲ್ಲಿ ಸಂಸ್ಕೃತಭಾಷೆ ಪ್ರಚಲಿತವಾಗಿದ್ದಿತು. ಆಗ ಮಾತನಾಡುವ ಭಾಷೆಯೂ, ಗ್ರಂಥಗಳಲ್ಲಿ ಬರೆಯುವ ಭಾಷೆಯೂ ಸಂಸ್ಕೃತವೊಂದೇ ಆಗಿದ್ದಿತು. ಆದರೆ ಈಚೆಗೆ ಸಂಸ್ಕೃತಭಾಷೆಯು ಅಪಭ್ರಂಶಹೊಂದಿ, ಮಾಗಧಿ, ಪಾಲಿ, ಮಹಾರಾಷ್ಟ್ರಿ ಮುಂತಾದ ಪ್ರಾಕೃತ ಭಾಷೆಗಳುಂಟಾದುದರಿಂದ ಸಂಸ್ಕೃತವು ಮೃತಭಾಷೆಯಾಯಿತು. ಅರ್ಥಾತ್ ವ್ಯಾವಹಾರಿಕಭಾಷೆಯೂ ಗ್ರಾಂಥಿಕಭಾಷೆಯೂ ಭಿನ್ನವಾದುವು; ಹೇಗೆಂದರೆ, ಪಂಡಿತರು, ಮನೆಯೊಳಗಿನ ಹೆಂಗಸರು, ಹುಡುಗರು ಮತ್ತೂ ಸಾಮಾನ್ಯ ಜನಸಮೂಹ ಇವರೆಲ್ಲರ ಸಂಗಡ ಪ್ರಾಕೃತ ಭಾಷೆಯನ್ನು ಮಾತನಾಡಲಾರಂಭಿಸಿದರು. ಗ್ರಂಥಗಳಲ್ಲಿ ಮಾತ್ರ ಮೊದಲಿನಂತೆಯೇ ಸಂಸ್ಕೃತಭಾಷೆಯನ್ನೇ ಬರೆಯಲಾರಂಭಿಸಿದರು. ಇದಕ್ಕೆ ಸಂಸ್ಕೃತನಾಟಕಗಳೇ ಸಾಕ್ಷಿಯಾಗಿವೆ. ಯಾವ ಸಂಸ್ಕೃತಭಾಷೆಯ ನಾಟಕದಲ್ಲಿಯೂ ಸ್ತ್ರೀಯರು ಸಂಸ್ಕೃತ ಮಾತನಾಡುವುದಿಲ್ಲ; ಪ್ರಾಕೃತ ಮಾತನಾಡುತ್ತಾರೆ. ಇರಲಿ.

ಆದಕಾರಣ ಗ್ರಾಂಥಿಕಭಾಷೆಯು ವ್ಯಾವಹಾರಿಕಭಾಷೆಯಿಂದ ಭಿನ್ನವಾಗಿರಬೇಕೆಂಬ ಕಲ್ಪನೆಯು ಇದೇಕಾಲಕ್ಕೆ ಹುಟ್ಟಿತೆಂದು ಧಾರಾಳವಾಗಿ ಹೇಳಬಹುದು. ನಮ್ಮ ಕನ್ನಡಭಾಷೆಯಲ್ಲಿ ಗ್ರಂಥರಚನೆಯು ಕ್ರಿ. ಶ. ೩-ನೆಯ ಅಥವಾ ೧-ನೆಯ ಶತಮಾನದಲ್ಲಿ ಪ್ರಾರಂಭವಾಯಿತೆಂದು ತಿಳಿದರೆ, ಆ ಹೊತ್ತಿಗೆ ಸಂಸ್ಕೃತಪಂಡಿತರಲ್ಲಿ, ಗ್ರಾಂಥಿಕಭಾಷೆಯು ವ್ಯಾವಹಾರಿಕ ಭಾಷೆಯಿಂದ ಭಿನ್ನವಾಗಿರಬೇಕೆಂಬ ಕಲ್ಪನೆಹುಟ್ಟಿ ೪-೫ ಶತಮಾನಗಳಾಗಿ ಹೋದುದರಿಂದ ಆ ಕಲ್ಪನೆಯು ಅವರ ಹೃದಯದಲ್ಲಿ ದೃಢಮೂಲವಾಗಿ ಹೋಗಿತ್ತು. ಈ ಸಂಸ್ಕೃತಪಂಡಿತರೇ ಕನ್ನಡದಲ್ಲಿ ಗ್ರಂಥಗಳನ್ನು ಬರೆಯುವುದಕ್ಕೆ ಉಪಕ್ರಮಿಸಿದವರು. ಎಂದರೆ, ಇವರು ಕನ್ನಡದ ವ್ಯಾವಹಾರಿಕ ಭಾಷೆಯಿಂದ ಭಿನ್ನವಾಗುವಂತೆ ಒಂದು ಕನ್ನಡ ಗ್ರಾಂಥಿಕ ಭಾಷೆಯನ್ನು ಏರ್ಪಡಿಸಿಕೊಂಡರು. ಇದೇ ಹಳಗನ್ನಡಭಾಷೆ, ಇದೇ ಪದ್ಯಭಾಷೆ, ಇದೇ ಕೃತ್ರಿಮಭಾಷೆ. ವ್ಯಾವಹಾರಿಕ ಭಾಷೆಯೇ ಹೊಸಗನ್ನಡಭಾಷೆ, ಇದೇ ಗದ್ಯಭಾಷೆ, ಇದೇ ನೈಸರ್ಗಿಕ ಭಾಷೆ.

ಒಂಬತ್ತನೆಯ ಶತಮಾನದಲ್ಲಿದ್ದ ನೃಪತುಂಗನು ತನ್ನ ಕವಿರಾಜಮಾರ್ಗ ಗ್ರಂಥದಲ್ಲಿ ತನ್ನಕಾಲದ ಹಿಂದಿನಭಾಷೆಗೆ ಹಳಗನ್ನಡವೆಂದು ಹೇಳಿ, ಅದನ್ನು ಜರದ್ವಧುವಿಗೆ ಹೋಲಿಸಿ ಉಪೇಕ್ಷಿಸಿದ್ದಾನೆ.

ಎಂದರೆ ಇವನು ತನ್ನ ಕಾಲಕ್ಕೆ ಕನ್ನಡ ಗ್ರಾಂಥಿಕಭಾಷೆಯಲ್ಲಿ ಹೊಸಏರ್ಪಾಡು ಮಾಡಿಕೊಂಡನೆಂಬುದು ಧ್ವನಿತವಾಗುತ್ತದೆ. ಆದರೆ ಇವನು ಅದರಲ್ಲಿ ವ್ಯಾವಹಾರಿಕ ಭಾಷೆಯನ್ನು ಮಾತ್ರ ಸ್ವೀಕರಿಸಲಿಲ್ಲ. ಮುಂದೆ ೧೨-ನೆಯ ಶತಮಾನದ ಆದಿಭಾಗದಲ್ಲಿದ್ದ ಕನ್ನಡಭಾಷೆಯ ಆದ್ಯ ವೈಯಾಕರಣನಾದ ನಯಸೇನನು ವ್ಯಾವಹಾರಿಕ ಭಾಷೆಯನ್ನು ಗ್ರಂಥದಲ್ಲಿ ಉಪಯೋಗಿಸಲಾರಂಭಿಸಿದನು. ಉದಾಹರಣ :— ಇವನು ತನ್ನ "ಧರ್ಮಾಮೃತ" ವೆಂಬ ಗ್ರಂಥದ—

ಪೊಸಗನ್ನಡದಿಂ ವ್ಯಾವ ।
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ ॥
ತಿಸಿ ಕೂಡಲಾಜದಕ್ಕಟ ।
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ॥

ಎಂಬ ಪದ್ಯದಲ್ಲಿ 'ಇಕ್ಕುವವನು' ಎಂಬ ವ್ಯಾವಹಾರಿಕಭಾಷೆಯ ಶಬ್ದವನ್ನು ಪ್ರಯೋಗಿಸಿದ್ದಾನೆ.

ಮುಂದೆ ಬರುಬರುತ್ತ ಕನ್ನಡ ಕವಿಗಳು ವ್ಯಾವಹಾರಿಕಭಾಷೆಯನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲಾರಂಭಿಸಿದರೆಂಬುದಕ್ಕೆ ೧೩-ನೆಯ ಶತಮಾನದಲ್ಲಿ ಬರೆಯಲ್ಪಟ್ಟ ಶಬ್ದಮಣಿದರ್ಪಣದ—

ಯರಲಣನಳಜಟವರ್ಣೋ ।
ತ್ಕರಮೆ ವಲಂ ಪದದ ಕಡೆಯೊಳಸ್ವರನಿಧಿಯಂ ॥
ಪಿರಿದುಂ ತಾಳ್ವುಗುಮಿವನಜು ।
ವರೆ ಕನ್ನಡಗಬ್ಬದೊಳ್ ತೊಡಂಕವೆ ಸಲ್ವರ್ ॥ ೪೮ ॥

ಎಂಬ ಸೂತ್ರವೇ ಸಾಕ್ಷಿಭೂತವಾಗಿದೆ. ಇದರಲ್ಲಿ "ಯಕಾರ, ರಕಾರ, ಲಕಾರ, ಣಕಾರ, ನಕಾರ, ಳಕಾರ, ಜಕಾರ, ಟಕಾರಾಂತ ಶಬ್ದಗಳು ವಿಕಲ್ಪದಿಂದ ವ್ಯಂಜನಾಂತಗಳಾಗಿವೆ. ಇವುಗಳನ್ನು ತಿಳಿದುಕೊಂಡು ಪ್ರಯೋಗಿಸುವವರು ಶ್ರೇಷ್ಠ ಕವಿಗಳಾಗಿರುವರು." ಎಂದು ಹೇಳಿದೆ. ಈ ಸೂತ್ರದಲ್ಲಿ ಕೆಲವರು ಕವಿಗಳು ಸ್ವರಾಂತ ಶಬ್ದಗಳನ್ನು ಎಂದರೆ ವ್ಯಾವಹಾರಿಕಭಾಷೆಯ ಶಬ್ದಗಳನ್ನು ಗ್ರಂಥಗಳಲ್ಲಿ ಉಪಯೋಗಿಸುತ್ತಿದ್ದರೆಂದು ಸ್ಪಷ್ಟವಾಗಿ ಧ್ವನಿಹೊರಡುತ್ತದೆ.

ಈಚೀಚೆಗೆ ೧೬, ೧೭, ೧೮-ನೆಯ ಶತಮಾನಗಳಲ್ಲಿ ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಕವಿಗಳು ತಮ್ಮ ಗ್ರಂಥಗಳಲ್ಲಿ ವ್ಯಾವಹಾರಿಕಭಾಷೆಯನ್ನು ಅತಿಶಯ

ವಾಗಿ ಉಪಯೋಗಿಸಲಾರಂಭಿಸಿದರು. ಈ ರೂಪಗಳು ಗ್ರಂಥಗಳಲ್ಲಿ ನೂತನವಾಗಿ ತೋರಿದುದರಿಂದ ಇವುಗಳಿಗೆ “ಹೊಸಗನ್ನಡ” ವೆಂಬ ಹೆಸರುಂಟಾಯಿತು.

೧೯ನೆಯ ಶತಮಾನದಲ್ಲಿ ನಮ್ಮ ಕರ್ಣಾಟಕವು ಬ್ರಿಟಿಷ್ ಸಾಮ್ರಾಜ್ಯಕ್ಕೆ ಒಳಪಟ್ಟನಂತರ ನಮ್ಮಜನರು ಇಂಗ್ಲಿಷ್‌ಭಾಷೆಯನ್ನು ಅಧ್ಯಯನ ಮಾಡಲಾರಂಭಿಸಿದರು. ಆಗ ಇವರಿಗೆ ಆಂಗ್ಲಗದ್ಯರಚನಾಶಾಸ್ತ್ರವು ಪರಿಚಯವಾಯಿತು. ಆಂಗ್ಲವಿದ್ಯಾವಿಭೂಷಿತರಾದ ನಮ್ಮ ಪದವೀಧರರು (ಗ್ರಾಜ್ಯುಏಟ್ಸ್) ಇಂಗ್ಲಿಷ್‌ಭಾಷೆಯಂತೆ ಶುದ್ಧವಾದ ವ್ಯಾವಹಾರಿಕ ಭಾಷೆಯಿಂದ ಎಂದರೆ ವಾಕ್ಪ್ರಚಾರ (idiom) ಯುಕ್ತವಾಗಿ ಕನ್ನಡದಲ್ಲಿ ಗದ್ಯಗ್ರಂಥಗಳನ್ನು ಬರೆಯಲಾರಂಭಿಸಿದರು. ಆಗಲೇ ಕನ್ನಡದಲ್ಲಿ ನಿಜವಾದ ಗದ್ಯವಾಙ್ಮಯವು ಹುಟ್ಟಿತು. ಈ ಗದ್ಯಭಾಷೆಯ ವಿಷಯದಲ್ಲಿ ೧೯-ನೆಯ ಶತಮಾನದಲ್ಲಿಯೇ ನುಡಿಗಟ್ಟು, ಕೈಪಿಡಿ, ಹೊಸಗನ್ನಡನುಡಿಗನ್ನಡಿ, ವಾಗ್ವಿಧಾಯಿನಿ, ಶಬ್ದಾದರ್ಶಗಳೆಂಬ ೪-೫ ವ್ಯಾಕರಣಗಳು ರಚಿಸಲ್ಪಟ್ಟವೆ. ಆದರೆ ಇವುಗಳಲ್ಲಿ ಮುಖ್ಯವಾದ ಎರಡು ದೋಷಗಳುಂಟು. ಯಾವುವೆಂದರೆ: (೧) ಕನ್ನಡಭಾಷೆಯ ಏಕೀಕರಣದ ಪ್ರಯತ್ನವಿಲ್ಲ, (೨) ಗ್ರಾಂಥಿಕಪ್ರಯೋಗಗಳನ್ನು ಲಕ್ಷ್ಯವಾಗಿಟ್ಟುಕೊಂಡಿಲ್ಲ. ಇವೆರಡೂ ದೋಷಗಳು ಅಕ್ಷಮ್ಯವಾದುವುಗಳೇನೂ ಅಲ್ಲ; ಕ್ಷಮ್ಯವಾಗಿರುತ್ತವೆ.

ಅದು ಹೇಗೆಂದರೆ, ೧೯-ನೆಯ ಶತಮಾನದಲ್ಲಿ ಮುಂಬಯಿ, ಮೈಸೂರ ಆಧಿಪತ್ಯಗಳಲ್ಲಿ ವಿದ್ಯಾಭ್ಯಾಸದ ಇಲಾಖೆಯು ಏರ್ಪಾಡಾದ ಕೂಡಲೆ ಕನ್ನಡ ವ್ಯಾವಹಾರಿಕ ಭಾಷೆಯ ವ್ಯಾಕರಣವು ಆವಶ್ಯಕವಾಯಿತು; ಏಕೆಂದರೆ, ಪ್ರಾಥಮಿಕ ಪಾಠಶಾಲೆಗಳಲ್ಲಿ, ಲೌಕಿಕ ವಿದ್ಯಾವಿಷಯಗಳನ್ನೆಲ್ಲ ಗದ್ಯಭಾಷೆಯಲ್ಲಿಯೇ ಕಲಿಸಬೇಕಾಯಿತು. ಇದಲ್ಲದೆ ಕಾಯಿದೆ ಕಾನೂನು ಮೊದಲಾದ ಸಮಸ್ತ ವ್ಯಾವಹಾರಿಕ ವಿಷಯಗಳು ಪಾಮರರಿಗೆ ಸಹ ತಿಳಿಯುವುದಕ್ಕಾಗಿ, ಸುಲಭವಾದ ವ್ಯಾವಹಾರಿಕಭಾಷೆಯಲ್ಲಿಯೇ ಅವುಗಳನ್ನು ಬರೆಯಬೇಕಾಯಿತು. ಈ ಎಲ್ಲಕಾರಣಗಳಿಂದ ಆ ಸರಕಾರದವರು ತಮ್ಮತಮ್ಮ ಆಧಿಪತ್ಯಗಳಲ್ಲಿ ವಿದ್ಯಾಭ್ಯಾಸದ ಮತ್ತೂ ಬರೆವಣಿಗೆಯ ಕೆಲಸವನ್ನು ನಿರ್ವಹಿಸುವುದರ ಮಟ್ಟಿಗೆ ಕನ್ನಡ ಗದ್ಯಭಾಷೆಯ ವ್ಯಾಕರಣಗಳನ್ನು ಆಕಾಲದ ಪಂಡಿತರಿಂದ ಬರೆಯಿಸಿದರು. ಆ ಪಂಡಿತರು ತಮ್ಮ ಸರಕಾರದ ಇಷ್ಟಪ್ರಕಾರ, ತಮ್ಮತಮ್ಮ ಪ್ರಾಂತಗಳ ಭಾಷೆಯ ಮಟ್ಟಿಗೆ ಸಂಕುಚಿತ ದೃಷ್ಟಿಯಿಂದ ವ್ಯಾಕರಣಗಳನ್ನು ರಚಿಸಬೇಕಾಯಿತು. ಇಷ್ಟಕ್ಕೂ ಈಗಿನಂತೆ ಆಗ ಅನ್ಯೋನ್ಯವ್ಯವಹಾರಗಳು ಎಂದರೆ ಕನ್ನಡ ಸಾಹಿತ್ಯ ಸಮ್ಮೇಲನಾದಿಗಳು ನಡೆಯುತ್ತಿರಲಿಲ್ಲವಾದುದರಿಂದ ಕರ್ಣಾಟಕದ ಬೇರೆಬೇರೆ ಪ್ರಾಂತಗಳಲ್ಲಿ ರೂಢಿಯಲ್ಲಿರುವ ವ್ಯಾವಹಾರಿಕ ಭಾಷೆಯ ಜ್ಞಾನವುಂಟಾಗುವುದಕ್ಕೆ ಆ ವೈಯಾಕರಣರಿಗೆ ಆಸ್ಪದವಿರಲಿಲ್ಲ. ಎಂದಬಳಿಕ ಈತರದ ಪರಿಸ್ಥಿತಿಯಲ್ಲಿ, ಪಾಪ! ಆ ವೈಯಾಕರಣರ ಹೃದಯದಲ್ಲಿ ಕನ್ನಡ ಭಾಷೆಯ ಏಕೀಕರಣದ ವಿಚಾರವು ಹೇಗೆ ಮೂಡಬೇಕು? ಕ್ರಿ.ಶ. ೧೮೯೦ರಲ್ಲಿ ಧಾರವಾಡದಲ್ಲಿ “ಕರ್ಣಾಟಕ ವಿದ್ಯಾವರ್ಧಕಸಂಘವು” ಸ್ಥಾಪನೆಯಾಗಿ, ಮೈಸೂರುದೇಶದ ಪಂಡಿತರು ಪ್ರತಿವರ್ಷ ಒಬ್ಬರಿಬ್ಬರು ಧಾರವಾ

ಡಕ್ಕೆ ಬರಲಾರಂಭಿಸಿದ ಬಳಿಕ "ಕನ್ನಡಭಾಷೆಯು ಏಕೀಕರಣದ" ವಿಚಾರವು ಅಂಕುರಿಸಾಯಿತು. ಮುಂದೆ ೧೭ ವರ್ಷಗಳಮೇಲೆ ಎಂದರೆ, ಕ್ರಿ.ಶ. ೧೯೦೭ರಲ್ಲಿ ಧಾರವಾಡದಲ್ಲಿ ನೆರೆದ "ಕರ್ಣಾಟಕ ಗ್ರಂಥಕರ್ತರ ಸಮ್ಮೇಲನ" ದಿಂದ ಈ ವಿಚಾರವು ಕರ್ಣಾಟಕದ ತುಂಬ ಹಬ್ಬಿತು. ಆದುದರಿಂದ ೧೯ನೆಯ ಶತಮಾನದಲ್ಲಿ ರಚಿಸಲ್ಪಟ್ಟ ಗದ್ಯಭಾಷೆಯ ವ್ಯಾಕರಣಗಳಲ್ಲಿ "ಕನ್ನಡ ಭಾಷೆಯ ಏಕೀಕರಣದ" ಪ್ರಯತ್ನವು ಕಾಣಬರದಿದ್ದರೆ, ಆ ದೋಷವು ಕ್ಷಮ್ಯವೇಸರಿ.

ಇನ್ನು, ಎರಡನೆಯ ದೋಷವನ್ನು ಕುರಿತು ವಿಚಾರಿಸುವ:—ಬ್ರಿಟಿಷರ ಆಳಿಕೆಯು ಆರಂಭವಾದಂದಿನಿಂದ ಆಂಗ್ಲ ವಾಙ್ಮಯದ ಸಹವಾಸವುಂಟಾಗಿ ಕನ್ನಡದಲ್ಲಿ ನಿಜವಾದ ಗದ್ಯವಾಙ್ಮಯವು ಹುಟ್ಟಿತೆಂದು ಹಿಂದೆಯೇ ಹೇಳಿದ್ದೇವೆ. ಈ ಉಗಮಸ್ಥಾನದಲ್ಲಿ ಎಂದರೆ ೧೯ನೆಯ ಶತಮಾನದಲ್ಲಿ ನಿಜವಾದ ಗದ್ಯಗ್ರಂಥಗಳು ಅತಿ ವಿರಳವಾಗಿದ್ದುವೆಂಬುದು ಸ್ಪಷ್ಟವಾಗಿದೆ. ಆದುದರಿಂದ ಈ ೧೯ನೆಯ ಶತಮಾನದಲ್ಲಿಯೇ ಅವತರಿಸಿದ ಈ ಗದ್ಯಭಾಷೆಯ ವೈಯಾಕರಣರಿಗೆ ಗ್ರಾಂಥಿಕ ಪ್ರಯೋಗಗಳನ್ನು ಲಕ್ಷ್ಯವಾಗಿ ಇಟ್ಟುಕೊಳ್ಳುವುದಕ್ಕೆ ಗದ್ಯಗ್ರಂಥಗಳೇ ದೊರೆಯಲಿಲ್ಲ. ಅವರು ಕೇವಲ ವ್ಯಾವಹಾರಿಕ ಭಾಷೆಯನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿ, ತಮ್ಮ ವ್ಯಾಕರಣಗಳನ್ನು ರಚಿಸಬೇಕಾಯಿತು. ಆದಕಾರಣ ಇವರು ಗ್ರಾಂಥಿಕ ಪ್ರಯೋಗಗಳನ್ನು ಲಕ್ಷ್ಯವಾಗಿಟ್ಟುಕೊಳ್ಳಲಿಲ್ಲ ವೆಂಬ ದೋಷವೂ ಕ್ಷಮ್ಯವಾಗಿದೆ. ಇರಲಿ.

ಇಷ್ಟೆಲ್ಲ ವಿವರಣೆಯ ಫಲಿತಾರ್ಥವೇನೆಂದರೆ, ಈ ಅರ್ವಾಚೀನಕಾಲದ ಗದ್ಯಭಾಷೆಗೆ ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ಪ್ರಾಚೀನ ವ್ಯಾಕರಣಗಳೂ ಪ್ರಯೋಜನವಿಲ್ಲ; ಸುಡಿಗಟ್ಟು, ವಾಗ್ವಿಧಾಯಿನಿ, ಶಬ್ದಾದರ್ಶ ಮುಂತಾದ ೧೯-ನೆಯ ಶತಮಾನದ ವ್ಯಾಕರಣಗಳೂ ಪ್ರಯೋಜನವಿಲ್ಲ. ಆದುದರಿಂದ ನಾವು ಈಗ ಸರ್ವಾಂಗಪರಿಪೂರ್ಣವಾದ ಕನ್ನಡ ಗದ್ಯಭಾಷೆಯ ವ್ಯಾಕರಣವನ್ನು ಹೊಸದಾಗಿ ರಚಿಸಿಕೊಳ್ಳುವುದು ಆವಶ್ಯಕವಾಗಿದೆ.

ನಾವು ಈಗ ಇಪ್ಪತ್ತನೆಯ ಶತಮಾನದಲ್ಲಿದ್ದೇವೆ. ಈ ಜ್ಞಾನಯುಗಕ್ಕನುರೂಪವಾಗಿ ನಾವು ನಮ್ಮ ವಾಙ್ಮಯದ ಅಭ್ಯುದಯವನ್ನು ಮಾಡಿಕೊಳ್ಳಬೇಕಾದರೆ, ನಮ್ಮ ಭಾಷೆಯ ನಿಯಮನಶಾಸ್ತ್ರವಾದ ವ್ಯಾಕರಣವು ವಾಙ್ಮಯದ ಪುರೋವೃದ್ಧಿಗೆ ಸಹಾಯಭೂತವಾಗುವಂತೆ ಪ್ರೌಢವಾಗಿರುವುದು ಅತ್ಯಾವಶ್ಯಕವಾಗಿದೆ. ಮನುಷ್ಯಪ್ರಾಣಿಗೆ ಯಾವಕಾಲದಲ್ಲಿಯಾದರೂ ನವನಾಗರಿಕತೆಯು (Up-to-dateness) ಅತ್ಯಂತ ಪ್ರಿಯಕರವಾದುದು. ಇದಕ್ಕೆ ನೃಪತುಂಗನೇ ಸಾಕ್ಷಿಭೂತನಾಗಿದ್ದಾನೆ. ಇವನು ತನ್ನ ಕವಿರಾಜಮಾರ್ಗ ಗ್ರಂಥದಲ್ಲಿ ಹೇಳುತ್ತಾನೆ :—

ದೊರೆಕೊಂಡಿರೆ ಸೊಗಯಿಸುಗುಂ।
ಪುರಾಣಕಾವ್ಯಪ್ರಯೋಗದೊಳ್ ತತ್ಕಾಲಂ॥

ನಿರಸಂ ಕರಮವು ದೇಸಿಗೆ।
ಜರದ್ವಧೂವಿಷಯಸುರತರಸರಸಿಕತೆವೊಲ್। ॥ ೫೦ ॥

(ಪ್ರಥಮ ಪರಿಚ್ಛೇದ)

ಇವರಲ್ಲಿ ನೃಪತುಂಗನು ತನ್ನ ಪೂರ್ವದ ಗ್ರಾಂಥಿಕಭಾಷೆಯನ್ನು ಎಂದರೆ ಹಳಗನ್ನಡವನ್ನು ಜರದ್ವಧುವಿಗೆ ಹೋಲಿಸಿ "ಜರದ್ವಧೂವಿಷಯಸುರತರಸರಸಿಕತೆ ವೊಲ್" ಎಂದು ಹೇಳಿ, ಸ್ಪಷ್ಟವಾಗಿ ಅದನ್ನು ತಿರಸ್ಕರಿಸಿದ್ದಾನೆ. ಎಂದರೆ ನೃಪತುಂಗನು ತನ್ನ ಕಾಲಕ್ಕನುರೂಪವಾಗಿ ಗ್ರಾಂಥಿಕಭಾಷೆಯಲ್ಲಿ ಹೊಸ ಏರ್ಪಾಡು ಮಾಡಿಕೊಂಡನೆಂಬುದು ವ್ಯಕ್ತವಾಗುತ್ತದೆ. ಈ ನವನಾಗರಿಕತೆಯ ಪ್ರೀತಿಯು ಮುಂದೆ ೧೨-ನೆಯ ಶತಮಾನದಿಂದ ಕಾಲಕಾಲಕ್ಕೆ ಕಂಡುಬಂದಿದೆ. ನಯಸೇನಾದಿ ಕವಿಗಳು ತತ್ಕಾಲಕ್ಕನುರೂಪವಾಗಿ, ಗ್ರಾಂಥಿಕಭಾಷೆಯಲ್ಲಿ ಮತ್ತೊಂದು ಹೊಸ ಏರ್ಪಾಡನ್ನು ಮಾಡಿಕೊಂಡರು. ಅದೇನೆಂದರೆ, ಹಿಂದೆ ಹೇಳಿದಂತೆ, ಗ್ರಂಥಗಳಲ್ಲಿ ವ್ಯಾವಹಾರಿಕಭಾಷೆಯ ಪ್ರಯೋಗಗಳನ್ನು ಉಪಯೋಗಿಸಲಾರಂಭಿಸಿದರು. ಆದ ಕಾರಣ ಈಗಿನವರಾದ ನಾವು ನಮ್ಮ ಇಪ್ಪತ್ತನೆಯ ಶತಮಾನಕ್ಕನುರೂಪವಾದ ಗ್ರಾಂಥಿಕಭಾಷೆಯನ್ನು ಏರ್ಪಡಿಸಿಕೊಳ್ಳುವುದು ಎಂದರೆ ಹೊಸವ್ಯಾಕರಣವನ್ನು ರಚಿಸಿಕೊಳ್ಳುವುದು ಸ್ವಾಭಾವಿಕವಾಗಿದೆ.

ಬ್ರಿಟಿಷರ ಆಳಿಕೆಯಿಂದ ಈಚೆಗೆ ಎಂದರೆ ಸುಮಾರು ಈಗ ೭೦-೮೦ ವರ್ಷಗಳಲ್ಲಿ ಮೈಸೂರು, ಮುಂಬಯಿ, ಮದ್ರಾಸ, ಆಧಿಪತ್ಯಗಳಲ್ಲಿ, ಕನ್ನಡಭಾಷೆಯಲ್ಲಿ ತಕ್ಕಮಟ್ಟಿಗೆ ಚೆನ್ನಾಗಿ ಗದ್ಯವಾಙ್ಮಯವುಂಟಾಗಿದೆ. ವಾರಪತ್ರಿಕೆಗಳಲ್ಲಿಯೂ ಮಾಸಪತ್ರಿಕೆಗಳಲ್ಲಿಯೂ ಗ್ರಂಥಗಳಲ್ಲಿಯೂ ಗದ್ಯವಾಙ್ಮಯವು ಅಡಕವಾಗಿದೆ. ಇದರೊಳಗಿನ ಪ್ರತಿಭಾಸಂಪನ್ನಲೇಖಕರ ಪ್ರಯೋಗಗಳನ್ನು ಲಕ್ಷ್ಯವಾಗಿಟ್ಟುಕೊಂಡು, ವ್ಯಾಕರಣವನ್ನು ರಚಿಸುವುದು ಯಥಾಯೋಗ್ಯವಾಗಿರುವುದು. ಆದರೆ ಕೆಲವರು ಪುರಾಣಮತಾಭಿಮಾನಿಗಳು ಈ ಪ್ರಯೋಗಗಳು ಈಗಿನಕಾಲದ ಜನರಿಂದ ಬರೆಯಲ್ಪಟ್ಟಿರುವುದರಿಂದ ಇವು ಲಕ್ಷ್ಯಾರ್ಹವಲ್ಲವೆಂದು ಹೇಳಬಹುದು. ಈ ಸ್ಥಳದಲ್ಲಿ "ದೂರದಗುಡ್ಡ ಕಣ್ಣಿಗೆ ನುಣ್ಣಗೆ" ಎಂಬ ನಾಣ್ಣುಡಿ ನನಗೆ ನೆನಪಾಗುತ್ತದೆ. ಏಕೆಂದರೆ, ಈ ನಾಣ್ಣುಡಿಯಲ್ಲಿರುವ ತತ್ತ್ವವು ದಿಕ್ಕಾಲಗಳೆರಡಕ್ಕೂ ಸರಿಯಾಗಿ ಅನ್ವಯಿಸುತ್ತದೆ. ಹೇಗೆಂದರೆ, ದೂರದಗುಡ್ಡವು ಕಣ್ಣಿಗೆ ಮನೋಹರವಾಗಿ ಕಾಣಿಸುತ್ತದೆಯೆಂಬುದು ಹೇಗೆ ದಿಕ್ಕಿನವಿಷಯದಲ್ಲಿ ಸತ್ಯವಾಗಿದೆಯೋ, ಹಾಗೆಯೇ ಕಾಲದಲ್ಲಿಯಾದರೂ ದೂರದಕಾಲದ ಎಂದರೆ ಪ್ರಾಚೀನಕಾಲದ ಜನರು ಮನೋಹರವಾಗಿ ಕಾಣಿಸುತ್ತಾರೆಂಬುದೂ ನಿಜವಾಗಿದೆ. ಆದುದರಿಂದಲೇ ಪುರಾಣಮತಾಭಿಮಾನಿಗಳಿಗೆ ಪ್ರಾಚೀನಪಂಡಿತರು ಪೂಜ್ಯರಾಗಿದ್ದಾರೆ; ಅರ್ವಾಚೀನ ಪಂಡಿತರು ತುಚ್ಛರಾಗಿದ್ದಾರೆ. ಈ ತರದ ದೋಷದೃಷ್ಟಿಯು ವೈಯಾಕರಣರಿಗೆ ಇರಕೂಡದು. ಇವರು "ಗುಣಾಃ ಪೂಜಾಸ್ಥಾನಂ" ಎಂಬ ನ್ಯಾಯದಂತೆ ಪ್ರಾಚೀನ ಗ್ರಂಥಗಳೇ ಇರಲಿ, ಅರ್ವಾಚೀನ ಗ್ರಂಥಗಳೇ ಇರಲಿ, ಅವುಗಳಲ್ಲಿ ಪ್ರೌಢವೂ

ಸುಂದರವೂ ಆದ ಪ್ರಯೋಗಗಳು ಇದ್ದರೆ ಅವುಗಳನ್ನು ಲಕ್ಷ್ಯವಾಗಿಟ್ಟುಕೊಳ್ಳಲೇಬೇಕು. ಇಷ್ಟೇ ಅಲ್ಲ. ವ್ಯಾವಹಾರಿಕವಾಗಿ ಮಾತನಾಡುವುದರಲ್ಲಿ ಸಹ ಪ್ರಸಾದಯುಕ್ತವಾದ ಪ್ರಯೋಗವು ವ್ಯಕ್ತವಾದರೆ ಅದನ್ನು ಸ್ವೀಕರಿಸಲೇಬೇಕು. ವೈದ್ಯಶಾಸ್ತ್ರವನ್ನು ವಿವೇಚಿಸುವಾಗ, ಜನನೇಂದ್ರಿಯಗಳ ಗುಹ್ಯರೋಗಗಳನ್ನೂ ಮೂತ್ರಾಶಯದಲ್ಲಿರುವ ಹೊಲಸನ್ನೂ ನಾಚಿಕೆ ಓಕರಿಕೆಗಳಮೂಲಕ ಪ್ರತಿಪಾದಿಸದೆ ಬಿಟ್ಟರೆ, ಅದು ಶಾಸ್ತ್ರವಾಗಬಹುದೇ? ಅಥವಾ ಅವನು ಶಾಸ್ತ್ರಕಾರನಾಗಬಹುದೇ? ಇದೇಪ್ರಕಾರ, ವೈಯಾಕರಣರು ಅರ್ವಾಚೀನಗ್ರಾಂಥಿಕ ಪ್ರಯೋಗವಿದು, ವ್ಯಾವಹಾರಿಕಪ್ರಯೋಗವಿದು, ಎಂದು ಉಪೇಕ್ಷಿಸಿದರೆ—ಅವರು ಈ ಇಪ್ಪತ್ತನೆಯ ಶತಮಾನಕ್ಕನುರೂಪವಾದ ವ್ಯಾಕರಣವನ್ನು ರಚಿಸಲಾರರು. ವಂಗಸಾಹಿತ್ಯಪರಿಷತ್ತಿನವರೂ ಮಹಾರಾಷ್ಟ್ರಸಾಹಿತ್ಯಪರಿಷತ್ತಿನವರೂ ವ್ಯಾವಹಾರಿಕಭಾಷೆಯೊಳಗಿನ ಸುಂದರವಾದ ಪ್ರಯೋಗಗಳನ್ನು ಸಂಗ್ರಹಿಸುವುದಕ್ಕಾಗಿಯೇ "ಶಿಶುಸಾಹಿತ್ಯ" "ಗ್ರಾಮಸಾಹಿತ್ಯ" ಎಂಬ ಎರಡುಶಾಖೆಗಳನ್ನು ಏರ್ಪಡಿಸಿಕೊಂಡಿದ್ದಾರೆ. ಶಿಶುಸಾಹಿತ್ಯದಲ್ಲಿ—

"ಕೂಸಾಡಿ ಬರಲೆವ್ವಾ ಕುಂಚೀಗಿ ಹೋಲಿಸೀನ। ಗೊಂಚಲಮುತ್ತ ಬಿಗಿಸೀನ" ||

ಎಂದು ಶಿಶುಗಳ ತೊಟ್ಟಿಲನ್ನು ತೂಗುವಾಗ ಲಲನೆಯರು ಹೇಳುವ ಜೋಗುಳದ ಅಥವಾ ಲಾಲಿಯ ಹಾಡುಗಳನ್ನೂ, ಮನೆಯ ಅಂಗಳದಲ್ಲಿ ಹುಡುಗರನ್ನು ಎತ್ತಿಕೊಂಡು, ಮಮತೆಯಿಂದ ಆಡಿಸುವಾಗ

"ತಾರಮ್ಮಯ್ಯ ತಂದುತೋರಮ್ಮಯ್ಯ, ರಘುಕುಲರಾಮಚಂದ್ರನ್ನ"

ಮುಂತಾಗಿ ಹೇಳುವ ಚಿಕ್ಕಚಿಕ್ಕ ಚಿಟಕೆಗಳನ್ನೂ ಸಂಗ್ರಹಿಸಿದ್ದಾರೆ. ಗ್ರಾಮಸಾಹಿತ್ಯದಲ್ಲಿ ಲಾವಣಿ, ಗಾದೆ, ಉಪಕಥೆ, ಹೆಂಗಸರು ಹೇಳುವ ಹಾಡು ಮುಂತಾದುವುಗಳನ್ನು ಶೇಖರಿಸಿದ್ದಾರೆ.

ಇಂತಹ ಕೇವಲ ವ್ಯಾವಹಾರಿಕ-ಶಿಶು-ಗ್ರಾಮ-ಸಾಹಿತ್ಯಗಳಲ್ಲಿ, ಸುಂದರವಾದ ವಾಕ್ಪ್ರಚಾರಗಳೂ ಪ್ರಯೋಗಗಳೂ ತುಂಬಿ ತುಳುಕುತ್ತಿರುತ್ತಿವೆ. ಅವುಗಳನ್ನು ಅಲ್ಲಿಂದ ಕಿತ್ತುಕೊಂಡು ಶುದ್ಧವಾದ ಬರವಣಿಗೆಯಿಂದ ಗ್ರಂಥಗಳಲ್ಲಿ ಉಪಯೋಗಿಸಿದರೆ, ಆ ಗ್ರಾಂಥಿಕಭಾಷೆಯು ವಾಚಕರ ಮನಸ್ಸನ್ನು ಆಕರ್ಷಿಸಿ ಬಿಡುವುದು! ಆದುದರಿಂದ ವೈಯಾಕರಣರು ವ್ಯಾವಹಾರಿಕಪ್ರಯೋಗಗಳನ್ನು ಕ್ಷುದ್ರವೆಂದು ಅಲಕ್ಷ್ಯ ಮಾಡಕೂಡದು.

ಈ ವ್ಯಾಕರಣದಲ್ಲಿ ಐತಿಹಾಸಿಕ ದೃಷ್ಟಿಯಿಂದ ಕನ್ನಡಭಾಷೆಯನ್ನು ವಿಮರ್ಶಿಸುವುದು ಅತ್ಯಾವಶ್ಯಕವಾಗಿದೆ. ಕನ್ನಡಭಾಷೆಯ ಪೂರ್ವಸ್ಥಿತಿ ಹೇಗೆ ಇತ್ತು, ಅದರಲ್ಲಿ ಉತ್ತರೋತ್ತರ ಹೇಗೆಹೇಗೆ ಬದಲಾವಣೆಯಾಗುತ್ತ ಬಂದಿತು, ಎಂಬುವನ್ನು ವಿವರಿಸಿದರೆ, ವ್ಯಾಕರಣದೊಳಗಿನ ಸಂದಿಗ್ಧವಾದ ಎಷ್ಟೋ ಸ್ಥಳಗಳಮೇಲೆ ಸ್ವಚ್ಛವಾದ ಪ್ರಕಾಶವು ಬೀಳುವುದು; ಎಂದರೆ ಆ ಸಂಶಯಗಳು ನಿವಾರಣೆಯಾಗುವುವು. ಆದುದರಿಂದ ಈ ಐತಿಹಾಸಿಕರೀತಿಯನ್ನು ವೈಯಾಕರಣರು ಸ್ವೀಕರಿಸಬೇಕು.

ಈ ವ್ಯಾಕರಣವನ್ನು ಕನ್ನಡಭಾಷೆಯ ಏಕೀಕರಣದ ದೃಷ್ಟಿಯಿಂದ ರಚಿಸತಕ್ಕುದು ಮುಖ್ಯಾಂಶವಾಗಿದೆ. ಕನ್ನಡಭಾಷೆಯ ಏಕೀಕರಣದ ವಿಚಾರವೇ ಈ ಹೊಸ ವ್ಯಾಕರಣವನ್ನು ರಚಿಸುವುದಕ್ಕೆ ಮೂಲಕಾರಣವಾಗಿದೆಯೆಂದು ಹೇಳಿದರೆ ಅತ್ಯುಕ್ತಿಯಾಗದು. ಕರ್ಣಾಟಕದ ಎಲ್ಲಾಭಾಗಗಳಲ್ಲಿ ಪ್ರಣೀತವಾದ ಅರ್ವಾಚೀನ ಗದ್ಯವಾಙ್ಮಯವನ್ನು ಲಕ್ಷ್ಯವಾಗಿಟ್ಟುಕೊಂಡು ವ್ಯಾಕರಣವನ್ನು ರಚಿಸಬೇಕೆಂಬುದೇ ಇದರ ಮುಖ್ಯತಾತ್ಪರ್ಯ. ಈಪ್ರಕಾರ ಎಲ್ಲಾಭಾಗಗಳ ವಾಙ್ಮಯವನ್ನು ಲಕ್ಷ್ಯವಾಗಿಟ್ಟುಕೊಂಡರೂ, ಕೆಲವು ಸಂದರ್ಭಗಳಲ್ಲಿ ಮತಭೇದವುಂಟಾಗುವುದು ಸ್ವಾಭಾವಿಕವಾಗಿದೆ. ಉದಾ:—ವರ್ತಮಾನ, ಭೂತ ಕ್ರಿಯಾನಾಮಗಳ ವಿಷಯವಾಗಿ ಮೈಸೂರಿನವರಿಗೂ ಧಾರವಾಡದವರಿಗೂ ಮತಭೇದವುಂಟಾಗಿದೆ. ಅದು ಹೇಗೆಂದರೆ, ವರ್ತಮಾನ, ಭೂತಕೃದಂತಗಳಿಗೆ "ದು" ಪ್ರತ್ಯಯವನ್ನು ಹಚ್ಚಿ ವರ್ತಮಾನ, ಭೂತ ಕ್ರಿಯಾನಾಮಗಳನ್ನು ಧಾರವಾಡದವರು ಮಾಡುತ್ತಾರೆ. ಆದರೆ ಮೈಸೂರಿನವರು "ಉದು" ಪ್ರತ್ಯಯವನ್ನು ಹಚ್ಚುತ್ತಾರೆ.

	ಧಾರವಾಡದವರು	ಮೈಸೂರಿನವರು
ವರ್ತಮಾನ	ಮಾಡುವ-ದು ಮಾಡುವದು	ಮಾಡುವ ಉದು-ಮಾಡುವುದು
	ನುಡಿಯುವ-ದು-ನುಡಿಯುವದು	ನುಡಿಯುವ-ಉದು-ನುಡಿಯುವುದು
ಭೂತ	ಮಾಡಿದ-ದು ಮಾಡಿದ್ದು	ಮಾಡಿದ-ಉದು-ಮಾಡಿದುದು
	ನುಡಿದ-ದು-ನುಡಿದದ್ದು	ನುಡಿದ+ಉದು=ನುಡಿದುದು

ಇದೇಮೇರೆಗೆ. ಕೆಲವರು "ಓದಲಿಕ್ಕೆ ಬಂದನು" ಎಂದು ಬರೆದರೆ, ಬೇರೆ ಕೆಲವರು "ಓದುವುದಕ್ಕೆ ಬಂದನು" ಎಂದು ಬರೆಯುತ್ತಾರೆ. ಹಾಗೆಯೇ, ಆದಾಗ್ಗೂ-ಆದಾಗ್ಯೂ, ಅಂತಹ-ಅಂಥ. ನಗು-ನಗೆಯಾಡು, ಮಾಡಹತ್ತು-ಮಾಡತೊಡಗು, ಮುಂತಾದ ಶಬ್ದಸಿದ್ಧಿಯ ವಿಷಯವಾಗಿಯೂ ಮತಭೇದವಿದೆ. ಇದೂ ಅಲ್ಲದೆ, ಒಂದೇ ಅರ್ಥದಲ್ಲಿ ಬೇರೆಬೇರೆ ಪ್ರಾಂತದವರು ಬೇರೆಬೇರೆ ಶಬ್ದಗಳನ್ನು ಯೋಜಿಸುತ್ತಾರೆ. "ನೀನು ನಾಳೆ ನನ್ನನ್ನು ಕಂಡು ಹೋಗು" ಎಂದು ಮೈಸೂರಿನವರು ಬರೆದರೆ, "ನೀನು ನಾಳೆ ನನ್ನನ್ನು ಭೆಟ್ಟಿಯಾಗಿ ಹೋಗು" ಎಂದು ಧಾರವಾಡದವರು ಬರೆಯುತ್ತಾರೆ. ಈತರದ ಮತಭೇದದ ಪ್ರಯೋಗಗಳು ಅನೇಕ ಬರುತ್ತವೆ. ಅಂತಹ ಸಂದರ್ಭದಲ್ಲಿ ಕೇಶವನ ಚಾತುರ್ಯವನ್ನು ಉಪಯೋಗಿಸಿ, ವ್ಯಾಕರಣದ ನಿಯಮಗಳನ್ನು ರಚಿಸಬೇಕು.

ಕೇಶವನು ಶಬ್ದಮಣಿದರ್ಪಣದ

ಅವರಿವರ್ ಕೆಲಬರ್ ಡಿಟ ।
ಘಾರ್ಗದೇಶವಮನಗ್ರದಲ್ಲಿ ಷಷ್ಠಿಯಕಾರ ॥
ಕ್ವಾದೀರ್ಘಮನಿರದವರಿಬರ್ ।
ಬೇದದ ಸಂಭ್ರಮದ ಮೆಯ್ಯೊಳುತ್ಪಾದಿಸುವರ್ ॥ ೧೧೭ ॥

ಎಂಬ ಸೂತ್ರದಲ್ಲಿ "ಷಷ್ಠಿಯ 'ಅ' ಕಾರಕ್ಕೆ ಕೆಲವರು ದೀರ್ಘಾದೇಶವನ್ನು ಒಪ್ಪುವರು. ಬೇರೆಕೆಲವರು ಶೇಷದೊಳಗೆ ಸಂಭ್ರಮದೊಳಗೆಮಾತ್ರ ಪ್ರಯೋಗಿಸುವರು." ಎಂದು ಹೇಗೆ ನಿಯಮವನ್ನು ರಚಿಸಿರುವನೋ, ಹಾಗೆಯೇ "ಮೈಸೂರಿನವರು ವರ್ತಮಾನ, ಭೂತ, ಕೃದಂತಗಳಿಗೆ 'ಉದು' ಪ್ರತ್ಯಯವನ್ನು ಹಚ್ಚಿ, ವರ್ತಮಾನ, ಭೂತ ಕ್ರಿಯಾನಾಮಗಳನ್ನು ಮಾಡುತ್ತಾರೆ; ಧಾರವಾಡದವರು 'ದು' ಪ್ರತ್ಯಯವನ್ನು ಹಚ್ಚಿ ಮಾಡುತ್ತಾರೆ." ಎಂದು ನಿಯಮವನ್ನು ರಚಿಸಬೇಕು. ಇವುಗಳಲ್ಲಿ ಯಾವುದು ಯಾರಿಗೆ ಸಮಂಜಸವಾಗಿ ತೋರುವುದೋ ಅವರು ಅದನ್ನು ಸ್ವೀಕರಿಸುವರು. ಯಾವಪ್ರಾಂತದಲ್ಲಿಯೇ ಆಗಲಿ ಲೋಕಮಾನ್ಯ ಗ್ರಂಥಕಾರರು ಯಾವಪ್ರಯೋಗಗಳನ್ನು ತಮ್ಮ ಬರೆವಣಿಗೆಯಲ್ಲಿ ಉಪಯೋಗಿಸಿದ್ದಾರೋ, ಅವು ಇತರ ಪ್ರಾಂತದವರಿಗೆ ಸರಿದೋರದಿದ್ದರೂ ವೈಯಾಕರಣರು ಅವುಗಳನ್ನು ಸ್ವೀಕರಿಸಲಿಕ್ಕೇಬೇಕು. ತಿರಸ್ಕರಿಸಕೂಡದು. ಯಾವನಾದರೂ ಕ್ಷುದ್ರಬುದ್ಧಿಯ ವೈಯಾಕರಣನು ಅಂತಹ ಲೋಕಮಾನ್ಯಗ್ರಂಥಕಾರರ ಪ್ರಯೋಗಗಳನ್ನು ತಿರಸ್ಕರಿಸಿದರೆ, ಅವನ ವ್ಯಾಕರಣವು ಸರ್ವಮಾನ್ಯವಾಗಲಾರದು. ಆದುದರಿಂದ ಶಬ್ದಮಣಿದರ್ಪಣದ ೧೧೭-ನೆಯ ಸೂತ್ರದಪ್ರಕಾರ ಎಲ್ಲಾಪ್ರಯೋಗಭೇದಗಳನ್ನೂ ವ್ಯಾಕರಣದಲ್ಲಿ ಉಲ್ಲೇಖಿಸಬೇಕು. ಬೇಕಾದವರು ಬೇಕಾದಪ್ರಯೋಗಗಳನ್ನು ಸ್ವೀಕರಿಸಲಿ, ಅದಕ್ಕೆ ಲೇಶವೂ ಪ್ರತಿಬಂಧಪಿರಕೂಡದು. ಹೀಗಾದರೆ ಸಂತೋಷದಿಂದ ಪ್ರಾಯಶಃ ಎಲ್ಲರೂ ಒಂದೇವಿಧವಾದ ಪ್ರಯೋಗಗಳನ್ನೇ ಮೆಲ್ಲಮೆಲ್ಲನೆ ಉಪಯೋಗಿಸಲಾರಂಭಿಸುವರು.

ವ್ಯವಹಾರದಲ್ಲಿ ನಾವು ಯಾವಶೈಲಿಯಿಂದ ಮಾತನಾಡುತ್ತೇವೆಯೋ, ಅದೇ ಸರಣಿಯಿಂದ ಬರೆಯುವುದೇ ಗದ್ಯವು. ಗದ್ಯವನ್ನು ಬರೆಯುವುದೆಂದರೆ, ವಾಚಕರಸಂಗಡ ಮಾತನಾಡುವುದು. ಆದುದರಿಂದ ನಾವು ಶುದ್ಧವಾದ ವ್ಯಾವಹಾರಿಕ ಭಾಷೆಯಿಂದ ಎಂದರೆ, ಭಾಷಣ ಸಂಪ್ರದಾಯಾನುಸಾರ (idiomatically)ವಾಗಿ ಗ್ರಂಥಗಳನ್ನು ಬರೆಯತೊಡಗಿದರೆ, ಆ ಭಾಷಾಸರಣಿಯು ಎಲ್ಲರಿಗೂ ಮಾನ್ಯವಾಗುವುದು. "ವ್ಯಾವಹಾರಿಕಭಾಷೆಯನ್ನು ಗ್ರಂಥಗಳಲ್ಲಿ ಉಪಯೋಗಿಸುವುದು" ಎಂಬ ವಾಕ್ಯವನ್ನು ನೋಡಿದಾಕ್ಷಣವೇ ಪುರಾಣಮತಾಭಿಮಾನಿಗಳು 'ಭ್ರಷ್ಟಾಕಾರ' 'ಭ್ರಷ್ಟಾಕಾರ' ಎಂದು ಆಕ್ರೋಶ ಮಾಡತೊಡಗುವರು! ವ್ಯಾವಹಾರಿಕ ಭಾಷೆಯನ್ನು ಗ್ರಂಥಗಳಲ್ಲಿ ಉಪಯೋಗಿಸುವುದೆಂದರೆ, ನಾವು ಮಾತನಾಡುವ ಭರದಲ್ಲಿ ಹೇಗೆ 'ಬಂಧೋಗು' 'ತಗೊಂಡು,' 'ಬಾರೋಇಲ್ಲಿ' ಮುಂತಾದ ಅಶುದ್ಧ ಪ್ರಯೋಗಗಳನ್ನು ಉಪಯೋಗಿಸುತ್ತೇವೆಯೋ, ಇಂತಹ ಅಶುದ್ಧಪ್ರಯೋಗಗಳನ್ನೇ ಗ್ರಂಥಗಳಲ್ಲಿ ಬರೆಯುವುದು ಎಂದು ಅವರು ತಿಳಿಯುತ್ತಾರೆ. ಹೀಗೆ ತಪ್ಪುತಿಳಿದುಕೊಂಡಿರುವುದರಿಂದಲೇ ಅವರಿಗೆ ಅಷ್ಟು ಕೋಪವು ಬರುತ್ತದೆ. ಈ ಸ್ಥಳದಲ್ಲಿ ಇನ್ನೊಮ್ಮೆ ಸಾರಿಹೇಳುತ್ತೇನೆ. ಅಶುದ್ಧವಾದ ಪ್ರಯೋಗಗಳನ್ನು ಲವಮಾತ್ರವಾದರೂ ಪ್ರಯೋಗಿಸದೆ, ಕೇವಲ ಶುದ್ಧವಾದ ವ್ಯಾವಹಾರಿಕಭಾಷೆಯಿಂದ, ವಾಕ್ಪ್ರಚಾರಸಹವರ್ತಮಾನವಾಗಿ ಬರೆಯುವುದೇ ಗದ್ಯಭಾಷೆ.

ಪದ್ಯರಚನೆಯನ್ನು ಕಲಿಸುವುದಕ್ಕೆ ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ವ್ಯಾಕರಣಗಳಿರುವುದಲ್ಲದೆ ಕವಿರಾಜಮಾರ್ಗ, ಕಾವ್ಯಾವಲೋಕನ, ಶೃಂಗಾರರತ್ನಾಕರ, ರಸರತ್ನಾಕರಗಳೆಂಬ ಅಲಂಕಾರಶಾಸ್ತ್ರಗಳೂ ಛಂದೋಂಬುಧಿ, ಕವಿಜಿಹ್ವಾಬಂಧ, ಛಂದಸ್ಸಾರಗಳೆಂಬ ಛಂದಶ್ಶಾಸ್ತ್ರಗಳೂ ಇವೆ. ಆದರೆ ಗದ್ಯರಚನೆಯನ್ನು ಕಲಿಸುವುದಕ್ಕೆ ವ್ಯಾಕರಣ, ಅಲಂಕಾರಶಾಸ್ತ್ರ, ಗದ್ಯರಚನಾಶಾಸ್ತ್ರ ಮುಂತಾದ ಯಾವಸಾಧನಗಳೂ ಇರುವುದಿಲ್ಲ. ಇದುವರೆಗೆ ಗದ್ಯರಚನೆಯ ವ್ಯಾಕರಣವನ್ನು ಮಾತ್ರ ಹೇಗೆ ರಚಿಸಬೇಕೆಂಬುದನ್ನು ಪ್ರತಿಪಾದಿಸಿದೆನು. ಇನ್ನು ಗದ್ಯರಚನೆಯ ಅಲಂಕಾರಶಾಸ್ತ್ರವನ್ನೂ ಗದ್ಯರಚನಾಶಾಸ್ತ್ರವನ್ನೂ ಉಪಸಂಹಾರಾತ್ಮಕಭಾಷೆಯಿಂದ ವಿವೇಚಿಸಿ, ಈ ನಿಬಂಧವನ್ನು ಮುಗಿಸುತ್ತೇನೆ.

ಗದ್ಯರಚನಾಶಾಸ್ತ್ರವಿಶಾರದರು ಬರೆದ ಗ್ರಂಥಗಳಲ್ಲಿ, ವಿಚಾರಸರಣಿಯು ಸುಗಮವಾಗಿಯೂ ಅಪ್ರತಿಬದ್ಧವಾಗಿಯೂ, ವರ್ಣನೆಯು ಸರಸವಾಗಿಯೂ ಇದ್ದುದಿದ್ದಂತೆಯೂ ಇರುವುದು. ಇವರು ಯಾವುದೊಂದು ವಿಷಯವನ್ನು ಕುರಿತು ಸ್ತುತಿಸಿದರೆ, ವಾಚಕರ ಹೃದಯದಲ್ಲಿ ತತ್ಕ್ಷಣವೇ ಆ ವಿಷಯದಲ್ಲಿ ಗೌರವವುಂಟಾಗುವುದು; ನಿಂದಿಸಿದರೆ ತಿರಸ್ಕಾರವುಂಟಾಗುವುದು.

ಇಂತಹ ಗದ್ಯರಚನಾಚಾತುರ್ಯವುಂಟಾಗಬೇಕಾದರೆ, ಈ ಶಾಸ್ತ್ರದ ನಿಯಮಗಳನ್ನು ತಿಳಿದುಕೊಳ್ಳುವುದು ಆವಶ್ಯಕವಾಗಿದೆ. ಇದೇ ವಿಷಯವನ್ನು ಈ ಸ್ಥಳದಲ್ಲಿ ಪ್ರತಿಪಾದಿಸಲಾರಂಭಿಸಿದ್ದೇನೆ.

ಮೊದಲು ರಸಗಳ ವಿಷಯವಾಗಿ ವಿಚಾರಮಾಡುವ:—ಅಲಂಕಾರಶಾಸ್ತ್ರಜ್ಞರು ರಸಗಳಲ್ಲಿ ಶೃಂಗಾರರಸಕ್ಕೆ ಶ್ರೇಷ್ಠತ್ವವನ್ನು ಕೊಟ್ಟಿದ್ದಾರೆ. ಆದರೆ ಈ ನಿಯಮವು ಗದ್ಯಕ್ಕೆ ಸ್ವಲ್ಪವೂ ಅನ್ವಯಿಸಲಾರದು. ಪದ್ಯದ ಮುಖ್ಯಲಕ್ಷ್ಯವು ಮನೋರಂಜನವಾದುದರಿಂದ ಒಂದುವೇಳೆ ಶೃಂಗಾರಕ್ಕೆ ಪದ್ಯದಲ್ಲಿ ಪ್ರಾಧಾನ್ಯವು ದೊರೆಯಬಹುದು. ಆದರೆ ಗದ್ಯದಲ್ಲಿ ಶೃಂಗಾರರಸಪ್ರಾಧಾನ್ಯವು ಎಷ್ಟುಮಾತ್ರಕ್ಕೂ ಸಲ್ಲುವುದಿಲ್ಲ. ಶಕ್ಯವೂ ಇಲ್ಲ. ಗದ್ಯದಲ್ಲಿ ಯಾವರಸವನ್ನಾದರೂ ಉತ್ಕಟಶಬ್ದಗಳಿಂದ ಅಥವಾ ಸರಳರೀತಿಯಿಂದ ವರ್ಣಿಸಕೂಡದು. ಅವರೊಳಗೆ ಶೃಂಗಾರರಸದ ವರ್ಣನೆಯಂತೂ ತೀರ ಮುಗ್ಧವಾಗಿರಬೇಕು. ಏಕೆಂದರೆ ಗದ್ಯದ ಮುಖ್ಯವಾದ ಉದ್ದೇಶವು ವಾಚಕರ ಮನಸ್ಸನ್ನು ತಮ್ಮ ಮತದ ಕಡೆಗೆ ಎಳೆದುಕೊಳ್ಳುವುದಾಗಿದೆಯೇ ಹೊರತು ಪದ್ಯದಂತೆ ಚಿತ್ತವೃತ್ತಿಯನ್ನು ಸಂತೋಷಪಡಿಸುವುದಲ್ಲ. ಇನ್ನು, ವೀರರಸದ ಮಾತಾದರೂ ಹೀಗೆಯೇ ಸರಿ. ಉತ್ಕಟವಾದ ವಾಕ್ಯಗಳಿಂದ ವೀರರಸವನ್ನು ಆವಿಷ್ಕೃತಮಾಡುವುದು ಗದ್ಯದಲ್ಲಿ ಶೋಭಿಸುವುದಿಲ್ಲ. ಇದೇ ಮೇರೆಗೆ, ಯಾರನ್ನಾದರೂ ಸರಳವಾದ ಅಥವಾ ಉತ್ಕಟವಾದ ಶಬ್ದಗಳಿಂದ ನಿಂದೆಯನ್ನು ಮಾಡುವುದು ಯೋಗ್ಯವಲ್ಲ. ಗ್ರಾಮ್ಯಶಬ್ದಗಳನ್ನಂತೂ ನಿಂದೆಯಲ್ಲಿ ಉಪಯೋಗಿಸಲೇ ಕೂಡದು. ಇದಿರಿಗೆನಿಂತು 'ಹಲ್ಲೆ' ಯನ್ನು ಹಾಕುವುದಕ್ಕಿಂತಲೂ ಮಗ್ಗುಲಿನಿಂದ ಹಲ್ಲೆಯನ್ನು ಹಾಕುವುದು ಬಹುಕಾರ್ಯಕಾರಿಯೆಂದು ಯುದ್ಧಶಾಸ್ತ್ರ

ಜ್ಞರ ಅಭಿಪ್ರಾಯವೂ ಇದೆ. ತಾತ್ಪರ್ಯವೇನೆಂದರೆ, ಸರಳವೂ ಉತ್ಕಟವೂ ಆದ ವರ್ಣನೆಯನ್ನು ಮಾಡುವುದಕ್ಕಿಂತಲೂ ಅಲಂಕಾರಶಾಸ್ತ್ರಜ್ಞರು ಹೇಳುವ 'ಧ್ವನಿ' ಯನ್ನು ಉಪಯೋಗಿಸಿಬಿಟ್ಟರೆ, ಶೃಂಗಾರಾದಿ ಸರ್ವರಸಗಳಿಗೂ ಹೆಚ್ಚುಬಿಗಿ ಬರುತ್ತದೆ.

ಇದುವರೆಗೆ ರಸಗಳ ವಿಚಾರವಾಯಿತು; ಇನ್ನು ಗುಣಗಳನ್ನುಕುರಿತು ನಿರೂಪಿಸುವ:—ಮಮ್ಮಟನು ತನ್ನ "ಕಾವ್ಯಪ್ರಕಾಶ" ದಲ್ಲಿ ಪ್ರಸಾದ, ಓಜ, ಮಾಧುರ್ಯ ಎಂಬ ಮೂರು ಗುಣಗಳನ್ನು ಹೇಳಿದ್ದಾನೆ. ಇವುಗಳಲ್ಲಿಯೂ ಗದ್ಯಪದ್ಯಗಳೆಂಬ ಸೂಕ್ಷ್ಮಭೇದವಿದೆ. ಗದ್ಯದ ನಿಯಮಗಳನ್ನುಮಾತ್ರ ಇಲ್ಲಿ ವಿವರಿಸುತ್ತೇನೆ.

ಗದ್ಯಕ್ಕೆ ಪ್ರಸಾದಯುಕ್ತವಾದ ಭಾಷೆಯು ಆವಶ್ಯಕವಾಗಿದೆ. ವಾಚಕರ ಮನಸ್ಸಿನಲ್ಲಿ ಒಮ್ಮಿಂದೊಮ್ಮೆ ಹೊಳೆಯುವಂತೆ, ವಾಕ್ಯರಚನೆಯು ಸುಗಮವಾಗಿರಬೇಕು: ಕ್ಲಿಷ್ಟವಾಗಿರಕೂಡದು. ಶಬ್ದಗಳು ಸುಲಭವಾದುವುಗಳೂ ಪ್ರತಿನಿತ್ಯದ ಪ್ರಚಾರದೊಳಗಿನವೂ ಆಗಿರಲಿಕ್ಕೆ ಬೇಕು. ಹೀಗಾದರೆ ಅಲ್ಲಿ ಪ್ರಸಾದಗುಣವು ವ್ಯಕ್ತವಾಗುವುದು. ಈಗುಣವನ್ನು ಸಾಧಿಸುವುದಕ್ಕೆ ಇನ್ನೊಂದೆರಡು ನಿಯಮಗಳುಂಟು. ಅವು ಯಾವುವೆಂದರೆ, ಒಂದನೆಯದು ಪುನರುಕ್ತಿ. ಯಾವುದೊಂದು ವಿಷಯವೇ ಆಗಲಿ ವಾಚಕರ ಮನಸ್ಸಿನಲ್ಲಿ ಬಿಂಬಿಸುವುದಕ್ಕಾಗಿ ಆ ವಿಷಯದ ಪುನರುಕ್ತಿಯನ್ನು ಮಾಡುತ್ತಿರಬೇಕು; ಎಂದರೆ ಆ ಒಂದು ವಿಷಯವನ್ನೇ ವಿಸ್ತೃತರೀತಿಯಿಂದ ಎರಡು ಮೂರು ಸಲ ಹೇಳಬೇಕು; ಆದರೆ ಶಬ್ದಗಳ ಅಥವಾ ವಾಕ್ಯಗಳ ಪುನರುಕ್ತಿಯನ್ನು ಮಾತ್ರ ಮಾಡಕೂಡದು. ಏಕೆಂದರೆ, ಇಂತಹಪುನರುಕ್ತಿಯು ದೋಷಾರ್ಹವಾದುದು. ಒಂದೇವಿಷಯವನ್ನೇ ಬೇರೆಬೇರೆ ರೀತಿಯಿಂದ ಹೇಳುವ ಶೈಲಿಯನ್ನು ಗ್ರಂಥಕಾರನು ಕಲಿಯುವುದು ಆವಶ್ಯಕವಾಗಿದೆ. ಮೊದಲು ಒಂದುಚಿಕ್ಕ ವಿಧಾನವನ್ನುಮಾಡಿ, ಮುಂದೆ ಅದನ್ನು ಮೆಲ್ಲಮೆಲ್ಲನೆ ವಿಸ್ತಾರಮಾಡುತ್ತ ಸಾಗುವುದೂ ಒಂದುತರದ ಪುನರುಕ್ತಿಯೇಸರಿ. ವಿಷಯವನ್ನು ವಿಶದಮಾಡುವ ಇನ್ನೊಂದು ಮಾರ್ಗವು ಯಾವುದೆಂದರೆ, ದೃಷ್ಟಾಂತಗಳನ್ನು ಕೊಡುವುದು. ಐತಿಹಾಸಿಕ ಇಲ್ಲವೆ ಕಲ್ಪಿತ ಉದಾಹರಣಗಳನ್ನು ಕೊಡುವುದರಿಂದ ವಿಷಯವು ವಾಚಕರ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವುದು. ಉದಾಹರಣ, ದೃಷ್ಟಾಂತ, ನಿದರ್ಶನ ಮುಂತಾದ ಬೇರೆಬೇರೆ ಛಾಯೆಗಳು ಇವೇಮಾರ್ಗದವು. ಸಮಯೋಚಿತವಾದ ದೃಷ್ಟಾಂತವನ್ನು ಕೊಟ್ಟು, ವಿಷಯವನ್ನು ಸುಗಮವಾಗಿ ಮಾಡುವುದು ಪ್ರತಿಭೆಯ ಕೆಲಸವೇ ಸರಿ; ಏಕೆಂದರೆ, ಯೋಗ್ಯವೂ ಹೃದಯಂಗಮವೂ ಆದ ದೃಷ್ಟಾಂತಗಳು ಪ್ರತಿಭೆಯಿದ್ದ ಹೊರತು ನೆನಪಾಗುವುದಿಲ್ಲ.

ಗದ್ಯಭಾಷೆಯು ಪ್ರಸಾದಯುಕ್ತವಾಗಿರಬೇಕಲ್ಲದೆ ಓಜೋಗುಣಯುಕ್ತವೂ ಆಗಿರಬೇಕು. ಓಜೋಗುಣಯುಕ್ತಭಾಷೆಯೆಂದರೆ, ಬಿಗಿಯಾದ ಸಮಾಸಗಳೊಡನೆ ಕೂಡಿದ ಭಾಷೆ. ಭಾಷೆಯಲ್ಲಿ ಈ ಓಜೋಗುಣವುಂಟಾಗುವಂತೆ ಮಾಡುವುದಕ್ಕೆ ಕೆಲವು ಉಪಾಯಗಳಿವೆ. ಅವುಗಳನ್ನು ಇಲ್ಲಿ ನಿವೇದಿಸುತ್ತೇನೆ.

(೧) ರೂಪಕಾಲಂಕಾರದಿಂದ ಭಾಷೆಗೆ ಕಳೆ ಕಟ್ಟುತ್ತದೆ. ಆದರೆ ಯಾವ ಅಲಂಕಾರಗಳನ್ನೇ ಆಗಲಿ ಗದ್ಯದಲ್ಲಿ ಮಿತವಾಗಿ ಉಪಯೋಗಿಸಬೇಕೇ ಹೊರತು ಅತಿಯಾಗಿ ಉಪಯೋಗಿಸಕೂಡದು. ಸಾಮಾನ್ಯತಃ ಗದ್ಯದಲ್ಲಿ ಅಲಂಕಾರಗಳನ್ನೇ ಉಪಯೋಗಿಸಬಾರದು. ಯಾವ ದೇಶದಲ್ಲಿಯೂ ಗಂಡಸರಿಗೆ ಅಲಂಕಾರಗಳನ್ನು (ಆಭರಣಗಳನ್ನು) ಹಾಕುವುದು ಹೇಗೆ ಶೋಭಿಸುವುದಿಲ್ಲವೋ, ಹಾಗೆಯೇ ಗದ್ಯದಲ್ಲಿ ಅಲಂಕಾರಗಳನ್ನು ಉಪಯೋಗಿಸುವುದು ಒಪ್ಪಲಾರದು. ಉಪಮಾಲಂಕಾರವನ್ನು ಕೆಲಕೆಲವು ಸ್ಥಳಗಳಲ್ಲಿ ವಿರಳವಾಗಿ ಉಪಯೋಗಿಸಬಹುದು. ಆದರೆ ಉತ್ಪ್ರೇಕ್ಷಾಲಂಕಾರವನ್ನಂತೂ ಗದ್ಯದಲ್ಲಿ ಎಲ್ಲಿಯೂ ಉಪಯೋಗಿಸಲೇ ಕೂಡದು. ಒಂದುವೇಳೆ ಯಾರಾದರೂ ಉಪಯೋಗಿಸಿದರೆ, ಅಲ್ಲಿ ಕೃತ್ರಿಮತ್ವದ ದೋಷವುಂಟಾಗುವುದು. ಶ್ಲೇಷಾಲಂಕಾರವಂತೂ ಗದ್ಯವಕಡೆಗೆ ಇಣಿಕಿ ಸಹ ನೋಡಕೂಡದು. ಇನ್ನು, ರೂಪಕಾಲಂಕಾರದಿಂದ ಭಾಷೆಯಲ್ಲಿ ಬಿಗಿಬರುವುದರಿಂದ ಅದನ್ನು ಗದ್ಯದಲ್ಲಿ ಮಿತವಾಗಿ ಉಪಯೋಗಿಸಬಹುದು. ಆದರೆ ಅದನ್ನು ಮುಗ್ಧ ರೀತಿಯಿಂದ ಉಪಯೋಗಿಸಬೇಕು. ಅಲ್ಲದೆ ಸಾದೃಶ್ಯವು ಹೃದಯಂಗಮವಾಗಿದ್ದಲ್ಲಿಯೇ ಅದನ್ನು ಉಪಯೋಗಿಸಬೇಕು.

(೨) ವಿರೋಧಾಲಂಕಾರದಿಂದ ಭಾಷೆಗೆ ಕಳೆಕಟ್ಟುತ್ತದೆ. ಉದಾ:- ರೋಮ್ ರಾಷ್ಟ್ರವನ್ನು ನಾಶಮಾಡಿದನಂತರ ಗಾಥಜನರು ರೋಮನ್ ಕ್ಯಾಥೋಲಿಕ್ ಧರ್ಮದ ದೀಕ್ಷೆಯನ್ನು ಸ್ವೀಕರಿಸಿದರು. ಆಗ ಈ ಧರ್ಮದಲ್ಲಿ ಹೊಸದಾಗಿಸೇರಿದ ಜನರು ಮಾಡಿದುದೇನೆಂದರೆ, "ಯಾವ ಮೂರ್ತಿಗಳನ್ನು ಅವರು ಮೊದಲು ಪೂಜಿಸುತ್ತಿದ್ದರೋ, ಅವುಗಳನ್ನು ಒಡೆಯಲಾರಂಭಿಸಿದರು. ಯಾವ ಮೂರ್ತಿಗಳನ್ನು ಮೊದಲು ಒಡೆದುಹಾಕುತ್ತಿದ್ದರೋ, ಅವುಗಳನ್ನು ಪೂಜಿಸಲಾರಂಭಿಸಿದರು." ಈ ವಾಕ್ಯದಲ್ಲಿ ವಿರೋಧವು ಎಷ್ಟು ಮನೋಹರವಾಗಿದೆ!

(೩) ಸಮಾನಾರ್ಥಕ ಅಥವಾ ಕಿಂಚಿನ್ನ್ಯೂನಾಧಿಕಾರ್ಥಕಶಬ್ದಗಳನ್ನು ಎರಡೆರಡು ಮೂರುಮೂರು ಸಲ ಉಪಯೋಗಿಸುವುದರಿಂದಲೂ ಭಾಷೆಯಲ್ಲಿ ಓಜೋಗುಣವುಂಟಾಗುತ್ತದೆ. ಉದಾ: "ಧಾರವಾಡಜಿಲ್ಲೆಯಲ್ಲಿ ಮಾತನಾಡುವ ಭಾಷೆಯೇ ಒಂದುತರ, ವಿಜಾಪುರಜಿಲ್ಲೆಯ ಭಾಷೆಯೇ ಒಂದುವಿಧ, ಕಾರವಾರಜಿಲ್ಲೆಯ ಭಾಷೆಯೇ ಒಂದುರೀತಿ, ಬೆಳಗಾವಜಿಲ್ಲೆಯ ಭಾಷೆಯೇ ಬೇರೆ; ಆದರೂ ಮುಂಬಯಿ ಕರ್ನಾಟಕದ ಗ್ರಾಂಥಿಕಭಾಷೆಯು ಒಂದೇವಿಧವಾಗಿದೆ." ಈ ವಾಕ್ಯದಲ್ಲಿ ತರ, ರೀತಿ, ವಿಧ ಎಂಬ ಸಮಾನಾರ್ಥಕವಾದ ಮೂರು ಶಬ್ದಗಳನ್ನು ಉಪಯೋಗಿಸಿರುವುದರಿಂದ ಇಲ್ಲಿ ಓಜೋಗುಣವುಂಟಾಗಿದೆ.

(೪) ಕಾರಣದ ಸ್ಥಳದಲ್ಲಿ ಕಾರ್ಯದ ನಿರ್ದೇಶವನ್ನು ಮಾಡುವುದರಿಂದಲೂ ಭಾಷೆಯಲ್ಲಿ ಬಿಗಿಬರುತ್ತದೆ. ಉದಾ: ಹರ್ಷವರ್ಧನನು ದಕ್ಷಿಣದೇಶಕ್ಕೆ ದಂಡೆತ್ತಿ ಬರುವನೆಂಬ ವಾರ್ತೆಯುಂಟಾದಕೂಡಲೆ ಕರ್ನಾಟಕದಲ್ಲಿ "ಲಕ್ಷೋಪಲಕ್ಷ ಖಡ್ಗಗಳು ಒರೆಯಿಂದ ಹೊರಬಿದ್ದುವು".

(೫) ಅಚೇತನಪದಾರ್ಥಗಳಲ್ಲಿ ಸಚೇತನತ್ವದ ಆರೋಪವನ್ನಿಡುವುದರಿಂದಲೂ ಭಾಷೆಯಲ್ಲಿ ಕಳೆ ಕಟ್ಟುತ್ತದೆ. ಉದಾ: "ಬಾದಾಮಿಯ ಗವಿಗಳೂ ಅಜಂತೆಯಲ್ಲಿಯ ಅತ್ಯಂತಸುಂದರವಾದ ಚಿತ್ರಗಳೂ ಈ ಚಾಲುಕ್ಯವಂಶದೀಪಕರನ್ನು ನಮ್ಮೆದುರಿಗೆ ತಂದು ನಿಲ್ಲಿಸುತ್ತವೆ."

(೬) ಭಿನ್ನಾರ್ಥಶಬ್ದಗಳ ಅಥವಾ ಭಿನ್ನವಾಕ್ಯಾಂಗಗಳ ಸಮೂಹವನ್ನು ಉಪಯೋಗಿಸುವುದರಿಂದಲೂ ಭಾಷೆಯಲ್ಲಿ ಓಜೋಗುಣವುಂಟಾಗುತ್ತದೆ. ಉದಾ:— "ನಾವು ಮನುಷ್ಯರು: ನಮ್ಮನ್ನೂ ದೇವರೇ ಹುಟ್ಟಿಸಿರುವನು: ನಮ್ಮಿಂದಲೂ ಮಹಾಮಹಾಕಾರ್ಯಗಳು ಕೊನೆಗಂಡಿವೆ. ನಮಗೂ ರಾಷ್ಟ್ರವುಂಟು, ವೈಭವವುಂಟು, ಇತಿಹಾಸವುಂಟು, ಭಾಷೆಯುಂಟು, ಬುದ್ಧಿಯುಂಟು, ನಮ್ಮವರೂ ಪರರಾಜರನ್ನು ಜಯಿಸಿ, 'ಗಂಗಾವಾರ್ಧಿಯೊಳಾತ್ಮತುರಂಗಮುಮಂ ಮಿಸಿಸಿರ್ದರು'. ನಮ್ಮಲ್ಲಿಯೂ ಅತುಲಪರಾಕ್ರಮಿಗಳೂ ಮಹಾಬುದ್ಧಿಶಾಲಿಗಳೂ ಅವತರಿಸಿದ್ದಾರೆ." (ಶ್ರೀಯುತ ಪಿ. ಬಿ. ಆಲೂರರಕೃತ "ಕರ್ಣಾಟಕ ಗತವೈಭವ" ಪುಟ ೩.)

(೭) ಗದ್ಯರಚನೆಯೂ ಪ್ರಾಸಾದರಚನೆಯೂ ಒಂದೇ ಎಂದು ಹೇಳಬಹುದು. ಅರಮನೆಯ ಕಟ್ಟಡದ ಸೌಂದರ್ಯವನ್ನು ಹೆಚ್ಚಿಸುತ್ತ ಹೆಚ್ಚಿಸುತ್ತ ಕೊನೆಯಲ್ಲಿ ಶಿಖರವನ್ನು ಇಡುವುದು ಹೇಗೆ ಪ್ರಾಸಾದರಚನೆಗೆ ಶೋಭಿಸುವದೋ, ಹಾಗೆಯೇ ಗದ್ಯರಚನೆಯಲ್ಲಿ, ಬಿಗಿಯಾದ ಭಾಷೆಯನ್ನು ಎಲ್ಲಸ್ಥಳಗಳಲ್ಲಿಯೂ ಉಪಯೋಗಿಸದೆ, ಅಲ್ಲಲ್ಲಿಗೆ ಉಪಯೋಗಿಸಿ, ಕೊನೆಯಭಾಗದಲ್ಲಿ ಅದರ ಕಳಸವನ್ನೇ ಮಾಡಿಬಿಡುವುದು ಗದ್ಯರಚನೆಗೆ ಭೂಷಣಪ್ರದವಾಗಿದೆ. ಪ್ರತಿಭಾಸಂಪನ್ನರಾದ ಗ್ರಂಥಕಾರರು ಸಹಜಸ್ಫೂರ್ತಿಯಿಂದ ತಮ್ಮ ಗ್ರಂಥಗಳ ಕೊನೆಯನ್ನು ಎಂದರೆ ಉಪಸಂಹಾರವನ್ನು ಅತಿಶಯ ಮನೋಹರವಾದ ಭಾಷೆಯಿಂದ ಬರೆಯುತ್ತಾರೆ.

ಇನ್ನು, ಮಾಧುರ್ಯಗುಣವೊಂದನ್ನು ವರ್ಣಿಸಿ ಲೇಖಣಿಕೆಯನ್ನು ಕೆಳಗಿಡುತ್ತೇನೆ. ಈಗುಣವು ಗದ್ಯಪದ್ಯಗಳೆರಡಕ್ಕೂ ಆವಶ್ಯಕವಾದುದು. ಆದರೆ ಪದಲಾಲಿತ್ಯವು ಪದ್ಯದಲ್ಲಿ ಆನಂದವನ್ನೀಯುವಂತೆ ಗದ್ಯದಲ್ಲಿ ಆನಂದವನ್ನುಂಟುಮಾಡಲಾರದು. ಅನುಪ್ರಾಸಾದಿಶಬ್ದಾಲಂಕಾರಗಳನ್ನಂತೂ ಗದ್ಯದಲ್ಲಿ ಉಪಯೋಗಿಸಲೇಕೂಡದು. "ತಿಪ್ಪೆ ಹೋಗಿ ಉಪ್ಪರಿಗೆಯಾದ ಕಥೆಗಳೂ, ಅರಮನೆಹೋಗಿ ಸೆರೆಮನೆಯಾದ ಉದಾಹರಣೆಗಳೂ ಅನೇಕವಾಗಿವೆ." ಎಂದು ಅಪೂರ್ವವಾಗಿ ಒಮ್ಮೊಮ್ಮೆ ಶಬ್ದಚಾತುರ್ಯವನ್ನು ತುಸಮಟ್ಟಿಗೆ ವ್ಯಕ್ತಮಾಡುವುದೇನೂ ತಪ್ಪಲ್ಲ. ಆದರೆ ಇದರಿಂದ ವಿಶೇಷ ಪ್ರಯೋಜನವಿಲ್ಲ. ಗದ್ಯದಲ್ಲಿ ಭಾಷಾಮಾಧುರ್ಯವನ್ನು ಹೇಗೆ ಉಂಟುಮಾಡಬೇಕೆಂಬುದನ್ನು ವಾಣಿಯಿಂದ ಅಥವಾ ನಿಯಮಗಳಿಂದ ಹೇಳುವುದು ಅಶಕ್ಯವೇಸರಿ. "ತಥಾಪಿ ನ ಗಿರಾ ವಕ್ತುಂ ಸರಸ್ವತ್ಯಾಪಿ ಶಕ್ಯತೇ" ಎಂಬವಂಡಿಯ ವಚನದಂತೆ ಪ್ರತ್ಯಕ್ಷಸರಸ್ವತಿಗೆ ಕೂಡ ಭಾಷೆಯಿಂದ ಹೇಳುವುದಕ್ಕೆ ಬರುವಂತಿಲ್ಲ. ಕರ್ಣಮನೋಹರವಾದ ಶಬ್ದಗಳನ್ನು ಉಪಯೋಗಿಸಬೇಕು, ಗ್ರಾಮ್ಯಶಬ್ದಗಳನ್ನು ಉಪಯೋಗಿಸಬಾರದು. ಕಠೋರವಾಕ್ಯಗಳನ್ನೂ ಕಠಿಣ

ವಾದ ಅಕ್ಷರಗಳನ್ನೂ ಪ್ರಯೋಗಿಸಕೂಡದು. ಎಂಬಿವೇ ಮುಂತಾದ ಸಣ್ಣ ಪುಟ್ಟ ನಿಯಮಗಳನ್ನು ಹೇಳಬಹುದು. ಇದಕ್ಕೆ ಒಂದು ಉದಾಹರಣವು ಪ್ರಸಿದ್ಧವಾಗಿದೆ: ಏನೆಂದರೆ, "ಶುಷ್ಕೋ ವೃಕ್ಷಸ್ತಿಷ್ಠತ್ಯಗ್ರೇ" ಎಂದು ಕಠೋರವರ್ಣಯುಕ್ತವಾದ ವಾಕ್ಯವು ಇರಬಾರದು: "ನೀರಸತರುರಿಹ ವಿಲಸತಿ ಪುರತಃ" ಎಂದು ಸೌಮ್ಯಾಕ್ಷರಯುಕ್ತವಾದ ವಾಕ್ಯವಿರಬೇಕು. ಮುಖ್ಯ ಸಾರಾಂಶವೇನೆಂದರೆ, ವಿಷಯಕ್ಕನುರೂಪವಾದ ಮನೋಹರವಾದ ಭಾಷೆಯನ್ನುಪಯೋಗಿಸುವ ಚಾತುರ್ಯವು ಅವರವರ ಸ್ವಯಂ ಸ್ಫೂರ್ತಿಯನ್ನು ಅವಲಂಬಿಸಿದೆ. ಮನುಷ್ಯರ ನಡಿಗೆಯಲ್ಲಿ ಹೇಗೆ ಭಿನ್ನಭಿನ್ನಪ್ರಕಾರವಿದೆಯೋ, ಹಾಗೆಯೇ ಪ್ರತಿಯೊಬ್ಬ ಗ್ರಂಥಕರ್ತನು ಬರೆಯುವ ಶೈಲಿಯೂ ಬೇರೆಬೇರೆಯಾಗಿರುತ್ತದೆ. ನಡಿಗೆಯಲ್ಲಿ ಹೇಗೆ ಗಜಗತಿ, ಹಂಸಗತಿಗಳು ಸುಂದರವಾಗಿರುತ್ತವೆಯೋ, ಹಾಗೆಯೇ ಗ್ರಂಥಕಾರರಲ್ಲಿ ಕೆಲವರು ಬರೆಯುವ ಶೈಲಿ ಆಹ್ಲಾದಜನಕವಾಗಿರುತ್ತದೆ. ಆದುದರಿಂದಲೇ ಅವರ ಗ್ರಂಥಗಳು ಲೋಕಪ್ರಿಯವಾಗಿರುತ್ತವೆ.

ಆಧುನಿಕಮಹಾರಾಷ್ಟ್ರ ಸಾಹಿತ್ಯ.

ಮ॥ ಶೇಷ. ಭೀ. ಪಾರಿಶವಾಡರಿಂದ

ಮರಾಠೆಯವರ ಆಧುನಿಕ ವಾಙ್ಮಯವೆಂದಕೂಡಲೆ ಅವರ ಐತಿಹಾಸಿಕ ಮಹತ್ತ್ವವು ಲಕ್ಷ್ಯದಲ್ಲಿ ಒಂದು ಸಾರ್ವಭೌಮ ಪದವಿಗೇರಿದ ಪೇಶವಾಯಿಯ ಮಹದೈಶ್ವರ್ಯವು ಕಣ್ಣಮುಂದೆ ಕಟ್ಟದೆ ಇರಲಾರದು. ಇದಕ್ಕೂ ಹೆಚ್ಚಾಗಿ ಮಹಾರಾಷ್ಟ್ರ ರಾಜ್ಯಸ್ಥಾಪಕರಾದ ಶ್ರೀಮಚ್ಛತ್ರಪತಿ ಶಿವಾಜಿಯವರ ಅವತಾರದ ಮಹತ್ತ್ವವಿದೆ. ಶ್ರೀ ಶಿವಾಜಿಯಂತಹ ಸರ್ವಗುಣ ಸಂಪನ್ನನಾದ ಪುರುಷಶ್ರೇಷ್ಠನು ವೈದಿಕ ಪೌರಾಣಿಕಕಾಲಗಳ ಅನಂತರ ತ್ರಿಖಂಡಮಂಡಲದಲ್ಲಿಯೂ ಆಗಲಿಲ್ಲವೆಂದು ಅಭಿಮಾನಿಗಳಾದ ಮಹಾರಾಷ್ಟ್ರೀಯರು ಹೇಳುವುದು ಸರ್ವಮಾನ್ಯವಾಗಿದೆಯೆಂದು ತೋರುತ್ತದೆ. ಶ್ರೀ ಶಿವಾಜಿಯ ಪರಧರ್ಮಾದರಣ, ಪರಸ್ತ್ರೀಯರನ್ನು ಮಾತೆಯಂತೆ ಭಾವಿಸುವ ಗುಣ, ಉತ್ಕೃಷ್ಟರಾಜನೀತಿ ಮೊದಲಾದುವುಗಳನ್ನು ಹೇಳಲು ಇಲ್ಲಿ ಅವಕಾಶವಿಲ್ಲ. ಕರ್ಣಾಟಕದ ಇತಿಹಾಸದಲ್ಲಿಯೂ ಇಂತಹ ಪುರುಷ ಪುಂಗವರಿರಬಹುದೆಂದು ನಾವು ಆಶಿಸುತ್ತೇವೆ. ಚಾಲುಕ್ಯವಂಶದಲ್ಲಿ ಪುಲಿಕೇಶಿ,

ನಂಪನ ಪೋಷಕನ ತಂದೆಯಾದ ನರಸಿಂಹ, ಮೊದಲಾದವರ ವಿಶೇಷಚರಿತೆಗಳು ಹೊರಬೀಳಲು ಎಷ್ಟೆಷ್ಟು ಅವಕಾಶವಿದೆಯೋ ನಮಗೆ ತಿಳಿಯದು. ಮರಾಠಿಗರ ಪೂರ್ವಜರಂತೆ ಇವರು ನಮಗೆ ಹತ್ತಿರಲಿಲ್ಲ. ವಿಜಯನಗರಸಾಮ್ರಾಜ್ಯದ ಆರಂಭದಲ್ಲಿಯ ವಿದ್ಯಾರಣ್ಯಸ್ವಾಮಿಗಳು ಕರ್ಣಾಟಕದ ರಾಮದಾಸಸ್ವಾಮಿಗಳೇ ಆಗಿದ್ದಾರೆ. ಅವರ ವಿಸ್ತರವಾದ ಚರಿತ್ರೆಯೇ ಹೊರಬೀಳುವ ಅವಕಾಶವಿದೆ. ಒಟ್ಟಿಗೆ ಈ ಹತ್ತಿರದಲ್ಲಿಯ ಮರಾಠೆಯವರ ಪೂರ್ವಜರು ಪೂಜ್ಯರಾಗಿದ್ದು ತಮ್ಮ ವಂಶಜರನ್ನು ಈಗಲೂ ಹುರಿದುಂಬಿಸುತ್ತಿದ್ದಾರೆ. ಸುವಿಖ್ಯಾತವಾದ ವಿಜಯನಗರ ಸಾಮ್ರಾಜ್ಯದ ಸಮಾಪ್ತಿಯ (೧೫೬೫) ಅನಂತರ ಕರ್ಣಾಟಕದಲ್ಲಿ ಕತ್ತಲೆ ಕವಿದು ಹೋಗಿದೆ. ಮರಾಠಿಗರಂತೆ ಇತಿಹಾಸಸಂಶೋಧಕರೂ ಲೇಖಕರೂ ನಮ್ಮಲ್ಲಿ ಒಹಳವಾಗಿ ಬೇಕಾಗಿದ್ದಾರೆ. ಒಂದಕ್ಕೆ ನಾವೇ ಕಾವೇರಿಯಿಂದ ಗೋದಾವರಿಯವರೆಗೆ ಈ ದೇಶವನ್ನು ವ್ಯಾಪಿಸಿದ ಕಾಲಕ್ಕೆ ಮರಾಠಿಗರ ಪ್ರಾಂತವು ತೀರ ಸಣ್ಣದಾಗಿರಬಹುದು. ಈಗ ಅವರೇ ನಮ್ಮನ್ನು ವ್ಯಾಪಿಸಿಬಿಟ್ಟಿದ್ದಾರೆ. ಅತರ್ಕ್ಯವಾದ ಕಾಲಮಹಿಮೆ! ಮತ್ತೇನು?

ಆಧುನಿಕಮಹಾರಾಷ್ಟ್ರಸಾಹಿತ್ಯವೆಂದರೆ ಇಂಗ್ಲಿಷ್ ಸಾಮ್ರಾಜ್ಯದ ಆರಂಭದಿಂದ ಈಗಿನವರೆಗಿನದೆಂದು ನಮ್ಮ ಮರ್ಯಾದೆಯಾಗಿದೆ. "ಇಷ್ಟು ದಿವಸಗಳೂ ಅಜ್ಞಾನ ನಿದ್ರೆಯಲ್ಲಿ ಮಗ್ನರಾದ ನಮ್ಮಂತಹ ಜನರಲ್ಲಿ ಇಷ್ಟು ಲವಲವಿಕೆಯೆಲ್ಲಿಯದು? ನೂರಾರು ವರ್ಷಗಳು ದಾಟಿ ಹೋದರೂ ನಮ್ಮ ಇತಿಹಾಸಗಳಲ್ಲಿ ಏನು ಹೆಚ್ಚು ಕಡಮೆಗಳಾಗಬಹುದು?" ಎಂದು ಆರಾದರೂ ಕೇಳಿದರೆ ಅದರಲ್ಲಿ ಅರ್ಥವು ಬಹಳವಿದೆ. ಪಾಶ್ಚಾತ್ಯರಲ್ಲಿ ಎಷ್ಟುಮಂದಿ ಲೇಖಕರು! ಏನುಮಾತು! ನಮ್ಮಲ್ಲಿಯ ಲೇಖಕರಿಗೆ ಚರಿತಾರ್ಥವನ್ನು ನಡೆಯಿಸುವುದೂ ಕಷ್ಟವಾಗಿದೆ. ಈ ಮಾತು ಎಲ್ಲರಿಗೂ ಅನ್ವಯಿಸಿದರೂ ಇಂತಹ ಸ್ಥಿತಿಯಿಂದಲೇ ಮರಾಠಿಗರು ಬಂಗಾಳಿಗಳಂತೆ ಮುಂದೆ ಬಂದು ಈ ನಿಯಮಕ್ಕೆ ಸ್ವಲ್ಪ ಅಪವಾದಭೂತರಾಗಿದ್ದಾರೆ.

ಇನ್ನು ಆಧುನಿಕ ಮಹಾರಾಷ್ಟ್ರೀಯ ಸಾಹಿತ್ಯವು ಗದ್ಯವೋ? ಪದ್ಯವೋ?— ಎಂಬುದೊಂದು ಪ್ರಶ್ನೆ ಮುಂದೆ ಬರುವಂತೆ ಕಾಣುತ್ತಿದೆ. ಸಾವಿರಾರು ವರುಷಗಳಿಂದ ಕನ್ನಡದಲ್ಲಿಯೂ, ೬೦೦—೭೦೦ ವರ್ಷಗಳಿಂದ ಮರಾಠೆಯಲ್ಲಿಯೂ, ಹಿಂದೆ ಇರುವ ಎಲ್ಲ ವಾಙ್ಮಯವೂ ಪ್ರಾಯಶಃ ಪದ್ಯಮಯವಾಗಿಯೇ ಇತ್ತು. ಆಗ ಗದ್ಯ ಪದ್ಯ ವೆಂಬ ಪ್ರಶ್ನೆಯು ಮುಂದೆ ಬಾರದೆ,—"ಇದೆಂತಹ ವಾಙ್ಮಯ? ಇದೆಂತಹ ಕಾವ್ಯ? ಜೈನರದೊ? ಹಾರುವರದೊ? ಲಿಂಗವಂತರದೊ? ಒಕ್ಕಲಿಗರು ಅಥವಾ ಶೂದ್ರರದೊ? ಅಂತ್ಯಜರು ಅಥವಾ ಹೊಲೆಯರು ಮೊದಲಾದವರು ಬರೆದುದೊ?" —ಎಂಬ ಪ್ರಶ್ನೆಗಳು ಮುಂದೆ ಬರುತ್ತಿದ್ದುವು. ಸರಸ್ವತಿಯ ಆಳಿಕೆಯಲ್ಲಿ ಈ ವ್ಯತ್ಯಾಸಗಳಿಗೆ ಕಾರಣವೇ ಇಲ್ಲ. ಇರಲಿ, ಮರಾಠಿಯ ಇತ್ತಲಾಗಿನ ಸಾಹಿತ್ಯವೆಲ್ಲ ಗದ್ಯಮಯವಾಗಿಯೇ ಇದೆ. ಹಾಗಾದರೆ ತೇಜಸ್ವಿಗಳಾದ ಮರಾಠಿಗರಲ್ಲಿ ಈಚೆಗೆ ಒಬ್ಬರೂ ಕವಿಗಳಾಗಲಿಲ್ಲವೇ?—ಎಂದು ಕೇಳಬಹುದು. ಆದರೆ ಕಾವ್ಯವೇನು ಸುಮ್ಮನೆ

ಬರುವುದಿಲ್ಲ. ನೂರು ನೂರೈವತ್ತು ವರ್ಷಗಳಲ್ಲಿ ಮಹಾ ಕವಿಗಳ ವಾಙ್ಮಯವಂತೂ ಒತ್ತಟ್ಟಿಗಿರಲಿ ಎರಡನೆಯ ಪ್ರತಿಯ ಕವಿಗಳಾದರೂ ಆಗುವುದು ಯಾವ ನಾಡಿನಲ್ಲಿಯೂ ಅಶಕ್ಯವೆಂದು ಪೂರ್ವದ ಇತಿಹಾಸಗಳಿಂದ ಕಂಡುಬಂದಿದೆ. ಜ್ಞಾನೇಶ್ವರ, ಮುಕ್ತೇಶ್ವರ, ರಾಮದಾಸ ಇಂತಹ ಮಹಾ ಕವಿಗಳಾಗಲು ಮರಾಠಿಯ ನಾಡಿಗೆ ೫೦೦—೬೦೦ ವರ್ಷಗಳು ಹಿಡಿದುವು, "ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ" ಯಾದ ಪಂಪನು ಹುಟ್ಟಲಿಕ್ಕೆ ಕನ್ನಡ ವಾಙ್ಮಯಕ್ಕೆ ಸಾವಿರ ವರ್ಷಗಳು ಹಿಡಿದುವು. ಪಂಪನ ಅನಂತರ ಸಾವಿರ ವರ್ಷಗಳ ಕಾಲದಲ್ಲಿ ಅವನಂತಹವನು ಆವನೂ ಆಗಲಿಲ್ಲವೆಂದು ಅವನ ಅನಂತರದ ಎಲ್ಲ ಕನ್ನಡ ಮಹಾಕವಿಗಳೂ, "ಕರ್ಣಾಟಕ ಕವಿಚರಿತೆ" ಯ ಕರ್ತರೂ ಹೇಳುವರು. ಸಂಸ್ಕೃತದಲ್ಲಿ ಮತ್ತೊಬ್ಬ ಕಾಳಿದಾಸನೂ, ಇಂಗ್ಲಿಷಿನಲ್ಲಿ ಮತ್ತೊಬ್ಬ ಶೇಕ್ಸ್ಪಿಯರನೂ ಈವರೆಗೂ ಆಗಲಿಲ್ಲ. ಎಂದಮೇಲೆ ಜಗನ್ನಿಯಾಮಕನ ಇಚ್ಛಾನುಸಾರವಾಗಿ ಕಾವ್ಯವು ಬೇಕಾದಾಗ ಬೇಕಾದಲ್ಲಿ ಮಿಂಚಿನಂತೆ ಹೊಳೆಯುವುದೇ ಸತ್ಯವಾಗಿದೆ. ಮನುಷ್ಯ ಪ್ರಯತ್ನಗಳಿಂದ ಅದೆಂತು ಸಾಧ್ಯ? ಗದ್ಯದಲ್ಲಿ ಬರೆಯುವ ಸಂಪ್ರದಾಯವು ಇತ್ತಣದು. ಪೂರ್ವದಲ್ಲಿ ಕವಿಗಳೇ ವಿಶೇಷವಾಗಿ ವಿದ್ವಜ್ಜನ ಪ್ರಾಂಗಣದಲ್ಲಿ ಬರುತ್ತಿದ್ದರು. ಈಗ ಆ ಯುಗವೆಲ್ಲ ಹೋಗಿ ಸಾಧಾರಣವಾಗಿ ಮಾತಾಡುವಂತೆ ಬರೆಯುತ್ತ ಹೋಗುವ ಪದ್ಧತಿ ವಾಡಿಕೆಯಾಗಿರುವುದರಿಂದ ಬಹಳ ಅನುಕೂಲವಾಗಿದೆ. ಅತ್ಯಂತ ಅನುಕೂಲವೂ, ಅಭಿನವವೂ ಆದ ಈ ಗದ್ಯ ವಾಙ್ಮಯದೊಳಗಿನ ಮರಾಠಿಯ ಭಾಗದ ವಿಷಯವಾಗಿ ಇಲ್ಲಿ ವಿಚಾರಮಾಡಿದೆ.

ಮಹಾರಾಷ್ಟ್ರವಾಙ್ಮಯವು ಮೂರುಲೋಕಕ್ಕೂ ಅಲಂಕಾರವೆನಿಸಿಕೊಂಡಿದೆ. ಹಿಂದುಸ್ಥಾನದಲ್ಲಿ ಗದ್ಯಕ್ಕೆ ಅಗ್ರಸ್ಥಾನಹೊಂದಿದ ಭಾಷೆಯು ಬಂಗಾಲಿಯಾಗಿದ್ದು ಅದರ ತರುವಾಯ ಮರಾಠಿಯೇ ಎಂದು ಬಹುಜನರು ಒಪ್ಪುತ್ತಿರುವರು. ಶ್ರೀ ಸಮರ್ಥ ರಾಮದಾಸರ "ದಾಸಬೋಧ" ದ ಕಾಲದಲ್ಲಿ ಮರಾಠಿಯು ಬಂಗಾಲಿಗೂ ಮೇಲಾಗಿತ್ತು. ಕನ್ನಡವು ಪಂಪನ ಆದಿಪುರಾಣದ ಕಾಲದಲ್ಲಿ ಸಮಸ್ತಕ್ಷಿತಿಗೆ ಒಂದೇ ಅಲಂಕಾರವಾಗಿ ಆ ಸಮುದ್ರಂಬರೆಗಂ ಪ್ರಸಿದ್ಧಿಹೊಂದಿತ್ತು. ಈಗ ಶ್ರೀರವೀಂದ್ರನಾಥ ಟಾಗೋರರವರು "ಗೀತಾಂಜಲಿ" ಎಂಬ ಸ್ವತಂತ್ರಕಾವ್ಯವನ್ನು ದೇಶಭಾಷೆಯಲ್ಲಿ ಬರೆದು ಪಾಶ್ಚಾತ್ಯರಿಂದ ದೊಡ್ಡ ಸಂಭಾವನೆ (Noble prize) ಯನ್ನು ಪಡೆದುದರಿಂದಲೂ, ಎಷ್ಟೋ ಬಂಗಾಲಿಯ ಕಥೆಗಳು ಇಂಗ್ಲೀಷಿನಲ್ಲಿ ಸಹ ಭಾಷಾಂತರವಾದುದರಿಂದಲೂ, ಬಂಗಾಳಿಯ ಸಾರಸ್ವತವು ಮರಾಠಿಗಿಂತ ಮೇಲಾಯ್ತು. ಆದರೆ ಮರಾಠಿಗರ ಸಾಹಸವೇನೂ ಕಡಮೆಯಿಲ್ಲ. ಇದಕ್ಕೂ ಮೊದಲೇ "ಅಣ್ಣಾ ಮೋರೇಶ್ವರಕುಂಟೇ" ಎಂಬವರು "Vicissitudes in the Aryan Civilizations" ಎಂಬ ಪ್ರಬಂಧವನ್ನು ಬರೆದು ಪಾಶ್ಚಾತ್ಯರಿಂದ *ಬಹುಮಾನವನ್ನು ಪಡೆದಿರುವರು. ಪೂಜ್ಯರಾದ ರಾನಡೆಯವರು "Rise of the Maratha Power" ಎಂಬ ಗ್ರಂಥವನ್ನು ಬರೆದು ಇಂಗ್ಲಿಷರಿಗೆ ಮಾರ್ಗಪ್ರದರ್ಶಕರಾದರು. "ನಿಬಂಧಮಾಲಾ" ಕರ್ತರಾದ ವಿಷ್ಣುಶಾಸ್ತ್ರಿ ಚಿಪಳೂಣಕರವರು ಎಲ್ಲರ ಮೇಲೆ ಕೈಮಾಡಿ ತಮ್ಮ ಅತ್ಯು

ಜ್ವಲಪ್ರತಿಭಾಶಾಲಿಯಾದ ಬರೆವಣಿಗೆಯಿಂದ ಮರಾಠಿಗೆ ಹೊಸಸ್ವರೂಪವನ್ನು ಕೊಟ್ಟು ಜನರಲ್ಲಿ ಆತ್ಮವಿಶ್ವಾಸವನ್ನೂ ಸ್ವಾಭಿಮಾನವನ್ನೂ ನೆಲೆಗೊಳಿಸಿದರು. ಆದರೆ ವಿದ್ವಚ್ಛಿರೋಮಣಿಗಳೂ ನರಕೇಸರಿಗಳೂ ಆದ ಶ್ರೀ ಬಾಳಗಂಗಾಧರತಿಲಕರ ತೇಜವೇನೋ ಅಪೂರ್ವವಾಗಿತ್ತು. ಅದು ಮೊಟ್ಟಮೊದಲು ವಿಷ್ಣುಶಾಸ್ತ್ರಿಯವರಂತೆ ಪೂರ್ವವಯಸ್ಸಿನಲ್ಲಿ ವ್ಯಕ್ತವಾಗಲಿಲ್ಲ. "Orion" "Arctic Home in the Vedas" ಮೊದಲಾದ ಇಂಗ್ಲಿಷ್ ಗ್ರಂಥಗಳನ್ನು ಪಾಶ್ಚಾತ್ಯರೆಲ್ಲರೂ ಕೊಂಡಾಡಿದರು. ಇನ್ನೂ ತಿಳಕರವರ ಬುದ್ಧಿಯ ಕಳಸವಾಗುವುದುಳಿದಿತ್ತೋ ಏನೋ ಎನ್ನುವಂತೆ ಅವರು ಲೋಕವಿಖ್ಯಾತವಾದ "ಗೀತಾರಹಸ್ಯ" ವೆಂಬ ಗ್ರಂಥವನ್ನು ತಮ್ಮ ದೇಶ ಭಾಷೆಯಲ್ಲಿ ಬರೆದು ಮರಾಠಿಗರೆಲ್ಲರನ್ನೂ ಋಣಿಗಳಾಗಿ ಮಾಡಿದ್ದಾರೆ.

ಮರಾಠಿಯು ಇಷ್ಟು ಮುಂದುವರಿಯಲು ಕಾರಣವಾವುದೆಂಬುದನ್ನು ಕೇಳಿ ಆಶ್ಚರ್ಯವಾಗಬಹುದು. ಹಿಂದಿನಿಂದ ಈವರೆಗೂ ಮರಾಠಿಗರಿಗೆ ರಾಜಾಶ್ರಯ ವೆಂದರೇನೋ ಗೊತ್ತೇಇಲ್ಲ. ಮರಾಠಿಗಿಂತ ಕನ್ನಡವು ಸಾವಿರವರ್ಷ ಹಿರಿಯದು. ಕನ್ನಡನಾಡುಗಳಲ್ಲಿ ಪಂಡಿತರಿಗೆ ಆಶ್ರಯವು ವಿಶೇಷ. ಸ್ಥಿತಿಯು ಕಠಿನವಾದರೂ ಮರಾಠಿಗರು ಕಾರ್ಯದ ಮಹತ್ತ್ವವನ್ನು ಮರೆಯದೆ ರಾಮದಾಸರೇ ಮೊದಲಾದವರ ದಿವ್ಯೋಪದೇಶವನ್ನು ನೆನಪಿನಲ್ಲಿ ಇಡುತ್ತಲೇ ಬಂದಿರುವರು. ಇತಿಹಾಸಸಂಶೋಧಕ ರಾದ ರಾಜವಾಡೆ, ಬಿ. ಎ. ಎಂಬವರು ಒಮ್ಮೆ "ಭಿಕ್ಷಾವೃತ್ತಿಯನ್ನು ಅನುಸರಿಸಿ ಯಾದರೂ ನಾನು ನನ್ನ ಕೆಲಸವನ್ನು ನಡೆಯಿಸಲು ಸಿದ್ಧನಾಗಿದ್ದೇನೆ" ಎಂದರು. ಪುಣ್ಯಪತ್ತನದ ಫರ್ಗ್ಯೂಸನ್ ಕಾಲೇಜ್ ಪ್ರಿನ್ಸಿಪಲರಾದ ಸೀನಿಯರ್ ರಾಂಗ್ಲರ್ ಪರಂಜಪೆಯವರು ದುಡ್ಡಿನ ಆಸೆಯನ್ನು ಬಿಟ್ಟು ದೇಶೀಯಸಂಸ್ಥೆಯನ್ನು ಅಲ್ಪವೇತನ ದಲ್ಲಿ ನಡೆಯಿಸುತ್ತಲಿದ್ದಾರೆ. ಅವರ ಸೋದರಮಾವಂದಿರಾದ ಕರ್ವೆಯವರು ಸ್ತ್ರೀಶಿಕ್ಷಣಕಾರ್ಯಕ್ಕೆ ಸರ್ವಸ್ವವನ್ನೂ ಅರ್ಪಿಸಿದ್ದಾರೆ. ಕಾರ್ಯವು ಅರ್ಧ ಉಳಿದರೆ ಮತ್ತೆ ಹುಟ್ಟಿ ಅದೇ ಕೆಲಸವನ್ನು ಕೈಕೊಳ್ಳುವೆವೆಂದು ಅವರು ಸಾರಿ ಹೇಳುವುದನ್ನು ನೋಡಿದರೆ ಕೆಲಸದ ಮಹತ್ತ್ವವು ಮರಾಠಿಗರಿಗೆ ಎಷ್ಟಿದೆ ಎಂಬುದು ತಿಳಿಯ ಬರುತ್ತದೆ. ಸ್ವರ್ಗಸ್ಥರಾದ ಆಗರಕರ್ ಎಂಬವರು ತೀರಬಡತನದ ಸ್ಥಿತಿಯಲ್ಲಿ ಅಭ್ಯಾಸಮಾಡಿ ಎಮ್. ಏ. ಪದವಿಯನ್ನು ಗಳಿಸಿದಮೇಲೆ ತಿಂಗಳೊಂದಕ್ಕೆ ಇನೂರು ರೂಪಾಯಿಗಳ ಕೆಲಸ ಬಂದರೂ ತೊರೆದು ಸಮಾಜದ ಸುಧಾರಣಕಾರ್ಯ ದಲ್ಲಿ ಮನಸ್ಸುಕೊಟ್ಟು ಹೇರಳವಾದ ಹಾನಿಯನ್ನೂ ಅಸಹ್ಯವಾದ ಅಪಮಾನವನ್ನೂ ಸಹಿಸಿದರು. ಈ ಉದಾಹರಣಗಳನ್ನು ನೋಡಲಾಗಿ ಮಹಾರಾಷ್ಟ್ರೀಯರು ತಮ್ಮ ಪೂಜ್ಯಪೂರ್ವಜರಾದ ಸಾಧುಸಂತರ ಪರೋಪಕಾರ, ದೇಶಾಭಿಮಾನ, ಸ್ವಾರ್ಥ ತ್ಯಾಗ, ಮುಂತಾದಗುಣಗಳನ್ನು ಮರೆತಿಲ್ಲವೆಂದು ತಿಳಿಯಬರುತ್ತದೆ.

ಅಖಿಲಮಹಾರಾಷ್ಟ್ರೀಯರಿಗೆ ಸದ್ಗುರುವಾದ ವಿಷ್ಣುಶಾಸ್ತ್ರಿಯವರ ವಿಷಯ ವಾಗಿ ಕೆಲವುಮಾತುಗಳನ್ನು ಹೇಳಬೇಕು. ಇವರ ಚರಿತೆಯನ್ನು ಇವರ ತಮ್ಮಂ ದಿರೇ, ಬಾಸವೆಲನು ಜಾನ್ಸನಸಾಹೇಬರ ಚರಿತೆಯನ್ನು ಬರೆದರೀತಿಯಲ್ಲಿ ಬರೆ ದಿದ್ದಾರೆ. ಈ ಮಹನೀಯರು ಮಹಾರಾಷ್ಟ್ರಭಾಷೆಯನ್ನು ವಿಶೇಷವಾಗಿ ಕೈಕೊಂಡು

ಮಹಾರಾಷ್ಟ್ರದೇಶವನ್ನೆಲ್ಲ ಬೆಳಕುಮಾಡಿದರು. ಮೆಕಾಲೆಸಾಹೇಬರಂತೆ ಏಕಪಕ್ಷವಿಚಾರಪದ್ಧತಿಯನ್ನು ಇವರು ಅನುಸರಿಸಿದುದರಿಂದ ಕೆಲವರು ಇವರನ್ನು ದೂಷಿಸುವರು. ಆದರೆ ಏಕಪಕ್ಷವಿಚಾರವು ಭಾಷೆಯ ಅಲಂಕಾರವೇ ಎಂದು ಹೇಳಬಹುದು. ಇವರ "ಕೇಸರೀ" ಪತ್ರವನ್ನೂ ಮರಾಠಿಗ್ರಂಥರಚನೆಯನ್ನೂ ಬಳವಂತರಾವ್ ಟಿಳಕರು ಮುಂದೆ ನಡೆಯಿಸಿದ್ದಾರೆ.

ಆಧುನಿಕಸಾಹಿತ್ಯದ ಸಾಧಾರಣಸ್ವರೂಪವನ್ನು ಹೇಳಬೇಕಾದರೆ ಗಂಭೀರವೂ, ವಿಲಾಸಶಾಲಿಯೂ ಆದ "ನಿಬಂಧಮಾಲೆಯ" ಸ್ವರೂಪವೇ ಮೊದಲು ಕಣ್ಣಿಗೆ ಬೀಳುತ್ತದೆ. ಈಚಿನ ವಾಙ್ಮಯಕ್ಕೆ "ನಿಬಂಧಮಾಲೆ" ಯಿಂದಲೇ ಆರಂಭವಾದುದು. ಇದು ವ್ಯಕ್ತವಾಗಬೇಕಾದರೆ ಬುದ್ಧಿವಂತರಾದ ವಿಷ್ಣುಶಾಸ್ತ್ರಿಯವರ ೮—೧೦ ವರ್ಷಗಳ ಉದ್ಯೋಗವು ಬೇಕಾಯಿತು. ಇಂತಹ ಉದ್ಯೋಗವು ಪಾಶ್ಚಾತ್ಯರಲ್ಲಿಯೂ ದುರ್ಲಭವಾಗಿದೆ. ಅಲ್ಲಿ ಅನೇಕರು ಕೂಡಿ ಒಂದು ಕೆಲಸವನ್ನು ಕೈಕೊಳ್ಳುವರು. "ನಿಬಂಧಮಾಲೆ" ಕೇವಲ ಒಬ್ಬರ ಕೆಲಸವೇ ಆಗಿದೆ. ಇದಕ್ಕಾಗಿ ಅವರು ಸುಖವಾದ ಸರಕಾರಿಕೆಲಸವನ್ನು ಬಿಟ್ಟುಬಿಟ್ಟರು. ಮುಂದಿನ ಗ್ರಂಥಮಾಲೆಯೂ ಹೀಗೆಯೇ ಸಂಪಾದಕರಿಗೆ ಬಹಳವಾಗಿ ಹಾನಿಯನ್ನುಂಟುಮಾಡಿದೆ. ಚಿಪಳೂಣಕರ್, ಆಗರಕರ್ ಇವರ ಪ್ರತಿಭಾಶಾಲಿಗಳಾದ ಸರಣಿಗಳು ನಮ್ಮಲ್ಲಿ ಬರಬೇಕೆಂದು ನಾನು ಇಚ್ಛಿಸುತ್ತೇನೆ. ಮರಾಠಿಗರು ಈ ಸರಣಿಗಳನ್ನು ಈಗಲೂ ಆದರಪುರಸ್ಸರವಾಗಿ ಸ್ತುತಿಸುತ್ತಿರುವರು.

ಮಹಾರಾಷ್ಟ್ರಭಾಷೆಯಲ್ಲಿ ನವೀನಗ್ರಂಥಗಳ ವೃಷ್ಟಿಯಿಂದಲೂ ಅದ್ವಿತೀಯವಾದ ಪ್ರಗತಿಯಾಗಿದೆ. ಐತಿಹಾಸಿಕಸಂಶೋಧನವೇ ತಮ್ಮ ಸರ್ವಸ್ವವೆಂದು ತಿಳಿಯುವ ರಾಜವಾಡೆಯವರ ಪ್ರಯತ್ನಗಳಿಗೆ ಬೆಲೆಯೇ ಇಲ್ಲ. ಮುಂಬಯಿಸರಕಾರದವರು ಇವರಿಗೆ ವರ್ಷಕ್ಕೆ ೫೦೦ ರೂಪಾಯಿಗಳನ್ನು ಕೊಡಬೇಕೆಂದು ಗೊತ್ತುಮಾಡಿರುವರು. ಪೂಜ್ಯರೂ ವಿದ್ಯಾಪ್ರಿಯರೂ ಆದ ಬಡೋದೆಯ ಶ್ರೀಮಂತ ಸಯಾಜಿರಾವ್ ಗಾಯಕವಾಡರ ಸರಕಾರದ ಆಶ್ರಯದಲ್ಲಿ ಬಳೆದು, ಮಹಾರಾಜನೊಡನೆ ಪಶ್ಚಿಮದೇಶಸಂಚಾರಮಾಡಿ ಅನೇಕ ದಿನಗಳವರೆಗೆ ಗ್ರಂಥಾವಲೋಕನವನ್ನು ಮಾಡಿ "ಹಿಂದುಸ್ಥಾನದ ಅರ್ವಾಚೀನೇತಿಹಾಸ" ಗಳೆಂಬ ಪುಸ್ತಕಗಳನ್ನು ಶ್ರೀ ಸರದೇಸಾಯಿಯವರು ಬರೆಯಲಾರಂಭಿಸಿರುವರು. ಇಂತಹ ಇತಿಹಾಸಗಳೂ, ಶಿಲಾಲೇಖವೇ ಮೊದಲಾದುವುಗಳ ಮೇಲಿಂದ ವಿಜಯನಗರದ ಸಾಮ್ರಾಜ್ಯವೇ ಮೊದಲಾದ ಕರ್ಣಾಟಕದ ಪ್ರಾಚೀನೇತಿಹಾಸಗಳೂ ಕನ್ನಡದಲ್ಲಿ ಆಗಬೇಕಾಗಿವೆ. ರಾ॥ ರಾ॥ ಪಾಂಗಾರಕರೆಂಬವರು ೧೦—೧೨ ವರ್ಷಗಳವರೆಗೆ ಅವಿಶ್ರಾಂತಶ್ರಮವನ್ನು ವಹಿಸಿ "ಮೋರೋಪಂತಚರಿತೆ ಮತ್ತು ಕಾವ್ಯವಿವೇಚನೆ" ಎಂಬ ಕವಿತಾಸೃಷ್ಟಿಯಲ್ಲಿ ಅಪೂರ್ವವಾದ ಗ್ರಂಥವನ್ನು ಬರೆದಿರುವರು. ಒಬ್ಬ ಕವಿಯ ಇಷ್ಟು ವಿಸ್ತೃತವಾದ ಚರಿತೆ ಕನ್ನಡದಲ್ಲಿಲ್ಲ. ಆದರೆ, ನಮ್ಮಲ್ಲಿ ಮಹನೀಯರಾದ ನರಸಿಂಹಾಚಾರ್ಯದ್ವಯರು ಬರೆದಿರುವ "ಕರ್ಣಾಟಕ ಕವಿಚರಿತೆ" ಯಂತಹ ವ್ಯಾಪಕಗ್ರಂಥ

ವಾಗಲು ಮರಾಠಿಯಲ್ಲಿ ಪೂರ್ವಕವಿಗಳ ಸಂಖ್ಯೆ ಸ್ವಲ್ಪವಾಗಿದೆ. "ಮಹಾರಾಷ್ಟ್ರಕವಿಚರಿತ" ಗಳೆಂಬ ಗ್ರಂಥಗಳು ಕೆಲವಿವೆ.

ಪ್ರಾಚೀನಮರಾಠಿಯಲ್ಲಿ ನಮಗಿಂತಲೂ ಕವಿತ್ವವು ಕಡಮೆಯಾದರೂ ಪ್ರಸಿದ್ಧವಾದ ಎಲ್ಲ ಕಾವ್ಯಗಳೂ ಅಚ್ಚಾಗಿವೆ. ಮೋರೋಪಂತರ ಸ್ವಹಸ್ತಲಿಖಿತ ಗ್ರಂಥಗಳು ಮೊದಲುಗೊಂಡು ದಾಸಬೋಧಾದಿ ಹಳೆಯ ಗ್ರಂಥಗಳೆಲ್ಲವೂ ಮುದ್ರಿತವಾಗಿವೆ. ಮೋರೋಪಂತನ "ಕೇಕಾವಳಿ" ಗಳಂತಹ ಕೆಲವು ಕಠಿನಕಾವ್ಯಗಳನ್ನು ಸಟೀಕವಾಗಿ ಮುದ್ರಿಸುವ ಉಪಕ್ರಮವು ಬಹಳಚೆನ್ನಾಗಿದೆ. ನಮ್ಮಲ್ಲಿ ಎಷ್ಟೋ ಗ್ರಂಥಗಳು ಇನ್ನೂ ಅಚ್ಚಾಗಿಲ್ಲ. ಆದರೂ ಅವುಗಳ ಸಾಧಾರಣಸ್ವರೂಪವನ್ನಾದರೂ ತಿಳಿಸುವ ಪ್ರೌಢಪದ್ಯಸಾರಗಳು ಕೆಲವು ಬೇಕಾಗಿವೆ. ಸಾವಿರಾರು ವರ್ಷಗಳ ಪೂರ್ವದ ಹಳಗನ್ನಡಶಬ್ದಗಳು ಎಲ್ಲರಿಗೂ ಹೇಗೆ ತಿಳಿಯಬೇಕು? ಕೆಲವು ಉತ್ಕೃಷ್ಟ ಕಾವ್ಯಭಾಗಗಳು ಸಟೀಕವಾಗಿ ಬೇಕಾಗಿವೆ. ಇದರಿಂದ ಸಂಪಾದಿಗಳಲ್ಲಿ ವಿಶೇಷ ಆಸಕ್ತಿ ಹುಟ್ಟಬಹುದು. ಮರಾಠಿಯಲ್ಲಿ ಪೂರ್ವದ ವ್ಯಾಕರಣವಿಲ್ಲದಿದ್ದರೂ "ದಾಮಳೆ" ಎಂಬವರು ಒಂದು ದೊಡ್ಡವ್ಯಾಕರಣವನ್ನು ಬರೆದಿದ್ದಾರೆ. ನಮ್ಮಂತೆಯೇ ಮರಾಠಿಯಲ್ಲಿಯೂ ಭಾರತರಾಮಾಯಣಗಳ ಸಮಗ್ರವಾದ ಭಾಷಾಂತರಗಳು ಸಾವಿರಾರು ರೂಪಾಯಿಗಳ ವೆಚ್ಚದಿಂದ ಆಗಿವೆ.

ಸ್ವಕಲ್ಪಿತ ಕಥೆಗಳೂ, ನಾಟಕಗಳೂ, ಪೂರ್ವಕವಿಗಳ ಸರಣಿಯನ್ನು ಹೋಲುವ ಕಾವ್ಯಭಾಗಗಳೂ ಹೇರಳವಾಗಿವೆ. ರಾ|| ರಾ|| ಹರಿಭಾವು ಆಪಟೇ ಎಂಬವರೊಬ್ಬರೇ ಉತ್ಕೃಷ್ಟವಾದ ಕಥೆಗಳನ್ನು ಸ್ವತಂತ್ರವಾದ ಸಂವಿಧಾನದಿಂದ ರಚಿಸುವವರಿದ್ದು, ಇಂಗ್ಲಿಷ್ ಫ್ರೆಂಚ್ ತರದ ಕಥೆಗಳಾಗಬೇಕಾದರೆ ಮರಾಠಿಗೆ ಇನ್ನೂ ಐನೂರುವರ್ಷಗಳುಬೇಕೆಂದು ಪೂರ್ವೋಕ್ತ ರಾಜವಾಡೆಯವರು ಒಂದೆಡೆ ಬರೆದಿದ್ದಾರೆ; ಸ್ವತಂತ್ರವಾದಕಥೆಗಳು ಕನ್ನಡದಲ್ಲಿ ತೀರ ಕಡಮೆಯಾಗಿರುತ್ತವೆ.

ಸಯಮಕ ನಿರ್ಯಮಕ ಕವಿತೆಯ ವಿಷಯವಾಗಿ ಎರಡು ಪಂಗಡಗಳಾಗಿ ಮರಾಠಿಗರಲ್ಲಿ "ನ ಭೂತೋ ನ ಭವಿಷ್ಯತಿ" ಯಾವ ಜಗಳಗಳು ಕೇಳಿಬಂದು ಮಧ್ಯಸ್ಥರಾಗಿ ದೂರನಿಂತು ಕೇಳುವವರಿಗೂ ಅದರಿಂದ ಉತ್ಸಾಹವುಂಟಾಗುವುದು. ಕನ್ನಡಕವಿತೆಯ ಪಾದಗಳ ಆದ್ಯಕ್ಷರ ದ್ವಿತೀಯಾಕ್ಷರದ ಯಮಕವನ್ನು ಕಿತ್ತುಹಾಕುವ ಸುದ್ದಿಯು ಬಹಳಸೌಮ್ಯವಾಗಿ ಕೇಳಬರುತ್ತದೆ. ಪಾದಾಂತದಲ್ಲಿ ಯಮಕವು ಕವಿತೆಯ ಸೌಭಾಗ್ಯತಿಲಕವೆಂದು ಒಬ್ಬರೆನ್ನುವರು. ಸಂಸ್ಕೃತದಲ್ಲಿಲ್ಲದುದು ಏತಕ್ಕೆಂದು ಇನ್ನೊಬ್ಬರು ವಾದಿಸುವರು. ಆವೇಶವೂ ಅಭಿನಿವೇಶವೂ ಉಳ್ಳ ಈವಾದಾರಂಭವಿಜೃಂಭಣೆಯು ನಮ್ಮಲ್ಲಿಯೂ ಬರಬೇಕೆಂದು ಬಹಳವಾಗಿ ಇಚ್ಛಿಸುತ್ತೇನೆ. "ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆರೆವಂತೆ ಪೇಟ್ವೆಪೆಂ ಚರಿತಪುರಾಣಮಂ" ಎಂಬಲ್ಲಿ ಜನಾರ್ದನಕವಿಯ ಅಲೌಕಿಕವಾದ ದೇವಭಕ್ತಿ ವ್ಯಕ್ತವಾಗುವುದು. ಅವನು ನಿರಾಭರಣವಾಗಿ ಕವಿತೆಯನ್ನು ಮಾಡಿದಂತೆ, ನಿರ್ಯಮಕ ನಿಷ್ಪ್ರಾಸಕವಿತೆಯನ್ನು ಇಂಗ್ಲಿಷ್ ಸಂಸ್ಕೃತದಂತೆ ನಾವೂ ಇನ್ನೇಕೆ ಮಾಡಬಾರದು?

ಮರಾಠಿಯು ವೇದಾಂತವಿಷಯದಲ್ಲಿ ಹಿಂದಿನಿಂದಲೂ ಪ್ರಖ್ಯಾತವಾಗಿದೆ. ಹಳೆಯ ಮರಾಠಿಯ ಕವಿಗಳೆಲ್ಲರೂ ಅದ್ವೈತಮತದವರೂ, ಆದರಲ್ಲಿ ನಿವೃತ್ತಿಮಾರ್ಗಾವಲಂಬಿಗಳೂ ಆಗಿದ್ದಾರೆ. ಈ ವಿಷಯದಲ್ಲಿ ಆಧುನಿಕವಿದ್ವಾಂಸರಲ್ಲಿ ಬಹಳ ಮತಭೇದಗಳಿವೆ. ಸುಪ್ರಸಿದ್ಧ ಇತಿಹಾಸಸಂಶೋಧಕರಾದ ರಾಜವಾಡೆಯವರು—"ತುಕಾರಾಮನೇ ಮೊದಲಾದ ಸಾಧುಸಂತರಿಗೆ ವಿಟ್ಠಲನೊಬ್ಬನಿದ್ದರೆ ಸಾಕು; ಉಳಿದವರ ಮಾತು ಅವರಿಗೇತಕ್ಕೆ? ಎಲ್ಲರೂ ನಿರುಪಯೋಗಿಗಳು, ಏತಕ್ಕೂಬಾರದ ಹೇಡಿಗಳು"—ಎಂದು ಹೇಳಿ ರಾಮದಾಸರನ್ನು ಬಹಳವಾಗಿ ಕೊಂಡಾಡಿದ್ದಾರೆ. ಮರಾಠಿಯಲ್ಲಿ ಈಚೆಗೂ ವೇದಾಂತವೆಂದರೆ ಹಾಸ್ಯಾಸ್ಪದವೇ ಎನಿಸುತ್ತಿತ್ತು. ಜ್ಞಾನೇಶ್ವರಿಯ ಮೇಲಿನ ಟೀಕಾಪುಸ್ತಕಗಳು ಆದುವು. ತಮ್ಮ ಪೂರ್ವಜರ ಪೂರ್ವಪರಂಪರೆಯನ್ನನುಸರಿಸಿ "ಪುತ್ರಾದಿಚ್ಛೇತ್ಪರಾಜಯಂ" ಎಂಬಂತೆ ಅವರಿಗೆ ವಿಶೇಷವಾದ ಸಮಾಧಾನವಾಗುವಂತೆ ಲೋಕಮಾನ್ಯತಿಲಕರವರು ಈಗ ಸುಮಾರು ೨೫ ವರ್ಷಕಾಲ ದೇಶೀಯ ವಿದೇಶೀಯ ಮೊದಲಾದ ಎಲ್ಲಗ್ರಂಥಗಳನ್ನು ಅವಲೋಕನಮಾಡಿ "ವೇದಾಂತವನ್ನು ಆಚರಿಸುವವರೇ ಇಲ್ಲ. ಅಶಕ್ತವೇದಾಂತವೆಂಬಂತೆ ಬೇಕುಬೇಕಾದ ಅರ್ಥವನ್ನು ತಿಳಿದರೆ ಅದಕ್ಕಾರು ಹೊಣೆ?" ಎಂದು ಪ್ರತಿಪಾದಿಸಿ ವೇದಾಂತಗ್ರಂಥಗಳಲ್ಲಿಯ ಮುಖ್ಯಗ್ರಂಥವಾದ ಭಗವದ್ಗೀತೆಯ ಕಡಗೆ ತೆರಳಿದರು.

ಹೆಣ್ಣುಮಕ್ಕಳ ಉನ್ನತಿಯ ವಿಷಯದಲ್ಲಿ ಮರಾಠಿಗರ ಪ್ರಯತ್ನಗಳಿಂದ ನವಯುಗವೇ ಉತ್ಪನ್ನವಾಗುವಂತೆ ತೋರುತ್ತದೆ. ಈ ಮೊದಲೇ ಕೆಲವರು ಸ್ತ್ರೀಯರು ಪದವೀಧರೆಯರಾಗಿದ್ದು ಅವರು ವಿನಯಸಂಪನ್ನೆಯರಾಗಿದ್ದಾರೆಂದು ಕೇಳಿ ನಮ್ಮ ಪುರುಷವರ್ಗವು ಅವರ ವಿಷಯವಾಗಿ ಅಭಿಮಾನಪಡುವುದಕ್ಕೆ ಆಸ್ಪದವುಂಟಾಗಿದೆ. ಮುಂಬಯಿ, ಪುಣೆಗಳಲ್ಲಿ ಪ್ರೌಢಸ್ತ್ರೀಯರವಿದ್ಯಾಭ್ಯಾಸವು ಸೇವಾಸದನ ಮೊದಲಾದುವುಗಳಲ್ಲಿ ನಡೆದಿರುವುದನ್ನು ಕೇಳಿ ಆರಿಗೆತಾನೆ ಸಂತೋಷವಾಗದಿರುವುದು? ರಾನಡೆಯವರ ಪತ್ನಿಯಾದ ಶ್ರೀಮತಿ ರಮಾಬಾಯಿಯವರು ಎಲ್ಲರಿಗೂ ಮೇಲುಪಜ್ಕ್ತಿಯಾಗಿದ್ದಾರೆ. ಅವರು "ನಮ್ಮ ಆಯುಷ್ಯದೊಳಗಿನ ಕೆಲವು ನೆನಪುಗಳು" ಎಂಬ ಪುಸ್ತಕವನ್ನು ಬರೆದುದು ಬಹಳ ಉತ್ಕೃಷ್ಟವಾಗಿದೆ. ಇದರಿಂದ ಇಂತಹ ವಿಖ್ಯಾತವಾದ ಪತಿದೈವತವು ತೀರಿಹೋದರೂ ಇವರು ತಾಳಿರುವ ಧೈರ್ಯವು ತಿಳಿದುಬರುತ್ತದೆ. ಈ ಗ್ರಂಥದಲ್ಲಿ ಮೋಕ್ಷಸುಖವನ್ನೂ ತುಚ್ಛವಾಗಿ ತೋರಿಸುವ ಮಹಾರಾಷ್ಟ್ರದೇಶದ ಮಾತಾಪಿತೃಗಳಂತಿದ್ದ—ಇವರಿಬ್ಬರ ಕುಟುಂಬಸುಖವು ವರ್ಣಿತವಾಗಿದೆ. ಇದಕ್ಕೆ ಗೋಖಲೆಯವರು ಪ್ರಸ್ತಾವನೆಯನ್ನು ಬರೆದಿದ್ದಾರೆ. ಇಂತಹ ಪುಸ್ತಕವು ಜನಸಾಮಾನ್ಯಕ್ಕೆಲ್ಲ ಮಾನ್ಯವಾಗುವುದೇನಾಶ್ಚರ್ಯ?

ಮರಾಠಿಯಲ್ಲಿ ಗದ್ಯವೆಂದರೂ ಸಲ್ಲುವ ಸುಲಭವಾದ ಭಾರತರಾಮಾಯಣಗ್ರಂಥಗಳಿವೆ. ಅವುಗಳೂ, ದಾಸಬೋಧಾದಿಸ್ವತಂತ್ರವೇದಾಂತವ್ಯವಹಾರಗಳ ತಾಯ್ನುಡಿಯಲ್ಲಿ ಬರೆದ ಗ್ರಂಥಗಳೂ ಇವುಗಳಿಂದ ಪೂರ್ವದಿಂದಲೂ ಒಂದು ತೆರದ ಮಾನಸಿಕಪದ್ಧತಿ ಹುಟ್ಟಿ ಜನರಲ್ಲಿ ಒಂದುತೆರದ ಉದಾತ್ತಮನೋಭೂಮಿಕೆ ಸಿದ್ಧವಾಗಿದೆ. ಪ್ರತಿಹಳ್ಳಿಯ ಒಕ್ಕಲಿಗರೂ ನಿತ್ಯಪಾರಾಯಣರೂಪದಲ್ಲಿ ಪಾಂಡವ

ಪ್ರತಾಪ, ಹಿಂದುದೇಶದಲ್ಲೆಲ್ಲ ಪ್ರಸಿದ್ಧವಾದ ದಾಸಬೋಧ ಇವನ್ನು ಓದುವುದು ಅನೇಕ ಶತಮಾನಗಳಿಂದಲೂ ನಡೆದುಬಂದಿದೆ.

ಮೇಲೆ ಹೇಳಿದುದೆಲ್ಲವನ್ನೂ ಲಕ್ಷ್ಯದಲ್ಲಿ ತಂದರೆ ಮೊನ್ನೆ ಹುಟ್ಟಿ ಇಂದು ಕಣ್ಣು ತೆರೆದ ಮರಾಠಿಗರು ವಾಙ್ಮಯಕ್ಷೇತ್ರದಲ್ಲಿ ನಮಗಿಂತಲೂ ಎಷ್ಟು ದೂರದವರೆಗೂ ಸಾಗಿರುವರೆಂಬುದು ಲಕ್ಷ್ಯದಲ್ಲಿ ಬರಬಹುದು. ವಾಙ್ಮಯಸಂಬಂಧವಾದ ಪ್ರತಿಯೊಂದು ವಿಷಯದಲ್ಲಿಯೂ ಅವರು ಪುರೋಗಾಮಿಗಳಾಗಿದ್ದಾರೆ. ಮರಾಠಿಗೆ ಸ್ವಲ್ಪವೇ ಪೂರ್ವೇತಿಹಾಸವಿದ್ದು ಕನ್ನಡನಾಡುಗಳಲ್ಲಿ ಹಿಂದಕ್ಕೆ ಮರಾಠಿಯಂತಹ ಅನೇಕ ಸಾಮ್ರಾಜ್ಯಗಳಾಗಿವೆ. ನಮ್ಮ ವಾಙ್ಮಯದ ಸುಮಾರು ಎರಡುಸಾವಿರವರ್ಷಗಳಲ್ಲಿ ಮೊದಲಿನ ಅರ್ಧವಾದ ಸಾವಿರವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸವೆಲ್ಲ ಲುಪ್ತವಾಗಿಯೇ ಇದೆ. ಈ ಎಲ್ಲ ಇತಿಹಾಸಸೂಕ್ಷ್ಮಾವಲೋಕನದಿಂದ ವಿಚಾರಿಸಲಾಗಿ ಯಾವ ನಮ್ಮ ಪೂಜ್ಯವಾದ ತಾಯ್ನುಡಿಯಲ್ಲಿ ರತ್ನತ್ರಯರಂತಹ ಮಹಾಕವಿಗಳು ಬಾಳಿದರೋ ಆ ಭಾಷೆಯ ಭವಿಷ್ಯದುನ್ನತಿಯ ವಿಚಾರದಲ್ಲಿ ನಿರಾಶರಾಗಲು ನಮಗೆ ಆವತೆರದ ಕಾರಣಗಳೂ ಇಲ್ಲ. ನಿರಾಶರಾಗುವುದೇತಕ್ಕೆ? ನಮ್ಮ ಬಂಧುವರ್ಗದವರ ಭಾಷೆಗಳಿಗಿಂತಲೂ, ನಾವು ಬಹಳವಾಗಿ ಮುಂದೆ ಹೋಗುವೆವೆಂದು ಹೇಳುವಷ್ಟು ಅತ್ಯುಜ್ಜ್ವಲವೂ ಅತ್ಯುತ್ಸಾಹಕಾರಕವೂ ಆದ ಇತಿಹಾಸವು ನಮಗಿದೆ. ನಿದ್ರಾಯುಗವು ಪ್ರತಿಯೊಂದು ವಾಙ್ಮಯದಲ್ಲಿಯೂ ಕಾಣಬರುವುದು ಸಹಜವಾಗಿಯೇ ಇದೆ. ಪ್ರಸ್ತುತದ ಮಹಾರಾಷ್ಟ್ರಸಾಹಿತ್ಯದಲ್ಲಿಯೇ ಜ್ಞಾನೇಶ್ವರಮಹಾಕವಿಯಂತೆ ಪ್ರಸಿದ್ಧರಾದ ಸಾಧುವರ್ಯರೂ ಕವಿವರ್ಯರೂ ಆದ ಏಕನಾಥ ಮಹಾರಾಜರ ಅವತಾರವಾಗಲು ಎಷ್ಟೋ ವರ್ಷಗಳು ಹಿಡಿದುವು. ಆದರಂತೆಯೇ ಮರಾಠಿಯವರ ಮುಂದಿನ ಉನ್ನತಿಗೂ ಕಾರಣಭೂತವಾದ, ಒಂದುವೇಳೆ ಹಿಂದುಧರ್ಮಕ್ಕೆಲ್ಲ ಆಸರೆಯಾದ ಸುವಿಖ್ಯಾತವಾದ ವಿಜಯನಗರಸಾಮ್ರಾಜ್ಯದ ಸಮಾಪ್ತಿಯಾದಮೇಲೆ ಸ್ವಲ್ಪಕಾಲದವರೆಗೆ ನಮ್ಮ ಕನ್ನಡದ ಪ್ರಗತಿಯು ನಿಂತುಹೋದರೆ ಏನಾಶ್ಚರ್ಯ? ಕರ್ನಾಟಕದ ಪೂರ್ವೇತಿಹಾಸವು ಎದ್ದು ಕಾಣಿಸಲು ನಮ್ಮಲ್ಲಿ ರಾವ್‌ಬಹದ್ದೂರ್ ಶ್ರೀಮಾನ್ ಆರ್. ನರಸಿಂಹಾಚಾರ್ಯರು, ಮರಾಠಿಗರ ರಾಜವಾಡೆಯವರೂ ಅನೇಕವಾಗಿ ಬೇಕಾಗಿದ್ದಾರೆ.

ಕವಿತಾಕಲಾಪ.

ಪ್ರಾಚೀನಕವಿತೆಗಳು.

" ಸೂಕ್ತಿಸುಧಾರ್ಣವ " ದಿಂದ.

ಪ್ರಾಚೀನಗ್ರಂಥಗಳೊಳಗೆ ಬಂದಿರುವ ಅಷ್ಟಾದಶವರ್ಣನೆಗಳಲ್ಲಿ ಸ್ವಾರಸ್ಯವಾದ ಕೆಲವು ಪದ್ಯಗಳನ್ನು ಆಯ್ದು ಈ ಪ್ರಕರಣದಲ್ಲಿ ಹಾಕಬೇಕೆಂದು ಉದ್ದೇಶಿಸಿದೆ. "ಶಬ್ದಮಣಿದರ್ಪಣ" ಕಾರನಾದ ಕೇಶಿರಾಜನ ತಂದೆಯೂ, ಜನ್ನಕವಿಯ ಸೋದರಿಯ ಗಂಡನೂ ಆದ ಮಲ್ಲಿಕಾರ್ಜುನನು (ಸು. ೧೨೪೫) ಕವಿಕಾವ್ಯಾಂಗಗಳ ವರ್ಣನಾರೂಪವಾದ ಪದ್ಯಗಳನ್ನು ಪೂರ್ವಕವಿಗಳ ಗ್ರಂಥಗಳಿಂದ ಸಂಕಲಿಸಿ " ಸೂಕ್ತಿಸುಧಾರ್ಣವ " ವೆಂಬ ಹೆಸರುಳ್ಳ ಕಾವ್ಯಸಾರವೊಂದನ್ನು ಬರೆದಿರುತ್ತಾನೆ. ತಾನು ಅನುವಾದಮಾಡಿರುವ ಪೂರ್ವಕವಿಗಳಲ್ಲಿ ಕೆಲವರ ಹೆಸರನ್ನು ಈ ಪದ್ಯದಲ್ಲಿ ಹೇಳಿದ್ದಾನೆ:—

ಜನ್ನನ ದೇಸೆ, ಪಂಪನ ಗುಣಂ, ಗುಣನಂದಿಯ ತೊಂಡು, ಪೊನ್ನನೊಳ್ ।
ಸನ್ನಿಧವಾದ ನಾಣ್ನುಡಿ, ಗಜಾಂಕುಶರಾಜನ ಚಿತ್ತವೃತ್ತಿ, ತಾ ॥
ನುನ್ನತವಾಗಿ ಸಂದ ಗುಣವರ್ಮನ ಜಾತಿ, ಸಮಾನುರಕ್ತಿಯಿಂ ।
ದನ್ನೆಲಸಿರ್ಪುವೀಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್ ॥

ಮೇಲೆ ಹೇಳಿದ ಕವಿಗಳ ಗ್ರಂಥಗಳಲ್ಲಿಯ ಪದ್ಯಗಳಲ್ಲದೆ ನಮಗೆ ತಿಳಿದಮಟ್ಟಿಗೆ ಮುಂದೆ ಹೇಳುವ ಕವಿಗಳ ಗ್ರಂಥಗಳಿಂದ ಉದ್ಧೃತವಾದಪದ್ಯಗಳೂ ದೊರೆಯುತ್ತವೆ.

ಕವಿಚರಿತೆ.

ಈ ಎಲ್ಲಾ ಕವಿಗಳ ಹೆಸರುಗಳನ್ನೂ ಇಲ್ಲಿ ಕ್ರಮದಿಂದ ಬರೆದಿದೆ:—

ಗುಣನಂದಿ (ಸುಮಾರು ೯೦೦)
ಆದಿಗುಣವರ್ಮನ ಶೂದ್ರಕ (ಹರಿವಂಶ) (ಸು. ೯೨೫).
ಆದಿಪಂಪನ ಭಾರತ, ಆದಿಪುರಾಣ (೯೪೧).
ಪೊನ್ನನ ಶಾಂತಿಪುರಾಣ, (ಭುವನೈಕರಾಮಾಭ್ಯುದಯ) (ಸು. ೯೫೦ ಕ್ಕೆ ಹಿಂದೆ).
ನಾಗವರ್ಮನ ಕಾದಂಬರಿ (ಸು. ೯೯೦).
ಗಜಾಂಕುಶ (೧೦೫೦-ಕ್ಕೆ ಹಿಂದೆ).
ಚಂದ್ರರಾಜನ ಮದನತಿಲಕ (ಸು. ೧೦೭೯.)
ಅಭಿನವ ಪಂಪ (ನಾಗಚಂದ್ರ) ನ ರಾಮಾಯಣ, ಮಲ್ಲಿನಾಥಪುರಾಣ (ಸು. ೧೧೦೫).
ದುರ್ಗಸಿಂಹನ ಪಂಚತಂತ್ರ (ಸು. ೧೧೪೫).
ಉದಯಾದಿತ್ಯನ ಅಲಂಕಾರ (ಸು. ೧೧೫೦).
ಹರಿಹರನ ಗಿರಿಜಾಕಲ್ಯಾಣ (ಸು. ೧೧೬೫).
ನೇಮಿಚಂದ್ರನ ಲೀಲಾವತಿ, ಅರ್ಧನೇಮಿ (ಸು. ೧೧೭೦).

ರುದ್ರಭಟ್ಟನ ಜಗನ್ನಾಥವಿಜಯ (ಸು.೧೧೮೦)
ಅಗ್ಗಳನ ಚಂದ್ರಪ್ರಭಪುರಾಣ (೧೧೮೯).
ಕವಿಕಾಮನ ಶೃಂಗಾರರತ್ನಾಕರ (ಸು೧೨೦೦)
ದೇವಕವಿಯ ಕುಸುಮಾವಳಿ (ಸು.೧೨೦೦).
ಕಮಲಭವನ ಶಾಂತೀಶ್ವರಪುರಾಣ (ಸು. ೧೨೩೫).
ಆಂಡಯ್ಯನ ಕಬ್ಬಿಗರಕಾವ (ಸು. ೧೨೩೫).
ಎರಡನೆಯ ಗುಣವರ್ಮನ ಪುಷ್ಪದಂತ ಪುರಾಣ (ಸು. ೧೨೩೫).

ಇವನು ಕಾವ್ಯಾಂಗಗಳಲ್ಲಿ ಒಂದೊಂದು ಅಂಗವನ್ನು ಒಂದೊಂದು ಆಶ್ವಾಸದಲ್ಲಿ ವಿವರಿಸಿದ್ದಾನೆ. ಪೀಠಿಕಾಶ್ವಾಸವೂ ಸೇರಿ ಒಟ್ಟು ೧೯ ಆಶ್ವಾಸಗಳಾಗುತ್ತವೆ. ಸಮಗ್ರವಾದ ಗ್ರಂಥವು ನಮಗೆ ಇದುವರೆಗೂ ದೊರೆತಿಲ್ಲ. ಮೈಸೂರುಸರ್ಕಾರದ ಓರಿಯಂಟಲ್ ಲೈಬ್ರರಿಯಲ್ಲಿರುವ ಕಾಗದದ ಪ್ರತಿಯಲ್ಲಿ ಎಂಟು ಆಶ್ವಾಸಗಳು ಮಾತ್ರ ಇವೆ. ಆ ಪ್ರತಿಯೂ ಶುದ್ಧವಾಗಿಲ್ಲ. ಅದರ ಪೀಠಿಕಾಶ್ವಾಸದಲ್ಲಿರುವ ಕಡೆಯ ಮೂರು ಪದ್ಯಗಳನ್ನು ಈ ಸಲಕ್ಕೆ ಪ್ರಕಟಿಸಿದೆ. ಆ ಪದ್ಯಗಳೊಂದೊಂದರಲ್ಲಿಯೂ ಮಹಾಕಾವ್ಯದ ಹದಿನೆಂಟು ಅಂಗಗಳನ್ನು ಹೇಳಿದೆ. ಕಡೆಯ ಪದ್ಯವು ಉದಯಾದಿತ್ಯಾಲಂಕಾರದಲ್ಲಿಯೂ ಅಭಿನವವಾದಿವಿದ್ಯಾನಂದನ (ಸು. ೧೬೦೦) "ಕಾವ್ಯಸಾರ"ದಲ್ಲಿಯೂ ದೊರೆಯುತ್ತದೆ. ಕ್ರಿ.ಶ. ೧೨೪೫-ಕ್ಕೆ ಹಿಂದೆ ಇದ್ದ ಗುಣನಂದಿ, ಗುಣವರ್ಮ, ಪೊನ್ನ, ನಾಗವರ್ಮ, ಗಜಾಂಕುಶ ಮೊದಲಾದ ಕವಿಗಳ ವಿಷಯದಲ್ಲಿ ಈಗ ತಿಳಿದಿರುವುದಕ್ಕಿಂತ ಇನ್ನೂ ಹೆಚ್ಚಿನ ಸಂಗತಿಗಳನ್ನು ನಿರ್ಧರಿಸುವುದಕ್ಕೆ ಈ "ಸೂಕ್ತಿಸುಧಾರ್ಣವ"ವು 'ಅಮೂಲ್ಯವಾದ ಸಾಧನವಾಗಿದೆ'. ಈ ಗ್ರಂಥದ ಪ್ರತ್ಯಂತರಗಳು ಎಲ್ಲಿ ದೊರೆಯಬಹುದೆಂಬುದನ್ನು ಭಾಷಾಭಿಮಾನಿಗಳಾದ ನಮ್ಮ ವಾಚಕರು ವಿಚಾರಿಸಿ ನಮಗೆ ತಿಳಿಸಿದರಾಗಲಿ, ಪ್ರತಿಗಳೇ ದೊರೆತಲ್ಲಿ ನಮಗೆ ಕಳುಹಿಸಿಕೊಟ್ಟರಾಗಲಿ, ಅಚ್ಚುಮಾಡಿಸುವುದಕ್ಕೆ ಅನುಕೂಲವಾಗಬಹುದು.

ವಾಙ್ಮಯಕಾರ್ಯದರ್ಶಿ.

ಕಾವ್ಯಾಂಗಗಳು.

ವಾರಿಧಿ, ಪರ್ವತಂ, ಪುರಮಧೀಶ್ವರನುದ್ವಹನಂ, ಕುಮಾರನಂ।
ಭೋರುಹವೈರಿ-ಮಿತ್ರರುದಯಂ, ಋತು, ನಂದನಮಂಬು, ಸೀಧು,ಕಾಂ॥
ತಾ-ರತಿ-ಚಿಂತೆ, ಮಂತ್ರ, ಚರ, ಯಾನ, ವಿರೋಧಿಜಯಂ, ಗಳೆಂಬಿವಂ।
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್॥
ಪುರ, ವಾರಾಶಿ, ನಗರ್ತು, ಚಂದ್ರ, ತಪನೋದ್ಯಾನಾಂಬುಕೇಳೀ, ಸುರಾ,।
ಸುರತಕ್ರೀಡನ, ವಿಪ್ರಲಂಭ, ಲಲನಾಕಲ್ಯಾಣ, ಪುತ್ರೋದಯ,॥
ಸ್ಫುರಿತಾಲೋಚನಮಂತ್ರ, ದೂತ, ಗಮನಾಜಿ, ಶ್ರೀ ಸುಖವ್ಯಾಪ್ತಿಗಳ್।
ದೊರೆಕೊಳ್ಗುಂ ಕವಿವರ್ಣನಕ್ಕೆ ಪದಿನೆಂಟಂಗಂ ಮಹಾಕಾವ್ಯದೊಳ್॥
ಉದಧಿ, ಪುರಾಧಿಪ, ಸುತ, ಮಂ।
ತ್ರ, ದೂತ, ಗಮನಾಜಿ, ವಿರಹ, ಪರಿಣಯ, ಸುರತ,॥

ತೂರ್ಯ, ದಿನೇಶ, ಚಂದ್ರ, ಮಧು, ಕುಭೃ।
ಮುದಕ, ವನ, ಸ್ತುತಿಯೆ ಕೃತಿಗೆ ಪದಿನೆಂಟಂಗಂ॥

ಆಧುನಿಕ ಕವಿತೆಗಳು.

ಮ॥ ಬಾಳಾಚಾರ್ಯಸಕ್ಕರಿ (ಶಾಂತಕವಿ) ವಿರಚಿತ.

ಕರ್ನಾಟಕ ಭೂದೇವೀಸ್ತವ.

ರಕ್ಷಿಸು ಕರ್ನಾಟಕ ದೇವೀ, ಸಂ।
ರಕ್ಷಿಸು ಕರ್ನಾಟಕ ದೇವೀ ॥ ಪ ॥

ಕದಂಬಾದಿ ಸಂಪೂಜಿತಚರಣೆ ॥
ಗಂಗಾರಾಧಿತಪದನಖಸರಣೆ ॥
ಚಲುಕ್ಯರುತ್ತಮಕಾಂಚೀಕಿರಣೆ ॥
ರಾಷ್ಟ್ರಕೂಟಮಣಿಕಂಠಾಭರಣೆ ॥
ಚಾಲುಕ್ಯಾಂಶುಕಶೋಭಾವರಣೆ ॥ ೧ ॥

ಯಾದವಮಣಿಕಂಕಣಾಂಶುಸುಂದರಿ ॥
ಬಲ್ಲಾಳರ ಭುಜಭೂಷಣಬಂಧುರೆ ॥
ವಿಜಯನಗರಮಂಗಲಮಣಿಕಂಧರೆ ॥
ಮೈಸೂರೊಡೆಯರ ಸುಕೀರ್ತಿಮಂದಿರೆ ॥
ಮಾಂಡಲಿಕಾವನಭಾರಧುರಂಧರೆ ॥ ೨ ॥

ಮತಸುಸ್ಥಾಪಕ ಸ್ಥಾಪಿತ ಪ್ರಾಣೆ ॥
ಶಿಲ್ಪಕಲಾಮಂಟಪಸುಸ್ಥಾನೆ ॥
ಕವಿಜನಕೀರ್ತಿತಸುಯಶಸ್ತ್ರಾಣೆ ॥
ಸಾಧುಸತ್ಕಥಾಭೇರೀಧ್ವಾನೆ ॥
ಸ್ವೇತಿಹಾಸಸೀರಾಜನರಾಣಿ ॥ ೩ ॥

ಸ್ಪಷ್ಟೀಕರಣ—೧. ಕದಂಬರು, ಗಂಗರು, ಚಲುಕ್ಯರು, ರಾಷ್ಟ್ರಕೂಟರು, ಚಾಲುಕ್ಯರು, ಯಾದವರು, ಬಲ್ಲಾಳರು, ವಿಜಯನಗರದವರು, ಮೈಸೂರವರು ಇವರೇ ಮೊದಲಾದ ಕರ್ಣಾಟಕದ ಅರಸುಮನೆತನದವರು ಕರ್ಣಾಟಕ ದೇವತೆಯ ರಾಜವೈಭವವನ್ನು ಒಂದೊಂದು ಬಗೆಯಿಂದ ಹೆಚ್ಚಿಸಲು ಪ್ರಯತ್ನಮಾಡಿರುತ್ತಾರೆ.

೨. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರ ಮೊದಲಾದ ಮತಸ್ಥಾಪಕರು ಕರ್ಣಾಟಕದಲ್ಲಿಯೇ ಸ್ಫೂರ್ತಿಗೊಂಡು ಅವತರಿಸಿರುತ್ತಾರೆ.

೩. ಪ್ರಾಚೀನ ಶಿಲ್ಪಿಕಲಾಕೌಶಲಕ್ಕೆ ಕರ್ಣಾಟಕವೇ ಆಗರವಾಗಿತ್ತೆಂಬ ಸಂಗತಿ ಇತಿಹಾಸದಿಂದ ಸಿದ್ಧವಾಗಿರುವುದಲ್ಲದೆ ಇಂದಿಗೂ ಅದರ ಅವಶೇಷವು ಅಲ್ಲಲ್ಲಿ ಕುರುಹುಗಳ ರೂಪದಿಂದ ಕಾಣುತ್ತಿರುವುದು.

೪. ನೃಪತುಂಗ, ಪಂಪ, ಪೊನ್ನ, ರನ್ನ, ಷಡಕ್ಷರಿ, ಲಕ್ಷ್ಮೀಶ, ಕುಮಾರವ್ಯಾಸ, ಕುಮಾರವಾಲ್ಮೀಕಿ ಮುಂತಾದ ಕರ್ಣಾಟಕ ಕವಿವರ್ಯರ ಯಶಸ್ಸು ಇನ್ನೂ ಕರ್ಣಾಟಕದಲ್ಲಿ ರಕ್ಷಿತವಾಗಿರುವುದನ್ನು ಯಾರು ಅರಿಯರು?

೫. ಪುರಂದರ, ಕನಕ, ನಿಜಗುಣಾರಾಧ್ಯ, ಸರ್ಪ್ಪಣ್ಣ ಮುಂತಾದ ಸಾಧುಗಳ ವಚನದ ಭೇರೀನಾದದಿಂದ ಕರ್ಣಾಟಕ ದಿಙ್ಮಂಡಲವು ಇಂದಿನವರೆಗೂ ದುಮುದುಮಿಸುತ್ತಿರುವುದು.

೬. ಮೇಲಣ ಸ್ಪಷ್ಟೀಕರಣಗಳಲ್ಲಿ ನಿರ್ದಿಷ್ಟವಾದ ಮೇರೆಗೆ ಅನೇಕ ಪ್ರಕಾರದ ತನ್ನ ಐತಿಹಾಸಿಕ ಪ್ರಸಂಗಗಳ ತೇಜಃಪುಂಜಪ್ರಕಾಶದಿಂದಲೇ ಕರ್ಣಾಟಕಭೂದೇವತೆಯು ಜಗತ್ತಿಗೆಲ್ಲ ತನ್ನ ಪ್ರಕಾಶವನ್ನು ಬೀರಿರುತ್ತಾಳೆ.

ಕರ್ಣಾಟಕ ಭೂಮಾತೆಗೆ ಸದಾ ಜಯಜಯಕಾರವಿರಲಿ.

ಕರ್ಣಾಕ ವೃತ್ತ.

ಕನ್ನಡಿಗರೇ! ಅಭಿಮಾನವು ಎಲ್ಲಿರುವುದು?

॥ಪದ—೧॥

(ದನಿ—" ಮನಸು ಕಾರಣವಲ್ಲ ಪಾಪಪುಣ್ಯಕೆ ಕೇಳು" ಎಂಬ ಪುರಂದರದಾಸರ ಪದದಂತೆ)

ಎಲ್ಲಿರುವುದಭಿಮಾನ? ಕನ್ನಡಿಗರೇ! ಪೇಳಿ।
ಸುಳ್ಳೆ ಬಡಬಡಿಸುವಿರಿ ಸಭೆಗಳಲ್ಲಿ ॥ಪ॥

ಭಳಿರೆ! ಕಾರ್ತೀಕದಾಮೋದರಾಕ್ಷರಗಳಂ।
ತುಳಸೀವಿವಾಹದಲಿ ಬಣ್ಣದಿಂದ ॥
ಸತಿ ಬಾಲಬೋಧದಿಂ ವೃಂದಾವನದಿ ಬರೆದು।
ಕಳೆಯುವಿರಿ ಕನ್ನಡದ ಬಹುಮಾನವ ॥ ॥೧॥

ಕುಲದೇವತೆಯ ನಾಮವಂ ಬಾಲಬೋಧದಿಂ।
ತಲೆಬಾಗಿಲಲಿ ಬರೆವುದನ್ನು ಬಿಟ್ಟು ॥

ಚೆಲುವ ಕನ್ನಡದ ಲಿಪಿಯಿಂದಲೇ ಬರೆದಹೋ ।
ಳುಳಿಸಿರ್ಪೆ ಕನ್ನಡದ ಮಾನವನ್ನು ॥ ॥೨॥

ಹೆರವರಂ ಕರೆದೊಳಗೆ ಹೊರದೂಡಿ ತಾಯಿಯಂ ।
ಪರಮೋತ್ಸವದ ಮಾಳ್ಪ ಮೂರ್ಖರಂತೆ ॥
ನೆರೆ ಕನ್ನಡವ ಬಿಟ್ಟು ಪರಿಣಯದ ಪತ್ರವನು ।
ಬರೆಯುವಿರಿ ನೀವನ್ಯಭಾಷೆಯಲ್ಲಿ ॥ ॥೩॥

ತನ್ನವರಿಗರುಹದಾದಾಯವೆಚ್ಚಗಳನ್ನು ।
ಅನ್ಯರಿಗವಂ ಪೇಳ್ವ ದಡ್ಡನಂತೆ ॥
ಕನ್ನಡವನುಳಿದಹೋ ಪಂಡಿತರೆ! ಲೆಕ್ಕಗಳ ।
ನನ್ಯಭಾಷೆಯೊಳೇಕೆ ನೀವಿಡುವಿರಿ? ॥ ॥೪॥

ಹೆರವರದನಾದರಿಸಿ ತನ್ನದನುಪೇಕ್ಷಿಸುವ ।
ಮರುಳಗಪ್ಪುದು ಕೇಡು ನೀವೆಲ್ಲರು ॥
ಅರಿತವರು ನಿಮ್ಮದನು ಬಿಡಬೇಡಿರ್ಪೆ ಸುಖವ ।
ವರಶಾಂತವಿಟ್ಠಲನು ತಾನೆ ಕೊಡುವಂ ॥ ॥೫॥

ಆಂಗ್ಲಭಾಷಾಪ್ರವೀಣತೆಯು ಪದವೀಧರರಾದ

ಕನ್ನಡಿಗರೇ! ಅಭಿಮಾನವು ಎಲ್ಲಿರುವುದು?

॥ ಪದ—೨ ॥

(ದನಿ—ಮೇಲಣಪದದಂತೆ.)

ಎಲ್ಲಿರುವುದಭಿಮಾನ? ಕನ್ನಡಿಗರೇ! ಪೇಳಿ ।
ಸುಳ್ಳೆ ಬಡಬಡಿಸುವಿರಿ ಸಭೆಗಳಲ್ಲಿ ॥ ಪ ॥

ಗುರುಪರಿಶ್ರಮದಿನಾಂಗ್ಲೇಯಭಾಷೆಯ ಕಲಿತು ।
ಧರಿಸಿ ಪದವಿಗಳನುಪಜೀವಿಸುವಿರೇ ॥
ಹೊರತು ತದ್ಭಾಷೆಯುದ್ಗ್ರಂಥಗಳ ಕನ್ನಡದಿ ।
ಪರಿವರ್ತನಂ ಗೋಳಿಸಲಿಲ್ಲವಲ್ಲಾ ॥ ೧ ॥

ಸರಸವಾದಚ್ಚಗನ್ನಡದ ವಾಕ್ಯಗಳಲ್ಲಿ ।
ಬೆರಸಿ ಪರಭಾಷೆಗಳ ಶಬ್ದಂಗಳಂ ॥
ನೆರೆ ನುಡಿಪದುಚ್ಚಾಟವು ನಿಮ್ಮನ್ನು ಬಿಟ್ಟಿಹೋ ।
ತೆರಳಲಿಲ್ಲವು ನಮ್ಮ ದೌರ್ಭಾಗ್ಯವು ॥ ೨ ॥

ಪರದೇಶಭಾಷೆಗಳ ಪಂಡಿತೋಕ್ತಿಗಳನು ।
ಚ್ಚರಿಸಿ ಕುಣಿದಾಡುವಿರಿ ಸಂಭ್ರಮದೊಳು ॥
ಪರಮಪಂಪಾದಿಗಳ ಕನ್ನಡದ ಕಬ್ಬಗಳ ।
ನೆರೆ ಪಾಡವೈ ನಿಮ್ಮ ನಾಲಗೆಗಳು ॥ ೩ ॥

ನಿರುಪಯೋಗದ ನಮಗೆ ಪರರುಪನ್ಯಾಸಕ್ಕೆ ।
ಕರೆಸದಲೆ ಬರುವಿರುತ್ಸಾಹದಿಂದ ॥
ಪರಮಹಿತಕರವಾದ ಕನ್ನಡದ ಸಭೆಗಳಿಗೆ ।
ಕರೆದರೂ ಬರದೆ ತಪ್ಪಿಸಿಕೊಳುವಿರಿ ॥ ೪ ॥

ನಾವು ನಿಮ್ಮಭಿಮಾನವನ್ನು ಬಿಟ್ಟರೆ ನಿಮ್ಮ ।
ಭಾವಕಳೆ ಬೆಳಗುವುದೆ? ಕರ್ಣಾಟದ ॥
ಜೀವವಾಗಿಹ ನೀವು ಶಾಂತೀಶನಂ ಸ್ಮರಿಸಿ ।
ಭಾವಿಸಿರಿ! ಸೇವಿಸಿರಿ! ಕನ್ನಡವನು ॥ ೫ ॥

ಬರೆಯುವ ಕೋಣೆ.

॥ ಪದ ॥

(ರಾಗ—ಎರಕಲಕಾಂಭೋದಿ. ತಾಳ—ಜಂಪೆಯಂತೆ.)

ಎನ್ನ ಕೋಣೆಯ ಸುಖವೆ ಸಾಕೆನಗೆ ಜಗದೀಶ! ।
ಇನ್ನಾವುದನ್ನು ನಾನೊಲ್ಲೆನಯ್ಯಾ ॥ ಪ ॥

ಬಿಳಿಗಾಗದದ ಗಡ್ಡೆ ಚೆಲುವಲೆಕ್ಕಣಿಕೆಗಳು. ।
ತಿಳಿಮಸಿಯು ತುಂಬಿರ್ದ ಹವಣಿದವುತಿ, ॥
ಸಲೆ ಸೀಸಕಡ್ಡಿಗಳು, ಪೊಸಪೊತ್ತುಗರಡುಗಳು, ।
ಪೊಳೆವಕತ್ತರಿ, ಚೂರಿ, ರೂಳುಗಳಿಪ ॥ ೧ ॥

ಬೆಳಕದೆಡಗಡೆಯಿಂದಲೈತರುವ, ಮೆಲ್ಲೆಲರ ।
ಸುಳಿಗಳಾಟದ ಸೊಗಸು ಮೈಸೋಂಕುವ, ॥
ಒಳಿದ ಶಾಂತಿಯು ಸೌಖ್ಯದೇಕಾಂತವಾಗಿರುವ, ।
ಕುಳಿತುಕೊಳ್ಳಲು ತೂಲದಾಸನವಿಹ, ॥ ೨ ॥

ವರಕವಿಗಳೈದೆ ಸ್ಮರಣಕ್ಕೆ ಬರುವಂದದಿಂ ।
ಸುರುಚಿರಗ್ರಂಥಗಳ ಕಣ್ಣೆದಿರಿಗೆ ॥
ನೆರೆ ಮಂಡಿಸಿಹುದರಿಂ ಭಾರತಿಯ ವಾಸಮಂ ।
ದಿರದಂತೆ ಕಂಗೊಳಿಪ ಸೌಂದರ್ಯದ ॥ ೩ ॥

ಅನುಕೂಲವಿನಿತಿರ್ದ ಕೋಣೆಯೊಳಗೇಕಾಗ್ರ ।
ಮನದಿಂದ ಗ್ರಂಥಮಂ ಬರೆಯುವಾಗ ॥
ಎನಗಾಗುವಾನಂದವಪ್ರತಿಮವಹುದಹೋ ।
ಎನಗದೇ ಸರ್ವಾರ್ಥಸಂಸಿದ್ಧಿಯು ॥ ೪ ॥

ಶ್ರೀಶಾಂತವಿಟ್ಠಲನೆ ಎನ್ನೊಳಿಹ ತವಕೃಪಾ ।
ಕೋಶದೌದಾರ್ಯದಿಂ ಹೆಚ್ಚಿಗಿನ್ನು ॥
ಐಸಲೇ! ಕೊಡುವೆಯಾದರೆ ನೀನೆ ಕೊಡು ಕಾವ್ಯ ।
ರಾಶಿಯಂ ಬರೆವ ಸುಸ್ಫೂರ್ತಿಯನ್ನು ॥ ೫ ॥

ಕನ್ನಡ ದಾಸಯ್ಯ

॥ ಪದ ॥

(ಬೇಕಾದ ರಾಗ. ರೂಪಕದಂಥ ಅಟ್ಟತಾಳ.)

ಬೇಡಲು ಕನ್ನಡ ದಾಸಯ್ಯ ಬಂದಿಹ ।
ನೀಡಿರಮ್ಮಾ! ತಡಮಾಡದಲೇ ॥ ಪ ॥

ಹಾಡೊಂದನಾತನು ಹೊಸದಾಗಿ ಮಾಡಿಹ ।
ಕೂಡಿರಿ ಕೇಳಿರಿ ಹಾಡುವನು ॥ ಅನುಪ ॥

ಕನ್ನಡಮಾತಿನ ತಂದೆತಾಯಿಗಳಿಂದ ।
ಚೆನ್ನಚೆನ್ನೆಯರೆಲ್ಲ ಹುಟ್ಟಿದಿರಿ ॥

ಕನ್ನಡಮಾತಿನ ಜೋಗುಳವನು ಕೇಳಿ ।
ಕನ್ನಡತೊಟ್ಟಿಲೊಳಾಡಿದಿರಿ ॥ ೧ ॥

ಕನ್ನಡದೇಶದೆ ದೊಡ್ಡವರಾದಿರಿ ।
ಕನ್ನಡವಿದ್ಯೆಯ ಗಳಿಸಿದಿರಿ ॥
ಕನ್ನಡದಿಂದಲೆ ಸಿರಿವಂತರಾದಿರಿ ।
ಕನ್ನಡದೇಶದೆ ಹೆಸರಾದಿರಿ ॥ ೨ ॥

ಅನ್ಯಭಾಷೆಗಳಂತೆ ಕನ್ನಡಭಾಷೆಗೆ ।
ಉನ್ನತಿಕೆಯ ತರಬೇಕೆಂದು ॥
ಹೊನ್ನು ಕೂಡಿಸಲಿಕ್ಕೆ ಬಂದಿಹನಾತನು ।
ಮನ್ನಿಸಿ ಹಣವನ್ನು ಕೊಡಿರಮ್ಮಾ ॥ ೩ ॥

ಹೊಟ್ಟೆಗಿಲ್ಲದೆ ಬಂದ ದಾಸಯ್ಯನಿವನಲ್ಲ ।
ಕೊಟ್ಟುದ ಬಿಟ್ಟು ಹೋಗುವನಲ್ಲವು ॥
ದಿಟ್ಟಿಸಿ ದಿಟ್ಟಿಸಿ ಕೊಡಬಂದ ಕೈಗಳ ।
ನೊಟ್ಟುಗೂಡಿಸಿ ಪದ ಕಟ್ಟುವನು ॥ ೪ ॥

ಚಿನ್ನದ ಕಡಗದ ಕೈ ಕಾಸನಿತ್ತಿತು ।
ರನ್ನದುಂಗುರದ ಕೈ ಇಲ್ಲೆಂದಿತು ॥
ಹೊನ್ನಪಂಕಿಯ ಕೈ ಸುಮ್ಮನೆ ಕುಳಿತಿತು ।
ಇನ್ನೊಂದು ಬಳೆಗೈ ಹಣಕೊಟ್ಟಿತು ॥ ೫ ॥

ಕೊಟ್ಟರೆ ಹಿಗ್ಗುವ ಕೊಡದಿರೆ ಕುಗ್ಗುವ ।
ಕೆಟ್ಟ ಮನದ ಗುರುತಿವಗಿಲ್ಲವು ॥
ಕೊಟ್ಟ ಕಾಸುಗಳೆಲ್ಲ ಹೆಡಿಗೆತುಂಬುವ ಹೊನ್ನು ।
ಇಟ್ಟಂಥ ನಿಧಿ ಕೊಡದಿಹದ್ರವ್ಯವು ॥ ೬ ॥

ಕಾಸಿಗಲ್ಲವು ನಿಮ್ಮ ಸೋಸಿಗೆ ಬೆಲೆಯಿದೆ ।
ಕಾಸಲ್ಲವೇ ಕೋಟಿಯ ಮೂಲವು ॥
ಈ ಶಾಸ್ತ್ರವ ಶಾಂತಪಿಟ್ಟಲನೊಳ್ ಕಲಿತನು ।
ಸಾಸಿರವಿದರಂತೆ ತಂದಿಹನು ॥ ೭ ॥

ಪತ್ರವ್ಯವಹಾರ.

[ಈ ಪ್ರಕರಣದಲ್ಲಿ ಬರುವ ಅಭಿಪ್ರಾಯಗಳಿಗೆ ನಾವು

ಬಾಧ್ಯರಲ್ಲ. — ವಾಙ್ಮಯಕಾರ್ಯದರ್ಶಿ.]

ಸಂದೇಹಗಳೂ, ಸೂಚನೆಗಳೂ.

ಕರ್ಣಾಟ— ಮಹಾರಾಷ್ಟ್ರ.

ಒಂದು ದೇಶದವರು ತಮ್ಮ ರಾಷ್ಟ್ರಕ್ಕೆ ಕರುನಾಡೆಂಬ ಹೆಸರಿಡಬೇಕಾದರೆ ಅವರಿಗೆ ಮಹಾರಾಷ್ಟ್ರದವರ ಮೇಲುಪಂಕ್ತಿಯೇ ಬೇಕಾಗಿರಲಿಲ್ಲ. ಆದರೂ ಕರ್ಣಾಟವೆಂಬ ನಾಮವು ಹಳೆಯದೋ, ಮಹಾರಾಷ್ಟ್ರವೆಂಬುದು ಮುಂಚಿನದೋ, ಎಂದು ನಿರ್ಧರಿಸಲಾದರೆ ಉತ್ತಮವೇ. ಅಶೋಕನ ಐದನೆಯ ಶಾಸನದಲ್ಲಿ ರಸ್ತಿಕ, ಪಿತನಿಕ, ಈ ಜನರ ಸ್ಮರಣೆಯಿದೆ. ಕಳೆದ ವರುಷದ ಪರಿಷತ್ಪತ್ರಿಕೆಯ ಚೈತ್ರದ ಸಂಚಿಕೆಯ ೨೦ ನೆಯ ಪುಟವನ್ನು ನೋಡುವುದು. ರಾಷ್ಟ್ರಿಕರೇ ಮರಾಟಿಗರೆಂಬುದಕ್ಕೆ ಸಂದೇಹವಿಲ್ಲ. ಆದರೆ ಇಲ್ಲಿ ಮಹತ್ತ್ವಸೂಚಕ ವಿಶೇಷಣವಿಲ್ಲ. ಮುಂಬಯಿಪ್ರಾಂತದಲ್ಲಿ ಸಿಕ್ಕಿದ ಸುಮಾರು ೨೦೦ ವರ್ಷ ಕ್ರಿಸ್ತಪೂರ್ವದ ಶಾಸನಗಳಲ್ಲಿ ಮಹಾರಥಿ, ಮಹಾರಥಿನೀ, ಎಂಬ ಉಪನಾಮಗಳು ಕಂಡುಬಂದಿವೆ. ಈ ಮಾತುಗಳಿಗೆ ಮಹಾರಥಿ ಎಂಬ ಅರ್ಥವನ್ನು ಕಲ್ಪಿಸುವುದು ಸರಿಯಲ್ಲವೆಂದೂ, 'ಮಹಾರಾಷ್ಟ್ರಿ' ಶಬ್ದವೇ ಇಲ್ಲಿ ದೊರಕುತ್ತದೆಂದೂ, ಮ॥ ಕಾಣೆಯವರು ಈಚೆಗೆ ಪ್ರತಿಪಾದಿಸಿದ್ದಾರೆ. ಮಹಾಭಾರತದ ಈಗಿನ ಪಾಠಾಂತರವು ಇದಕ್ಕೂ ಮೊದಲು ಪ್ರಚಲಿತವಾಗಿತ್ತೆಂದು ಆಧುನಿಕ ಪಂಡಿತರು ಅಭಿಪ್ರಾಯಪಡುವುದಿಲ್ಲ. ಹಾಗಾದರೆ ಮಹಾಭಾರತದಲ್ಲಿ ಕರ್ಣಾಟರು ಕೀರ್ತಿತರಾಗಿ, ಮಹಾರಾಷ್ಟ್ರವೆಂಬ ಮಾತು ತಲೆದೋರದಿರಲಿಕ್ಕೆ ಕಾರಣವೇನು? ದಾಕ್ಷಿಣಾತ್ಯರು ಮಹಾರಾಷ್ಟ್ರವೆಂದು ಹೇಳಿಕೊಂಡ ಪ್ರದೇಶದಲ್ಲಿ ಹಲವು ಜನತೆಯುವರಿದ್ದು, ಇವರ ಹೆಸರುಗಳನ್ನು ಬೇರೆ ಬೇರೆಯಾಗಿ ಕವಿ ಹೇಳಿರುವುದರಿಂದ, ಆರ್ಯಾವರ್ತದ ಪ್ರಖ್ಯಾತರಾಷ್ಟ್ರಗಳನ್ನು ಪ್ರತಿಭಟಿಸುವಂತೆ ಕೇಳಿಸುವ ಅಭಿಧಾನವನ್ನು ಅವನು ತಿರಸ್ಕರಿಸಿರಬಹುದೆಂದು ನನ್ನ ಮತಿಗೆ ಕಾಣುತ್ತದೆ.

ದೇಶೀರತ್ನಾವಲಿಯ ಶಬ್ದಗಳು.

ದೇಶೀರತ್ನಾವಲಿಯಿಂದ ಆಷಾಢದ ಸಂಚಿಕೆಯಲ್ಲಿ ಸಂಗ್ರಹಿಸಿ ಹಾಕಿದ ನಾಮಗಳಲ್ಲದೆ, ಇನ್ನೂ ಕೆಲವನ್ನು ವಾಚಕರಿಗೆ ಅರ್ಪಿಸಬಹುದು. 'ಣಜ್ಝೋಜ್ಜೋಷ್ಮೋ

ಭ್ರಾತಾ '—ಅಣ್ಣ. ಉಕ್ಕಂದೋವೃತ್ತಃ ' ಓಲಗ್ಗೋಸೇವಕಃ '—ಓಲಗದವ. ' ಅವಜ್ಝಾಓ, ಉಪಾಧ್ಯಾಯು '—ಓಜ. ' ಕಕ್ಕಡೋಪಿನ '—ತೋರಬತ್ತಿ. ಕಂಚೀ ಕಟಿಸೂತ್ರಂ. ' ಖಂಡಿಓ, ಅನಿವಾರಃ '—ಕಂಡಿತ; ಖಂಡಿತ ಶಬ್ದವು ಗ್ರಾಮ್ಯ ವೆಂದು ಕಿಟ್ಟೆಲವರು ಹೇಳಿದ್ದು ಹೇಗೆ ಸರಿ? ಕರಡೋವ್ಯಾಘ್ರಃ—ಈಗಿನ ಕನ್ನಡದಲ್ಲಿ ಚುಕ್ಕೆ. ' ಕಲಿಓ, ಜ್ಞಾನಾರ್ಥಸ್ತು ಕಲಿತಶಬ್ದಭವ '—ಕನ್ನಡವೂ ಕಲಿತವೇ. ' ಕಸ್ಸೋಕಚ್ಚರೋಅ, ಪಂಕವಿ್ಮ್ರ '—ಕಸ, ಕಚರಾ, ಕೆಸರು, ಇವು ಒಂದೇ ಮೂಲ ದಿಂದ ಹುಟ್ಟಿರಬೇಕು. ' ಖುಣಸಾಮುಸೋದುಃಖಂ '—ಕುನಸು. ' ಕೊಜ್ಝರಿ ಅಂ, ಆಪೂರಿತಂ '—ಕೊಸರು. ' ಖಿರಇ, ಕ್ಷರತಿ '—ಗೀರು. ತಣ್ಣಾಯಂ ಆರ್ದ್ರಂ. ' ದೀವಿಅ, ವ್ಯಾಗಾಕರ್ಷಣೀ '—ದೀಹ. ಪಾವೋಸರ್ಪಃ ' ಫುರಿಅಂ, ನಿಂದಿತಂ '—ಪುರುಡು. ' ಪುಲ್ಲೀವ್ಯಾಘ್ರಃ ಸಿಂಹಶ್ಚ '—ಈಗ ಸಿಂಹವಲ್ಲ. ' ವಿರಿಕ್ಕಂ ಪಾಟಿತಂ ' ಬಿರಿಕು. ಬೊಂದೀರೂಪಂಮುಖಂ ಶರೀರಂಚೇತಿ. ' ಮಜ್ಜಿಆ, ಮಾರ್ಜಿತಾ '—ಮಜ್ಜಿಗೆ. ಮಡಿಆ, ಸಮಾಹಿತಾ. ಮರುಳೋ, ಭೂತಂ. ' ಮಲಓ, ಗಿರ್ಯೇಕ ದೇಶ, ಉಪವನಂ '—ಮಲೆ. ಮಾಡಿಅಂ, ಗೃಹಂ. ' ಮುದ್ದೀಚುಂಬಿತಂ '—ಮುದ್ದು. ' ಮುಹಿಅಂ, ಏವಮೇವಕರಣಂ '—ಮುಯ್ಯು. ಮುರಿಅಂ, ತ್ರುಟಿತಂ. ಮೋಚಂ ಅರ್ಧಜಂಘೀ. ' ರಢ್ಢೀಪ್ರಧಾನಂ '—ರಡ್ಡಿ. ' ರಥ್ಯಾರಜ್ಜಾ '—ರಸ್ತೆ. ' ವತ್ತ ದ್ದೋಬಹುಶಿಕ್ಷಿತಃ '—ವಸ್ತಾದ. ವಿಸಂಟುಲ, ವಿಸಂಷ್ಟುಲ—ವಿಸಟ. ' ಉಸ್ಸಿಕ್ಕಇ, ಮುಂಚತಿ, ಉತ್ಕ್ಷಿಪತಿ '—ಹಿಸಕು.

ದೇಶೀರತ್ನಾವಲಿಯ ವೃತ್ತಿ.

ಈ ನಿಘಂಟುವಿನ ವೃತ್ತಿಯಲ್ಲಿ ಅನೇಕಾಂಶಗಳು ಹೇಮಚಂದ್ರನ ಪಾಂಡಿತ್ಯಕ್ಕೆ ತಕ್ಕವುಗಳಲ್ಲ. ಅವುಗಳನ್ನು ತನ್ನ ಶಿಷ್ಯರಿಂದ ಬರೆಯಿಸಿರಬಹುದೆಂದು, ಕೋಶದ ಜರ್ಮನ್ ಪ್ರಕಾಶಕರು ಅಭಿಪ್ರಾಯಪಟ್ಟಿರುವುದರಿಂದ, ವೃತ್ತಿಕಾರನು ಬೇರೆಯವ ನೆಂಬಂತೆ ನಾನು ಬರೆಯಲಿಕ್ಕೆ ಕಾರಣವಾಯಿತು. ಇಲ್ಲದಿದ್ದರೆ ವೃತ್ತಿಯೂ ಹೇಮ ಚಂದ್ರನದೇ ಎಂದು ಕಾಣಿಸಬೇಕಾಗಿತ್ತು. ಈ ಗ್ರಂಥದಲ್ಲಿ ಕೆಲವೆಡೆಗಳಲ್ಲಿ ಪೂರ್ವ ಕೋಶಕಾರರ ನಿರ್ದೇಶವಿದೆ. ಆದರೆ ಅವರ ಗ್ರಂಥಗಳು ಸಿಕ್ಕಿಲ್ಲವಂತೆ. ಹೇಮ ಚಂದ್ರನು ಗ್ರಂಥಸ್ಥನಾಮಗಳನ್ನು ಮಾತ್ರ ಸಂಗ್ರಹಿಸಿದನೋ, ಜನರು ಆಡುವ ಭಾಷೆ ಯನ್ನು ಕೇಳಿ ಕೋಶಗಳಲ್ಲಿಲ್ಲದ ಮಾತುಗಳನ್ನು ಕೂಡ ಸೇರಿಸಿದನೋ, ನಿಶ್ಚಯವಿಲ್ಲ. ಕಿಟ್ಟೆಲವರು ಈ ಕೋಶವನ್ನು ಪರೀಕ್ಷಿಸಿದ್ದರೆ, ಆರ್ಯಭಾಷೆಗಳಲ್ಲಿ ದ್ರಾವಿಡ ಶಬ್ದಗಳು ಹೇರಳವಾಗಿ ಪ್ರವೇಶಿಸಿರುವುವು, ಎಂಬ ವಾದವನ್ನು ಮತ್ತಷ್ಟು ಬಲವಾಗಿಯೂ ಭರವಸೆಯಿಂದಲೂ ಪ್ರತಿಪಾದಿಸುತಿದ್ದರು. ಕೆಲವು ' ದೇಶೀಯ ' ನಾಮಗಳು ನಿಜ ವಾಗಿ ಅನ್ಯದೇಶೀಯವೆಂಬಂತೆ ಕಾಣುತ್ತದೆ.

ದಕ್ಷಿಣೋತ್ತರಮಾರ್ಗಗಳು.

ಮದ್ರಾಸಿನ ಪ್ರಾಗ್ದೇಶ್ಯಲಿಖಿತಭಂಡಾರದಲ್ಲಿ ಕವಿರಾಜಮಾರ್ಗದ ಒಂದು ಪ್ರತಿಯುಂಟು. ಈ ಗ್ರಂಥವು ಅಚ್ಚಾಗುವುದಕ್ಕೆ ಮುಂಚೆ, ಆ ಪ್ರತಿಯಲ್ಲಿ ಜರವ್ವ

ಧೂಪಮಿತ ಹಳಗನ್ನಡ, ಬೆದಂಡೆಚತ್ತಾಣ, ದಕ್ಷಿಣೋತ್ತರಮಾರ್ಗ, ಮುಂತಾದ ವಿಷಯಗಳನ್ನು ಕಂಡು ಬಹು ಕೌತುಕವಾಯಿತು. ಈಗಿನ ದಿವಸಗಳಲ್ಲಿ ದಕ್ಷಿಣೋತ್ತರಮಾರ್ಗಗಳಲ್ಲದೆ, ಪೂರ್ವಪಶ್ಚಿಮಮಾರ್ಗಗಳನ್ನು—ಬಳ್ಳಾರಿ ಕನ್ನಡ ಜಿಲ್ಲೆಗಳ ಭಾಷೆಗಳನ್ನು-ಕುರಿತು ಅನೇಕರು ಬರೆಯುವರು. ಹೀಗಿದ್ದು, ನೃಪತುಂಗನ ಪರಿಸ್ಫುಟವಚನಗಳಲ್ಲಿ ನನಗೆ ಒಂದಿಷ್ಟು ಅವಿಶ್ವಾಸವೂ ತಟ್ಟಲಿಲ್ಲ. ಆದರೆ ಈ ಮಾರ್ಗಭೇದಗಳು ಎಷ್ಟುಕಾಲದವರೆಗೆ ನಿಂತಿದ್ದುವು? ಪಂಪಭಾರತದಲ್ಲಿ, ನೋೞ್ಪುದು (II, 65); ಬೇೞ್ಪರು (II. 67); ಎಡೆಯಾೞ್ಪ (I, 106)----ಮುಂತಾದ ಕ್ರಿಯಾರೂಪಗಳು ದೊರಕುತ್ತವೆ. ಆದಿಪುರಾಣದಲ್ಲಿಯೂ, ನೋೞ್ಪ, ಬೇೞ್ಪ, ಕುಳಿಕೊೞ್ಪ (I, 75; XI, 80)-ಇಂತಹ ರೂಪಗಳು ಕಾಣುತ್ತವೆ. ಮಾೞ್ಪ ಎಂಬ ಮಾತು ಇನ್ನೂ ಸಾಧಾರಣವಾಗಿದೆ. ಹಾಗಾದರೆ ಪಂಪನ ತಿರುಳ್ಗನ್ನಡವು ದಕ್ಷಿಣಮಾರ್ಗಕ್ಕೆ ಸೇರಿದುದಾಯಿತು. ಆದರೆ ನೃಪತುಂಗನು ಕೊಟ್ಟಿರುವ ಇನ್ನೊಂದು ಉದಾಹರಣದ ದೃಷ್ಟಿಯಿಂದ ನೋಡೋಣ. 'ಇಸುವ' ದಕ್ಷಿಣಮಾರ್ಗ, 'ಇಪ' ಉತ್ತರಮಾರ್ಗ. 'ಇಪ್ಪ' ಉತ್ತರೋತ್ತರ ಮಾರ್ಗವೋ? ಆದಿಪುರಾಣದಲ್ಲಿ, ಸೊಗಯಿಪ (II, 60): ಬಣ್ಣಿಪೆಂ (II, 76); ಅಲ್ಲಯಿಪ (III, 43); ಓಲಗಿಪುದು (V, 36); ಕೊಲಿಪಂ (V, 81); ಎಸಿಪುದು (VI, 82); ಪುಯ್ಯಲಿಪ (XII, 76); ಬಿನ್ನವಿಪರ್ (XIV, 10). ಈ ಉತ್ತರಮಾರ್ಗದ ರೂಪಗಳು ಮಾತ್ರವಲ್ಲ, ಶೋಕಿಪ್ಪೆ (III, 55)-ಈ ಉತ್ತರೋತ್ತರ ಮಾರ್ಗದ ರೂಪವು ಹೇಗೆ ಬಂದಿದೆ? ಮಧ್ಯಪ್ರದೇಶದ ತಿರುಳ್ಗನ್ನಡದಲ್ಲಿ ಎರಡು ಮಾರ್ಗಗಳು ಒಟ್ಟುಗೂಡುವುದು ಸಹಜವೆನ್ನುತ್ತೀರೋ? ಶಿವಮೊಗ್ಗೆಯ ಶಾಸನದಲ್ಲಿ 'ಪುರುಡಿಪ್ಪಂ' (ಕವಿಚರಿತೆ, ಪು. ೭೯) ಈ ಉತ್ತರೋತ್ತರಮಾರ್ಗದ ರೂಪವು ಹೇಗೆ ಬಂದಿದೆ? ಪಂಪರಾಮಾಯಣದ ಪ್ರಥಮ ವೃತ್ತದಲ್ಲಿರುವ 'ನಮಗೆ' ಉತ್ತರಮಾರ್ಗವಂತೆ. ಎರಡನೆಯ ಪದ್ಯದಲ್ಲಿ 'ಎಂಮೊಳ್' ಇದೆಯಷ್ಟೆ? ಹೀಗಿರಲು, ಕವಿಗಳು ದಕ್ಷಿಣೋತ್ತರಮಾರ್ಗಭೇದವನ್ನು ಎಷ್ಟುಕಾಲದತನಕ ಅನುಸರಿಸಿದರು, ಆವಾಗ ಬಿಟ್ಟುಬಿಟ್ಟರು, ಎಂಬುದನ್ನು ಹೇಗೆ ಹೇಳಬಹುದು? ಕೃಷ್ಣಾನದಿಯ ಸಮೀಪದಲ್ಲಿ ಹುಟ್ಟಿ ಬಳೆದ ರನ್ನನ ಅಜಿತತೀರ್ಥಕರಪುರಾಣದಲ್ಲಿಯೂ 'ನಮಗೆ' (I, 2) ಮುಂತಾದ ಉತ್ತರಮಾರ್ಗದ ಲಕ್ಷಣಗಳಿರುವುವಲ್ಲದೆ, ನೋೞ್ಪ (I, 27), ಮಾೞ್ಪ (II, 80) ಮುಂತಾದ ದಕ್ಷಿಣಮಾರ್ಗದ ವಚನಗಳೂ ಸಿಕ್ಕುತ್ತವೆ.

ಪಂಪ ಪೊನ್ನ ನಾಗವರ್ಮರ ಜನ್ಮಸ್ಥಾನಗಳು.

ಪಂಪನ ಪೂರ್ವಜರು ವೆಂಗಿಮಂಡಲದಲ್ಲಿದ್ದ ವೆಂಗಿಪಳುವಿನ ನಿವಾಸಿಗಳಾಗಿದ್ದರೆಂದು ಅವನ ಭಾರತದಲ್ಲಿ ಹೇಳಿದೆ. ಪೊನ್ನನ ಶಾಂತಿಪುರಾಣವನ್ನು ನಾನು ನೋಡಿಲ್ಲ. ಇವನ ಪೋಷಕರ ತಂದೆ ವೆಂಗಿವಿಷಯದಲ್ಲಿದ್ದ ಪುಂಗನೂರಲ್ಲಿ ವಾಸವಾಗಿದ್ದನೆಂದು ರನ್ನನ ಅಜಿತಪುರಾಣದಿಂದ ಕಾಣುತ್ತದೆ. ಹೆಚ್ಚಿನ ಅಂಶಗಳು ರಾ. ಬ. ನರಸಿಂಹಾಚಾರ್ಯರ ಕವಿಚರಿತೆಯಲ್ಲಿಯೂ ತೋರುವುದಿಲ್ಲ. ಈ ವಿದ್ವಾಂಸರು

ಧಾರವಾಡದಲ್ಲಿ ಓದಿದ ಬಹುಶ್ರುತ ಉಪನ್ಯಾಸದಲ್ಲಿ ಪಂಪನ ಜನ್ಮಸ್ಥಳವು ಪುಲಿಗೆರೆಯೆಂದು ಹೇಳಿದರೂ, ಪೊನ್ನನಾಗವರ್ಮರ ವಿಷಯದಲ್ಲಿ ಮೌನವನ್ನು ಆಚರಿಸಿದ್ದಾರೆ. ಪಂಪನ ಜನ್ಮಸ್ಥಳವು ಸರಿಯಾಗಿ ತಿಳಿಯುವುದಿಲ್ಲವೆಂದು ವೇ॥ ತಿಮ್ಮಪ್ಪಯ್ಯಶಾಸ್ತ್ರಿಗಳು ಈ ಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ಉಪನ್ಯಾಸದಲ್ಲಿ ಹೇಳಿರುವರು. ಇಷ್ಟು ವಿಚಿಕಿತ್ಸೆಗೆ ಕಾರಣವೇನು? ವೆಂಗಿಪುರವೆಂಬ ವೆಂಗಿಮಂಡಲದ ರಾಜಧಾನಿ ಆಂಧ್ರದೇಶದಲ್ಲಿತ್ತೆಂದು ಪ್ರಾಕ್ತನವಿಷಯವಿಮರ್ಶಕರು ನಿರ್ಣಯಿಸಿದುದೇ ಕಾರಣವಲ್ಲವೇ? ಕರ್ಣಾಟದೇಶದ ರಾಜರು ದಂಡನಾಯಕರನ್ನೂ ಕನ್ನಡಕವಿಗಳನ್ನೂ—ಮುಖ್ಯವಾಗಿ ಕವಿಗಳನ್ನು—೧೫೦ ಹರದಾರಿದೂರದಿಂದ ಕರೆಯಿಸಿಕೊಳ್ಳುವುದು ಅಸಂಭಾವ್ಯವಾದುದರಿಂದ, ಇವರ ಪೂರ್ವಜನರು ಮಾತ್ರ ಅಲ್ಲಿಂದ ಬಂದಿರಬೇಕು. ಇವರೇ ಎಲ್ಲಿ ಹುಟ್ಟಿದರೆಂಬುದು ತಿಳಿಯದೆಂಬ ಪಕ್ಷವನ್ನು ಹಿಡಿಯುವುದರಲ್ಲಿ ವಿವೇಕವಿರಬಹುದು. ಆದರೆ ಹಿರಿಯರ ವಾಸಸ್ಥಳದಲ್ಲಿ ತಾವು ಹುಟ್ಟಿರಲಿಲ್ಲವಾದರೆ, ಆ ಸ್ಥಳಗಳನ್ನು ಮಾತ್ರ ಹೇಳಿ ತಮ್ಮ ಹುಟ್ಟೂರನ್ನೂ ಏಕೆ ಮಾಜಿಸಿದರು? ವಿಬುಧರು ಹಿಮ್ಮೆಟ್ಟುವಲ್ಲಿ ಅಬುಧರು ನುಗ್ಗುತ್ತಾರೆ, ಎಂಬ ಆಂಗ್ಲಕವಿಯ ನುಡಿಯನ್ನು ನಾನೀಗ ಉದಾಹರಿಸಬೇಕೆಂದಿದ್ದೇನೆ.

ಆಂಧ್ರದೇಶದಲ್ಲಿ ಮೊದಲು ಪಲ್ಲವರಿಗೆ, ಆಮೇಲೆ ಮೂಡಣ ಚಾಲುಕ್ಯರಿಗೆ, ವೆಂಗಿಪುರವೆಂಬ ರಾಜಧಾನಿಯಿತ್ತೆಂಬುದೇನೋ ಚರಿತ್ರಸಿದ್ಧವೆಂದು ಒಪ್ಪಿಕೊಳ್ಳಬೇಕು. ಆದರೆ ಇದಕ್ಕೆ ವೆಂಗಿಪಳುವೆಂದು ಹೆಸರಿತ್ತೇ? ಪಳುವೆಂದರೆ ಕಾಡು. ಕಿಸುಕಾಡಿನಲ್ಲಿ ಕಿಸುವೊಳಲಿತ್ತು. ಹಾಗೆಯೇ ಪಂಪನಾಗವರ್ಮರು ವಚಿಸಿದ ಸ್ಥಳವು ರಾಜಧಾನಿಯಾಗಿತ್ತಾದರೆ ಅದಕ್ಕೆ ಪಳುವೆಂದು ಮಾತ್ರ ಏಕೆ ಹೇಳಿದರು? ವೆಂಗಿರಾಷ್ಟ್ರವು ಎಲ್ಲಿಯವರೆಗೆ ವಿಸ್ತರಿಸಿತ್ತು? ಈಗ ವಿಜಾಪುರಜಿಲ್ಲೆಯಲ್ಲಿರುವ ಬಾದಾಮಿಯನ್ನು ಚಾಲುಕ್ಯರು ಪಲ್ಲವರ ಕೈಯಿಂದ ಕಿತ್ತುಕೊಂಡರೆಂದು ವಿಮರ್ಶಕರು ಹೇಳುತ್ತಾರೆ. ಹಾಗಾದರೆ ಪಲ್ಲವರ ರಾಷ್ಟ್ರವಾದ ವೆಂಗಿಮಂಡಲವು ಅವರ ಕಾಲದಲ್ಲಿ ಕರ್ಣಾಟದೇಶದ ಒಂದುಭಾಗವನ್ನು ಒಳಕೊಂಡಿತ್ತೆಂದು ಎಣಿಸಬಹುದಲ್ಲವೇ? ಪಡುವಣ ಚಾಲುಕ್ಯರು ಸ್ವತಂತ್ರಾಧಿಕಾರದಲ್ಲಿದ್ದಾಗ ಕರ್ಣಾಟದೇಶದಲ್ಲಿ ವೆಂಗಿಮಂಡಲದ ಹೆಸರನ್ನು ತ್ಯಜಿಸಿರಬೇಕು. ಇವರು ರಾಷ್ಟ್ರಕೂಟರಿಂದ ಪರಾಜಿತರಾಗಿ, ಅವರ ಹೆಸರೇ ಅಡಗಿ, ಇವರ ದಾಯಾದರಾದ ಮೂಡಣ ಚಾಲುಕ್ಯರು ಪಲ್ಲವರನ್ನು ಗೆದ್ದು ವೆಂಗಿಪುರವನ್ನು ಆಳುತ್ತಿರುವಾಗ, ಎಂದರೆ ಪಂಪನ ಕಾಲದಲ್ಲಿ, ವೆಂಗಿವಿಷಯವು ಪುನಃ ಕರ್ಣಾಟದೇಶದ ಭಾಗವನ್ನು ಆವರಿಸಿತ್ತೆಂದು ಕವಿಗಳು ಹೇಳುವುದರಲ್ಲಿ ಪ್ರತ್ಯಯಾತೀತವೇನು? "ಗೊಜ್ಜಿಗನೆಂಬ ಸಕಳಚಕ್ರವರ್ತಿ ಮುಳಿಯೆ ತನಗೆ ಶರಣಾಗತನಾದ ವಿಜಯಾದಿತ್ಯನಂ ಕಾದ ಒಲ್ಲಾಳ್ತನದೊಳ್ ಶರಣಾಗತಜಳನಿಧಿಯುಂ" ಎಂದು ಪಂಪನು ತನ್ನ ಪೋಷಕನನ್ನು ಹೊಗಳಿದ್ದಾನೆ. ಈ ವಿಜಯಾದಿತ್ಯನು ಮೂಡಣ ಚಾಲುಕ್ಯನಾಗಿರಬೇಕೆಂದು ಕೆಲವರ ಅಭಿಪ್ರಾಯವಿದೆ. ಹಾಗಾದರೆ ಅವನನ್ನು ಆ ಚಕ್ರವರ್ತಿ ಮುಳಿತದ್ದು ಆಂಧ್ರದೇಶ್ಲಾಶವಗಿರಬಹುದೋ ಕರ್ಣಾಟದಲ್ಲಾಗಿರಬಹುದೋ?

ಅದಂತಿರಲಿ. ಪಂಪನು ನಿಗದಿಸಿದ ವಸಂತ, ಕೊಟ್ಟೂರು, ನಿಡುಗುಂದಿ, ವಿಕ್ರಮಪುರ; ನಾಗವರ್ಮನ ಸಯ್ಯಡಿ; ಪೊನ್ನ ರನ್ನರು ಕೀರ್ತಿಸಿದ ಪುಂಗನೂರು- ಇವು ಎಲ್ಲಿವೆ? ಒಂದೇ ಹೆಸರಿನ ಗ್ರಾಮಗಳು ಹಲವು ಕಡೆಗಳಲ್ಲಿರಬಹುದು. ವಸಂತ, ಕೊಟ್ಟೂರು ಎಂಬ ಹೆಸರಿನ ಗ್ರಾಮಗಳು ಗೋದಾವರಿ ಜಿಲ್ಲೆಯಲ್ಲಿವೆಯಂತೆ. ಆದರೆ ಅವು ವೆಂಗಿಪುರದಿಂದ ಎಷ್ಟುದೂರ ಮತ್ತು ಯಾವ ದಿಕ್ಕಿನಲ್ಲಿವೆಯೋ ತಿಳಿಯಲಿಲ್ಲ. ಕರ್ಣಾಟಕವಿಗಳು ಹೇಳಿದ ಆರುಗ್ರಾಮಗಳು ವೆಂಗಿಮಂಡಲಕ್ಕೆ ಸೇರಿರಬೇಕೆಂದು ಮೇಲೆ ತರ್ಕಿಸಿದ ಕರ್ಣಾಟದ ಭಾಗದಲ್ಲಿ ಕವಿಗಳ ಮಾತುಗಳಿಗೆ ತಾಳೆ ಬೀಳುವಂತೆ ತಕ್ಕ ಎಡೆಗಳಲ್ಲಿ ದೊರೆಯುತ್ತವೆ. ವಸಂತ, ಕೊಟ್ಟೂರು, ನಿಡುಗುಂದಿ, ಇವು ಧಾರವಾಡಜಿಲ್ಲೆಯ ಈಶಾನ್ಯಭಾಗದಲ್ಲಿ, ಪಶ್ಚಿಮ, ದಕ್ಷಿಣ, ಪೂರ್ವದಿಕ್ಕುಗಳಲ್ಲಿ ನಿಂತಿರುವುವು. ಉತ್ತರಾವಧಿಯಲ್ಲಿದ್ದ ವಿಕ್ರಮಪುರವು ಇದೇ ನೆರೆಯಲ್ಲಿ ಈಗ ವಿಜಾಪುರಕ್ಕೆ ಸೇರಿದ ಅರಸೀಬೀಡಿನ ಸಮೀಪದಲ್ಲಿತ್ತೆಂದು ಶಾಸನಗಳಿಂದ ನಿರ್ಣಯಿಸಿದ್ದಾರೆ. ಪಂಪನ ಕಾಲಾನಂತರ ಅದನ್ನು ಬಿಲ್ಹಣನ ಪೋಷಕನಾದ ವಿಕ್ರಮನು ದೇವಾಲಯಗಳಿಂದ ಅಲಂಕರಿಸಿ ವಿಸ್ತಾರಿಸಿದನೆಂದು ಆ ಕವಿ ಕಥಿಸಿರುವನು. ಅರಸೀಬೀಡಿನ ಪಶ್ಚಿಮದಲ್ಲಿ ಪಟ್ಟದಕಲ್ಲಿದೆ. ಇದು ಕಿಸುಕಾಡು ಎಪ್ಪತ್ತರ ರಾಜಧಾನಿಯಾಗಿತ್ತು. ಸಯ್ಯಡಿ ಕಿಸುಕಾಡಿನಲ್ಲಿತ್ತೆಂದು ದುರ್ಗಸಿಂಹನು ಹೇಳಿರುವನಷ್ಟೆ? ಈಗಿನ ಸವಡಿಯೇ ಸಯ್ಯಡಿಯಾಗಿರಬಹುದು. ದುರ್ಗಸಿಂಹನು ವೆಂಗಿವಿಷಯದ ಪ್ರಸ್ತಾವವನ್ನು ಎತ್ತಲಿಲ್ಲ. ಅವನ ಕಾಲದಲ್ಲಿ ಪಡುವಣ ಚಾಲುಕ್ಯರು ಪುನಃ ವೈಭವದಿಂದ ಕರ್ಣಾಟದಲ್ಲಿ ಆಳುತ್ತಿದ್ದರು. ಆತನೇ ಅವರಲ್ಲಿ ಸಂಧಿವಿಗ್ರಹಿಯಾಗಿದ್ದನು. ಮೂಡಣ ಚಾಲುಕ್ಯರ ವೆಂಗಿಪುರವು ಚೋಳರಿಗೆ ಅಧೀನವಾಗಿತ್ತು.

ಕೊಟ್ಟೂರಿನಂತೆಯೇ ಪುಂಗನೂರೆಂಬುದು ಸಾಮಾನ್ಯವಾದ ಹೆಸರು. ಆದರೆ ಬಾದಾಮಿಯ ಉತ್ತರದಲ್ಲಿ ಹೊಂಗನಹಳ್ಳಿಯೆಂಬ ಗ್ರಾಮವಿದೆ. ಪೊನ್ನರನ್ನರ ಕಾಲದಲ್ಲಿ ಪಡುವಣ ಚಾಲುಕ್ಯವಂಶದ ತೈಲಪನು ತಲೆಯೆತ್ತುತ್ತಿದ್ದನು. ಆತನ ದಂಡನಾಯಕರೂ ಪೊನ್ನನೂ ಅದೇ ಗ್ರಾಮಸ್ಥರಾಗಿದ್ದರೆಂದು ಊಹಿಸುವುದು ನ್ಯಾಯವಲ್ಲವೇ? ಆಂಧ್ರದೇಶವು ಪುರಾಣಪ್ರಸಿದ್ಧವಾದುದರಿಂದ, ಇವರು ಅಲ್ಲಿಂದ ಬಂದವರಾಗಿದ್ದರೆ ರನ್ನನು ವೆಂಗಿವಿಷಯವನ್ನು ವಿಸ್ತಾರವಾಗಿ ವರ್ಣಿಸುವಾಗ ಅದರ ಪ್ರಸ್ತಾವವನ್ನು ಲೋಪಿಸುತ್ತಿದ್ದನೇ? ಇವರ ಕಾಲದಲ್ಲಿ ತೈಲಪನು ಉದಯಕ್ಕೆ ಬಂದಿದ್ದರೂ, ಮೂಡಣ ಚಾಲುಕ್ಯರನ್ನು ಚೋಳರು ಗೆದ್ದಿರಲಿಲ್ಲ. ಆದುದರಿಂದ ಮುಂಚಿನ ವೆಂಗಿಮಂಡಲವೆಂಬ ಹೆಸರೇ ಸ್ವಲ್ಪಕಾಲದವರೆಗೆ ನಡೆದಿರಬೇಕು.

ಈ ಪ್ರದೇಶದಲ್ಲಿ ವೆಂಗಿ ಎಂಬ ಹೆಸರಿನ ಗ್ರಾಮವು ನನಗೆ ಸಿಕ್ಕಿಲ್ಲ. ಬೆಳ್ವಂಕಿ ಎಂಬ ಊರು ಪಂಪನು ಕಾಣಿಸಿದ ಗಡಿಯೊಳಗಿದೆ. "ಅದುಪೆ ವಸಂತಂ ಕೊಟ್ಟೂರು" ಎಂಬ ಪಂಪನ ಮಾತುಗಳ ಅರ್ಥವೇನು? ಅದುಪ ಎಂದರೆ ಅದಲ್ಲದೆ ಎಂಬರ್ಥವೋ, ಅದರೊಳಗೆ ಎಂಬರ್ಥವೋ? ಛಂದೋಂಬುಧಿಯಲ್ಲಿ "ವೆಂಗಿವಿಷಯದೊಳ್ ಒಳ್ಪಗಣಿತಮೆನಿಪ ಸಪ್ತಗ್ರಾಮಗಳೊಳಮಾವೆಂಗಿಪಳು ಕರಂ ಸೊಗ

ಯಿಸುಗುಂ" ಎಂದಿದೆ. "ವೆಂಗಿನಗರಮುಂ" ಎಂಬ ಪಾಠಾಂತರವೂ ಇದೆಯಂತೆ. ಕವಿಯ ಗೌರವವನ್ನು ಹೆಚ್ಚಿಸಲಿಕ್ಕೆ ಗ್ರಾಮವನ್ನು ನಗರವಾಗಿ ಮಾಡಲು ಯಾರೋ ಪ್ರಯತ್ನಿಸಿರಬೇಕು. ಕಿಸುಕಾಡಿನ ದೃಷ್ಟಾಂತವನ್ನು ಲಕ್ಷಿಸಿದರೆ, ವೆಂಗಿಪಳುವೆಂಬುದು ಮೊದಲು ಒಂದು ಗ್ರಾಮದ ಹೆಸರಾಗಿದ್ದು, ತರುವಾಯ ಒಂದು ಹೋಬಳಿಗೂ ಆ ಹೆಸರು ಬಿದ್ದು, ಕ್ರಮೇಣ ಗ್ರಾಮದ ನಾಮವು ವಿರೂಪವಾಯಿತೆಂದು ಊಹಿಸಬಹುದು. ಕಿಸುಕಾಡೆಂಬ ಗ್ರಾಮವು ಈಗಿಲ್ಲ. ಹಾಗೆಯೇ ವೆಂಗಿಪಳುವೆಂಬ ಗ್ರಾಮವಿಲ್ಲದಿರುವುದು ಆಶ್ಚರ್ಯಕರವಲ್ಲ. ಬೆಳ್ವಂಕಿ ಎಂಬುದು ವಿರೂಪಿಸಿದ ಹೆಸರಾಗಿರಬಹುದು. ಪಂಪನಾಗವರ್ಮರ ಗ್ರಾಮಗಳು ಕನ್ನಡದ ತಿರುಳಿನಲ್ಲಿವೆ. ಒಂಕುಂದ,? ವಾಕುಂದದಿಂದ ಕಿಸುವೊಳಲಿಗೆ ಒಂದು ಗೀಟನ್ನು ಎಳೆದರೆ, ಹೊಂಗನಹಳ್ಳಿ ಅದರಿಂದ ಸುಮಾರು ಐದುಹರದಾರಿ ಉತ್ತರಕ್ಕಿದೆ. ವೇಗಿರಲು ೪೫೦ ಮೈಲಿ ದೂರವಿರುವ ಅನ್ಯಮಂಡಲದಿಂದ ಬೇರೆ ಭಾಷೆಯನ್ನಾಡುವವರು ಕರ್ಣಾಟದೇಶಕ್ಕೆ ಧನಮಾನಾಪೇಕ್ಷೆಯಿಂದ ಬಂದು, ಕನ್ನಡಮಾತನ್ನು ಕಲಿತುಕೊಂಡು, ಕರ್ಣಾಟ ಕವಿಗಣದಲ್ಲಿ ಅಸಮಾನರಾಗಿ ಮೆರೆದರೆಂಬ ವಿಚಿತ್ರಕಥೆಯನ್ನು ಮೂಲೆಗಿಡಬಹುದೆಂದು ಕಾಣುತ್ತದೆ.

ಹ. ನಾರಾಯಣರಾವ್.

೪-ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನ.

ಮೊದಲು ನಿಶ್ಚಯಿಸಲ್ಪಟ್ಟಿದ್ದಂತೆ ೪-ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನವು ಧಾರವಾಡದಲ್ಲಿ ನಡೆಯಿತು. ಆ ದಿನ ಮಧ್ಯಾಹ್ನ ಸಮ್ಮೇಳನದ ಅಧ್ಯಕ್ಷರಾದ ಮ|| ರಾವ್ ಬಹದೂರ ಪ್ರಾಕ್ತನ ವಿಮರ್ಶ ವಿಚಕ್ಷಣ ಆರ್. ನರಸಿಂಹಾಚಾರ್ಯ, ಎಂ. ಎ., ಎಂ. ಆರ್. ಎ. ಎಸ್., ರವರು 'ಮೇಲ್' ಗಾಡಿಯಲ್ಲಿ ಬೆಂಗಳೂರಿನಿಂದ ದಯಮಾಡಿಸಿದರು. ಇವರನ್ನು ಸಮ್ಮೇಳನದ ಸ್ವಾಗತಮಂಡಲಿಯ ಸಭಾಸದರೂ, ಅಧ್ಯಕ್ಷರೂ, ಕಾರ್ಯದರ್ಶಿಗಳೂ ಅತ್ಯಾದರದಿಂದ (ಪ್ಲಾಟ್‌ಫಾರಂ) ನಿಲ್ದಾಣದಲ್ಲಿ ಇದಿರುಗೊಂಡು, ಪುಷ್ಪಹಾರದಿಂದ ಅಲಂಕರಿಸಿ, ಸಮ್ಮೇಳನವು ನೆರೆಯಲು, ಸಮ್ಮೇಳನದ ಪ್ರತಿನಿಧಿಗಳಿಗೆ ಸತ್ಕಾರವನ್ನು ಮಾಡಲು ಮೊದಲೇ ಚೆನ್ನಾಗಿ ಏರ್ಪಡಿಸಿದ್ದ "ಟ್ರೇನಿಂಗ್ ಕಾಲೇಜಿ" ಗೆ ಕರೆದುಕೊಂಡು ಹೋದರು. ಸ್ನಾನ ಭೋಜನಾದಿಗಳಾದನಂತರ, ಮೊದಲೇ ಏರ್ಪಡಿಸಿದ್ದಂತೆ 2-20 ಘಂಟೆಗೆ ಅಧ್ಯಕ್ಷರನ್ನು ಅತ್ಯಾದರದಿಂದ, ಶ್ರೀ ಶಾರದಾಪಟ, ಕರ್ಣಾಟಕ ಪುರಾತನಗ್ರಂಥಗಳೊಡನೆ ವಾದ್ಯಘೋಷದೊಡನೆ ಕರೆತಂದರು. ವಿಶಾಲವಾದ ಸಭಾಂಗಣವನ್ನು ಅಧ್ಯಕ್ಷರು ಪ್ರವೇಶಿಸಿದ ಕೂಡಲೆ, ಕರ್ಣಾಟಕದ ನಾನಾಪ್ರಾಂತಗಳಿಂದ ಬಂದಿದ್ದ ಸೋದರ-ಸೋದರಿಯರಾದ ಸಾಮಾಜಿಕರ ಕರತಾಡನವು ಅತ್ಯಾನಂದೋತ್ಸಾಹಗಳನ್ನುಂಟು ಮಾಡಿದುವು. ಸ್ವಾಗತಮಂಡಲದ ಅಧ್ಯಕ್ಷರೂ, ಶ್ರೀಯುತ ನರಸಿಂಹಾಚಾರ್ಯರೂ ಎತ್ತರವಾದ ಸ್ಥಳ (Platform) ದಲ್ಲಿದ್ದ ಆಸನಗಳನ್ನು ಸ್ವೀಕರಿಸಿದ ಕೂಡಲೆ, ನಿಯಮಿತರಾದ ಕೆಲವರು ಮಹನೀಯರು ಸ್ವಾಗತ ಪದ್ಯಗಳನ್ನು, ರಾಗ ತಾಳಗಳೊಡನೆ ಹಾಡಿ, ಸಾಮಾಜಿಕರ ಚಿತ್ತರಂಜನೆಗೊಳಿಸಿದರು.

|| ಸ್ವಾಗತ ಪದ ||

ರಾಗ—ಹಂಸಧ್ವನಿ; ತಾಳ—ಜಂಪೆ.

ಸ್ವಾಗತವು ಸ್ವಾಗತವು ಸ್ವಾಗತವು ಸಕಲರಿಗೆ |
ಬಾಗುತಲಿ ನಮಿಸುವೆವು ಕನ್ನಡಬಲ್ಲವರಿಗೆ ||

ಸಾಗುತಿಹ ಕನ್ನಡದ ನಾಡುನುಡಿ ಹೇವವದು |
ಬೇಗದಿಂದೆಮ್ಮೊಳನುರಾಗವಂ ಬಳೆಯಿಸುಗೆ || ೧ ||

ಒಂದೆ ತಾಯಿ ಸಮಗೆಂದು ಬಂಧುಗಳು ನಾವೊಂದು |
ಚಂದದಿಂದೈತಂದು ನಂದದಿಂ ಬಳಿಸಂದು ||

ಬಂದ ಕಾರ್ಯವನಿಂದು ಅಂದಗೊಳಿಸುವುದೆಂದು ।
ಮುಂದೊರೆಯೆ ಮನದಂದು ಬಂದಿರುವ ನಿಮಗೆ ॥ ೨ ॥
ಬಿಜ್ಜೆಗರ ಶ್ರಮದುಂಬಿದುಜ್ಜುಗದೆ ಬಳೆದಿರಲು ।
ಹಜ್ಜೆಯಂ ಮುಂದಿಟ್ಟು ಬಜ್ಜರದ ತೆರನುಡಿಯು ॥
ಸಜ್ಜಿಳಿಪವೋಲ್ ಮಾಳ್ಪ ಕಜ್ಜಮಂ ಕೈಕೊಂಡು ।
ಸಜ್ಜಾಗಿ ಬಂದಿರ್ಪ ಸಜ್ಜನರ ವೃಂದಕ್ಕೆ ॥ ೩ ॥

॥ ಈಶಸ್ತುತಿ ॥

ಜಯ ಜಯ ಜಯ ಭುವನೇಶ್ವರಿ ॥ ಪಲ್ಲ ॥ ಜಯ ಭುವನೇಶ್ವರಿ । ಜಯ ಮಾಹೇಶ್ವರಿ । ಜಯ ಕೃಪಾಕರಿ । ಶುಭಕರಿ । ಶ್ರೀಕರಿ॥ ಅನುಪಲ್ಲ ॥ ಭೂಸುರಮಾಧವ । ನಾಶಾಪಾಶವ । ನಾಶಗೊಳಿಸಿ ॥ ಸನ್ಯಾಸಿಯ ಮಾಡಿದೆ ॥ ೧ ॥ ವರವಿದ್ಯಾರ । ಣ್ಯರ ತಪಕೊಲಿದೌ । ಸುರಿಸಿದೆ । ಚಿನ್ನದ । ಸರಿಯಂ ಧರೆಯೊಳು ॥ ೨ ॥ ನೆರೆ ಕನ್ನಡದರ । ಸರ ಜೇಳ್ ಜಸಮಂ । ಧರೆಯೊಳು ಸಲೆಸು । ಸ್ಥಿರಗೊಳಿಸಿದವಳೆ ॥ ೩ ॥

ಸೀಸಪದ್ಯ.

(ಶ್ರೀಯುತ ಎಚ್. ನಾರಾಯಣರಾವ್, ಬಿ. ಎ., ಬಿ. ಎಲ್., ಮುಂಬಯಿ.)

ಧನ್ಯವಾಗಲಿ ನಮ್ಮ ಹಿರಿಯ ಕನ್ನಡನಾಡು । ಧಾನ್ಯಧನವಿಜ್ಞಾನ ಕೋಶವೆನಿಸಿ । ಕನ್ಯೆಯರೆ ಯುವರೆ ಮಾಹಾತ್ಮ್ಯವನು ಬಯಸುತ್ತ । ಮಾನ್ಯರಾಗುವ ಜನರದೇಶವೆನಿಸಿ ॥ ೧ ॥ ತಳಕಾಡಿನಿಂದ ಕಲ್ಯಾಣನಗರದವರೆಗೆ । ಹಳೆಯರಾಜ್ಯಗಳಿದನು ಭೂಷಿಸಿದುವು ॥ ಉಳಿದ ಬನವಾಸೆ ಬಾದಾಮಿ ಮನ್ನೆಯಖೇಟ । ಹಳಬೀಡುಹಂಪೆಯೇ ಶೋಭಿಸಿದುವು ॥ ೨ ॥ ರಕ್ಕಸರ ಕಲ್ಪನೆಯ ಶಿಲ್ಪಿಗಳು ಕಲ್ಲಿನಲಿ । ಅಕ್ಕಸಾಲಿಗರಂತೆ ಚಿತ್ರಿಸಿದರು ॥ ಅಕ್ಕದೇವಿಯ ಪರಿಯಬಲೆಯರು ಪುರುಷರಿಗೆ । ತಕ್ಕ ಸಾಮರ್ಥ್ಯವನು ತೋರಿಸಿದರು ॥ ೩ ॥ ಸುಕವಿಪಂಡಿತರ ವಿಜ್ಞಾನಕೆಲ್ಲರು ಮೆಚ್ಚಿ । ಶುಕಕೆ ನಾಡಿನ ಹೆಸರನೊಪ್ಪಿಸಿದರು ॥ ಅಕುಟಿಲರು ರಾಗಕ್ಕೆ ದೇಶದ ಹೆಸರನಿತ್ತು । ಸುಕಲಾವಿದರ ಯಶವ ಮಾನಿಸಿದರು ॥ ೪ ॥ ವರ ಧರ್ಮಶಾಸ್ತ್ರಗಳ ಟೀಕಿಸಿದ ಪಂಡಿತನ । ಹರಿಹರೋಪಾಸಕರು ಮೆರೆದ ನಾಡು ॥ ಪರಮಾತ್ಮನಾಳುಗಳೆ ವರವರ್ಣದವರೆಂಬ । ಗುರುಭಾವವನು ಸಾರಿದವರ ಬೀಡು ॥ ೫ ॥ ಭರತವರ್ಷದ ಹತ್ತುಕೋಟಿ ಜನರೆಲ್ಲೊಂದೆ । ಪರಿಪಕ್ವಭಾಷೆಯನು ಭಜಿಸುತಿಹರು । ತರತರದ ನವಜಾತ ಬೋಧಾಶಯಗಳಿಂದ । ಭರಿತರಾಗಿವರಿಂತು ಬೇಡುತಿಹರು ॥ ೬ ॥

ಇಷ್ಟಾದ ಮೇಲೆಸ್ವಾಗತಮಂಡಲದ ಅಧ್ಯಕ್ಷರಾದ ಶ್ರೀಯುತ ಸರದಾರ ಬುಳ್ಳಪ್ಪ ಬಸಂತರಾವ್ ಮಾಮಲೆ ದೇಸಾಯಿಯವರು ಈರೀತಿ ಭಾಷಣ ಮಾಡಿದರು :—

ಸ್ವಾಗತ ಮಂಡಲದ ಅಧ್ಯಕ್ಷರ ಭಾಷಣವು.

ಕರ್ಣಾಟಕ ಬಂಧು ಭಗಿನಿಯರೇ,

ಈ ನಮ್ಮ ಕರ್ಣಾಟಕ ಭಾಷಾಮಹೋತ್ಸವಕ್ಕೆ ತಾವೆಲ್ಲರೂ ಅತ್ಯಂತ ಉತ್ಸುಕತೆಯಿಂದ ದಯಮಾಡಿಸಿದುದಕ್ಕಾಗಿ ನಾನು ಇಲ್ಲಿಯ ಸ್ವಾಗತಮಂಡಲದ ಪರವಾಗಿ ತಮ್ಮೆಲ್ಲರಿಗೂ ಕೃತಜ್ಞತಾಪೂರ್ವಕವಾಗಿ ಅಭಿವಂದನೆಗಳನ್ನು ಸಮರ್ಪಿಸುತ್ತೇನೆ. ಧಾರವಾಡ ಜಿಲ್ಲೆಯು ತಮ್ಮಂಥ ಕರ್ನಾಟಕಾಭಿಮಾನಿಗಳನ್ನು ಕನ್ನಡ ಭಾಷಾಭೂಷಣರನ್ನು ಇಲ್ಲಿಗೆ ಬರಮಾಡಿಕೊಂಡು ಕನ್ನಡ ನುಡಿಯ ಸೇವೆಯನ್ನು ಕೈಲಾದಮಟ್ಟಿಗೆ ಮಾಡಬೇಕೆಂದು ಬಲುದಿವಸಗಳಿಂದ ಹಾತೊರೆಯುತ್ತಿತ್ತು. ಆ ಸುಯೋಗವು ಇಂದು ಬಂದೊದಗಿದುದಕ್ಕಾಗಿ ನಾವು ಪರಮೇಶ್ವರನನ್ನು ಅನನ್ಯಭಾವದಿಂದ ಭಜಿಸುತ್ತೇವೆ. ನಾವು ಧಾರವಾಡದವರು ಪಂಡಿತರೇನೂ ಅಲ್ಲ; ಆದರೂ ಸರಸ್ವತೀದೇವಿಯ ಸೇವೆಯನ್ನು ಕೈಲಾದಮಟ್ಟಿಗೆ ಮಾಡಲುತ್ಸುಕರಾಗಿ ತಮ್ಮಂಥ ಮಹನೀಯರನ್ನು ಕರೆಯಿಸಿಕೊಳ್ಳುವ ಸಾಹಸವನ್ನು ಮಾಡಿರುವೆವು. ತಾವು ನಮ್ಮ ಆಮಂತ್ರಣವನ್ನು ಸ್ವೀಕರಿಸಿ, ಶಾರೀರಕ ಹಾಗು ಆರ್ಥಿಕ ಕಷ್ಟನಷ್ಟಗಳನ್ನು ಗಮನಿಸದೆ, ದೂರದೂರ ದೇಶಗಳಿಂದ ಇಲ್ಲಿಗೆ ಬಂದು ಸಭಾಮಂಟಪವನ್ನು ಅಲಂಕರಿಸಿದುದಕ್ಕಾಗಿ ತಮ್ಮೆಲ್ಲರ ಉಪಕಾರವನ್ನು ನಾವು ಎಷ್ಟು ಸ್ಮರಿಸಿದರೂ ಸ್ವಲ್ಪವೇ. ತಮ್ಮಂಥ ಮಹನೀಯರ ಸೇವೆಯನ್ನು ತಮ್ಮ ಯೋಗ್ಯತೆಗೆ ತಕ್ಕಂತೆ ಮಾಡುವಲ್ಲಿ ನಾವು ಅಸಮರ್ಥರು. ಆದರೂ, ನಾವು ಆದರದಿಂದ ಅರ್ಪಿಸುವ ಅಲ್ಪಸತ್ಕಾರವನ್ನೇ ಸುದಾಮನ ಅವಲಕ್ಕಿಯಂತೆ ಪರಿಭಾವಿಸಿ ಸಂತೋಷದಿಂದ ಸ್ವೀಕರಿಸಬೇಕೆಂದು ತಮ್ಮೆಲ್ಲರಿಗೆ ಸವಿನಯ ಸಂಪ್ರಾರ್ಥನೆ.

ಮಹನೀಯರೇ,—ಈಗ ಸುಮಾರು ನಾಲ್ಕು ವರುಷಗಳ ಹಿಂದೆ ಪ್ರಾರಂಭವಾದ ಘೋರ ಯುದ್ಧವು ಶಾಂತವಾಗುವ ಲಕ್ಷಣಗಳು ಇನ್ನೂ ತೋರಲೊಲ್ಲವು. ಆದರೆ ಮಹಾಮಹಿಮರಾದ ನಮ್ಮ ಜಾರ್ಜ ಪ್ರಭುಗಳು ಈ ಪ್ರಚಂಡ ಯುದ್ಧದಲ್ಲಿ ಕೇವಲ ಪರೋಪಕೃತಿಗಾಗಿಯೇ ಸೇರಿರುವರೆಂಬುದು ನಮಗೆಲ್ಲ ಪೂರ್ಣವಾಗಿ ಮನವರಿಕೆಯಾಗಿರುವುದರಿಂದ 'ಯತೋ ಧರ್ಮಃ ತತೋ ಜಯಃ' ಎಂಬ ಸಾಮತಿಗೆ ಸರಿಯಾಗಿ, ಇಂದಿಲ್ಲ ನಾಳೆ ವಿಜಯಲಕ್ಷ್ಮಿಯು ಖಂಡಿತವಾಗಿ ನಮ್ಮ ಸಾರ್ವಭೌಮರ ಪಕ್ಷಕ್ಕೆ ಮಾಲೆಯನ್ನು ಹಾಕುವಳೆಂದು ನಾವೆಲ್ಲ ನೆರೆನಂಬಿದ್ದೇವೆ. ಜರ್ಮನಿಯ ದುರಾಶೆಗಳನ್ನು ಸಮೂಲವಾಗಿ ವಿನಾಶಪಡಿಸಲಿಕ್ಕೂ, ಆ ಲೋಕಕಂಟಕರ ಮದವನ್ನು ಮುರಿದು ಮಣ್ಣುಪಾಲುಮಾಡಲಿಕ್ಕೂ, ಸಕಲ ಭೂಮಂಡಲದ ಪ್ರಬಲರಾಷ್ಟ್ರಗಳೆಲ್ಲ ಭಯಂಕರವಾದ ಯುದ್ಧಯಾತನೆಗಳನ್ನು ಹಗಲಿರುಳೆನ್ನದೆ ಸಹಿಸುತ್ತ ರಣರಂಗದಲ್ಲಿ ಕಡಿದಾಡುತ್ತಿರುವಾಗ, ನಾವು ಮಾತ್ರ ಯಾರ ಭುಜಬಲದ ಮಹಿಮೆಯಿಂದ

ಈ ಸಭಾಮಂಟಪದಲ್ಲಿ ಶಾಂತರಾಗಿ ಕುಳಿತುಕೊಂಡು, ನಮ್ಮ ಮಾತೃಭಾಷೆಯು ಸೇವೆಯನ್ನು ಯಥಾಸಾಂಗವಾಗಿ ನಡೆಯಿಸುತ್ತಿರುವೆವೋ, ಆ ವಿಕ್ರಮಶಾಲಿಗಳಾದ ಬ್ರಿಟಿಷರ ಸಾಮ್ರಾಜ್ಯದ ಅಭೀಷ್ಟಚಿಂತನವನ್ನು ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವು.

ಮಹಾಶಯರೇ,—ಕರ್ಣಾಟಕವು ಪ್ರಾಚೀನ ಕಾಲದಿಂದ ವೈಭವಸಂಪನ್ನವಾಗಿ ಮೆರೆದ ರಾಷ್ಟ್ರವು. ಚಾಲುಕ್ಯರು, ರಾಷ್ಟ್ರಕೂಟರು, ಪಶ್ಚಿಮಚಾಲುಕ್ಯರು ಹಾಗೂ ವಿಜಯನಗರದ ಪ್ರಭುಗಳು ಇವರೇ ಮೊದಲಾದ ಕನ್ನಡ ಸಾರ್ವಭೌಮರು, ಗಂಗ, ಹೊಯಿಸಲ ಮೊದಲಾದ ತಂತಮ್ಮ ಮಹಾಮಾಂಡಲಿಕರಿಂದೊಡಗೂಡಿ ಸಾವಿರಾರು ವರ್ಷಗಳವರೆಗೆ ಕರ್ಣಾಟಕದ ಸಾಮ್ರಾಜ್ಯವನ್ನು ಧರ್ಮದಿಂದ ಆಳಿ ದಕ್ಷಿಣ ಹಿಂದು ಸ್ಥಾನದಲ್ಲಿ ಪ್ರಖ್ಯಾತರಾದರು. ಈ ಪ್ರಭುಗಳ ಪ್ರಬಲವಾದ ಆಶ್ರಯಬಲದಿಂದ ಕೊಬ್ಬೇರಿ ಕನ್ನಡ ನುಡಿಯು ಮಂದಾರವು ಕಾವ್ಯವ್ಯಾಕರಣ ಪುರಾಣೇತಿಹಾಸ ಗಳೇ ಮೊದಲಾದ ಅನೇಕ ಶಾಖೆಗಳಿಂದ ವಿಸ್ತಾರವಾಗಿ ಬೆಳೆದು, ಪ್ರತಿಯೊಂದು ಶಾಖೆ ಯಲ್ಲಿ ಪಂಪ, ಪೊನ್ನ, ರನ್ನ, ನಾಗವರ್ಮ, ಭಟ್ಟಾಕಲಂಕರೇ ಮೊದಲಾದ ಕವಿ ಶಿರೋಮಣಿಗಳ ಮನೋಹರವಾದ ಕಾವ್ಯಗಳೆಂಬ ಪುಷ್ಪಗುಚ್ಛಾದಿಗಳಿಂದ ಶೋಭಿ ಸುತ್ತ ಸಂಸ್ಕೃತದಂಥ ಪ್ರಾಚೀನ ಪ್ರೌಢಭಾಷೆಯ ಸಾಹಿತ್ಯದ ವರ್ಚಸ್ಸನ್ನು ಸಹ ಮರೆಮಾಡಿ ಬಿಟ್ಟಿತು. ಈ ಸ್ವಾಭಿಮಾನದ ಕಾರ್ಯದಲ್ಲಿ ಧಾರವಾಡದ ಸೀಮೆಯೂ ಪ್ರಾಚೀನ ಕಾಲದಿಂದ ಕರ್ಣಾಟಕ ಭಾಷಾಜನನಿಯ ಸೇವೆಯನ್ನು ಯಥೇಚ್ಛವಾಗಿ ಮಾಡುತ್ತ ಬಂದಿರುವುದು. ಕನ್ನಡ ನುಡಿಯ ಇತಿಹಾಸದ ತಂದೆಯಾದ ನೃಪ ತುಂಗನು ತನ್ನ ಕವಿರಾಜಮಾರ್ಗವೆಂಬ ಗ್ರಂಥದಲ್ಲಿ ವರ್ಣಿಸಿರುವ ಪಟ್ಟದಕಲ್ಲು, ಕೊಪ್ಪಳ, ಲಕ್ಷ್ಮೇಶ್ವರ, ಒಕ್ಕುಂದ ಎಂಬ ಪಟ್ಟಣಗಳ ನಡುವಿರುವ ಆ ತಿರುಳ್ಗನ್ನಡ ನಾಡೆಂದರೆ ಇದೇ. ಆದುದರಿಂದ ನಾವು ಅಚ್ಚಗನ್ನಡಿಗರೆಂದು ಅಭಿಮಾನದಿಂದ ಹೇಳಿ ಕೊಳ್ಳಬಹುದು. ಕನ್ನಡದ ಕಾಳಿದಾಸನೆನ್ನಿಸಿಕೊಳ್ಳುವ ಆದಿಪಂಪಕವಿಯು ನಮ್ಮ ಪುಲಿ ಗೆರೆ (ಲಕ್ಷ್ಮೇಶ್ವರ) ಯ ಅರಸನ ಆಶ್ರಯದಲ್ಲಿಯೇ ಇದ್ದನು. ಲಲಿತಪದಗಳಿಂದ ಯುಕ್ತವಾದ 'ಧರ್ಮಾಮೃತ' ವೆಂಬ ಗ್ರಂಥದ ಕರ್ತನಾದ ಆ ನಯಸೇನನೂ ಇಲ್ಲಿಯೇ ಮುಳಗುಂದದಲ್ಲಿ ವಾಸಿಸಿದ್ದನು. ನಾವೆಲ್ಲರು ನಿತ್ಯದಲ್ಲಿಯೂ ಪಠನ ಮಾಡಲು ಯೋಗ್ಯವಾದ ಕನ್ನಡ ಮಹಾಭಾರತವು ಕುಮಾರವ್ಯಾಸನಿಂದ ಗದುಗಿನ ವೀರನಾರಾಯಣನ ಸನ್ನಿಧಿಯಲ್ಲಿಯೇ ರಚಿತವಾಯಿತು. ಪರಮಭಾಗವತನಾದ ಕನಕದಾಸನು ಪರಮಾತ್ಮನ ಪಾದಾರವಿಂದದಲ್ಲಿ ರತನಾಗಿ ಕಾಗಿನೆಲೆಯಲ್ಲಿ ತಿರುಳ್ಗನ್ನಡದಿಂದ ಆತನನ್ನು ಭಜಿಸಿದನು. ನೀತಿಸಾರವೆಲ್ಲ ಸುಲಭವಾದ ಮಾತಿ ನಿಂದ ಸರ್ವರಿಗೂ ತಿಳಿಯುವಂತೆ ಉಪದೇಶ ಮಾಡಿದ ವೀರಶೈವಮತಾನುಯಾಯಿ ಯಾದ ಸರ್ವಜ್ಞಕವಿಯೂ ಇದೇ ಸೀಮೆಯ ಅಬಲೂರು ಎಂಬ ಗ್ರಾಮದಲ್ಲಿ ಜನ್ಮ ವೆತ್ತಿದನು. ಮಧುರವಾದ ವಾಣಿಯಿಂದ ವ್ಯವಹಾರಜ್ಞಾನವನ್ನು ಸಾಮಾನ್ಯರಿಗೂ ತಿಳಿಯುವಂತೆ ಶತಕರೂಪದಿಂದ ಬೋಧಿಸಿದ ವೀರಶೈವ ಸೋಮೇಶ್ವರನೂ ಪುಲಿಗೆರೆ ಯವನೇ. ಈ ರೀತಿಯಾಗಿ ನಮ್ಮ ನಾಡು ಕರ್ಣಾಟಕ ಸರಸ್ವತೀದೇವಿಯ ಕೃಪಾ

ಕಟಾಕ್ಷಕ್ಕೊಳಗಾಗಿ ಆಕೆಯ ಪ್ರಸಾದವನ್ನು ಪಡೆದು ಕರ್ಣಾಟಕಸಾಹಿತ್ಯಮಂಡಲದಲ್ಲಿ ಹೆಸರುವಾಸಿಯಾಗಿರುವುದು. ಈ ನಮ್ಮ ಪೂರ್ವಿಕರ ಅಭಿಮಾನದ ಬಲದಿಂದಲೇ ನಾವು ತಮ್ಮನ್ನು ಇಲ್ಲಿಗೆ ಬರಮಾಡಿಕೊಂಡಿದ್ದೇವೆ.

ಭಾಷಾಭಾಂಧವರೇ, ಹಿಂದಿನ ನಮ್ಮ ಆ ವೈಭವಕ್ಕೆ ಸದ್ಯದ ಸ್ಥಿತಿಯನ್ನು ಹೋಲಿಸಿ ನೋಡಿದರೆ, ಕನ್ನಡಿಗರಾದ ನಾವೆಲ್ಲರು ವಿಷಾದದಿಂದ ತಲೆತಗ್ಗಿಸಬೇಕಾಗಿರುವುದು. ಕನ್ನಡ ನುಡಿಯ ಸದ್ಯದ ದುರವಸ್ಥೆಯನ್ನು ನಾವು ಇಲ್ಲಿ ವಿವರವಾಗಿ ವರ್ಣಿಸುವ ಕಾರಣವಿಲ್ಲ. ಯಾವ ಭಾಷೆಯು ಒಂದಾನೊಂದು ಕಾಲದಲ್ಲಿ ಗೋದಾವರಿಯಿಂದ ಕಾವೇರಿಯವರೆಗೆ ಹಬ್ಬಿರುವ ವಿಶಾಲವಾದ ಸೀಮೆಯಲ್ಲಿ ಅವಿಚ್ಛಿನ್ನವಾಗಿ ಹರಡಿಕೊಂಡು ಘನತೆಯಿಂದ ಮೆರೆಯಿತೋ, ಯಾವ ಭಾಷೆಯು ಭರತಭೂಮಿಯ ಸುಸಂಸ್ಕೃತವಾದ ವಾಣಿಗಳಲ್ಲಿ ಕಾಲಾಂತರದಲ್ಲಿ ಅಗ್ರಸ್ಥಾನವನ್ನು ಪಡೆದಿತ್ತೋ, ಆ ನಮ್ಮ ಕನ್ನಡನುಡಿಯು ಕರ್ಮಮಹಿಮೆಯಿಂದ ದೈವದುರ್ವಿಲಾಸಕ್ಕೀಡಾಗಿ ಕ್ಷೀಣವಾಗುತ್ತ ನಡೆದು, ನಾಲ್ಕಾರು ನಾಡುಗಳಲ್ಲಿ ಹರಿದು ಹಂಚಿಹೋದುದರಿಂದ ಸದ್ಯಕ್ಕೆ ಅತ್ಯಂತ ವಿಪನ್ನಾವಸ್ಥೆಯನ್ನು ಹೊಂದಿದೆ. ವಿಜಯನಗರ ಸಾಮ್ರಾಜ್ಯದ ಅಳಿಗಾಲದ ಆರಂಭದಿಂದ ನಮಗೆ ಬಲವಾದ ರಾಜಾಶ್ರಯವು ತಪ್ಪಿಹೋಯಿತು. ಪ್ರಬಲ ರಾಜಾಶ್ರಯವನ್ನು ಹೊಂದಿದ ಹಿಂದುಸ್ಥಾನಿ, ಮಹಾರಾಷ್ಟ್ರ, ಇಂಗ್ಲೀಷ್ ಮೊದಲಾದ ಹೊಸ ಭಾಷೆಗಳು ನಮ್ಮ ನಾಡಿನಲ್ಲಿ ನುಗ್ಗಿದುವು. ಈ ಮೂಲಕ ಕನ್ನಡಭಾಷೆಯ ಅಭಿವೃದ್ಧಿಯು ಕುಗ್ಗಲಾರಂಭಿಸಿತು. ಈ ಭಾಗದ ದೇಶೀಯ ಸಂಸ್ಥಾನಗಳಲ್ಲಿರುವ ಕನ್ನಡಮಾತಾಡುವವರ ಸಂಖ್ಯೆಯು ಈಗ ಕಡಮೆಯಾಗುತ್ತ ನಡೆದಿದೆ. ಈ ಸಂಸ್ಥಾನಗಳಲ್ಲಿ ೧೮೭೨ ನೆಯ ಇಸವಿಯಲ್ಲಿ ಕನ್ನಡಿಗರ ಜನಸಂಖ್ಯೆಯು ಒಟ್ಟು ೫೮೩,೯೬೩ ಇತ್ತು. ಅದು ಈಗ ಸುಮಾರು ಅರ್ಧಕ್ಕೆ ಇಳಿದಿದೆ; ಅಂದರೆ ಈಗ ಅದು ೨೭೬,೯೬೮ ಆಗಿರುತ್ತದೆ. ಹೈದರಾಬಾದು ಸಂಸ್ಥಾನದಲ್ಲಿ ಸುಮಾರು ೧೬ ಲಕ್ಷ ಕನ್ನಡಿಗರಿದ್ದು, ಅವರು, ಅವರ ಮಾತೃಭಾಷೆಯು ಕನ್ನಡವೆಂಬುದನ್ನು ಕೂಡ ಮರೆಯುತ್ತಿದ್ದಾರೆ. ಸಾರಾಂಶ, ಕನ್ನಡನಾಡು ವಿಸ್ತಾರವಾಗುವ ಬದಲು ಸಂಕೋಚವನ್ನು ಹೊಂದುತ್ತಿರುವುದು. ಹಿಂದೆ ನಮ್ಮ ನುಡಿಯು ವಿಶಾಲವಾದ ಪ್ರದೇಶದಲ್ಲಿ ಹಬ್ಬಿದ್ದುದರಿಂದ ಕಾಲಾಂತರದಲ್ಲಿ ಹಳಗನ್ನಡ, ಹೊಸಗನ್ನಡ ಇಲ್ಲವೆ ಉತ್ತರದಕ್ಷಿಣ ಮಾರ್ಗಗಳೆಂಬ ಸಹಜವಾದ ಗ್ರಾಂಥಿಕ ಕನ್ನಡ ಭೇದಗಳು ಪಂಡಿತರಿಗೆ ಗೋಚರವಾದರೂ, ಕನ್ನಡ ನುಡಿಯ ಮಹಾಪ್ರವಾಹವು ಯಾವತ್ತು ಕರ್ನಾಟಕದಲ್ಲಿ ಒಂದೇ ಒಂದಾಗಿ ಕಂಗೊಳಿಸುತ್ತಿತ್ತು. ಆದರೆ ಸದ್ಯಕ್ಕೆ ಈ ಪ್ರವಾಹವು ಮೈಸೂರುಕನ್ನಡ, ಮಂಗಳೂರುಕನ್ನಡ, ಧಾರವಾಡದ ಕನ್ನಡ, ಹೈದರಾಬಾದುಕನ್ನಡ, ಎಂಬ ಶಾಖೆಗಳಾಗಿ ಕ್ಷೀಣವಾಗುತ್ತ ನಡೆದಿರುವುದು. ಇನ್ನು ಕೆಲಕಾಲದವರೆಗೆ ನಾವು ಇದನ್ನು ಹೀಗೆಯೇ ಹರಿಯಗೊಟ್ಟರೆ ಈ ಮುಖ್ಯ ಶಾಖೆಗಳಿಗೆ ಉಪಶಾಖೆಗಳು ಒಡೆದು ಸಣ್ಣಪುಟ್ಟ ಹಳ್ಳಸರವುಗಳಾಗಿ ಅಲ್ಲಲ್ಲಿ ಬತ್ತಿ ಹರಿವೆ ಒಡೆದ ಹಂಚಿನಂತೆ ಇದರ ಹಾಡಾಗುವುದೆಂದು ನಿಸ್ಸಂದೇಹವಾಗಿ ಹೇಳಲು ಕಷ್ಟವಾಗುವುದು. ಆದುದರಿಂದ ಈ ಸ್ವಚ್ಛಂದ ಗಮನಕ್ಕೆ ಅಲ್ಲಲ್ಲಿ ತಡೆಗಳನ್ನು ಹಾಕಿ

ಸದ್ಯದ ಕನ್ನಡದಲ್ಲಿ ಕಾಣುವ ಈ ಬಹುರೂಪತೆಯನ್ನು ನಷ್ಟಪಡಿಸಿ, ಏಕರೂಪತೆಯನ್ನು ನೆಲೆಗೊಳಿಸುವ ಪ್ರಶ್ನವು ನಮ್ಮೆಲ್ಲರಿಗೆ ಅತಿಶಯಮಹತ್ವದ್ದಾಗಿರುವುದು. ಗೃಹಗೋಷ್ಠಿಗಳಲ್ಲಿ ನಾನು ತಾನೆಂದು ಮುಂದೆ ಬರುತ್ತಲಿರುವ ತೆಲುಗು, ತಮಿಳು ಮೊದಲಾದ ಆಪ್ತಭಾಷೆಗಳೂ ವಿದ್ಯಾವ್ಯಾಸಂಗಗಳಲ್ಲಿ ಕರೆಯದಿದ್ದರೂ ಬರದೆಬಿಡುವವರಲ್ಲವೆಂದು ಒಳನುಗ್ಗುವ ಮಹಾರಾಷ್ಟ್ರ ಹಿಂದುಸ್ಥಾನೀ ಮೊದಲಾದ ಸಾಹಸಭಾಷೆಗಳೂ, ಮನೆವಾರ್ತೆಯಲ್ಲಾಗಲಿ, ವಿದ್ಯಾವ್ಯಾಸಂಗಗಳಲ್ಲಾಗಲಿ, ಬೇಕಾದಲ್ಲಾಗಲಿ, ಹೊಟ್ಟೆಯಿರುವವರೆಗೆ ನಾನಿಲ್ಲದೆ ನಿನಗಾರು ಗತಿಯೆಂದು ಹಕ್ಕಿನಿಂದ ಕೈಬೀಸಿ ಬರುವ ಇಂಗ್ಲೀಷ್‌ಭಾಷೆಯೂ, ಕಾರಣಾಂತರಗಳಿಂದ ಪ್ರಬಲವಾಗಿ ನಮ್ಮ ಭಾಷೆಯನ್ನು ಹೇಳಿಕೇಳಿ ಇಲ್ಲವೆ ಹೆದರಿಸಿ, ಸದ್ದಿಲ್ಲದೆ ನುಂಗಿ ನೀರು ಕುಡಿಯಲಿಕ್ಕೆ ನಿಂತಿರುವುವು. ಇಂಥ ಹೀನಸ್ಥಿತಿಯಲ್ಲಿ ಬಳಲುತ್ತಿರುವ ಭಾಷಾಮಾತೆಯ ದುರ್ದಶೆಯನ್ನು ಹೋಗಲಾಡಿಸುವ ಪವಿತ್ರಕಾರ್ಯವನ್ನು ಆಕೆಯ ಮಕ್ಕಳಾದ ನಾವಲ್ಲದೆ ಮತ್ತಾರು ಕೈಕೊಳ್ಳಬೇಕು? ಹಳಗನ್ನಡಕ್ಕೂ, ಹೊಸಗನ್ನಡಕ್ಕೂ, ಇರುವ ಭೇದದ ಚರ್ಚೆ, ಭಾಷಾ ಸೀಮೆಯ ಮೇಲೆ ಬೀಳುತ್ತಿರುವ ಪರಭಾಷೆಗಳ ದಾಳಿಗಳನ್ನು ಮುರಿಯುವ ಯೋಚನೆ, ಮುಂದೆ ಕನ್ನಡನುಡಿಗೆ ಬರಬಹುದಾದ ಸ್ವರೂಪ, ನೂತನ ವಿಚಾರಗಳಿಗೆ ತಕ್ಕ ಶಬ್ದಸಂಯೋಜನಗಳ ವಿಚಾರ, ಶಾಸ್ತ್ರೀಯ ಪರಿಭಾಷೆಯನ್ನು ನಿಶ್ಚಯಿಸುವ ಆವಶ್ಯಕತೆ, ವಿದ್ಯಾಭ್ಯಾಸದಲ್ಲಿ ಕನ್ನಡಕ್ಕೆ ಕೊಡಬೇಕಾದ ಸ್ಥಾನ, ಭಾಷಾ ಸಾಮ್ರಾಜ್ಯದಲ್ಲಿ ಒಕ್ಕಟ್ಟಾಗುವ ಉಪಾಯ—ಇವೇ ಮುಂತಾದ ನೂರಾರು ಮಹತ್ವದ ಪ್ರಶ್ನೆಗಳು ಈ ಕೆಲಸವನ್ನು ಸ್ವೀಕರಿಸುವವರ ಮುಂದೆ ನಿಲ್ಲುತ್ತವೆ. ಇವೆಲ್ಲ ಪ್ರಶ್ನೆಗಳನ್ನು ಸಮರ್ಪಕವಾಗಿ ಬಿಡಿಸಲಿಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ಭಾಗಗಳ ಕನ್ನಡಿಗರು ಒಟ್ಟುಗೂಡಿ ವಿಚಾರಮಾಡುವುದು ಅತ್ಯಾವಶ್ಯಕವು. ಈ ಬಗೆಯಾಗಿ ಒಟ್ಟುಗೂಡುವ ಉದ್ದೇಶದಿಂದ ಧಾರವಾಡಸ್ಥರು ೧೯೦೭ ನೆಯ ಇಸವಿಯಲ್ಲಿ "ಕರ್ಣಾಟಕ ಗ್ರಂಥಕರ್ತರ ಸಮ್ಮೇಲನ" ವೆಂಬ ಹೆಸರಿನಿಂದ ಎಲ್ಲ ಭಾಗಗಳ ವಿದ್ವಜ್ಜನರ ಒತ್ತಟ್ಟಿಗೆ ಕೂಡಿಸಲು ಪ್ರಯತ್ನಿಸಿದರು. ಎರಡು ವರ್ಷ ಈ ಸಮ್ಮೇಲನವು ಈ ನಮ್ಮ ಧಾರವಾಡದಲ್ಲಿ ಕೂಡಿಸಲ್ಪಟ್ಟಿತು. ಆದರೆ ಕರ್ಣಾಟಕದ ಬೇರೆಬೇರೆ ಭಾಗಗಳಲ್ಲಿರುವ ಪಟ್ಟಣಗಳಲ್ಲಿ ವಿದ್ವಜ್ಜನರ ಸಮ್ಮೇಲನಗಳನ್ನು ವರುಷಾನುವರುಷ ಕೂಡಿಸುವುದರಿಂದಲೇ ನಮ್ಮಮೂಲ ಉದ್ದೇಶವು—ಅಂದರೆ ಬೇರೆಬೇರೆ ಪ್ರಾಂತಗಳಲ್ಲಿರುವ ಕನ್ನಡಿಗರಲ್ಲಿ ಬಳಿಕೆಯು ಬೆಳೆದು ಭಾಷೋನ್ನತಿಯಕಾರ್ಯವು—ಸಫಲವಾಗುವಂತಿರುವುದರಿಂದ, ಮೈಸೂರು ಕರ್ಣಾಟಕದ ಕೇಂದ್ರಸ್ಥಾನವಾಗಿರುವ ಬೆಂಗಳೂರಿನಲ್ಲಿ ಸಮ್ಮೇಲನವನ್ನು ಕೂಡಿಸಲಿಕ್ಕೆ ಧಾರವಾಡದವರು ನಾಲ್ಕಾರು ವರುಷ ಸಾಹಸಪಟ್ಟರು. ಕೊನೆಗೆ ಮೈಸೂರು ಪ್ರಾಂತದ ಮಹನೀಯರು ಅತ್ಯಂತ ಉತ್ಸಾಹದಿಂದ ಈ ಮಹತ್ಕಾರ್ಯವನ್ನು ಕೈಕೊಂಡದ್ದರಿಂದಲೂ, ಇದರಲ್ಲಿ ಅವರಿಗೆ ಶ್ರೀಮನ್ ಮೈಸೂರು ಮಹಾರಾಜರವರಂಥ ಪರಮಸಮರ್ಥರಾದ ಕನ್ನಡಭಾಷಾಭಿಮಾನಿಗಳ ಮಹದಾಶ್ರಯದ ಬೆಂಬಲವು ಎಲ್ಲ ಕನ್ನಡಿಗರ ಸುದೈವದಿಂದ ದೊರೆತದ್ದರಿಂದಲೂ, ಇದಕ್ಕೆ ತೀವ್ರವಾಗಿಯೇ ಸ್ಥಿರಸ್ವರೂಪವು ಒದಗಿ, ಕರ್ಣಾಟಕಸಾಹಿತ್ಯಪರಿಷತ್ತೆಂಬ ಸಂಸ್ಥೆಯು

ಸ್ಥಾಪಿತವಾಯಿತು. ಕಳೆದವರುಷ ಯುವರಾಜ ಮಹಾಶಯರು ಸೂಚಿಸಿದ ಮೇರೆಗೆ ಧಾರವಾಡಸ್ಥರಾದ ನಾವು ಈಸಾರಿ ಈ ಭಾರವನ್ನು ಹೊತ್ತು ತಮ್ಮೆಲ್ಲರನ್ನೂ ಇಲ್ಲಿಗೆ ಬರಮಾಡಿಕೊಂಡಿರುವೆವು.

ಸಹೋದರರೇ,—ಈ ವರುಷದ ಸಮ್ಮೇಲನದಲ್ಲಿ ಕರ್ಣಾಟಕಸಾಹಿತ್ಯಕ್ಕೆ ಆನುಷಂಗಿಕವಾದ ಕೆಲವು ಸಂಗತಿಗಳ ಬಗ್ಗೆ ವಿಮರ್ಶಿಸಲು ಕನ್ನಡಿಗರಿಗೆಲ್ಲ ಅನುಕೂಲ ಮಾಡಿಕೊಡಬೇಕೆಂದು, ಯೋಚಿಸಿ, ನಾವು ಪ್ರಯತ್ನಪಟ್ಟೆವು. ಕರ್ಣಾಟಕದ ಪ್ರಾಚೀನ ಇತಿಹಾಸದ ಸಾಹಿತ್ಯಪ್ರದರ್ಶನವನ್ನು ಮಾಡಬೇಕೆಂಬ ನಮ್ಮ ಕೋರಿಕೆಯು ನಾಲ್ಕಾರು ತಿಂಗಳುಗಳಿಂದ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಆದರೆ ಪ್ರಾಚೀನಕಾಲದ ಕರ್ಣಾಟಕವೈಭವದ ಹೆಗ್ಗುರುತುಗಳಾದರೂ ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಚಿತ್ರಿಸಿರುವುದು ನಮ್ಮೆಲ್ಲರ ಏಳಿಗೆಗೆ ಅತ್ಯವಶ್ಯವಿರುವುದರಿಂದ ಸದ್ಯಕ್ಕೆ ಅಂಧಕಾರದಲ್ಲಿ ಅಡಗಿರುವ ನಮ್ಮ ಪೂರ್ವದ ಘನತೆಯ ಕುರುಹುಗಳನ್ನು ಪ್ರಕಾಶಪಡಿಸಲು ಮ್ಯಾಜಿಕ್‌ಲ್ಯಾಂಟರ್ನದ ಚಿತ್ರಪಟಗಳಂಥ ಉಪಯುಕ್ತ ಸಾಧನವು ಬೇರೆ ಯಾವುದೂ ಕಾಣದ್ದರಿಂದ ಆ ಮಾರ್ಗದಿಂದ ಪ್ರಯತ್ನಿಸಿರುವೆವು. ಕನ್ನಡ ಸಾಹಿತ್ಯದ ಅಂಗಗಳೆಂದು ಸಕೃದ್ದರ್ಶನಕ್ಕೆ ಎಂದೂ ಕಾಣದ ನಾಟಕ, ಕೀರ್ತನ ಮೊದಲಾದುವುಗಳ ಮಹತ್ವವು ವಿದ್ವಜ್ಜನರ ಲಕ್ಷ್ಯಕ್ಕೆ ಬಂದು, ಅವುಗಳ ಬೇರೆಬೇರೆ ಸಮ್ಮೇಲನಗಳಾಗುವವರೆಗೆ ಅವುಗಳ ಬಗ್ಗೆ ಸಾಹಿತ್ಯಸಮ್ಮೇಲನದವರೇ ವಿಚಾರಿಸಿ, ದಾರಿ ತೋರಿಸುವುದು ಅವಶ್ಯವಾಗಿ ತೋರಿದ್ದರಿಂದ, ಪ್ರಸಿದ್ಧವಾದ ನಾಟಕ ಕರ್ತರಿಗೂ, ನಾಟ್ಯಕಲಾಭಿಜ್ಞರಿಗೂ, ನಾಟಕ ಸಂಘದವರಿಗೂ, ಕೀರ್ತನಕಾರರಿಗೂ ಆಮಂತ್ರಣ ಕೊಟ್ಟು ಕೆಲವರನ್ನು ಕರೆಯಿಸಿಕೊಂಡು ಕನ್ನಡ ನಾಟಕ ಕೀರ್ತನಗಳ ಸದ್ಯಃಸ್ಥಿತಿಯನ್ನು ತಮ್ಮೆಲ್ಲರ ಮುಂದೆ ಇಟ್ಟು ಅವುಗಳ ಸುಧಾರಣೆಯ ಬಗ್ಗೆ ಕೈಕೊಳ್ಳಬಹುದಾದ ಉಪಾಯಗಳನ್ನು ಕುರಿತು ಸರ್ವಸಮ್ಮತವಾದ ಅಭಿಪ್ರಾಯವನ್ನು ಪಡೆಯಬೇಕೆಂದು ಪ್ರಯತ್ನ ಮಾಡಿರುವೆವು. ಈ ಕೆಲಸಗಳಲ್ಲಿ ತಮ್ಮೆಲ್ಲರ ಸಹಾಯವು ನಮಗೆ ದೊರೆಯುವುದೆಂದೂ ಕರ್ಣಾಟಕಸಾಹಿತ್ಯದ ಸರ್ವತೋಮುಖವಾದ ಪ್ರಗತಿಗೆ ಆರಂಭವಾಗುವುದೆಂದೂ ನಾವು ದೃಢವಾಗಿ ನಂಬಿದ್ದೇವೆ.

ಕನ್ನಡಿಗರೇ,—ಇದು ನವಯುಗವು. ಈಗ ಜನರ ಆಚಾರವಿಚಾರಗಳು ಭರದಿಂದ ಬದಲಾವಣೆ ಹೊಂದುತ್ತಿರುವುವು. ಜ್ಞಾನಾಭಿವೃದ್ಧಿಯು ಈಗ ಬಹುಮುಖವಾಗಿ ಬಲುಬತ್ತರದಿಂದ ಮುಂದುವರಿಯುತ್ತಿರುವುದು. ಆದರೆ ಪ್ರತಿಯೊಂದು ಬಗೆಯ ಜ್ಞಾನಕ್ಕೂ, ಚೈತನ್ಯಕ್ಕೂ ಭಾಷೆಯೇ ಮೂಲಾಧಾರವಾದುದರಿಂದ, ಹೊಸ ಪರಿಸ್ಥಿತಿಗೆ ಅನುರೂಪವಾದ ಹೊಸ ಹೊಸ ವಿಚಾರ ಸರಣಿಗಳೂ, ಶಬ್ದಗಳೂ ಪ್ರಚಾರದಲ್ಲಿ ಬರುತ್ತಲಿರುವುವು. ಹಾಗೂ ನಮ್ಮ ಭಾಷೆಯು ವಿಲಕ್ಷಣವಾದ ಕ್ರಾಂತಿಯ ಕಾಲಚಕ್ರದಲ್ಲಿ ಸಿಲುಕಿರುವುದು. ಇವೆಲ್ಲ ಸಂಗತಿಗಳ ಪರಿಣಾಮವು ಭಾಷೆಯ ಮೇಲೆ ಆಗದೆ ಹೇಗೆ ಉಳಿಯುವುದು? ಜನಾಂಗಗಳು ಹೊಂದುತ್ತಿರುವ ಪ್ರಗತಿಯು ಅವರವರ ಭಾಷೆಯಲ್ಲಿ ಪ್ರತಿರೂಪವಾಗಿ ತೋರದುಳಿಯದು. ಹೊಸ ಧ್ಯೇಯ, ಹೊಸ ವಿಚಾರ, ಹೊಸ ಹೊಸ ಶೋಧ, ಹೊಸ ಹೊಸ ಆಶೆ, ಹೊಸ ಹೊಸ ಆಕಾಂಕ್ಷೆ, ಹೊಸ ರೀತಿ ಈ ಮೇರೆಗೆ ಯಾವ ದೃಷ್ಟಿಯಿಂದ ನೋಡಿದರೂ ನವೀನತೆಯೇ

ಗೋಚರವಾಗುತ್ತಿರಲು ನಾವು ನಮ್ಮ ಭಾಷೆಗೆ ಮಾತ್ರ ಹೊಸ ಸಂಸ್ಕಾರವು ಆಗಕೂಡ ದೆಂದು ಹಟಹಿಡಿದರೆ ಸಾಗಬಹುದೇ ? ಆದಕಾರಣ ನಮ್ಮ ಭಾಷೆಗೆ ಕೂಡ ಈಗಿನ ಕಾಲಕ್ಕನುರೂಪವಾಗಿ ಹೊಸರೂಪವನ್ನು ತಾಳಗೊಡುವುದು ವಿಹಿತವಾದದ್ದು. ಭಾಷೆಯಲ್ಲಿ ಬಲವಾದ ಬದಲಾವಣೆಗಳು ಆಗುವುದನ್ನು ಕಂಡು ಬೆದರಿ ಬಾಯ್ಬಿಡುವ ಕಾರಣವಿಲ್ಲ. ಪುರಾತನ ಕಾಲದಿಂದ ರೂಢವಾಗಿರುವ ನಮ್ಮ ಭಾಷೆಯ ಆತ್ಮದಂ ತಿರುವ ವಾಕ್ಯರಚನೆ, ಶಬ್ದಸಂಯೋಜನೆ ಮೊದಲಾದ ವಿಶಿಷ್ಟ ಭಾಷಾಮರ್ಯಾದೆ ಗಳನ್ನು ಕಾಯ್ದುಕೊಂಡು ಭಾಷೆಯ ಶರೀರದಂತಿರುವ ಇತರ ಬಾಹ್ಯೋಪಕರಣಗಳಲ್ಲಿ ಹೆಚ್ಚುಕಡಮೆಯಾಗುವಂತೆ ನೋಡಿಕೊಳ್ಳುವುದೇ ನಮ್ಮ ಕರ್ತವ್ಯವು. ಆದರೆ, ಸದ್ಯದ ಕನ್ನಡನುಡಿಯ ಬೇರೆಬೇರೆ ಶಾಖೆಯವರು ತಮ್ಮ ನಾಡಿನ ಕನ್ನಡವೇ ಶುದ್ಧ ಕನ್ನಡವೆಂದೂ, ಮಧುರಕನ್ನಡವೆಂದೂ, ಮೂಲಕನ್ನಡವೆಂದೂ, ಪ್ರೌಢಕನ್ನಡ ವೆಂದೂ, ಪ್ರಮಾಣಕನ್ನಡವೆಂದೂ, ತಿಳಿಗನ್ನಡವೆಂದೂ ಬಗೆದು ಅಭಿಮಾನದಿಂದ ಉಬ್ಬಿ ಕೂಡುವುದರಿಂದ ಭಾಷೆಯೂ, ಜನಾಂಗವೂ ಉನ್ನತಿಯನ್ನು ಹೊಂದಲಾರ ವೆಂದು ತಮ್ಮಂಥ ವಿದ್ವಾಂಸರಿಗೆ ಒಡೆದು ಹೇಳಬೇಕಾಗಿಲ್ಲ. ಒಟ್ಟಿನಮೇಲೆ, ಭಾಷಾ ಸಾಮ್ರಾಜ್ಯದಲ್ಲಿ ಕನ್ನಡಿಗರೆಲ್ಲರು ಐಕ್ಯವನ್ನು ಹೊಂದಿ ನುಡಿಯಲ್ಲಿ ಮಾತ್ರವಲ್ಲದೆ ನಡೆ ಯಲ್ಲಿಯೂ ಪೌರುಷವನ್ನು ತೋರಿಸಬೇಕಾಗಿದೆ. ಸುದೈವದಿಂದ ಸಾಹಿತ್ಯಸಮ್ಮೇ ಲನವು ಆರಂಭಿಸಲ್ಪಟ್ಟಂದಿನಿಂದ ಈ ಶುಭಕಾರ್ಯಕ್ಕೆ ಮೊದಲಿಟ್ಟಿದೆ. ಸಮ್ಮೇಲನವು ಮಾಡಿದ ಮೊದಲಿನ ಮಹತ್ಕಾರ್ಯವು ಇದೇ ಸರಿ. ಇನ್ನು ಕನ್ನಡಿಗರಾದ ನಾವೆಲ್ಲರೂ ಸದಭಿಮಾನದಿಂದ ಒಟ್ಟುಗೂಡಿ ಬಂಧುಭಾವವನ್ನು ದೃಢಪಡಿಸಿಕೊಂಡು, ಕನ್ನಡ ಸಾಹಿತ್ಯವನ್ನು ಸರ್ವತೋಮುಖವಾಗಿ ಬೆಳೆಯಿಸಿ, ನಮ್ಮ ಶ್ರೇಯೋಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕು. ಈ ಮಂಗಲಕರವಾದ ಕಾರ್ಯವನ್ನು ನೆರವೇರಿಸಲಿಕ್ಕೆ ತಮ್ಮಂಥ ಸಮರ್ಥರಾದ ಅಭಿಮಾನ ಶೀಲರೇ ಅಧಿಕಾರಿಗಳು; ಭಾಷಾದೇವಿಯ ಸೇವೆಯೇ ವಿಷ ಯ ; ನಾವೆಲ್ಲರೂ ಕನ್ನಡಿಗರೆಂಬ ಬಂಧುತ್ವವೇ ಸಂಬಂಧ, ಹಾಗೂ ಕನ್ನಡಿಗರ ಏಳಿ ಗೆಯೇ ಪ್ರಯೋಜನ, ಹೀಗೆ ಸರ್ವತೋಪರಿ ಸುಖದಾಯಕವಾದ ಈ ವಿಶೇಷೋತ್ಸವ ಪ್ರಸಂಗದೊಳಗೆ ತಮ್ಮ ಸತ್ಕಾರದ ಬಗ್ಗೆ ಏನಾದರೂ ಕೊಂಕು ಕೊರತೆಗಳು ತೋರಿ ಬಂದಲ್ಲಿ, ಮಹನೀಯರ ಸಹಜವೃತ್ತಿಗನುಸರಿಸಿ ಅವನ್ನೆಲ್ಲ ಕ್ಷಮಿಸಿ ಆತ್ಮೋನ್ನತಿ ರಾಷ್ಟ್ರೋನ್ನತಿಗಳಿಗೆ ಮೂಲಭೂತವಾದ ಈ ಹೊತ್ತಿನ ಮಾತೃಭಾಷೋನ್ನತಿಯ ಪವಿತ್ರಕಾರ್ಯವನ್ನು ಇನ್ನು ಮುಂದೆ ಸಾಗಿಸಿ ಎಡರಿಲ್ಲದೆ ಕೊನೆಗಾಣಿಸುವಿರೆಂದು ತಮ್ಮೆಲ್ಲರನ್ನು ನಮ್ರಭಾವದಿಂದ ಪ್ರಾರ್ಥಿಸಿ ವಿರಮಿಸಲು ತಮ್ಮೆಲ್ಲರ ಅಪ್ಪಣೆಯನ್ನು ಬೇಡುವ,

ಕನ್ನಡಿಗರ ಕೃಪಾಭಿಲಾಷಿ,

ಬುಳ್ಳಪ್ಪಾ ಬಸವಂತರಾವ ಮಾಮಲೇದೇಸಾಯಿ.

ಹಂದಿಗನೂರ ಸ್ವಾಗತಮಂಡಲದ ಅಧ್ಯಕ್ಷ.

ಅನಂತರ ಶ್ರೀಯುತ ಆರ್. ಎಚ್. ದೇಶಪಾಂಡೆ, ಎಂ. ಎ. ಯವರು, ಶ್ರೀಯುತ ಆರ್. ನರಸಿಂಹಾಚಾರ್ಯರು ಕರ್ಣಾಟಕ ಭಾಷೆಗೆ ಮಾಡಿರುವ ಉಪಕಾರಗಳನ್ನು ವರ್ಣಿಸಿ, ಶ್ರೀಯುತ ಆಚಾರ್ಯರು ಸಮ್ಮೇಳನದ ಅಗ್ರಾಸನವನ್ನು ವಹಿಸಲು, ಎಷ್ಟು ಸಮರ್ಥರೆಂಬುದನ್ನು ತೋರ್ಪಡಿಸಿ ಅಗ್ರಾಸನವನ್ನು ವಹಿಸಲು, ಸಾಮಾಜಿಕರ ಸಮ್ಮತಿಯನ್ನು ಕೊಡಲು ಸೂಚಿಸಿದರು. ಇವರ ಸೂಚನೆಯನ್ನು ಮ॥ ಆರ್. ರಘುನಾಥರಾಯರು ಶ್ರೀಯುತ ಆಚಾರ್ಯರಿಗೆ ಕರ್ಣಾಟಕ ಭಾಷೆಯಲ್ಲಿರುವ ಜ್ಞಾನವನ್ನೂ, ಅದಕ್ಕಾಗಿ ಅವರು ಪಟ್ಟ ಶ್ರಮವನ್ನೂ ವರ್ಣಿಸುವುದರ ಮೂಲಕ ಅನುಮೋದಿಸಲು, ಶ್ರೀ ಕೃಷ್ಣಸೂಕ್ತಿ ಸಂಪಾದಕ ಶ್ರೀಯುತ ಎಣ. ರಾಜಗೋಪಾಲ ಕೃಷ್ಣರಾಯರೂ, ಮದಕೆರಿಯ ಮ॥ ಸಿ. ವೆಂಕಪ್ಪಯ್ಯನವರೂ ಪುಷ್ಟೀಕರಿಸಿದರು. ಸಾಮಾಜಿಕರೆಲ್ಲರೂ ಕರತಾಡನದಿಂದ ಒಪ್ಪಲು, ಶ್ರೀಯುತ ಆಚಾರ್ಯರು ಅಗ್ರಾಸನವನ್ನು ಸ್ವೀಕರಿಸಿದರು.

ಸ್ವಾಗತಮಂಡಲದ ಕಾರ್ಯದರ್ಶಿಗಳು, ಸಮ್ಮೇಳನದ ಅಭ್ಯುದಯವನ್ನು ಬಯಸಿ, ಶ್ರೀಶ್ರೀ ಕರವೀರಮಠಾಧಿಪತಿಗಳೂ, ಮೈಸೂರು ಶ್ರೀಮದ್ ಯುವರಾಜರವರೂ, ಮತ್ತು ಶ್ರೀಯುತ ಸಿ. ಆರ್. ರೆಡ್ಡಿಯವರೇ ಮೊದಲಾದ ದೊಡ್ಡಮನುಷ್ಯರು ಕಳುಹಿದ ಸಂದೇಶಗಳನ್ನು ಓದಿ, ಸಭಾಕಾರ್ಯವನ್ನು ಆರಂಭಿಸಲು, ಸಾಮಾಜಿಕರ ಅನುಮತಿಯನ್ನು ಪ್ರಾರ್ಥಿಸಿದರು. ಅನಂತರ ಶ್ರೀಯುತ ಆರ್. ರಘುನಾಥರಾಯರು ೧೯೧೭ ನೆಯ ಸಂವತ್ಸರದ ಕರ್ಣಾಟಕ ಸಾಹಿತ್ಯ ಸಮ್ಮೇಳನದ ವರದಿಯನ್ನು ಕೆಳಗೆ ಕಂಡಂತೆ ಓದಿದರು.

ಪಿಂಗಳಸಂವತ್ಸರದ ವರದಿ (೧೯೧೭—೧೮)

ಕಳೆದವರ್ಷದಲ್ಲಿ " ಈ ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತು ೧೯೧೫ ನೆಯ ಇಸವಿ ಮೇ ತಿಂಗಳಲ್ಲಿ ಹುಟ್ಟಿದುದರಿಂದ ಇನ್ನೂ ಶೈಶವಾವಸ್ಥೆಯಲ್ಲಿಯೇ ಇರುತ್ತದೆ; ಆದರೂ ಈ ದ್ವಿತೀಯ ವರ್ಷದಲ್ಲಿ ನಡೆದಿರುವ ಕೆಲಸದ ಮೊತ್ತವನ್ನೂ ರೀತಿಯನ್ನೂ ಗುಣವನ್ನೂ ಪರಿಶೀಲಿಸುವಲ್ಲಿ ಧೈರ್ಯಸ್ಥೈರ್ಯಾರೋಗ್ಯಾದಿ ಗುಣಗಳಿಂದ ಶೋಭಿಸುವ ಶಿಶುವಂತೆ ನಮ್ಮ ಪರಿಷತ್ತು ಇರುವುದಕ್ಕಾಗಿ ಸಂತೋಷಪಡಬೇಕಾಗಿದೆ" ಎಂದು

ಶ್ರುತಪಡಿಸಿದೆವು. ಈ ಪಿಂಗಳಸಂವತ್ಸರದಲ್ಲಿಯೂ ನಮ್ಮ ಪರಿಷತ್ತು ಧೈರ್ಯಸ್ಥೈರ್ಯಾರೋಗ್ಯಾದಿಗುಣಗಳಿಗೆ ಕೊರತೆ ಯಾವುದೂ ಬಾರದಂತೆ ಬಳೆದಿರುವುದೆಂದು ಶ್ರುತಪಡಿಸುವುದು ನಮಗೆ ಹರ್ಷವನ್ನುಂಟುಮಾಡುತ್ತಿರುವುದು. ಇಲ್ಲಿ ನೆರೆದಿರುವ ಕರ್ಣಾಟಕ ವಿದ್ವನ್ಮಂಡಲಿಯ ಸನ್ನಿಧಿಯಲ್ಲಿ ನಾವು ಒಪ್ಪಿಸುವ ಈ ತೃತೀಯ ವರ್ಷದವರದಿಯನ್ನು ಸಾವಧಾನದಿಂದ ಲಾಲಿಸುವುದಲ್ಲದೆ ನಮ್ಮ ಪರಿಷತ್ತಿನ ಶ್ರೇಯೋಭಿವೃದ್ಧಿಗಾಗಿ ಇಲ್ಲಿ ನೆರೆದಿರುವ ಮಹನೀಯರೆಲ್ಲರೂ ಒಮ್ಮನದಿಂದ ಸಹಾಯ ಮಾಡಬೇಕೆಂದ. ವಿನಯಪೂರ್ವಕವಾಗಿ ಬೇಡುತ್ತೇವೆ.

ಕಾರ್ಯನಿರ್ವಾಹಕರ ಬದಲಾವಣೆಗಳು.

೧೯೧೮ ನೆಯ ಇಸವಿ ಏಪ್ರಿಲ್ ಮೊದಲನೆಯ ತಾರೀಖಿನಿಂದ ಪರಿಷತ್ತಿನ ಸಮ್ಮೇಳನವು ನಡೆಯುವವರೆಗೆ ಮ॥ ಆರ್. ರಘುನಾಥರಾಯರೂ, ಡಾಕ್ಟರ್ ಪಿ. ಎಸ್. ಅಚ್ಯುತರಾಯರೂ ಜಂಟಿ ಗೌರವ ಕಾರ್ಯದರ್ಶಿಗಳಾಗಿ, ಮ॥ ರಾ॥ ಟಿ. ಲಕ್ಷ್ಮೀನರಸಿಂಹರಾಯರು ಗೌರವ ಕೋಶಾಧ್ಯಕ್ಷರಾಗಿ ಇದ್ದರು. ಹಿಂದಿನ ವರ್ಷದ ಕೆಲಸವನ್ನು ಬಹು ಶ್ರದ್ಧೆಯಿಂದ ಮಾಡಿರುವರೆಂದು ಅಭಿಪ್ರಾಯಪಟ್ಟು ಪರಿಷತ್ತಿನ ಪಿಂಗಳ ಸಂವತ್ಸರದ ಕಾರ್ಯನಿರ್ವಾಹಕ ಮಂಡಲಿಯವರು ಪಿಂಗಳಸಂವತ್ಸರಕ್ಕೂ ಮ॥ ರಾ॥ ಆರ್. ರಘುನಾಥರಾಯರು ಮತ್ತು ಡಾಕ್ಟರ್ ಪಿ. ಎಸ್. ಅಚ್ಯುತರಾಯರು ಗೌರವ ಕಾರ್ಯದರ್ಶಿಗಳಾಗಿರಬೇಕೆಂದೂ ಮ॥ ರಾ॥ ಟಿ. ಲಕ್ಷ್ಮೀನರಸಿಂಹರಾಯರು ಗೌರವ ಕೋಶಾಧ್ಯಕ್ಷರಾಗಿ ಇರತಕ್ಕದೆಂದೂ ತೀರ್ಮಾನಿಸಿದರು.

ಏಪ್ರಿಲ್ ೧ ನೆಯ ತಾರೀಖಿನಿಂದ ಜುಲೈ ೨೦ ನೆಯ ತಾರೀಖಿನವರೆಗೆ ಎರಡು ಹೊತ್ತೂ ಕೆಲಸಮಾಡುವ ಗುಮಾಸ್ತರೊಬ್ಬರೂ ಒಂದು ಹೊತ್ತು ಕೆಲಸಮಾಡುವ ಗುಮಾಸ್ತರೊಬ್ಬರೂ ಇದ್ದರು. ಎರಡು ಹೊತ್ತು ಕೆಲಸಮಾಡುತ್ತಿದ್ದ ಗುಮಾಸ್ತರು ಓದುವ ಉದ್ದೇಶದಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟದರಿಂದ ಒಂದು ಹೊತ್ತು ಕೆಲಸ ಮಾಡುತ್ತಿದ್ದ ಗುಮಾಸ್ತರನ್ನು ಪ್ರಾತಃಕಾಲವೂ ಸಾಯಂಕಾಲವೂ ಕೆಲಸಮಾಡಬೇಕೆಂದು ನಿಯಮಿಸಿ ೧೫ ರೂಪಾಯಿ ತಲಬನ್ನು ಕೊಡಲಾಯಿತು. ಒಂದು ಹೊತ್ತು ಕೆಲಸಮಾಡುತ್ತಿದ್ದ ಗುಮಾಸ್ತರಿಗೆ ಬದಲಾಗಿ ಪರಿಷತ್ತಿನಲ್ಲಿ ಪುಸ್ತಕ ಮತ್ತು ಮಾಸಪತ್ರಿಕೆಗಳ ವಿಮರ್ಶನಕ್ಕೂ ಗ್ರಂಥಶೋಧನಕಾರ್ಯಕ್ಕೂ ೨೦ ರೂಪಾಯಿ ತಲಬಿನ ಮೇಲೆ ಒಂದು ಹೊತ್ತು ಕೆಲಸಮಾಡುತ್ತಿದ್ದ ಪಂಡಿತರೊಬ್ಬರ ಜತೆಗೆ ಪಂಡಿತ ಕೆ. ನಂಜುಂಡಶಾಸ್ತ್ರಿಗಳನ್ನು ಒಂದುಹೊತ್ತು ಕೆಲಸಮಾಡುವ ಪಂಡಿತರನ್ನಾಗಿ ೧೯೧೭ ನೆಯ ಇಸವಿ ಆಗಸ್ಟು ೨೬ ನೆಯ ತಾರೀಖಿನಲ್ಲಿ ಆದ ನಿರ್ಣಯದ ಮೇರೆ ನಿಯಮಿಸಲಾಯಿತು. ಪರಿಷತ್ತಿನ ಕೆಲಸವು ಹೆಚ್ಚುತಲಿರುವುದರಿಂದ ಪರಿಷತ್ತಿನಲ್ಲಿ ಎರಡು ಹೊತ್ತೂ ಕೆಲಸಮಾಡುವ ಪಂಡಿತರೊಬ್ಬರನ್ನು ನಿಯಮಿಸಬೇಕೆಂದು ಮಾರ್ಚಿ ೨೪ ನೆಯ ತಾರೀಖಿನಲ್ಲಿ ನೆರೆದಿದ್ದ ಕಾರ್ಯನಿರ್ವಾಹಕ ಮಂಡಲಿಯ ಸಭೆಯವರು ನಿರ್ಣಯಿಸಿರುತ್ತಾರೆ. ಪರಿಷತ್ತಿನ ಜವಾನನ ಸಂಬಳವನ್ನು ೭ ರೂಪಾಯಿಗಳಿಂದ ೮ ರೂಪಾಯಿಗಳಿಗೆ ಹೆಚ್ಚಿಸಿದುದಾಯಿತು.

ಕಾರ್ಯನಿರ್ವಾಹಕ ಮಂಡಲಿಯ ಸಭೆಗಳು.

೧೯೧೭ ನೆಯ ಸಮ್ಮೇಳನದಿಂದ ೧೯೧೮ ನೆಯ ಸಮ್ಮೇಳನದವರೆಗೆ ೬ ಬಾರಿ ಕಾರ್ಯನಿರ್ವಾಹಕಮಂಡಲಿಯ ಸಭೆ ಸೇರಿತ್ತು. ಕಾರ್ಯನಿರ್ವಾಹಕಮಂಡಲಿಯಸದಸ್ಯರುಗಳ ಹಾಜರಿಯ ತಪಶೀಲು ಕೆಳಗೆ ಕೊಟ್ಟಿರುವ ಪಟ್ಟಿಯಿಂದ ಕಾಣಬರುವುದು.

ಮೊದಲನೆಯ ಸಭೆ	೧೦-೬-೧೯೧೭
ಎರಡನೆಯ ಸಭೆ	೨೯-೬-೧೯೧೭
ಮೂರನೆಯ ಸಭೆ	೨೬-೮-೧೯೧೭
ನಾಲ್ಕನೆಯ ಸಭೆ	೧೩-೧-೧೯೧೮
ಐದನೆಯ ಸಭೆ	೨೪-೩-೧೯೧೮
ಆರನೆಯ ಸಭೆ	೨೧-೪-೧೯೧೮

ನವಂಬರು ೨೫ ನೆಯ ತಾರೀಖಿಗೆ ಸೇರುವಂತೆ ಏರ್ಪಾಡಾಗಿದ್ದ ಕಾರ್ಯನಿರ್ವಾಹಕ ಮಂಡಲಿಯ ಸಭೆಯು ಪರಿಷತ್ತಿನ ಉಪಾಧ್ಯಕ್ಷರ ಮತ್ತು ಗೌರವಕಾರ್ಯದರ್ಶಿಗಳಿಬ್ಬರ ದೇಹಾಲಸ್ಯದಿಂದ ನಿಂತುಹೋಯಿತು. ಈ ಸಭೆಯಲ್ಲಿ ಚರ್ಚಿಸಬೇಕಾಗಿದ್ದ ವಿಷಯಗಳು ಜನವರಿಯ ೧೩ ನೆಯ ತಾರೀಖಿನಲ್ಲಿ ನೆರೆದಿದ್ದ ಸಭೆಯಲ್ಲಿ ಚರ್ಚಿಸಲ್ಪಟ್ಟವು.

ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳು ಮತ್ತು ಅವರು ಹಾಜರಿದ್ದ ಸಭೆಗಳಸಂಖ್ಯೆ.

ಕಾರ್ಯನಿರ್ವಾಹಕ ಮಂಡಲಿಯ

ಅಧಿಕಾರಿಗಳು.	ಹಾಜರಿದ್ದ ಸಂಖ್ಯೆ.
ರಾಜಮಂತ್ರಪ್ರವೀಣ ಮ॥ ರಾ॥ ಎಚ್. ವಿ. ನಂಜುಂಡಯ್ಯನವರು, ಎಂ. ಎ., ಎಂ. ಎಲ್., ಸಿ. ಐ. ಇ. (ಅಧ್ಯಕ್ಷರು)	೨
ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ಮ॥ ರಾ॥ ಎಂ. ಶಾಮರಾಯರು, ಎಂ. ಎ. (ಉಪಾಧ್ಯಕ್ಷರು) ...	೬
ಮ॥ ರಾ॥ ಟಿ. ಲಕ್ಷ್ಮೀನರಸಿಂಹರಾಯರು, ಬಿ. ಎ., ಬಿ. ಎಲ್. (ಗೌರವ ಕೋಶಾಧ್ಯಕ್ಷರು) ...	೨
ಮ॥ ರಾ॥ ಪಿ. ಎಸ್. ಅಚ್ಯುತರಾಯರು, ಎಲ್. ಎಂ. ಮತ್ತು ಎಸ್. (ಜಂಟಿ ಗೌರವ ಕಾರ್ಯದರ್ಶಿ) ...	೨
,, ಆರ್. ರಘುನಾಥರಾಯರು, ಬಿ. ಎ. ಡಿಟ್ಟೊ ...	೬

ಮೈಸೂರು ಪ್ರಾಂತದ ಸದಸ್ಯರುಗಳು.

ರಾಜಸೇವಾದುರಂಧರ ಸರ್ದಾರ್ ಎಂ. ಕಾಂತರಾಜ ಅರಸಿನವರು, ಬಿ. ಎ., ಸಿ. ಎಸ್. ಐ. ... —

ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರು, ಬಿ. ಎಸ್. ಸಿ., ಎಲ್. ಸಿ. ಇ. ... ೧

ಮ॥ ರಾ॥ ಎಚ್. ಲಿಂಗರಾಜ ಅರಸಿನವರು ... ೧

,, ಎಂ. ಎಲ್. ವರ್ಧಮಾನಯ್ಯನವರು ... —

,, ಬಾಪು ಸುಬ್ಬರಾಯರು, ಬಿ. ಎ. ... ೧

,, ಬಿ. ವೆಂಕಟನಾರಣಪ್ಪನವರು, ಎಂ. ಎ. ... —

,, ಬಿ. ಕೃಷ್ಣಪ್ಪನವರು, ಎಂ. ಎ. ... ೪

,, ಸಿ. ಕೃಷ್ಣರಾಯರು, ಬಿ. ಎ. ... –

,, ಎಂ. ವೆಂಕಟಕೃಷ್ಣಯ್ಯನವರು ... ೩

,, ಎಚ್. ಚನ್ನಕೇಶವಯ್ಯಂಗಾರ್ಯರು ... ೫

ಪ್ರಾಕ್ತನ ವಿಮರ್ಶವಿಚಕ್ಷಣ ರಾವ್ ಬಹದ್ದೂರ್ ಮ॥ ರಾ॥ ಆರ್. ನರಸಿಂಹಾಚಾರ್ಯರು ಎಂ. ಎ. ... —

ಮ॥ ರಾ॥ ಎಂ. ಎಸ್. ಪುಟ್ಟಣ್ಣನವರು, ಬಿ. ಎ. ... ೫

ಮುಂಬಯಿ ಪ್ರಾಂತದ ಸದಸ್ಯರುಗಳು.

ಮ॥ ರಾ॥ ವಿ. ಬಿ. ಜೋಷಿ, ಬಿ. ಎ., ರಾವ್ ಬಹದ್ದೂರ್ —

,, ಆರ್. ಎಚ್. ದೇಶಪಾಂಡೆ, ಎಂ. ಎ. ... –

,, ವಿ. ಬಿ. ಆಲೂರವರು, ಬಿ. ಎ., ಎಲ್ ಎಲ್. ಬಿ. ... –

,, ಎ. ಜಿ. ಕರಗುದರಿಯವರು, ಬಿ. ಎ., ಎಲ್ ಎಲ್. ಬಿ. –

,, ಆರ್. ಬಿ. ಪೋತದಾರ್. ... ... –

,, ಸಿ. ಜಿ. ಹಳಕಟ್ಟಿಯವರು, ಬಿ. ಎ., ಎಲ್ ಎಲ್. ಬಿ. –

,, ಎಸ್. ಎಸ್. ಸೆಟ್ಲೂರವರು, ಬಿ. ಎ., ಎಲ್ ಎಲ್. ಬಿ. –

,, ಆರ್. ಎ. ಜಹಗೀರ್‌ದಾರ್ ಅವರು, ಎಂ. ಎ., ಎಲ್ ಎಲ್. ಬಿ. —

ಮದರಾಸು ಪ್ರಾಂತದ ಸದಸ್ಯರುಗಳು.

ಮ॥ ರಾ॥ ಬೆನಗಲ್ ರಾಮರಾಯರು, ಎಂ. ಎ., ಎಲ್ ಎಲ್. ಬಿ. ೧

,, ಎಚ್. ನಾರಾಯಣರಾಯರು, ಎಂ. ಎ. ... ೧

,, ಆರ್. ತಾತಾಚಾರ್ಯರು, ಎಂ. ಎ., ಎಲ್. ಟಿ. ... ೧

,, ಎನ್. ರಾಜಗೋಪಾಲ ಕೃಷ್ಣರಾಯರು ... ೨
,, ಪಿ. ಮಂಗೇಶರಾಯರು, ಬಿ. ಎ., ಎಲ್. ಟಿ. ... —

ದಕ್ಷಿಣಮಹಾರಾಷ್ಟ್ರ ಸಂಸ್ಥಾನದ ಸದಸ್ಯರು.

ಮ॥ ರಾ॥ ಟಿ. ಎಸ್. ಚಿಕ್ಕೋಡಿಯವರು ... ...
,, ಆರ್. ಎಸ್. ಮಂಗಸೂಲಿಯವರು ... —

ಹೈದರಾಬಾದು ಪ್ರಾಂತದ ಸದಸ್ಯರು.

ಮ॥ ರಾ॥ ಬಿ. ಕೃಷ್ಣಯ್ಯಂಗಾರ್‍ಯರವರು ...

ಕೊಡಗು ಪ್ರಾಂತದ ಸದಸ್ಯರುಗಳು.

ರಾಜಕಾರ್ಯಪ್ರಸಕ್ತ ರಾಯಬಹದ್ದೂರ್ ಮ॥ ರಾ॥ ಎಂ. ಮುತ್ತಣ್ಣನವರು.

ಪಂಡಿತ ಸದಸ್ಯರುಗಳು.

ಪಂಡಿತ ರಾಜಗೋಪಾಲ ಚಕ್ರವರ್ತಿಗಳು ಸರಳಕವಿಸೂರಿ ... ೩
,, ಜಯರಾಮ ವೆಂಕಟಾಚಾರ್ಯರವರು ... ೨
,, ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳವರು ... -
,, ಎಸ್. ತಿಮ್ಮಪ್ಪಯ್ಯಶಾಸ್ತ್ರಿಗಳು ೧

ಹೈದರಾಬಾದು, ದಕ್ಷಿಣ ಮಹಾರಾಷ್ಟ್ರಸಂಸ್ಥಾನ, ಮುಂಬಯಿ ಮತ್ತು ಕೊಡಗಿನ ಪ್ರಾಂತದ ಸದಸ್ಯರುಗಳು ಕಾರ್ಯನಿರ್ವಾಹಕ ಮಂಡಲಿಯ ಯಾವ ಸಭೆಯಲ್ಲಿಯೂ ಹಾಜರಿರಲಿಲ್ಲ. ದೂರವಾಗಿರುವ ಪ್ರದೇಶಗಳಲ್ಲಿರುವುದರಿಂದ ಬರಲು ಅನುಕೂಲವಾದಂತೆ ಕಾಣುವುದಿಲ್ಲ.

ನಿಘಂಟುಗಳ ಪರಿಷ್ಕರಣ.

ಕರ್ಣಾಟಕಭಾಷಾ ನಿಘಂಟುವಿನ ಪರಿಷ್ಕರಣದ ವಿಷಯದಲ್ಲಿ ಗ್ರಂಥಗಳನ್ನು ಪಂಡಿತರುಗಳಿಗೆ ಕೊಟ್ಟ ಸಂಗತಿಯನ್ನು ಹಿಂದಿನ ವರ್ಷದ ವರದಿಯಲ್ಲಿಯೇ ತಿಳಿಸಿದೆ. ಆ ಗ್ರಂಥಗಳನ್ನು ಪರಿಶೀಲಿಸಿ ಕೆಲವು ಪಂಡಿತರುಗಳು ಕ್ಲಿಷ್ಟಪದಗಳ ಪಟ್ಟಿಗಳನ್ನು ಸಿದ್ಧಮಾಡಿರುತ್ತಾರೆ. ಅವುಗಳಲ್ಲಿ ಆದಿಪಂಪನ ಗ್ರಂಥಗಳನ್ನು ಪರಿಶೀಲಿಸಿ ಪಂಡಿತ ಶ್ರೀನಿವಾಸ ರಾಘವಾಚಾರ್ಯರವರು ಗುರುತುಮಾಡಿ ಕಳುಹಿಸಿ ಕೊಟ್ಟಿರುವ ಪಟ್ಟಿಗನುಸಾರವಾಗಿ ಗ್ರಂಥನಿದರ್ಶನಗಳೊಡನೆ ಪ್ರತಿಯನ್ನು ತಯಾರುಮಾಡಿ ಪರಿಶೋಧಿಸುವ ಕ್ಲಿಷ್ಟತಮವಾದ ಕೆಲಸವು ಈಗ ಪರಿಷತ್ತಿನಲ್ಲಿ ನಡೆಯುತ್ತಿದೆ. ವಿದ್ವಾಂಸರುಗಳ ಸಹಾಯವು ಈ ಕೆಲಸದಲ್ಲಿ ಅತ್ಯಾವಶ್ಯಕವಾಗಿರುವುದು.

ಇಂಗ್ಲೀಷು ಕನ್ನಡ ನಿಘಂಟುವಿನ ವಿಚಾರದಲ್ಲಿ ಪರಿಷತ್ತಿನ ಅಧ್ಯಕ್ಷರವರು ಪರಿಷತ್ತಿಗೆ ಕಳುಹಿಸಿಕೊಟ್ಟ ಅರ್ಧ ಅಚ್ಚಾಗಿರುವ ನಿಘಂಟುವನ್ನು ಪರಿಷತ್ತಿಗೆ ತೆಗೆದುಕೊಂಡು ಮುದ್ರಿಸುವ ವಿಷಯವನ್ನು ಕಾರ್ಯನಿರ್ವಾಹಕ ಮಂಡಲಿಯಲ್ಲಿ ಚರ್ಚಿಸಿ, ಅಚ್ಚಾಗಿರುವ ನಿಘಂಟುವಿನ ಭಾಗವನ್ನು ಪರೀಕ್ಷಿಸುವುದಕ್ಕೋಸ್ಕರ ಮಾರ್ಚಿ ೨೪ನೆಯ ತಾರೀಖಿನಲ್ಲಿ ನಡೆದ ಸಭೆಯಲ್ಲಿ ಮ॥ ರಾ॥ ಗಳಾದ ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್, ಎಂ. ರಾಮರಾಯರು, ಎಂ. ಎ., ಬಿ. ಕೃಷ್ಣಪ್ಪನವರು, ಎಂ. ಎ., ಎಸ್. ಪುಟ್ಟಣ್ಣನವರು, ಬಿ. ಎ., ಆರ್. ರಘುನಾಥರಾಯರು, ಬಿ. ಎ., ಇವರುಗಳನ್ನು ಉಪಸಂಘದ ಸದಸ್ಯರುಗಳಾಗಿ ನಿಯಮಿಸಿ ಅವರ ವರದಿಯನ್ನು ಕೂಡಿದ ಮಟ್ಟಿಗೆ ಶೀಘ್ರದಲ್ಲಿ ಒಪ್ಪಿಸಬೇಕೆಂದು ನಿರ್ಣಯಿಸಿರುತ್ತಾರೆ.

ಪರಿಷತ್ತಿನ ಸದಸ್ಯರುಗಳ ವಿಷಯ.

	ನಳಸಂವತ್ಸರದ ಅಂತ್ಯ.	ಪಿಂಗಳಸಂವತ್ಸರದ ಅಂತ್ಯ.
ಪ್ರದಾತೃಗಳು	೧	೧
ಆಜೀವ ಸದಸ್ಯರು	[illegible]	[illegible]
ಪ್ರಥಮವರ್ಗದ ,,	[illegible]	[illegible]
ದ್ವಿತೀಯವರ್ಗದ ,,	[illegible]	[illegible]
	[illegible]	[illegible]

ಈ ವರ್ಷದಲ್ಲಿ ಹೊಸದಾಗಿ [illegible] ಮಂದಿ ಸದಸ್ಯರುಗಳು ಸೇರಿದರು. ಪರಿಷತ್ತಿನ ಸದಸ್ಯರುಗಳಲ್ಲಿ ಮ॥ ರಾ॥ ವಾಜಪೇಯಂ ಕೃಷ್ಣಯ್ಯನವರು ಮತ್ತು ಕೃಷ್ಣರಾಜಪೇಟೆ ಎ. ವಿ. ಸ್ಕೂಲು ಮಾಸ್ಟರಾದ ಎಚ್. ಕೃಷ್ಣಶಾಸ್ತ್ರಿಗಳೂ ಮತ್ತೊಬ್ಬರೂ ಗತಿಸಿದ ಸಂಗತಿಯನ್ನು ತಿಳಿಸಲು ವಿಷಾದಿಸುತ್ತೇವೆ. ಸದಸ್ಯರುಗಳಲ್ಲಿ [illegible] ಮಂದಿ ತಮ್ಮ ಅನನುಕೂಲದ ದೆಸೆಯಿಂದ ಪರಿಷತ್ತಿನ ಸದಸ್ಯತೆಗೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

ಮೇಲ್ಕಂಡ ಸದಸ್ಯರುಗಳಿಂದ ತೆರಗತಿಯಾಗಿ ಬಂದಿರುವ ರೂಬಲಗನ್ನು ಕೆಳಗಿನ ಪಟ್ಟಿಯು ತಿಳಿಯಿಸುವುದು:—

ಆಜೀವ ಸದಸ್ಯರುಗಳಿಂದ	[illegible]
ಮೊದಲನೆಯ ತರಗತಿಯವರಿಂದ	[illegible]
ಎರಡನೆಯ ತರಗತಿಯವರಿಂದ	[illegible]
ಒಟ್ಟು	[illegible]

ಸದಸ್ಯರುಗಳಿಂದ ಬರಬೇಕಾಗಿರುವ ಬಾಕಿ ರೂಬಲಗನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು:—

ಪ್ರಿಯದಾತರಿಂದ	[illegible]
ಆಜೀವಸದಸ್ಯರಿಂದ	[illegible]

[illegible]

ಮೂರನೆಯ ತರಗತಿಯವರಿಂದ	೭೭೬-೦-೦
ದ್ವಿತೀಯವರ್ಗದವರಿಂದ	೩೯೬-೦-೦
ಒಟ್ಟು	೩,೦೩೬-೨-೦

(೧... ನೆಯ ಪುಟವನ್ನು ನೋಡಿರಿ)

ಈ ಸಂದರ್ಭದಲ್ಲಿ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯಲ್ಲಿ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಪರವಾಗಿ ಇಬ್ಬರು, ಹೈದರಾಬಾದಿನ ಕರ್ನಾಟಕ ಪ್ರಾಂತಕ್ಕೆ ಒಬ್ಬರು, ಮದ್ರಾಸಿನ ಕನ್ನಡ ನಾಡುಗಳಿಗಾಗಿ ಇವರು, ಮುಂಬಯಿಯ ಕನ್ನಡ ನಾಡುಗಳಿಗಾಗಿ ಎಣ್ಬರು ಸದಸ್ಯರು ಇರುವುದರಿಂದ ಮೇಲ್ಕಂಡ ಪ್ರಾಂತಗಳಲ್ಲಿ ಸದಸ್ಯರುಗಳ ಸಂಖ್ಯೆಯನ್ನು ತಕ್ಕಷ್ಟು ಹೆಚ್ಚಿಸುವುದಕ್ಕೆ ಉಚಿತವಾದ ಪ್ರಯತ್ನವನ್ನು ಶೀಘ್ರದಲ್ಲಿಯೇ ಮಾಡಬೇಕಾಗಿದೆ.

ಸರ್ಕಾರದ ಸಹಾಯದ್ರವ್ಯದ ಖರ್ಚು.

ಮೈಸೂರು ಸರ್ಕಾರದಿಂದ ೧೯೧೭ ನೆಯ ಇಸವಿ ಏಪ್ರಿಲ್ ಗುರ್‍ರ ತಾರೀಖು ಬಾಗಾಯಿತು ೧೯೧೭ ನೆಯ ಇಸವಿ ಡಿಸೆಂಬರು ೩೧ ನೆಯ ತಾರೀಖಿನವರೆಗೆ ರೂ. [illegible] ಬಂದಿರುತ್ತದೆ. ತನ್ನೀಸು ಸಿಬ್ಬಂದಿಯ ಖರ್ಚಿಗಾಗಿ [illegible] ಮನೆಯ ಬಾಡಿಗೆಗಾಗಿ [illegible]-೦-೦. ಠೀಕದ ಖರ್ಚಿಗಾಗಿ [illegible] ಸಾಮಾನ್ಯಗಾಗಿ [illegible]-೦-೦. ಗ್ರಾಂಥಾಲಯಗಾಗಿ [illegible] ಒಟ್ಟು [illegible] ಖರ್ಚಾಗಿರುತ್ತದೆ.

ಮೈಸೂರು ಸರ್ಕಾರದವರು ಪರಿಷತ್ತು ಹುಟ್ಟಿದ ಕಾಲದಲ್ಲಿ ಮಾಹೆಯಾನಾ ೧೦೦ ರೂಪಾಯನ್ನು ಎರಡುವರ್ಷಗಳವರೆಗೆ ಕೊಡುವುದೆಂದು ಮಂಜೂರು ಮಾಡಿದ್ದರು. ೧೯೧೭ನೆಯ ಇಸವಿ ಡಿಸೆಂಬರು ೩೧ ನೆಯ ತಾರೀಖಿಗೆ ಸರ್ಕಾರದ ಅವಧಿಯು ಮುಗಿಯಿತು. ಪರಿಷತ್ತಿನಲ್ಲಿ ನಡೆದಿರುವ ಕೆಲಸಗಳ ವಿವರವನ್ನು ಸರ್ಕಾರದವರಿಗೆ ಪ್ರತಿಪಾದಿಸಿದಮೇಲೆ ಶ್ರೀಮನ್ಮಹಾರಾಜ ಸರ್ಕಾರದವರು ಪರಿಷತ್ತಿನಲ್ಲಿ ನಡೆದಿರುವ ಕೆಲಸವು ತೃಪ್ತಿಕರವಾಗಿದೆಯೆಂದು ಅಭಿಪ್ರಾಯಪಟ್ಟು, ಹಿಂದೆ ಸಹಾಯದ್ರವ್ಯವನ್ನು ಕೊಡುತ್ತಿದ್ದಂತೆಯೇ ಮಾಹೆಯಾನಾ ೧೦೦ ರೂಪಾಯಿಗಳನ್ನು ಕಳೆದ ಡಿಸೆಂಬರು ೩೧ ನೆಯ ತಾರೀಖಿನಿಂದ ೫ ವರ್ಷಗಳವರೆಗೆ ಕೊಡುವುದಲ್ಲದೆ ಪರಿಷತ್ತಿನಲ್ಲಿ ತಯಾರಾಗಿರುವ ಗ್ರಂಥಗಳ ಮುದ್ರಣಕ್ಕೆ ಸಹಾಯದ್ರವ್ಯವಾಗಿ ೨,೦೦೦ ರೂಪಾಯಿಗಳನ್ನು ದಯಪಾಲಿಸಿರುವುದಕ್ಕಾಗಿ ಕರ್ಣಾಟಕ ವಿದ್ವನ್ಮಂಡಲಿಯೆಲ್ಲವೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸತಕ್ಕದಾಗಿದೆ. ಮೈಸೂರು ಸರ್ಕಾರದವರ ಔದಾರ್ಯಕ್ಕೆ ತಕ್ಕಂತೆ ಪರಿಷತ್ತಿನಲ್ಲಿ ವಿವಿಧ ಕಾರ್ಯಗಳನ್ನು ಉತ್ಸಾಹದಿಂದ ನೆರವೇರಿಸುವುದು ಪರಿಷತ್ತಿನ ಸದಸ್ಯರುಗಳ ಕರ್ತವ್ಯವಾಗಿದೆಯೆಂದು ಇಲ್ಲಿ ಬಿನ್ನಯಿಸುವುದು ಅನಾವಶ್ಯಕವಾಗಿರಬಹುದು.

ಧರ್ಮದ ವಾಚನ ಮಂದಿರ.

ಈ ವಾಚನಮಂದಿರಕ್ಕೆ ಪರಿಷತ್ಪತ್ರಿಕೆಗೆ ಬದಲಾಯಿಸಿ ತ್ರೈಮಾಸಿಕಪತ್ರಿಕೆ ಒಂದು. ಮಾಸಪತ್ರಿಕೆಗಳು ೨೨. ಪಕ್ಷ ಪತ್ರಿಕೆ ಒಂದು, ವಾರಪತ್ರಿಕೆಗಳು ೯. ದೈನಂದಿನ

ಪತ್ರಿಕೆ ಒಂದು ಬರುತ್ತಿರುವುವು. ಇಲ್ಲದೆ ಪರಿಷತ್ತಿನ ಹಣದಿಂದ ವಂಗಭಾಷೆಯ ತ್ರೈಮಾಸ ಪತ್ರಿಕೆಯೊಂದು, ವಂಗಭಾಷೆಯ ಮಾಸಪತ್ರಿಕೆ ಎರಡು. ಇಂಗ್ಲೀಷು ಭಾಷೆಯ ಮಾಸಪತ್ರಿಕೆ ಎರಡು, ಮರಾಠಿ ಮಾಸಪತ್ರಿಕೆ ಒಂದು, ಹಿಂದಿ ಭಾಷೆಯ ಮಾಸಪತ್ರಿಕೆ ಒಂದು, ಇಂಗ್ಲೀಷು ಮತ್ತು ಕನ್ನಡ ಮೈಸೂರು ಗೆಜೆಟ್ಟು ಒಂದು ಮತ್ತು ದೈನಂದಿನ ಪತ್ರಿಕೆಗಳೆರಡು ಇವುಗಳನ್ನೂ ತರಿಸುತ್ತಿದೆ. ಇವುಗಳ ಜತೆಗೆ ಪರಿಷತ್ತಿನ ಉಪಾಧ್ಯಕ್ಷರಾದ ರಾವ್ ಬಹದ್ದೂರ್ ಎಂ. ರಾಮರಾಯರವರು ತಾವು ತರಿಸುವ ಪತ್ರಿಕೆಗಳಲ್ಲಿ ದೈನಂದಿನದ ಮದರಾಸು ಮೇಲನ್ನೂ ವಾರಕ್ಕೆರಡಾವರ್ತಿ ಬರುವ ಕರ್ನಾಟಕ ಪತ್ರಿಕೆಯನ್ನೂ ವಾರಪತ್ರಿಕೆಯಾದ "ಮೈಸೂರುಪೇಟ್ರಿಯಟ್" ಪತ್ರಿಕೆಯನ್ನೂ ಮಾಸಪತ್ರಿಕೆಗಳಾದ ಇಂಡಿಯನ್‌ರಿವ್ಯೂ ಮತ್ತು ರಿವ್ಯೂ ಆಫ್ ರಿವ್ಯೂಸನ್ನೂ ಕೃಪಾಪರಿಪೂರ್ಣತೆಯಿಂದ ನಮ್ಮ ವಾಚನಮಂದಿರಕ್ಕೆ ಕಳುಹಿಸುತ್ತಿರುವರು. ಪ್ರತಿದಿನದಲ್ಲಿಯೂ ಪ್ರಾತಃಕಾಲ ಸಾಯಂಕಾಲಗಳಲ್ಲಿ ಬಹುಮಂದಿ ವಾಚಕರು ನಮ್ಮ ವಾಚನಾಲಯದಿಂದ ಪ್ರಯೋಜನ ಹೊಂದುತ್ತಿರುವರು. ಇಂಗ್ಲೀಷಿನಲ್ಲಿ ಪ್ರಸಿದ್ಧವಾಗಿರುವ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲ್ ಮುಂತಾದುವುಗಳನ್ನು ತಮಿಳು ಮುಂತಾದ ದೇಶಭಾಷೆಗಳಲ್ಲಿರುವ ಪ್ರಸಿದ್ಧವಾದ ಪತ್ರಿಕೆಗಳನ್ನು ದ್ರವ್ಯಶಕ್ತಿ ಕಡಮೆಯಾಗಿರುವುದರಿಂದ ತರಿಸುತ್ತಿಲ್ಲ. ಸಂದಿಗ್ಧವಿಷಯವಿಚಾರಕ್ಕೆ ಇಂಗ್ಲೀಷು ಮುಂತಾದ ಭಾಷೆಗಳ ಮಾಸಪತ್ರಿಕೆಗಳ ಸಹಾಯವು ಆವಶ್ಯಕವಾಗಿರುವುದು.

ಮೈಸೂರು ಸಂಪದಭ್ಯುದಯಸಮಾಜದ ವಿದ್ಯಾಭ್ಯಾಸ ಶಾಖೆಯ ಕಮಿಟಿಯವರಿಗೆ ನಮ್ಮ ಪರಿಷತ್ತಿನ ಧರ್ಮಾರ್ಥ ವಾಚನಮಂದಿರದಿಂದ ಜನಸಾಮಾನ್ಯಕ್ಕೆ ಆಗುತ್ತಿರುವ ಪ್ರಯೋಜನಾಂಶವನ್ನು ಪ್ರಕಟಪಡಿಸಿ ದ್ರವ್ಯಸಹಾಯವು ಬೇಕಾಗಿ ಕೋರುವ ಪಕ್ಷಕ್ಕೆ ವಾಚನಮಂದಿರದ ಪ್ರಯೋಜನವು ಅತಿಶಯತರವಾಗಿ ಆಗುವುದೆಂದು ವಿಜ್ಞಾಪನಾಪತ್ರಿಕೆಯೊಂದನ್ನು ಒಪ್ಪಿಸಿದುದಕ್ಕೆ ಮೇಲೆ ಕಂಡ ಕಮಿಟಿಯವರು ಮಾಹೆಯಾನಾ ೧೦ ರೂಪಾಯಿ ಗ್ರಾಂಟನ್ನೂ ವಾಚನಮಂದಿರದ ಪುಸ್ತಕಭಾಂಡಾಗಾರಕ್ಕೆ ಮೊತ್ತವಾಗಿ ೫೦೦ ರೂಪಾಯಿಯ ದ್ರವ್ಯಸಹಾಯವನ್ನೂ ಕೊಡುವುದಾಗಿ ತೀರ್ಮಾನಿಸಿರುವ ಸಂಗತಿಯನ್ನು ಇಲ್ಲಿ ಪ್ರಕಟಪಡಿಸಲು ಸಂತೋಷಿಸುತ್ತಿರುವೆವು. ಈ ಶಿಫಾರಸು ಮೈಸೂರು ಸರ್ಕಾರಕ್ಕೆ ಹೋಗಿರುತ್ತದೆ. ಮೈಸೂರು ಸರ್ಕಾರದವರು ಇದನ್ನು ಮಂಜೂರುಮಾಡುವರೆಂದು ನಿರೀಕ್ಷಿಸುತ್ತಿದೆ.

ಪುಸ್ತಕಭಾಂಡಾಗಾರ.

ಕಳೆದ ೧೯೧೮ ನೆಯ ಇಸವಿ ಮಾರ್ಚಿ ೩೧ ರಲ್ಲಿ ಪರಿಷತ್ತಿನ ಪುಸ್ತಕಭಾಂಡಾಗಾರದಲ್ಲಿ ದೊಡ್ಡಗ್ರಂಥಗಳೂ ಸಣ್ಣಗ್ರಂಥಗಳೂ ಒಟ್ಟು ಸೇರಿ ೩೬೭ ಮಾತ್ರ ಇದ್ದುವು. ೧೯೧೯ ನೆಯ ಇಸವಿ ಮಾರ್ಚಿ ೩೧ ರಲ್ಲಿ ಮುದ್ರಿತ ಗ್ರಂಥಗಳ ಸಂಖ್ಯೆಯು ೮೦೦ಕ್ಕೆ ಬಂದಿತು. ಇವುಗಳಲ್ಲಿ ೩೪೮ ಪುಸ್ತಕಗಳು ಗೌರ್ನಮೆಂಟು ಕ್ಯೂರೇಟರವರಿಂದ, ಎರಡು ಶಾಸನದ ಇಲಾಖೆಯಿಂದ, ೧೦೦ ಗ್ರಂಥಕರ್ತೃಗಳಿಂದ ಮತ್ತು ಇತರ ದೊಡ್ಡ

(೧೨೩ ನೆಯ ಪುಟವನ್ನು ನೋಡಿರಿ.)

ಪ್ರಾಂತವಾರು ಇರುವ ಸದಸ್ಯರುಗಳ ಪಟ್ಟಿ.

ತರಗತಿಯ ಹೆಸರು ...	ಮೈಸೂರು			ಮುಂಬಯಿ			ಮದರಾಸು			ಕೊಡಗು			ಹೈದರಾಬಾದು			ಜುಮ್ಲಾ			[illegible]
	ಪ್ರೋರಾ ಕೊಟ್ಟಿರುವವರು	ಪ್ರೋರಾ ಕೊಡದೆ ಇರುವವರು	ಏನೂ ಕೊಡದೆ ಇರುವವರು	ಪ್ರೋರಾ ಕೊಟ್ಟಿರುವವರು	ಪ್ರೋರಾ ಕೊಡದೆ ಇರುವವರು	ಏನೂ ಕೊಡದೆ ಇರುವವರು	ಪ್ರೋರಾ ಕೊಟ್ಟಿರುವವರು	ಪ್ರೋರಾ ಕೊಡದೆ ಇರುವವರು	ಏನೂ ಕೊಡದೆ ಇರುವವರು	ಪ್ರೋರಾ ಕೊಟ್ಟಿರುವವರು	ಪ್ರೋರಾ ಕೊಡದೆ ಇರುವವರು	ಏನೂ ಕೊಡದೆ ಇರುವವರು	ಪ್ರೋರಾ ಕೊಟ್ಟಿರುವವರು	ಪ್ರೋರಾ ಕೊಡದೆ ಇರುವವರು	ಏನೂ ಕೊಡದೆ ಇರುವವರು	ಪ್ರೋರಾ ಕೊಟ್ಟಿರುವವರು	ಪ್ರೋರಾ ಕೊಡದೆ ಇರುವವರು	ಏನೂ ಕೊಡದೆ ಇರುವವರು	
ಪ್ರಮಾತೃಗಳು ...	–	–	1	–	–	–	–	–	–	–	–	–	–	–	–	–	–	1	1
ಆಜೀವಸದಸ್ಯರು ...	19	16	10	8	3	4	2	1	3	–	–	1	–	–	–	29	20	18	67
ಪ್ರಥಮವರ್ಗದವರು ...	4	8	12	–	2	4	–	3	2	–	1	–	–	–	–	4	14	18	36
ದ್ವಿತೀಯವರ್ಗದವರು...	12	20	33	3	2	1	4	5	–	1	–	–	–	1	–	20	28	34	82
ಜುಮ್ಲಾ...	35	44	56	11	7	9	6	9	5	1	1	1	–	1	–	53	62	71	186

ಮನುಷ್ಯರಿಂದ, ೭೩ ಕ್ರಯಕ್ಕೆ ತೆಗೆದುಕೊಂಡುದರಿಂದ, ಒಂದು ಓರಿಯಂಟಲ್ ಲೈಬ್ರೆರಿಯಿಂದ ಸೇರಿರುತ್ತವೆ. ಕೈಬರಹದ ಪುಸ್ತಕಗಳು ನಾಲ್ಕು ಬಂದಿವೆ. ಯಾವುವೆಂದರೆ: ಓಡ್ಯಾರಾಧನ, ಕೊಲ್ಲಾಪುರದ ರಾಜಚರಿತ, ವಿಶ್ವಕೃತಿಪರೀಕ್ಷಣ ಮತ್ತು ಹರಿಷ್ಚಂದ್ರಚರಿತ್ರೆ.

ಹರಿಶ್ಚಂದ್ರಚರಿತ್ರೆಯನ್ನು ಚಿತ್ರದುರ್ಗದ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕು ಬುರುಜನರೊಪ್ಪದಲ್ಲಿರುವ ಮ॥ ರಾ॥ ಸೀತಾರಾಮರಾಯರವರು ಬರೆದು ಪರಿಷತ್ತಿಗೆ ಕೆಲವು ಷರತ್ತುಗಳೊಡನೆ ಒಪ್ಪಿಸಿರುತ್ತಾರೆ. ಪಂಡಿತರನೇಕರು ಈ ಗ್ರಂಥವನ್ನು ಶೋಧಿಸಿ ಇದು ಸರಳವಾಗಿಯೂ ರಸಭರಿತವಾಗಿಯೂ ಇರುವುದೆಂದು ಶಿಫಾರಸು ಮಾಡಿದಮೇಲೆ ಈ ಪುಸ್ತಕದ ೧,೦೦೦ ಪ್ರತಿಗಳನ್ನು ಪರಿಷತ್ತಿನಿಂದ ಮುದ್ರಿಸತಕ್ಕುದೆಂದು ೧೯೧೭ ನೆಯ ಇಸವಿ ಜನವರಿ ೧೨ ನೆಯ ತಾರೀಖಿನಲ್ಲಿ ನೆರೆದಿದ್ದ ಕಾರ್ಯನಿರ್ವಾಹಕ ಮಂಡಲಿಯ ಸಭೆಯಲ್ಲಿ ನಿರ್ಣಯವಾಗಿರುವುದು.

ಪರಿಷತ್ಪತ್ರಿಕೆ.

ಪರಿಷತ್ಪತ್ರಿಕೆಯ ದ್ವಿತೀಯಸಂಪುಟದಲ್ಲಿ ಶೋಧನಾಚಾತುರ್ಯವನ್ನು ತೋರಿಸುವ ಲೇಖನಗಳು ಒಂಬತ್ತು ಇರುವುವು. ಯಾವುವೆಂದರೆ: (೧) ಆಸ್ಥಾನ ಮಹಾವಿದ್ವಾಂಸರಾದ ಕವಿಸೂರಿ ಕೆ. ರಾಜಗೋಪಾಲ ಚಕ್ರವರ್ತಿಗಳು ಬರೆದಿರುವ ಅಶೋಕನ ಶಾಸನಗಳು (ಸಶೇಷ), (೨, ೩) ಮ॥ ರಾ॥ ಆರ್. ರಘುನಾಥರಾಯರು ಬರೆದಿರುವ ಸಂಧಿಕಾರ್ಯಗಳ ವಿಚಾರ ಮತ್ತು ಕರ್ಣಾಟಕ ಭಾಷಾಚರಿತ್ರೆಯ ಹೆಗ್ಗುರುತುಗಳು. (೪) ಮತ್ತು (೫) ಮ॥ ರಾ॥ ಎಚ್. ನಾರಾಯಣರಾಯರು ಬರೆದಿರುವ ಅಜ್ಞಾತತದ್ಭವಗಳು ಮತ್ತು ಕರ್ಣಾಟಕ ಮತ್ತು ದೇಶೀಯಪದಗಳು, (೬, ೭, ೮.) ಗ್ರಾಂಥಿಕರೂಪಗಳ ಏಕೀಕರಣದ ವಿಷಯದಲ್ಲಿ ಮ॥ ರಾ॥ ಗಳಾದ ಎಸ್. ಎಂ. ನರಹರಯ್ಯ, ಬಿ. ಎ., ಎಲ್ ಎಲ್. ಬಿ., ಶ್ರೀನಿವಾಸರಾಜ ಪುರೋಹಿತರು ಮತ್ತು ಜೆ. ಬಲವಂತರಾಯರು —ಇವರುಗಳು ಬರೆದಿರುವ ಲೇಖನಗಳು. (೯) ಪಂಡಿತ ಎಸ್. ತಿಮ್ಮಪ್ಪಯ್ಯಶಾಸ್ತ್ರಿಗಳು ರಚಿಸಿದ ಆದಿಪಂಪಮಹಾಕವಿಯ ವಿಷಯಗಳು. ಮ॥ ರಾ॥ ಎಚ್. ನಾರಾಯಣರಾಯರವರು ಪ್ರಥಮ ಸಂಪುಟದಲ್ಲಿ ಮುದ್ರಿತವಾಗಿರುವ ಕರ್ಣಾಟಕ ಧಾತುಗಳ ಜತೆಗೆ ಈ ದ್ವಿತೀಯ ಸಂಪುಟದಲ್ಲಿ ಅಜ್ಞಾತ ತದ್ಭವಗಳ ಮತ್ತು ಕರ್ಣಾಟಕ ಮತ್ತು ದೇಶೀಯಪದಗಳ ವಿಚಾರವನ್ನು ಮಾಡಿ ನಿಘಂಟುವಿನ ಸಂಸ್ಕರಣಕ್ಕಾಗಿ ಬಹು ಪ್ರಯಾಸಪಡುತ್ತಿರುವರು. ಮ॥ ರಾ॥ ರಘುನಾಥರಾಯರು ಬರೆದ ಸಂಧಿಕಾರ್ಯಗಳ ವಿಚಾರವು ಕರ್ಣಾಟಕ ಸಂಧಿಕಾರ್ಯದ ಮುಖ್ಯಾಂಶಗಳೆಲ್ಲವನ್ನೂ ತೋರಿಸುವುದಕ್ಕೆ ಯತ್ನಿಸುತ್ತದೆ. ಕರ್ಣಾಟಕಭಾಷಾಚರಿತ್ರೆಯ ಹೆಗ್ಗುರುತುಗಳು ಎಂಬ ವಿಷಯವು ಕರ್ಣಾಟಕಭಾಷೆಗೆ ಸಂಬಂಧಪಡುವ ಅನೇಕ ವಿಷಯಗಳನ್ನೊಳಕೊಂಡಿದೆ. ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳವರು ಆದಿಪಂಪನ ವಿಷಯವಾಗಿ ಬರೆದಿರುವ ಲೇಖನವು ಕವಿಯ ವಿಷಯವನ್ನು ಹೆಚ್ಚಾಗಿ ತಿಳಿಸುವುದು. ಪರಿಷತ್ಪತ್ರಿಕೆಯನ್ನು ಉನ್ನತ ಪದವಿಯ ತ್ರೈಮಾಸ ಪತ್ರಿಕೆಗಳ ವರ್ಗದಲ್ಲಿಯೇ ಇಟ್ಟು

ಕೊಂಡು ಬರುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಿದೆ. ಆದರೆ ಪರಿಷತ್ಪತ್ರಿಕೆಯ ದ್ವಿತೀಯ ಸಂಪುಟವನ್ನು ಮುದ್ರಿಸುವುದಕ್ಕೆ ಕಾಗದಕ್ಕೆ ಸುಮಾರು ೨೦೦ ರೂಪಾಯಿ ಮುದ್ರಣಕ್ಕಾಗಿ ೩೫೦ ರೂಪಾಯಿ ಒಟ್ಟು ೫೫೦ ರೂಪಾಯಿ ಖರ್ಚಾಗಿರುತ್ತದೆ. ಪರಿಷತ್ಪತ್ರಿಕೆಗೆ ಸದಸ್ಯರಲ್ಲದ ಚಂದಾದಾರರಿಂದ ೬೭ ರೂಪಾಯಿ, ಪ್ರಥಮವರ್ಗದ ಸದಸ್ಯರುಗಳಿಂದ ೧೨೨ ರೂಪಾಯಿ. ದ್ವಿತೀಯ ವರ್ಗದ ಸದಸ್ಯರುಗಳಿಂದ ೧೪೪ ರೂಪಾಯಿ ಒಟ್ಟು ೩೩೩ ರೂಪಾಯಿ ವಸೂಲಾಗಿರುತ್ತದೆ. ಉಳಿದ ೨೧೭ ರೂಪಾಯಿಯನ್ನು ಪರಿಷತ್ತಿನ ಬಂಡವಾಳದಿಂದ ಖರ್ಚುಮಾಡಿರುವುದಾಗಿದೆ. ಕಾಗದದ ಬೆಲೆಯು ಈಗ ಪೌಂಡಿಗೆ ೧೦ ಆಣೆ ಯಾಗಿರುವುದರಿಂದ ತೃತೀಯಸಂಪುಟದ ಸಂಚಿಕೆಗಳ ಪ್ರತಿಗಳನ್ನು ೩೦೦ ರಷ್ಟು ಅಚ್ಚುಮಾಡಿಸಬೇಕೆಂದು ನಿರ್ಣಯಿಸಿದೆ. ಮುನ್ನೂರು ಪ್ರತಿಗಳನ್ನು ಮುದ್ರಿಸುವುದಾದರೂ ಕಾಗದಕ್ಕೆ ಸುಮಾರು ೩೦೦ ರೂಪಾಯಿ ಮುದ್ರಣಕ್ಕೆ ಸುಮಾರು ೩೫೦ ರೂಪಾಯಿ ಒಟ್ಟು ಇತರ ಖರ್ಚುಗಳನ್ನು ಸೇರಿಸಿಕೊಂಡಲ್ಲಿ ೭೦೦ ರೂಪಾಯಿ ಆವಶ್ಯಕವಾಗಿರುವುದು. ಈ ಮೊಬಲಗು ಬರುವಂತೆ ಏರ್ಪಾಡುಗಳನ್ನು ಮಾಡುವುದು ಪರಿಷತ್ತಿನ ಸದಸ್ಯರುಗಳ ಕರ್ತವ್ಯವಾಗಿರುವುದು.

ಪುಸ್ತಕಗಳ ಮುದ್ರಣ.

ಪಿಂಗಳಸಂವತ್ಸರದಲ್ಲಿ ಮುದ್ರಿತವಾಗಿರುವ ಮತ್ತು ಮುದ್ರಣದಲ್ಲಿರುವ ಗ್ರಂಥಗಳು ಆವುವೆಂದರೆ:—

(೧) ಪ್ರೆಸಿಡೆಂಟ್ ಗಾರ್ಫೀಲ್ಡ್ ಚರಿತ್ರೆಯ ದ್ವಿತೀಯ ಮುದ್ರಣದ ೧೦,೦೦೦ ಪ್ರತಿಗಳು. ಈ ಮುದ್ರಣದ ಕಾರ್ಯವನ್ನು ಬೆಂಗಳೂರು ಬ್ಯಾಪ್ಟಿಸ್ಟ್ ಮಿಷನ್ನವರ ಪ್ರೆಸ್ಸಿಗೆ ಕೆಲವು ಷರತ್ತುಗಳನ್ನು ನಮೂದಿಸಿ ಕೊಡುವುದಾಯಿತು. ಇದರಿಂದ ೧,೫೫೦ ರೂಪಾಯಿಯ ಲಾಭವು ಪರಿಷತ್ತಿಗೆ ಬರಬಹುದಾಗಿದೆ. ಕಳೆದ ವರ್ಷದಲ್ಲಿ ಮೈಸೂರು ರೈಲ್ವೆ ಏಜಂಟರವರ ಪರ್ಸನಲ್ ಅಸಿಸ್ಟೆಂಟರಾದ ಮ|| ರಾ|| ಶ್ರೀ. ಕೆ. ರಾಮಚಂದ್ರರಾವ್, ಬಿ. ಎ., ಎಲ್. ಸಿ. ಇ., ಯವರು ಕರ್ಣಾಟಕ ಭಾಷಾ ಸೇವೆಗಾಗಿ ಪರಿಷತ್ತಿಗೆ ಈ ಪುಸ್ತಕವನ್ನು ಅದರ ಸರ್ವಸ್ವಾತಂತ್ರ್ಯದೊಡನೆ ಅರ್ಪಿಸಿದುದರಿಂದ ಮೇಲ್ಕಂಡಲಾಭವು ಬರುವುದಕ್ಕೆ ಅವಕಾಶವಾಯಿತು. ಮ|| ರಾ|| ರಾಮಚಂದ್ರರಾಯರವರ ಮೇಲುಪಂಕ್ತಿಯನ್ನನುಸರಿಸಿ ಇತರ ಗ್ರಂಥಕರ್ತೃಗಳು ಪರಿಷತ್ತಿಗೆ ಈ ವಿಧವಾಗಿ ಸಹಾಯಮಾಡುವರೆಂದು ನಂಬಿರುತ್ತೇವೆ.

(೨) ಸೆಕೆಂಡರಿ ಸ್ಕೂಲು ಲೀವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ಕನ್ನಡ ಪದ್ಯಭಾಗವನ್ನು ಗದ್ಯವ್ಯಾಖ್ಯಾನದೊಡನೆ ಮುದ್ರಿಸಿರುತ್ತದೆ.

(೩) ತೊರವೆ ರಾಮಾಯಣದ ಬಾಲಕಾಂಡವು ಗದ್ಯವ್ಯಾಖ್ಯಾನದೊಡನೆ ಮುದ್ರಣದಲ್ಲಿದೆ. ಇದು ಸುಮಾರು ಇಪ್ಪತ್ತು ಫಾರಂಗಳಾಗಬಹುದು.

(೪) ಚಾವುಂಡರಾಯಪುರಾಣವನ್ನು ಪರಿಷತ್ಪತ್ರಿಕೆಯ ಸಂಚಿಕೆಗಳಲ್ಲಿ ಮುದ್ರಿಸಿ ಮಾರಾಟಕ್ಕೆ ಕೆಲವು ಪ್ರತಿಗಳನ್ನು ಸಿದ್ಧಪಡಿಸಿದೆ.

ಮುಂದಣ ವರ್ಷದಲ್ಲಿ ಮುದ್ರಿತವಾಗಬೇಕಾಗಿರುವ ಕೆಲವು ಗ್ರಂಥಗಳಿರುವುವು. ಯಾವುವೆಂದರೆ :-

(೧) ದೇವಕವಿಯಿಂದ ರಚಿತವಾದ ಮತ್ತು ಇದುವರೆಗೂ ಮುದ್ರಿತವಾಗದೆ ಇರುವ ಕುಸುಮಾವಳಿಯ ಪೂರ್ವಾರ್ಧದ ಶುದ್ಧಪ್ರತಿಯು ತಯಾರಾಗಿರುವುದು.

(೭) ಕಾಳಿದಾಸನ ಮೇಘಸಂದೇಶದ ಕರ್ಣಾಟಕ ಪರಿವರ್ತನವು ಗೋರಿಬಿದ ನೂರು ಮ॥ ರಾ॥ ಚನ್ನಕೃಷ್ಣಯ್ಯನವರಿಂದ ರಚಿತವಾಗಿ ಪರಿಷತ್ತಿನ ಆಫೀಸಿಗೆ ಬಂದಿದೆ. ಆಂಡಯ್ಯನ ಕಬ್ಬಿಗರಕಾವದ ರೀತಿಯಲ್ಲಿ ಸಂಸ್ಕೃತಪದಗಳ ಪ್ರಯೋಗವಿಲ್ಲದೆ ಈ ಕಾವ್ಯವು ಬರೆಯಲ್ಪಟ್ಟಿರುವುದು.

(೩) ಹರಿಶ್ಚಂದ್ರಚರಿತ್ರೆಯ ವಿಷಯವನ್ನು ಹಿಂದೆಯೇ ಪ್ರಸ್ತಾಪಿಸಿದೆ.

(೪) ಮೈಸೂರು ಸರ್ಕಾರದವರು ಆದಿಪಂಪನ ವಿಕ್ರಮಾರ್ಜುನ ವಿಜಯದ ಮತ್ತು ಅಭಿನವಪಂಪನ ರಾಮಚಂದ್ರಚರಿತಪುರಾಣದ ಪರಿಷ್ಕರಣಕಾರ್ಯವನ್ನು ಪರಿಷತ್ತಿಗೆ ಕೊಟ್ಟಿರುತ್ತಾರೆ. ಈ ಕೆಲಸವನ್ನು ಮೈಸೂರಿನಲ್ಲಿರುವ ಬ್ರಹ್ಮಶ್ರೀಗಳಾದ ಪಂಡಿತ ತಿಮ್ಮಪ್ಪಯ್ಯ ಶಾಸ್ತ್ರಿಗಳು, ಪಂಡಿತ ಕೆ. ಶ್ರೀನಿವಾಸರಾಘವಾಚಾರ್ಯರೂ, ಪಂಡಿತ ವರದಾಚಾರ್ಯರೂ, ಪಂಡಿತ ಸೀತಾರಾಮಶಾಸ್ತ್ರಿಗಳವರೂ ಮಾಡುತ್ತಿರುವರು. ಈ ಪರಿಷ್ಕರಣ ಕಾರ್ಯಕ್ಕಾಗಿ ಮೈಸೂರು ಸರ್ಕಾರದವರು ೧,೦೦೦ ರೂಪಾಯಿಯನ್ನು ಮುಂಜೂರು ಮಾಡಿರುತ್ತಾರೆ. ಕರ್ಣಾಟಕಭಾಷೆಯ ಈ ಎರಡು ಗ್ರಂಥಗಳನ್ನು ಉಪೋದ್ಘಾತಗಳೊಡನೆಯೂ ಕ್ಲಿಷ್ಟಪದದ ನಿಘಂಟುಗಳೊಡನೆಯೂ ಮುದ್ರಿಸಬೇಕೆಂದು ಸಂಕಲ್ಪಿಸಿದೆ.

ಪ್ರಾರ್ಥನೆ.

ಅನುಬಂಧದಲ್ಲಿ ಕೊಟ್ಟಿರುವ ಆಯವ್ಯಯದ ಪಟ್ಟಿಯಲ್ಲಿ ಕಾಣಬರುವಂತೆ ಪಿಂಗಳಸಂವತ್ಸರದಲ್ಲಿ ಬಂದಿರುವ ರೂ. [illegible] ರಲ್ಲಿ ಖರ್ಚು [illegible] ಆಗಿ [illegible] ಉಳಿದಿದೆ. ಹಾಲ್ತಿ ವರ್ಷದಲ್ಲಿ ಮೇಲೆ ಹೇಳಿದ ಗ್ರಂಥಗಳನ್ನು ಮುದ್ರಿಸಬೇಕಾಗಿರುವುದರಿಂದ ಪರಿಷತ್ತಿಗೆ ಹೆಚ್ಚು ಬಂಡವಾಳವು ಅತ್ಯಾವಶ್ಯಕವಾಗಿರುವುದು. ಪರಿಷತ್ತಿನಿಂದ ಭಾಷಾಪರಿಷ್ಕರಣಕಾರ್ಯಗಳೂ ಲೋಕೋಪಯುಕ್ತ ಗ್ರಂಥರಚನೆಯೂ ಸಮರ್ಪಕವಾಗಿ ನಡೆವುದೆಂದು ಮೊದಲು ತೋರಿಸಿ ಆ ಮೇಲೆ ಶ್ರೀಮಂತರುಗಳ, ಬಹಳ ದಿನಗಳಿಂದ ಕನ್ನಡ ನಾಡುಗಳ ಮಹಾಜನಗಳ ಸಹಾಯವನ್ನು ಪ್ರಾರ್ಥಿಸುವುದು ಉಚಿತವೆಂದು ಕಾರ್ಯನಿರ್ವಾಹಕ ಮಂಡಲಿಯವರು ಕಾಲ ನಿರೀಕ್ಷಣೆಯನ್ನು ಮಾಡುತ್ತಾ ಬಂದಿರುವರು. ಈಗ ಆ ಸಮಯವು ಒದಗಿದೆ. ಪರಿಷತ್ತಿನ ಕಾರ್ಯಗಳು ಸಮರ್ಪಕವಾಗಿ ನಡೆಯುವುದಕ್ಕೆ ಬೇಕಾಗಿರುವ ದ್ರವ್ಯಸಂಪತ್ತಿಯನ್ನು ಸರ್ವರೂ ಒದಗಿಸಿಕೊಟ್ಟು ಪರಿಷತ್ತಿನ ಕಾರ್ಯಗಳು ನೆರವೇರುವಂತೆ ಮಾಡಿ ಕೀರ್ತಿಯನ್ನು ಪಡೆಯಬೇಕೆಂದು ಕಾರ್ಯನಿರ್ವಾಹಕ ಮಂಡಲಿಯವರು ವಿನಯಪೂರ್ವಕವಾಗಿ ಪ್ರಾರ್ಥಿಸಿರುತ್ತಾರೆ.

ಕರ್ಣಾಟಕಸಾಹಿತ್ಯ ಪರಿಷತ್ತು. | ಬಿ. ಎಸ್. ಅಚ್ಯುತರಾವ್,
ಬೆಂಗಳೂರು ಸಿಟಿ. | ಆರ್. ರಘುನಾಥರಾವ್.
[illegible] | ಜಂಟಿ ಗೌರವಕಾರ್ಯದರ್ಶಿಗಳು.

ಕರ್ಣಾಟಕಸಾಹಿತ್ಯಪರಿಷತ್ತಿನ ಹಿಂಗಳ ಸಂವತ್ಸರದ ಆಯುವ್ಯಯುಗಳ ಮೊತ್ತದ ಪಟ್ಟಿ. (೧೯೧೭—೧೮.)

	ಆಯ.	ಮೊಬಲಗು. ರೂ.	ಆ.	ಪೈ.		ವ್ಯಯ.	ಮೊಬಲಗು. ರೂ.	ಆ.	ಪೈ.	ಷರಾ.
1	ಹಿಂದಿನಸಿಲ್ಕು ...	475	10	9	1	ಆಫೀಸು ಸಿಬ್ಬಂದಿ ...	680	8	4	* ಇದರಲ್ಲಿ ಕಾಗದದವರಿಗೆ ಕೊಡಬೇಕಾದ ರೂ. 1,650 ಉಳಿಸಿಕೊಂಡಿದೆ.
2	ಆಶ್ರಯದಾತರು ಮುಂತಾದವರಿಂದ ಬಂದ ಮೊಬಲಗು ...	834	2	0	2	ಮನೆಯ ಬಾಡಿಗೆ ...	420	0	0	
					3	ದೀಪದ ಖರ್ಚು ...	34	11	5	
3	ಪರಿಷತ್ಪತ್ರಿಕೆಯ ಚಂದಾಮೊಬಲಗು	46	0	0	4	ಕಾಗದ ಮುಂತಾದುವುಗಳಿಗೆ, ...	*1,700	9	0	
4	ಸರ್ಕಾರದಿಂದ ತಿಂಗಳಗಟ್ಟಲೆ ಸಹಾಯದ್ರವ್ಯ	1,228	11	4	5	ಕರ್ಟಿಜಿಸಿ ಟಪ್ಪಾಲು ಹಾಸಲು ...	92	11	3	
5	ಪುಸ್ತಕಗಳ ಮಾರಾಟದಿಂದ ಮೊಬಲಗು	4,480	3	5	6	ಮುದ್ರಣದ ಖರ್ಚು ...	4,891	3	0	
6	ಡಿಪಾಜಿಟ್ಟು ಮೊಬಲಗಿನ ಮೇಲೆ ಬಂದಬಡ್ಡಿ	29	0	10	7	ವಾರಪತ್ರಿಕೆ ಮುಂತಾದುವುಗಳ ಚಂದಾ...	73	4	0	
7	ಇತರ ಬಾಬುಗಳಿಂದ ಬಂದ ಹಣ ...	1,777	8	0	8	ಭಾಂಡಾಗಾರಕ್ಕೆ ಸೇರಿಸಿದ ಪುಸ್ತಕಗಳಿಗಾಗಿ	111	5	0	
					9	ಸಾಮಾನುಗಳಿಗಾಗಿ ...	83	0	0	
					10	ಪೆಟ್ಟಿ ಸ್ಟಾಕ್ ...	38	8	0	
					11	ಇತರ ಬಾಬುಗಳಿಗೆ ...	317	6	2	
					12	ಈಗಿನ ಸಿಲ್ಕು :— ..	428	2	2	
	ಜುಮ್ಲಾ...	8,871	4	4		ಜುಮ್ಲಾ ...	8,871	4	4	

Checked with available vouchers and found correct.

H. R. KRISHNAMURTHY, B. A.

M. S. PUTTANNA, B. A.

Auditors.

R. RAGHUNATHA RAO, B. A.,

ಜಂಟಿ ಗೌರವ ಕಾರ್ಯದರ್ಶಿ.

ಸಮ್ಮೇಳನದ ಅಧ್ಯಕ್ಷರ ಭಾಷಣ.

ಅನಂತರ ಅಧ್ಯಕ್ಷರಾದ ಶ್ರೀಯುತ ಆರ್. ನರಸಿಂಹಾಚಾರ್ಯರು ತಮ್ಮ ಅಮೋಘವೂ, ಕರ್ಣಾಟಕ ಭಾಷೆ ಮತ್ತು ದೇಶಗಳ ಇತಿಹಾಸಮಿಶ್ರಿತವೂ ಆದ ಈ ಕೆಳಗಣ ಭಾಷಣವನ್ನು ಮಾಡಿ ಸಾಮಾಜಿಕರನ್ನು ಆನಂದಗೊಳಿಸಿದರು:—

ಮಹಾಶಯರೇ! ದೇಶಬಾಂಧವರೇ! ಭಾಷಾಭಿಮಾನಿಗಳೇ!

ತಾವುಗಳು ತಮ್ಮಗಳ ಉದಾರಾಶ್ರಯದಿಂದ ಅಲ್ಪಜ್ಞನಾದ ನನ್ನನ್ನು ಈ ಉನ್ನತ ಪದವಿಗೆ ನಿಯಮಿಸಿ ಗೌರವಿಸಿದುದಕ್ಕಾಗಿ ನನ್ನ ಕೃತಜ್ಞತೆಯ ಪರಿಮಿತಿಯನ್ನು ಮಾತುಗಳ ಮೂಲಕ ತಿಳಿಸಲು ಅಶಕ್ತನಾಗಿದ್ದೇನೆ. ಈ ಮಹಾಪದವಿಯ ಕಾರ್ಯವನ್ನು ನಿರ್ವಹಿಸುವ ಶಕ್ತಿ ನನ್ನಲ್ಲಿಲ್ಲದಿದ್ದರೂ ದೇಶಭಾಂಧವರೂ ಭಾಷಾಭಿಮಾನಿಗಳೂ ಆದ ತಮ್ಮಗಳ ಆಜ್ಞೆಯನ್ನು ಶಿರಸಾವಹಿಸಿ ನನ್ನಿಂದಾದಮಟ್ಟಿಗೆ ಕನ್ನಡನಾಡಿನ ಮತ್ತು ಕನ್ನಡ ನುಡಿಯ ಸೇವೆಯನ್ನು ಅಲ್ಪಸ್ವಲ್ಪವಾದರೂ ತಮ್ಮೊಡನೆ ಸೇರಿ ಮಾಡುವುದು ಕರ್ತವ್ಯವೆಂದು ತಿಳಿದು ಈ ಮಹಾಕಾರ್ಯಕ್ಕೆ ಸಮ್ಮತಿಸಿರುವೆನು. ಈ ಕಾರ್ಯವು ತಮ್ಮಗಳ ಸಹಾಯದಿಂದ ಸುಲಲಿತವಾಗಿ ನಡೆದು ಫಲೋಪರ್ಕವಾಗಬೇಕೆಂದು ಜಗದೀಶ್ವರನಲ್ಲಿ ಪ್ರಾರ್ಥಿಸುವೆನು.

ಕನ್ನಡನಾಡಿನ ಮತ್ತು ಕನ್ನಡ ನುಡಿಯ ಪ್ರಾಚೀನತೆ.

ಕ್ರಿಸ್ತಪೂರ್ವ ೩-ನೆಯ ಶತಮಾನದಲ್ಲಿ ಅಶೋಕನು ಬನವಾಸಿಗೆ ಒಬ್ಬ ಬೌದ್ಧ ಬೋಧಕನನ್ನು ಕಳುಹಿಸಿದಂತೆ ತಿಳಿಯುತ್ತದೆ. ಅದೇ ಕಾಲದಲ್ಲಿ ಮಹಿಷಮಂಡಲಕ್ಕೆ ಮತ್ತೊಬ್ಬ ಬೋಧಕನನ್ನು ಕಳುಹಿಸಿದಂತೆಯೂ ತಿಳಿಯುತ್ತದೆ. ಈ ಮಹಿಷಮಂಡಲವು ಮೈಸೂರು ದೇಶವಲ್ಲ, ಗೋದಾವರಿಯ ಸಮೀಪದ ಪ್ರಾಂತವು ಎಂದು ಮಿ॥ ಫ್ಲೀಟ್ ಬರೆದಿದ್ದಾರೆ. ಆದರೂ ಮೈಸೂರುಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಶಾಸನಗಳಲ್ಲಿಯೂ ಪ್ರಾಚೀನಗ್ರಂಥಗಳಲ್ಲಿಯೂ ದೊರೆಯುತ್ತದೆ. ಮೈಸ ಎಂಬುದು ಮಹಿಷ ಎಂಬ ಶಬ್ದದ ತದ್ಭವವು. ತಮಿಳುಭಾಷೆಯಲ್ಲಿರುವ ಅಗನಾನೂರು ಎಂಬ ಕವಿಸೂಕ್ತಿಕದಂಬದಲ್ಲಿ ಕ್ರಿಸ್ತ ಶಕ ೨-ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ ಉಕ್ತಿಯಾದ ೧೧೫ ನೆಯ ಪದ್ಯದಲ್ಲಿ ಎರುಮೈನಾಡು (ಎರುಮೈ = ಮಹಿಷ) ಎಂಬ ಹೆಸರನ್ನು ಹೇಳಿ ಇದು ಪಶ್ಚಿಮಪ್ರಾಂತದಲ್ಲಿ (ಕುಡನಾಡು)ಇದೆ ಎಂದೂ ಹೇಳಿದೆ. ನಕ್ಕೀರರ್ ಎಂಬ ಮತ್ತೊಬ್ಬ ಪುರಾತನ ಕವಿಯ ಉಕ್ತಿಯಾದ ೨೬-ನೆಯ ಪದ್ಯದಲ್ಲಿ-ನೆಡುಂಜೆಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರನ್, ಚೋಳನ್, ತಿತಿಯನ್, ಎಳಿನಿ, ಎರುಮೈಯೂರನ್ (ಮಹಿಷಪುರದವನು), ಇರುಂಕೋವೇಣ್ಮಾನ್, ಪೊರುನನ್ ಎಂಬ ಏಳು ರಾಜರನ್ನೂ ಯುದ್ಧದಲ್ಲಿ ಸೋಲಿಸಿದಂತೆ ಹೇಳಿದೆ. ಅದೇ ಕವಿಯ ಉಕ್ತಿಯಾದ ೨೫೩ ನೆಯ ಪದ್ಯದಲ್ಲಿ ಮಹಿಷಪುರದವನು ಬಡಗರ ಕುಲದವನು ಎಂದು ಉಕ್ತವಾಗಿದೆ. ಶಿಲಪ್ಪದಿಕಾರಂ ಎಂಬ ಮತ್ತೊಂದು ತಮಿಳುಗ್ರಂಥದಲ್ಲಿ ಎರಡನೆಯ ಶತಮಾನದಲ್ಲಿದ್ದ

ಶೆಂಗುಟ್ಟುವನ್ ಎಂಬ ಚೇರರಾಜನು ಉತ್ತರದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತಂಗಿ ಕನ್ನಡರು ಆಡಿದ ಕುಣಿತವನ್ನು ನೋಡಿ ಸಂತೋಷಿಸಿದನು ಎಂದು ಹೇಳಿದೆ. ಈ ಕುಣಿತವು ಈಗ ಮಲೆನಾಡಿನಲ್ಲಿ ಆಡುವ ಸುಗ್ಗಿಯ ಕುಣಿತದಂತಿದ್ದಿರಬಹುದೆಂದು ತೋರುತ್ತದೆ.

ಉತ್ತರದೇಶದಲ್ಲಿ ಭದ್ರಬಾಹುವೆಂಬ ಶ್ರುತಕೇವಲಿಯ ಕಾಲದಲ್ಲಿ ದ್ವಾದಶ ವಾರ್ಷಿಕಕ್ಷಾಮವುಂಟಾಗಲು, ಜೈನಸಂಘವು ದಕ್ಷಿಣದಿಕ್ಕಿನಲ್ಲಿರುವ ಪುನ್ನಾಟರಾಷ್ಟ್ರಕ್ಕೆ ಪ್ರಯಾಣಮಾಡಿದಂತೆ ಜೈನಗ್ರಂಥಗಳಲ್ಲಿ ಹೇಳಿದೆ. ಈ ಪುನ್ನಾಟರಾಷ್ಟ್ರವು ಮೈಸೂರು ಸೀಮೆಯ ದಕ್ಷಿಣಭಾಗದಲ್ಲಿದ್ದಿತು. ಇದನ್ನು ರಾಷ್ಟ್ರವರ್ಮನೇ ಮೊದಲಾದ ರಾಜರು ಕೀರ್ತಿಪುರವೆಂಬ ರಾಜಧಾನಿಯಲ್ಲಿ ನೆಲಸಿ ಆಳಿದರು; ಇದಕ್ಕೆ ಕನ್ನಡದಲ್ಲಿ ಪುನ್ನಾಡು ಎಂದು ಹೆಸರು. ಕೀರ್ತಿಪುರವೆಂಬುದು ಈಗ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಕಿತ್ತೂರು. ಎರಡನೆಯ ಶತಮಾನದಲ್ಲಿದ್ದ ಟಾಲಮಿ ಪುನ್ನಾಟರಾಷ್ಟ್ರದ ಹೆಸರನ್ನು ಪೌನ್ನಾಟ ಎಂದು ಹೇಳಿ ಅದು ಮರಕತರತ್ನಕ್ಕೆ (beryl) ಹೆಸರುವಾಸಿಯನ್ನು ಹೊಂದಿದ್ದಿತು ಎಂದು ಬರೆದಿದ್ದಾನೆ.

ಆಂಧ್ರಭೃತ್ಯರ ಕಾಲದಲ್ಲಿ ಅವರ ಪ್ರತಿನಿಧಿಯೊಬ್ಬನು ಚಿತ್ರದುರ್ಗದಲ್ಲಿ ನಿಂತು ಆಳುತ್ತಿದ್ದಂತೆ ಅಲ್ಲಿ ದೊರೆತ ನಾಣ್ಯಗಳಿಂದ ತಿಳಿಯುತ್ತದೆ. ಈ ನಾಣ್ಯಗಳು ಸೀಸದವು. ಇವುಗಳೊಳಗೆ ರಾಜರ ನಾಣ್ಯಗಳಲ್ಲಿ ಚೈತ್ಯವೂ ಬೋಧಿವೃಕ್ಷವೂ ಅಂಕಿತವಾಗಿರುವುದಲ್ಲದೆ ಮುಡಾನಂದ, ಚುಟುಕಡಾನಂದ ಎಂಬ ಹೆಸರುಗಳೂ ದೊರೆಯುತ್ತವೆ. ಪ್ರತಿನಿಧಿಯ ನಾಣ್ಯಗಳಲ್ಲಿ ಅವನ ಹೆಸರೂ ವೃಷಭವೂ ಬೋಧಿವೃಕ್ಷವೂ ಕೆತ್ತಲ್ಪಟ್ಟಿವೆ. ಶಿವಮೊಗ್ಗ ಜಿಲ್ಲಾ ಶಿಕಾರಿಪುರ ತಾಲ್ಲೂಕು ತಾಳಗುಂದಗ್ರಾಮದ ಪ್ರಣವೇಶ್ವರ ದೇವಸ್ಥಾನದ ಇದಿರಿಗಿರುವ ಶಿಲಾಸ್ತಂಭದಲ್ಲಿ ೫-ನೆಯ ಶತಮಾನದ ಕದಂಬರಾಜರ ಒಂದು ಶಾಸನವಿದೆ. ಇದರಲ್ಲಿ ಆ ದೇವರು ಶಾತಕರ್ಣಿ ಮೊದಲಾದವರಿಂದ ಪೂಜಿಸಲ್ಪಟ್ಟುದಾಗಿ ಹೇಳಿದೆ.

ಕೆಳಗಣ ಈಜಿಪ್ಟ್ ದೇಶದಲ್ಲಿಯ ಆಕ್ಸಿರಿಂಕಸ್ ಎಂಬ ಸ್ಥಳದಲ್ಲಿ ದೊರೆತ ೨-ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ್ ನಾಟಕದಲ್ಲಿ ಕೆಲವು ಕನ್ನಡಶಬ್ದಗಳೂ ವಾಕ್ಯಗಳೂ ದೊರೆಯುತ್ತವೆ; ಉದಾಹರಣೆ—ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೇರೆತ್ತುವೆ. ರಾಷ್ಟ್ರಕೂಟರಾಜನಾದ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ತನಗೆ ಹಿಂದೆ ಇದ್ದ ಗದ್ಯಗ್ರಂಥಕರ್ತೃಗಳಲ್ಲಿ ದುರ್ವಿನೀತನ ಹೆಸರನ್ನು ಹೇಳಿದ್ದಾನೆ. ಈತನು ಆ ಹೆಸರಿನ ಗಂಗರಾಜನಾಗಿರಬಹುದು. ಇವನ ಕಾಲವು ಸುಮಾರು ೫೦೦ ಆಗುತ್ತದೆ. ೫-ನೆಯ ಶತಮಾನದಿಂದ ಕನ್ನಡಶಾಸನಗಳು ದೊರೆಯುತ್ತವೆ. ಭಟ್ಟಾಕಳಂಕನು ಕನ್ನಡಭಾಷೆಯ ವಿಷಯವಾಗಿ-ನಚೈಷಾ ಭಾಷಾ ಶಾಸ್ತ್ರಾನುಪಯೋಗಿನೀ, ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾನಸ್ಯ ಷಣ್ಣವತಿಸಹಸ್ರಪ್ರಮಿತ ಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯಾನ್ಯೇಷಾಂ ಚ ಶಬ್ದಾಗಮಯುಕ್ತ್ಯಾಗಮಪರಮಾಗಮವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರ

ಕಲಾಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್ (ಕನ್ನಡದಲ್ಲಿ ತತ್ವಾರ್ಥಮಹಾಶಾಸ್ತ್ರಕ್ಕೆ ವ್ಯಾಖ್ಯಾನರೂಪವಾದ ೯೬೦೦೦ ಗ್ರಂಥಪರಿಮಿತಿಯುಳ್ಳ ಚೂಡಾಮಣಿಯೂ, ಷಬ್ದಾಗಮ, ಯುಕ್ತ್ಯಾಗಮ, ಪರಮಾಗಮ ಇವುಗಳಿಗೆ ಸಂಬಂಧಪಟ್ಟ ಗ್ರಂಥಗಳೂ, ಕಾವ್ಯ, ನಾಟಕ, ಅಲಂಕಾರ, ಕಲಾಶಾಸ್ತ್ರ ಈ ವಿಷಯವಾದ ಗ್ರಂಥಗಳೂ ಹೇರಳವಾಗಿ ದೊರೆವುದರಿಂದ ಈ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ) ಎಂದು ಬರೆದಿದ್ದಾನೆ. ಈ ಚೂಡಾಮಣಿಯನ್ನು ಬರೆದವನು ತುಂಬುಲೂರಾಚಾರ್ಯ ಎಂಬ ನಾಮಾಂತರವುಳ್ಳ ಶ್ರೀವರ್ಧದೇವನು. ಇವನನ್ನು

> ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ ।
> ಶ್ರೀವರ್ಧದೇವ ಸಂಧತ್ಸೇ ಜಿಹ್ವಾಗ್ರೇಣ ಸರಸ್ವತೀಂ ॥

(ಈಶ್ವರನು ಗಂಗೆಯನ್ನು ಜಟಾಗ್ರದಲ್ಲಿ ಧರಿಸಿದನು; ಶ್ರೀವರ್ಧದೇವನೇ! ನೀನು ಸರಸ್ವತಿಯನ್ನು ನಾಲಗೆಯ ತುದಿಯಲ್ಲಿ ಧರಿಸಿದ್ದೀಯೆ) ಎಂದು ೭-ನೆಯ ಶತಮಾನದ ಅಂತ್ಯದಲ್ಲಿದ್ದ ದಂಡಿ ಸ್ತುತಿಸಿರುವಂತೆ ಒಂದು ಶಾಸನದಿಂದ ತಿಳಿಯುತ್ತದೆ. ೭-ನೆಯ ಶತಮಾನಕ್ಕೆ ಹಿಂದೆಯೇ ಇಂತಹ ಅಪಾರವಾದ ಗ್ರಂಥವು ಹುಟ್ಟಬೇಕಾದರೆ ಆ ಕಾಲಕ್ಕೆ ಬಹಳ ಹಿಂದೆಯೇ ಕನ್ನಡದಲ್ಲಿ ಗ್ರಂಥರಚನೆ ಆರಂಭವಾಗಿರಬೇಕು. ಸುಮಾರು ೭೦೦-ರಲ್ಲಿದ್ದ ಶ್ಯಾಮಕುಂದಾಚಾರ್ಯನು ಪ್ರಾಭೃತವನ್ನು ಕನ್ನಡದಲ್ಲಿ ಬರೆದಿರುವುದಾಗಿ ಇಂದ್ರನಂದಿಯ ಶ್ರುತಾವತಾರದಲ್ಲಿಯ

> ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶ್ಯಾಮಕುಂದಸಂಜ್ಞೇನ ।
> ಪ್ರಾಕೃತ ಸಂಸ್ಕೃತ ಕರ್ಣಾಟಭಾಷಯಾ ಪದ್ಧತಿಃ ಪರಾ ರಚಿತಾ ॥

ಎಂಬ ಪದ್ಯದಿಂದ ತಿಳಿಯುತ್ತದೆ. ೯-ನೆಯ ಶತಮಾನದಲ್ಲಿ ಹುಟ್ಟಿದ ಕವಿರಾಜಮಾರ್ಗವೇ ನಮಗೆ ದೊರೆತಿರುವ ಆದಿಗ್ರಂಥವಾಗಿದೆ.

ಯಾಪ್ಪರುಂಗಲಕ್ಕಾರಿಹೈ ಎಂಬ ತಮಿಳು ಛಂದೋಗ್ರಂಥದಿಂದ ಕನ್ನಡದಲ್ಲಿ ಗುಣಗಾಂಕಿಯಂ ಎಂಬ ಒಂದು ಛಂದೋಗ್ರಂಥವು ಇದ್ದಂತೆ ತಿಳಿಯುತ್ತದೆ. ಗುಣಗಾಂಕಿಯವು ಸ್ತ್ರೀಗೆ ಸಂಬೋಧಿಸಿದೆ ಎಂದೂ ತಮಿಳುಗ್ರಂಥವೂ ಆ ರೀತಿಯನ್ನೇ ಅನುಸರಿಸಿದೆ ಎಂದೂ ಹೇಳಿದೆ. ತಮಿಳು ಗ್ರಂಥವನ್ನು ಬರೆದ ಅಮೃತಸಾಗರನೆಂಬ ಕವಿ ೧೧-ನೆಯ ಶತಮಾನಕ್ಕೆ ಹಿಂದೆ ಇದ್ದವನು. ಕನ್ನಡಗ್ರಂಥವನ್ನು ಬರೆದ ಕವಿಯು ಹೆಸರು ಹೇಳಿಲ್ಲ. ಅವನು ತನ್ನ ಗ್ರಂಥವನ್ನು ಗುಣಗ, ಗುಣಗಾಂಕ, ಗುಣಕೆನಲ್ಲ ಎಂಬ ವಿಶೇಷಣಗಳುಳ್ಳ ೩-ನೆಯ ವಿಜಯಾದಿತ್ಯನೆಂಬ (೮೪೪—೮೮೮) ಪೂರ್ವದೇಶದ ಚಾಲುಕ್ಯರಾಜನಿಗೆ ಅಂಕಿತಮಾಡಿದಂತೆ ತೋರುತ್ತದೆ. ಈ ಗ್ರಂಥವು ನಮಗೆ ದೊರೆತಿಲ್ಲ. ನಾಗವರ್ಮನ ಕಾಲಕ್ಕೆ ಹಿಂದೆ ಹುಟ್ಟಿದ ಈ ಗ್ರಂಥವೇ ಕನ್ನಡಛಂದಸ್ಸಿನಲ್ಲಿ ಆದಿಗ್ರಂಥ.

ಸುಮಾರು ೯೦೦-ರಲ್ಲಿದ್ದ ರಾಜಶೇಖರನೆಂಬ ಸಂಸ್ಕೃತಕವಿ ತನ್ನ ಕಾವ್ಯಮೀಮಾಂಸೆಯೆಂಬ ಗ್ರಂಥದಲ್ಲಿ ಕರ್ಣಾಟರು ಓದುವ ರೀತಿಯನ್ನು ಕುರಿತು ಹೀಗೆ ಬರೆದಿದ್ದಾನೆ—

ರಸಃ ಕೋಽಸ್ತ್ವಸ್ತು ಕಾಽಪ್ಯಸ್ತು ರೀತಿಃ ಕೋಽಪ್ಯಸ್ತು ವಾ ಗುಣಃ ।
ಸಗರ್ವಂ ಸರ್ವಕರ್ಣಾಟಾಷ್ಟಂಕಾರೋತ್ತರಪಾಠಿನಃ ॥

(ರಸ, ರೀತಿ, ಗುಣ ಇವು ಯಾವುವಾದರೂ ಆಗಲಿ, ಎಲ್ಲಾ ಕರ್ಣಾಟರೂ ಹೆಮ್ಮೆಯಿಂದ ಟಂಕಾರದೊಡನೆ ಓದುತ್ತಾರೆ.)

ಕನ್ನಡನಾಡಿನ ದೊರೆಗಳು.

ಕನ್ನಡನಾಡಿನಲ್ಲಿ, ಕಾಲಕ್ರಮದಲ್ಲಿ ಅನೇಕ ರಾಜ್ಯಗಳು ಹುಟ್ಟಿ ಅವುಗಳಲ್ಲಿ ಆಂಧ್ರರೂ, ಕದಂಬರೂ, ಗಂಗರೂ, ಚಾಳುಕ್ಯರೂ, ರಾಷ್ಟ್ರಕೂಟರೂ, ಕಾಳಚುರ್ಯರೂ, ಹೊಯ್ಸಳರೂ, ವಿಜಯನಗರದರಸರೂ, ಮೈಸೂರರಸರೂ ಆಳಿದರು. ಈ ಮೂರ್ಧಾಭಿಷಿಕ್ತರಾದ ರಾಜರಲ್ಲದೆ ಅಲ್ಲಲ್ಲಿ ಅನೇಕ ಸಾಮಂತರಾಜರೂ ಇದ್ದರು. ಈ ರಾಜರೆಲ್ಲರೂ ಪ್ರಾಯಿಕವಾಗಿ ಪರಾಕ್ರಮಶಾಲಿಗಳಾಗಿಯೂ ಧರ್ಮಪರಾಯಣರಾಗಿಯೂ ವಿದ್ಯಾಪಕ್ಷಪಾತಿಗಳಾಗಿಯೂ ದಿಗಂತವಿಶ್ರಾಂತಕೀರ್ತಿಭಾಜನರಾಗಿಯೂ ರಾಜ್ಯಭಾರಮಾಡಿದರು. ಹಲವರು ಭಿನ್ನಮತಸ್ಥರಾದರೂ ರಾಗದ್ವೇಷಗಳಿಲ್ಲದೆ ಅನ್ಯಮತಗಳನ್ನು ಸಮದೃಷ್ಟಿಯಿಂದ ಕಾಣುತ್ತ ಅವಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಬೇರೆ ಬೇರೆ ಮತಸ್ಥರಿಗೆ ಪರಸ್ಪರ ವೈಮನಸ್ಯವು ಹುಟ್ಟಿದಾಗ ರಾಜರುಗಳು ಸಮಾಧಾನಪಡಿಸಿ ಸೌಹಾರ್ದವನ್ನು ನೆಲೆಗೊಳಿಸಿದಂತೆ ಶಾಸನಗಳಿಂದ ತಿಳಿಯುತ್ತದೆ. ವಿದ್ವಾಂಸರು, ವಿರಕ್ತರು, ಭಕ್ತರು ಇವರುಗಳಿಗೆ ತಕ್ಕ ಮನ್ನಣೆಯನ್ನು ಮಾಡಿ ಗೌರವಿಸುತ್ತಿದ್ದರು. ಗುಣಗ್ರಾಹಿಗಳಾಗಿ ಗುಣವಿಶಿಷ್ಟರನ್ನು ಆರಿಸಿ ತಕ್ಕ ಪದವಿಗಳಲ್ಲಿಟ್ಟು ತಮಗೂ ತಮ್ಮ ರಾಜ್ಯಕ್ಕೂ ಕ್ಷೇಮವುಂಟಾಗುವಂತೆ ಪೋಷಿಸಿದರು. ಕನ್ನಡನಾಡು ವಿದ್ಯಾವಿಭವದಿಂದಲೂ ವಾಣಿಜ್ಯಶಿಲ್ಪಾದಿ ಕಲಾಕೌಶಲ್ಯದಿಂದಲೂ ಪ್ರಜಾನುರಾಗದಿಂದಲೂ ಶೋಭಿಸುತ್ತಿದ್ದಿತು.

ಕನ್ನಡನಾಡಿನ ಮಹಿಮೆ.

ದ್ವೈತಮತೋದ್ಧಾರಕರಾದ ಮಧ್ವಾಚಾರ್ಯರಿಗೆ ಕನ್ನಡನಾಡು ತವರುಮನೆ; ಅದ್ವೈತಮತೋದ್ಧಾರಕರಾದ ಶಂಕರಾಚಾರ್ಯರಿಗೂ ವಿಶಿಷ್ಟಾದ್ವೈತಮತೋದ್ಧಾರಕರಾದ ರಾಮಾನುಜಾಚಾರ್ಯರಿಗೂ ಆಶ್ರಯಸ್ಥಾನ. ಇವರುಗಳಿಂದ ಸ್ಥಾಪಿತವಾದ ಮಠಗಳೂ ಶಾಖಾಮಠಗಳೂ ಇಲ್ಲಿ ಈಗಲೂ ಶೋಭಿಸುತ್ತಿರುವುವು. ಈ ನಾಡು ವಿದ್ಯಾತೀರ್ಥ, ವಿದ್ಯಾರಣ್ಯ, ಸಾಯಣಾಚಾರ್ಯ, ಶ್ರೀಪಾದರಾಯ, ವ್ಯಾಸರಾಯ, ರಾಘವೇಂದ್ರಯತಿ, ಅನಂತಾಚಾರ್ಯ, ವೇದಾಂತಾಚಾರ್ಯ, ಪುರಂದರದಾಸ, ಕನಕದಾಸ, ಬಸವ, ಸಿದ್ಧರಾಮ, ನೇಮಿಚಂದ್ರ, ಶುಭಚಂದ್ರ ಇವರೇ ಮುಂತಾದ ತಪೋಧನ

ರಿಂದಲೂ ವಿದ್ವದ್ವರ್ಯರಿಂದಲೂ ತತ್ವದರ್ಶಿಗಳಿಂದಲೂ ಭಕ್ತಶಿರೋಮಣಿಗಳಿಂದಲೂ ಅಲಂಕೃತವಾಗಿದ್ದಿತು. ವಾಣಿಜ್ಯ, ಶಿಲ್ಪ ಮುಂತಾದ ಕಲೆಗಳಲ್ಲಿ ಅಸದೃಶವಾದ ನೈಪುಣ್ಯವನ್ನು ಹೊಂದಿದವರೂ ಕನ್ನಡನುಡಿಯ ಸೊಬಗನ್ನು ಪ್ರಕಾಶಗೊಳಿಸಲು ಸಮರ್ಥರಾದ ಕವಿಶಿಖಾಮಣಿಗಳೂ ಈ ನಾಡಿನ ಕೀರ್ತಿಯನ್ನು ಸ್ಥಿರೀಕರಿಸಿದ್ದಾರೆ.

ವಾಣಿಜ್ಯ.

ಚಿತ್ರದುರ್ಗದಲ್ಲಿ ಆಂಧ್ರಭೃತ್ಯರ ಸೀಸದ ನಾಣ್ಯಗಳು ದೊರೆತುವೆಂದು ಹಿಂದೆಯೇ ತಿಳಿಸಿದ್ದೇನೆ. ಅದೇ ಸ್ಥಳದಲ್ಲಿ ಕ್ರಿಸ್ತಪೂರ್ವ ೨-ನೆಯ ಶತಮಾನದಲ್ಲಿದ್ದ ಹರ್ವುತಿ ಎಂಬ ಚೀನದೇಶದ ಚಕ್ರವರ್ತಿಯ ಹಿತ್ತಾಳೆನಾಣ್ಯವೂ ಕ್ರಿಸ್ತಶಕ ೧೪-ರಲ್ಲಿ ಸತ್ತ ಅಗಸ್ಟಸ್ ಎಂಬ ರೋಮ್ ಚಕ್ರವರ್ತಿಯ ಡಿನೇರಿಯಸ್ ಎಂಬ ಬೆಳ್ಳಿ ನಾಣ್ಯಗಳೂ ದೊರೆತುವು. ಇದರಿಂದ ಪೂರ್ವಕಾಲದಲ್ಲಿ ಕನ್ನಡನಾಡಿನ ವಾಣಿಜ್ಯವು ಎಷ್ಟರ ಮಟ್ಟಿಗೆ ವ್ಯಾಪಿಸಿದ್ದಿತು ಎಂಬಂಶವನ್ನು ಸ್ವಲ್ಪಮಟ್ಟಿಗೆ ಊಹಿಸಬಹುದಾಗಿದೆ. ವೀರಬಣಂಜು ಧರ್ಮಕ್ಕೆ ಅಯ್ಯಾವಳೆ (ಐಹೊಳೆ) ಜನ್ಮಸ್ಥಾನವೆಂದು ಶಾಸನಗಳಲ್ಲಿ ಹೇಳಿದೆ. ೧೧೮೮-ರಲ್ಲಿ ಬರೆದ ಒಂದು ಶಾಸನದಲ್ಲಿ (ಅರಸೀಕೆರೆ ೨೨) ಚೆಟ್ಟಿಪಸೆಟ್ಟಿ ಎಂಬವನು ಇಂದ್ರನ ಉಚ್ಚೈಶ್ರವಸ್ಸಿಗೆ ಸಮಾನವಾದ ಕುದುರೆಗಳನ್ನೂ ಐರಾವತಕ್ಕೆ ಸದೃಶವಾದ ಆನೆಗಳನ್ನೂ ಶ್ರೇಷ್ಠವಾದ ಮುತ್ತುಗಳನ್ನೂ ಹಡಗುಗಳಲ್ಲಿ ತಂದು ದೊರೆಗಳಿಗೆ ಮಾರುತ್ತಿದ್ದಂತೆ ಹೇಳಿದೆ—

ಹರಿಯ ಹಯಕ್ಕೆ ತೋಱೆನಿಪ ಹೇಷಜಯಂಗಳನಿಂದ್ರದಂತಿಯೊಳ್ ।
ದೊರೆಯೆನಿಸಿರ್ಪ ದಂತಿಗಳನಭ್ರದೊಳಾದ ಸುಪಾಣಿಮುತ್ತಿನೊಳ್ ॥
ಸರಿಯೆನಿಸಿರ್ಪ ಮುತ್ತುಗಳನೆಯ್ದೆ ಬಹಿತ್ರದೆ ತಂದು ಮಾರುವಂ ।
ಧರಣಿಪಗೋಲ್ದು ಕಮ್ಮಟದ......ಚೆಟ್ಟಿಪಸೆಟ್ಟಿ ಸಂತತಂ ॥

ಅದೇ ಶಾಸನದಲ್ಲಿ ದಾಸೆಯನೆಂಬ ವರ್ತಕನು ಪೂರ್ವದೇಶದ ವಸ್ತುಗಳನ್ನು ಪಶ್ಚಿಮದೇಶಕ್ಕೂ ಪಶ್ಚಿಮದೇಶದ ವಸ್ತುಗಳನ್ನು ಪೂರ್ವದೇಶಕ್ಕೂ ಉತ್ತರದೇಶದ ಭಂಡಗಳನ್ನು ದಕ್ಷಿಣದೇಶಕ್ಕೂ ದಕ್ಷಿಣದೇಶದ ಭಂಡಗಳನ್ನು ಉತ್ತರದೇಶಕ್ಕೂ ಕಳುಹಿಸುತ್ತಿದ್ದನೆಂದು ಹೇಳಿದೆ—

ಹರಿದಾಶಾಭಾಂಡಮಂ ಪಾರುಣಿಗೆ ನಡಸುವಂ ಪಾರುಣೀವಸ್ತುವಂ ಪೂ ।
ಸ್ತರದಿಂದಿಂದ್ರಾಶೆಯೊಳ್ ಪೆರ್ಚಿಸುವನೊಸೆದು ಕಾಬೇರಿಯಿಂ ದ್ಯುಮ್ನಮಂ
ನೋ ॥
ಡಿರೆ ಯಾಮ್ಯಾಭಾಗದೊಳ್ ಸಂದಿಸುವನೆಸೆವ ಮೋಲ್ಯಂಗಳಂ ಯಾಮ್ಯದಿಂದು ।
ತ್ತರದಿಕ್ಕಿಂಗಟ್ಟುವಂ ನೋಡನುಪಮವಣಿಜಂ ದಾಸೆಯಂ ದೋಷದೂರಂ ॥

೧೨೫೫-ರಲ್ಲಿ ಬರೆದ ಮತ್ತೊಂದು ಶಾಸನದಲ್ಲಿ (ಅರಸೀಕೆರೆ ೧೦೪) ಕುಂಜನಂಬಿಸೆಟ್ಟಿ ಎಂಬವನು ಮಾಳವ, ಕಳಿಂಗ, ಚೋಳ, ಪಾಂಡ್ಯ ಈ ರಾಜರುಗಳ ಸಮಯಕ್ಕೆ

ಬೇಕಾದ ವಸ್ತುಗಳನ್ನು ಒದಗಿಸಿಕೊಟ್ಟು ಹೊಯ್ಸಳರಾಜ್ಯದಲ್ಲಿ ಕೀರ್ತಿಯನ್ನು ಪಡೆದಿದ್ದಂತೆ ಹೇಳಿದೆ—

ಬೀರನ ಮಾಳವೇಂದ್ರನ ಕಳಿಂಗನ ಚೋಳನ ಪಾಂಡ್ಯಭೂತಳಾ ।
ಧಾರನ ಮುಟ್ಟಿದೊಂದವಸರಂಗಳನಾಗಳೆ ಪೂಣ್ದು ಮಾಳ್ಪ ವಿ ॥
ಸ್ತಾರದ ಪುಣ್ಯಸಂಪದದಿನೊಪ್ಪುವ ಸೆಟ್ಟಿಗೆ ಕುಂಜನಂಬಿಗಿ ।
ನ್ನಾರೆಣೆಯೆಂಬಿನಂ ನೆಗಳ್ದನಗ್ಗದ ಹೊಯ್ಸಳರಾಯರಾಜ್ಯದೊಳ್ ॥

ಶಿಲ್ಪ.

ವಾಸ್ತುವಿದ್ಯಾವಿಶಾರದರಾದ ಕನ್ನಡನಾಡಿನ ಶಿಲ್ಪಿಗಳು ಎಲ್ಲೋರ, ಇಟ್ಟಗಿ, ಬೇಲೂರು, ಹಳೆಯಬೀಡು, ಸೋಮನಾಥಪುರ, ನಂದಿ, ಶೃಂಗೇರಿ, ಶ್ರವಣಬೆಳ್ಗೊಳ ಮುಂತಾದ ಸ್ಥಳಗಳಲ್ಲಿ ನಿರ್ಮಿಸಿರುವ ದೇವಾಲಯಗಳೂ ಕೆತ್ತಿರುವ ವಿಗ್ರಹಗಳೂ ವಿದೇಶೀಯರಾದ ಶಿಲ್ಪಶಾಸ್ತ್ರಜ್ಞರನ್ನು ಆಶ್ಚರ್ಯರಸದಲ್ಲಿ ಮಗ್ನರಾಗುವಂತೆ ಮಾಡಿದೆ. ಶ್ರವಣಬೆಳ್ಗೊಳದಲ್ಲಿರುವ ಸುಮಾರು ೬೦ ಅಡಿ ಎತ್ತರವುಳ್ಳ ಗೋಮಟೇಶ್ವರನ ಸುಂದರವಾದ ವಿಗ್ರಹವು ನೋಡಿದವರನ್ನೆಲ್ಲಾ ಸ್ತಬ್ಧರನ್ನಾಗಿ ಮಾಡುತ್ತದೆ. ಈಜಿಪ್ಟ್‌ದೇಶವನ್ನು ಬಿಟ್ಟರೆ ಇಂತಹ ಅದ್ಭುತವಾದ ಕೆಲಸವು ಪ್ರಪಂಚದ ಇನ್ನಾವಭಾಗದಲ್ಲಿಯೂ ಇಲ್ಲವೆಂದು ತಿಳಿಯುತ್ತದೆ ಮೇಲೆ ಹೇಳಿದ ದೇವಾಲಯಗಳಲ್ಲಿ ಶಿಲ್ಪಿಗಳು ತೋರಿಸಿರುವ ಕೌಶಲ್ಯವನ್ನು ಫರ್ಗಸ್ಸ್, ಹಾವಲ್, ವಿನ್ಸೆಂಟ್‌ಸ್ಮಿತ್, ವರ್ಕ್‌ಮ್ಯಾ ಮುಂತಾದ ಶಿಲ್ಪಶಾಸ್ತ್ರಜ್ಞರು ಹೇರಳವಾಗಿ ಪ್ರಶಂಸಿಸಿದ್ದಾರೆ. ಈ ಶಿಲ್ಪಿಗಳಲ್ಲಿ ಹಲವರು ತಾವು ಕೆತ್ತಿದ ವಿಗ್ರಹಗಳ ಬುಡದಲ್ಲಿ ತಮ್ಮ ಹೆಸರುಗಳನ್ನು ಬರೆದುಕೊಂಡಿದ್ದಾರೆ. ಈ ಹೆಸರುಗಳಲ್ಲಿ ಮಲ್ಲಿತಮ್ಮ, ಮಸಣಿತಮ್ಮ, ಬೈಚೋಜ, ಹೊನ್ನೋಜ, ದಾಸೋಜ, ನಂಜಯ, ಹರಿಪ, ಮಧುವಣ್ಣ, ಎಳಮಸಯ, ಎಂಬುವು ಕೆಲವು. ಈ ರೀತಿಯಾಗಿ ಶಿಲ್ಪಿಗಳು ತಮ್ಮ ಹೆಸರು ಬರೆದುಕೊಂಡಿರುವುದು ಮೈಸೂರು ದೇಶದಲ್ಲಿ ಮಾತ್ರವೇ ಎಂದು ತಿಳಿಯುತ್ತದೆ. ಉಳಿದಕಡೆ ಈ ಪದ್ಧತಿ ಪ್ರಾಯಿಕವಾಗಿ ಇಲ್ಲ. ಫರ್ಗಸ್ಸ್ ಮುಂತಾದವರು ನೋಡದೆ ಇರುವ ಒಂದು ದೇವಸ್ಥಾನದ ವಿಷಯವನ್ನುಮಾತ್ರ ಇಲ್ಲಿ ಸ್ವಲ್ಪಮಟ್ಟಿಗೆ ಸೂಚಿಸುತ್ತೇನೆ. ೧೪-ನೆಯ ಶತಮಾನದ ಪೂರ್ವಾರ್ಧದಲ್ಲಿ ಶೃಂಗೇರಿಯ ಮಠದಲ್ಲಿ ವಿದ್ಯಾತೀರ್ಥರೆಂಬವರು ಸ್ವಾಮಿಯಾಗಿದ್ದರು. ಇವರು ಭಾರತೀ ತೀರ್ಥರಿಗೂ ವಿದ್ಯಾರಣ್ಯರಿಗೂ ಗುರುಗಳು. ಇವರ ದರ್ಶನವನ್ನು ಮಾಡುವುದಕ್ಕಾಗಿ ವಿಜಯನಗರದ ೧-ನೆಯ ರಾಜನಾದ ಹರಿಹರನು ೧೩೪೬ ರಲ್ಲಿಯೂ ಅವನ ತಮ್ಮನಾದ ಬುಕ್ಕನು ೧೩೫೬-ರಲ್ಲಿಯೂ ಶೃಂಗೇರಿಗೆ ಹೋಗಿದ್ದಂತೆ ಶಾಸನಗಳಿಂದ ತಿಳಿಯುತ್ತದೆ. ಈ ಮಹಾತ್ಮರ ಜ್ಞಾಪಕಾರ್ಥವಾಗಿ ಇವರ ಸಮಾಧಿಯ ಮೇಲೆ ಇವರ ಶಿಷ್ಯರಾದ ಭಾರತೀತೀರ್ಥರು ತಾವೇ ಮೇಲ್ವಿಚಾರಣೆಯನ್ನು ವಹಿಸಿ ವಿದ್ಯಾಶಂಕರ ಎಂಬ ನಾಮಧೇಯವುಳ್ಳ ಒಂದು ದೇವಸ್ಥಾನವನ್ನು ಸುಮಾರು ೧೩೩೮-ರಲ್ಲಿ ಕಟ್ಟಿಸಿದರು. ಈ ದೇವಸ್ಥಾನವು ಚಿತ್ರವಿಚಿತ್ರವಾದ ಕೆಲಸಗಳಿಂದ

ಶೋಭಾಯಮಾನವಾಗಿರುವುದು. ಇದರ ಸಂವಿಧಾನವೂ ರಚನೆಯೂ ಅನ್ಯಾದೃಶವಾದುವು. ಇದರ ಸಂವಿಧಾನದಂತಹ ಸಂವಿಧಾನವು (plan) ಆಸೇತುಹಿಮಾಚಲದಲ್ಲಿಯೂ ಇಲ್ಲ. ಭರತವರ್ಷದಲ್ಲಿ ಕೆಲವು ಕಟ್ಟಡಗಳು ಮಾತ್ರ ಗಜಪೃಷ್ಠಾಕೃತಿಯಾಗಿ ಒಂದು ತುದಿಯಲ್ಲಿ ವರ್ತುಲವಾಗಿವೆ (apsidal at one end). ಈ ಕಟ್ಟಡವಾದರೋ ಸೌತೆಯ ಕಾಯಿ ಹಾಗೆ ಎರಡು ತುದಿಗಳಲ್ಲಿಯೂ ವರ್ತುಲವಾಗಿದೆ. ಇಂತಹ ಸಂವಿಧಾನದ ಕಟ್ಟಡಗಳು ಭರತವರ್ಷದಲ್ಲಿಲ್ಲ; ಇವನ್ನು ನೋಡಬೇಕಾದರೆ ರೋಮ್ ಪಟ್ಟಣಕ್ಕೆ ಹೋಗಬೇಕು. ಅಲ್ಲಿ ೧-ನೆಯ ಶತಮಾನದ ಕೊನೆಯಲ್ಲಿದ್ದ ಟ್ರೇಜ಼ನ್ ಎಂಬ ಚಕ್ರವರ್ತಿ ಇಂತಹ ಕಟ್ಟಡವನ್ನು ಕಟ್ಟಿಸಿದ್ದಾನೆ. ಇಂತಹ ಕಟ್ಟಡಕ್ಕೆ ಬಸಿಲಿಕಾ (Basilica) ಎಂದು ಹೆಸರು ಭರತವರ್ಷದಲ್ಲಿ ಎಲ್ಲಿಯೂ ದೃಗ್ಗೋಚರವಾಗದ ಇಂಥ ಸಂವಿಧಾನವನ್ನು ಏರ್ಪಡಿಸಿ ಈ ಕಟ್ಟಡವನ್ನು ಕಟ್ಟಿದ ಶಿಲ್ಪಿಗಳ ಚಾತುರ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಇದು ಹಾಗಿರಲಿ. ದೇವಸ್ಥಾನದ ನವರಂಗದೊಳಗೆ ೧೨ ಚಿತ್ರಮಯವಾದ ಕಂಭಗಳಿವೆ. ಒಂದೊಂದು ಕಂಭದ ಮೇಲೆಯೂ ಮೇಷ, ವೃಷಭ ಮುಂತಾದ ೧೨ ರಾಶಿಗಳ ಚಿಹ್ನಗಳಲ್ಲಿ ಒಂದೊಂದು ಅಂಕಿತವಾಗಿದೆ. ಆಯಾಚಿಹ್ನಕ್ಕೆ ಅನುಗುಣವಾಗಿ ಆಯಾಕಂಭದ ಮೇಲೆ ಆಯಾ ತಿಂಗಳಲ್ಲಿ ಸೂರ್ಯರಶ್ಮಿ ಬೀಳುವಂತೆ ಕಂಭಗಳನ್ನು ನಿಲ್ಲಿಸಿರುವ ಶಿಲ್ಪಕೌಶಲ್ಯವು ಯಾರಿಗೆತಾನೆ ಆಶ್ಚರ್ಯವನ್ನು ಉಂಟುಮಾಡದು?

ಕನ್ನಡನುಡಿಗೆ ಪ್ರೋತ್ಸಾಹ.

ಪೂರ್ವದಿಂದಲೂ ಕನ್ನಡನುಡಿ ರಾಜರುಗಳ ಮತ್ತು ಮಂಡಲಿಕರ ಪ್ರೋತ್ಸಾಹದಿಂದ ಏಳಿಗೆಯನ್ನು ಹೊಂದಿರುತ್ತದೆ. ಗಂಗರು, ರಾಷ್ಟ್ರಕೂಟರು, ಚಾಳುಕ್ಯರು, ಕಾಳಚುರ್ಯರು, ಕಾಕತೀಯರು, ಹೊಯ್ಸಳರು, ವೆಂಗಿಯ ಅರಸರು ಅಥವಾ ಪೂರ್ವದೇಶದ ಚಾಳುಕ್ಯರು, ವಿಜಯನಗರದ ಅರಸರು, ಮೈಸೂರರಸರು, ಸೌಂದತ್ತಿಯ ರಟ್ಟರು, ಕರಹಾಟದ ಶಿಲಾಹಾರರು, ಸಾಂತರರು, ಕೊಂಗಾಳ್ವರು, ಚೆಂಗಾಳ್ವರು, ತುಳುದೇಶದ ಅರಸರು, ಕೊಡಗು ಅರಸರು, ಉಮ್ಮತ್ತೂರು, ನುಗ್ಗೆಹಳ್ಳಿ, ಸುಗಟೂರು, ಆವತಿ, ಇಕ್ಕೇರಿ, ಬೇಲೂರು, ಚಿತ್ರದುರ್ಗ, ಕಳಲೆ, ಪಿರಿಯಾಪಟ್ಟಣ, ಹದಿನಾಡು, ಚಿಕ್ಕನಾಯಕನಹಳ್ಳಿ, ಮುದಿಗೆರೆ, ಬಿಜ್ಜವರ, ಈ ಸ್ಥಳಗಳ ಪಾಳೆಯಗಾರರು, ಚೌಟರು ಇವರುಗಳಲ್ಲಿ ಕೆಲವರು ಸ್ವತಃ ಕವಿಗಳಾಗಿದ್ದುದಲ್ಲದೆ ಅನೇಕರು ಕವಿಗಳಿಗೆ ಪೋಷಕರಾಗಿ ಬಹಳ ಪ್ರೋತ್ಸಾಹವನ್ನು ಉಂಟುಮಾಡಿದ್ದಾರೆ. ಈ ಪ್ರಭುಗಳು ಮಾತ್ರವಲ್ಲದೆ ಇವರ ಕೈಯ ಕೆಳಗೆ ದೊಡ್ಡ ದೊಡ್ಡ ಪದವಿಗಳನ್ನು ವಹಿಸಿದ್ದ ಮಂತ್ರಿಗಳು, ದಂಡನಾಯಕರು, ಪಸಾಯಿತರು ಮುಂತಾದ ಅಧಿಕಾರಿಗಳಲ್ಲಿಯೂ ಕೆಲವರು ಕವಿಗಳಾಗಿಯೂ, ಹಲವರು ಕವಿಪೋಷಕರಾಗಿಯೂ ಇದ್ದರು. ಅಲ್ಲದೆ ಚಿಕ್ಕ ಚಿಕ್ಕ ಪಾಳೆಯಪಟ್ಟಿಗೆ ವಿಭುಗಳಾದ ಹಲವರು ಗ್ರಂಥರಚನೆಯನ್ನು ಮಾಡಿದ್ದಾರೆ. ಈ ವಿಷಯವನ್ನು ಸ್ವಲ್ಪಮಟ್ಟಿಗೆ ಉದಾಹರಣಗಳೊಡನೆ ಕೆಳಗೆ ವಿವರಿಸುತ್ತೇನೆ:—

ಗಂಗರು— ಈ ರಾಜರಲ್ಲಿ ಸುಮಾರು ೫೦೦ ರಲ್ಲಿದ್ದ ದುರ್ವಿನೀತನು ನೃಪತುಂಗನ ಹೇಳಿಕೆಯ ಪ್ರಕಾರ ಕನ್ನಡದಲ್ಲಿ ಗದ್ಯಗ್ರಂಥಕಾರನಾಗಿದ್ದಿರಬಹುದೆಂದು ತೋರುತ್ತದೆ. ಶಿವಮಾರನು (೭೮೦—೮೧೪) ಗಜಾಷ್ಟಕವನ್ನು ಬರೆದನೆಂದೂ ಅದು "ಒನಕೆವಾಡಾಮುದು" ಎಂದೂ ಒಂದು ಶಾಸನದಿಂದ (ನಗರ ೩೫) ತಿಳಿವುದರಿಂದ ಇದು ಕನ್ನಡ ಗ್ರಂಥವಾಗಿರಬಹುದೆಂದು ತೋರುತ್ತದೆ. ಮಹೇಂದ್ರಾಂತಕ ಎಂಬ ಬಿರುದುಳ್ಳ ಎರೆಯಪ್ಪನು (೮೮೬—೯೧೩) ಶೂದ್ರಕ, ಹರಿವಂಶ ಮೊದಲಾದ ಗ್ರಂಥಗಳನ್ನು ಬರೆದ ೧-ನೆಯ ಗುಣವರ್ಮನಿಗೆ ಪೋಷಕನಾಗಿದ್ದನು. ರಾಜಮಲ್ಲನ ಮಂತ್ರಿಯಾದ ಚಾವುಂಡರಾಯನು ೯೭೮ ರಲ್ಲಿ ಚಾವುಂಡರಾಯಪುರಾಣವನ್ನು ಬರೆದನು. ಈ ರಾಜನ ತಮ್ಮನಾದ ರಕ್ಕಸಗಂಗನ ಆಶ್ರಿತನಾದ ನಾಗವರ್ಮನು ಛಂದೋಂಬುಧಿ ಮೊದಲಾದ ಗ್ರಂಥಗಳನ್ನು ಬರೆದನು.

ರಾಷ್ಟ್ರಕೂಟರು— ಈ ದೊರೆಗಳಲ್ಲಿ ನೃಪತುಂಗನು ಕವಿಯಾಗಿದ್ದ ಸಂಗತಿ ತಿಳಿದೇ ಇದೆ. ೩-ನೆಯ ಇಂದ್ರರಾಜನ (೯೧೫—೯೧೭) ಕೈಯ ಕೆಳಗಿದ್ದ ಶ್ರೀ ವಿಜಯ ದಂಡನಾಥನಿಗೆ ಒಂದು ಶಾಸನದಲ್ಲಿ (E.·I. X. ೧೫೦) ಅನುಪಮಕವಿ ಎಂಬ ಬಿರುದು ಹೇಳಿದೆ. ೩-ನೆಯ ಕೃಷ್ಣರಾಜನು (೯೩೯—೯೬೮) ಪೊನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ಕೊಟ್ಟಂತೆ "ಕನ್ನರನಾದರದಿಂ ಕುಡೆ ಹೊನ್ನಂ ಕವಿಚಕ್ರವರ್ತಿವೆಸರಂ ತಳೆದಂ" ಎಂಬ ಜನ್ನನ ಪದ್ಯಭಾಗದಿಂದ ತಿಳಿಯುತ್ತದೆ.

ಚಾಳುಕ್ಯರು— ಈ ವಂಶಕ್ಕೆ ಸೇರಿದ ಅರಿಕೇಸರಿ ಎಂಬ ಸಾಮಂತರಾಜನು ಆದಿಪಂಪನಿಗೆ ಪೋಷಕನಾಗಿ ಬಚ್ಚಿಸಾಸಿರದಲ್ಲಿ ಧರ್ಮಪುರವನ್ನು ಅಗ್ರಹಾರವಾಗಿ ಕೊಟ್ಟನು. ತೈಲಪನು (೯೭೩—೯೯೭) ರನ್ನನಿಗೆ ಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟಂತೆ "ಮನಮೊಸೆದು ತೈಲಪಂ ಕುಡೆ ರನ್ನಂ ಕವಿಚಕ್ರವರ್ತಿವೆಸರಂ ತಳೆದಂ" ಎಂಬ ಜನ್ನನ ಪದ್ಯಭಾಗದಿಂದ ತಿಳಿಯುತ್ತದೆ. ಆಹವಮಲ್ಲನ (೧೦೪೨—೧೦೬೮) ಆಶ್ರಿತನಾದ ಶ್ರೀಧರಾಚಾರ್ಯನು ಜಾತಕತಿಲಕವೆಂಬ ಜ್ಯೋತಿಷಗ್ರಂಥವನ್ನು ೧೦೪೯-ರಲ್ಲಿ ಬರೆದಿದ್ದಾನೆ. "ಧಾತ್ರಿಯನಾಹವಮಲ್ಲಭೂಮಿಪಾಳಕನೆಸೆದಾಳ್ಗೆ" ಎಂದು ಗ್ರಂಥಾಂತ್ಯದಲ್ಲಿ ಬರೆದಿದ್ದಾನೆ. ಭುವನೈಕಮಲ್ಲನ (೧೦೬೮—೧೦೭೬) ಪಸಯಿತನಾದ ಲಕ್ಷ್ಮನೃಪನ ಕೈಯ ಕೆಳಗೆ ಮಂತ್ರಿಯಾಗಿ ಬನವಸೆಪನ್ನಿರ್ಚ್ಛಾಸಿರಕ್ಕೆ ಅಧಿಕಾರಿಯಾಗಿದ್ದ ಶಾಂತಿನಾಥನು ಸುಕುಮಾರಚರಿತವೆಂಬ ಚಂಪೂಗ್ರಂಥವನ್ನು ಬರೆದಿದ್ದಾನೆ. ಇದೇರಾಜನ ಮಹಾಪ್ರಧಾನನಾದ ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದ ನಾಗವರ್ಮಾಚಾರ್ಯನು ಚಂದ್ರಚೂಡಾಮಣಿಶತಕವನ್ನು ಬರೆದಿದ್ದಾನೆ. ಆಹವಮಲ್ಲನ ಮಗನಾದ ಜಯಸಿಂಹನ ಕೈಯ ಕೆಳಗೆ ಅಧಿಕಾರಿಯಾಗಿದ್ದ ಮಾಚಿರಾಜನ ಆಶ್ರಿತನಾಗಿ ಚಂದ್ರರಾಜನು ಮದನತಿಲಕವೇ ಮೊದಲಾದ ಗ್ರಂಥಗಳನ್ನು ಬರೆದನು. ಅದೇ ಆಹವಮಲ್ಲನ ಮಗನೂ, ವಿಕ್ರಮಾದಿತ್ಯನ ತಮ್ಮನೂ ಆದ ಕೀರ್ತಿವರ್ಮನು ಗೋವೈದ್ಯವನ್ನು ಬರೆದಿದ್ದಾನೆ. ಅದೇ ರಾಜನ ಆಶ್ರಿತನೂ, ಕೀರ್ತಿವರ್ಮನ ಮಿತ್ರನೂ ಆದ ಬ್ರಹ್ಮಶಿವನು ಸಮಯಪರೀಕ್ಷೆ, ತ್ರೈಲೋಕ್ಯರಕ್ಷಾಮಣಿಸ್ತೋತ್ರ ಇವುಗಳನ್ನು ರಚಿ

ಸಿದ್ದಾನೆ. ೨ ನೆಯ ಜಗದೇಕಮಲ್ಲನಲ್ಲಿ (೧೧೩೮—೧೧೫೦) ೨ ನೆಯ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದಂತೆ "ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯ ನಾನಾಗವರ್ಮಂ" ಎಂಬ ಜನ್ನನ ಪದ್ಯಭಾಗದಿಂದ ತಿಳಿಯುತ್ತದೆ. ಪಂಚತಂತ್ರವನ್ನು ಬರೆದ ದುರ್ಗಸಿಂಹನು ಇದೇ ರಾಜನಲ್ಲಿ ಸಂಧಿವಿಗ್ರಹಿಯಾಗಿದ್ದಂತೆ ಹೇಳಿಕೊಂಡಿದ್ದಾನೆ. ದಾವಣಗೆರೆಯ ೪೧ ನೆಯ ಶಾಸನವನ್ನು ಬರೆದ ಮಧುಸೂದನದೇವನು ಇದೇ ರಾಜನ ಸಾಮಂತನಾದ ಉಚ್ಚಂಗಿಯ ವೀರಪಾಂಡ್ಯನಿಂದ ಪೂಜಿತನಾಗಿದ್ದಂತೆ ತಿಳಿಯುತ್ತದೆ.

ಕಾಳಚುರ್ಯರು—ಬಿಜ್ಜಳನ (೧೧೫೬—೧೧೬೭) ಕಾಲದಲ್ಲಿ ಬಸವ, ಚೆನ್ನಬಸವ, ಕೊಂಡಗೂಳಿ ಕೇಶಿರಾಜ ಮುಂತಾದ ವೀರಶೈವರು ಗ್ರಂಥಗಳನ್ನು ಬರೆದಿದ್ದಾರೆ. ಈ ಕಾಲದಲ್ಲಿ ವೀರಶೈವಮತಕ್ಕೆ ಸಂಬಂಧಿಸಿದ ಅನೇಕ ವಚನಗ್ರಂಥಗಳು ಹುಟ್ಟಿದುವು.

ಕಾಕತೀಯರು—ಪ್ರತಾಪರುದ್ರನ ಸಭೆಯಲ್ಲಿ ರಾಘವಾಂಕನು ವೀರೇಶ್ವರ ಚರಿತೆಯನ್ನು ಓದಿ ವಾದಿಗಳನ್ನು ಜಯಿಸಿದಂತೆ ಹೇಳಿದೆ. ಮತ್ತೊಬ್ಬ ಪ್ರತಾಪರುದ್ರನ ಕಾಲದಲ್ಲಿ ಸೋಮೇಶ್ವರಶತಕವನ್ನು ಬರೆದ ಪಾಲ್ಕುರಿಕೆ ಸೋಮನು ಬಾಳಿದಂತೆ ತಿಳಿಯುತ್ತದೆ.

ಹೊಯ್ಸಳರು—೧ ನೆಯ ಬಲ್ಲಾಳನ (೧೧೦೦—೧೧೦೬) ಕಾಲದಲ್ಲಿ ಅಭಿನವ ಪಂಪನು ಇದ್ದಂತೆ ಕಂತಿಯ ಚರಿತದಿಂದ ತಿಳಿಯುತ್ತದೆ. ವಿಷ್ಣುವರ್ಧನನ (೧೧೧೧—೧೧೪೧) ಕಾಲದಲ್ಲಿ ರಾಜಾದಿತ್ಯನು ಕ್ಷೇತ್ರಗಣಿತವೇ ಮೊದಲಾದ ಗ್ರಂಥಗಳನ್ನು ಬರೆದನು. ಜನ್ನನ ತಂದೆಯಾದ ಸುಮನೋಬಾಣನು ೧ ನೆಯ ನರಸಿಂಹನ (೧೧೪೧—೧೧೭೩) ಕಟಕೋಪಾಧ್ಯಾಯನಾಗಿದ್ದಂತೆ "ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯಂ ಸುಮನೋಬಾಣಂ" ಎಂಬ ಜನ್ನನ ಪದ್ಯಭಾಗದಿಂದ ವ್ಯಕ್ತವಾಗುತ್ತದೆ. ಇದೇ ರಾಜನ ಕರಣಿಕನಾದ ಹರೀಶ್ವರನೂ, ಮಂತ್ರಿಯಾದ ಕೆರೆಯ ಪದ್ಮರಸನೂ ಗ್ರಂಥಗಳನ್ನು ಬರೆದಿದ್ದಾರೆ. ೨ ನೆಯ ಬಲ್ಲಾಳನ (೧೧೭೩—೧೨೨೦) ಮಂತ್ರಿಯಾದ ಬೂಚಿರಾಜನು ಕವಿತೆಯಲ್ಲಿ ಪೊನ್ನನಿಗೆ ಸಮಾನನಾಗಿದ್ದನೆಂದು ಒಂದು ಶಾಸನದಿಂದ (ಹಾಸನ ೧೧೯) ತಿಳಿಯಬರುತ್ತದೆ. ಅದೇ ರಾಜನ ಸಜ್ಜೆವಳನಾದ ಪದ್ಮನಾಭನ ಇಷ್ಟಾನುಸಾರವಾಗಿ ನೇಮಿಚಂದ್ರನು ಅರ್ಧನೇಮಿಯನ್ನು ಬರೆದಂತೆ ಹೇಳುತ್ತಾನೆ. ಅದೇರಾಜನ ಮಂತ್ರಿಯಾದ ಚಂದ್ರಮೌಳಿಯಿಂದ ಪೋಷಿತನಾಗಿ ರುದ್ರಭಟ್ಟನು ಜಗನ್ನಾಥವಿಜಯವನ್ನು ಬರೆದನು. ಅದೇರಾಜನ ಮಂತ್ರಿಯಾದ ವಸುಧೈಕಬಾಂಧವ ರೇಚರಸನ ಪ್ರೇರಣೆಯಿಂದ ಆಚಣ್ಣನು ವರ್ಧಮಾನಪುರಾಣವನ್ನು ಬರೆದಂತೆ ತಿಳಿಯುತ್ತದೆ. ಇದೇ ದೊರೆಯಿಂದ ಕವಿಚಕ್ರವರ್ತಿಯೆಂಬ ಬಿರುದನ್ನು ತಾನು ಪಡೆದಂತೆ ಜನ್ನನು ಹೇಳುತ್ತಾನೆ. ೨ ನೆಯ ನರಸಿಂಹನ (೧೨೨೦—೧೨೩೫) ಮಂತ್ರಿಯಾದ ಪೋಲಾಳ್ವದಂಡನಾಥನು ಷಟ್ಪದೀರೂಪವಾದ ಹರಿಚಾರಿತ್ರವನ್ನು ಬರೆದಂತೆ ತಿಳಿಯುತ್ತದೆ. ಕೇಶಿರಾಜನ ತಂದೆಯಾದ ಮಲ್ಲಿಕಾರ್ಜುನನು ಕಾವ್ಯಾಂಗಗಳ ವರ್ಣ

ನಾರೂಪವಾದ ಸೂಕ್ತಿಸುಧಾರ್ಣವವನ್ನು ವೀರಸೋಮೇಶ್ವರನ (೧೨೩೩—೧೨೫೪) ವಿನೋದಾಕರ್ಣನಕ್ಕಾಗಿ ಬರೆದಂತೆ ಹೇಳುತ್ತಾನೆ.

ವೆಂಗಿಯ ಅರಸರು ಅಥವಾ ಪೂರ್ವದೇಶದ ಚಾಲುಕ್ಯರು—ಗುಣಗಾಂಕ ವಿಜಯಾದಿತ್ಯನ (೮೪೪—೮೮೮) ಕಾಲದಲ್ಲಿ ಗುಣಗಾಂಕಿಯಂ ಎಂಬ ಕರ್ಣಾಟಕ ಛಂದೋಗ್ರಂಥವು ಹುಟ್ಟಿದಂತೆ ಹಿಂದೆಯೇ ತಿಳಿಸಿದ್ದೇನೆ. ರಾಜರಾಜನ (೧೦೨೨—೧೦೬೩) ಆಸ್ಥಾನಕವಿಯಾದ ನನ್ನಯ್ಯಭಟ್ಟನಿಗೆ ಸಹಾಯಕನಾಗಿದ್ದ ನಾರಾಯಣಭಟ್ಟನು ಕನ್ನಡದಲ್ಲಿಯೂ ಕವಿಯಾಗಿದ್ದಂತೆಯೂ ಕವೀಭವಜ್ರಾಂಕುಶ ಎಂಬ ಬಿರುವನ್ನು ಪಡೆದಿದ್ದಂತೆಯೂ ಈ ಶ್ಲೋಕಗಳಿಂದ ತಿಳಿಯುತ್ತದೆ:—

> ಯಸ್ಸಂಸ್ಕೃತಕರ್ಣಾಟಪ್ರಾಕೃತಪೈಶಾಚಿಕಾಂಧ್ರಭಾಷಾಸು।
> ಕವಿರಾಜಶೇಖರ ಇತಿ ಪ್ರಥಿತಸ್ಸುಕವಿತ್ವವಿಭವೇನ॥
> ಕವಿಃ ಮುನಿಷಾಲವದುರ್ವಿದಗ್ಧಾಃ ಮನೋಹರಾಭಿರ್ನಿಜಸೂಕ್ತಿಭಿರ್ಯಃ।
> ಕುರ್ವನ್ನಗರ್ವಾಃ ಪಟುಭಿರ್ಬಿಭರ್ತಿ ಕವೀಭವಜ್ರಾಂಕುಶನಾಮ ಸಾರ್ಥಂ॥

ಸೌಂದತ್ತಿಯ ರಟ್ಟರು—ಪಾರ್ಶ್ವನಾಥಪುರಾಣವನ್ನು ಬರೆದ ಪಾರ್ಶ್ವಪಂಡಿತನು ೪ ನೆಯ ಕಾರ್ತವೀರ್ಯನ (೧೨೦೨—೧೨೨೦) ಆಸ್ಥಾನಕವಿಯಾಗಿದ್ದನು. ಅದೇ ರಾಜನ ಕಾಲದಲ್ಲಿ ಬಾಳಚಂದ್ರಕವಿ ಕಂದರ್ಪನು ಬಾಳಿದಂತೆ ತಿಳಿಯುತ್ತದೆ. ಪುಷ್ಪದಂತಪುರಾಣವನ್ನು ಬರೆದ ೨ ನೆಯ ಗುಣವರ್ಮನು ತಾನು ಅದೇ ದೊರೆಯ ಕೈಯಕೆಳಗೆ ಸಾಳ್ವಪ್ರಭುವಾಗಿದ್ದ ಶಾಂತಿವರ್ಮನ ಆಶ್ರಿತನೆಂದು ಹೇಳಿಕೊಂಡಿದ್ದಾನೆ.

ಕರಹಾಟದ ಶಿಲಾಹಾರರು—ಗಂಡರಾದಿತ್ಯನ ಮಗನಾದ ವಿಜಯಾದಿತ್ಯನ (೧೧೪೩) ತಮ್ಮ ಲಕ್ಷ್ಮಣರಾಜನ ಆಜ್ಞಾನುಸಾರವಾಗಿ ಕರ್ಣಪಾರ್ಯನು ನೇಮಿನಾಥಪುರಾಣವನ್ನು ಬರೆದಂತೆ ಹೇಳುತ್ತಾನೆ. ಅದೇ ಲಕ್ಷ್ಮಣರಾಜನ ಆಳಿಕೆಯಲ್ಲಿ ನೇಮಿಚಂದ್ರನು ಲೀಲಾವತಿಯನ್ನು ಬರೆದನು. ಈ ಗ್ರಂಥದ ಕೊನೆಯಲ್ಲಿ "ಧರೆಯಂ ರಕ್ಷಿಸುತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ" ಎಂದು ಹೇಳಿದೆ.

ಸಾಂತರರು—ತ್ರೈಲಪದೇವನ ಮಂತ್ರಿಯಾದ ಕನ್ನಗನಿಗೆ ೧೦೯೦ ರಲ್ಲಿ ಬರೆದ ಒಂದು ಶಾಸನದಲ್ಲಿ (ಸಾಗರ ೧೦೩) ವಿಬುಧಜನಮನಃಪದ್ಮಿನೀರಾಜಹಂಸ ಎಂಬ ಬಿರುದು ಉಕ್ತವಾಗಿದೆ.

ಕೊಂಗಾಳ್ವರು—ಚಂದ್ರನಾಥಾಷ್ಟಕವನ್ನು ಬರೆದ ಮೌಕ್ತಿಕಕವಿ ವೀರಕೊಂಗಾಳ್ವನ (ಸು. ೧೧೨೦) ಕಾಲದಲ್ಲಿ ಬಾಳಿದಂತೆ ತೋರುತ್ತದೆ.

ಚೆಂಗಾಳ್ವರು—ಸಮ್ಯಕ್ತ್ವಕೌಮುದಿ (೧೫೦೮) ಮುಂತಾದ ಗ್ರಂಥಗಳನ್ನು ಬರೆದ ೩ ನೆಯ ಮಂಗರಸನು ತಾನು ಚೆಂಗಾಳ್ವರಾಜರ ಕುಲಕ್ರಮಾಗತಮಂತ್ರಿಯಾದ ಕಲ್ಲಹಳ್ಳಿಯ ಪ್ರಭು ವಿಜಯನ ಮಗನೆಂದು ಹೇಳಿಕೊಂಡಿದ್ದಾನೆ. ಚೆಂಗಾಳ್ವನಂಜರಾಯನ (೧೫೦೨—೧೫೬೩) ಆಳಿಕೆಯಲ್ಲಿ ನಂಜುಂಡನು ಕುಮಾರರಾಮಕಥೆಯನ್ನು ಬರೆದಂತೆ ತಿಳಿಯುತ್ತದೆ.

ತುಳುದೇಶದ ಅರಸರು—ಕಲ್ಯಾಣಕೀರ್ತಿ ತುಳುವದೇಶದ ದೊರೆ ಭೈರವಸುತ ಪಾಂಡ್ಯರಾಯನ ಇಷ್ಟಾನುಸಾರವಾಗಿ ಜ್ಞಾನಚಂದ್ರಾಭ್ಯುದಯವನ್ನು ೧೪೩೯ ರಲ್ಲಿ ಬರೆದಂತೆ ಹೇಳುತ್ತಾನೆ. ಸುಮಾರು ೧೫೦೦ ರಲ್ಲಿ ಜೀವಂಧರಷಟ್ಪದಿಯನ್ನು ಬರೆದ ಕೋಟೀಶ್ವರನು ಹೈವನೃಪಸುತ ಸಂಗೀತಪುರದ ದೊರೆ ಸಂಗಮನ ಆಜ್ಞಾನುಸಾರವಾಗಿ ತನ್ನ ಗ್ರಂಥವನ್ನು ಬರೆದನು. ಭರತೇಶ್ವರಚರಿತೆಯನ್ನು ೧೫೫೭ ರಲ್ಲಿ ಬರೆದ ರತ್ನಾಕರವರ್ಣಿ ತುಳುದೇಶದ ಭೈರಸಒಡೆಯರ ಸಭೆಯಲ್ಲಿ ಶೃಂಗಾರಕವಿ ಎಂಬ ಬಿರುದನ್ನು ಪಡೆದಂತೆ ತಿಳಿಯುತ್ತದೆ. ಭಾರತ, ರಸರತ್ನಾಕರ, ಶಾರದಾವಿಲಾಸ ಮುಂತಾದ ಗ್ರಂಥಗಳನ್ನು ರಚಿಸಿದ ಸಾಳ್ವನು (ಸು. ೧೫೬೦) ತೌಳವಹೈವಕೊಂಕಣದೇಶಾಧಿನಾಥನಾದ ಸಾಳ್ವಮಲ್ಲನ ಆಸ್ಥಾನಕವಿಯಾಗಿದ್ದನು. ಬಾಹುಬಲಿ (ಸು. ೧೫೬೦) ಕೆಲವನೆಸಿಂಹಾಸನದ ಅರಿರಾಯರಗಂಡರದಾವಣಿ ಭೈರವೇಂದ್ರನ ಆಜ್ಞಾನುಸಾರವಾಗಿ ನಾಗಕುಮಾರಚರಿತೆಯನ್ನು ಬರೆದನು. ಅರಿರಾಯರಗಂಡರದಾವಣಿ ಭೈರವನೃಪನ ಆಜ್ಞೆಯಿಂದ ಚಂದ್ರಮನು ೧೬೪೬ ರಲ್ಲಿ ಕಾರ್ಕಳದ ಗೊಮ್ಮಟೇಶ್ವರಚರಿತೆಯನ್ನು ರಚಿಸಿದನು. ಗೇರುಸೊಪ್ಪೆಯ ದೊರೆ ಭೈರವರಾಯನ ಆಳಿಕೆಯಲ್ಲಿ ಆದಿಯಪ್ಪನು (ಸು. ೧೬೫೦) ಧನ್ಯಕುಮಾರಚರಿತೆಯನ್ನು ಬರೆದನು. ಅಹಿಂಸಾಚರಿತೆಯನ್ನು ೧೬೪೮ ರಲ್ಲಿ ರಚಿಸಿದ ಪಾಯಣ್ಣನು ಸಂಗೀತಪುರದರಸ ಸಂಗಮರಾಯಪುತ್ರನ ಆಶ್ರಿತನಾಗಿದ್ದನು. ರಾಮಚಂದ್ರಚರಿತ್ರದ ಪೂರ್ವಭಾಗವನ್ನು ಬರೆದ ಚಂದ್ರಶೇಖರನು ತುಳುದೇಶದ ಲಕ್ಷ್ಮಣಬಂಗರಾಜನ ಆಸ್ಥಾನಕವಿ. ತೌಳವದೇಶದ ಮೂಲಿಕೆಯ ರಾಜನಾದ ಚೆನ್ನರಾಯನಿಂದ ಪೋಷಿತನಾಗಿ ಪದ್ಮನಾಭನು ರಾಮಚಂದ್ರಚರಿತ್ರದ ಉತ್ತರಭಾಗವನ್ನು ೧೭೫೦ ರಲ್ಲಿ ರಚಿಸಿದನು.

ಕೊಡಗು ಅರಸರು—ವೀರರಾಜೇಂದ್ರನು ೧೮೦೮ ರಲ್ಲಿ ರಾಜೇಂದ್ರನಾಮೆಯನ್ನು ಬರೆಯಿಸಿದನು.

ಚೌಟರು—ಚೆನ್ನಮ್ಮಾಂಬೆಯ ಆಳಿಕೆಯಲ್ಲಿ ತಿರುಮಲಸಾಮಂತನ ಕೋಶಾಧ್ಯಕ್ಷ ಪದ್ಮನಾಭನು (ಸು. ೧೬೮೦) ಪದ್ಮಾವತೀಚರಿತೆಯನ್ನೂ, ಅಬ್ಬಕ್ಕದೇವಿಯ ಆಳಿಕೆಯಲ್ಲಿ ಪಟ್ಟಾಭಿರಾಮನು (ಸು. ೧೭೦೦) ರತ್ನಶೇಖರಚರಿತೆಯನ್ನೂ, ಚಂದ್ರಶೇಖರ ಚಿಕ್ಕರಾಯನ ರಾಣಿವಾಸದ ಚೆನ್ನಮ್ಮದೇವಿಯ ಆಜ್ಞಾನುಸಾರವಾಗಿ ಸುರಾಲನು ೧೭೬೧ ರಲ್ಲಿ ಪದ್ಮಾವತೀಚರಿತೆಯನ್ನೂ ರಚಿಸಿದಂತೆ ತಿಳಿಯುತ್ತದೆ.

ವಿಜಯನಗರದ ಅರಸರು—ಕನ್ನಡಕ್ಕೆ ಈ ದೊರೆಗಳ ಪ್ರೋತ್ಸಾಹವು ಕಡಮೆ ಎಂದು ಕೆಲವರಿಗೆ ಭಾವನೆಯಿರುವಂತೆ ತೋರುತ್ತದೆ. ಈ ಭಾವನೆಗೆ ಎಷ್ಟರಮಟ್ಟಿಗೆ ಆಧಾರವಿದೆ ಎಂಬುದನ್ನು ಕೆಳಗಣ ವಿಷಯಗಳು ವ್ಯಕ್ತಪಡಿಸದೆ ಇರಲಾರವು. ವಿಜಯನಗರದ ಸಂಸ್ಥಾನವು ಸ್ಥಾಪಿತವಾದಂದಿನಿಂದ ಕೊನೆಯವರೆಗೆ ಆ ವಂಶದ ದೊರೆಗಳ ಪ್ರೋತ್ಸಾಹವು ಕನ್ನಡಕ್ಕೆ ಲಭಿಸಿದೆ. ೧ ನೆಯ ಹರಿಹರನ (೧೩೭೬—೧೪೦೪) ಆಳಿಕೆಯಲ್ಲಿ ಮುಗುಳಿಯಪುರದ ಅಧಿಪನಾದ ೧ ನೆಯ ಮಂಗರಾಜನು ವಿಷಚಿಕಿತ್ಸಾ

ರೂಪವಾದ ಖಗೇಂದ್ರಮಣಿದರ್ಪಣವನ್ನು ರಚಿಸಿದನು. ಗ್ರಂಥಾಂತ್ಯದಲ್ಲಿ "ಧರೆಗನುರಾಗಮುಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ" ಎಂದು ಹೇಳಿದ್ದಾನೆ. ಧರ್ಮನಾಥಪುರಾಣವನ್ನು ಬರೆದ ಮಧುರನು ೨ ನೆಯ ಹರಿಹರನ (೧೩೭೭—೧೪೦೪) ಆಸ್ಥಾನಕವಿಯಾಗಿದ್ದನು. ೧ ನೆಯ ಬುಕ್ಕನ (೧೩೫೩—೧೩೭೭) ಮಗನಾದ ಕಂಪರಾಜನ ಪುತ್ರ ದೇವರಾಜನು ಸೊಬಗಿನಸೋನೆ, ಅಮರುಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ೨ ನೆಯ ದೇವರಾಯನ (೧೪೧೯—೧೪೪೬) ಆಳಿಕೆಯಲ್ಲಿ ವೀರಶೈವಕವಿಗಳಿಗೆ ವಿಶೇಷ ಪ್ರೋತ್ಸಾಹವುಂಟಾಗಿ ಅನೇಕ ಗ್ರಂಥಗಳು ಹುಟ್ಟಿದುವು. ಈ ರಾಜನ ಮಂತ್ರಿಗಳಲ್ಲಿ ಲಕ್ಕಣ್ಣದಂಡೇಶನು ಶಿವತತ್ವಚಿಂತಾಮಣಿಯನ್ನೂ, ಜಕ್ಕಣಾರ್ಯನು ನೂರೊಂದುಸ್ಥಲವನ್ನೂ ಬರೆದಿದ್ದಾರೆ. ಇವನ ಮಹಾಪ್ರಧಾನನಾದ ಗುರುರಾಜನ ಪ್ರೇರಣೆಯಿಂದ ಚಂದ್ರಕವಿ ವಿರೂಪಾಕ್ಷಾಷ್ಟಕ ಮೊದಲಾದ ಗ್ರಂಥಗಳನ್ನು ರಚಿಸಿದನು. ಅಲ್ಲದೆ ಈ ದೊರೆಯ ಪ್ರೋತ್ಸಾಹದಿಂದ ಚಾಮರಸನು ಪ್ರಭುಲಿಂಗಲೀಲೆಯನ್ನೂ ಮಗ್ಗೆಯಮಾಯಿದೇವನು ಶತಕತ್ರಯವನ್ನೂ ಗುರುಬಸವನು ಶಿವಯೋಗಾಂಗಭೂಷಣವೇ ಮುಂತಾದ ಸಪ್ತಕಾವ್ಯಗಳನ್ನೂ ಬತ್ತಲೇಶ್ವರನು ರಾಮಾಯಣವನ್ನೂ ರಚಿಸಿದರು. ಕುಮಾರವ್ಯಾಸನೂ ಇದೇ ರಾಜನ ಆಳಿಕೆಯಲ್ಲಿ ಭಾರತವನ್ನು ಬರೆದಂತೆ ತೋರುತ್ತದೆ. ದೇವರಾಯನ ಮಗ ಮಲ್ಲಿಕಾರ್ಜುನನ (೧೪೪೬—೧೪೬೭) ಆಳಿಕೆಯಲ್ಲಿ ಕಲ್ಲರಸನು ಜನವಶ್ಯವನ್ನು ಬರೆದಿದ್ದಾನೆ. ಷಟ್ಸ್ಥಲಜ್ಞಾನಸಾರಾಮೃತವನ್ನು ರಚಿಸಿದ ತೋಂಟದ ಸಿದ್ಧಲಿಂಗನು ವಿರೂಪಾಕ್ಷನ (೧೪೬೭—೧೪೭೮) ಆಳಿಕೆಯಲ್ಲಿ ಬಾಳಿದನು. ಕವಿಲಿಂಗನಪದ ಎಂಬ ಗ್ರಂಥವನ್ನು ರಚಿಸಿದ ಕವಿಲಿಂಗನು ಸಾಳುವ ನರಸಿಂಗರಾಯನ (೧೪೭೮—೧೪೯೩) ಆಸ್ಥಾನಕವಿಯಾಗಿದ್ದನು. ಶ್ರೀಪಾದರಾಯರೆಂಬ ಮಾಧ್ವಗುರು ಈ ರಾಜನಿಂದ ಸನ್ಮಾನಿತರಾಗಿದ್ದಂತೆ—

> ಶ್ರೀಮದ್ವೀರನೃಸಿಂಗರಾಜನೃಪತೇರ್ಭೂದೇವಹತ್ಯಾವ್ಯಥಾಂ ।
> ದೂರೀಕೃತ್ಯ ತದರ್ಪಿತೋಜ್ವಲಮಹಾಸಿಂಹಾಸನೇ ಸಂಸ್ಥಿತಃ ॥

ಎಂಬ ಶ್ರೀಪಾದರಾಯಾಷ್ಟಕದ ಶ್ಲೋಕದಿಂದ ತಿಳಿಯುತ್ತದೆ. ಕೃಷ್ಣರಾಯನ (೧೫೦೯—೧೫೩೯) ಆಜ್ಞಾನುಸಾರವಾಗಿ ತಿಮ್ಮಣ್ಣಕವಿ ಭಾರತದ ಉತ್ತರಭಾಗವನ್ನು ಬರೆದನು. ವ್ಯಾಸರಾಯರೆಂಬ ಮಾಧ್ವಗುರು ಈ ದೊರೆಯಿಂದ ಮನ್ನಣೆಯನ್ನು ಹೊಂದಿದಂತೆ ತಿಳಿಯುತ್ತದೆ. ಚಾಟುವಿಟ್ಠಲನಾಥ ಎಂಬ ಬಿರುದುಳ್ಳ ಸದಾನಂದಯೋಗಿ ಅಚ್ಯುತರಾಯನ ಆಳಿಕೆಯಲ್ಲಿ ಭಾಗವತವನ್ನು ಬರೆದಂತೆ ತೋರುತ್ತದೆ. ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕನ ಗುರುವಾದ ಭಟ್ಟಾಕಳಂಕನು ಶ್ರೀರಂಗರಾಯನ (೧೫೭೩—೧೫೮೪) ಆಸ್ಥಾನದಲ್ಲಿ ಆತನ ಪ್ರೇರಣೆಯಿಂದ ಸಾರತ್ರಯವನ್ನೂ ಅಲಂಕಾರತ್ರಯವನ್ನೂ ಓದಿ ಕೀರ್ತಿವಡೆದಂತೆ—

> ಶ್ರೀರಂಗರಾಜನೃಪತಿ। ಪ್ರೇರಣೆಯಿಂ ವಿಜಯನಗರಿಯನುಪದೇಶನದಿಂ।
> ಸಾರತ್ರಿತಯಮುಮಲಂ। ಕಾರತ್ರಿತಯಮುಮನೋದಿ ಜಸಮಂ ಪಡೆದಂ॥

ಎಂಬ ಬಿಳಿಗಿ ತಾಲ್ಲೂಕಿನಲ್ಲಿರುವ ಒಂದು ಶಾಸನದ ಪದ್ಯದಿಂದ ತಿಳಿಯುತ್ತದೆ. ಅದೇ ಶಾಸನದಿಂದ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನು ಪೆನಗೊಂಡೆ ವೆಂಕಟಪತಿರಾಯನ (೧೫೮೬—೧೬೧೫) ಆಳಿಕೆಯಲ್ಲಿ ಬಾಳಿದಂತೆ ತಿಳಿಯುತ್ತದೆ.

ಸಲಕರಾಜನ ಮಗನಾದ ತಿರುಮಲರಾಜನು ಕಾಲಜ್ಞಾನವನ್ನು ಬರೆದ ಎಮ್ಮೆ ಬಸವನೆಂಬ ವೀರಶೈವಗುರುವಿಗೆ ಕೊಮರಕೆರೆ ಎಂಬ ಗ್ರಾಮವನ್ನು ೧೫೪೩ ರಲ್ಲಿ ಕೊಟ್ಟಂತೆ ಒಂದು ಶಾಸನದಿಂದ ತಿಳಿಯುತ್ತದೆ. ಈ ಗುರುವನ್ನು ಸ್ತುತಿಸುವ ಕೆಳಗಣ ಪದ್ಯದಿಂದ ಹಂಪೆಯ ಬಳಿ ಬೆಟ್ಟದ ಮೇಲಿರುವ ಜಂಬುನಾಥನು ಇವನಿಗೆ ಉಪಾಸ್ಯದೇವತೆಯೆಂದು ತಿಳಿವುದರಿಂದ ಇವನ ಸ್ಥಳವು ಹಂಪೆಯೇ ಆಗಿರಬಹುದು—

ಜಾಂಬೂನದಾದ್ರಿಕೋದಂಡಜಂಬುನಾಥಪ್ರಭಾವತಃ ।
ಪ್ರಾಪ್ತಕಾಲತ್ರಯೋದಂತಪರಿಜ್ಞಾನಾಯ ಧೀಮತೇ ॥

ಮೈಸೂರರಸರು—ಇವರು ಕನ್ನಡನುಡಿಗೆ ಪ್ರೋತ್ಸಾಹವನ್ನು ಮಾಡಿರುವ ಸಂಗತಿ ಪ್ರಸಿದ್ಧವಾಗಿಯೇ ಇದೆ. ರಾಜನೃಪನ (೧೫೭೮—೧೬೧೭) ಪ್ರಧಾನಿಯಾದ ತಿರುಮಲಾರ್ಯನು ಕರ್ಣವೃತ್ತಾಂತ ಕಥೆಯನ್ನು ಬರೆದಿದ್ದಾನೆ. ಈ ಕವಿಯ ದೌಹಿತ್ರನೇ ಚಿಕ್ಕದೇವರಾಯನಲ್ಲಿ ಮಂತ್ರಿಯಾಗಿದ್ದ ತಿರುಮಲಾರ್ಯನು. ಚಾಮರಾಜನು (೧೬೧೭—೧೬೩೭) ರಾಮಾಯಣ, ಬ್ರಹ್ಮೋತ್ತರಖಂಡ ಇವುಗಳನ್ನು ರಚಿಸಿದನು. ಇವನ ಪ್ರೋತ್ಸಾಹದಿಂದ ರಾಮಚಂದ್ರನು ಅಶ್ವಶಾಸ್ತ್ರವನ್ನೂ, ಪದ್ಮಣಪಂಡಿತನು ಹಯಸಾರಸಮುಚ್ಚಯವನ್ನೂ ಬರೆದರು. ಭಾರತಿನಂಜ, ಗೋವಿಂದವೈದ್ಯ ಇವರು ಕಂಠೀರವನರಸರಾಜನ (೧೬೩೮—೧೬೫೯) ಪೋಷಣೆಯಲ್ಲಿ ಕಂಠೀರವನರಸರಾಜವಿಜಯವನ್ನು ಬರೆದರು. ಭಾಸ್ಕರನು ಇದೇ ರಾಜನ ಆಶ್ರಿತನಾಗಿ ಜೇಹಾರಗಣಿತವನ್ನು ರಚಿಸಿದನು. ಚಿಕ್ಕದೇವರಾಜನು (೧೬೭೨—೧೭೦೪) ಸ್ವತಃ ಕವಿಯಾಗಿಯೂ, ಕವಿಪೋಷಕನಾಗಿಯೂ ಇದ್ದನು. ಇವನು ಚಿಕ್ಕದೇವರಾಜಬಿನ್ನಪ, ಗೀತಗೋಪಾಲ ಮೊದಲಾದ ಗ್ರಂಥಗಳನ್ನು ಮಾಡಿದನು. ಇವನ ಆಶ್ರಿತರಲ್ಲಿ ತಿರುಮಲಾರ್ಯನು ಅಪ್ರತಿಮವೀರಚರಿತ ಮೊದಲಾದ ಗ್ರಂಥಗಳನ್ನೂ, ಚಿಕ್ಕುಪಾಧ್ಯಾಯನು ವಿಷ್ಣುಪುರಾಣ, ಕಮಲಾಚಲಮಾಹಾತ್ಮ್ಯ ಮುಂತಾದುವನ್ನೂ, ತಿಮ್ಮಕವಿ ಯಾದವಗಿರಿಮಾಹಾತ್ಮ್ಯ ಮೊದಲಾದ ಗ್ರಂಥಗಳನ್ನೂ, ಮಲ್ಲಿಕಾರ್ಜುನನು ಶ್ರೀರಂಗಮಾಹಾತ್ಮ್ಯವನ್ನೂ, ಸಿಂಗರಾರ್ಯನು ಮಿತ್ರವಿಂದಾಗೋವಿಂದವೆಂಬ ನಾಟಕವನ್ನೂ, ವೇಣುಗೋಪಾಲವರಪ್ರಸಾದನು ಚಿಕ್ಕದೇವರಾಜವಂಶಾವಳಿಯನ್ನೂ, ಚಿದಾನಂದಕವಿ ಮುನಿವಂಶಾಭ್ಯುದಯವನ್ನೂ, ಮಲ್ಲರಸನು ದಶಾವತಾರಚರಿತೆಯನ್ನೂ, ಹೊನ್ನಮ್ಮನು ಹದಿಬದೆಯ ಧರ್ಮವನ್ನೂ ರಚಿಸಿದರು. ಈ ಕವಿಗಳಲ್ಲಿ ಚಿಕ್ಕುಪಾಧ್ಯಾಯನು ಸುಮಾರು ೩೦ ಗ್ರಂಥಗಳಿಗೆ ಮೇಲೆ ಬರೆದಿದ್ದಾನೆ. ೧ ನೆಯ ಕೃಷ್ಣರಾಜನ (೧೭೧೩—೧೭೩೧) ಆಶ್ರಿತನಾಗಿ ಬಾಲವೈದ್ಯದ ಚೆಲುವನು ಕನ್ನಡಲೀಲಾವತಿ,

ರತ್ನಶಾಸ್ತ್ರ ಇವುಗಳನ್ನು ಬರೆದನು. ರಾಮಾಯಣಂ ತಿರುಮಲೆಯಾಚಾರ್ಯ ಎಂಬ ಕವಿಯೂ ಈ ದೊರೆಯ ಆಶ್ರಿತನು. ಈ ರಾಜನ ಮಹಿಷಿಯಾದ ಚೆಲ್ವಾಂಬೆ ವರನಂದೀಕಲ್ಯಾಣ ಮೊದಲಾದ ಗ್ರಂಥಗಳನ್ನು ಬರೆದಿದ್ದಾಳೆ. ರಾಮಾಯಣ, ಇಂದಿರಾಭ್ಯುದಯ ಮೊದಲಾದ ಗ್ರಂಥಗಳನ್ನು ಬರೆದ ವೆಂಕಾಮಾತ್ಯನು ೨ ನೆಯ ಕೃಷ್ಣರಾಜನ (೧೭೩೪-೧೭೬೬) ಆಶ್ರಿತನು. ಈ ರಾಜನ ಮಾವನಾದ ಗೋಪಾಲರಾಜನು ಕಮಲಾಚಲಮಾಹಾತ್ಮ್ಯವನ್ನು ರಚಿಸಿದ್ದಾನೆ. ಸಿಂಗರಾಚಾರ್ಯನು ಚಾಮರಾಜನ (೧೭೭೦—೧೭೭೬) ಆಶ್ರಿತನಾಗಿ ಶ್ರೀರಂಗಮಾಹಾತ್ಮ್ಯವನ್ನು ಬರೆದನು. ೩ ನೆಯ ಕೃಷ್ಣರಾಜನು (೧೭೯೯—೧೮೬೮) ಸ್ವತಃ ಅನೇಕ ಗ್ರಂಥಗಳನ್ನು ರಚಿಸಿರುವುದಲ್ಲದೆ ಕವಿಗಳಿಗೆ ಉದಾರಾಶ್ರಯವನ್ನು ಕೊಟ್ಟು ಕನ್ನಡಸಾಹಿತ್ಯವನ್ನು ವೃದ್ಧಿಗೊಳಿಸಿದ ಸಂಗತಿ ಸರ್ವಜನವಿದಿತವಾಗಿದೆ.

ಪಾಳೆಯಗಾರರು—ಉಮ್ಮತ್ತೂರು ವೀರನಂಜೇಂದ್ರನ (೧೪೮೨—೧೪೯೪) ಪ್ರೋತ್ಸಾಹದಿಂದ ನೀಲಕಂಠಾಚಾರ್ಯನು ಆರಾಧ್ಯಚಾರಿತ್ರವನ್ನೂ, ಅಚ್ಯುತರಾಯನ ಸಾಮಂತನಾದ ಸುಗ್ಗಹಳ್ಳಿಯ ರಾಯಭೂವರನ ಪ್ರೋತ್ಸಾಹದಿಂದ ಲಿಂಗಮಂತ್ರಿ ಕಬ್ಬಿಗರ ಕೈಪಿಡಿಯನ್ನೂ, ಸುಗಟೂರ ಪ್ರಭುವಾದ ಮುಮ್ಮಡಿತಮ್ಮನು ಶಂಕರಸಂಹಿತೆಯನ್ನೂ, ಆವತಿ ಸೊಣ್ಣಬೈರೆಗೌಡನ ಆಶ್ರಿತನಾದ ಚಿಕ್ಕರಸನು ಸೊಣ್ಣಬೈರೆಗೌಡನ ಚರಿತ್ರವನ್ನೂ, ಪಿರಿಯಪಟ್ಟಣದ ವಿರುಪರಾಜೇಂದ್ರನಿಂದ ಪೋಷಿತನಾಗಿ ದೊಡ್ಡಯ್ಯನು ಚಂದ್ರಪ್ರಭಚರಿತೆಯನ್ನೂ, ಹದಿನಾಡು ಚೆನ್ನರಾಜನ ಆಜ್ಞಾನುಸಾರವಾಗಿ ಎಳಂದೂರು ನಾರಸಿಂಹಭಟ್ಟನು ವೈದ್ಯಸಾರಸಂಗ್ರಹವನ್ನೂ, ಬೇಲೂರು ವೆಂಕಟಾದ್ರಿನಾಯಕನ (೧೬೨೬—೧೬೪೩) ಪ್ರೋತ್ಸಾಹದಿಂದ ಸೂರ್ಯಕವಿ ಕವಿಕಂಠಹಾರವನ್ನೂ, ಚಿತ್ರದುರ್ಗದ ಮದಕೇರಿರಾಜನ ಆಶ್ರಿತನಾದ ಚಂದ್ರಭೀಮಕವಿ ಮದಕೇರಿರಾಜೇಂದ್ರ ದಂಡಕವನ್ನೂ ಬರೆದರು. ಹೊಸಹಳ್ಳಿ ರೇವಣಾಚಾರ್ಯನು ಚಿಕ್ಕನಾಯಕನಹಳ್ಳಿ ಮುದಿಯಪ್ಪನಾಯಕನ (೧೬೨೩) ಇಷ್ಟಾನುಸಾರವಾಗಿ ಮಹಿಮ್ನಸ್ತವಟೀಕೆಯನ್ನೂ, ಮುದಿಗೆರೆ ರಘುವಪ್ಪನಾಯಕನ ಪ್ರೇರಣೆಯಿಂದ ಶಿವಾಧಿಕ್ಯಶಿಖಾಮಣಿಟೀಕೆಯನ್ನೂ, ರಚಿಸಿದನು. ಬಿಜ್ಜವರದ ತೋಂಟದಸಿದ್ಧಲಿಂಗಭೂಪನ ಆಶ್ರಿತನಾದ ವಿರಕ್ತತೋಂಟದಾರ್ಯನು ಸಿದ್ಧೇಶ್ವರಪುರಾಣ, ಕರ್ಣಾಟಕಶಬ್ದಮಂಜರಿ ಮೊದಲಾದ ಗ್ರಂಥಗಳನ್ನು ಬರೆದನು. ಬಿಜ್ಜವರದ ಇಮ್ಮಡಿ ಚಿಕ್ಕಭೂಪನ (೧೫೯೩) ಪ್ರೋತ್ಸಾಹದಿಂದ ಮಲ್ಲಿಕಾರ್ಜುನಕವಿ ಶಂಕರಕವಿಕೃತ ಬಸವಪುರಾಣಕ್ಕೆ ಟೀಕೆಯನ್ನು ಬರೆದನು. ಇಕ್ಕೇರಿ ವೆಂಕಟಪ್ಪನಾಯಕನ (೧೫೮೨—೧೬೨೯) ಆಜ್ಞೆಯಿಂದ ತಿರುಮಲಭಟ್ಟನು ಶಿವಗೀತೆಯನ್ನು ಬರೆದನು. ಬಸವಪ್ಪನಾಯಕನು (೧೬೯೭—೧೭೧೪) ಸೂಕ್ತಿಸುಧಾಕರವನ್ನು ರಚಿಸಿದನು. ಸೋಮಶೇಖರನಾಯಕನ (೧೭೧೪—೧೭೨೯) ಮಂತ್ರಿಯಾದ ನಿರ್ವಾಣಯ್ಯನು ಶಿವಪೂಜಾವಿಧಾನವನ್ನು ಬರೆದನು. ಕಳಲೆ ವೀರರಾಜನು ವೈದ್ಯಸಂಹಿತಾಸಾರಾರ್ಣವವನ್ನು ಬರೆದನು. ಇವನ ಆಶ್ರಿತನಾದ ಚೆನ್ನಯ್ಯನು ಪದ್ಮಿನೀಪರಿಣಯವನ್ನು ರಚಿಸಿದನು.

ಕಳಲೆ ದೇವರಾಜನ ಆಶ್ರಿತನಾದ ರಂಗಯ್ಯನಿಂದ ತುಲಾಕಾವೇರೀಮಾಹಾತ್ಮ್ಯವು ರಚಿತವಾಯಿತು. ಕಳಲೆ ನಂಜರಾಜನು ಕಕುದ್ಗಿರಿಮಾಹಾತ್ಮ್ಯ ಮೊದಲಾದ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಇವನ ಆಶ್ರಿತರಲ್ಲಿ ನೂರೊಂದನು ಸೌಂದರ ಕಾವ್ಯವನ್ನೂ ವೆಂಕಟೇಶನು ಹಾಲಾಸ್ಯಮಾಹಾತ್ಮ್ಯವನ್ನೂ ಬರೆದಿದ್ದಾರೆ.

ಅಲ್ಲದೆ ಕುಸುಮಾವಳಿಕಾವ್ಯವನ್ನು ಬರೆದ ದೇವಕವಿಗೆ (ಸು. ೧೨೦೦) ಚಿಕ್ಕ ರಾಜಚಮೂಪನೂ, ನೇಮಿನಾಥಪುರಾಣವನ್ನು ರಚಿಸಿದ ಮಹಾಬಲಕವಿಗೆ (೧೨೫೪) ಕೇತಯನಾಯಕನೂ, ದ್ವಾದಶಾನುಪ್ರೇಕ್ಷಾಕಾರನಾದ ವಿಜಯಣ್ಣನಿಗೆ (೧೪೪೮) ಬೆಳುವಲನಾಡಿನ ವೆಮ್ಮನಭಾವಿಯ ಪ್ರಭು ಹೊನ್ನಬಂದಿಯ ದೇವರಾಜನೂ, ಸೌಂದರಪುರಾಣಕರ್ತೃವಾದ ಬೊಮ್ಮರಸನಿಗೆ (ಸು. ೧೪೫೦) ಡೆಂಕಣಿಕೋಟೆ ಪುರವರಾಧೀಶ್ವರ ತಿಪ್ಪರಸನೂ ಪೋಷಕರಾಗಿದ್ದಂತೆ ಆ ಗ್ರಂಥಗಳಿಂದ ತಿಳಿಯುತ್ತದೆ.

ಇನ್ನು ಕೆಲವರು ಕವಿಗಳು ಕೆಲವು ಪ್ರಾಂತಗಳಿಗೂ ಗ್ರಾಮಗಳಿಗೂ ವಿಭುಗಳಾಗಿದ್ದಂತೆ ತಿಳಿಯುತ್ತದೆ. ಅವರುಗಳ ಹೆಸರನ್ನೂ ತತ್ಕೃತಗ್ರಂಥನಾಮಗಳನ್ನೂ ಕೆಳಗೆ ಸೂಚಿಸುತ್ತೇನೆ:—

ಕವಿ	ಗ್ರಂಥ	ಕಾಲ
ಚೋಳರಾಜನಾದ ಸೋಮನಾಥನ ಮಗ ಉದಯಾದಿತ್ಯ	ಉದಯಾದಿತ್ಯಾಲಂಕಾರ	ಸು. ೧೧೫೦
ಇಂದುಶೇಖರರಾಜನಮಗ ಸೋಮರಾಜ	ಉದ್ಭಟಕಾವ್ಯ	೧೨೨೨
ಹಿರಿಯೂರಪ್ರಭು ಮಾಧವ	ಮಾಧವಾಲಂಕಾರ	ಸು. ೧೫೦೦
ಚೋಳರಭೀಮ ಎಳುಬೀಡಿನ ಗೋವ ವಿರುಪರಾಜ	ತ್ರಿಭುವನತಿಲಕ	೧೫೧೯
ಚೋಳರಭೀಮ ಎಳುಬೀಡಿನ ಗೋವ ವೀರಭದ್ರರಾಜ	ವೀರಭದ್ರವಿಜಯ	ಸು. ೧೫೩೦
ಕಾಕೊಳಲಧಿಪ ರಾಮಭೂಪತಿಪುತ್ರ ರಾಮೇಂದ್ರ	ಸೌಂದರ್ಯಕಥಾರತ್ನ	ಸು. ೧೫೫೦
ಅಯ್ಯಣಭೂಪಪುತ್ರ ಅಣ್ಣಾಜಿ	ಸೌಂದರವಿಲಾಸ	ಸು. ೧೬೦೦
ರಸವಾಳಿಪ್ರಭು ಬೊಮ್ಮರಸನ ಮಗ ಶೃಂಗಾರಕವಿ	ಕರ್ನಾಟಕಸಂಜೀವನ	ಸು. ೧೬೦೦
ನೃಸಿಂಹರಾಜನ ಮಗ ವೀರಭದ್ರರಾಜ	ಪಾಲಕಾಪ್ಯಹಸ್ತ್ಯಾಯುರ್ವೇದ ಟೀಕೆ	ಸು. ೧೬೦೦
ಜಕ್ಕಭೂಪಾಲ	ಭಾರತಕಥಾಸಂಗ್ರಹ	ಸು. ೧೬೨೦
ಬಲ್ಲಾಳಪುರದಪ್ರಭು ನರಹರಿ	ಪ್ರಹ್ಲಾದಚರಿತ್ರೆ	ಸು. ೧೬೫೦
ಬೆಳಗೋಡ ಪ್ರಭು ವೀರಜನಪತಿ	ವಿಕ್ರಮವಿಲಾಸ	ಸು. ೧೬೫೦

ಕವಿ.	ಗ್ರಂಥ.	ಕಾಲ.
ರಾಘವಭೂಪರನನುಜ ಶೇಷ	ರುಕ್ಮಾಂಗದಚರಿತ್ರೆ	ಸು. ೧೬೫೦
ಬಸವರಾಜೇಂದ್ರ	ಮಹಾವಿಭೂತಿಮಹಿಮೆ	ಸು. ೧೭೦೦
ನಂಜನಾಥಭೂಪಾಲ	ವೈದ್ಯಸಾರಸಂಗ್ರಹ	ಸು. ೧೭೦೦
ಚಿನ್ನರಾಜ	ವೆಂಕಟೇಶ್ವರಶತಕ	ಸು. ೧೭೫೦
ಆಹವವಿಜಯ ಲಿಂಗರಾಜೇಂದ್ರತನುಜ ನಂಜಯ್ಯ	ಕಪೋತವಾಕ್ಯ	ಸು. ೧೭೫೦
ಶಾಲ್ಯದ ಕೃಷ್ಣರಾಜ	ಅನುಭವರಸಾಯನ, ವಿವೇಕಾಭರಣ ಇತ್ಯಾದಿ	೧೭೬೯

ಕನ್ನಡನುಡಿಯ ಪ್ರೋತ್ಸಾಹವನ್ನು ಕುರಿತು ಇಷ್ಟು ವಿಸ್ತಾರವಾಗಿ ನಿರೂಪಣ ಮಾಡಿ ನಿಮಗೆ ಬೇಸರವನ್ನು ಉಂಟುಮಾಡಿದೆನು. ಪೂರ್ವದಲ್ಲಿ ರಾಜರು ಮೊದಲುಗೊಂಡು ಚಿಕ್ಕ ಅಧಿಕಾರಿಗಳವರೆಗೂ ಎಲ್ಲರೂ ಉತ್ಸಾಹದೊಡನೆ ಭಾಷಾಸೇವೆಯನ್ನು ಮಾಡುತ್ತಿದ್ದ ಅಂಶವು ತಮ್ಮ ಮನಸ್ಸಿಗೆ ಹತ್ತಬೇಕೆಂಬುದೇ ನನ್ನ ಉದ್ದೇಶ. ಈ ಗ್ರಂಥಕರ್ತೃಗಳಲ್ಲಿ ಅನೇಕರು ಖ್ಯಾತಿಲಾಭಪೂಜೆಗಳಲ್ಲಿ ದೃಷ್ಟಿಯಿಡದೆ ಲೋಕೋಪಕಾರಕ್ಕಾಗಿ ಕೆಲಸಮಾಡಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಪೂರ್ವಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ಇಷ್ಟಿಷ್ಟೆಂದು ಹೇಳಲು ಸಾಧ್ಯವಲ್ಲ. ಹಿಂದಿನ ಪ್ರೋತ್ಸಾಹದಲ್ಲಿ ಶತಾಂಶವಾದರೂ ಈಗ ಇದ್ದಿದ್ದ ಪಕ್ಷದಲ್ಲಿ ಕನ್ನಡನುಡಿ ಇಷ್ಟು ಹೀನಸ್ಥಿತಿಗೆ ಬರುತ್ತಿರಲಿಲ್ಲ.

ಕವಿಗಳ ಜನ್ಮಸ್ಥಾನ.

ಕನ್ನಡಕವಿಗಳಲ್ಲಿ ಸುಪ್ರಸಿದ್ಧರಾದ ಅನೇಕರಿಗೆ ಧಾರವಾಡಜಿಲ್ಲೆಯೂ ಅದಕ್ಕೆ ಸುತ್ತುಮುತ್ತಿನ ಪ್ರಾಂತವೂ ಜನ್ಮಸ್ಥಾನವಾಗಿದ್ದಿತು. ಈ ವಿಷಯ ಕೆಳಗಣ ಪಟ್ಟಿಯಿಂದ ಸ್ಪಷ್ಟವಾಗಬಹುದು :—

ಕವಿ.	ಗ್ರಂಥ.	ಕಾಲ.	ಜನ್ಮಸ್ಥಳ.
ಆದಿಪಂಪ	ಆದಿಪುರಾಣ ಇತ್ಯಾದಿ	೯೪೧	ಪುಲಿಗೆರೆ
ರನ್ನ	ಅಜಿತಪುರಾಣ ಇತ್ಯಾದಿ	೯೯೩	ಜಂಬುಖಂಡಿಗೆ ಸೇರಿದ ಮುದುವೊಳಲ್
ಶ್ರೀಧರಾಚಾರ್ಯ	ಜಾತಕತಿಲಕ	೧೦೪೯	ಬೆಳುವಲನಾಡಿನ ನರಿಗುಂದ
ಅಭಿನವಪಂಪ	ರಾಮಾಯಣ ಇತ್ಯಾದಿ	ಸು. ೧೧೦೦	ವಿಜಯಪುರ (ಬಿಜಾಪುರ)
ನಯಸೇನ	ಧರ್ಮಾಮೃತ	೧೧೧೨	ಮುಳಗುಂದ

ಕವಿ.	ಗ್ರಂಥ.	ಕಾಲ.	ಜನ್ಮಸ್ಥಳ.
ಬ್ರಹ್ಮಶಿವ	ಸಮಯಪರೀಕ್ಷೆ ಇತ್ಯಾದಿ	ಸು. ೧೧೨೫	ಪೊಟ್ಟಣಗೆರೆ
ದುರ್ಗಸಿಂಹ	ಪಂಚತಂತ್ರ	ಸು. ೧೧೪೫	ಕಿಸುಕಾಡಿನಲ್ಲಿಸಯ್ಯಡಿ
ಸಿದ್ಧರಾಮ	ಯೋಗಿನಾಥವಚನಇತ್ಯಾದಿ	ಸು. ೧೧೬೦	ಸೊನ್ನಲಿಗೆ
ಅಗ್ಗಳ	ಚಂದ್ರಪ್ರಭಪುರಾಣ	೧೧೮೯	ಇಂಗಳೇಶ್ವರ
ಆಚಣ್ಣ	ವರ್ಧಮಾನಪುರಾಣಇತ್ಯಾದಿ	ಸು. ೧೧೯೫	ಪುಲಿಗೆರೆ
ಗುಣವರ್ಮ 11	ಪುಷ್ಪದಂತಪುರಾಣ	ಸು. ೧೨೩೫	ಕೂಂಡಿ
ಚೌಂಡರಸ	ಅಭಿನವದಶಕುಮಾರಚರಿತೆ	ಸು. ೧೩೦೦	ಪಂಡರಾಪುರ
ನಾಗರಾಜ	ಪುಣ್ಯಾಸ್ರವ	೧೩೩೧	ಮೂಸಿವಾಳ
ಅಭಿನವಚಂದ್ರ	ಅಶ್ವಶಾಸ್ತ್ರ	ಸು. ೧೪೦೦	ಬಾಗೆವಾಡಿ
ಕುಮಾರವ್ಯಾಸ	ಭಾರತ	ಸು. ೧೪೩೦	ಗದಗು
ಸುರಂಗಕವಿ	ತ್ರಿಷಷ್ಟಿಪುರಾತನರ ಚರಿತ್ರೆ	ಸು. ೧೫೦೦	ಪುಲಿಗೆರೆ
ಕುಮಾರವಾಲ್ಮೀಕಿ	ರಾಮಾಯಣ	ಸು. ೧೫೦೦	ತೊರವೆ
ಕನಕದಾಸ	ಮೋಹನತರಂಗಿಣಿ ಇತ್ಯಾದಿ	ಸು. ೧೫೫೦	ಕಾಗಿನೆಲೆ
ಅದೃಶ್ಯಕವಿ	ಪ್ರೌಢರಾಯನಕಾವ್ಯ	ಸು. ೧೫೮೦	ತೊರೆಸಾಲಪರ ಗಣೆ, ಕೊಲ್ಲಾಪುರ
ಗೋವಿಂದ	ನಂದಿಮಹಾತ್ಮ್ಯ	ಸು. ೧೬೫೦	ಭೀಮರಥೀತೀರದ ಖೇಡಬಯ್ಯಾರ
ಸಿಂಹರಾಜ	ಚಿನ್ಮಯಚಿಂತಾಮಣಿ	ಸು. ೧೬೫೦	ಪುಲಿಗೆರೆ
ನಾರಸಿಂಹ	ಅನುಭವಶಿಖಾಮಣಿ	೧೭೬೮	ಕುರುತುಕೋಟಿ

ನೃಪತುಂಗನು ಕಿಸುವೊಳಲ್, ಕೊಪಣನಗರ, ಪುಲಿಗೆರೆ, ಒಂಕುಂದ ಇವುಗಳ ಮಧ್ಯಪ್ರದೇಶವೇ ತಿರುಳುಗನ್ನಡದ ನೆಲೆಯೆಂದು ಹೇಳಿದ್ದಾನೆ. ಆದಿಪಂಪನು "ಪುಲಿಗೆರೆಯ ತಿರುಳ್ಗನ್ನಡದೊಳ್" ತನ್ನ ಗ್ರಂಥವನ್ನು ಬರೆದುದಾಗಿ ಹೇಳಿದ್ದಾನೆ. ಆದುದರಿಂದ ಧಾರವಾಡ ಜಿಲ್ಲೆಯಲ್ಲಿರುವ ಪುಲಿಗೆರೆಯ ಕನ್ನಡವು ಪೂರ್ವದಲ್ಲಿ ಕವಿಗಳಿಗೆ ಆದರ್ಶಪ್ರಾಯವಾಗಿದ್ದಂತೆ ತಿಳಿಯುತ್ತದೆ. ಇದು ಈ ಪ್ರಾಂತದವರಿಗೆ ನಿಜವಾಗಿಯೂ ಹೆಮ್ಮೆಯನ್ನು ಉಂಟುಮಾಡಬೇಕಾದ ವಿಷಯವಾಗಿದೆ. ಪ್ರಕೃತಸ್ಥಿತಿಯಲ್ಲಿ ಇಲ್ಲಿಯ ಕನ್ನಡನುಡಿ ಕಾರಣಾಂತರಗಳಿಂದ ಸ್ವಲ್ಪ ಮಾರುಪಾಡುಗಳನ್ನು ಹೊಂದಿರಬಹುದು. ಅದನ್ನು ಸಾಧ್ಯವಾದ ಮಟ್ಟಿಗೆ ಪೂರ್ವಸ್ಥಿತಿಗೆ ತರುವುದಕ್ಕೆ ಐಕಮತ್ಯದಿಂದಲೂ ಅಭಿಮಾನದಿಂದಲೂ ಪ್ರಯತ್ನಿಸಿದರೆ ಆ ಪ್ರಯತ್ನವು ಪ್ರಾಯಶಃ ವಿಫಲವಾಗಲಾರದೆಂದು ನಂಬಿದ್ದೇನೆ.

ಕನ್ನಡನುಡಿಯ ಈಗಿನ ಸ್ಥಿತಿ.

ಇದುವರೆಗೂ ಪೂರ್ವಚರಿತ್ರವನ್ನು ತಿಳಿಸಿದುದಾಯಿತು. ಈಗಲಾದರೋ ಕನ್ನಡನುಡಿ, ನಾವು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕಟೇಚ್ಛೆಯಿಂದ ಕೃಷಿಮಾಡಿದ

ಕನ್ನಡಿಗರ ಸಂತತಿಯವರೋ ಅಲ್ಲವೋ ಎಂದು ಸಂದೇಹಪಡಬಹುದಾದಷ್ಟು ಹೀನ ಸ್ಥಿತಿಗೆ ಬಂದಿದೆ. ಈ ಹೀನಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗನ ಹೃದಯವು ತಾನೇ ಶೋಕರಸಪೂರಿತವಾಗದು ? ಯಾವ ದೇಶಬಾಂಧವನಾದ ಕನ್ನಡಿಗನ ಮುಖವು ತಾನೇ ಕಂದದು ? ಯಾವ ಭಾಷಾಭಿಮಾನಿಯಾದ ಕನ್ನಡಿಗನ ಕಣ್ಣು ತಾನೇ ನೀರಿನಿಂದ ತುಂಬದು ? ಈ ಹೀನಸ್ಥಿತಿಯನ್ನು ನಿವಾರಣ ಮಾಡಲಿಕ್ಕೆ ಬದ್ಧಕಂಕಣರಾಗಿ ಸರ್ವಪ್ರಯತ್ನವನ್ನೂ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಹೀನಸ್ಥಿತಿಗೆ ಹಲವು ಕಾರಣಗಳುಂಟು. ಅವುಗಳಲ್ಲಿ ಕೆಲವನ್ನು ತಿಳಿಸುತ್ತೇನೆ. ಕನ್ನಡಿಗರಿಗೆ ತಮ್ಮ ಭಾಷೆಯಲ್ಲಿರಬೇಕಾದ ಆದರಾತಿಶಯಕ್ಕೆ ಪ್ರತಿಯಾಗಿ ಅಸಡ್ಡೆ ನೆಲೆಗೊಂಡಿರುವುದು ಪ್ರಬಲಕಾರಣವೆಂದು ಹೇಳಬಹುದು. ಅನೇಕರು ಕನ್ನಡಭಾಷೆಯಲ್ಲಿ ಮಾತನಾಡುವುದೂ ಪತ್ರಗಳನ್ನು ಬರೆವುದೂ ಅಪಮಾನಕರವೆಂದು ಭಾವಿಸಿದ್ದಾರೆ. ಇದಕ್ಕಿಂತಲೂ ಶೋಚನೀಯವಾದ ವಿಷಯವುಂಟೇ ? ಈಗಿನ ಶಿಕ್ಷಣಪದ್ಧತಿಯೂ ಈ ಅಸಡ್ಡೆಗೆ ಸಹಕಾರಿಯಾಗಿದೆ. ಪಾಠಶಾಲೆಗಳಲ್ಲಿ ಎಲ್ಲಾ ವಿಷಯಗಳನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ಕಲಿಸುತ್ತಾರೆ. ಬ್ರಿಟಿಷ್‌ಕರ್ಣಾಟಕದ ಪ್ರಾಂತಗಳಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿ ದೊರೆವುದಿಲ್ಲ. ಭಾಷೆಗೂ ಸಾಹಿತ್ಯಕ್ಕೂ ಪೂರ್ವದಂತೆ ರಾಜರ ಪ್ರೋತ್ಸಾಹವಿಲ್ಲ. ನಮ್ಮಲ್ಲಿಯೂ ಇಂಗ್ಲಿಷ್ ಬಲ್ಲವರೇ ಬುದ್ಧಿವಂತರು, ದೇಶಭಾಷಾ ಪಂಡಿತರು ಅಪ್ರಯೋಜಕರು ಎಂಬ ನಿಷ್ಕಾರಣವಾದ ಭಾವನೆ ಹುಟ್ಟಿದೆ. ಸರಕಾರದ ಕಾಗದಪತ್ರಗಳೆಲ್ಲಾ ಇಂಗ್ಲಿಷ್‌ಭಾಷೆಯಲ್ಲಿಯೇ ಇವೆ. ಮುಂಬಯಿ, ಮದರಾಸು, ಕೊಡಗು ಎಂಬ ಬ್ರಿಟಿಷ್ ಕರ್ಣಾಟಕದ ದೇಶವಿಭಾಗವು ಭಾಷೆಯ ಅನವಸ್ಥೆಗೂ ಭಿನ್ನರೂಪತೆಗೂ ಕಾರಣವಾಗಿದೆ. ಮೇಲೆ ಹೇಳಿದ ಕಾರಣಗಳಲ್ಲಿ ಕೆಲವು ಪ್ರಕೃತಸ್ಥಿತಿಯಲ್ಲಿ ಅಪರಿಹಾರ್ಯವೆಂದು ತೋರಿದರೂ ನಮ್ಮಲ್ಲಿ ನೆಲೆಗೊಂಡಿರುವ ಅಸಡ್ಡೆಯೆಂಬ ಪಿಶಾಚವನ್ನು ದೇಶಾಭಿಮಾನ ಭಾಷಾಭಿಮಾನಗಳೆಂಬ ಮಂತ್ರಗಳ ಬಲದಿಂದ ಉಚ್ಚಾಟನ ಮಾಡಿದರೆ ಭಾಷೋನ್ನತಿಯ ಕೆಲಸವು ಕೂಡಿದಮಟ್ಟಿಗೆ ಫಲಕಾರಿಯಾಗಬಹುದು.

ಕನ್ನಡನುಡಿಯ ಏಳಿಗೆಗೆ ಉಪಾಯಗಳು.

ಪೂರ್ವದಂತೆ ಉದ್ದಾಮಕವಿಗಳು ಹುಟ್ಟಬೇಕೆಂದಾಗಲಿ, ಪೂರ್ವದಂತೆ ರಾಜರೂ ಮಂಡಲಿಕರೂ ಅಧಿಕಾರಿಗಳೂ ಪ್ರೋತ್ಸಾಹಕರಾಗಬೇಕೆಂದಾಗಲಿ ಹಾರೈಸುವುದರಿಂದ ಫಲವಿಲ್ಲ. ಪ್ರಕೃತಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಸಡ್ಡೆಯನ್ನು ತೊಲಗಿಸಿ ಭಾಷಾಸೇವೆಯಲ್ಲಿ ನಿರತರಾಗಬೇಕು. ಪಂಡಿತರನ್ನು ಗೌರವಿಸಬೇಕು. ಕನ್ನಡನುಡಿಗಾಗಿ ಶ್ರಮಪಡುವವರಿಗೆ ಮರ್ಯಾದೆಯನ್ನು ಮಾಡಬೇಕು. ಸಾಹಿತ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ ಶಾಸ್ತ್ರೀಯಗ್ರಂಥಗಳೇ ಮೊದಲಾದುವನ್ನು ಅನ್ಯಭಾಷೆಗಳಿಂದ ಪರಿವರ್ತಿಸಬೇಕು. ಕೋಶಗಳನ್ನೂ ಸಾಂಕೇತಿಕಶಬ್ದಗಳ ಪಟ್ಟಿಯನ್ನೂ ಏರ್ಪಡಿಸಬೇಕು. ಗ್ರಂಥಸ್ಥಭಾಷೆಗೆ ಏಕರೂಪತೆಯನ್ನು ಉಂಟುಮಾಡಬೇಕು. ವಿದ್ಯಾವಂತನಾದ ಪ್ರತಿಯೊಬ್ಬ ಕನ್ನಡಿಗನೂ ತನಗಿಂತ ವಿದ್ಯೆಯಲ್ಲಿ ಕಡಮೆಯಾದ ಕನ್ನಡಿಗರ ಉಪಯೋಗಾರ್ಥವಾಗಿ ಗ್ರಂಥನಿರ್ಮಾಣವನ್ನು ಮಾಡುವುದು ತನ್ನ ಕರ್ತವ್ಯವೆಂದು ತಿಳಿಯ

ಬೇಕು. ಜ್ಞಾನವೃದ್ಧಿಕರವಾದ ಪತ್ರಿಕೆಗಳನ್ನು ಹೊರಡಿಸಬೇಕು. ಭಾಷೆಯ ಏಕೀಭಾವ, ಪರಸ್ಪರ ಮೈತ್ರಿ, ಮುದ್ರಣಸೌಕರ್ಯ, ಗ್ರಂಥ ಪ್ರಚಾರಕ್ಕೆ ಅನುಕೂಲ್ಯ ಇವುಗಳನ್ನು ಉಂಟುಮಾಡುವುದಕ್ಕಾಗಿ ಗ್ರಂಥಕರ್ತರ ಮತ್ತು ಪತ್ರಿಕಾಸಂಪಾದಕರ ಒಂದು ಸಂಘವನ್ನು ಏರ್ಪಡಿಸಬಹುದು. ಎಲ್ಲಾ ಕರ್ನಾಟಕ ಭಾಗಗಳ ವಿದ್ವಾಂಸರನ್ನು ಸೇರಿಸಿ ಒಂದು ಗ್ರಂಥಪರಿಶೀಲಕಮಂಡಲಿಯನ್ನೂ ಏರ್ಪಡಿಸಬಹುದು.

ಉಪಸಂಹಾರ.

ಭಕ್ತಶಿರೋಮಣಿಯಾದ ಕನಕದಾಸನು ಭಕ್ತಿರಸದಿಂದ ತುಂಬಿ ತುಳುಕುತ್ತಿದ್ದ ತನ್ನ ಹೃದಯದಲ್ಲಿ ಹಾಸ್ಯರಸಕ್ಕೂ ಸ್ವಲ್ಪ ಎಡೆಮಾಡಿದ್ದಂತೆ ತಿಳಿಯುತ್ತದೆ. ಅವನು ಬರೆದ ಗ್ರಂಥಗಳಲ್ಲಿ ರಾಗಿಯ ಮಹತ್ವವನ್ನು ಬೋಧಿಸುವ ರಾಮಧಾನ್ಯಚರಿತೆ ಎಂಬುದೊಂದು. ಈ ಗ್ರಂಥದಲ್ಲಿ ಕವಿ ಈ ಧಾನ್ಯಕ್ಕೆ ನರೆದಲೆಗ ಎಂಬ ಹೆಸರನ್ನು ಹೇಳಿ ಇದಕ್ಕೆ ಶ್ರೀರಾಮನು ರಾಘವ ಎಂಬ ತನ್ನ ಹೆಸರನ್ನು ಇಟ್ಟುದರಿಂದ ರಾಗಿ ಎಂಬ ಹೆಸರು ಪ್ರಸಿದ್ಧಿಗೆ ಬಂದಿತೆಂದು ಹೇಳಿದ್ದಾನೆ. ಹಳೆಯ ಶಾಸನಗಳಲ್ಲಿ ಈ ಧಾನ್ಯದ ಹೆಸರು "ರಾಘಿ" ಎಂದು ದೊರೆವುದು (ಮುಳುಬಾಗಿಲು ೧೭೭) ಈ ಹೇಳಿಕೆಗೆ ಉಪಷ್ಟಂಭಕವಾಗಿದೆ. ಈ ಗ್ರಂಥದಲ್ಲಿ ರಾಗಿಗೂ, ವ್ರೀಹಿ (ಭತ್ತ) ಗೂ ಸಂವಾದರೂಪವಾದ ಈ ಪದ್ಯಗಳು ದೊರೆಯುತ್ತವೆ—

ವ್ರೀಹಿಯ ಮಾತು.

ಕ್ಷಿತಿಯುಮರರುಪನಯನದಲಿ ಸು । ವ್ರತಸುಭೋಜನಗಳಲಿ ಮಂತ್ರಾ ।
ಕ್ಷತೆಗಳಲಿ ಶುಭಶೋಭನದಲಾರತಿಯ ಬೆಳಗುವಲಿ ।
ಕ್ರತುಗಳೆಡೆಯೊಳಗಮರನೆಗಳಲಿ । ಪ್ರತಿದಿನವು ರಂಜಿಸುತ ದೇವರಿ ।
ಗತಿಶಯದ ನೈವೇದ್ಯವಾಗಿಹೆನೆಂದನಾ ವ್ರೀಹಿ ॥
ಜನಪರಿಗೆ ಶಿಶುಗಳಿಗೆ ಬಾಂಧವ । ಜನರೆಡೆಗೆ ಬ್ರಾಹ್ಮರ ಸಮಾರಾ ।
ಧನೆಗೆ ವಿದ್ಯಾರಂಭಕಲಿಸುವ ಸಕಲಭೂಸುರರ ॥
ಮನೆಗಳಲಿ ಪರಿದಿವಸದಾಪಾ । ಸನಗಳಲಿ ತಾ ಯೋಗ್ಯನಹುದೆಂ ।
ದೆನಿಸಿಕೊಂಬೆನು ನೀನಯೋಗ್ಯನು ಭ್ರಷ್ಟ ತೊಲಗೆಂದ ॥

ರಾಗಿಯ ಮಾತು.

ಸತ್ವಹೀನರ ಬಡವರನು ಕ । ಣ್ಣೆತ್ತಿನೋಡೆ ಧನಾಢ್ಯರನು ಬೆಂ ।
ಬತ್ತಿ ನಡೆಯುವಪೇಕ್ಷೆ ನಿನ್ನದು ಹೇಳಲೇನದನು ॥
ಹೆತ್ತ ಬಾಣಂತಿಯರಿಗೆ ರೋಗಿಗೆ । ಪಥ್ಯಪಾನದಿ ಹೊಣೆಯ ಬಾಯಿಗೆ ।
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕವೆಂದ ॥
ಸತ್ತವರ ಪ್ರತಿಬಿಂಬರೂಪವ । ವಿಸ್ತರಿಸಿ ಪಿತೃನಾಮಗಳ ನಿನ ।
ಗಿತ್ತು ಮೂವರ ಹೆಸರಿನಲಿ ಕರೆಕರೆದು ಪರ್ಣಯಲಿ ॥

ನೆತ್ತಿನೆತ್ತಿಯ ಬಡಿದು ಕಷೆಯಲಿ। ತುತ್ತಸಿಡುವರು ಶಿಶುಗಳಿಗೆ ನೀ।
ನೆತ್ತಿದೆಯಲಾ ತನುವ ಸುಡಬೇಕೆಂದ ನರೆದಲೆಗ ॥

ನಿರ್ದೋಷವಾಗಿಯೂ ನಿರ್ಗುಣವಾಗಿಯೂ ಇರುವ ವಸ್ತುಗಳು ಪ್ರಪಂಚದಲ್ಲಿಲ್ಲ. ಆದುದರಿಂದ ಮೇಲಣಪದ್ಯಗಳಲ್ಲಿ ಹೇಳಿರುವಂತೆ ಭಿನ್ನಪ್ರಾಂತಗಳ ಕನ್ನಡಿಗರು ನಾನು ಹೆಚ್ಚು ತಾನು ಹೆಚ್ಚು ಎಂದು ಮತ್ಸರದಿಂದ ಹೋರಾಡಿ ಅಲ್ಪಸ್ವಲ್ಪವಾದ ವ್ಯತ್ಯಾಸಗಳನ್ನು ಹೆಚ್ಚಿಸಿ ಕನ್ನಡನುಡಿಯ ಏಳಿಗೆಗೆ ಕುಂದಕವನ್ನು ಉಂಟುಮಾಡಕೂಡದೆಂಬುದು ನನ್ನ ಪ್ರಾರ್ಥನೆ. ಅಲ್ಪಸ್ವಲ್ಪವಾದ ಅಭಿಪ್ರಾಯಭೇದಗಳಿದ್ದರೂ ಅವುಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಎಲ್ಲರೂ ಪರಸ್ಪರಮೈತ್ರಿಯಿಂದಲೂ ಐಕಮತ್ಯದಿಂದಲೂ ಭಾಷಾಸೇವೆಯನ್ನು ಉತ್ಸಾಹದೊಡನೆ ಮಾಡಬೇಕಾದುದು ಅತ್ಯಾವಶ್ಯಕ. ಇದೂ ಅಲ್ಲದೆ

ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ

ಎಂದು ಕೃಷ್ಣಪರಮಾತ್ಮನು ಅರ್ಜುನನಿಗೆ ಮಾಡಿದ ಉಪದೇಶಕ್ಕೆ ಅನುಸಾರವಾಗಿ ಫಲಾಭಿಸಂಧಿಯಿಲ್ಲದೆ ಕರ್ತವ್ಯಬುದ್ಧಿಯಿಂದ ಕನ್ನಡಮಾತೆಯ ಮಕ್ಕಳಾದ ನಾವೆಲ್ಲರೂ ಏಕೀಭವಿಸಿ ಪ್ರಯತ್ನಮಾಡಿದರೆ ಕನ್ನಡ ನಾಡಿನ ಮತ್ತು ಕನ್ನಡ ನುಡಿಯ ಉನ್ನತಿ ಕ್ಷಿಪ್ರದಲ್ಲಿಯೇ ಲಭಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ಅನಂತರ 'ವಿಷಯ ನಿಯಾಮಕ ಸಭೆ' (Subjects Committee) ನಿರ್ಮಾಣವಾಯಿತು. ರಾತ್ರಿ ೭ ಗಂಟೆಗೆ ಕರ್ಣಾಟಕ ಗತವೈಭವಪ್ರದರ್ಶಕ ಚಿತ್ರಗಳನ್ನು 'ಮ್ಯಾಜಿಕ್ ಲ್ಯಾಂಟರ್ನ' ಮೂಲಕ ತೋರಿಸಿ ಉಪನ್ಯಾಸವನ್ನು ಮಾಡಿದರು. ಈ ಕಾರ್ಯವನ್ನು ಬಹುಶ್ರಮದಿಂದ ನಿರ್ವಹಿಸಿದ ಶ್ರೀಯುತ ವಿ. ಬಿ. ಆಲೂರು, ಬಿ.ಎ., ಎಲ್‌ಎಲ್.ಬಿ. ಯವರಿಗೆ ಸಾಮಾಜಿಕರೆಲ್ಲರೂ ಕೃತಜ್ಞರಾಗಿರಬೇಕಾಗಿದೆ. ಇಲ್ಲಿಗೆ ಮೊದಲನೆಯ ದಿನದ ಕೆಲಸಗಳೆಲ್ಲಾ ಪೂರೈಸಿದುವು.

ಎರಡನೆಯ ದಿನ.

ಎರಡನೆಯ ದಿನ ಬೆಳಗ್ಗೆ ಲಾವಣಿಗಳನ್ನೂ ಪದಗಳನ್ನೂ ಹಾಡಿಸಿದಮೇಲೆ ವಿಷಯನಿರ್ಧಾರಕಮಂಡಲಿಯು ಸಭೆಸೇರಿ ಸಮ್ಮೇಳನದಲ್ಲಿ ಚರ್ಚಿಸಿ ತೀರ್ಮಾನ ಮಾಡುವುದಕ್ಕೆ ಯೋಗ್ಯವಾದ ವಿಷಯಗಳನ್ನು ಕುರಿತು ನಿರ್ಧರಮಾಡಿತು.

ಮಧ್ಯಾಹ್ನ ಸುಮಾರು ೨ ಗಂಟೆಗೆ ಸಮ್ಮೇಳನವು ಪ್ರಾರಂಭವಾಯಿತು. "ಪ್ರಚಲಿತವಾದ ಕನ್ನಡಭಾಷೆಗೆ ಅನುಕೂಲವಾದ ವ್ಯಾಕರಣರಚನೆ" ಎಂಬ

ವಿಷಯವನ್ನು ಕುರಿತು ಮ॥ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಬರೆದಿಟ್ಟ ಪ್ರಬಂಧವನ್ನು ಸ್ವಾಗತಮಂಡಲಿಯ ಕಾರ್ಯದರ್ಶಿಗಳಾದ ಮ॥ ಮುಗದಾಳದ ವೆಂಕಟರಾಯರು ಸಮ್ಮೇಳನದಲ್ಲಿ ಓದಿದರು. ಅನಂತರ ಮುಂದೆ ಹೇಳುವ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನವಾದುವು :—“(೧) ಈಗ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಭಯಂಕರಯುದ್ಧದಲ್ಲಿ ಬ್ರಿಟಿಷ್‌ಸಾಮ್ರಾಜ್ಯಕ್ಕೆ ಬೇಗನೆ ಜಯಪ್ರಾಪ್ತಿಯಾಗಬೇಕು. (೨) ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯ ದ್ವಾರದಿಂದ ವಿಷಯಗ್ರಹಣ ಮಾಡುವುದಾದರೆ ಅವರಿಗೆ ಶಾರೀರಕ ಮತ್ತು ಮಾನಸಿಕ ಶ್ರಮವಾಗುವುದಲ್ಲದೆ ಅವರ ವಿಚಾರಶಕ್ತಿಯೂ ಚೆನ್ನಾಗಿ ಬೆಳೆಯುವುದಿಲ್ಲ. ಆದಕಾರಣ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಇಂಗ್ಲಿಷ್ ಭಾಷೆಯೊಂದನ್ನು ಬಿಟ್ಟು ಉಳಿದ ಎಲ್ಲಾ ವಿಷಯಗಳ ಪರೀಕ್ಷೆಯನ್ನೂ ಆಯಾ ದೇಶಭಾಷೆಗಳಲ್ಲಿಯೇ ತೆಗೆದುಕೊಳ್ಳಬೇಕು. ಮತ್ತು ಪ್ರೌಢಶಿಕ್ಷಣದ ಅಭ್ಯಾಸ ಕ್ರಮದಲ್ಲಿ ಆವಶ್ಯಕವಾದ ದ್ವಿತೀಯ ಭಾಷೆಗಳಲ್ಲಿ ಕನ್ನಡವನ್ನೂ ಸೇರಿಸಬೇಕು. (೩) ಬ್ರಿಟಿಷ್ ಇಲಾಖೆಗಳಲ್ಲಿಯೂ ಮತ್ತು ಕರ್ಣಾಟಕದೊಳಗಿನ ದೇಶೀಯ ಸಂಸ್ಥಾನಗಳಲ್ಲಿಯೂ ಕನ್ನಡ ಭಾಷೆ ಪ್ರಚಾರದಲ್ಲಿದ್ದರೂ ಶಾಲೆಗಳಲ್ಲಿ ಶಿಕ್ಷಣವು ಬೇರೆ ಭಾಷೆಯ ದ್ವಾರದಿಂದ ಕೊಡಲ್ಪಡುತ್ತದೆ. ಇದರಿಂದ ಕನ್ನಡಭಾಷೆಯ ಶಿಕ್ಷಣವು ಸರಿಯಾಗಿ ನಡೆಯುವುದಿಲ್ಲ. ಆದಕಾರಣ ಕನ್ನಡಭಾಷೆಯು ಪ್ರಚಾರದಲ್ಲಿರುವ ಈ ಸ್ಥಳಗಳಲ್ಲೆಲ್ಲ ಕನ್ನಡಿಗರ ಉಪಯೋಗಕ್ಕಾಗಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಬೇಕೆಂದು ಈ ಸಮ್ಮೇಲನವು ಆಯಾ ಸರಕಾರದವರಿಗೆ ವಿನಂತಿಯನ್ನು ಮಾಡಿಕೊಳ್ಳಬೇಕು. ರಾಮದುರ್ಗ, ಮುಧೋಳ, ಜಮಖಂಡಿ, ಸೊಂಡೂರು ಮೊದಲಾದ ಸಂಸ್ಥಾನಗಳು ಕೇವಲ ಕನ್ನಡ ಪ್ರಜೆಗಳದೇ ಇರುವುದರಿಂದ ಅಲ್ಲಿಯ ದರಬಾರಿ ಭಾಷೆಯು ಕನ್ನಡವಿರಬೇಕೆಂದೂ, ಉಳಿದ ಸಂಸ್ಥಾನಗಳಲ್ಲಿ ಕನ್ನಡ ತಾಲ್ಲೂಕುಗಳಲ್ಲಿರುವ ಕನ್ನಡ ಜನರ ಸಲುವಾಗಿ ಕನ್ನಡವೇ ದರ್ಬಾರ್ ಭಾಷೆಯಾಗಿರಬೇಕೆಂದೂ ಈ ಸಮ್ಮೇಲನದ ಅಭಿಪ್ರಾಯವಾಗಿರುತ್ತದೆ. ಈ ಠರಾವನ್ನು ಅಮಲಿನಲ್ಲಿ ತರುವುದಕ್ಕೆ ಕೆಳಗೆ ಬರೆದ ಜನರ ಕಮಿಟಿಯನ್ನು ನೇಮಿಸಬೇಕು. ೧. ಶ್ರೀ ರಾ. ನರಸಿಂಹಾಚಾರ್ಯರು (ಅಧ್ಯಕ್ಷರು), ೨. ಶ್ರೀ ಎಮ್. ರಾಮರಾಯರು, ೩. ಶ್ರೀ ಭಿ. ನಾಯಕ, ೪. ಶ್ರೀ ರಾ. ಹ. ದೇಶಪಾಂಡೆ, ೫. ಶ್ರೀ ರಾಮರಾವ್ ಮಂಗಸೂಳಿ, ೬. ಶ್ರೀ ತಮ್ಮಪ್ಪ ಚಿಕ್ಕೋಡಿ, ೭. ಶ್ರೀ ರಾ. ನರಗುಂದಕರ, ೮. ಶ್ರೀ ವೇ. ಭೀ. ಆಲೂರ (ಕಾರ್ಯದರ್ಶಿಗಳು). ಇಲ್ಲಿಗೆ ಎರಡನೆಯ ದಿವಸದ ಸಮ್ಮೇಳನ ಕಾರ್ಯವು ಮುಗಿಯಿತು. ಆ ರಾತ್ರಿ ಗದಗಿನ ಫುಟ್‌ಬಾಲ್ ಕ್ಲಬ್ಬಿನವರು “ಭಾರತ ಸಂಧಾನ” ವೆಂಬ ಹೆಸರಿನ ಸಂಗೀತವಿಲ್ಲದ ವಚನನಾಟಕವನ್ನು ಆಡಿದರು.

ಮೂರನೆಯ ದಿವಸ.

ಮೂರನೆಯ ದಿನ ಬೆಳಗ್ಗೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆ

ನಡೆಯಿತು.* ಮಧ್ಯಾಹ್ನ ೧॥ ಗಂಟೆಗೆ ಸಮ್ಮೇಳನವು ಪುನಃ ಪ್ರಾರಂಭವಾಯಿತು. ಕರ್ಣಾಟಕ ದೇಶಸ್ತವವನ್ನು ಹಾಡಿದ ಮೇಲೆ, ಧಾರವಾಡದ ಟ್ರೇನಿಂಗ್ ಕಾಲೇಜಿನ ಪಂಡಿತರಾದ ಮ॥ ಎಂ. ಪಿ. ಪೂಜಾರ್ ಎಂಬವರು "ಲಕ್ಷ್ಮೀಶಕೃತಜೈಮಿನಿ ಭಾರತ" ವನ್ನು ಕುರಿತು ವಿಮರ್ಶರೂಪವಾದ ಒಂದು ಪ್ರಬಂಧವನ್ನು ಓದಿದರು. ಇದಾದಮೇಲೆ ಮ॥ ತೇಕಮಲ್ಲಿ ರಾಜಗೋಪಾಲರಾಯರು ಭಾಷಾಶಾಸ್ತ್ರದ ವಿಚಾರ ವಾಗಿ ಇಂಗ್ಲಿಷಿನಲ್ಲಿ ಕೆಲವು ಮಾತುಗಳನ್ನು ಹೇಳಿದರು. ಅನಂತರ ಮುಂದೆ ಹೇಳುವ ವಿಷಯಗಳು ಸಮ್ಮೇಳನದಲ್ಲಿ ಚರ್ಚೆಯಾಗಿ ತೀರ್ಮಾನಿಸಲ್ಪಟ್ಟವು:—

(೪) ಮುಂಬಯಿ ಮತ್ತು ಮದರಾಸು ಇಲಾಖೆಗಳಲ್ಲಿಯ ಕನ್ನಡ ಶಾಲೆಗಳಲ್ಲಿ ಉಪಯೋಗಿಸತಕ್ಕ ಕ್ರಮಿಕಪುಸ್ತಕಗಳೆಲ್ಲ ಏಕರೂಪವಾಗಿರುವಂತೆ ಏರ್ಪಾಡು ಮಾಡಲು ಆಯಾ ಸರ್ಕಾರಗಳಿಗೆ ಸೂಚಿಸುವುದು. (೫) ಮದರಾಸು ಇಲಾಖೆ ಯಲ್ಲಿಯೂ ಮೈಸೂರು ಸಂಸ್ಥಾನದಲ್ಲಿಯೂ ಇರುವಂತೆ ಮುಂಬಯಿ ಇಲಾಖೆ ಯಲ್ಲಿಯೂ ಕನ್ನಡ ಪಂಡಿತಪರೀಕ್ಷೆಗಳಿಗೆ ಏರ್ಪಾಡು ಮಾಡಬೇಕೆಂದು ಅಲ್ಲಿಯ ಸರ್ಕಾರಕ್ಕೆ ಸೂಚಿಸುವುದು. (೬) ಕರ್ಣಾಟಕದ ಬೇರೆಬೇರೆ ಭಾಗಗಳಲ್ಲಿರುವ ಭಾಷಾಕೋವಿದರಿಂದ ಉತ್ತಮವಾದ ಗ್ರಂಥಗಳನ್ನು ಬರೆಯಿಸಿ ಪರಿಶೋಧಿಸಿ ಪ್ರಕಟ ಗೊಳಿಸುವುದಕ್ಕಾಗಿ ಬೆಂಗಳೂರಲ್ಲಿ "ಕರ್ಣಾಟಕಗ್ರಂಥಪ್ರಚಾರಿಣೀಸಮಿತಿ" ಯೆಂಬ ಸಂಘವೊಂದನ್ನು ಏರ್ಪಡಿಸುವುದು. ಆ ಸಮಿತಿಯಲ್ಲಿ ಮುಂದೆ ಹೇಳುವ ವಿದ್ವಾಂಸರು ಮೆಂಬರುಗಳಾಗಿರಬೇಕು.

(ಮದರಾಸಿಗೆ)—ಮ॥ ಆರ್. ತಾತಾಚಾರ್ಯರು, ಮ॥ ಬಿ. ರಾಮರಾಯರು (ಬೊಂಬಾಯಿಗೆ)—ಮ॥ ಆರ್. ಎ. ಜಹಗೀರ್‌ದಾರ್, ಮ॥ ಕೆರೂರ ವಾಸುದೇವಾ ಚಾರ್ಯರು, ಮ॥ ಪಿ. ಎಸ್. ಮುಗದಾಳರು [ಕಾರ್ಯದರ್ಶಿ.] (ಕೊಡಗಿಗೆ)—ಮ॥ ಕೃಷ್ಣರಾಯರು. (ಮೈಸೂರಿಗೆ)—ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದೂರ್ ಶ್ರೀಮಾನ್ ರಾ. ನರಸಿಂಹಾಚಾರ್ಯರು [ಅಧ್ಯಕ್ಷರು], ರಾಜಕಾರ್ಯ ಪ್ರಸಕ್ತರಾವ್ ಬಹದೂರ್ ಎಂ. ಶಾಮರಾಯರು, ಮ॥ ಬಿ. ವೆಂಕಟನಾರಣಪ್ಪನವರು, ಮ॥ ಆರ್. ರಘುನಾಥರಾಯರು, ಮ॥ ಎಚ್. ಚೆನ್ನಕೇಶವಯ್ಯಂಗಾರ್ಯರು [ಕಾರ್ಯದರ್ಶಿ].

(೭) ಹೆಣ್ಣುಮಕ್ಕಳ ಶಾಲೆಯಲ್ಲಿ ಉಪಯೋಗಿಸುವ ಕ್ರಮಿಕಪುಸ್ತಕಗಳನ್ನೂ ಇತರ ವಾಚಕಪುಸ್ತಕಗಳನ್ನೂ ಸ್ತ್ರೀವರ್ಗಕ್ಕೆ ಉಚಿತವಾಗಿರುವಂತೆ ಸ್ವತಂತ್ರವಾಗಿ ಬರೆಯಿಸಿ ಎಲ್ಲಾ ಕಡೆಯಲ್ಲಿಯೂ ಉಪಯೋಗಿಸುವಂತೆ ಏರ್ಪಾಡು ಮಾಡಲು ಮುಂಬಯಿ, ಮದರಾಸು ಮತ್ತು ಮೈಸೂರು ಸರ್ಕಾರಗಳಿಗೆ ಸೂಚಿಸುವುದು. (೮) ಕನ್ನಡ ನಾಡಿನ ಎಲ್ಲಾ ಭಾಗಗಳಲ್ಲಿಯೂ ಬರೆವಣಿಗೆಯು ಒಂದೇ ಕ್ರಮ ದಲ್ಲಿರುವಂತೆ ಮಾನೆಯ ಪುಸ್ತಕ (ಕಾಪಿಪುಸ್ತಕ) ಗಳನ್ನು ಬರೆಯಿಸುವಂತೆ ಆಯಾ ಸರಕಾರಕ್ಕೆ ಸೂಚಿಸುವುದು. (೯) ಕನ್ನಡದ ಬೇರೆ ಬೇರೆ ಪ್ರಾಂತಗಳಲ್ಲಿ ರೂಪ

* ವಾರ್ಷಿಕ ಸಭೆಯಲ್ಲಿ ನಡೆದ ವಿಷಯಗಳನ್ನು ಮುಂದಿನ ಪುಟಗಳಲ್ಲಿ ನೋಡಬೇಕು.

ಭೇದವನ್ನು ಹೊಂದಿದ ಶಬ್ದಗಳನ್ನು ಸಂಸ್ಕರಿಸಿ ಅವುಗಳಿಗೆ ಶಿಷ್ಟಾರ್ಹಯಾದ ಒಂದೇ ರೂಪವಿರುವಂತೆಯೂ ಅವುಗಳ ಅರ್ಥವು ಶಾಸ್ತ್ರವತ್ತಾಗಿ ಇರುವಂತೆಯೂ ನಿಶ್ಚಯಿಸಿ ದೊಡ್ಡದೊಂದು ಕೋಶವನ್ನು ಸಿದ್ಧಪಡಿಸುವುದು. (೧೦) ಮರಾಟಿ, ಗುಜರಾತಿ, ಬಂಗಾಳಿ, ತೆಲುಗು ಮೊದಲಾದ ಭಾಷೆಯವರ ಸಮ್ಮೇಳನದವರಿಗೂ, ಕರ್ಣಾಟಕ ಸಾಹಿತ್ಯಸಮ್ಮೇಳನದವರಿಗೂ, ಸಾಮಾನ್ಯವಾಗಿರುವ ವಿಷಯಗಳಲ್ಲಿ ಪರಸ್ಪರ ಸಹಾಯವಾಗುವಂತೆ ಏರ್ಪಾಡು ಮಾಡುವುದು.

ಅಧ್ಯಕ್ಷರ ಉಪಸಂಹಾರಭಾಷಣ.

ಕಡೆಯಲ್ಲಿ ಅಧ್ಯಕ್ಷರು ಸಭಾಸಮಾಪ್ತಿಮಾಡುವ ಕಾಲಕ್ಕೆ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅದರ ಸಾರಾಂಶವೇನೆಂದರೆ:—

ಮಹಾಶಯರೇ, ತಾವುಗಳು ನನ್ನನ್ನು ಬಹಳ ಆದರದೊಡನೆ ಗೌರವಿಸಿದುದಕ್ಕಾಗಿ ನನ್ನ ಕೃತಜ್ಞತೆಯನ್ನು ಮಾತುಗಳಿಂದ ತಿಳಿಸಲು ಅಶಕ್ತನಾಗಿದ್ದೇನೆ. ತಮ್ಮಿಂದ ಆಮಂತ್ರಣವು ಬಂದಾಗ ನನಗೆ ಗೃಹಕೃತ್ಯದ ತೊಂದರೆ ಒಂದುಕಡೆ, ಮೈಯಲ್ಲಿ ಅಸ್ವಸ್ಥತೆ ಒಂದುಕಡೆ—ಹೀಗೆ ಅನಿವಾರ್ಯಗಳಿದ್ದರೂ ಕನ್ನಡ ನುಡಿಯ ಏಳಿಗೆಗಾಗಿ ತಮ್ಮೊಡನೆ ಸೇರಿ ಸ್ವಲ್ಪಮಟ್ಟಿಗಾದರೂ ಸೇವೆ ಮಾಡಬೇಕಾದುದು ಕರ್ತವ್ಯವೆಂದು ತಮ್ಮ ಆಮಂತ್ರಣವನ್ನು ಅಂಗೀಕರಿಸಿ ಇಲ್ಲಿಗೆ ಬಂದೆನು. ಆದರೆ ನನ್ನ ಮಾರ್ಗವದಿಂದ ಇಲ್ಲಿಗೆ ಬರುವಾಗಲೇ ಕಿವಿಯಲ್ಲಿ ಒಂದು ಹುಣ್ಣು ಎದ್ದು ಬಾಧೆಯುಂಟಾದುದಲ್ಲದೆ ಸ್ವಲ್ಪ ಕಿವುಡೂ ಉಂಟಾಗಿದ್ದಿತು. "ಕಿವುಡರು ಎರಡುಸಲ ನಗುವರು"—ಎಂಬ ನಾಣ್ಣುಡಿಯನ್ನು ತಾವು ಕೇಳಿರಬಹುದು. ಎಲ್ಲರೂ ನಗುವುದನ್ನು ನೋಡಿ ತಾವೂ ನಗದೆ ಇದ್ದರೆ ಜನರು ಏನು ತಿಳಿದುಕೊಳ್ಳುವರೋ ಎಂದು ವಿಷಯಜ್ಞಾನವಿಲ್ಲದೆ ನಗುವುದು ಒಂದನೆಯ ನಗೆ. ವಿಷಯವು ಇಂಥದೆಂದು ಇತರರಿಂದ ತಿಳಿದಮೇಲೆ ನಗುವುದು ಎರಡನೆಯ ನಗೆ. ಇಂತಹ ನ್ಯೂನತೆಯಿಂದ, ನನಗೆ ತಾವು ವಹಿಸಿದ ಕಾರ್ಯದಲ್ಲಿ ಏನು ಲೋಪವುಂಟಾಗುವುದೋ ಎಂದು ಭಯಪಡುತ್ತಿದ್ದೆನು. ಆದರೆ ಭಗವದನುಗ್ರಹದಿಂದಲೂ, ತಮ್ಮಗಳ ಸಹಾಯಬಲದಿಂದಲೂ ಕಾರ್ಯವು ಸುಲಲಿತವಾಗಿ ನೆರವೇರಿತು. ತಮ್ಮಗಳ ಸೌಜನ್ಯ, ಸೌಶೀಲ್ಯ, ಸೌಹಾರ್ದ ಇವುಗಳು ನನ್ನ ಮನಸ್ಸನ್ನು ಸೆರೆಹಿಡಿದಿವೆ. ಇಂತಹ ಗುಣಶಾಲಿಗಳ ಮನಸ್ಸಿಗೆ ನನ್ನ ಗೃಹಕೃತ್ಯದ ತೊಂದರೆಯನ್ನು ನೆಪಮಾಡಿಕೊಂಡು ಬರುವುದಕ್ಕಾಗುವುದಿಲ್ಲ ಎಂದು ತಿಳಿಸಿ ಆಯಾಸವನ್ನುಂಟುಮಾಡಿದುದಕ್ಕಾಗಿ ವ್ಯಥೆಪಡುತ್ತೇನೆ. ತಮ್ಮಗಳ ಸೌಹಾರ್ದ

ವನ್ನೂ ಆದರಾತಿಶಯುವನ್ನೂ ನೋಡಿದರೆ ಧಾರವಾಡವನ್ನು ಬಿಟ್ಟು ಹೋಗುವುದಕ್ಕೇ ಮನಸ್ಸು ಬರುವಹಾಗಿಲ್ಲ. ಈ ಸಂದರ್ಭದಲ್ಲಿ—ಶ್ರೀರಾಮನನ್ನು ದಂಡಕಾವನದಿಂದ ಅಯೋಧ್ಯೆಗೆ ಕರೆದು ತರಬೇಕೆಂದು ಹೊರಟ ಭರತನ ಸೈನ್ಯದವರು ಮಾರ್ಗದಲ್ಲಿದ್ದ ಭರದ್ವಾಜಾಶ್ರಮದಲ್ಲಿ ದೇವತಾಯೋಗ್ಯವಾದ ಆತಿಥ್ಯವನ್ನು ಹೊಂದಿ,

"ನೈವಾಯೋಧ್ಯಾಂ ಗಮಿಷ್ಯಾಮಃ ನಗಮಿಷ್ಯಾಮ ದಂಡಕಾನ್ ।"

ನಾವು ಅಯೋಧ್ಯೆಗೂ ಹೋಗುವುದಿಲ್ಲ, ದಂಡಕಾರಣ್ಯಕ್ಕೂ ಹೋಗುವುದಿಲ್ಲ. ಇಲ್ಲಿಯೇ ನಿಲ್ಲುತ್ತೇವೆ—ಎಂದು ಹೇಳಿದ ಮಾತು ನೆನಪಿಗೆ ಬರುತ್ತದೆ.

ಆರಂಭಭಾಷಣದಲ್ಲಿ ನಾನು ತಮಗೆ ತಿಳಿಸಿದ ರಾಗಿ ಬತ್ತಗಳ ಸಂವಾದಕ್ಕೆ ಕೆಲವರು ಅರ್ಥಾಂತರವನ್ನು ಕಲ್ಪಿಸಿಕೊಂಡಂತೆ ತೋರುತ್ತದೆ. ನನ್ನ ತಾತ್ಪರ್ಯವೇನೆಂದರೆ—ಕನ್ನಡ ನಾಡಿನ ಬೇರೆಬೇರೆ ಭಾಗಗಳಲ್ಲಿರುವವರು ಒಬ್ಬರನ್ನೊಬ್ಬರು ಹೇಳನಮಾಡದೆ ಐಕಮತ್ಯದಿಂದ ಭಾಷಾಸೇವೆಯನ್ನು ಮಾಡಬೇಕೆಂಬುದೇ. ಅಲ್ಲದೆ ಈ ವಿಷಯದಲ್ಲಿ ಆತ್ಮಪ್ರಶಂಸೆಯೇ ಆಗಲಿ, ಪರಸ್ಪರ ಪ್ರಶಂಸೆಯೇ ಆಗಲಿ ಕಾರ್ಯಕಾರಿಯಾಗಲಾರದು. ಈ ವಿಚಾರದಲ್ಲಿ ಹಿಂದಣ ಒಂದು ಶ್ಲೋಕವು ಜ್ಞಾಪಕಕ್ಕೆ ಬರುತ್ತದೆ: ಏನೆಂದರೆ,

ಉಷ್ಟ್ರಕಾಣಾಂ ವಿವಾಹೇಷು ಗಾರ್ದಭಾಃ ಖಲು ಗಾಯಕಾಃ ।
ಪರಸ್ಪರಂ ಪ್ರಶಂಸಂತಿ ಅಹೋ ರೂಪಮಹೋ ಧ್ವನಿಃ ॥

ಒಂಟೆಗಳ ಮದುವೆಯಲ್ಲಿ ಕತ್ತೆಗಳು ಗಾಯಕರಾಗಿ ಬಂದು ಒಂಟೆಗಳ ಸೌಂದರ್ಯವನ್ನು ಕೊಂಡಾಡಿದುವು; ಒಂಟೆಗಳೂ ಕತ್ತೆಗಳ ಮಧುರಧ್ವನಿಯನ್ನು ಕೇಳಿ ತಲೆದೂಗಿದುವು. ಈ ಶ್ಲೋಕದಲ್ಲಿ ಉಕ್ತವಾದ ಹೀನೋಪಮೆಗೆ ದೃಷ್ಟಿಯನ್ನು ಕೊಡದೆ ಅದರ ಭಾವಕ್ಕೆಮಾತ್ರ ಗಮನವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸಮ್ಮೇಳನದಲ್ಲಿ ತೀರ್ಮಾನಿಸಿದ ನಿರ್ಣಯಗಳೆಲ್ಲವೂ ಆವಶ್ಯಕವಾದುವು. ಅವುಗಳಲ್ಲಿ ಬೃಹತ್ಕೋಶದ ವಿಷಯವಾಗಿ ಮಾಡಿದ ನಿರ್ಣಯವು ಅತ್ಯಾವಶ್ಯಕವೆಂದು ಹೇಳಬಹುದು. ಅನ್ಯದೇಶೀಯರಾದ ಮೆ॥ ಕಿಟ್ಟೆಲ್ ಮುಂತಾದವರು ಈ ವಿಷಯದಲ್ಲಿ ಪಟ್ಟಿರುವ ಶ್ರಮವು ಸ್ತೋತ್ರಾರ್ಹವಾಗಿದೆ. ಅವರಿಗಿಂತ ಹೆಚ್ಚಿನ ಆನುಕೂಲ್ಯವುಳ್ಳ ನಾವು ಈ ಕೆಲಸವನ್ನು ಕೈಕೊಂಡು ನ್ಯೂನಾತಿರಿಕ್ತಗಳನ್ನು ಸರಿಪಡಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಸರಿಯಾದ ಬೃಹತ್ಕೋಶವಿಲ್ಲದುದರಿಂದ ಉಂಟಾಗಿರುವ ಅನರ್ಥಕ್ಕೆ ಒಂದು ಉದಾಹರಣವನ್ನು ಕೊಡುತ್ತೇನೆ:—

ಕ್ರಿಸ್ತಶಕ ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಹುಟ್ಟಿದ ಒಂದು ಶಾಸನದಲ್ಲಿ "ಬಿಸುಗೆಯೆ ಕಳನಾಗೆ ಬೂತುಗಂ ರಾಜಾದಿತ್ಯನಂ ಕೊಂದಂ" ಎಂಬ ವಾಕ್ಯವಿದೆ. ಇದಕ್ಕೆ ಆಂಗ್ಲೇಯ ಪಂಡಿತರು "ರೇಗಿಸಲು ಕಳ್ಳನಾಗಿ ಬೂತುಗನು ರಾಜಾ

ದಿತ್ಯನನ್ನು ಕೊಂದನು" ಎಂದು ಅಪಾರ್ಥವನ್ನು ಮಾಡಿ ಗಂಗರಾಜನಾದ ಬೂತುಗನ ಮೇಲೆ ಇಲ್ಲದ ಕಳಂಕವನ್ನು ಆರೋಪಿಸಿದರು. ಈ ಅಪಾರ್ಥವೇ ಇಂಪೀರಿಯಲ್ ಗೆಜೆಟಿಯರಲ್ಲಿಯೂ ಪ್ರಕಟವಾಗಿದೆ. ನಮ್ಮ ಕನ್ನಡನಾಡಿನ ಪೂರ್ವರಾಜನಾದ ಬೂತುಗನಮೇಲೆ ಅಜ್ಞಾನದಿಂದ ಆರೋಪಿತವಾದ ಈ ಅಪವಾದವನ್ನು ನೋಡಿ ಮನಮರುಗಿ ನಾನು ಶೋಧನೆಮಾಡಿ ಈ ವಾಕ್ಯದ ನಿಜವಾದ ಅರ್ಥವನ್ನು ನಿರ್ಧರಿಸಿ ಈ ವಿಚಾರವನ್ನು ರಾಯಲ್ ಏಷಿಯಾಟಿಕ್ ಸೊಸೈಟಿ ಜರ್ನಲಿನಲ್ಲಿ ಪ್ರಕಟಮಾಡಿದ ಬಳಿಕ ಯೂರೋಪಿನಲ್ಲಿ ಅನೇಕ ಪಂಡಿತರು ಬೂತುಗನಿಗೆ ಅನ್ಯಾಯವಾಗಿ ಉಂಟಾಗಿದ್ದ ಅಪಯಶಸ್ಸನ್ನು ಹೋಗಲಾಡಿಸಿದುದಕ್ಕಾಗಿ ನನಗೆ ಶ್ಲಾಘಾಪತ್ರಗಳನ್ನು ಬರೆದರು. 'ಬಿಸುಗೆ' ಯೆಂದರೆ ಆನೆಯಮೇಲಣ ಅಂಬಾರಿ. 'ಕಳ' ಎಂದರೆ ಯುದ್ಧರಂಗ. ಅಂಬಾರಿಯೇ ಯುದ್ಧರಂಗವಾಗಲು ಬೂತುಗನು ರಾಜಾದಿತ್ಯನನ್ನು ಕೊಂದನು—ಎಂಬುದು ಆ ವಾಕ್ಯದ ನಿಜವಾದ ಅರ್ಥ. ಆದುದರಿಂದ ಶುದ್ಧವಾದ ಬೃಹಕ್ಕೋಶವನ್ನು ಏರ್ಪಡಿಸಿದರೆ ಇಂತಹ ಅನರ್ಥಗಳಿಗೆ ಅವಕಾಶವಿಲ್ಲದಂತಾಗುವುದು.

ಸ್ವಾಗತಮಂಡಲಿಯವರು ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳ ಮಾನಸಿಕಸುಖ ಮತ್ತು ಶಾರೀರಿಕಸುಖ ಇವುಗಳಿಗಾಗಿ ಮಾಡಿದ ಏರ್ಪಾಡುಗಳು ಬಹಳ ಶ್ಲಾಘನೀಯವಾಗಿವೆ. ನಾಟಕ, ಸಂಗೀತ, ಹರಿಕಥೆ, ಪಾಂಡಿತ್ಯಸೂಚಕವಾದ ನಿಬಂಧಗಳು, ನಾನಾಪ್ರಾಂತಗಳ ಕನ್ನಡಿಗರ ಪರಸ್ಪರದರ್ಶನಸಲ್ಲಾಪಾದಿಗಳಿಗೆ ಅವಕಾಶ— ಇವೆಲ್ಲವೂ ಮನಸ್ಸಿಗೆ ಹೇರಳವಾಗಿ ಆನಂದವನ್ನುಂಟುಮಾಡಿವೆ. ಇನ್ನು ಶರೀರಸೌಖ್ಯಕ್ಕೆ ಮಾಡಿದ ಅನುಕೂಲ್ಯವಾದರೋ ವರ್ಣನಾತೀತವಾಗಿದೆ. ಹಿಂದೆ ಒಬ್ಬಪ್ರಸಿದ್ಧಕವಿ ಹೇಳಿದಂತೆ—

ಆಸನಸ್ಥಾ ದ್ವಿಜಾಃ ಸರ್ವೇ ದೃಷ್ಟ್ವಾ ಭೋಜನಭಾಜನಂ ।
ಇಂದ್ರಬಾಣಾವಹೀಂದ್ರಂ ಚ ಗಾಯಂತ್ರೀಂ ಚ ಸ್ಮರಂತಿ ಹಿ ॥

ಇಲ್ಲಿ ಮಾಡಿದ್ದ ಪದಾರ್ಥಗಳನ್ನು ನೋಡಲು ಎರಡುಕಣ್ಣುಗಳು ಸಾಲವು, ಇಂದ್ರನಿಗಿರುವಂತೆ ಸಾವಿರಕಣ್ಣುಗಳು ಬೇಕು; ಆ ಪದಾರ್ಥಗಳನ್ನು ಸ್ವೀಕರಿಸುವುದಕ್ಕೆ ಎರಡು ಕೈಗಳು ಸಾಲವು, ಬಾಣಾಸುರನಿಗಿರುವಂತೆ ಎರಡುಸಾವಿರ ಕೈಗಳಿರಬೇಕು; ಆ ಪದಾರ್ಥಗಳನ್ನು ರುಚಿನೋಡುವುದಕ್ಕೆ ಒಂದುನಾಲಗೆ ಸಾಲದು, ಆದಿಶೇಷನಿಗಿರುವಂತೆ ಎರಡುಸಾವಿರ ನಾಲಗೆಗಳು ಬೇಕು; ಮತ್ತು ಅವುಗಳನ್ನು ಭರಿಸುವುದಕ್ಕೆ ಒಂದು ಉದರವು ಸಾಲದು, ಗಾಯತ್ರೀದೇವಿಗಿರುವಂತೆ ಆರು ಉದರಗಳಿರಬೇಕು. ಇವೆಲ್ಲಕ್ಕಿಂತಲೂ ಹೆಚ್ಚಾದುದು "ಭೋಜನಸ್ಯಾದರೋ ರಸಃ" ಎಂಬಂತೆ ತಮ್ಮಗಳ ಆದರಾತಿಶಯವು. ಕನ್ನಡಕವಿಯಾದ ಮಂಗರಸನು ನಮ್ಮ ಸಮ್ಮೇಳನ ಮಹೋತ್ಸವಕ್ಕಾಗಿಯೇ ಈಗ ೪೦೦ ವರ್ಷಗಳ ಕೆಳಗೆ ಈ ಪದ್ಯಗಳನ್ನು ಮಾಡಿಟ್ಟಂತೆ ತೋರುತ್ತದೆ.—

ದೊನ್ನೆಯಂ ಹರಹಿ ಬಾಳೆಲೆಯು ಹಾಳೆಯು ಹಾಕಿ।
ಬಿನ್ನಣದೆ ಮಾಡಿದಾ ಚಾಕವೆಡೆಗಳ ಮುಂದೆ।
ಜನ್ನಿವಾರವ ಮೇಲಕೆತ್ತಿ ಕಿಱುಸುತ್ತುಮಂ ತೆಗೆದು ಸಡಿಲಿಸಿ ಧೋತ್ರಮಂ॥

ಚೆನ್ನಾಗಿಯಾಪೋಶನಮನೆತ್ತಿ ಕುಳ್ಳಿರ್ದ್ದರ್।
ಭಿನ್ನರುಚಿಮಾಡಿ ಹರಿಸವೆ ಗಡ್ಡಮೀಸೆಗಳು।
ಮಂ ನೀವಿಕೊಳ್ಳುತ್ತೆ ಭೋಜನವನಿಂತು ಮಾಡುತ್ತಿರ್ದ್ದರಾ ಪಾರ್ವರು॥

ಓಗರವ ತಾ ತೊಗೆಯನಿಕ್ಕು ಹಸನಾಯ್ತು ಮೇ।
ಲೋಗರವ ಬಡಿಸು ದೊನ್ನೆಗಳು ಹಿಡಿವಂತೆ ಯುಂ।
ಟಾಗಿ ಹೆರೆಮಪ್ಪವೆಱೆಯಾ ಪಳಿದ್ಯಮನಟ್ಟು ಕಲಸುವೋಗರವ ತೋಱಾ॥

ಬೇಗದಿಂದೆಡೆಮಾಡಿದಿಡ್ಡಲಿಗೆದೋಸೆಗಳ।
ಮೇಗೆ ಸಕ್ಕರೆ ಬಟ್ಟವಾಲ ಹೊಯ್ಯೆನುತಮಾ।
ರೋಗಣೆಯನಾಪೊಟ್ಟೆಯೊಡೆವ ಮುಯ್ರಾದೆಯೊಳಗುಂಡು ತೇಗುತ್ತಿರ್ದ್ದರು॥

ಪಾಯಸದ ಪರಿಗಳಂ ನೋಡಿ ಪಂಡಿತರೆ ಸವಿ।
ಯಾಯಿತೇ ಆಯ್ತುಪಾಧ್ಯಾಯರೇ ಕರಜಿಗೆಯು।
ಕಾಯ ದೋಸೆಗಳ ಹಸನಂ ಪುರೋಹಿತರೆ ಚೆನ್ನಾಗಿ ಸವಿಸವಿದು ನೋಡಿ॥

ಈ ಯೆಣ್ಣೆಯೂರಿಗೆಯು ಮೃದುತರಕೆ ಸರಿಯುಂಟೆ।
ಜೋಯಿಸರೆ ಕೇಳಿ ಸಕ್ಕರೆಬುರುಡೆಗಳ್ ನಮ್ಮ।
ಬಾಯ ಸೈಬಜನಂ ಬಿಡಿಸುತಿವೆ ದೀಕ್ಷಿತರೆ ಎಂದು ಕೊಂಡಾಡುತಿರ್ದ್ದರಾಗ॥

["ಸಮ್ಯಕ್ತ್ವ ಕೌಮುದಿ" — ಭೋಜನವರ್ಣನೆ.]

ಸ್ವಯಂಸೇವಕರ ಆದರಪುರಸ್ಸರವಾದ ಉಪಚಾರವು ಚಿರಸ್ಮರಣೀಯವಾಗಿದೆ.

ಈ ಮೇರೆಗೆ ಅಧ್ಯಕ್ಷರು ಭೋಜನಪದಾರ್ಥಗಳ ವರ್ಣನೆಯನ್ನು ಬಹು ಸ್ವಾರಸ್ಯವಾಗಿ ಮಾಡಿದನಂತರ ಸಭಾಸದರ ಕರಾಸ್ಫಾಲನವು ಮಂದಿರದಲ್ಲೆಲ್ಲ ಮೊಳಗುತ್ತಿರಲು ಗಂಭೀರವಾದ ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ಅಧ್ಯಕ್ಷರ ಗುಣಾತಿಶಯಗಳನ್ನು ಕೊಂಡಾಡಿ ಅನೇಕಜನ ಪ್ರತಿನಿಧಿಗಳು ಅವರನ್ನು ವಂದಿಸಿದ ಮೇಲೆ ಅವರಿಗೆ ಪುಷ್ಪಹಾರವನ್ನೂ ತುರಾಯಿಯನ್ನೂ ಸಮರ್ಪಿಸಿದರು. ಕಡೆಯಲ್ಲಿ ಕನ್ನಡಮಾತೆಗೂ ಕರ್ಣಾಟಕ ಸಿಂಹಾಸನಾಧಿಪತಿಗಳಾದ ಮಹೀಶೂರ ಶ್ರೀಮನ್ಮಹಾರಾಜರವರಿಗೂ ಜಯವಾಗಲೆಂಬ ಶಬ್ದವು ಸಭಾಮಂದಿರದಲ್ಲೆಲ್ಲಾ ತುಂಬಿ ತುಳುಕುತ್ತಿದ್ದಿತು.

ಇಲ್ಲಿಗೆ ಕರ್ಣಾಟಕ ಸಾಹಿತ್ಯ ಸಮ್ಮೇಳನದ ೪ ನೆಯ ಅಧಿವೇಶನವು ಮುಗಿಯಿತು.

ಕರ್ಣಾಟಕ ಸಾಹಿತ್ಯಪರಿಷತ್ತಿನ ತೃತೀಯ ವಾರ್ಷಿಕ ಸಭೆಯಲ್ಲಿ ನಡೆದ ಕಾರ್ಯಗಳ ವಿವರ:—

ಕರ್ಣಾಟಕ ಸಾಹಿತ್ಯಪರಿಷತ್ತಿನ ತೃತೀಯ ವಾರ್ಷಿಕ ಸಭೆಯು ಧಾರವಾಡ ದಲ್ಲಿ ಟ್ರೈನಿಂಗು ಕಾಲೇಜಿನಲ್ಲಿ ೧೯೧೮-ನೆಯ ಇಸವಿ ಮೇ ತಿಂಗಳ ೧೩-ನೆಯ ತಾರೀಖು ಪ್ರಾತಃಕಾಲ ಒಂಭತ್ತು ಘಂಟೆಗೆ ಪ್ರಾರಂಭವಾಗಿ ಹನ್ನೊಂದೂವುಕ್ಕಾಲು ಘಂಟೆಯವರೆಗೂ ನಡೆಯಿತು. ಈ ಕೆಳಗೆ ಕಾಣುವ ಸದಸ್ಯರುಗಳು ದಯೆಮಾಡಿ ಸಿದ್ದರು.

೧. ಮೆ॥ ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಎಮ್. ಶ್ಯಾಮ ರಾಯರು,ಎಮ್. ಎ.

೨. ಮೆ ॥ಪ್ರಾಕ್ತನ ವಿಮರ್ಶವಿಚಕ್ಷಣ ರಾವ್ ಬಹದ್ದೂರ್, ಆರ್. ನರ ಸಿಂಹಾಚಾರ್ಯರು, ಎಮ್. ಎ., ಎಂ. ಆರ್. ಏ. ಎಸ್.

೩. ಮ॥ ರಾ॥ ಆರ್. ರಘುನಾಥರಾಯರು, ಬಿ. ಎ., ಬೆಂಗಳೂರು.
೪. ,, ಬಿ. ವೆಂಕಟನಾರಣಪ್ಪನವರು, ಎಮ್. ಎ., ಬೆಂಗಳೂರು.
೫. ,, ವೈ. ಕೆ. ರಾಮಚಂದ್ರರಾಯರು, ಬಿ. ಎ., ಎಲ್. ಸಿ. ಇ., ಬೆಂಗಳೂರು.
೬. ,, ಟಿ. ಅಪ್ಪೂರಾಯರು, ಬಿ. ಎ., ಬಿ. ಎಲ್., ಬೆಂಗಳೂರು.
೭. ,, ಎಚ್. ಚೆನ್ನಕೇಶವಯ್ಯಂಗಾರ್ಯರು, ಬೆಂಗಳೂರು.
೮. ,, ಹನುಮರ್ಾರವರು, ಮೈಸೂರು.
೯. ಪಂಡಿತ ಜಯರಾಮವೆಂಕಟಾಚಾರ್ಯರು.
೧೦. ಆಸ್ಥಾನ ಮಹಾವಿದ್ವಾನ್ ಸರಳಕವಿಸೂರಿ ಕೆ. ರಾಜಗೋಪಾಲ ಚಕ್ರ ವರ್ತಿಗಳು.
೧೧. ಪಂಡಿತ ನಂಜುಂಡಶಾಸ್ತ್ರಿಗಳು.
೧೨. ಮ॥ ರಾ॥ ಎಮ್. ಕೃಷ್ಣಪ್ಪನವರು.
೧೩. ,, ಎಚ್. ಹನುಮಂತರಾಯರು, ಚೆನ್ನಪಟ್ಟಣ.
೧೪. ,, ವಿ. ಎಸ್. ಸಂಜೀವರಾಯರು.
೧೫. ಶ್ರೀಮತಿ ತಿರುಮಲಮ್ಮನವರು, ನಂಜನಗೂಡು.
೧೬. ಮೆ॥ ರಾವ್ ಬಹದ್ದೂರ್ ವಿ. ಬಿ. ಜೋಷಿಯವರು, ಬಿ. ಎ., ಧಾರವಾಡ
೧೭. ಮ॥ ರಾ॥ ಆರ್. ಎಚ್. ದೇಶಪಾಂಡೆಯವರು, ಎಮ್. ಎ. ,,
೧೮. ,, ಎ. ಆರ್. ದೇಶಪಾಂಡೆಯವರು, ಬಿ. ಎ., ,,
೧೯. ,, ವಿ. ಬಿ. ಆಲೂರವರು, ಬಿ. ಎ., ಎಲ್ ಎಲ್. ಬಿ. ,,
೨೦. ,, ಕೆ. ಎಚ್. ಮದವೇಡಕರವರು, ಬಿ. ಎ., ಎಲ್ ಎಲ್. ಬಿ., ಧಾರವಾಡ.

೨೧. ಮ॥ರಾ॥ ರಾಯಬಹದ್ದೂರ್ ಕೆಂಭಾವಿ ರಾಘವೇಂದ್ರರಾಯರು, ಧಾರವಾಡ.

೨೨. ,, ಆರ್. ಎ. ಜಹಗೀರದಾರರು, ಎಮ್. ಎ., ಎಲ್ ಎಲ್. ಬಿ., ಮುಂಬಯಿ.

೨೩. ,, ಆರ್. ಬಿ. ಪೋಟದಾರರು, ಬೆಳಗಾಂ.

೨೪. ,, ವಿ. ಎನ್. ಮುಗದಾಳರವರು, ಬಿ. ಎ., ಧಾರವಾಡ.

೨೫. ,, ಆರ್. ಎಸ್. ಮಂಗಸೂಲಿಯವರು, ಸಿರಹಟ್ಟಿ.

೨೬. ,, ಟಿ. ಎಸ್. ಚಿಕ್ಕೋಡಿಯವರು, ರಾಬಕವಿ.

೨೭. ,, ಕೆರೂರು ವಾಸುದೇವಾಚಾರ್ಯರು.

೨೮. ,, ಆರ್. ಎಸ್. ನರಗುಂದಕರವರು, ಧಾರವಾಡ.

೨೯. ,, ಪಿ. ಜಿ. ಹಳಕಟ್ಟಿಯವರು, ಬಿ. ಎ., ಎಲ್ ಎಲ್. ಬಿ.

೩೦. ,, ವಿ. ಬಿ. ಧಾರವಾರಕರವರು, ಧಾರವಾಡ.

೩೧. ,, ಪೆನಗಲ್ ರಾಮರಾಯರವರು, ಎಮ್. ಎ., ಎಲ್ ಎಲ್. ಬಿ., ಮದರಾಸು.

೩೨ ,, ಎನ್. ರಾಜಗೋಪಾಲಕೃಷ್ಣರಾಯರು, ಉಡುಪಿ.

೩೩ ,, ಸಿ. ಎನ್. ವೆಂಕಪ್ಪಯ್ಯನವರು, ಬಿ. ಎ., ಬಿ. ಎಲ್., ಕೊಡಗು.

ಪರಿಷತ್ತಿನ ಉಪಾಧ್ಯಕ್ಷರಾದ ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಮ॥ ರಾ॥ ಎಮ್. ಶ್ಯಾಮರಾವ್. ಎಮ್. ಎ., ಅವರು ಅಗ್ರಾಸನಾಧಿಪತಿಗಳಾಗಿದ್ದರು.

ಈ ಸಭೆಯಲ್ಲಿ ನಿರ್ಣೀತವಾದ ವಿಷಯಗಳಾವುವೆಂದರೆ:—

I. ಪರಿಷತ್ತಿನ ಕಾರ್ಯನಿರ್ವಾಹಕಮಂಡಲಿಯೂ ಪಿಂಗಳಸಂವತ್ಸರದ ವಾರ್ಷಿಕವರದಿಯೂ ಆಯವ್ಯಯಶೋಧಕರು ಒಪ್ಪಿಸಿದ ಪಿಂಗಳಸಂವತ್ಸರದ ಆಯವ್ಯಯದ ಮೊತ್ತದ ಪಟ್ಟಿಯೂ ಮಂಜೂರುಮಾಡಲ್ಪಟ್ಟುವು.

II. ಪರಿಷತ್ತಿನ ವಾರ್ಷಿಕಸಭೆಯು ನಡೆಯುವಾಗ ಪರಿಷತ್ತಿನ ಗೌರವ ಕಾರ್ಯದರ್ಶಿಗಳಲ್ಲಿ ಒಬ್ಬರ, ಆರುಮಂದಿಗೆ ಮೀರದಂತೆ ಬೇರೆಬೇರೆ ನಾಡುಗಳ ಪಂಡಿತ ಮೆಂಬರುಗಳ, ಪರಿಷತ್ತಿನ ಗುಮಾಸ್ತನೊಬ್ಬನ ಮತ್ತು ಪರಿಷತ್ತಿನ ಜವಾನನೊಬ್ಬನ ಪ್ರಯಾಣದ ಖರ್ಚನ್ನು ಪರಿಷತ್ತೇ ವಹಿಸತಕ್ಕುದೆಂದು ನಿರ್ಣಯಿಸಲ್ಪಟ್ಟಿತು. ಸಭೆಯು ನಡೆಯುವ ಸ್ಥಳದಲ್ಲಿಯೇ ವಾಸಮಾಡುವವರಿಗೆ ಈ ಖರ್ಚು ದೊರೆಯುವುದಿಲ್ಲ.

III. ಕಾಳಯುಕ್ತಸಂವತ್ಸರದ ಆಯವ್ಯಯದ ಅಂದಾಜಿನ ಪಟ್ಟಿಯನ್ನು ಕಾಳಯುಕ್ತಸಂವತ್ಸರದ ಕಾರ್ಯನಿರ್ವಾಹಕ ಮಂಡಲಿಯೇ ನಿರ್ಧರಿಸುವುದು ಉಚಿತ

ವೆಂದು ಸಭಾಧ್ಯಕ್ಷರು ಸೂಚಿಸಲು ಅವರ ಅಭಿಪ್ರಾಯವನ್ನು ಸಭೆಯವರು ಅನುಮೋದಿಸಿ ಅಂಗೀಕರಿಸಿದರು.

IV. ಆಸ್ಥಾನ ಮಹಾವಿದ್ವಾನ್ ಸರಳಕವಿಸೂರಿ ಕೆ. ರಾಜಗೋಪಾಲ ಚಕ್ರವರ್ತಿಗಳವರು ಮುಂದೆ ವಿವರಿಸಿರುವ ಸೂಚನೆಗಳನ್ನು ಕಾಲೋಚಿತವಾದ ಭಾಷಣೆಯೊಡನೆ ಸಭೆಯ ಮುಂದಿಡುವವರಾದರು.

ಯಾವುವೆಂದರೆ :—

(a) IV ನೆಯ ನಿಬಂಧನೆಯಲ್ಲಿ ಆಶ್ರಯದಾತರು ಸಹಾಯಕರು ಎಂಬ ಪದಗಳನ್ನು ಬಿಟ್ಟು ಆಜೀವ ಸದಸ್ಯರೆಂದು ಇರತಕ್ಕದು. ೩ ನೆಯ ಪ್ಯಾರಾದಲ್ಲಿ ೨೫೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಧನಸಹಾಯ ಮಾಡುವವರನ್ನು ಆಜೀವ ಸದಸ್ಯರೆಂದು ಬದಲಾಯಿಸಿ ನೂರುರೂಪಾಯಿಗಳಿಗೆ ಕಡಮೆಯಿಲ್ಲದಂತೆ ಧನ ಸಹಾಯಮಾಡುವವರನ್ನು ಸಹಾಯಕರೆಂದೂ ಐವತ್ತುರೂಪಾಯಿಗಳಿಗೆ ಕಡಮೆಯಿಲ್ಲದೆ ಧನಸಹಾಯ ಮಾಡುವವರನ್ನು ಆಜೀವಸದಸ್ಯರೆಂದೂ ಎಂಬ ಮಾತುಗಳನ್ನು ಬಿಡತಕ್ಕದು.

ಷರಾ.—ಆಜೀವಸದಸ್ಯರೆಂಬ ವರ್ಗದ ಹೆಸರನ್ನು ಪಡೆದಿರುವವರು ಪ್ರಥಮ ವರ್ಗದ ಸದಸ್ಯರುಗಳಿಗಿಂತಲೂ ಉನ್ನತಪದವಿಯನ್ನು ಹೊಂದಿರಬೇಕು. ಆಜೀವ ಸದಸ್ಯರು ಕೊಡುವ ಒಟ್ಟು ಮೊಬಲಗಿನ ವೃದ್ಧ್ಯಂಶವು ಪ್ರಥಮವರ್ಗದ ಸದಸ್ಯರ ವಾರ್ಷಿಕ ಚಂದಾ ಮೊಬಲಗಿಗೆ ಕಡಮೆಯಾಗಿರುವುದು ನ್ಯಾಯವಲ್ಲ.

ಪಂಡಿತರವರ ಮೇಲಿನ ಸೂಚನೆಯನ್ನು ಮ॥ ರಾ॥ ಆರ್. ರಘುನಾಥ ರಾಯರು ಅನುಮೋದಿಸಿದರು. ಕೆಲವು ಕಾಲದವರೆಗೆ ಈ ವಿಷಯದ ಚರ್ಚೆಯು ನಡೆಯಿತು. ಕೊನೆಗೆ ಸಭೆಯವರಿಂದ ಈ ಸೂಚನೆಯು ಅಂಗೀಕೃತವಾಗಲಿಲ್ಲ.

ವರಮಾನವನ್ನು ಹೆಚ್ಚಿಸಬೇಕೆಂಬುದೇ ಮೇಲಿನ ಸೂಚನೆಯ ಮುಖ್ಯಾಂಶವಾಗಿರುವುದರಿಂದ ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಸದಸ್ಯರುಗಳೆಲ್ಲರೂ ಪ್ರಯತ್ನಪಡಬೇಕೆಂದೂ ಪರಿಷತ್ತಿನ ವಾರ್ಷಿಕಸಭೆಗಳಲ್ಲಿ ಹೆಚ್ಚು ಸದಸ್ಯರುಗಳನ್ನು ಸೇರಿಸುವುದಕ್ಕೆ ಆವಶ್ಯಕವಾಗಿರುವ ಸರ್ವಪ್ರಯತ್ನಗಳನ್ನು ಸರ್ವರೂ ಮಾಡಬೇಕೆಂದೂ ನಿರ್ಧರವಾಯಿತು.

(b) ಕನ್ನಡಭಾಷೆಯ ಏಳಿಗೆಯನ್ನು ಕಾಪಾಡುವುದಕ್ಕಾಗಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರುಗಳಲ್ಲಿ ಮೈಸೂರು ಸರ್ಕಾರದ ಪ್ರಜಾಪ್ರತಿನಿಧಿಸಭೆ (Mysore Representative Assembly) ಗೆ ಒಬ್ಬ ಸದಸ್ಯರನ್ನೂ ಮೈಸೂರು ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಶಾಖೆಗೆ (The Education Committee of the Mysore Economic Conference) ಒಬ್ಬರನ್ನೂ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಸಭೆಗೆ (Mysore University Senate) ಒಬ್ಬರನ್ನೂ ಚುನಾಯಿಸಿ ಕಳುಹಿಸು

ವಂತೆ ಅಪ್ಪಣೆಯನ್ನು ಪಡೆಯಲು ಕರ್ಣಾಟಕಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಮೂಲಕ ಮೈಸೂರು ಸರಕಾರಕ್ಕೆ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸತಕ್ಕದು ಎಂಬ ಪಂಡಿತರ ಸೂಚನೆಯನ್ನು ಮ॥ ರಾ॥ ಆರ್. ರಘುನಾಥರಾಯರು ಅನುಮೋದಿಸಿದರು. ಕೊಂಚಕಾಲ ಚರ್ಚೆ ನಡೆದಮೇಲೆ ಮೇಲಿನ ಸೂಚನೆಯು ಸಭೆಯವರೆಲ್ಲರಿಂದಲೂ ಅಂಗೀಕರಿಸಲ್ಪಟ್ಟಿತು.

(c) VIII ನೆಯ ನಿಬಂಧನೆಯಲ್ಲಿ ಉಳಿದ ೩೩ ಮಂದಿ ಕಾರ್ಯನಿರ್ವಾಹಕ ಸದಸ್ಯರುಗಳನ್ನು ವಾರ್ಷಿಕ ಸಭೆಯಲ್ಲಿಯೇ ಪರಿಷತ್ತಿನ ಸದಸ್ಯರು ಬ್ಯಾಲೆಟ್ ಮೂಲಕ ಚುನಾಯಿಸಬೇಕು. "ಮೇಲ್ಕಂಡ ೩೩ ಮಂದಿ ಕಾರ್ಯನಿರ್ವಾಹಕ ಸದಸ್ಯರುಗಳಲ್ಲಿ" ಎನ್ನುವುದಕ್ಕೆ ಬದಲಾಗಿ ೯ ನೆಯ ನಿಬಂಧನೆಯಲ್ಲಿ ಕಾಣಿಸಿರುವಂತೆ "ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳ ಸಂಖ್ಯೆಯನ್ನು ನಿರ್ಧರಿಸಿಕೊಳ್ಳಬೇಕು" ಎಂಬುದನ್ನು ಇಡತಕ್ಕದು.

(d) IX ನೆಯ ನಿಬಂಧನೆಯಲ್ಲಿ:—ಮತ್ತು ಕಾರ್ಯನಿರ್ವಾಹಕ ಮಂಡಲಿಯ ೩೦ ಮಂದಿ ಸದಸ್ಯರುಗಳಲ್ಲಿ "ಮೈಸೂರುಸಂಸ್ಥಾನಕ್ಕೆ ಹನ್ನೆರಡುಮಂದಿ, ಮುಂಬಯಿ ಆಧಿಪತ್ಯಕ್ಕೆ ಎಂಟುಮಂದಿ, ಮದರಾಸಾಧಿಪತ್ಯಕ್ಕೆ ಐದುಮಂದಿ, ಹೈದರಾಬಾದು ಸಂಸ್ಥಾನಕ್ಕೆ ಇಬ್ಬರು, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ ಇಬ್ಬರು, ಕೊಡಗಿಗೆ ಒಬ್ಬರೂ ಇರಬೇಕು" ಎನ್ನುವುದಕ್ಕೆ ಬದಲಾಗಿ "ಮೈಸೂರು ಸಂಸ್ಥಾನಕ್ಕೆ ಹನ್ನೆರಡುಮಂದಿ, ಮುಂಬಯಿ ಆಧಿಪತ್ಯಕ್ಕೆ ಹತ್ತುಮಂದಿ ಸದಸ್ಯರುಗಳಿಗೆ ಒಬ್ಬೊಬ್ಬರಂತೆ ಎಂಟುಮಂದಿ ಸದಸ್ಯರವರೆಗೂ ಮದರಾಸು ಆಧಿಪತ್ಯಕ್ಕೆ ಹತ್ತುಹತ್ತು ಮಂದಿ ಸದಸ್ಯರುಗಳಿಗೆ ಒಬ್ಬೊಬ್ಬರಂತೆ ಐದುಮಂದಿ ಸದಸ್ಯರುಗಳವರೆಗೂ ಹೈದರಾಬಾದು ಸಂಸ್ಥಾನಕ್ಕೆ ಒಬ್ಬರೂ, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ ಇಬ್ಬರೂ, ಕೊಡಗಿಗೆ ಒಬ್ಬರೂ" ಎಂದು ಇರತಕ್ಕದು.

ಷರಾ:—	ಮುಂಬಯಿ	ಮದರಾಸು	ಮೈಸೂರು	ಕೊಡಗು	ಹೈದರಾಬಾದು
ಪ್ರದಾತೃಗಳು	...	...	೧	...	...
ಆಜೀವಸದಸ್ಯರು	೧೫	೬	೪೫	೧	...
ಪ್ರಥಮವರ್ಗದವರು	೬	೫	೨೪	೧	...
ದ್ವಿತೀಯವರ್ಗದವರು	೬	೯	೬೫	೧	೧
ಒಟ್ಟು	೨೭	೨೦	೧೩೫	೩	೧

ಒಟ್ಟುಸದಸ್ಯರುಗಳು ೧೮೬.

ಮುಂಬಯಿ, ಮದರಾಸು ಪ್ರಾಂತಗಳಲ್ಲಿ ಸದಸ್ಯರುಗಳ ಸಂಖ್ಯೆಯನ್ನು ತಕ್ಕಷ್ಟು ಹೆಚ್ಚಿಸುವುದಕ್ಕಾಗಿ ಮೇಲಿನ ಸೂಚನೆಯು ತರಲ್ಪಟ್ಟಿತೆಂದು ಅನೇಕ

ಸದಸ್ಯರು ಭಾವಿಸಿ ಮತ್ತೊಂದು ವಾರ್ಷಿಕಸಭೆಯಲ್ಲಿ ಆವಶ್ಯಕವಾಗಿದ್ದಲ್ಲಿ ಈ ಸಲಹೆಯನ್ನು ತರಬಹುದೆಂದು ಅಭಿಪ್ರಾಯಪಡಲು ಪಂಡಿತರವರು ತಮ್ಮಸೂಚನೆಯನ್ನು ವಾಪಸು ತೆಗೆದುಕೊಂಡರು.

V. ಮ॥ ರಾ॥ ಎಚ್. ಚೆನ್ನಕೇಶವಯ್ಯಂಗಾರ್ಯರವರು ಮೂರನೆಯ ನಿಬಂಧನೆಯಲ್ಲಿ ಪರಿಷತ್ತಿನ ಉದ್ದೇಶಗಳಲ್ಲಿ ಸೇರಿಸತಕ್ಕ ಮತ್ತೊಂದುವಿಷಯವಾಗಿ ಕನ್ನಡದಲ್ಲಿ ಅದಕ್ಕೆ ಸಂಬಂಧಪಟ್ಟ ಕಾವ್ಯ, ವ್ಯಾಕರಣ, ಛಂದಸ್ಸು, ಅಲಂಕಾರ, ಚರಿತ್ರೆ, ಆಧುನಿಕ ಶಾಸ್ತ್ರವಿಷಯಗಳು, ಪ್ರಬಂಧರಚನೆ, ವಕ್ತೃತ್ವ- ಇವೇ ಮೊದಲಾದುವುಗಳಲ್ಲಿ ಕ್ರಮಿಕ ಪರೀಕ್ಷೆಗಳನ್ನು ಏರ್ಪಡಿಸಿ ಅವುಗಳಲ್ಲಿ ತೇರ್ಗಡೆಹೊಂದಿದವರಿಗೆ ಯೋಗ್ಯತಾಪತ್ರವನ್ನಾಗಲಿ ಬಿರುದನ್ನಾಗಲಿ ಕೊಡತಕ್ಕದು ಎಂಬ ಸೂಚನೆಯನ್ನು ಸಭೆಯಮುಂದೆ ಇಟ್ಟರು.

ಮ॥ ರಾ॥ ಆರ್. ಬಿ. ಪೋಟದಾರರವರು ಮೇಲೆಕಂಡ ಸೂಚನೆಯನ್ನು ಅನುಮೋದಿಸಿದರು. 'ದ್ರವ್ಯಾನುಕೂಲತೆ ನೋಡಿಕೊಂಡು' ಎಂಬ ಮಾತುಗಳನ್ನು ಸೇರಿಸುವುದು ಆವಶ್ಯಕವೆಂದು ಬಹುಮಂದಿ ಅಭಿಪ್ರಾಯ ಪಟ್ಟರು. ಮೈಸೂರು ಸಂಸ್ಥಾನದಲ್ಲಿ ಪಂಡಿತಪರೀಕ್ಷೆಯು ನಡೆಯುತ್ತಿರುವುದರಿಂದ ಈ ಬಗೆಯ ಪರೀಕ್ಷೆಗಳನ್ನು ಏರ್ಪಡಿಸುವುದು ಅನಾವಶ್ಯಕವೆಂದು ಮ॥ ರಾ॥ ಆರ್. ರಘುನಾಥರಾಯರವರು ವಾದಿಸಿದರು. ಈ ಪರೀಕ್ಷೆಗಳನ್ನು ನಡೆಯಿಸುವುದಕ್ಕೆ ಪರಿಷತ್ತಿಗೆ ಸದ್ಯದಲ್ಲಿ ಉಪಪತ್ತಿ ಕಡಮೆಯಾಗಿರುವುದೆಂದು ಬಹುಮಂದಿ ಅಭಿಪ್ರಾಯಪಟ್ಟರು. ಕೊನೆಗೆ ಗ್ರಂಥಕರ್ತೃಗಳಿಗೂ ನಾಟಕಮುಂತಾದುವನ್ನು ಬರೆದವರಿಗೂ ಗ್ರಂಥಗಳು ಶ್ಲಾಘನೀಯವಾಗಿರುವ ಪಕ್ಷಕ್ಕೆ ಯೋಗ್ಯತಾಪತ್ರಿಕೆಗಳನ್ನೂ ಬಹುಮಾನ ಪದಕಗಳನ್ನೂ ಸಮ್ಮೇಳನದ ಕಾಲದಲ್ಲಿ ಕೊಡುವುದು ಉಚಿತವೆಂದು ನಿರ್ಧರವಾಯಿತು.

VI. ಮ॥ ರಾ॥ ಎ. ಬಿ. ಆಲೂರವರು ಮುಂದೆ ಕಾಣಿಸುವ ಸೂಚನೆಗಳನ್ನು ಸಭೆಯಮುಂದೆ ಇಟ್ಟರು.

(a) ಕರ್ಣಾಟಕ ಸಾಹಿತ್ಯ ಸಮ್ಮೇಳನವು ಪ್ರತಿವರ್ಷವೂ ತಪ್ಪದೆ ಬೇರೆ ಬೇರೆ ಸ್ಥಳಗಳಲ್ಲಿ ನಡೆಯುವುದಕ್ಕೆ ಏರ್ಪಾಡುಗಳನ್ನು ಮಾಡುವುದಕ್ಕೂ ಅದರ ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕೂ ಐದುಮಂದಿಯ ಉಪಸಭೆಯೊಂದನ್ನು ನಿಯಮಿಸಬೇಕು.

ಮೇಲಣ ಸೂಚನೆಯನ್ನು ಮ॥ ರಾ॥ ಬೆಂಗಳೂರಿನ ಟಿ. ಅಪ್ಪೂರಾಯರವರು ಅನುಮೋದಿಸಿದರು. ಕಾರ್ಯನಿರ್ವಾಹಕ ಮಂಡಲಿಯವರು ಆಹ್ವಾನವನ್ನಂಗೀಕರಿಸಿದನಂತರದಲ್ಲಿ ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕೆ ಈ ಉಪಸಭೆಯು ಏರ್ಪಾಡಾಗುವುದು ಉಚಿತವೆಂದು ಮ॥ ರಾ॥ ಆರ್. ರಘುನಾಥರಾಯರವರು ವಾದಿಸಿದರು. ಆಯಾವರ್ಷದ ಕಾರ್ಯನಿರ್ವಾಹಕ ಸಭೆಯೇ ಇಂತಹ ಉಪಸಭೆಯನ್ನು ನಿಯಮಿಸತಕ್ಕದೆಂದು ಕೊನೆಗೆ ನಿರ್ಧರಿಸಲ್ಪಟ್ಟಿತು.

(b) ಕರ್ಣಾಟಕಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯ ವರ್ಗದಲ್ಲಿ ಮದರಾಸಿನವರೊಬ್ಬರು ಮುಂಬಯಿಯವರೊಬ್ಬರು ಇರಬೇಕು.

ಎಂಬ ಸೂಚನೆಯು ಸಭೆಯವರಿಂದ ಅಂಗೀಕೃತವಾಯಿತು.

(c) ಕಾರ್ಯನಿರ್ವಾಹಕ ಮಂಡಲಿಯಲ್ಲಿರುವ ಮುಂಬಯಿ, ಮದರಾಸು ಇಲಾಖೆಯ ಸದಸ್ಯರುಗಳು ಕಾರ್ಯನಿರ್ವಾಹಕ ಸಭೆಯಲ್ಲಿ ಹಾಜರಿಲ್ಲದಾಗ ಅವರ ಪರವಾಗಿ ಅವರ ಸೂಚನೆಗಳನ್ನು ಸೆಕ್ರಿಟೆರಿಗಳು ಸಭೆಯಮುಂದೆ ಇಡಬೇಕು. ಮತ್ತು ಕಾರ್ಯನಿರ್ವಾಹಕ ಮಂಡಲಿಯಲ್ಲಿರುವ ಮೈಸೂರು ಪ್ರಾಂತದ ಹೊರಗಿನ ಸದಸ್ಯರುಗಳಲ್ಲಿ ಕಾಲುಭಾಗದಷ್ಟು ಜನರು ಯಾವವಿಷಯದಮೇಲೆ ಲಿಖಿತಮೂಲಕವಾಗಿ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಿಸುವರೋ ಅಂತಹ ವಿಷಯದಲ್ಲಿ ಸೆಕ್ರಿಟೆರಿಗಳು ಗೈರುಹಾಜರಾಗಿದ್ದ ಸದಸ್ಯರುಗಳ ಅಭಿಪ್ರಾಯವನ್ನು ಲಿಖಿತಮೂಲಕವಾಗಿ ತರಿಸಿಕೊಳ್ಳತಕ್ಕದು.

ಎಂಬ ಸಲಹೆಯನ್ನು ಮ|| ರಾ|| ಬೆಂಗಳೂರಿನ ಟಿ. ಅಪ್ಪೂರಾಯರವರು ಅನುಮೋದಿಸಿದರು. ಕೆಲವು ಕಾಲದವರೆಗೆ ಈ ವಿಷಯದ ಚರ್ಚೆಯು ನಡೆಯಿತು. ಅನಂತರದಲ್ಲಿ ಮ|| ರಾ|| ಬೆಂಗಳೂರಿನ ಬಿ. ವೆಂಕಟನಾರಣಪ್ಪನವರು ತಾವು ಇಂಗ್ಲೀಷಿನಲ್ಲಿ ಕೊಟ್ಟಿರುವ ಸಲಹೆಯನ್ನು ಮೇಲಿನ ಸಲಹೆಗೆ ಬದಲಾಗಿ ಅಂಗೀಕರಿಸುವುದು ಉಚಿತವೆಂದು ವಾದಿಸಿದರು. ಅದಾವುದೆಂದರೆ:—ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಕಾರ್ಯನಿರ್ವಾಹಕ ಸಭೆಗೆ ಬರಲು ಅನುಕೂಲವಿಲ್ಲದಿದ್ದಾಗ ಮತ್ತೊಬ್ಬ ಕಾರ್ಯನಿರ್ವಾಹಕ ಸದಸ್ಯರಿಗೆ ತಮ್ಮ ಮತ ಪ್ರದರ್ಶನಾಧಿಕಾರವನ್ನು ಕೊಟ್ಟು ಅವರ ಮೂಲಕವಾಗಿ ತಮ್ಮ ಮತವನ್ನು ಸಭೆಯಲ್ಲಿ ಸೂಚಿಸುವ ಹಕ್ಕನ್ನು ಪಡೆದಿರತಕ್ಕದು. ಹೀಗೆಯೇ ಪರಿಷತ್ತಿನ ಸದಸ್ಯರು ಪರಿಷತ್ತಿನ ಸಭೆಗೆ ಬರಲು ಅನುಕೂಲವಿಲ್ಲದಿದ್ದಾಗ ಪರಿಷತ್ತಿನ ಮತ್ತೊಬ್ಬ ಸದಸ್ಯರಿಗೆ ತಮ್ಮ ಮತಪ್ರದರ್ಶನಾಧಿಕಾರವನ್ನು ವಹಿಸಬಹುದು. ಆದರೆ ಹೀಗೆ ಮಾಡಬೇಕೆಂದು ಇರುವವರು ಕಾರ್ಯದರ್ಶಿಗಳಿಗೆ ತಮ್ಮ ಅಭಿಪ್ರಾಯವನ್ನು ಸಭೆಯು ನಡೆಯುವುದಕ್ಕೆ ಕನಿಷ್ಠಪಕ್ಷ ಎರಡು ದಿನ ಮುಂಚಿತವಾಗಿಯೇ ತಲುಪುವಂತೆ ಬರಹಮೂಲಕವಾಗಿ ಪ್ರತಿನಿಧಿಯ ಹೆಸರನ್ನು ತಿಳಿಸಬೇಕು.

ಈ ವಿಷಯದಲ್ಲಿ ಚರ್ಚೆಯು ನಡೆದಮೇಲೆ ಸರ್ವರಿಂದಲೂ ಮ|| ರಾ|| ವೆಂಕಟನಾರಣಪ್ಪನವರ ಸಲಹೆಯು ಅಂಗೀಕರಿಸಲ್ಪಟ್ಟಿತು.

(d) (i) ಪ್ರತಿವರ್ಷ, ಗ್ರಂಥಕರ್ತೃಗಳಿಂದ ಪರಿಷತ್ತಿಗೆ ಕಳುಹಿಸಲ್ಪಟ್ಟ ಪುಸ್ತಕಗಳನ್ನು ಪರೀಕ್ಷಿಸಿ ಅವುಗಳಿಗೆ ಬಕ್ಷೀಸು ಕೊಡುವುದಕ್ಕಾಗಿ ಒಂದು ಪರೀಕ್ಷಾ ಕಮಿಟಿಯನ್ನು ಏರ್ಪಡಿಸಬೇಕು. ಅದರಲ್ಲಿ ಮದರಾಸಿನವರಿಬ್ಬರು, ಮುಂಬಯಿಯವರಿಬ್ಬರು, ಮೈಸೂರಿನವರು ಮೂವರು ಹೀಗೆ ಏಳುಜನರಿರಬೇಕು.

(ii) ಮುಂದಿನ ವರ್ಷ ಹೀಗೆ ಪುಸ್ತಕಗಳಿಗೆ ಉತ್ತೇಜನಕೊಡುವುದಕ್ಕಾಗಿ ೫೦೦ ರೂಪಾಯಿಗಳನ್ನು ಮುಂಜೂರು ಮಾಡಬೇಕು.

(iii) ಮುಂದಿನ ವರ್ಷ ಕನ್ನಡದೊಳಗೆ ಯಾವ ಯಾವ ಗ್ರಂಥಗಳನ್ನು ಪರಭಾಷೆಯಿಂದ ಪರಿವರ್ತಿಸಬೇಕೆಂಬುದನ್ನೂ ಯಾರಿಂದ ಬರೆಯಿಸಬೇಕೆಂಬುದನ್ನೂ ನಿಶ್ಚಯಿಸುವುದಕ್ಕಾಗಿ ಆರು ಜನರದೊಂದು ಕಮಿಟಿಯನ್ನು ನಿಯಮಿಸಬೇಕು. ಅದರಲ್ಲಿ ಇಬ್ಬರು ಮದರಾಸು, ಇಬ್ಬರು ಮುಂಬಯಿ ಮತ್ತು ಇಬ್ಬರು ಮೈಸೂರು ಹೀಗೆ ಸದಸ್ಯರುಗಳಿರಬೇಕು.

(iv) ಮೈಸೂರು ಭಾಷೆಯ ಎರಡು ಪುಸ್ತಕಗಳನ್ನು ಇತ್ತಕಡೆಯವರೂ, ಇತ್ತಕಡೆಯ ಎರಡು ಪುಸ್ತಕಗಳನ್ನು ಮೈಸೂರುಕಡೆಯವರೂ ಓದಿ ಗುಣದೋಷ ಗಳನ್ನು ಚರ್ಚಿಸಿ ಪ್ರಸಿದ್ಧಿಸಲಿಕ್ಕೆ ಒಂದು ಕಮಿಟಿಯನ್ನು ನಿಯಮಿಸಬೇಕು.

ಮೇಲೆಕಂಡ ಸಲಹೆಗಳನ್ನು ಮ॥ ರಾ॥ ವಿ. ಬಿ. ಆಲೂರವರು ತತ್ಕಾಲದಲ್ಲಿ ಅಪ್ರಕೃತಗಳೆಂದು ವಾಪಸು ತೆಗೆದುಕೊಂಡರು.

(e) ಕರ್ಣಾಟಕದ ಸಕಲಭಾಗಗಳಲ್ಲಿಯೂ ಭಾಷಾಜಾಗ್ರತೆಯನ್ನು ಹುಟ್ಟಿ ಸುವುದಕ್ಕೆ ಒಬ್ಬ ಉಪದೇಶಕನನ್ನು ನೇಮಿಸಬೇಕು. ಆತನಿಗೆ ಐವತ್ತುರೂಪಾಯಿಗಳ ವರೆಗೆ ಸಂಬಳವನ್ನು ಕೊಡಬೇಕು.

ಈ ಸಲಹೆಯನ್ನು ಮ॥ ರಾ॥ ಅಪ್ಪೂರಾಯರು ಅನುಮೋದಿಸಿದರು. ಪರಿ ಷತ್ತಿನಲ್ಲಿ ದ್ರವ್ಯೋಪಪತ್ತಿಯು ಕಡಮೆಯಾಗಿರುವ ಸಂಗತಿಯನ್ನು ಮ॥ ರಾ॥ ಆರ್. ರಘುನಾಥರಾಯರವರು ತಿಳಿಸಿದರು. ಮೇಲಣ ಸಲಹೆಗೆ ಬದಲಾಗಿ ಭಾಷಾಭಿ ಮಾನಿಗಳು ಗೌರವಕ್ಕಾಗಿ ಸ್ಥಳಸ್ಥಳಕ್ಕೆ ಹೋಗಿ ಉಪನ್ಯಾಸ ಮುಂತಾದುವನ್ನು ಕೊಟ್ಟು ಜನಗಳಲ್ಲಿ ಭಾಷಾಭಿಮಾನವನ್ನೂ ಉತ್ಸಾಹವನ್ನೂ ಹೆಚ್ಚಿಸುವ ಪಕ್ಷಕ್ಕೆ ಅವರು ಕೇಳಿಕೊಂಡಲ್ಲಿ ಪ್ರಯಾಣದ ಖರ್ಚುಗಳನ್ನು ಮಾತ್ರ ದ್ರವ್ಯೋಪಪತ್ತಿ ಇದ್ದಾಗ ಪರಿಷತ್ತೇ ವಹಿಸತಕ್ಕದ್ದು ಎಂದು ನಿರ್ಧರಿಸಲ್ಪಟ್ಟಿತು.

(f) ಕರ್ಣಾಟಕದ ಒಂದು ನಖಾಶೆಯನ್ನೂ ವಾಙ್ಮಯದ ಸಾದ್ಯಂತ ಇತಿ ಹಾಸವನ್ನೂ ಪ್ರಸಿದ್ಧಪಡಿಸಬೇಕು.

ಎಂಬ ಸಲಹೆಯು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಪರ್ಯಾ ಲೋಚನೆಗೆ ತಕ್ಕುದಾಗಿದೆ ಎಂದು ನಿರ್ಧರಿಸಲ್ಪಟ್ಟಿತು.

VII. ಮ॥ ರಾ॥ ವೆಂಕಟನಾರಣಪ್ಪನವರು ಹಳೆಯ ೮ ನೆಯ ನಿಬಂಧ ನೆಗೆ ಬದಲಾಗಿ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಗೌರವ ಕೋಶಾಧ್ಯಕ್ಷರು, ಒಬ್ಬರು ಗೌರವ ಕಾರ್ಯದರ್ಶಿ ಯವರು ಮತ್ತು ಪರಿಷತ್ತಿನ ಸದಸ್ಯರೊಳಗಿನಿಂದ ಬ್ಯಾಲೆಟ್ ಮೂಲಕವಾಗಿ ನಿಯಮಿತರಾದ ಮೂವತ್ತು ಮಂದಿ ಕಾರ್ಯನಿರ್ವಾಹಕ ಸದಸ್ಯರು ಇರತಕ್ಕದ್ದು, ಮತ್ತು

" ಕಾರ್ಯನಿರ್ವಾಹಕ ಮಂಡಲಿಗೆ ಆವಶ್ಯಕವೆಂದು ತೋರಿದರೆ ಒಬ್ಬರು ಸಹಾಯಕ ಕಾರ್ಯದರ್ಶಿಯು ಗೌರವಾಧಿಕಾರಿಯಾಗಲಿ ಅಥವಾ ವೇತನಪಡೆಯುವ ಅಧಿಕಾರಿಯಾಗಲಿ ಇರಬಹುದು. ವೇತನವನ್ನಾಗಲಿ ಬೇರೆವಿಧ ದ್ರವ್ಯರೂಪವಾದ ಪ್ರತಿಫಲವನ್ನಾಗಲಿ ಪಡೆಯುವ ಸಹಾಯಕ ಕಾರ್ಯದರ್ಶಿಯು ಕಾರ್ಯನಿರ್ವಾಹಕಮಂಡಲಿಯ ಸದಸ್ಯನಾಗಿ ಇರಕೂಡದು."

ಎಂಬ ಸಲಹೆಯನ್ನು ಸಭೆಯ ಮುಂದಿಟ್ಟರು. ಇದನ್ನು ಮ॥ ರಾ॥ ವೈ. ಕೆ. ರಾಮಚಂದ್ರರಾಯರವರು ಅನುಮೋದಿಸಿದರು. ಚರ್ಚೆಯು ಕೆಲವು ಕಾಲದವರೆಗೆ ನಡೆದಮೇಲೆ ಸಭಾಧ್ಯಕ್ಷರು ಸಲಹೆಗಳನ್ನು ವೋಟಿಗೆ ಹಾಕಿದರು. ಹತ್ತುಮಂದಿ ಸಲಹೆಯ ಪರವಾಗಿ ಮತ್ತು ಹನ್ನೆರಡುಮಂದಿ ಸಲಹೆಗೆ ವಿರೋಧವಾಗಿ ವೋಟು ಮಾಡಿದರು.

VIII. ಮ॥ ರಾ॥ ವೆಂಕಟನಾರಣಪ್ಪನವರು.—"ಉಪಾಧ್ಯಕ್ಷರೂ, ಗೌರವ ಕೋಶಾಧ್ಯಕ್ಷರೂ, ಗೌರವ ಕಾರ್ಯದರ್ಶಿಯವರೂ ಬೆಂಗಳೂರಿನ ನಿವಾಸಿಗಳಾಗಿರತಕ್ಕದು. ೩೦ ಮಂದಿ ಸಾಧಾರಣ ಸದಸ್ಯರುಗಳಲ್ಲಿ ೧೨ ಮಂದಿ ಮೈಸೂರು ಸಂಸ್ಥಾನದವರಾಗಿಯೂ, ೯ ಮಂದಿ ಮುಂಬಯಿ ಪ್ರಾಂತದವರಾಗಿಯೂ, ಐವರು ಮದರಾಸು ಆಧಿಪತ್ಯದವರಾಗಿಯೂ, ಒಬ್ಬರು ಹೈದರಾಬಾದು ಸಂಸ್ಥಾನದವರಾಗಿಯೂ, ಇಬ್ಬರು ದಕ್ಷಿಣ ಮಹಾರಾಷ್ಟ್ರ ಪ್ರಾಂತದವರಾಗಿಯೂ, ಒಬ್ಬರು ಕೊಡಗಿನವರಾಗಿಯೂ ಇರತಕ್ಕದು. ಹೀಗೆ ಚುನಾವಣೆಯಾದ ಸಾಧಾರಣ ಸದಸ್ಯರಲ್ಲಿ ನಾಲ್ಕುರಾದರೂ ಪಂಡಿತರಾಗಿಯಾಗಲಿ ಅಥವಾ ಕನ್ನಡದಲ್ಲಿ ಪಾಂಡಿತ್ಯವನ್ನು ಪಡೆದವರೆಂದು ಪರಿಗಣಿಸಲ್ಪಟ್ಟವರಾಗಿಯಾಗಲಿ ಇದ್ದು ಇವರ ಪೈಕಿ ಇಬ್ಬರು ಮೈಸೂರು ಸಂಸ್ಥಾನದವರಾಗಿಯೂ ಇಬ್ಬರು ಮದರಾಸಾಧಿಪತ್ಯದವರಾಗಿಯೂ ಮತ್ತೊಬ್ಬರು ಮುಂಬಯಿ ಆಧಿಪತ್ಯದವರಾಗಿಯೂ ಇರತಕ್ಕದು."

ಎಂಬ ಸೂಚನೆಯನ್ನು ಪರ್ಯಾಲೋಚನೆಗೆ ತಂದರು. ಇದನ್ನು ಮ॥ ರಾ॥ ಆರ್. ಎಚ್. ದೇಶಪಾಂಡೆಯವರು ಅನುಮೋದಿಸಿದರು. ಚರ್ಚೆಯು ಕೆಲವು ಕಾಲದವರೆಗೆ ನಡೆಯಿತು. ಕೊನೆಗೆ ಈ ಸಲಹೆಯನ್ನು ಅಂಗೀಕರಿಸಲಿಲ್ಲ.

IX ರಾಜಮಂತ್ರಪ್ರವೀಣ ಮ॥ ಎಚ್. ವಿ. ನಂಜುಂಡಯ್ಯ, ಎಮ್. ಎ., ಎಮ್. ಎಲ್., ಸಿ. ಐ. ಇ., ಯವರು ಪರಿಷತ್ತಿನ ಅಧ್ಯಕ್ಷರಾಗಿಯೂ, ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಮ॥ ರಾ॥ ಎಮ್. ಶಾಮರಾವ್, ಎಂ. ಎ., ಅವರು ಉಪಾಧ್ಯಕ್ಷರಾಗಿಯೂ ಸದಸ್ಯರುಗಳಿಂದ ಏಕಾಭಿಪ್ರಾಯದಿಂದ ಬ್ಯಾಲೆಟ್ ಮೂಲಕವಾಗಿ ಚುನಾಯಿಸಲ್ಪಟ್ಟರು.

X ಸದಸ್ಯರುಗಳು ಬ್ಯಾಲೆಟ್ ಮೂಲಕವಾಗಿ ಕೆಳಗೆ ಕಾಣಿಸುವ ಕಾರ್ಯನಿರ್ವಾಹಕ ಸದಸ್ಯರುಗಳನ್ನು ಚುನಾಯಿಸಿದರು. ವೋಟಿನ ಪತ್ರಗಳನ್ನು ಮ॥ ರಾ॥

ವೈ. ಕೆ. ರಾಮಚಂದ್ರರಾಯರೂ ಮ॥ ರಾ॥ ಕೆ. ಎಚ್. ಮುದವೇಡಕರವರೂ ಪರೀಕ್ಷಿಸಿ ವೋಟಿನ ಸಂಖ್ಯೆಗಳನ್ನು ನಿರ್ಧರಿಸಿದರು.

ಮೈಸೂರು ಪ್ರಾಂತದ ಸದಸ್ಯರುಗಳು.

೧. ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಮ॥ ರಾ॥ ಆರ್. ನರಸಿಂಹಾಚಾರ್ಯರು, ಎಮ್. ಎ.

೨. ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರು, ಬಿ. ಎಸ್ ಸಿ. ಎಲ್. ಸಿ. ಇ.

೩. ಡಾಕ್ಟರ್ ಪಿ. ಎಸ್. ಅಚ್ಯುತರಾಯರು, ಎಲ್. ಎಮ್. ಮತ್ತು ಎಸ್.
೪. ಮ॥ ರಾ॥ ಟಿ. ಲಕ್ಷ್ಮೀನರಸಿಂಹರಾಯರು, ಬಿ. ಎ., ಬಿ. ಎಲ್.
೫. ,, ಎಮ್. ವೆಂಕಟಕೃಷ್ಣಯ್ಯನವರು, ಮೈಸೂರು.
೬. ,, ಎಮ್. ಎಲ್. ವರ್ಧಮಾನಯ್ಯನವರು ,,
೭. ,, ಆರ್. ರಘುನಾಥರಾಯರು, ಬಿ. ಎ.
೮. ,, ಬಿ. ವೆಂಕಟನಾರಣಪ್ಪನವರು, ಎಮ್. ಎ.
೯. ,, ಎಮ್. ಎಸ್. ಪುಟ್ಟಣ್ಣನವರು, ಬಿ. ಎ.
೧೦. ,, ವೈ. ಕೆ. ರಾಮಚಂದ್ರರಾಯರು, ಬಿ. ಎ., ಎಲ್. ಸಿ. ಇ.
೧೧. ,, ಬಾಪು ಸುಬ್ಬರಾಯರು, ಬಿ. ಎ.
೧೨. ,, ಬಿ. ಕೃಷ್ಣಪ್ಪನವರು. ಎಮ್. ಎ.
೧೩. ,, ಎಚ್. ಲಿಂಗರಾಜ ಅರಸಿನವರು, ಮೈಸೂರು.
೧೪. ,, ಎಚ್. ಚೆನ್ನಕೇಶವಯ್ಯಂಗಾರ್ಯರು.
೧೫. ಶ್ರೀಮತಿ ತಿರುಮಲಮ್ಮನವರು. ನಂಜನಗೂಡು.

ಮುಂಬಯಿ ಪ್ರಾಂತ.

೧. ರಾವ್ ಬಹದ್ದೂರ್ ಮ॥ ರಾ॥ ವಿ. ಬಿ. ಜೋಶಿಯವರು. ಬಿ. ಎ.
೨. ಮ॥ ರಾ॥ ಆರ್. ಎಚ್. ದೇಶಪಾಂಡೆಯವರು, ಎಮ್. ಎ.
೩. ,, ಪಿ. ಬಿ. ಆಲೂರರವರು. ಬಿ. ಎ., ಎಲ್. ಎಲ್. ಬಿ.
೪. ,, ಪಿ. ಜಿ. ಹಳಕಟ್ಟಿಯವರು ಬಿ. ಎ., ಎಲ್ ಎಲ್. ಬಿ.
೫. ,, ಆರ್. ಬಿ. ಪೋಟದಾರರು.
೬, ,, ಕೆ. ಎಚ್. ಮುದವೇಡಕರ್.
೭. ,, ಎಸ್. ಜಿ. ಕರಿಗುದರಿ.
೮. ,, ಆರ್. ಎ. ಜಹಗೀರುದಾರ್, ಎಮ್. ಎ., ಎಲ್ ಎಲ್. ಬಿ.

ಮದರಾಸು ಪ್ರಾಂತ.

೧. ಮ॥ ರಾ॥ ಬೆನಗಲ್ ರಾಮರಾಯರು, ಬಿ. ಎ., ಎಲ್ ಎಲ್. ಬಿ.

೨. ಮ|| ರಾ|| ಎ. ವೆಂಕಟರಾಯರು, ಬಿ. ಎ., ಎಲ್ ಟಿ.
೩. ,, ಎಸ್. ರಾಜಗೋಪಾಲಕೃಷ್ಣರಾಯರು.
೪. ,, ಆರ್. ತಾತಾಚಾರ್ಯರು, ಎಮ್. ಎ., ಎಲ್. ಟಿ.
೫. ,, ಸಿ. ಹನುಮಂತಗೌಡರು.

ಕೊಡಗು.

ರಾಜಕಾರ್ಯಪ್ರಸಕ್ತ ರಾಯಬಹದ್ದೂರ್ ಮ|| ರಾ|| ಎಮ್. ಮುತ್ತಣ್ಣನವರು.

ಹೈದರಾಬಾದು.

ಮ|| ರಾ|| ಬಿ. ಕೃಷ್ಣಯ್ಯಂಗಾರ್ಯರು.

ದಕ್ಷಿಣಮಹಾರಾಷ್ಟ್ರಪ್ರಾಂತ.

೧. ಮ|| ರಾ|| ಆರ್. ಎಸ್. ಮಂಗಸೂಲಿಯವರು.
೨. ಟಿ. ಎಸ್. ಚಿಕ್ಕೋಡಿಯವರು.

ಸಭಾಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸಿದ ಮೇಲೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ತೃತೀಯ ವಾರ್ಷಿಕ ಸಭಾಕಾರ್ಯವು ಸಾಂಗವಾಯಿತು.

(ಸೈನಾಗಿದೆ). **ಎಮ್. ಶಾಮರಾವ್,**
ಉಪಾಧ್ಯಕ್ಷರು.

೧೯೧೮ ನೆಯ ಇಸವಿ ಜನವರಿ ೧ ನೆಯ ತಾರೀಖಿನಿಂದ ಮಾರ್ಚಿ ೩೦ ರ ವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದಿರುವ ಚಂದಾಹಣದ ಪಟ್ಟಿ.

				ರೂ.	ಆ.	ಪೈ.
೫ ೧ ೧೯೧೮	ಮ|| ರಾ||	ಕೆ. ನಂಜುಂಡ ಶಾಸ್ತ್ರಿಗಳು		೪	೦	೦
,,	,,	ಎಚ್. ಎಸ್. ಗೋವಿಂದ ರಾಯರು, ಬಿ. ಎ.		೧	೦	೦
೭ ,, ,,	,,	ಎಸ್. ವರದರಾಜಯ್ಯಂಗಾರ್ಯರು		೧೨	೦	೦
೧೭ ,, ,,	,,	ಬಿ. ದಾಸಪ್ಪನವರು, ಬಿ. ಎ.		೧೦	೦	೦
೨೦ ,, ,,	,,	ಡಿ. ಆದಪ್ಪನವರು		೫೦	೦	೦
೨೧ ,, ,,	,,	ಡಿ. ಕೆ. ದಾರಾಷಾ ಅವರು, ಬಿ. ಎ.		೨೪	೦	೦
೨೭ ,, ,,	,,	ಟಿ. ಅಪ್ಪೂರಾಯರು, ಬಿ. ಎ., ಬಿ. ಎಲ್.		೨೫	೦	೦
೧ ೨ ,,	,,	ಸಿ. ರಾಮರಾಯರು		೫	೦	೦

		ರೂ.	ಆ.	ಪೈ.
೪ ೨ ೧೯೧೮ ಮಾ॥ ರಾ॥	ವಿ. ಬಿ. ಆಲೂರವರು, ಬಿ. ಎ., ಎಲ್ ಎಲ್. ಬಿ.	೨೫	೦	೦
೯ ,, ,, ,,	ಎಚ್. ಪಿ. ಶೇಷಾಚಾರ್ಯರು	೨	೦	೦
೫ ೩ ,, ,,	ವಿ. ಪ. ಆಲೂರವರು, ಬಿ. ಎ., ಎಲ್ ಎಲ್. ಬಿ.	೧೩	೦	೦
೬ ,, ,, ,,	ಜೆ. ಸೂರ್ಯನಾರಾಯಣ	೪	೦	೦
೮ ,, ,, ,,	ಸಿ. ರಾಮರಾಯರು	೨	೦	೦
೨೦ ,, ,, ,,	ರಾವ್ ಬಹದ್ದೂರ್ ಎಮ್. ಶಾಮರಾಯರು ಎಮ್. ಎ.	೧೨	೦	೦
೨೨ ,, ,, ,,	ಜಿ. ಕೆ. ಮುನಿ ಶಾಮಯ್ಯನವರು	೪	೦	೦
೨೫ ,, ,, ,,	ಟಿ. ಅಪ್ಪೂರಾಯರು, ಬಿ. ಎ., ಎಲ್ ಎಲ್. ಬಿ.	೨೫	೦	೦
,, ,,	ಎಮ್. ಗೋಪಾಲರಾಯರು	೪	೦	೦
,, ,,	ವಿ. ಎನ್. ಮಗದಾಳರವರು, ಬಿ. ಎ.	೧೦	೦	೦
೨೬ ,, ,, ,,	ವೀಣೆ ರಂಗಸ್ವಾಮಯ್ಯಂಗಾರ್ಯರು	೧೫	೦	೦
	ಒಟ್ಟು	೨೪೭	೦	೦

೧೯೧೮ ನೆಯ ಏಪ್ರಿಲ್ ೧ ನೆಯ ತಾರೀಖಿನಿಂದ ಜೂನ್ ಅಂತ್ಯದವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದಿರುವ ಚಂದಾಹಣದ ಪಟ್ಟಿ.

		ರೂ.	ಆ.	ಪೈ.
೧ ೪ ೧೯೧೮ ಮಾ॥ ರಾ॥	ವಿ. ವೆಂಕಟಸುಬ್ಬಯ್ಯನವರು	೪	೦	೦
,, ,,	ಸಿ. ರಾಮರಾಯರು	೩	೦	೦
೩ ,, ,, ,,	ಎ. ಆರ್. ಮಹಿಷಿ	೧೨	೦	೦
೫ ,, ,, ,,	ಎನ್. ಟಿ. ಗೋಪಾಲಯ್ಯಂಗಾರ್ಯರು, ಬಿ. ಎ., ಎಲ್ ಎಲ್. ಬಿ.	೬	೦	೦
೮ ೪ ,, ,,	ಎಚ್. ನರಸಿಂಗರಾಯರು, ಮೈಸೂರು	೪	೦	೦
,, ,,	ಶಿವಭಟ್ಟರಾಮಭಟ್ಟಕೆಕ್ಕಾರ್	೪	೦	೦
೧೫ ,, ,, ,,	ಎಮ್. ಶಿವರಾವ್ ಪುತ್ತೂರು	೪	೦	೦
೨೦ ,, ,, ,,	ಪಿ. ಅನಂತಸುಬ್ಬರಾಯರು ಬಿ. ಎ., ಎಲ್. ಟಿ.	೪	೦	೦
೨೧ ,, ,, ,,	ಬೊಮ್ಮರಸ ಪಂಡಿತರು, ಬೆಂಗಳೂರು	೪	೦	೦
೨೨ ,, ,, ,,	ಎಚ್. ಲಿಂಗರಾಜಅರಸಿನವರು	೫೦	೦	೦
೧ ೫ ,, ,,	ಎನ್. ಜಿ. ಕರಿಗುದರಿ, ಬಿ. ಎ., ಎಲ್ ಎಲ್. ಬಿ.	೫೦	೦	೦
೪ ,, ,, ,,	ಕೆ. ಸಂಜೀವಸೆಟ್ಟರು, ಬಿ. ಎ.	೪	೦	೦
೧೩ ,, ,, ,,	ಆರ್. ಎಸ್. ಮಂಗಸೂಲಿ, ಶಿರಹಟ್ಟಿ	೫೦	೦	೦

			ರೂ.	ಆ.	ಪೈ.
೧೩ ೫ ೧೯೧೮	ಮ॥ ರಾ॥	ಎನ್. ವಿ. ರಾಜಪುರೋಹಿತರು, ಸೊಂಡೂರು	೪	೦	೦
,,	,,	ರಾವ್‌ಬಹದ್ದೂರ್ ಸಿ. ಹನುಮಂತಗೌಡರು	೩	೮	೦
,,	,,	ಎನ್. ಆರ್ ಸುಬ್ಬಣ್ಣಯ್ಯ, ನಿಡತ	೪	೦	೦
,,	,,	ವೆಂಕಟೇಶಗೋವಿಂದ	೧	೦	೦
೧೯ ,, ,,	,,	ವಿ. ಎಸ್. ಸಂಜೀವರಾಯರು	೧೦	೦	೦
೨೦ ,, ,,	,,	ಸಿ. ರಾಮರಾಯರು	೨	೦	೦
೨೩ ,, ,,	,,	ಕೆ. ದುಗ್ಗಪ್ಪಯ್ಯ	೫	೦	೦
೫ ೬ ,,	,,	ಡಿ. ಆರ್. ಶ್ರೀಪತಿರಾಯರು	೪	೦	೦
,,	,,	ವೈ. ಕೆ. ರಾಮರಾಯರು	೪	೦	೦
೧೫ ,, ,,	,,	ಸಿ. ಕಪ್ಪಣ್ಣನವರು	೬	೦	೦
೨೦ ,, ,,	,,	ಎಮ್. ಎ. ಶ್ರೀನಿವಾಸಯ್ಯಂಗಾರ್ಯರು, ಬಿ. ಎ.	೪	೦	೦
೨೬ ,, ,,	,,	ಮುದ್ದೇಬಿಹಾಳದ ವಿದ್ಯಾರ್ಥಿವಾಚನ ಮಂದಿರದ ಕಾಣಿಕೆ	೧	೦	೦
		ಒಟ್ಟು	೪೮	೮	೦

೧೯೧೮ ನೆಯ ಇಸವಿ ಜುಲೈ ೧೦ ನೆಯ ತಾರೀಖಿನಿಂದ ಸೆಪ್ಟಂಬರ್ ಅಂತ್ಯದವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದ ಚಂದಾ ಹಣದ ಪಟ್ಟಿ.

			ರೂ.	ಆ.	ಪೈ.
೧೩ ೬ ೧೯೧೮	ಮ॥ ರಾ॥	ಸಿ. ರಾಮರಾಯರು	೨	೦	೦
೨೯ ,, ,,	,,	ಎ. ನಂಜುಂಡಯ್ಯನವರು	೪	೦	೦
೨ ೯ ,,	,,	ಸಿ. ರಾಮರಾಯರು	೫	೦	೦
೬ ,, ,,	,,	ಪಿ. ರಾಘವೇಂದ್ರರಾಯರು, ಕೌನ್ಸಿಲರ್.	೧೨	೦	೦
೧೧ ,, ,,	,,	ರಾವ್‌ಬಹದ್ದೂರ್ ರಾಮರಾಯರು, ಎಮ್. ಎ.	೧೨	೦	೦
		ಒಟ್ಟು	೩೫	೦	೦

ಪರಿಷತ್ಪತ್ರಿಕೆಯ ಚಂದಾದಾರರಿಂದ ವಸೂಲಾದ ಮೊಬಲಗು.

			ರೂ.	ಆ.	ಪೈ.
೧೯ ೧ ೧೯೧೮	ಮ॥ ರಾ॥	ಎಮ್. ಎ. ಶ್ರೀನಿವಾಸರ್, ಬಿ. ಎ.	೩	೦	೦
೯ ೯ ,,	,,	ಸಿಂಹನಗದ್ದೆ ಜೈನಮಠದ ಸ್ವಾಮಿಗಳಿಂದ	೩	೦	೦
		ಒಟ್ಟು	೬	೦	೦

ಪರಿಷತ್ಪತ್ರಿಕೆಯನ್ನು ಕೊಂಡುಕೊಂಡವರಿಂದ ವಸೂಲಾದ ಮೊಬಲಗು.

					ರೂ.	ಆ.	ಪೈ.
೧೯	೧	೧೯೧೮	ಮ॥ ರಾ॥	ಎ. ಲಕ್ಷ್ಮೀನಾರಾಯಣರು, ಬೇಲೂರ್	೧	೦	೦
೨೨	೨	,,	,,	ಬಿ. ಎಸ್. ಬಿಟ್ಟಿಗೆರೆ	೧	೦	೦
೧೫	೫	,,	,,	ನಾರಾಯಣಕೃಷ್ಣರಾವ್ ಹುಯಿಗೋಲ, ಬಿ. ಎ., ಎಲ್ ಎಲ್. ಬಿ.	೪	೦	೦
೧೪	೬	,,	,,	ಎ. ಲಕ್ಷ್ಮೀನಾರಾಯಣರು, ಬೇಲೂರ್	೧	೦	೦
೨೭	,,	,,	,,	ಎಸ್. ಕೃಷ್ಣಶಾಸ್ತ್ರಿಗಳು, ಮದರಾಸ್	೭	೦	೦
೧೮	೭	,,	,,	ಬೆಂಗಳೂರು ಗೌರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ರವರು	೬	೦	೦
				ಒಟ್ಟು	೨೦	೦	೦

ಪರಿಷತ್ತಿನ ಪುಸ್ತಕಭಂಡಾರ.

ಪರಿಷತ್ತಿನ ಪುಸ್ತಕಭಂಡಾರಕ್ಕೆ ಉಚಿತವಾಗಿ ಕಳುಹಿಸಿರುವ ಗ್ರಂಥಗಳ ಮತ್ತು ದಾತೃಗಳ ಪಟ್ಟಿ.

ಗ್ರಂಥಗಳ ಹೆಸರು.	ದಾತೃಗಳು.
ದ್ರೌಪದೀ ವಸ್ತ್ರಾಪಹರಣ.	ಶ್ರೀಮತಿ ತಿರುಮಲಮ್ಮಾಳ್.
ಬಾ. ಭಾರತ.	ಮ॥ ಗದಿಗಯ್ಯ ಹುಚ್ಚಯ್ಯ, ಹೊನ್ನಾಪುರಮಠ.
ನೀತಿಮಂಜರಿ.	
ಬಾಲರಾಮಾಯಣ.	
ಶ್ರೀ ರಾಮದಾಸಸ್ವಾಮಿಗಳವರ ಚರಿತ್ರೆ.	
ಶ್ರೀಮಂತೋದ್ಯಾನ ವರ್ಣನಂ.	ಮ॥ ವೇಂಕಟಾದ್ರಿ ಪಂಡಿತ.
ವ್ಯವಹಾರ ದೀಪಿಕೆ.	ಮ॥ ಎಂ. ಎಸ್. ಶಂಕರರಾವ್.
ಆಲಿವರ್ ಟ್ವಿಸ್ಟ್ (ಕನ್ನಡ).	ಮ॥ ಎಮ್. ಆರ್. ಅಣ್ಣಾಜಿರಾಯರು.
ಗೌರಿ.	
ಜಾರ್ಜ್‌ವಾಷಿಂಗ್ಟನ್.	
ಕುಸುಮಾಕರ	
ಚಂದ್ರಹಾಸೋಪಾಖ್ಯಾನ.	
ಶರಣಾಗತ.	
ಆರ್ಕಿಯೊಲಾಜಿಕಲ್ ಆಫೀಸ್ ರಿಪೋರ್ಟ್ ೧೯೧೭.	ಮ॥ ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು.

ಭಂಡಾರಕರ್ಸ್ ಕಮೆಮೊರೇಷ ವಾಲ್ಯುಂಗಳು.	ಸೆಂಟ್ರಲ್ ಬುಕ್ ಡಿಪ್ಪೋ ಕ್ಯೂರೇಟ ರವರಿಂದ.
ಪ್ರತಾಪಸಿಂಹ. ಶ್ರೀ ಕೃಷ್ಣಚರಿತ್ರೆ, ಪ್ರಥಮಖಂಡ. ಬೃಂದಾವನ, ದ್ವಿತೀಯಖಂಡ. ಕುಟುಂಬ ಧರ್ಮವಿಡಂಬನೆ. ಅಕ್ಷರಬೋಧೆ. ಶಿಕ್ಷಣದ್ವಯ. ಗಲ್ಪಗುಚ್ಛ. ಅಕ್ಷರಾಭ್ಯಾಸ. ಹಿತಚಿಂತಕ. ಆಕೃತಿಗೀತೆ. ಆಚಾರದ ಅತ್ಯಾಚಾರ. ಅಕ್ಕ. ಚಿತ್ರಷಡಂಗ. ಅಕ್ಷರವಿಲಾಸ. ದುರ್ಗಾದಾಸ.	ಮ॥ ಎ. ಎಸ್. ಶ್ರೀಕಂಠಯ್ಯನವರು, ಮೈಸೂರು.
ಕಾದಂಬರೀ ಸಂಗ್ರಹದ ಸಂಪುಟ.	ಮ॥ ಸಿ. ವೆಂಕಟರಾಮಶಾಸ್ತ್ರಿ.
ಅಧ್ಯಾತ್ಮರಾಮಾಯಣ.	ಸದ್ಬೋಧ ಚಂದ್ರಿಕೆ ಆಫೀಸು.
ಮೇಘಸಂದೇಶಕಾವ್ಯ	ಬಾಳಾಚಾರ್ಯ ಸಕ್ಕರಿ ಉರಫ್ ಶಾಂತಕವಿ.
ಸುನಂದಿನಿ.	ಬಿ. ಜಿ. ಹುಲಿಕವಿಯವರು.
ಸ್ಪೆನ್ಸರ್ಸ್ ಎಡ್ಯುಕೇಷ (ಸಂಸ್ಕೃತ).	ಹೆಚ್. ಸುಬ್ಬರಾವ್.
ಚಂಪೂರಾಮಾಯಣ (ತೆಲುಗು.)	ಆಂಧ್ರಸಾಹಿತ್ಯ ಪರಿಷತ್ತು.

ಉದ್ಧೃತಲೇಖನಗಳು.

ನಾಲ್ಕನೆಯ ಸಾಹಿತ್ಯಸಮ್ಮೇಲನ.

ಧಾರವಾಡದಲ್ಲಿ ನಡೆದ ನಾಲ್ಕನೆಯ ಕರ್ನಾಟಕಸಾಹಿತ್ಯ ಸಮ್ಮೇಲನವನ್ನು ಅಲ್ಲಿಯ "ಶುಭೋದಯ" ಪತ್ರಿಕಾಕರ್ತರು (೨೪-೫-೧೯೧೮ ರಲ್ಲಿ) ಈ ರೀತಿ ಹೃದಯಂಗಮವಾಗಿ ವರ್ಣಿಸಿರುತ್ತಾರೆ :—

ಈ ವರ್ಷದ ಕರ್ನಾಟಕಸಾಹಿತ್ಯಸಮ್ಮೇಲನವೆಂದರೆ ನಯನೋತ್ಸವವಾದ ಒಂದು ಮಹಾಸಮಾರಂಭವೇ ಆಯಿತು! ಇಂತಹ ಸಮಾರಂಭವು ಧಾರವಾಡ ನಗರದ ಸ್ಥಾಪನೆಯಾದಂದಿನಿಂದ ಇಂದಿನವರೆಗೆ ಆಗಿರಲಿಕ್ಕಿಲ್ಲವೆಂದು ಹೇಳಬಹುದು. ಸರಸ್ವತೀದೇವಿಯ ಮಾಹಾತ್ಮ್ಯವೇ ಅಷ್ಟು ಅಚಿಂತ್ಯವಾದದ್ದು! ಅಕಬರನ ಸಭಾಮಂದಿರದಂಥ ಐಶ್ವರ್ಯಮಂಡಿತವಾದ ಸ್ಥಾನದಲ್ಲಿ ನಮ್ಮ ಸಮ್ಮೇಲನವು ಕೂಡಿದ್ದಿಲ್ಲ ಸರಿ; ಮುತ್ತು ಹವಳ ಹಣಂಗಳ ಬೆಳಕಿಗೆ ಥಳಥಳಿಸುವ ಬಹಿರ್ವರ್ಚಸ್ವಿಗಳಾದ ಸಂಸ್ಥಾನಾಧಿಪತಿಗಳ ನಿವಹವು ನಮ್ಮ ಸಮ್ಮೇಲನಕ್ಕೆ ಬಂದಿದ್ದಿಲ್ಲ ಸರಿ. ಆದರೆ ಅಂತರ್ಜ್ಯೋತಿಯಿಂದ ಪ್ರಕಾಶಮಾನರಾದ ಘನಪಂಡಿತರೂ ಸ್ವದೇಶೋತ್ಕರ್ಷೇಚ್ಛುಗಳಾದ ಕಾರ್ಯಧುರಂಧರರೂ ನವರಸವರ್ಷಣರಾದ ಕವಿವರರೂ ಸಂದೇಹತಿಮಿರವನ್ನು ಶಕಲಶಕಲವಾಗಿ ಭಂಗಿಸಬಲ್ಲ ವಾಗ್ಮಿಗಳೂ ಏಕತ್ರ ಕುಳಿತಿರುವ ಶಾಲಾಗೃಹವೇ ದೇವಸಭೆಯಾದ ಸುಧರ್ಮೆಗೆ ಸಮಾನವಾಗಿ ತೋರಿತು. ಅನೇಕವಾದ ರಾಜಕೀಯಶಾಖೆಗಳಲ್ಲಿಯ ಅಧಿಕಾರಸ್ಥರೂ ಬಿ ಏ., ಎಂ. ಏ.. ಎಲ್ ಎಲ್. ಬಿ., ಬಿ. ಎಲ್. ಮುಂತಾದ ಉನ್ನತ ಪ್ರತಿಯ ಪದವೀಧರರೂ, ವಕೀಲ ವೈದ್ಯರೂ, ಸೆಟ್ಟಿ ಸಾಹುಕಾರರೂ, ಬ್ರಾಹ್ಮಣ ಲಿಂಗಾಯತರೂ, ಹಿಂದು ಮುಸಲ್ಮಾನರೂ, ಅಹಂಕಾರದ್ವೈತಭಾವವಿರೋಧಾದಿಗಳನ್ನು ಸಂಪೂರ್ಣವಾಗಿ ಮರೆತು ಭಾಷಾದೇವಿಯ ಸೇವಾತತ್ಪರರಾಗಿ ಆಸ್ಥೆಯಿಂದ ಸಮ್ಮಿಲಿತರಾಗಿರುವುದನ್ನು ಕಂಡು ಸರಸ್ವತೀದೇವಿಯಲ್ಲದೆ ಹೆಚ್ಚಿನ ದೈವತವು ಮತ್ತೊಂದಿಲ್ಲವೆಂಬ ನಂಬಿಕೆಯು ಎಲ್ಲರ ಮನಸ್ಸಿನಲ್ಲಿಯೂ ತುಂಬಿಹೋಯಿತು. "ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ" ಎಂಬ ಭಗವದುಕ್ತಿಯಿರಲು, ಆ ಜ್ಞಾನಾಧಿದೇವತೆಯಾದ ಶ್ರೀ ಸರಸ್ವತೀದೇವಿಯ ಸಾನ್ನಿಧ್ಯದ ಪವಿತ್ರತೆಯನ್ನೆಷ್ಟೆಂದು ಬಣ್ಣಿಸಬಹುದು!!!

ಸಮ್ಮೇಲನದ ಮೂರು ನಾಲ್ಕು ದಿವಸಗಳಲ್ಲಿ ಧಾರವಾಡದಲ್ಲೆಲ್ಲ ಉತ್ಸಾಹ

ಉತ್ಸವಗಳೇ ನೆರೆಯುತ್ತಿದ್ದುವು. ಅತಿಥಿ, ಅಭ್ಯಾಗತರ ಸನ್ಮಾನಸಂದರ್ಶನಕ್ಕಾಗಿ ನಾಗರಿಕರು ವೇಷಭೂಷಣಮಂಡಿತರಾಗಿ ಟ್ರೇನಿಂಗ್ ಕಾಲೇಜಿನ ಕಡೆಗೆ ತೆರಪಿಲ್ಲದೆ ಹೋಗಿ ಬರುತ್ತಿದ್ದರು. ಉಪನ್ಯಾಸವ್ಯಾಖ್ಯಾನಗಳೂ, ಕೀರ್ತನಕಥೆಗಳೂ, ನಾಟಕಪ್ರದರ್ಶನಗಳೂ, ಗಾಯನವಾದನಗಳೂ, ಹಾಸ್ಯವಿನೋದಗಳೂ, ಮೆರೆವಣಿಗೆ ದೀಪೋತ್ಸವಗಳೂ, ಉಪಹಾರಭೋಜನಗಳೂ, ಸಮ್ಮೇಲನದ ಮುಹೂರ್ತಾರ್ಯಕ್ಕೆ ವಿಲಕ್ಷಣವಾದ ಶೋಭಾಸೌಕರ್ಯಗಳನ್ನು ಬೀರುತ್ತಿದ್ದುವು.

ಮಾತೃಭಾಷಾಭಕ್ತಿ.

ಶ್ರೀಮತ್ಕೃಷ್ಣಾಚಾರ್ಯ ಗಲಗಲಿಯವರು ಧಾರವಾಡದ "ಕರ್ನಾಟಕವೃತ್ತ"ಕ್ಕೆ (೧೬-೭-೧೯೧೮) ಈ ಲೇಖನವನ್ನು ಬರೆದಿರುವರು. ಕನ್ನಡಭಾಷೆಯಲ್ಲಿ ಎಷ್ಟರಮಟ್ಟಿನ ಭಕ್ತಿಯಿರಬೇಕೆಂಬುದು ಇದರಿಂದ ತಿಳಿಯುವುದು.

ಪ್ರಾಚೀನ ಕದಂಬರಾಜರಿಂದ ಇಂದಿನ ಮೈಸೂರೊಡೆಯರ ವರೆಗಿನ ಎಲ್ಲಾ ಕರ್ಣಾಟಕಮಹೀಪಾಲರೂ, ಪುರಂದರದಾಸ, ಕನಕದಾಸ, ಜಗನ್ನಾಥರಾಯ ಮೊದಲಾದ ಭಗವದ್ಭಕ್ತರೂ, ಪಂಪ, ಪೊನ್ನ, ರನ್ನ, ಜನ್ನ, ಲಕ್ಷ್ಮೀಶ, ರುದ್ರಭಟ್ಟ, ರಾಜಶೇಖರಾದಿ ಕವಿಸಾರ್ವಭೌಮರೂ ಯಾವ ಭಾಷಾಜನನಿಯನ್ನು ಬಗೆಬಗೆಯಿಂದ ಆರಾಧಿಸಿ ವಿವಿಧಾಲಂಕಾರಗಳಿಂದ ಅಲಂಕರಿಸಿ ಅವಳ ಸೌಂದರ್ಯಾತಿಶಯವನ್ನು ಹೆಚ್ಚಿಸಿ ತಾವೂ ಕೃತಾರ್ಥರಾದರೋ ಅಂತಹ ನನ್ನ ಮಾತೃಭಾಷೆಯಾದ ಕನ್ನಡ ....ಮಾತೃಭಾಷೆಯ ವಿಷಯದಲ್ಲಿ ನನ್ನ ಭಾವನೆಯು ಸ್ಮೃತಿಕಾರರ ಭಾಷೆಯಲ್ಲಿ 'ಸ್ವಭಾಷೈವ ಹತಾ ಹಂತಿ ರಕ್ಷಿತಾ ಯದಿ ರಕ್ಷತಿ' ಎಂಬುದಾಗಿ ಶ್ರೀಮದಾನಂದತೀರ್ಥರ ವಚನದಲ್ಲಿ --

"ವರಂ ಸ್ವಮಾತೃಗಮನಂ, ವರಂ ಗೋಮಾಂಸಭಕ್ಷಣಂ।
ವರಂ ಹತ್ಯಾ ಸುರಾಪಾನಂ, ನಿಜಭಾಷಾವಿನಿಂದನಾತ್ ॥"

ಎಂದು ಇರುವುದು. ಇದಕ್ಕೂ ಹೆಚ್ಚಿಗೆ ಏನು ಹೇಳಲಿ?

ಕರ್ಣಾಟಕಭಾಷಾಮಾತೆಯನ್ನು ಅಡಿಗಡಿಗೆ ವಂದಿಸುವವನೇ ಪುಣ್ಯ ಪುರುಷನು. ಆ ತಾಯಿಯನ್ನು ಕೊಂಡಾಡುವವನೇ ಭಾಗ್ಯವಂತನು ಅಂತಹ ಪುಣ್ಯಪುರುಷನ ಪಾದಧೂಳಿಯಿಂದ ಈ ಜಗತ್ತೇ ಪವಿತ್ರವಾಗಬಹುದು. ಕನ್ನಡ ಭಾಷೆಯೇ ಜೀವನ; ಕನ್ನಡಭಾಷೆಯೇ ಸುಲಭಸಾಧನ. ದೇವರೇ! ಜನ್ಮಜನ್ಮಾಂತರ ದಲ್ಲಿಯಾದರೂ ಕನ್ನಡಭಾಷೆಯಲ್ಲಿಯೇ ನನಗೆ ಪ್ರೇಮವಿರಲಿ. ನನ್ನನ್ನು ಹುಟ್ಟಿಸು ವುದಾದರೆ, ಕನ್ನಡನಾಡಿಯಲ್ಲಿಯೇ ಹುಟ್ಟಿಸು. ಇತರ ದೇಶದಲ್ಲಿ ರಾಜನನ್ನಾಗಿ ಹುಟ್ಟಿ ಸುವುದಕ್ಕಿಂತ ಕರ್ಣಾಟಕದಲ್ಲಿ ಪಕ್ಷಿಯಾಗಿ ಹುಟ್ಟಿಸುವುದೇ ನನಗೆ ಶ್ರೇಯಸ್ಕರವು. ವೃಕ್ಷಜನ್ಮದ ಪ್ರಾರಬ್ಧವಿದ್ದರೆ ಕರ್ಣಾಟಕದಲ್ಲಿ ವೃಕ್ಷವನ್ನಾಗಿ ಹುಟ್ಟಿಸು. ಏಕೆಂದರೆ ಜೀವಕ್ಕಿಂತಲೂ ಅತಿಶಯಪ್ರಿಯವಾದ, ದಾರಾಗಾರಾದಿಗಳಿಗಿಂತಲೂ ಪ್ರಿಯತಮ ವಾದ, ಅತ್ಯಂತಪವಿತ್ರವಾದ, ಕರ್ಣಾಟಕಭಾಷೋತ್ತೇಜಕಸಭಾಮಂದಿರದ ಆಧಾರ ಸ್ತಂಭವಾಗಿ ಆ ಕರ್ಣಾಟಕಮಾತೆಯ ಸೇವೆಯಾದರೂ ನಿರಂತರ ದೊರಕಬಹುದು. ಈ ಕನ್ನಡಭಾಷೆಯನ್ನು ಉನ್ನತಸ್ಥಿತಿಗೆ ತಂದರೆ ಮಹಾಯಾತ್ರಾಫಲವು; ಕಿಂಬಹುನಾ! ಸಕಲತೀರ್ಥಕ್ಷೇತ್ರಯಾತ್ರಾಫಲಗಳಾದರೂ ದೊರಕುವುವು. ಇಂತಹ ಮಾತೆಯ ಸೇವೆಯು ಎಂದು ಘಟಿಸುವುದೋ ಅಂದೇ ಸುದಿನ. ಆ ಹೊತ್ತೇ ನಾನು ಧನ್ಯ ನಾದೇನು, ಕೃತಾರ್ಥನಾದೇನು. ಇಂತಹ ಕನ್ನಡತಾಯಿಯ ಸೇವೆಯನ್ನು ನನ್ನ ಕಡೆ ಯಿಂದ ಮೇಲಿಂದಮೇಲೆ ಮಾಡಿಸಲೆಂದು ರಮಾಧವನನ್ನು ಪ್ರಾರ್ಥಿಸುವೆನು.

ಇತಿ

ಮಾತೃಭಾಷಾಭಕ್ತನಾದ

ಶ್ರೀನಿವಾಸಾಚಾರ್ಯ ಗಲಗಲಿ.

ಕನ್ನಡ—ಮಹಾರಾಷ್ಟ್ರ.

ಸೊರಟೂರು ಕುಲಕರ್ಣಿಯವರು ಧಾರವಾಡದ “ಕರ್ನಾಟಕ ವೃತ್ತ”ಕ್ಕೆ (೧೭—೭—೧೯೧೮) ಈ ಲೇಖನವನ್ನು ಬರೆದಿರುವರು. ಇಂಗ್ಲಿಷ್, ಮಹಾರಾಷ್ಟ್ರ ಭಾಷೆಗಳ ಅತಿಶಯಸಂಪರ್ಕದಿಂದ ಕನ್ನಡವು ಹೀನಸ್ಥಿತಿಗೆ ಬರುವುದೆಂಬ ಅಭಿಪ್ರಾಯವು ಇದರಲ್ಲಿ ಅಡಗಿದೆ.

ನಮ್ಮ ಕನ್ನಡ ವಾಙ್ಮಯವನ್ನು ಸುಧಾರಿಸಿಕೊಂಡು ಮಹಾರಾಷ್ಟ್ರರೇ ಮೊದಲಾದ ಮುಂದೆ ಹೆಜ್ಜೆಯನ್ನಿಟ್ಟ ಜನಗಳ ಸಮಾನಯೋಗ್ಯತೆಯನ್ನು ಪಡೆಯಲಿಕ್ಕೂ, ಈ ವರೆಗೂ ಕನಸಿನಲ್ಲಿಕೂಡ ನೆನೆಸದಿದ್ದ ಶ್ರೀಪುಲಿಕೇಶಿ, ನೃಪತುಂಗ, ವಿದ್ಯಾರಣ್ಯರೇ ಮೊದಲಾದ, ನಮ್ಮ ಕನ್ನಡದ ಏಳ್ಗೆಯನ್ನು ಒಂದುಕಾಲದಲ್ಲಿ ಆಕಾಶಕ್ಕೆ ಮುಟ್ಟಿಸಿದ್ದ ಮಹಾಪುರುಷರ ಚರಿತ್ರೆಯನ್ನು ಓದಿರೆಂದು ಉಪದೇಶಿಸಿದುದಕ್ಕೂ, ಮತ್ತು ಲೇಖಕರ ಅನುಪಮಲೇಖನಚಾತುರ್ಯದಿಂದ ನಮ್ಮ ಕನ್ನಡಪತ್ರಗಳನ್ನು ಹಣಿಕಿ ಸಹ ನೋಡದಂತೆ ಮಾಡುವ ಕೇಸರಿಯೇ ಮೊದಲಾದ ಸುಪ್ರಸಿದ್ಧ ಮಹಾರಾಷ್ಟ್ರವರ್ತಮಾನಪತ್ರಗಳನ್ನೂ ಇಂಗ್ಲಿಷ್ ವರ್ತಮಾನಪತ್ರಗಳನ್ನೂ ಸದ್ಯಕ್ಕೆ ಎಂದರೆ ನಮ್ಮ ಕನ್ನಡ ವಾಙ್ಮಯವು ಪರಿಪೂರ್ಣತೆಯನ್ನು ಹೊಂದುವವರೆಗೆ ನಮ್ಮ ಕನ್ನಡವಾಚನಾಲಯಗಳಲ್ಲಿ ತರಿಸಿದರೆ, ಅಪಕ್ವಮನಸ್ಸಿನ ನಮ್ಮ ಕನ್ನಡಿಗರು “ಅರಸನನ್ನು ಕಂಡು ಪುರುಷನನ್ನು ಮರೆತರು” ಎಂಬ ಗಾದೆಯಂತೆ ಕೇವಲ ಮಹಾರಾಷ್ಟ್ರ ಮುಂತಾದ ಪತ್ರಗಳ ವಾಕ್ಚಾತುರ್ಯಕ್ಕೆ ಬೆರಗಾಗಿ ಅವುಗಳನ್ನೇ ಓದುವ ಭ್ರಮಯುಕ್ತವಾದ ಸಂಭ್ರಮದಿಂದ ನಮ್ಮ ಐತಿಹಾಸಿಕಗ್ರಂಥಗಳನ್ನೂ ಮತ್ತು ತಕ್ಕಮಟ್ಟಿಗೆ ಕೇಸರಿಯ ಸಮಾನವಾಗಬಹುದಾದ ಯೋಗ್ಯತೆ ಇದ್ದರೂ ಕೇವಲ ನಮ್ಮ ಮೂರ್ಖತನದಿಂದ ಉತ್ತೇಜನವಿಲ್ಲದೆ ಸಾಯುತ್ತ ಬೀಳುತ್ತ ಹೊರಡುತ್ತಿರುವ ನಮ್ಮ ಕನ್ನಡವರ್ತಮಾನಪತ್ರಗಳನ್ನೂ ಸ್ವಾಭಾವಿಕವಾಗಿಯೇ ಓದದೆ ಕನ್ನಡವಾಙ್ಮಯವನ್ನು ಹೂರ ಕೊಂದುಬಿಟ್ಟಾರೆಂಬ ಭೀತಿಯಿಂದ ಸದ್ಯಕ್ಕೆ ನಮ್ಮ ಕನ್ನಡವಾಚನಾಲಯಗಳಲ್ಲಿ ಕನ್ನಡೇತರಪತ್ರಗಳನ್ನು ತರಿಸಬಾರದೆಂದೂ, ಮತ್ತೂ ಕನ್ನಡೇತರಪತ್ರಗಳಿಗೆ ಸ್ವತಃ ವರ್ಗಣೀದಾರರಾಗಿಯೂ ಇಲ್ಲವೆ ಬೇರೆ ಸಿಕ್ಕಕಡೆಯಲ್ಲಿಯಾದರೂ ಓದಿ ಅವುಗಳ ಸಾರಾಂಶವನ್ನು ನಮ್ಮ ಕನ್ನಡಪತ್ರಗಳಲ್ಲಿ ತಂದು ಕನ್ನಡವಾಙ್ಮಯವನ್ನು ಬಳೆಯಿಸಲುದ್ಯುಕ್ತರಾಗಿರೆಂದೂ ತಿಳಿಸುವ ಉಪದೇಶಕ್ಕೆ ಮನಗೊಡಿರಿ.

ಕನ್ನಡ ಬಾಂಧವರೇ! ಕೇವಲ ಅನುಕರಣಮಾಡುವುದರಲ್ಲಿಯೇ ಇಷ್ಟು ದಿವಸಗಳನ್ನು ಕಳೆದ ನಮ್ಮ ಉಳಿದ ಆಯುಷ್ಯದಲ್ಲಿಯಾದರೂ ನಾವು ಯಾರು,

ನಮ್ಮ ಭಾಷೆ ಯಾವುದು, ನಾವು ಮಾಡತಕ್ಕ ಕರ್ತವ್ಯವೇನು? ಕರ್ತವ್ಯಪರಾಙ್ಮುಖರಾದರೆ ನಮಗೆ ಎಂತಹ ದೋಷ ಬರುತ್ತದೆಂಬುದನ್ನು ವಿಚಾರಿಸುವಿರಾ? ಹಿಂದೆ ಆಗಿಹೋದ ನಮ್ಮ ಶೂರ ಅರಸರ ಚರಿತ್ರಗಳೇ ಮೊದಲಾದ ನಮ್ಮ ಕನ್ನಡಗ್ರಂಥಗಳನ್ನು ಓದುವಿರಾ? ಸಣ್ಣ ಪುಟ್ಟ ಮಹಾರಾಷ್ಟ್ರಬಂಧುಗಳು ಅಸೂಯೆಯಿಂದ ನಮ್ಮನ್ನು ಬೈದರೂ ಗಣನೆಗೆ ತಾರದೆ, ಅವರೊಡನೆ ವಾದಿಸುತ್ತ ಕೂಡುವುದರಲ್ಲಿ ವ್ಯರ್ಥವಾಗಿ ಕಾಲವನ್ನು ಕಳೆಯದೆ, ಅರ್ಧ ಬಿದ್ದುಹೋಗಿರುವ ನಮ್ಮ ಕನ್ನಡ ದೇವಿಯ ಮಂದಿರದ ಕಂಬಗಳನ್ನು ಎತ್ತಿ ಹಿಡಿಯುವಿರಾ? ನಮ್ಮ ಭಾವಿಕನ್ನಡದ ಏಳ್ಗೆಗೆ ಮನಸ್ಸುಕೊಟ್ಟು ಸಹಾಯಮಾಡುವಿರಾ? ಹಾಗೆ ಮಾಡುವುದೇ ನಮ್ಮ ಪವಿತ್ರವಾದ ಕರ್ತವ್ಯವಾದುದರಿಂದ ಸಹಾಯಮಾಡಲೇಬೇಕೆಂದು ತಮ್ಮೆಲ್ಲರನ್ನೂ ಅತಿವಿನಯದಿಂದ ಪ್ರಾರ್ಥಿಸುತ್ತೇನೆ.

ಕನ್ನಡನುಡಿ.

ಮ॥ ಮ. ಪ. ಗಣಾಚಾರ್ಯ, ಗೋಕಾಕಫಾಲ್ಸ — ಇವರು ಬೆಳಗಾವಿಯ "ದಿವಾಕರ" ಪತ್ರಿಕೆಯಲ್ಲಿ (೮-೭-೧೯೧೮) ಈ ಲೇಖನವನ್ನು ಬರೆದಿರುವರು. ಭಾಷಾಭಿಮಾನಿಗಳ ಮನಸ್ಸಿಗೆ ತರತಕ್ಕ ಕೆಲವು ಒಳ್ಳೆಯವಿಷಯಗಳು ಇವರಲ್ಲಿ ಅವೆ.

ಕೂಡಿದ ಕುಂದುಗಳೋಡಲಿ ;
ಮೂಡಲಿ ಬಗೆಬಗೆಯ ತಿದ್ದುಪಡೆಗಳ್ ನುಡಿಯೊಳ್ ॥
ನಾಡಿಗೆ ನಾಡೇ ಹೊಳೆಯಲಿ ।
ನೋಡಲಿ ನುಡಿಮಾತೆ ಮೆಚ್ಚಿ ಕುಲುಕುಲು ನಗೆಯಿಂ ॥

ಕನ್ನಡನುಡಿಯಲ್ಲಿ ಹಲವುಬಗೆಯ ಕೊರತೆಗಳುಂಟು. ಅವುಗಳನ್ನು ಹೋಗಲಾಡಿಸಲು ಹಲವುಜನರು ಹಲವುಕಡೆಯಲ್ಲಿ ಹಲವುಬಗೆಯಿಂದ ಹೆಣಗುತ್ತಿರುವರು. ಆದರೆ ಕೆಲವು ಕಸರು ಹೊರಗಿನಿಂದ ಹಾರಿಬಂದು ಕನ್ನಡನುಡಿಯಲ್ಲಿ ಕೂಡಿಕೊಳ್ಳುತ್ತಿರುವುದು. ಕಣ್ಣಿಗೆ ಕಂಡ ಕಸರನ್ನು ಆರಿಸುವುದು, ಎಲ್ಲ ಕನ್ನಡಿಗರ ಕೆಲಸ. ಅಕ್ಕಿಯೊಳಗಿನ ಹರಳುಗಳನ್ನು, ತಲೆಗೆ ಒಂದೊಂದರಂತೆ ಆರಿಸಿದರೆ, ಉಣ್ಣುವಾಗ ಎಲ್ಲರಿಗೂ ನೆಟ್ಟಗೆ!

ಪರಭಾಷೆಯೊಳಗಿನ ವಿಚಾರರಸವೈಚಿತ್ರ್ಯಗಳಿಂದ ಕನ್ನಡನುಡಿಯನ್ನು ಪುಷ್ಟೀಕರಿಸುವುದು, ಶ್ಲಾಘನೀಯವಾದ ಮಾತು! ಆದರೆ ಬಂಗಾಲ, ಮಹಾರಾಷ್ಟ್ರ ಮೊದಲಾದ ಭಾಷೆಯೊಳಗಿನ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸುವಾಗ, ಭಾಷಾಪದ್ಧತಿಗೆ ವಿರುದ್ಧವಾದ ಪ್ರಯೋಗಗಳು ಬಂದಿರುತ್ತವೆ. ಆದುದರಿಂದ ನಮ್ಮ ಕನ್ನಡನುಡಿಯು, ಬಂಗಾಲಿ, ಗುಜರಾಥಿ, ಆಂಗ್ಲ ಮೊದಲಾದ ಉಡುಪುಗಳನ್ನು ಒಮ್ಮೆಯೇ ಧರಿಸಿ, ನಟಿಸುವ ಸೀರೆಯಂತೆ ವಿಕಾರವಿಲಸಿತವಾದರೂ, ನೋಡುವವರಲ್ಲಿ ಒಂದು ಬಗೆಯ ಅಸಹ್ಯವನ್ನು ಉಂಟುಮಾಡುತ್ತಿರುವುದು. 'ಹಿಂದುಜನರು ಹಿಂದುವೇಷದಿಂದಲೇ ಒಪ್ಪುತ್ತಿರಬೇಕು.' ಎಂದು ಸ್ವಾಮಿವಿವೇಕಾನಂದರು ಹೇಳಿರುವರು. ಅದರಂತೆ ನಮ್ಮ ಕನ್ನಡನುಡಿ ಕನ್ನಡದ ಶೈಲಿಯಿಂದಲೇ ಮೆರೆಯುತ್ತಿರಬೇಕು.

ಕೆಲವರು ಆಂಗ್ಲ ಮೊದಲಾದ ಭಾಷೆಯಿಂದ ಪ್ರೌಢಶಿಕ್ಷಣವನ್ನು ಹೊಂದಿರುವರು. ಅವರ ಶೈಲಿ, ಆಯಾಭಾಷಾಶೈಲಿಯನ್ನು ಹೋಲುವುದು ಸಹಜ. ಆದರೆ ಕನ್ನಡದ ಶೈಲಿ ಕೆಡಬಾರದೆಂಬ ಕೋರಿಕೆಯಿದ್ದರೆ, ಉತ್ತಮ ಶೈಲಿಯುಳ್ಳ ಮೂರು ನಾಲ್ಕು ಕನ್ನಡ ಗ್ರಂಥಗಳನ್ನು ಓದಬೇಕು, ವ್ಯಾಕರಣದ ಕಟ್ಟುಗಳನ್ನು ಮನದಟ್ಟು ಮಾಡಿಕೊಳ್ಳಬೇಕು, ಬಳಿಕ ಕನ್ನಡದಲ್ಲಿ ಲೇಖನಗಳನ್ನು ಬರೆಯತೊಡಗಬೇಕು. ಆಗ ಅವರು ಮಾಡುವ ಕರ್ಣಾಟಕ ಭಾಷಾಸೇವೆ ಸಫಲವಾಗುವುದು.

ಕೆಲಕೆಲವರು ಕನ್ನಡ ನುಡಿಯಲ್ಲಿ ಪರಭಾಷೆಯ ಶಬ್ದಗಳನ್ನು ಮನಸ್ಸಿಗೆ ಬಂದಂತೆ ಸೇರಿಸುತ್ತಿರುವರು. ಉದಾ:—ಕಾಳಜಿಪೂರ್ವಕ ಕೆಲಸ ಮಾಡಿದನು. ಸಡಕಿನ ಮೇಲೆ ಉರುಳುವ ಗಾಲಿಯು...ಮೇಲೆ ಉಪ್ಪರಣಿಯನ್ನು ಹೊತ್ತಿದ್ದನು. ಕ್ರಮಶಃ, ಮನಸಾ, ಪ್ರಪಂಚ, ತದ್ವತ್, ಸಹಸ್ರಾರು ಮೊದಲಾದ ಪದ ಪ್ರಯೋಗಗಳು ಪ್ರಚಲಿತ ಮಾಸಿಕ ಪುಸ್ತಕಗಳಲ್ಲಿಯೂ ವಾರಪತ್ರಗಳಲ್ಲಿಯೂ ದೊರೆಯುವುವು. ಪಾಠಶಾಲೆಗಳಿಂದ ಹೊರಬಿದ್ದವರ ಬರಹಗಳಲ್ಲಾದರೋ ಸಂಸ್ಕೃತ ಶಬ್ದಗಳು ಅಡ್ಡ ಮಳೆ ಹೊಡೆದಂತೆ!! ಪರಭಾಷೆಯ ಶಬ್ದಗಳನ್ನು ಮುಟ್ಟಲೇಬಾರದೆಂದು ನಾನು ಹೇಳುವುದಿಲ್ಲ. ಕಟ್ಟಾದಲ್ಲಿ ಕೈಗಡವನ್ನು ತರಬೇಕು. ಸಾಗುವಂತಿದ್ದರೂ ಸುಮ್ಮಸುಮ್ಮನೆ ಪರಭಾಷೆಯ ಶಬ್ದಗಳನ್ನು ವಾಕ್ಯಗಳಲ್ಲಿ ಸೇರಿಸಬಾರದು.

ಸಂಸ್ಕೃತ ಶಬ್ದಗಳ ಬಳಕೆ ಹೆಚ್ಚಾಗುತ್ತ ನಡೆದಂತೆ, ಕನ್ನಡ ಶಬ್ದಗಳು ಮೂಲೆಯಲ್ಲಿ ಬೀಳಹತ್ತಿರುವುವು. ಹಳ್ಳಿಯ ಹೆಂಗಸರ ಬಾಯಲ್ಲಿರುವ ಅಚ್ಚಗನ್ನಡ ಶಬ್ದಗಳು, ಈಗಿನವರ ಲೇಖನಗಳಲ್ಲಿ ಹುಡುಕಿದರೂ ಸಿಕ್ಕಲೊಲ್ಲವು! ಕೈಯಿಂದಾದಷ್ಟು ಕನ್ನಡ ಶಬ್ದಗಳನ್ನು ಬಳಸುವ ಹವಣಿಕೆಯಲ್ಲಿರಬೇಕು. ಸಾಮಾನ್ಯ ಜನರಿಗೆ ತಿಳಿಯದಂತಹ ಶಬ್ದಗಳನ್ನು ತಿಳಿಯುವಂತೆ ಬರೆಯಬೇಕು. ಉದಾ:—ಗುಮಟದ ಒಳವುಸಿಲು (ವ್ಯಾಸ) ೧೨೪ ಫುಟ ಅದೆ. ಇದಕ್ಕೆ ಇನ್ನು ಯಾವ ಹೂಟೆ (ಹಂಚಿಕೆ) ಯನ್ನು ಮಾಡಬೇಕು? ಇಂತಹ ಹಲವು ಉದಾಹರಣೆಯನ್ನು ನಾಡನೆಲೆಗಾರನಲ್ಲಿ ನೋಡಿಕೊಳ್ಳಬಹುದು. ಹೀಗೆ ಎಲ್ಲರೂ ಹವಣಿಸಿದರೆ, ಮೂಲೆಗೆ ಬಿದ್ದಿರುವ,

ಮತ್ತು ಬೀಳುತ್ತ ಒಂದಿರುವ ಕನ್ನಡ ಶಬ್ದಗಳು, ಒಳಕೆಯಲ್ಲಿ ಒಂದು ಹೊಳೆಯು ಆರಂಭಿಸುವುವು.

ಭಾವಿಭಾಷಾಭಿಮಾನಿಗಳೆಂದರೆ ಚಿಕ್ಕಮಕ್ಕಳು. ಅವರು ಮೊದಲು ಕ್ರಮಿಕ ಪುಸ್ತಕಗಳನ್ನು ಶಾಲೆಯಲ್ಲಿ ಓದುವರು. ಆದುದರಿಂದ ಕ್ರಮಿಕ ಪುಸ್ತಕಗಳು ಮಹತ್ವವುಳ್ಳವು! ಈಗಿನ ಕ್ರಮಿಕ ಪುಸ್ತಕಗಳಲ್ಲಿ ಸಂಶಯಾತ್ಮಕ ಪ್ರಯೋಗಗಳು ಬಹಳವುಂಟು. ಕೈ. ವಾ. ಗಂಗಾಧರಯ್ಯನವರೂ, ವೆ. ಪ. ಕಟ್ಟಿಯವರೂ ಹಳೆಯ ಕ್ರಮಿಕ ಪುಸ್ತಕಗಳನ್ನು ಬರೆದಿದ್ದರು. ಅವರ ಶೈಲಿ ಎತ್ತ! ಈಗಿನ ಕ್ರಮಿಕ ಪುಸ್ತಕಗಳ ಶೈಲಿ ಎತ್ತ! ಅಷ್ಟುತಿಷ್ಟವಾದ ಶೈಲಿಯು ವಿದ್ಯಾರ್ಥಿಗಳ ತಲೆಯಲ್ಲಿ ತುಂಬುತ್ತಿರುವುದು. ಆದುದರಿಂದ ಉತ್ತಮ ಶೈಲಿಯುಳ್ಳವರಿಂದ ಕ್ರಮಿಕ ಪುಸ್ತಕಗಳನ್ನು ಬರೆಯಿಸುವುದು, ಮೊದಲನೆಯ ಕೆಲಸ.

ಇನ್ನು ವ್ಯಾಕರಣ ವಿಷಯಚರ್ಚೆಯನ್ನು ಮಾಡುವ ಲೇಖನಗಳು ಹೊರಬೀಳಬೇಕು. ಪ್ರಚಲಿತಭಾಷೆಗನುಸರಿಸಿ ದೊಡ್ಡದಾದ ಒಂದು ವ್ಯಾಕರಣವು ಹೊರಡಬೇಕು. ಬಂದ ಸಂಶಯಗಳಿಗೆ ಸಂಪೂರ್ಣವಾದ ಸಮಾಧಾನವನ್ನು ಹೇಳಲು "ನುಡಿಗಟ್ಟು" ಸಮರ್ಥವಿಲ್ಲ. ಅದು ಕನ್ನಡ ವ್ಯಾಕರಣಕ್ರಮವನ್ನು ಅನುಸರಿಸಿಲ್ಲವೆಂದು ಕೆಲವರು ಗುಣಗುಟ್ಟುವರು. ಆದುದರಿಂದ ಲಕ್ಷಣಬದ್ಧವಾದ ಒಂದು ದೊಡ್ಡ ವ್ಯಾಕರಣವು ಹುಟ್ಟಲೇ ಬೇಕು. ಆ ನೆನಪಾಯಿತು! ನೆನಪಾಯಿತು!! ಒಂದು ಪ್ರಚಂಡವಾದ ಕೋಶವೂ ಬೇಕು. ಇಡಿಯ ಕರ್ನಾಟಕದಲ್ಲಿರುವ ಹಳ್ಳಿಯ ಹೆಂಗಸರ ಬಾಯೊಳಗಿನ ಕನ್ನಡಶಬ್ದಗಳೂ ಒಕ್ಕಲಿಗರ ಬಾಯೊಳಗಿನ ಕನ್ನಡಶಬ್ದಗಳೂ ಆ ಕೋಶದಲ್ಲಿ ಬರಬೇಕು. ಪ್ರಾಚೀನಾರ್ವಾಚೀನಕಾಲಗಳ ಎಳೆಂಟು ಕಾವ್ಯಗಳೊಳಗಿನ ಕನ್ನಡ ಶಬ್ದಗಳ ಸಮಾವೇಶವಾಗಬೇಕು. ಅವುಗಳ ಹೊಸಗನ್ನಡ ರೂಪಗಳನ್ನು ಬರೆಯಬೇಕು. ಅದರಲ್ಲಿ ಸಮಸಂಸ್ಕೃತಶಬ್ದಗಳೂ, ತದ್ಭವಶಬ್ದಗಳೂ ಬರಬೇಕೆಂಬುವನ್ನು ಬೇರೆ ಹೇಳಬೇಕಾಗಿಲ್ಲ. ಶಬ್ದಗಳ ವ್ಯುತ್ಪತ್ತಿಯನ್ನು ಹೇಳುವ ಪುಸ್ತಕವಂತೂ ಬೇಕೇಬೇಕು. ಓಹೋ! ಇತ್ತನೋಡಿರಿ, ಕೆಲಕೆಲವರು ವಿಷಯಸಮರ್ಥನಕ್ಕಾಗಿ ಪರಭಾಷೆಯ ಗಾದೆಗಳನ್ನೂ ಕವಿವಾಕ್ಯಗಳನ್ನೂ ಎತ್ತಿ ಬರೆಯುವರು. ಪಾಪ! ಏನು ಮಾಡಿಯಾರು? ಕನ್ನಡ ನಾಣ್ಣುಡಿಗಳನ್ನೆಲ್ಲ ಒಟ್ಟುಗೂಡಿಸಿ ಗ್ರಂಥರೂಪವಾಗಿ ಯಾರೂ ಮುದ್ರಿಸಲೊಲ್ಲರು! ಕನ್ನಡಕಾವ್ಯಗಳು ಕನ್ನಡನಾಡ ತುಂಬೆಲ್ಲ ತುಂಬಿ ಬಿಗಿದಿರುತ್ತವೆ! ಅವುಗಳೊಳಗಿನ ನೀತಿಯ ಪದ್ಯಗಳನ್ನು ಆರಿಸಿ ಒಂದು ಸುಭಾಷಿತರತ್ನಭಾಂಡಾಗಾರವನ್ನು ಯಾರೂ ಸಿದ್ಧಗೊಳಿಸಲೊಲ್ಲರು!

"ಅದು ಬೇಕು, ಇದು ಬೇಕು. ಅದನ್ನು ಮಾಡಬೇಕು, ಇದನ್ನು ಮಾಡಬೇಕು ಎಂದು ಹೇಳಿದರೆ, ಕೊಡುವವರಾರು? ಮಾಡುವವರಾರು? ಇದೆಲ್ಲ ಮನಸ್ಸಿನೊಳಗಿನ ಮಂಡಿಗೆ!!" ಎಂದು ಕೆಲವರು ನನ್ನನ್ನು ಕೇಳಬಹುದು. ನಾವು ಅವರೊಡನೆ ಸಿಟ್ಟೆಂದು ಮಾತನಾಡುವುದಿಲ್ಲ. ಎಲೌ! ಕನ್ನಡನುಡಿಮಾಯೇ, ನಿನ್ನ ಸೇವೆಗೆಂದು ನಡಕಟ್ಟಿನಿಂತ ನಿನ್ನ ಮಕ್ಕಳು ಈಗ ಎಷ್ಟುಮಂದಿ ಇರುವರು? ಇನ್ನು

ಎಷ್ಟುಮಂದಿಯನ್ನು ಪಡೆಯುವೆ? ಎಂದು? ತಾಯೀ! ನಿನ್ನಲ್ಲಿರುವ ಕುಂದುಗಳೆಲ್ಲ ಬೆಂದುಹೋಗಿ, ನೀನು ಮೇಲ್ಮೆಯನ್ನು ಹೊಂದಿ ಮುಂದೆ ಬಂದು, ಹಿರಿಹಿರಿ ಹಿಗ್ಗಿ, ಕುಲುಕುಲು ನಗುವುದನ್ನು ಯಾರು ನೋಡುವರೋ, ಅವರೇ ಧನ್ಯರು! ಧನ್ಯರು!!

ಕಿತ್ತೂರ ಮುತ್ತಿಗೆ.

ಮ|| ರಾ. ಹ. ಗುಂಡಾಚಾರ್ಯ, ಗೋಕಾಕಫಾಲ್ಸ್ — ಇವರು ಬೆಳಗಾವಿಯ "ವಿಧಾಗಕರ" ಪತ್ರಿಕೆಗೆ (೨೯—೭—೧೯೧೮) ಈ ಲೇಖನವನ್ನು ಬರೆದಿರುವರು. ಇದರಲ್ಲಿ ಕನ್ನಡ ಸಂಸ್ಥಾನವಾದ ಕಿತ್ತೂರನ್ನು ಟಿಪ್ಪು ಸುಲ್ತಾನನು ಮುತ್ತಿದ ಸಂಗತಿ ತಿಳಿಗನ್ನಡದ ಲಲಿತ ಶೈಲಿಯಲ್ಲಿ ವರ್ಣಿತವಾಗಿದೆ. ಮೈಸೂರ ಚರಿತ್ರೆಗೆ ಸಂಬಂಧಿಸಿದ ಕೆಲವು ವಿಷಯಗಳು ಇದರಲ್ಲಿ ದೊರೆಯುತ್ತವೆ.

ಕಿತ್ತೂರ ಮುತ್ತಿಗೆಯ ಮಾತನ್ನು ತೆಗೆದ ಕೂಡಲೆ, ಆ ಸಂಸ್ಥಾನದ ಮೂಲಪುರುಷರು ಯಾರು? ಎಂಬ ಕೇಳ್ಕೆ ಹೊರಡಬಹುದು. ಆ ಕೇಳ್ಕೆಗೆ ತಾಳ್ಕೆಯನ್ನು ಒಂದೆರಡು ಮಾತಿನಲ್ಲಿ ಬರೆದುಬಿಡೋಣ.

ಕಿತ್ತೂರ ಸಂಸ್ಥಾನಿಕರು ಕನ್ನಡಿಗರು. ವೀರಶೈವ ಮತದವರು. ಅವರ ಮೂಲಪುರುಷರು ಹಿರಿಯ ಮಲ್ಲಶೆಟ್ಟಿ, ಚಿಕ್ಕಮಲ್ಲಶೆಟ್ಟಿ ಎಂಬವರು. ಅವರು ಸಾಗರ ಪ್ರಾಂತದಿಂದ ಬಂದರು. ವಿಜಾಪುರದ ದಂಡಿನಲ್ಲಿ ಸೇರಿದರು. ಅಲ್ಲಿ ಬೆಳಕಿಗೆ ಬಂದರು. ಅವರನ್ನು ವಿಜಾಪುರದ ಷಹನು ಮೆಚ್ಚಿದನು. ಹುಬ್ಬಳಿಯ ಸರದೇಶ ಮುಖಿಯನ್ನು ಕೊಟ್ಟನು. ಆಗಿನ ಮುಸಲ್ಮಾನರು ಹಿಂದೂ ಜನರ ಕಡುಹಗೆಗಳಾಗಿದ್ದರು. ಆದರೂ ಕಿತ್ತೂರ ಮೂಲಪುರುಷರು, ಮುಸಲ್ಮಾನರಲ್ಲಿಯೇ ಬೆಳೆದರು. ಮುಸಲ್ಮಾನರಲ್ಲಿಯೇ ತಮ್ಮ ಬೇಳೆಯನ್ನು ಬೇಯಿಸಿಕೊಂಡರು. ಎಂದಮೇಲೆ ಅವರು ಎಂತಹ ಕರ್ತೃತ್ವಶಾಲಿಗಳಿರಬಹುದು? ಅವರಿಂದ ಐದನೆಯ ತಲೆಯವನೇ ಮುದಿಮಲ್ಲಪ್ಪನು. ಅವನು ಕಿತ್ತೂರಲ್ಲಿ ತಳವೂರಿದನು. ಬಾಹುಬಲದಿಂದ ಸ್ವತಂತ್ರನಾಗಿ ಆಳತೊಡಗಿದನು.

ಕಿತ್ತೂರ ಸಂಸ್ಥಾನಿಕರು ಒಮ್ಮೆ ಮಹಾರಾಷ್ಟ್ರರಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಒಮ್ಮೆ ಮೈಸೂರವರಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಒಮ್ಮೆ ಮುಂಗೈಕಸುವಿನಿಂದ ಸ್ವತಂತ್ರರಾಗಿ ಆಳುತ್ತಿದ್ದರು. ಅವರಲ್ಲಿ ಮಲ್ಲಸರ್ಜನೆಂಬವನು ಬಹು ಬಲಿಷ್ಠನು. ಅವನು ಯಾರಿಗೂ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದಿಲ್ಲ. ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತಿದ್ದನು. ವಿದ್ವಾಂಸರಿಗೆ ಆಶ್ರಯಕೊಡುತ್ತಿದ್ದನು. ಮೇಲಾದ ಭಗವದ್ಭಕ್ತನಾಗಿದ್ದನು. ಅವನ ಸಡಗರವನ್ನು ಕಂಡು, ನೆರೆಹೊರೆಯ ಅರಸರ ಹೊಟ್ಟೆಯಲ್ಲಿ ಉರಪು ಹುಟ್ಟಿತು. ಕಿತ್ತೂರ ರಾಜ್ಯವು ಟೀಪುಸುಲ್ತಾನನ ಕಣ್ಣಲ್ಲಿ ಒತ್ತುತ್ತಿತ್ತು. ಅದರಿಂದ ಅವನು 'ಕಿತ್ತೂರಿಗೆ ಮುತ್ತಿಗೆಯನ್ನು ಹಾಕುವೆನು, ಮಲ್ಲಸರ್ಜನ ಬಿಂಕವನ್ನು ಬಿಡಿಸುವೆನು' ಎಂದು ಸೈನ್ಯದೊಡನೆ ಸಾಗಿ ಬಂದನು.

ಇತ್ತ ಮಲ್ಲಸರ್ಜನು ಒಡ್ಡೋಲಗದಲ್ಲಿ ಕುಳಿತಿದ್ದನು. ಆಗ ಚಾರನೊಬ್ಬನು ಅವಸರದಿಂದ ಬಂದು, ಸುಲ್ತಾನನು ದಂಡೆತ್ತಿಬರುವ ಸುದ್ದಿಯನ್ನು ಹೇಳಿದನು. ಅದನ್ನು ಕೇಳಿದಕೂಡಲೆ ಮಲ್ಲಸರ್ಜನ ಕಣ್ಣು ಕೆಂಪಾದುವು. ಕುಡಿಹುಬ್ಬು ಕುಣಿದುವು. ಅವನು ಹೊರಳಿ ಎಡಬಲಗಳನ್ನು ನೋಡಿದನು. ಕೂಡಲೆ ಭಟಮಾನ್ಯರು, 'ನಾವು ಯಾರಿಗೂ ಕಪ್ಪಕಾಣಿಕೆಗಳನ್ನು ಕೊಟ್ಟವರಲ್ಲ. ಒಬ್ಬರ ಕೈಕೆಳಗಿರುವುದಕ್ಕಿಂತ ಮಡಿಯುವುದೇ ಲೇಸು. ಮದ್ದಾನೆಯಂತೆ ಮಬ್ಬುತಲೆಗೇರಿದ ಟೀಪು ಒಮ್ಮೆ ನಮ್ಮ ಕೈಹೊಡೆತವನ್ನು ನೋಡಲಿ' ಎಂದು ಗರ್ಜಿಸಿದರು. ಅದಕ್ಕೆ ಮಂತ್ರಿಗಳೂ ತಲೆದೂಗಿದರು. ಅಷ್ಟರಲ್ಲಿ ಒಬ್ಬ ಭಟನು ಬಂದು 'ದೊರೆಯೇ ತಡವೇಕೆ? ವೈರಿ ಸಮೀಪಿಸಿದನು. ರಣಭೇರಿಯನ್ನು ಹೊಡೆಯಿಸು' ಎಂದು ಹೇಳಿದನು.

ಕೂಡಲೆ ಮಲ್ಲಸರ್ಜನು ಸೇನಾಪತಿಗೆ ಸೂಚಿಸಿದನು. ಸೇನಾಪತಿ ಸೈನಿಕರಿಗೆ ಅಪ್ಪಣೆಯನ್ನು ಕೊಟ್ಟನು. ಕಾಳಗವೆಂದರೆ ಕಾಲುಗೆದರುವ ಕಟ್ಟಾಳುಗಳೆಲ್ಲ ನಡ ಕಟ್ಟಿದರು. ರಾವುತರು ಕುದುರೆಗಳನ್ನು ಕುಣಿಸಿದರು. ಮಾವುತರು ಆನೆಗಳನ್ನು ನಡೆಸಿದರು. ತೋಪಿನ ಬಂಡಿಗಳು ಹೂಡಿದುವು. ರಣವಾದ್ಯಗಳು ಕಿವಿಯನ್ನು ಕಿವುಡುಗೊಳಿಸಿದುವು. ಸೈನ್ಯವು ಸರ್ವಸನ್ನಾಹದಿಂದ ಹೊರಹೊರಟಿತು. ಅಷ್ಟರಲ್ಲಿಯೇ, ಇದಕ್ಕೆ ನೂರುಮಡಿಯಾಗಿ ಬಂದು, ಸುಲ್ತಾನನ ಸೈನ್ಯವು ಸಾಗರದಂತೆ ಸುತ್ತುಗಟ್ಟಿತು. ಅದರಲ್ಲಿ ಎಲ್ಲರೂ ಹಲವು ಕಾಳಗಗಳನ್ನು ಮಾಡಿದವರಿದ್ದರು. ಮಲ್ಲಸರ್ಜನೆಂದರೆ 'ಅಡಕೆಯ ಹೋಳು' ಎಂದು ಟೀಪು ತಿಳಿದಿರಬಹುದಲ್ಲವೆ? ಟೀಪುವಿನ ದರ್ಪಕ್ಕೆ ಒಳ್ಳೊಳ್ಳೆಯವರು ಕೂಡ ಗಡಗಡನೆ ನಡುಗುತ್ತಿದ್ದರು, ಎಂದ ಮೇಲೆ ಮಲ್ಲಸರ್ಜನು ಎದೆಗಾರನಲ್ಲವೆ? ಅದಕ್ಕಾಗಿಯೇ ಅವನನ್ನು ಸರ್ಜನೆನ್ನುತ್ತಿರಬಹುದೇನು? ಅವನ ಸೈನ್ಯವಾದರೂ ಹೆದರಿತೇ? ಹೆದರಲಿಕ್ಕೆ ಅವರು ಯಮನೂರ ಪೀರನ ಪರಸೆಯಿಂದ ಹಿಡಿದು ತಂದ ಮಂದಿಯೇ? ಈಗಿನವರಂತೆ ಹತವೀರ್ಯರೇ? ಈಗಿನವರನ್ನು ಕಾಳಗಕ್ಕೆ ಕರೆಯುವುದೊಂದೇ ತಡ! ಕೂಡಲೆ

ಓಡಿಹೋಗಿ ಗಡ್ಡ ಬೀಳುತ್ತಾರೆ. ಅಬ್ಬಬ್ಬಾ! ಎಂತಹ ಬಂಟರೋ ಇವರು? ಎಲ್ಲೈ ಹೇಡಿಗಳೇ, ಸಾಮ್ರಾಜ್ಯ ಸಂರಕ್ಷಣೆಗಾಗಿ ಸಮರಾಂಗಣದಲ್ಲಿ ಸತ್ತರೆ ಸ್ವರ್ಗ ಸಿಕ್ಕಲಾರದೆ? ಮೊದಲಿನವರೊ! ಹುರಿಕಟ್ಟಿನ ಹೋರಿಯಂತಹ ಹುಡುಗರು! ಕೆಚ್ಚೆದೆಯ ಕಲಿಗಳು! ಉತ್ಸಾಹದಿಂದ ಉಬ್ಬಿದವರು! ಸ್ವಾಭಿಮಾನದಿಂದ ಸಜ್ಜಾದವರು! ಸ್ವರಾಜ್ಯಸಂರಕ್ಷಣೆಗಾಗಿ ರಕ್ತವನ್ನು ಧಾರೆ ಎರೆಯುವವರು!! ಅದಕ್ಕೆಂದೇ— "ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ, ಅಡಿಗಶ್ವಮೇಧಫಲ, ಸ್ವಾಮಿ ಕಾರ್ಯಕ್ಕೆ ಮಡಿಯಲೇ ಬೇಕು" ಎಂಬ ಸರ್ವಜ್ಞಮೂರ್ತಿಯ ವಚನವು, ಅವರಲ್ಲಿ ಸಡ್ಡು ಹೊಡೆಯುತ್ತಿತ್ತು!!!

ಚುಂಗಾಣಿಯ ಬಲದವರು ಒಬ್ಬರನ್ನೊಬ್ಬರು ಕೆಣಕಿದರು. ಎರಡೂ ಕಡೆಯವರು ಜೀವದ ಹಂಗುದೊರೆದು ಹೋರಾಡಿದರು. ರಾವುತರು ಕುದುರೆಗಳನ್ನು ಏರಿಸಿ ಹೊಡೆದರು. ಮಾವುತರು ಆನೆಗಳನ್ನು ಒತ್ತಿ ತುಳಿಸಿದರು. ಕಾಲಾಳುಗಳು ಕಣೆಖಟಿಲ್ ಎಂಬ ಸಪ್ಪಳಗಳಿಂದ ಕಾಳಗದ ಕಣವನ್ನು ಕಣಾಡಿಸಿಬಿಟ್ಟರು. ತೋಪುಗಳು ಢಣಾಡಿಸಿದುವು. ಎರಡೂ ತಂಡಗಳಲ್ಲಿ ರುಂಡಗಳು ಹಾರಾಡಿದುವು. ಆನೆ ಕುದುರೆಗಳು ಸೀಳಿ ಹೋಳಾದುವು. ಕಿತ್ತೂರ ಸೈನ್ಯವು ಕರಗುತ್ತ ಬಂತು. ಆದರೂ ಮಲ್ಲಸರ್ಜನು ಬೆಚ್ಚಿದನೆ? ಬೆದರಿದನೆ? ಅವನ ಕಲಿತನದ ಕೆಚ್ಚು ಕೊರಗಿತೆ? ವಿಲಯದ ಕಾಲಭೈರವನಂತೆ ಕನಲಿ ಕಿಡಿಕಿಡಿಯಾದನು. ಟೀಪುಸುಲ್ತಾನನ್ನು ಹಣಿದುಹಾಕಬೇಕೆಂದು ಹೆಣಗಿದನು. ಅಷ್ಟರಲ್ಲಿಯೇ ಸುಲ್ತಾನನ ಕಡೆಯ ಪಟುಭಟರು ಏರಿಬಂದರು. ಮಲ್ಲಸರ್ಜನನ್ನು ಸೆರೆಹಿಡಿದರು. ಸುಲ್ತಾನನು ಜಯಭೇರಿಯನ್ನು ಹೊಡೆಸಿದನು. ಕಿತ್ತೂರವರ ದಂಡು ಎಷ್ಟು, ಸುಲ್ತಾನನ ಸೈನ್ಯವು ಎಷ್ಟು? ಕೌರವರ ಕಡೆಯ ಕಲಿಗಳೆಲ್ಲ ಕೂಡಿ ಕಂದನ (ಅಭಿಮನ್ಯು) ನ್ನು ಸೋಲಿಸಿದರು. ಅದರಿಂದ ಅಭಿಮನ್ಯುವಿನ ಕಲಿತನಕ್ಕೆ ಬಂದ ಕುಂದೇನು?

ಮಲ್ಲಸರ್ಜನನ್ನೂ, ಉಳಿದ ಸೇನೆಯನ್ನೂ ಒಯ್ದು ನಳದುರ್ಗದಲ್ಲಿ ಸೆರೆಹಾಕಿದರು. 'ಹರನು ಮುನಿದರೂ ಗುರು ಕಾಯುವನು' ಎಂಬ ಕನ್ನಡ ನಾಡನುಡಿ ಸುಳ್ಳಲ್ಲ! ದುರದುಂಡಿಯಲ್ಲಿ ಶಿವಲಿಂಗಸ್ವಾಮಿ ಎಂಬ ಮಹಾ ಸಾಧುಶ್ರೇಷ್ಠರಿದ್ದರು. ಅವರ ಪರಮಭಕ್ತರಲ್ಲಿ ಮಲ್ಲಸರ್ಜನೊಬ್ಬನು. ಭಕ್ತಿದಯಾರಸಗಳು ಒಂದಾದರೆ ಯಾವುದು ತಾನೆ ಆಗಲಾರದು? ದುರದುಂಡಿಯ ಸ್ವಾಮಿಗಳು ಮಲ್ಲಸರ್ಜನನ್ನು ದಾಟಿಸಿಕೊಂಡು ಬಂದರು. ಅವರು ಬರುವಾಗ ಕೋಟೆಯ ಬಾಗಿಲ ಕೀಲುಗಳು ತಮ್ಮಿಂದ ತಾವೇ ಕಳಚಿ ಬಿದ್ದುವಂತೆ!! ಇದು ಟೀಪುಸುಲ್ತಾನನಿಗೆ ಹಿಂದಿನಿಂದ ಗೊತ್ತಾಯಿತು. ಆಗ ಅವನು 'ಕಿತ್ತೂರಿಗೆ ಮುತ್ತಿಗೆಯನ್ನು ಹಾಕಿದುದು ಕತ್ತೆಯ ಬಿಟ್ಟೆ' ಯಾಯಿತು ಎಂದು ಕುದಿಯುತ್ತ ಕುಳಿತುಕೊಂಡನು. ಇರಲಿ.

ಓ ಕನ್ನಡನಾಡಿನ ಅಣ್ಣಗಳಿರಾ, ನಾವು ಜಯಾಪಜಯಗಳ ಕಡೆಗೆ ನೋಡುವುದಿಲ್ಲ. ಧೈರ್ಯಸಾಹಸಾದಿಗುಣಗಳನ್ನು ನೋಡುವೆವು. ಕಿತ್ತೂರ ಸೈನಿಕರ ಎದೆಗಾರಿಕೆ ಕಡಮೆಯದೇ? ಅವರ ಸಾಹಸವು ಸಣ್ಣದೇ? ಮಲ್ಲಸರ್ಜನ ಭಕ್ತಿ

ಸಾಮಾನ್ಯವೇ? ಅವರಲ್ಲಿ ಎಂತಹ ವೀರ್ಯ? ಎಂತಹ ಸ್ವಾಭಿಮಾನ? ಎಂತಹ ಉತ್ಸಾಹ? ಅವರು ಯಾರು? ನಮ್ಮ ಪೂರ್ವಜನರು! ಅವರಿಗೂ ನಮಗೂ ಯಾವ ಬಗೆಯ ಹೋಲಿಕೆ? ಕತ್ತಲೆಯಾಗಲು ಹಿತ್ತಲಲ್ಲಿ ಹೋಗಲಿಕ್ಕೆ ನಮಗೆ ಹೆದರಿಕೆ! ಬಂಟತನವನ್ನು ತೋರಿಸಬೇಕೆಂದರೆ, ಇಲಿಗಳೂ ಸಿಕ್ಕಲೊಲ್ಲವು! ತಗಣೆ, ಚಿಕ್ಕಾಡ (ಚಿಕಟ) ಗಳಂತೂ ಉರುಳಾಡಿಸಿ ಕಡಿಯುತ್ತಿರುವುವು! ಅವುಗಳನ್ನು ನುಚ್ಚನುರಿಯಾಗಿ ಮಾಡಬೇಕೆಂದರೆ, ಇದಿರಿಗೆ ಬಂದು ನಿಲ್ಲಲೊಲ್ಲವು! ಇಂತಹ ಗಂಡುಗಲಿಗಳು ನಾವು!! ನಮ್ಮ ಮುಂದೆ ಮೊದಲಿನವರು ಯಾವ ಗಿಡದ ತೊಪ್ಪಲು? "ಅಡಕಲಗಡಿಗೆಯೊಳಗಿನ ಬಂಟರು." ಎಂಬ ಬಿರುದು ನಮ್ಮದೇ! ಎಲೌ, ಕರ್ಣಾಟಕ ಜನನೀ! ಮೊದಲಿನವರು ನಿನ್ನ ಹಡೆದ ಮಕ್ಕಳು, ನಾವು ಮಲಮಕ್ಕಳೇನು? ನೀನು ಅವರಿಗೆ ಯಾವತರದ ಗೃಹಶಿಕ್ಷಣವನ್ನು ಕೊಡುತ್ತಿದ್ದೆ? ಅದನ್ನೇ ನಮಗೇಕೆ ಕೊಡಲೊಲ್ಲೆ? ತಾಯಿ! ಹೇವ (ಪ್ರೇಮ) ವುಳ್ಳ ನೀನು ತುಸ ವಾದರೂ ಕರುಣಾಕಟಾಕ್ಷದಿಂದ ನೋಡಿದಲ್ಲಿ ನಾವು ಧನ್ಯರು! ಧನ್ಯರು!!

ವಿಜಯನಗರ ಸಾಮ್ರಾಜ್ಯವೂ, ಕನ್ನಡಿಗರೂ.

ಧಾರವಾಡದಲ್ಲಿ ಮ॥ ರಾಮರಾವ ನರಗುಂದಕರ ವಕೀಲ—ಇವರು ಈ ವಿಷಯವಾಗಿ ಸ್ವಾರಸ್ಯವಾದ ಒಂದು ವ್ಯಾಖ್ಯಾನವನ್ನು ಕೊಟ್ಟರು. ಇದು ಅಲ್ಲಿಯ "ಚಂದ್ರೋದಯ" ಪತ್ರಿಕೆಯ ೮, ೧೫—೨—೧೯೧೮ ನೆಯ ಸಂಚಿಕೆಗಳಲ್ಲಿ ಪ್ರಕಟವಾಗಿದೆ.

ವಿಜಪನಗರವನ್ನು ಸ್ಥಾಪಿಸಿ ವಿಜಯನಗರದಲ್ಲಿ ಬಹುಕಾಲ ಆಳಿ ವಿಜಯ ನಗರದ ಸಿಂಹಾಸನದ ಅಭಿಮಾನದಿಂದ ಅದರ ವೈಭವವನ್ನು ಬೆಳೆಯಿಸಿ, ಹಿಂದೂ ಸ್ಥಾನದ ಮಿಕ್ಕ ಹಿಂದು ರಾಷ್ಟ್ರಗಳು ಕೈಯಲ್ಲಾಗದೆ ಮೂಲೆಗುಂಪಾಗಿ ಬಿದ್ದ ಕಾಲಕ್ಕೆ ಪರಧರ್ಮಿಗಳಾದ ಶತ್ರುಗಳಿಗೆ ಎದೆಗೊಟ್ಟು ಆರ್ಯಧರ್ಮವನ್ನೂ ಆರ್ಯವಿದ್ಯೆ ಯನ್ನೂ ಕಾಪಾಡಿದವರು ಕನ್ನಡಿಗರೇ. ಹೀಗಿದ್ದು ಈಗಿನ ಕಾಲದಲ್ಲಿ ಕನ್ನಡಿಗರಿಗೆ ವಿಜಯನಗರವು ಕನ್ನಡ ರಾಜ್ಯವಾಗಿತ್ತೆಂದು ಹೇಳುವ ಪ್ರಸಂಗವು ಒದಗಿದ್ದು ದೈವ ದುರ್ವಿಲಾಸವೇ ಸರಿ. ದೈವವಶಾತ್ ನಮಗಿಂತಲೂ ಹೆಚ್ಚಿನ ಸುಸ್ಥಿತಿಯಲ್ಲಿ ಇದ್ದ ಮಹಾರಾಷ್ಟ್ರರೂ ಆಂಧ್ರರೂ ಇಂಗ್ಲೀಷ್ ವಿದ್ಯೆಯನ್ನು ಕಲಿತು ನಮಗಿಂತಲೂ

ಮುಂಚೆ ಆತ್ಮಜಾಗ್ರತೆಯನ್ನು ಹೊಂದಿ ತಮ್ಮ ತಮ್ಮ ಇತಿಹಾಸವನ್ನು ಬರೆಯಲು ಯತ್ನಿಸುವ ಕಾಲಕ್ಕೆ ಈ ಹೆಸರಾದವಿಜಯನಗರ ಸಾಮ್ರಾಜ್ಯವು ತಮ್ಮದೆಂದು ಮಹಾರಾಷ್ಟ್ರರೂ, ತಮ್ಮದೆಂದು ಆಂಧ್ರರೂ, ಪುಸ್ತಕರೂಪದಿಂದಲೂ ಲೇಖನ ರೂಪದಿಂದಲೂ ಬರೆದಿಟ್ಟಿದ್ದಾರೆ. ಮತ್ತು ಅವರ ಲೇಖನಗಳೇ ಜನರ ದೃಷ್ಟಿಗೆ ಮೊದಲು ಬಿದ್ದುದರಿಂದ ಅನೇಕ ಸಂಶೋಧಕರಿಗೆ ತಪ್ಪುತಿಳಿವಳಿಕೆಯಾಗಲಿಕ್ಕೆ ಕಾರಣ ವಾಗಿರುತ್ತದೆ. ಮಹಾರಾಷ್ಟ್ರ ವಿದ್ವನ್ಮಣಿಗಳಾದ ಡಾಕ್ಟರ್ ಭಾಂಡಾರಕರ್ ಇವರು ತಾವು ಬರೆದ History of the Dakhan ಎಂಬ ಪುಸ್ತಕದಲ್ಲಿ ಈ ಪ್ರಾಂತದೊಳಗೆ ಇತಿಹಾಸ ಕಾಲದಲ್ಲಿ ಆಳಿದ ಕರ್ಣಾಟಕ ರಾಜವಂಶದವರಾದ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಕಾಲಚರ್ಯರು ಮುಂತಾದ ವೈಭವಶಾಲಿಗಳಾದ ಎಲ್ಲ ರಾಜ ಮನೆತನಗಳೂ ಮಹಾರಾಷ್ಟ್ರ ಮನೆತನಗಳೆಂದೂ, ಆಕಾಲದ ಜನರು ಮಹಾರಾಷ್ಟ್ರ ಭಾಷೆಯನ್ನೇ ಆಡುವ ಜನರೆಂದೂ ಬರೆದಿಟ್ಟುದರಿಂದ ಅದನ್ನೇ ವೇದವಾಕ್ಯವೆಂದು ನಂಬಿ ಅವರ ತರುವಾಯ ಸರ ದೇಸಾಯಿ ಮುಂತಾದ ಮಹಾರಾಷ್ಟ್ರ ಇತಿಹಾಸ ಕಾರರು ವಿಜಯನಗರದ ರಾಜವಂಶವು ಕೂಡ ಮಹಾರಾಷ್ಟ್ರರಾಜವಂಶವೆಂದೂ ವಿಜಯನಗರದವರು ಮಹಾರಾಷ್ಟ್ರೀಯರೆಂದೂ ಏನೂ ಆತಂಕವಿಲ್ಲದೆ ತಮ್ಮ ಇತಿಹಾಸದಲ್ಲಿ ಬರೆದಿಟ್ಟಿರುತ್ತಾರೆ. ಅಲ್ಲದೆ ಮಹಾರಾಷ್ಟ್ರ ಇತಿಹಾಸವು ಪುರಾತನಕಾಲ ಷ್ಟಂದೂ ಕರ್ಣಾಟಕಕ್ಕೆ ಇತಿಹಾಸವೇ ಇಲ್ಲವೆಂದೂ ಬರೆದಿದ್ದಾರೆ. ಇದೇ ಮಾದಿರಿ ಯಾಗಿ ಆಂಧ್ರರು ಈಗಿನಕಾಲಕ್ಕೆ ಆಂಧ್ರರಾಷ್ಟ್ರೀಯತ್ವದ ಅಭಿಮಾನದಿಂದ ತುಂಬಿ ತುಳುಕಿ ವಿಜಯನಗರವು ಆಂಧ್ರರಾಜ್ಯವು ಮತ್ತು ವಿಜಯನಗರವು ಇದ್ದ ದೇಶವು ಸಹ ಆಂಧ್ರದೇಶವೆಂದು ಬರೆದಿಟ್ಟಿರುತ್ತಾರೆ. ಆದರೆ ಮೇಲೆ ವರ್ಣಿಸಿದ ಅನೇಕ ರಾಜಮನೆತನಗಳು ವಿಜಯನಗರಸಾಮ್ರಾಜ್ಯವು ಕೇವಲ ಕನ್ನಡಿಗರದೇ ಇದ್ದು ಕನ್ನಡಿಗರು ಮಾತ್ರ ಸುಮ್ಮನೆ ಕುಳಿತಿದ್ದುದರಿಂದ ಮೇಲಿನ ನಮ್ಮ ನೆರೆಹೊರೆಯ ರಾಷ್ಟ್ರದವರ ಅಸತ್ಯಲೇಖನಗಳೇ ವಿದೇಶಿಯರಿಗೂ ನಮ್ಮಗಳಿಗೂ ಸಹ ನಿಜವೆಂದು ತೋರುತ್ತಿವೆ. ಮತ್ತೆ ನಿಜಸಂಗತಿ ತಿಳಿಯದೆ ಇದ್ದುದರಿಂದ ಅನೇಕ ಮೂಢ ಕನ್ನಡಿಗರು ಅವರ ಲೇಖಗಳನ್ನೇ ಓದಿ ಅವು ನಿಜವೆಂದು ಭಾವಿಸಿ “ಕನ್ನಡಿಗರಿಗೆ ಇತಿಹಾಸವಿಲ್ಲ, ಕನ್ನಡಿಗರಲ್ಲಿ ಶೌರ್ಯವಿಲ್ಲ, ಕನ್ನಡ ನುಡಿ ಕಾಡುನುಡಿ” ಎಂದು ಪ್ರಲಾಪಗಳನ್ನು ಮಾಡಿ ಕರ್ಣಾಟಕ ದೇಶದ ದ್ರೋಹವನ್ನು ಮಾಡತೊಡಗಿದ್ದಾರೆ. ವಿಜಯನಗರವು ಇದ್ದ ನಾಡಿನಲ್ಲಿ ಈವತ್ತಿಗೂ ಕೇವಲ ಶುದ್ಧಕನ್ನಡನುಡಿಯೇ ಪ್ರಚಾರದಲ್ಲಿದೆ. ವಿಜಯನಗರದ ಒಂದು ಭಾಗವಾದ ಹೊಸಪೇಟೆಯ ಹೆಸರು ಕನ್ನಡವೇ. ವಿಜಯನಗರದಲ್ಲಿ ಸದ್ಯಕ್ಕೆ ದೊರೆಯುವ ಶಿಲಾಲಿಪಿಗಳು ಕೇವಲ ಕನ್ನಡದಲ್ಲಿಯೇ ಇರುತ್ತವೆ. ವಿಜಯನಗರದ ಹಾಳಪಟ್ಟಣದಲ್ಲಿ ಎತ್ತ ನೋಡಿದರತ್ತ ಕಾಣುವ ಮೂರ್ತಿಗಳೂ ಗುಡಿಗಳೂ ಪೇಟೆಗಳೂ ಈವತ್ತಿಗೂ ಕನ್ನಡ ಹೆಸರನ್ನೇ ಧರಿಸಿರುತ್ತವೆ. ಉದಾ. ಕಡಲೆಕಾಳ ಗಣಪ್ಪ, ಸಾಸಲೆಕಾಳ ಗಣಪ್ಪ, ಉದ್ದಾನ ವೀರಭದ್ರ, ತ್ವರಿತ ಕಾವಲೆ, ಮಹಾನವಮಿ ದಿಬ್ಬ, ಆನೆಸಾಲು, ಸೂಳೆ ಬಾಜಾರ, ಮಲ್ಲಪ್ಪನಗುಡಿ, ಅಳಿಯಾರಾಮನ ಗರಡಿಮನೆ ಈ ಪ್ರಕಾರ ಅನೇಕ ಅಚ್ಚಗನ್ನಡ ಹೆಸರುಗಳೇ ಎಲ್ಲಿ

ನೋಡಿದರಲ್ಲಿ ಕಾಣುತ್ತವೆ. ಕೃಷ್ಣನ ಗುಡಿಯಲ್ಲಿಯ ಶಿಲಾಲೇಖವು ಕೇವಲ ಕನ್ನಡದಲ್ಲಿಯೇ ಇದೆ. ಕನ್ನಡದ ಹೊರತಾಗಿ ವಿಜಯನಗರದಲ್ಲಿಯೂ ಅದರ ಸುತ್ತಮುತ್ತಲಿನ ನಾಡಿನಲ್ಲಿಯೂ ಬೇರೆ ದೇಶ ಭಾಷೆಇಲ್ಲ. ಸದ್ಯಕ್ಕೆ ಮಾತ್ರ ಸರಕಾರದವರ ಕಾಗದ ಪತ್ರಗಳಲ್ಲಿ ಕನ್ನಡಿಗರ ಮೂರ್ತಿಮತ್ತಾದ ಸೋಮಾರಿತನದ ಫಲದಿಂದ ಆಂಧ್ರ ಭಾಷೆ ಕಾಣುತ್ತದೆ. ಮತ್ತು ಈ ಸಂಸ್ಥೆಯನ್ನು ಮುಂದೆ ಮಾಡಿ ಆಂಧ್ರರು ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಜಿಲ್ಲೆ ಎಂದು ಕೂಗಾಟವನ್ನೆಬ್ಬಿಸಿ ಆ ಕರ್ಣಾಟಕ ಭಾಗವನ್ನು ನುಂಗಿಬಿಟ್ಟಿದ್ದಾರೆ. ವಿಜಯನಗರವನ್ನು ಸ್ಥಾಪಿಸಿದ ಶ್ರೀ ವಿದ್ಯಾರಣ್ಯಸ್ವಾಮಿಗಳಿಗೆ ಈವತ್ತಿಗೂ 'ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯ' ರೆಂಬ ಬಿರುದು ಇದೆ. ವಿಜಯನಗರದ ಮೊದಲನೆಯ ಅರಸನಾದ ಹರಿಹರರಾಯನು ದೋರಸಮುದ್ರದಿಂದ ಬಂದ ರಾಜನೆಂದು ಶೃಂಗೇರಿಯಲ್ಲಿ ದೊರೆತ ಶಾಸನ ಲೇಖದ ಸಂದರ್ಭದ ಮೇಲಿಂದ ಪೂರ್ಣವಾಗಿ ಕಂಡುಬರುತ್ತದೆ. ಹೀಗಿದ್ದು ಆಂಧ್ರರ ಜಾಣತನದಿಂದ ಇಂಗ್ಲಿಷ್ ಇತಿಹಾಸಕಾರರೂ ಅದನ್ನು ಓದಿದ ದೇಶೀಯ ಜನರೂ ಹರಿಹರರಾಯನನ್ನು ಓರಂಗಲ್ಲಿಂದ ಬಂದ ಪುರುಷನೆಂದು ಭಾವಿಸುತ್ತಾರೆ. ಹರಿಹರರಾಯನಿಗೆ ಹರಿಯಪ್ಪ ಒಡೆಯರು ಎಂಬ ಬಿರುದು ಇತ್ತು. ಹರಿಹರರಾಯನ ಕಾಲದ ಶಿಲಾಲೇಖಗಳಲ್ಲಿ ಇದು ಕಂಡುಬರುತ್ತದೆ. ಈ ಬಿರುದು ಹರಿಹರರಾಯನಿಗೆ ದೋರಸಮುದ್ರದ ಬಲ್ಲಾಳ ಮಹಾರಾಜರ ಕಡೆಯಿಂದ ದೊರೆತ ಕೇವಲ ಕನ್ನಡ ಬಿರುದು ಇರುತ್ತದೆ. ಬುಕ್ಕರಾಯನ ಶಿಲಾಶಾಸನಗಳಲ್ಲಿ ಅವನಿಗೆ 'ಭಾಷೆಗೆ ತಪ್ಪುವ ರಾಯರ ಗಂಡ' ನೆಂಬ ಕೇವಲ ಕನ್ನಡ ಬಿರುದು ಇತ್ತೆಂದು ತೋರುತ್ತದೆ. ಮತ್ತು ಅವನು ಆಂಧ್ರರನ್ನು ಗೆದ್ದನೆಂದು ಶಿಲಾಲೇಖದಲ್ಲಿ ಬರೆದಿರುತ್ತದೆ. ಬುಕ್ಕರಾಯನು ಆಂಧ್ರನಾಗಿದ್ದರೆ ಅವನು ಆಂಧ್ರರನ್ನು ಜಯಿಸಿದನೆಂದು ಎಂದಿಗೂ ಬರೆಯುತ್ತಿರಲಿಲ್ಲ. ಬುಕ್ಕರಾಯನ ಮಗನಾದ ಹರಿಹರರಾಯನು ಕನ್ನಡ ಭಾಷೆಗೆ ಆಶ್ರಯವಾಗಿದ್ದನು. ಅವನಿಗೆ ಕರ್ಣಾಟಕವಿದ್ಯಾವಿಲಾಸನೆಂಬ ಬಿರುದು ಇತ್ತು. ಮತ್ತು ಬುಕ್ಕರಾಯನ ಸೊಸೆ ಬರೆದ ವೀರಕಂಪಣಚರಿತೆ ಎಂಬ ಸಂಸ್ಕೃತ ಕಾವ್ಯದಲ್ಲಿ ಕರ್ಣಾಟಕ ದೇಶದಾಚೆ ದ್ರಾವಿಡ ದೇಶವನ್ನು ವೀರಕಂಪಣ್ಣನು ಪ್ರವೇಶಿಸಿದನೆಂದು ಬರೆದಿರುತ್ತದೆ. ೨-ನೆಯ ದೇವರಾಯನಿಗೆ ಇಮ್ಮಡಿ ದೇವರಾಯನೆಂದು ಕರೆಯುತ್ತಾರೆ. ಮತ್ತು ಅವನು ಆನೆಯಬೇಟೆಗಾರನೆಂಬ ಬಿರದನ್ನು ಧರಿಸಿದವನು. ಶ್ರೀಕೃಷ್ಣದೇವರಾಯನಿಗೆ ಆ ಕಾಲದ ಆಂಧ್ರಕವಿಗಳು ಕನ್ನಡ ರಾಜ್ಯರಮಾರಮಣನೆಂದು ತಮ್ಮ ಗ್ರಂಥಗಳಲ್ಲಿ ಸಂಬೋಧಿಸಿದ್ದಾರೆ. ರಾಮರಾಜನು ಆಳಿಯರಾಮರಾಜನೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದನು. ಶ್ರೀ ಕೃಷ್ಣದೇವರಾಯನು ಮಾತ್ರ ತೆಲಗುನಾಡಿನವನೆಂದು ಭಾವಿಸಬಹುದು. ಆದರೆ ಅವನ ಹಿಂದೆ ಆಳಿದ ಅರಸರೂ ಮತ್ತು ರಾಮರಾಜನೇ ಮೊದಲಾದವರೂ ಕನ್ನಡಿಗರು. ರಾಮರಾಜನ ವಂಶಕ್ಕೆ ಇತಿಹಾಸದಲ್ಲಿ ಈವತ್ತಿಗೂ ಕರ್ಣಾಟಕವಂಶವೆಂದು ಕರೆಯುತ್ತಾರೆ. ಈ ಕಾಲದ ಹೆಸರಾದ ಮಹಾಪುರುಷರ ಹೆಸರುಗಳು ಕೂಡ ಕೇವಲ ಕನ್ನಡವಲ್ಲಿಯೇ ಇರುತ್ತವೆ. ಬಸವಯ್ಯ ಧನ್ನನಾಯಕ, ಮಲ್ಲಪ್ಪ ಒಡೆಯರ ಸಾಯಣ ಮಂತ್ರಿ, ಕಂಪಣ್ಣ,

ದಂಡಾಧಿಪತಿಗಂಡ ಬಚ್ಚಪ್ಪ, ಮಲ್ಲನಾಥ, ತಿಮ್ಮರಾಜ ಈ ಹೆಸರಿನವರು ಕೇವಲ ಕನ್ನಡಿಗರೇ ಆಗಿದ್ದಾರೆ. ಈವತ್ತಿಗೂ ಆನೆಗುಂದಿ ರಾಜರಲ್ಲಿ ಕನ್ನಡ ಕಾಗದ ಪತ್ರಗಳು ಅನೇಕವಾಗಿ ದೊರೆಯುತ್ತವೆ ಅವುಗಳನ್ನು ಶೋಧನೆ ಮಾಡಿದವರಿಗೆ ಮನಸ್ಸಿಗೊಪ್ಪುವ ಅನೇಕ ಸಂಗತಿಗಳು ದೊರೆಯಬಹುದು.

ವಿಜಯನಗರದ ತಾಮ್ರಶಾಸನಗಳಲ್ಲಿಯೂ ಶಿಲಾಶಾಸನಗಳಲ್ಲಿಯೂ ಶಾಸನದ ಲಿಪಿ ಯಾವ ಭಾಷೆಯಲ್ಲಿ ಇದ್ದರೂ ಶ್ರೀ ವಿರುಪಾಕ್ಷ ಎಂಬ ರಾಜವಿಳಾಸವು ಮಾತ್ರ ಕನ್ನಡದಲ್ಲಿಯೇ ಇರುತ್ತದೆ. ವಿಜಯನಗರದಂತಹ ಸಾಮ್ರಾಜ್ಯದ ರಾಜಭಾಷೆಯಾದ ಕನ್ನಡವು ಈಗಿನ ಕಾಲದ ಕನ್ನಡಿಗರಿಗೆ ಮಾತ್ರ ಕಾಡುಭಾಷೆಯೆಂದು ತೋರುವುದು ಎಷ್ಟು ನಾಚಿಕೆಗೇಡು! ಪಶ್ಚಿಮ ಚಾಳುಕ್ಯರ ಮತ್ತು ವಿಜಯನಗರದ ರಾಜರ ಸಾಮ್ರಾಜ್ಯದ ಧ್ವಜಚಿಹ್ನವು ವರಾಹ ಮೂರ್ತಿ. ಪಶ್ಚಿಮ ಚಾಳುಕ್ಯರು ಕೇವಲ ಕನ್ನಡಿಗರು. ದಕ್ಷಿಣ ಹಿಂದುಸ್ಥಾನದಲ್ಲಿ ಅವರಹಾಗೆ ಹೆಸರಾದ ರಾಜವಂಶವು ವಿಜಯನಗರದವರ ಹೊರತಾಗಿ ಬೇರೆ ಯಾವುದೂ ಇಲ್ಲ. ತಮ್ಮ ಪೂರ್ವಜರಾದ ಚಾಳುಕ್ಯರ ಧ್ವಜಚಿಹ್ನೆಯನ್ನೇ ವಿಜಯನಗರದವರು ಧರಿಸಿದುದರಿಂದ ಕೇವಲ ಕನ್ನಡ ರಾಷ್ಟ್ರವೆಂಬ ಅಭಿಮಾನವೇ ವಿಜಯನಗರದ ರಾಜರಲ್ಲಿ ತುಂಬಿ ತುಳುಕುತ್ತಿತ್ತೆಂದು ತೋರಿಸಲಿಕ್ಕೆ ಬೇರೆ ಕಾರಣವು ಅಗತ್ಯವಿಲ್ಲ. ವಿಜಯನಗರದವರ ಕಾಲದಲ್ಲಿ ಹೆಸರಾದ ಕನ್ನಡಕವಿಗಳು ಅನೇಕರು ಆಗಿ ಹೋಗಿರುತ್ತಾರೆ. ಮಂಗರಾಜ, ಭೀಮಕವಿ, ನೃಸಿಂಹಕವಿ ಮುಂತಾದ ಕವಿಗಳು ಹರಿಹರರಾಯನ ಕಾಲದಲ್ಲಿ ಉದಯಿಸಿದರು. ಮಂಗರಾಜನು ತನ್ನ ಗ್ರಂಥಾಂತರದಲ್ಲಿ "ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ" ಎಂದು ಬರೆದಿದ್ದಾನೆ. ಮಧುರ ಕವಿ ೨-ನೆಯ ಹರಿಹರನ ಕಾಲದವನು. ವಿಜಯನಗರದ ಮಲ್ಲಿಕಾರ್ಜುನರಾಯನ ಕಾಲದ ಆಸ್ಥಾನಕವಿಯಾದ ಚಾಮರಸಕವಿ ಪ್ರಭುಲಿಂಗಲೀಲೆ ಎಂಬ ವೀರಶೈವ ಗ್ರಂಥವನ್ನು ಬರೆದಿರುತ್ತಾನೆ. ಮತ್ತು ಈ ಕವಿಯ ಪ್ರಭಾವದಿಂದಲೇ ಮಲ್ಲಿಕಾರ್ಜುನರಾಯನು ವೀರಶೈವಮತವನ್ನು ಧರಿಸಿದನು. ಪ್ರಭುಲಿಂಗಲೀಲೆಯು ತಮಿಳಿಗೂ ತೆಲುಗಿಗೂ ಭಾಷಾಂತರವಾಗಿರುತ್ತದೆ. ಕರ್ಣಾಟಕದಲ್ಲಿ ಈವತ್ತಿಗೂ ಮೆರೆಯುತ್ತಿರುವ ವೈಷ್ಣವ ದಾಸಕೂಟವು ವಿಜಯನಗರದವರ ಕಾಲದಲ್ಲಿಯೇ ಪ್ರಾರಂಭವಾಯಿತು. ದಾಸಶಿರೋಮಣಿಯಾದ ಪುರಂದರದಾಸರ ಮಂದಿರವು ಈವತ್ತಿಗೂ ವಿಜಯನಗರದಲ್ಲಿ ಚಕ್ರತೀರ್ಥದ ಹಾದಿಯ ಮೇಲೆ ಕಾಣುತ್ತದೆ. ಪ್ರಸಿದ್ಧ ಸೋಮೇಶ್ವರಕವಿ, ರಾಘವಾಂಕ, ವಿರೂಪಾಕ್ಷಪಂಡಿತ ಮುಂತಾದವರು ಕೇವಲ ವಿಜಯನಗರದ ಕಾಲದಲ್ಲಿಯೇ ಉದಯಿಸಿದರು. ರಾಜರು ಕನ್ನಡಿಗರಾಗಿದ್ದುದರಿಂದಲೇ ಪ್ರಸಿದ್ಧರಾದ ಅನೇಕ ಕನ್ನಡ ಕವಿಗಳು ಆ ಕಾಲದಲ್ಲಿ ಪ್ರಕಾಶಿಸಿದರು ವಿಜಯನಗರವು ೧೫೬೫-ನೆಯ ಇಸವಿಯಲ್ಲಿ ಹಾಳಾಯಿತು. ರಾಜವೈಭವವು ನಷ್ಟವಾದುದರಿಂದ ರಾಜಮನೆತನವು ಮುಂದೆಸಾಗಿದರೂ ಪೂರ್ವದ ವೈಭವವು ಉಳಿಯಲಿಲ್ಲ. ತಾಳಿಕೋಟೆಯ ಕಾಳಗದಲ್ಲಿ ವಿಜಯನಗರದ ಹೆಸರಾದ ದಂಡು ಮಡಿದುಹೋಯಿತು.

ಕನ್ನಡಿಗರ ತೇಜವು ಲೋಪವಾಯಿತು. ಕನ್ನಡಿಗರ ಹಗೆಗಳಾದ ವಿಜಾಪುರ ಮತ್ತು ಗೋವಳಕೊಂಡೆಯ ಸುಲ್ತಾನರು ಕನ್ನಡಿಗರ ಸಾಮ್ರಾಜ್ಯವನ್ನು ನಷ್ಟಮಾಡಿದರೂ ಕನ್ನಡಿಗರ ದ್ವೇಷವನ್ನು ಮಾಡುವುದು ಬಿಡಲಿಲ್ಲ. ವಿಜಾಪುರದವರ ರಾಜ್ಯವು ಕೇವಲ ಕರ್ಣಾಟಕದಲ್ಲಿ ಹಬ್ಬಿದ್ದರೂ ಕನ್ನಡ ಜನರಿಗೆ ಕನ್ನಡ ಭಾಷೆಗೆ ವಿಜಾಪುರದವರಲ್ಲಿ ರಾಜಾಶ್ರಯವು ದೊರೆಯಲಿಲ್ಲ. ಕನ್ನಡರಾಜರು ನಷ್ಟವಾದರೂ ಕನ್ನಡಿಗರು ಅವರಿಗೆ ಹಗೆಗಳಂತೆ ತೋರುತ್ತಿದ್ದರು. ಭಾಷೆಗಳಲ್ಲಿ ಮಹಾರಾಷ್ಟ್ರಭಾಷೆಗೆ ವಿಜಾಪುರದ ಸುಲತಾನರು ಆಶ್ರಯವನ್ನು ಕೊಟ್ಟರು. ರಾಜಾಶ್ರಯವು ಹೋದುದರಿಂದ ಕನ್ನಡವು ಮೂಲೆಗೆ ಬಿತ್ತು. ಇದೇ ಹಾಡು ಗೋವಳಕೊಂಡೆಯ ರಾಜ್ಯದಲ್ಲಿಯೂ ಆದುದು ಕಂಡುಬರುತ್ತದೆ. ಮೈಸೂರು, ಬೇದನೂರು ಮುಂತಾದ ಕರ್ಣಾಟಕಸಂಸ್ಥಾನಗಳಲ್ಲಿ ಕನ್ನಡಕ್ಕೆ ರಾಜಾಶ್ರಯವು ತಕ್ಕಮಟ್ಟಿಗೆ ಸಿಕ್ಕಿದುದರಿಂದ ಈವತ್ತಿಗೂ ಆ ಭಾಷೆ ಜೀವದಿಂದ ಉಳಿದಿರುತ್ತದೆ. ಆದರೆ ಇತ್ತ ಕರ್ಣಾಟಕವು ತಾಳೀಕೋಟೆಯ ಕಾಳಗದಲ್ಲಿಯೇ ಸೌಭಾಗ್ಯವಿಹೀನವಾಯಿತು. ಜನರಲ್ಲಿಯ ಸ್ವಾಭಿಮಾನವು ಕಾಲಾಂತರದಲ್ಲಿ ನಷ್ಟವಾಯಿತು. ದೇಶಾಭಿಮಾನವೂ ಭಾಷಾಭಿಮಾನವೂ ಹೊರಟುಹೋದುದರಿಂದ ಈ ಪ್ರಾಂತದ ಕನ್ನಡಿಗರ ಕಡೆಯಿಂದ ಅದರ ತರುವಾಯ ಯಾವುದೂ ಕಾರ್ಯವಾಗಲಿಲ್ಲ. ಕರ್ಣಾಟಕವು ಆ ಕಾಲದಲ್ಲಿಯೇ ತುಂಡುತುಂಡಾದುದರಿಂದ ಕರ್ಣಾಟಕರಲ್ಲಿ ಪರಸ್ಪರಪ್ರೇಮವು ಅಳಿದುಹೋಯಿತು. ಕರ್ಣಾಟಕವು ಬೇರೆ ಬೇರೆ ರಾಜರ ಕೈವಶವಾದುದರಿಂದ ಕನ್ನಡಿಗರಲ್ಲಿಯ ಸಂಘಶಕ್ತಿ ಲೋಪವಾಯಿತು. ವಿಜಾಪುರದವರ ರಾಜ್ಯವೈಭವವು ನಷ್ಟವಾಗುವಕಾಲಕ್ಕೆ ಮಹಾರಾಷ್ಟ್ರರ ವೈಭವವು ಬೆಳೆಯಹತ್ತಿತ್ತು. ಮಹಾರಾಷ್ಟ್ರರ ರಾಜ್ಯವು ಬೆಳೆಯುತ್ತ ಕರ್ಣಾಟಕದ ಉತ್ತರಭಾಗವನ್ನು ಆಕ್ರಮಿಸಿತು. 'ರಾಜಾಕಾಲಸ್ಯ ಕಾರಣಂ' ಎಂಬಂತೆ ಕನ್ನಡಿಗರು ಮೊದಲೇ ಸ್ವಾಭಿಮಾನಕ್ಕೆ ಎರವಾದುದರಿಂದ ಮಹಾರಾಷ್ಟ್ರಭಾಷೆಯನ್ನೇ ದರಬಾರಿನಲ್ಲಿ ಉಪಯೋಗಿಸಲಿಕ್ಕೆ ಪ್ರಾರಂಭಿಸಿದರು. ಪೇಶವೆಯರ ಕಾಲದಲ್ಲಿ ಈ ಪ್ರಾಂತದ ಜನರು-ವಿಶೇಷವಾಗಿ ಬ್ರಾಹ್ಮಣರು-ಕನ್ನಡಕ್ಕೆ ತಮ್ಮ ಮನೆತನದ ಕೆಲಸದಲ್ಲಿ ಸಹ ಆಶ್ರಯವನ್ನು ಕೊಡಲಿಲ್ಲ. ಜನರಲ್ಲಿ ಅಭಿಮಾನವು ಹೊರಟುಹೋದುದರಿಂದ ಕರ್ಣಾಟಕ ಪ್ರಾಂತದ ಉತ್ತರ ಸೀಮೆ ಹಿಂದಕ್ಕೆ ಸರಿಯುತ್ತ ಬಂದಿತು. ಮತ್ತು ಈವತ್ತಿಗೂ ಈ ಕ್ರಮವು ನಡೆದಿರುತ್ತದೆ. ಪೂರ್ವಸೀಮೆಯ ಗತಿಯಾದರೂ ಇದೇ. ಕನ್ನಡಿಗರು ಸ್ವತ್ವವನ್ನು ಮರೆತು ಬಿಟ್ಟುದರಿಂದ ಪೂರ್ವದ ವೈಭವವು ಅವರಿಗೆ ಸ್ವಪ್ನವೆಂದು ತೋರಿತು. ಈ ಸ್ಥಿತಿ ಈವತ್ತಿಗೂ ಇದೆ. ಸದ್ಯಕ್ಕೆ ಹಿಂದುಸ್ಥಾನದಲ್ಲಿ ನಡೆದ ಲವಲವಿಕೆಯಲ್ಲಿ ಕನ್ನಡನಾಡು ಹಿಂದೆ ಬಿದ್ದಿದೆ. ಮದ್ರಾಸ ಇಲಾಖೆಯಲ್ಲಾಗಲಿ, ಮುಂಬಯಿ ಇಲಾಖೆಯಲ್ಲಾಗಲಿ ಇಂಗ್ಲಿಷರ ಆಡಳಿತದಲ್ಲಿ ಕನ್ನಡಿಗರಿಂದ ಯಾವ ಮಹತ್ವದ ಕಾರ್ಯವೂ ಆಗಲಿಲ್ಲ. ಮತ್ತು ಕಾರ್ಯವನ್ನು ಮಾಡಬೇಕೆಂಬ ಉತ್ಸಾಹವು ಯಾರಲ್ಲಿಯೂ ಇಲ್ಲ. ಸ್ವಭಾಷೆ ಮತ್ತು ಸ್ವೇತಿಹಾಸ ಇವುಗಳ ಬಗ್ಗೆ ನಾವು ಕನ್ನಡಿಗರು ಈವತ್ತಿನವರೆಗೆ ತೋರಿಸಿದ ಅನಾಸಕ್ತಿಯಿಂದ ಈ ಪ್ರಕಾರ ಮೂಲೆಗೆ ಬಿದ್ದಿರುತ್ತೇವೆ. ವಿಜಯನಗರದ ಸೋಜ್ವಲವಾದ

ಇತಿಹಾಸವನ್ನು ನಮ್ಮ ಕಣ್ಣಿದಿರಿಗೆ ಇಟ್ಟುಕೊಂಡು ನಾವು ಮುಂಬಯಿ ಕರ್ಣಾಟಕದ ಕನ್ನಡಿಗರು ಉತ್ತರಾಭಿಮುಖವಾದ ನಮ್ಮ ದೃಷ್ಟಿಯನ್ನು ದಕ್ಷಿಣದ ಕಡೆಗೆ ತಿರುವಿದರೆ—ಮತ್ತು ಇದೇ ಮಾದರಿಯಾಗಿ ಪೂರ್ವದಿಕ್ಕಿಗೆ ನೋಡುತ್ತಿರುವ ಮದ್ರಾಸ ಇಲಾಖೆಯ ಕನ್ನಡಿಗರು ಪಶ್ಚಿಮಾಭಿಮುಖರಾಗಿ ಇಡಿಯ ಕರ್ಣಾಟಕವನ್ನೇ ತಮ್ಮ ಧ್ಯೇಯವೆಂದು ಭಾವಿಸಿ ನೆರೆಹೊರೆಯವರ ನೆರಳಿನಲ್ಲಿ ನಿಲ್ಲದೆ ತಮ್ಮ ಸ್ವಂತ ಗುಡಿಸಲಲ್ಲಿ ಕುಳಿತು ಇನ್ನಾದರೂ ಸ್ವತಃ ವಿಚಾರವನ್ನು ಚೆನ್ನಾಗಿ ಮಾಡಿ ಭಾವಿಹಿಂದೀ ರಾಷ್ಟ್ರಘಟನೆಯ ಕೆಲಸದಲ್ಲಿ ಕರ್ಣಾಟಕಸ್ಥರೆಂಬ ಭಾವನೆಯಿಂದ ಕೆಲಸವನ್ನು ಮಾಡಿದರೆ ಕರ್ಣಾಟಕದ ಉದ್ಧಾರವು ನಿಶ್ಚಯವಾಗಿ ಆಗುವುದು.

ಸಂಪುಟ ೩] 1919 [ಸಂಚಿಕೆ ೪

The Kannada Academy Journal

(January)

ಕರ್ಣಾಟಕ

ಸಾಹಿತ್ಯಪರಿಷತ್ಪತ್ರಿಕೆ.

ಕಾಳಯುಕ್ತ ಸಂ॥ ಪುಷ್ಯ

ವಾರ್ಷಿಕಚಂದಾ ರೂ. ೩ ಬಿಡಿಸಂಚಿಕೆ ರೂ. ೧

ವಿ ಷ ಯ ಸೂ ಚಿ ಕೆ.

ಆಧುನಿಕಕವಿತೆಗಳು	...	...	೧— ೪
ಮಹಮುದ್‌ಗವಾನನ ಚರಿತ್ರೆ	...	...	೫—೨೧
ಕವಿತಾವರ್ಧನ	...	...	೨೨—೨೮
ಕನ್ನಡ ಶಬ್ದದ ವ್ಯುತ್ಪತ್ತಿ	...	...	೨೮—೩೪
ಮಂಗಲಗ್ರಹ	...	...	೩೪—೪೨
ಕವಿಚರಿತೆ	...	...	೪೩—೫೧
ಕರ್ಣಾಟಕ ಭಾಷಾಭಿವೃದ್ಧಿ ವಿಚಾರ	...	...	೫೧— ೫೭
ಪ್ರಕಟನೆ	...	...	೬೦—೬೧
ಲಾವಣಿ	...	...	೬೨—೬೪
ಪರಿಷತ್ತಿನ ವರದಿ			

ಶ್ರೀ

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ಸಂಪುಟ ೩] ಕಾಳಯುಕ್ತಿ ಸಂ॥ ಪುಷ್ಯ—ಜನವರಿ ೧೯೧೯ [ಸಂಚಿಕೆ ೪

ಆಧುನಿಕಕವಿತೆಗಳು.

ಕವಿಯ ಪ್ರಪಂಚ.

ಮ॥ ಬಾಳಾಚಾರ್ಯ ಸಕ್ಕರಿ (ಶಾಂತಕವಿ.)

ಕನ್ನಡ ನುಡಿಯ ಪಂಡಿತರೇ! ವಂದನವು.

ಶ॥ ಷ॥ ಎನಗೆ ಹೃದಯರಂ।
ಜನೆಯು ಮನೋರಂ!
ಜನೆಯುಂ ಜನರಂಜನೆಯೆಂಬ॥
ವನಿತಾಮಣಿಗಳು।
ಅನುಕೂಲೆಯರವ।
ರನುಮತದಿಂ ವ್ಯವಹರಿಸುವೆನು ॥೧॥

ಇದರಿಂದ ಫಲವೇನೆಂದರೆ—

ಒರ್ವಳ್ ಪದದೆಯು।
ಒರ್ವಳರ್ಥದೆಯು।
ಒರ್ವಳ್ ಸಾಹಿತ್ಯಪ್ರದೆಯು॥
ಒರ್ವಳುಣಿಸುವಳ್।
ಒರ್ವಳ್ ನಗಿಸುವ।
ಳೊರ್ವಳೆನ್ನ ಕೊಂಡಾಡುವಳು ॥೨॥

ಇವರ ಸ್ಥಿತಿಗಳು ಎಂತಹವೆಂದರೆ—

ಇರುವರಿವರು ಸ।
ರ್ವರ ವ್ಯವಹಾರದಿ।
ಧರಿಸಿ ತದುಚಿತಸ್ಥಿತಿಯನ್ನು॥
ಸರಿಯಿದು ಜಗದೀ।
ಶ್ವರಿಯ ಕೃತಿಗೆ ಬಹು।
ಹರುಷಂ ನನಗಿದರಿಂ ಕೇಳಿ ॥೩॥

ನಾನು ಇವರಕೂಡ ಬಹು ಜಾಗ್ರತೆಯಿಂದ ವ್ಯವಹರಿಸಬೇಕಾಗುತ್ತದೆ ಏಕೆಂದರೆ—

ಒರ್ವಳ ಗುಣ ವನ।
ವೊರ್ವಳ ಗುಣ ಜಲ।
ವೊರ್ವಳ ಗುಣ ಫಲಿಸಿದ ಬಳ್ಳಿ॥
ಒರ್ವಳ ಗುಣ ಪೂ।
ವೊರ್ವಳ ಗುಣ ಬಂ।
ಡೊರ್ವಳ ಗುಣವೆಲರಿನ ಸುಳಿವು ॥೪॥

ಇವರ ವಿಯೋಗದಿಂದ ನನಗೆ ಏನಾಗುವುದೆಂದರೆ—

ಸರಿಸದಲಿವದಿರ।
ದಿರಲೀ ವಿಶ್ವಂ।
ಬರಿದಾದಂದದಿ ಕಾಣುವುದು॥
ಅರೆಕ್ಷಣದಿ ಹಿರೆ।
ಮರುಳನಪ್ಪೆನಾ।
ನೊರೆಯಲಾರೆನಾ ಸ್ಥಿತಿಯನಹೋ ॥೫॥

ಆದ ಕಾರಣ ರಸಿಕರೇ, ನೀವು ನನಗೆ ಏನು ಆಶೀರ್ವಾದ ಕೊಡಬೇಕೆಂದರೆ—

ನೆರೆ ಸವಿಯೂ ಸ।
ಕ್ಕರೆಯೂ ಕೂಡಿಹ।
ತೆರದೊಳಿವರ ಸಂಗಡವಾನು॥
ಇರುವಂತಾವಗ।
ಹರಸಿರಿ ನನ್ನಂ।
ಗುರುವಿನಯದಿ ಕೈಮುಗಿಯುವೆನು ॥೬॥

ಇವರೂ ನಾನೂ ಕೂಡಿ ದೇವರಲ್ಲಿ ಏನನ್ನು ಬೇಡಿಕೊಳ್ಳುತ್ತೇವೆಂದರೆ—

ಪರಾತ್ಪರ! ಶ್ರೀ ।
ಪರಮೇಶ್ವರ! ತವ ।
ಕರುಣಾಲೇಶದಿ ಕನ್ನಡದ ॥
ಧರಣಿಯೊಳೆಲ್ಲಿಯು ।
ಮಿರಲಿ ಸ್ವಸ್ಥತೆ ।
ಹರಡಲಿ ಸುಖಸಂಪತ್ತುಗಳು ॥ ೭ ॥

ನೆರೆ ಸಂಜನಿಸುತ ।
ಲಿರಲಾರಸಿಕರು ।
ವರಕವಿಗಳು ನವಗ್ರಂಥಗಳು ॥
ಮರಂದವಂ ಮಧು ।
ಕರವುಣ್ಣಲಿ ರಸಿ ।
ಕರು ಕಾವ್ಯಾಮೃತವನ್ನುಣಲಿ ॥ ೮ ॥

ಕನ್ನಡ ದೇಶವ ।
ಕನ್ನಡ ಭಾಷೆಯು ।
ಕನ್ನಡಿಗರ ಸಂತೋಷವನು ॥
ಎನ್ನಯ ತುತಿಗೆ ಪ್ರ ।
ಸನ್ನನಾಗಿ ಪೊರೆ ।
ಸನ್ನುತ ಶಾಂತೇಶನೆ ನೀನು ॥ ೯ ॥

ನಾಟಕವಾಡುವುದರಿಂದಾಗುವ ಲಾಭಗಳು.

ಭವವೋಡಬೇಕೆಂದು ದೇವರಂ ಕೊಂಡಾಡು ॥
ಶ್ರವಣಸುಖಮಪ್ಪಂತೆ ನುಣ್ಪಿನಿಗಳಿಂ ಪಾಡು ।
ನವರಸಗಳಾವಿರ್ಭವಿಸುವಂತೆ ಹಾವಭಾವಗಳೊಡನೆ ಮಾತನಾಡು ॥
ಕವಿಗಳೊಪ್ಪಿರ್ದ ಸುರಸೋತ್ಕೃಷ್ಟವಹ ನಾಟ ।
ಕವನಾಡು ಮಾಡು ಸುಜ್ಞಾನಧನಸಂಗ್ರಹವ ।
ತವದೇಶಬಾಂಧವರಿಗುಣಿಸು ಪಿರಿಯರ್ಪಡೆದ ಸತ್ಕೃತ್ಯಫಲದ
[ಸವಿಯಾ ॥ ೧ ॥

ಸೂರಿಗಳ ಪರಿಚಯದ ಸತ್ಫಲವ ಗಳಿಸು ವ್ಯವ।
ಹಾರ ಚಾತುರ್ಯವಂ ಸಲೆಬೆಳಸು ಹಿತಕರಾ।
ಚಾರಂಗಳಿಂದ ವರ್ತಿಸು ಮನದ ಸುಪ್ರಸನ್ನತೆಯನ್ನು ಪಡೆ ಸರ್ವದಾ॥
ಆರೋಗ್ಯಭಾಗ್ಯದೀರ್ಘಾಯುಷ್ಯಗಳನು ಪಡೆ।
ದೇರಿಕೆಯ ಬೆಳ್ಗಸದ ಬೆಳಗಿಂದ ಹೊಳೆಹೊಳೆದು।
ದಾರಗುಣಕೋಶದಾಗರನಾಗಿ ದೇಶಭೂಷಣದಿವ್ಯರತ್ನವಾಗು ॥ ೨ ॥

ಸಾನಂದಸೂಲ್ಲಾಸದಿಂದ ಕಾಲಕ್ರಮಣ।
ಗೈನೀನೆಲ್ಲೈ! ರಸಿಕಸಂದೋಹದಿಂದುಚಿತ।
ಮಾನವಂ ಪಡೆ ವಿನಾದೈನ್ಯೇನಜೀವನಂ ಸಿದ್ಧಪ್ಪೈ ಜೇಡೆಂಪರೂ॥
ಈ ನಾಟ್ಯಕಲೆಯ ಬೀಜಂಗಳಂ ನಿನ್ನ ಸಂ।
ತಾನ ಕೃಷಿಯೊಳ್ ಬಿತ್ತಿ ಬಂದ ಬೆಳೆಯನ್ನುಂಡು।
ಸಾನುರಾಗದಿ ಜನ್ಮಸಾಫಲ್ಯವಂ ಮಾಡು ಶಾಂತೇಶ ನಿನಗೊಲಿ
[ದಸು ॥ ೩ ॥

ಮಹಮುದ್ ಗವಾನನ ಚರಿತ್ರೆಯ

ಉಪೋದ್ಘಾತ.

ಈ ಲೋಕ ವ್ಯವಹಾರದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಇರತಕ್ಕ ಜನರ ನಡತೆಗೆ ನೀತಿ ಎಂಬ ಕಟ್ಟು ಉಂಟು. ಇಂಥಾ ನೀತಿಗೆ ಸರ್ವರ ಸೌಖ್ಯವೇ ಮೂಲಾಧಾರ. ಇದು ಸ್ವಸೌಖ್ಯವೆಂತಲೂ ಪರಸೌಖ್ಯವೆಂತಲೂ ಎರಡು ಭಾಗವಾಗಿದೆ. ಆತ್ಮೀಯವಾದ ಸೌಖ್ಯವು ತಕ್ಕ ಮಟ್ಟಿಗೆ ಇರಲೇಬೇಕು. ಮನುಷ್ಯನೇ ಮೊದಲಾದ ಸಮಸ್ತ ಪ್ರಾಣಿಗಳಲ್ಲಿಯೂ ಈ ಗುಣ ಇದ್ದೇ ಇರುವುದು. ಅದು ಇಲ್ಲದಿದ್ದರೆ ಪ್ರಾಣಿವರ್ಗವೇ ಮೂಲೋತ್ಪಾಟನವಾಗುವುದು. ಈ ಗುಣವು ಸಸ್ಯವರ್ಗದಲ್ಲಿಯೂ ಉಂಟು. ಆದರೆ ಪ್ರಾಣಿಗಳಲ್ಲೆಲ್ಲಾ ಶ್ರೇಷ್ಠನಾದ ಮನುಷ್ಯನಲ್ಲಿ ಈ ಗುಣಕ್ಕೆ ಮಿತಿಯುಂಟು. ಈ ಮಿತಿಯೇ ನೀತಿಯುಸಾರ. ಸ್ವಕೀಯವಾದ ಸೌಖ್ಯವನ್ನು ತಿರಸ್ಕರಿಸಿದವರಿಗೆ ಮನುಷ್ಯನು ಹಿತಚಿಂತೆಯನ್ನು ಎಷ್ಟೆಷ್ಟು ಹೆಚ್ಚಾಗಿ ಬಯಸುತ್ತಾನೋ ಅಷ್ಟಷ್ಟರಮಟ್ಟಿಗೆ ಅವನೇ ಲೋಕೋಪಕಾರಿ ಎನಿಸುವನು. ಅನ್ಯರ ಕಷ್ಟವನ್ನು ನೋಡಿ ಸಹಿಸಲಾರದೆ ತಾನು ಅನುತಾಪದಿಂದ ಮರುಕಪಡುವವನೇ ಪುರುಷಶ್ರೇಷ್ಠನೆನಿಸುವನು. ಇಂಥಾ ಉತ್ತಮ ಪುರುಷರಿಗೆ ದೇಶ ಜಾತಿ ಕುಲಗೋತ್ರಾದಿ ಭೇದ ಯಾವುದೂ ಇಲ್ಲ. ಆದರೆ ಪ್ರಪಂಚದಲ್ಲಿ ಇಂಥವರು ಬಹಳ ಕಡಮೆ. ಈ ಉತ್ತಮವಾದ ಗುಣವು ಯಾವ ಪುರುಷನಲ್ಲಿ ಅತ್ಯಧಿಕವಾಗಿದೆಯೋ ಅವನೇ ಮಹಾಪುರುಷ. ಅಂಥವರ ಚರಿತ್ರೆಯೇ ಪುಣ್ಯಚರಿತ್ರೆ ಎನಿಸುವುದು. ಮಹಮೂದ್ ಗವಾನನು ಇಂಥಾ ಪುಣ್ಯಾತ್ಮನಾಗಿದಾನೆ.

ಶ್ರೀ

ಶ್ರೀ ವಿನಾಯಕಾಯನಮಃ

ಶ್ರೀ ಶಾರದಾಂಬಾಯೈನಮಃ

ಶ್ರೀ ಲಕ್ಷ್ಮೀನರಸಿಂಹ ಪ್ರಸನ್ನ

ಮಹಮೂದ್‌ಗವಾನನ ಚರಿತ್ರೆ.

೧ ನೆಯ ಅಧ್ಯಾಯ

ಹಿಂದುಸ್ಥಾನದ ಉತ್ತರ ದೇಶದಲ್ಲಿ ದಿಳ್ಳಿಯನ್ನು ರಾಜಧಾನಿಯಾಗಿ ಮಾಡಿಕೊಂಡು ತುರಕರ ಗುಲಾಮಿ ದೊರೆಗಳೂ ಖಿಲ್‌ಜಿ ಸಂತತಿಯ ಗುಲಾಮಿ ದೊರೆಗಳೂ ಆಳುತ್ತಾ ಇದ್ದುದು ಸರಿಯಷ್ಟೆ. ಜಲಾಲುದ್ದೀನ್ ಖಿಲ್‌ಜಿಯ ಕಾಲದಲ್ಲಿ ಇವನ ಸೇನಾಪತಿಯಾದ ಮಲ್ಲಿಕ್‌ಕಾಫೂರನು ದಕ್ಷಿಣ ದೇಶಕ್ಕೆ ಪ್ರವೇಶಮಾಡಿ ಓರಗಲ್ಲು ದೇಶವನ್ನೂ ಹೊಯಿಸಲಬಲ್ಲಾಳರ ರಾಜ್ಯವನ್ನೂ ಹಿಡಿದು ನಾಶಮಾಡಿದ ವಿಷಯ ಚರಿತ್ರೆಯಲ್ಲಿ ವಿಶದವಾಗಿದೆ. ಓರಗಲ್ಲಿನಿಂದ ಓಡಿಸಲ್ಪಟ್ಟ ನಮ್ಮ ರಾಜರು ದಕ್ಷಿಣಕ್ಕೆ ಬಂದು ಮಾಧವಾಚಾರ್ಯರೆಂದು ಹೆಸರುಳ್ಳ ವಿದ್ಯಾರಣ್ಯರೆಂಬ ಒಬ್ಬ ಮಹಾ ಮುನಿಯ ಸಹಾಯದಿಂದ ತುಂಗಭದ್ರಾತೀರದಲ್ಲಿರುವ ವಿಜಯನಗರದಲ್ಲಿದ್ದುಕೊಂಡು ದೊಡ್ಡ ರಾಜ್ಯವನ್ನು ಕಟ್ಟಿ ಹೆಚ್ಚಾದ ಭಾಗ್ಯಕ್ಕೆ ಅಧಿಪತಿಗಳಾಗಿದ್ದರು. ಅತ್ತ ಓರಗಲ್ಲು ರಾಜ್ಯವನ್ನು ಜೈಸಲು ಬಂದಿದ್ದ ತುರುಕರಲ್ಲಿ ದೇಶವನ್ನು ನಾಶಮಾಡಿ ಸಿಕ್ಕಿದ ಭಾಗ್ಯವನ್ನೆಲ್ಲಾ ದೋಚಿಕೊಂಡು ಹೋದವರು ಹೋಗುತ್ತಾ ಉಳಿದವರು ದಕ್ಷಿಣ ದೇಶದಲ್ಲಿ ನಿಂತು ಅಲ್ಲಲ್ಲಿ ಸಿಕ್ಕಿದಷ್ಟು ದೇಶಗಳನ್ನು ಸ್ವಾಧೀನಮಾಡಿಕೊಂಡಿದ್ದರು. ಅವರಲ್ಲಿ ಒಬ್ಬಾನೊಬ್ಬ ಮನುಷ್ಯನು ವಿಶೇಷವಾಗಿ ಪ್ರಾಬಲ್ಯಕ್ಕೆ ಬಂದನು.

ಇವನಹೆಸರು ಜಫರ್‌ಖಾನ್. ಇದಕ್ಕೆ ಮುಂಚಿನ ಹೆಸರು ಹಸನ್. ಇವನು ಗಂಗನೆಂಬ ಒಬ್ಬ ದಿಳ್ಳಿ ಬ್ರಾಹ್ಮಣನ ಮನೆಯಲ್ಲಿ ಚಾಕರಿ ಇದ್ದನು. ಈ ಬ್ರಾಹ್ಮಣನ ಹೆಸರು ಗಂಗುಜೋಯಿಸ. ಜೋಯಿಸನು ಮಹಮ್ಮದ್ ತೊಗಲಖನ ದಯಕ್ಕೆ ವಿಶೇಷವಾಗಿ ಪಾತ್ರನಾಗಿದ್ದನು. ಹಸನ್ನನು ಒಂದು ದಿನ ಜೋಯಿಸನ ಹೊಲವನ್ನು ಉಳುತ್ತಿರುವಾಗ ನೇಗಲು ಮುಂದಕ್ಕೆ ಹಾಯದೆ ತಡೆಯಿತು. ಅದೇನೆಂದು ನೋಡಲು ಒಂದು ಸರಪಣಿ ಸಿಕ್ಕಿತು. ಆ ಸರಪಣಿಯು ನೆಲದಲ್ಲಿ ಹೂಳಿದ್ದ ಒಂದು ತಾಮ್ರದ ಕೊಪ್ಪರಿಗೆಗೆ ತಗುಲಿಸಿತ್ತು. ಅಗೆದು ನೋಡಲು ಆ ಕೊಪ್ಪರಿಗೆ ತುಂಬ ಚಿನ್ನದ ನಾಣ್ಯವಿತ್ತು. ಹಸನ್ನನು ಆ ನಿಕ್ಷೇಪವನ್ನು ತಂದು ತನ್ನ ಯಜಮಾನನಿಗೆ ಕೊಟ್ಟನು. ಗಂಗುಜೋಯಿಸನಿಗೆ ಬಹಳ ಸಂತೋಷವಾಯಿತು. ಅವನು

ಆ ಭೃತ್ಯನ ಪ್ರಾಮಾಣಿಕತೆಯನ್ನು ಮೆಚ್ಚಿ ಈ ಸಂಗತಿಯನ್ನು ಚಕ್ರವರ್ತಿಯ ಮಗನಾದ ಮೊಹಮ್ಮದ್ ತೊಗಲಖನಿಗೆ ತಿಳಿಸಿದನು. ರಾಜಪುತ್ರನು ಇದನ್ನು ತನ್ನ ತಂದೆಗೆ ಹೇಳಲು ಆ ದೊರೆಯು ಒಂದುನೂರು ಕುದುರೆಗೆ ತುಕಡಿದಾರನಾಗಿರೆಂದು ಹಸನ್ನನ್ನು ನೇಮಕಮಾಡಿದನು.

ಹಸನ್ನನಿಗೆ ಈ ಅಧಿಕಾರ ದೊರೆಯುವುದಕ್ಕೆ ಮುಂಚೆ ಆ ಗಂಗುಜೋಯಿಸನು ಅವನನ್ನು ಕುರಿತು—ಎಲಾ ಹಸನ್, ದೊರೆತನ ಮಾಡುವ ಪದವಿ ನಿನಗೆ ಬರುವುದು ಖಂಡಿತ, ನಿನ್ನ ಜಾತಕವನ್ನು ಗುಣಿಸಿನೋಡಿದ್ದರಲ್ಲಿ ಗೊತ್ತಾಯಿತು, ನೀನು ಇನ್ನು ಮೇಲೆ ನಮ್ಮ ಮನೆಯಲ್ಲಿ ಚಾಕರಿ ಮಾಡಬೇಡ, ಎರಡುಹೊತ್ತು ಊಟಮಾಡಿಕೊಂಡು ಸುಖವಾಗಿರು ಎಂದನು. ಅದಕ್ಕೆ ಹಸನ್ನನು—ಅಯ್ಯೋ ಸ್ವಾಮಿ! ಒಂದು ಹೊತ್ತಿನ ತಿಂಡಿಗೂ ಗತಿ ಇಲ್ಲದೆ ತಮ್ಮ ಮನೆಯಲ್ಲಿ ಚಾಕರಿಮಾಡಿಕೊಂಡು ಬಿದ್ದಿರುವ ನನಗೆ ದೊರೆತನವೆಂದರೇನು? ಇದು ತಿರುಕನ ಕನಸಾಗಿದೆ ಎಂದು ಹೇಳಿದನು. ಅದಕ್ಕೆ ಗಂಗುಭಟ್ಟನು—ನಿನಗೆ ದೊರೆತನ ಬಂದರೆ ನನಗೇನ ಕೊಡುತ್ತೀಯೆ? ಎಂದು ಕೇಳಲು ಅದಕ್ಕೆ ಆ ಆಳು—ಸ್ವಾಮಿ, ಹಾಗೆ ನನಗೆ ದೊರೆತನ ಬಂದರೆ ತಮ್ಮನ್ನು ನನ್ನ ಭಂಡಾರದ ಅಧಿಕಾರಕ್ಕೂ ನನ್ನ ಮಂತ್ರಿತ್ವಕ್ಕೂ ನೇಮಿಸುತ್ತೇನೆ. ಮತ್ತು ತಮ್ಮ ಹೆಸರಿನಮೇಲೆ ನಾನು ಬದುಕುತ್ತೇನೆ ಎಂದನು. ಈ ಮಾತು ನಡೆದ ಕೊಂಚದಿವಸದಲ್ಲಿಯೇ ಹಸನ್ನನ್ನು ತೊಗಲಖನು ದಂಡಿನ ಸರದಾರನನ್ನಾಗಿ ಮಾಡಿ ದಕ್ಷಿಣಕ್ಕೆ ಕಳುಹಿಸಿದನು. ಅಲ್ಲಿ ಹಸನ್ನನು ವಿಶೇಷ ಪರಾಕ್ರಮವನ್ನು ತೋರಿಸಿ ಜಫರ್ ಖಾನನೆಂಬ ಹೆಸರಿನಿಂದ ದೊಡ್ಡ ಅಧಿಕಾರಿಯಾಗಿ ಖಿಲವಾಗಿದ್ದ ರಾಜ್ಯಗಳನ್ನು ಜೈಸಿಕೊಂಡು ಅಲ್ಲಿಗೆ ದೊರೆಯಾದನು; ಕೂಡಲೆ ತನ್ನನ್ನು ಕಾಪಾಡಿದ ಗಂಗುಜೋಯಿಸನನ್ನು ಕರೆಯಿಸಿ ಅವನನ್ನು ಹೆಚ್ಚಾದ ಮರ್ಯಾದೆಯಿಂದ ಕಂಡು ತಾನು ವಾಗ್ದಾನಮಾಡಿದ್ದ ಪ್ರಕಾರ ವಿಶೇಷವಾದ ಕೃತಜ್ಞತೆಯಿಂದ ಆ ಬ್ರಾಹ್ಮಣನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡು ಅವನಿಗೆ ತನ್ನ ಕೋಶಾಧಿಕಾರವನ್ನು ಕೊಟ್ಟದ್ದೂ ಅಲ್ಲದೆ "ಜಲಾಲುದ್ದೀನ್ ಹಸನ್ ಗಂಗು ಬಹಮನಿ" ಎಂದು ಹೆಸರಿಟ್ಟುಕೊಂಡನು. ಇವನ ತರುವಾಯ ದೊರೆತನಕ್ಕೆ ಬಂದ ದೊರೆಗಳೆಲ್ಲರೂ "ಗಂಗು ಬಹಮನಿ" ಎಂಬ ಬಿರುದನ್ನು ಬಿಡಲಿಲ್ಲ. ಇವರ ವಂಶಕ್ಕೇ ಈ ಹೆಸರು ಬಂತು.

ಈ ದೊರೆಗಳ ರಾಜಧಾನಿ ಮೊದಲು ಕಲ್‌ಬುರ್ಗಿ, ತರುವಾಯ ಬೀದರ್ ಎಂಬ ಪಟ್ಟಣ. ಈ ವಂಶದ ದೊರೆಗಳು ಈಗಿನ ಹೈದರಾಬಾದು ರಾಜ್ಯ ಮತ್ತು ಅದಕ್ಕೆ ಪೂರ್ವದಿಕ್ಕಿಗೆ ಬಂಗಾಳಕೊಲ್ಲಿವರೆಗೂ ತೆಲುಗುಸೀಮೆ, ಕರ್ನೂಲುಪ್ರಾಂತ ಪಶ್ಚಿಮಸಮುದ್ರದವರೆಗಿನ ಸೀಮೆ, ಇದೆಲ್ಲಾ ಸೇರಿಸಿಕೊಂಡು ಬಹಮನಿರಾಜ್ಯವೆಂಬ ಹೆಸರಿನ್ನಿಟ್ಟು ಆಳುತಿದ್ದರು. ಬೀರಾರುದೇಶವೂ ಸಹ ಇವರಲ್ಲಿ ವಳಿತವಾಗಿತ್ತು. ಈ ವಂಶದ ಮುಸಲ್ಮಾನ್ ದೊರೆಗಳು ಹಲವು ತಲೆಗಳವರೆಗೂ ಆಳಿದರು. ಇವರು ಅನೇಕ ರಾಜ್ಯಗಳನ್ನು ಗೆದ್ದು ಅನೇಕ ಸೀಮೆಗಳನ್ನು ಕೊಳ್ಳೆಹೊಡೆದು ವಿಶೇಷವಾಗಿ ಚಿನ್ನ ಬೆಳ್ಳಿ ರತ್ನ ಮೊದಲಾದುವನ್ನು ದೋಚಿಹಾಕಿಕೊಂಡು ಅತ್ಯಧಿಕವಾಗಿ ಐಶ್ವರ್ಯ

ವಂತರಾಗಿದ್ದರು. ಈ ದೇಶದ ಅಮೂಲ್ಯವಾದ ಸರಕುಗಳನ್ನು ತೆಗೆದುಕೊಂಡು ಹೋಗಿ ದೇಶಾಂತರಗಳಲ್ಲಿ ಮಾರಿ ಅಧಿಕವಾಗಿ ಹಣವನ್ನು ಸಂಪಾದಿಸುವುದಕ್ಕೆ ಕಾರವಾನರೂ, ಇಲ್ಲಿ ಪೂರ್ವದಿಂದಲೂ ಪ್ರಖ್ಯಾತಿಯನ್ನು ಹೊಂದಿದ್ದ ವಿದ್ವಾಂಸರ ಗೋಷ್ಠಿಗಾಗಿ ಮುಸಲ್ಮಾನಪಂಡಿತರೂ, ಉದ್ಯೋಗವನ್ನು ಸಂಪಾದಿಸಿಕೊಂಡು ಜೀವನ ಮಾಡುವುದಕ್ಕಾಗಿ ತುಂಡಾಂಡಿಗರೂ, ಮಿಸರ್, ಅರಬಸ್ಥಾನ, ಪಾರ್ಶಿಸ್ಥಾನ, ತುರ್ಕಸ್ಥಾನ, ಕಾಬುಲ್, ಕಂದಾರೆ, ಈ ಮೊದಲಾದ ಪ್ರಾಂತಗಳಿಂದ ಬಂದು ಸೇರಿಕೊಂಡಿದ್ದರು. ವ್ಯಾಪಾರಗಾರರು ಆಗಾಗ ಬರುತ್ತಿದ್ದರು. ರಾಜ್ಯ ಸಂಪಾದನೆಗಾಗಿ ಮಲ್ಲಿಕ್‌ಕಾಫೂರು, ಅಲ್ಲಾಉದ್ದೀನ್, ಇವರ ಜೊತೆಯಲ್ಲಿ ಬಂದವರು ಬಹಳ ಮಂದಿಸ ಜನರು. ಇವರುಗಳು ಪೂರ್ವನಿವಾಸಿಗಳಂತೆ ಇಲ್ಲಿ ನೆಲೆಗೊಂಡರು. ಆದರೆ ದಕ್ಷಿಣದೇಶದಲ್ಲಿ ಬಹಮನಿ ದೊರೆಗಳು ವಿಶೇಷವಾಗಿ ಐಶ್ವರ್ಯದಿಂದ ಬಾಳುತ್ತಿದ್ದುದನ್ನು ಕೇಳಿ ಇವರ ಆಶ್ರಯದಿಂದ ಜೀವಿಕಸಂಪಾದನೆಗಾಗಿ ಮೇಲೆಕಂಡ ದೇಶಗಳಿಂದ ಅನೇಕ ಹೊಸಜನರು ಬರುತಲೇ ಇದ್ದರು.

೨ ನೆಯ ಅಧ್ಯಾಯ.

ಗವಾನನ ಪೂರ್ವವೃತ್ತಾಂತ.

ಹೀಗೆ ಹೊಸಹೊಸದಾಗಿ ಈ ದೇಶಕ್ಕೆ ವಲಸೆ ಬರುತ್ತಾ ಇದ್ದವರ ಸಂಗಡ ಒಬ್ಬ ಪುರುಷಶ್ರೇಷ್ಠನು ಇಲ್ಲಿಗೆ ಬಂದನು. ಇವನ ಹೆಸರು ಗುಲಾಂಮುಹಮೂದ್‌ಗವಾನ್ ಖಾಜಅಮದುದ್ದೀನ್. ಈತನ ಹಿರಿಯರು ಪಾರ್ಶಿಸ್ಥಾನಕ್ಕೆ ಸೇರಿದ ಗೀಲಾನ್‌ದೇಶಕ್ಕೆ ದೊರೆಗಳಾಗಿದ್ದರು. ಅವರಲ್ಲಿ ಒಬ್ಬನು ರೇಷ್ಟ ಎಂಬ ದೇಶಕ್ಕೆ ದೊರೆಯಾದನು. ಇವರೆಲ್ಲರನ್ನೂ ಪಾರ್ಶಿಸ್ಥಾನದ ಷಹನು ಜೈಸಿ ಇವರ ದೇಶವನ್ನು ತಾನು ಸೇರಿಸಿಕೊಂಡನು. ಈ ಮುಹಮೂದ್‌ಗವಾನನು ಗೀಲಾನ್‌ದೇಶದ ಗಾವಾನ್ ಎಂಬ ಗ್ರಾಮದಲ್ಲಿ ಸನ್ 1408 ನೆಯ ಇಸವಿಯಲ್ಲಿ ಹುಟ್ಟಿದನು. ಇವನು ಗಾವಾನ್ ಎಂಬ ಊರಿನಲ್ಲಿ ಹುಟ್ಟಿದನಾದ್ದರಿಂದ ಇವನಿಗೂ ಆ ಹೆಸರು ಬಂತು. ಈತನು ಕ್ರಿ. ಶ. 1403 ರಲ್ಲಿ ಹುಟ್ಟಿದನೆಂದು ಕೆಲವರು ಹೇಳುವರು. ಇವನ ತಂದೆಯ ಹೆಸರು ಖಾಜಾ ಮೊಹಮ್ಮದ್. ಇವನ ಚಿಕ್ಕಪ್ಪನಾದ ಖಾಜಾಷಂಸುದ್ದೀನ್ ಎಂಬುವನು ಗೀಲಾನ್ ರಾಜ್ಯದ ಮೊಹಮ್ಮದ್ ಎಂಬ ದೊರೆಗೆ ವಜೀರನಾಗಿದ್ದನು.

ಕಾಲದೇಶವನ್ನರಿತು ಗವಾನನಿಗೆ ವಿದ್ಯಾಭ್ಯಾಸಮಾಡಿಸಿದರು. ಇವನು ಓದಿ ಒಳ್ಳೇ ಬುದ್ಧಿಶಾಲಿ ಎಂದು ಹೆಸರನ್ನು ತೆಗೆದುಕೊಂಡನು. ಆ ಕಾಲಕ್ಕೆ ಇವನ

ಪಾಂಡಿತ್ಯವು ಬಹಳ ಹೆಚ್ಚಾಗಿತ್ತು. ಗವಾನನಿಗೆ ಪೂರ್ತಿಯಾಗಿ ವಯಸ್ಸು ಬಂದಮೇಲೆ ಇವನ ಚಿಕ್ಕಪ್ಪನಾದ ಖಾಜಾಷಂಷುದೀನನಿಗೆ ರಾಜ್ಯಭಾರ ನಡಿಸುವ ವಿಚಾರದಲ್ಲಿ ವಿಶೇಷವಾಗಿ ಸಹಾಯಮಾಡುತಿದ್ದನು. ಇದೂ ಅಲ್ಲದೆ ಒಳದೇಶದಲ್ಲಿ ಆಗಾಗ ಖಂದಾರಿಯವರೂ ಇತರ ಜನರೂ ಬಂದು ಹಾವಳಿಮಾಡಿ ಜನರಿಗೆ ತೊಂದರೆಯನ್ನು ಕೊಡುತಿದ್ದರು. ಇವರನ್ನು ಹೊಡೆದು ಓಡಿಸಲು ಹೊರಟ ಸೇನೆಗೆ ಗವಾನನು ಅಧಿಕಾರಿಯಾಗಿ ನೇಮಿಸಲ್ಪಟ್ಟನು. ಆಗ ಅವನು ಆ ಜನರ ಮೇಲೆ ಯುದ್ಧವನ್ನು ಮಾಡಿ ಅವರ ಕಡೆ ನಾಯಕನಾದ ಹಾಜಿಮೊಹಮ್ಮದ್ ಎಂಬ ಖಂದಾರಿಯವನನ್ನು ಕೈಸೆರೆಹಿಡಿದು ತಂದನು. ಹೀಗೆ ಗವಾನನಿಗೆ ಯುದ್ಧಪ್ರಮೇಯದಲ್ಲಿಯೂ ರಾಜಕೀಯವ್ಯಾಪಾರದಲ್ಲಿಯೂ ಮೊದಲಿಂದಲೂ ಅಭ್ಯಾಸವಿದ್ದ ಕಾರಣ, ರಾಜ್ಯಭಾರಕ್ರಮದಲ್ಲಿ ಇವನಿಗೆ ಹೆಚ್ಚಾದ ಅನುಭವ ಉಂಟಾಯಿತು. ಆದರೆ ಅಲ್ಲಿ ದೊರೆಯಾಗಿದ್ದ ಷಹತಮಾಸ್ಪನು ಚತುರನಾದ ಗವಾನನ್ನು ಕಂಡು ಸಂತೋಷಪಡುವುದಕ್ಕೆ ಬದಲಾಗಿ ಅಸೂಯೆಯಿಂದ ದ್ವೇಷವನ್ನು ಸಾಧಿಸಿ ವಿಪತ್ತನ್ನು ತರುವ ಸೂಚನೆ ಕಂಡುಬಂತು. ಅದರಿಂದ ಗವಾನನು ತನ್ನ ದೇಶವನ್ನು ಬಿಟ್ಟು ರಾಜತಂತ್ರದ ಸೆಲೆಯನ್ನು ತ್ಯಜಿಸಿ ವ್ಯಾಪಾರದಿಂದ ಜೀವನಮಾಡಿಕೊಳ್ಳೋಣವೆಂದು ಹೊರಟನು. ಆಳುವ ದೊರೆಯು ದ್ವೇಷವನ್ನು ಹಿಡಿದರೆ ಛಲವನ್ನು ಕಟ್ಟಿ ತಕ್ಕಕಾರ್ಯಭಾಗವನ್ನು ನಡಿಸುವುದುಂಟು. ಇದು ಸಾಗುವುದಿಲ್ಲವೆಂದು ಕಂಡರೆ ದೇಶಾಂತರಗತರಾಗಿ ಹೊರಟುಹೋಗುವುದು ಎರಡನೆಯ ಪರ್ಯಾಯ. ಎರಡನೆಯ ಕೆಲಸವೇ ಸಾಧುವೆಂದು ಗವಾನನಿಗೆ ತೋರಿತು. ಇವನಿಗಿದ್ದ ಪಾಂಡಿತ್ಯದ ಕೆಚ್ಚು ಸಾಧಾರಣ ವರ್ತಕರ ರೀತಿಯಲ್ಲಿ ಪ್ರಯಾಣಮಾಡಿಕೊಂಡು ಹೋಗಲು ಎಡೆಗೊಡಲಿಲ್ಲ. ಇವನು ದಾರಿಯಲ್ಲಿ ಹೋಗುತ್ತಾ ಅಲ್ಲಲ್ಲಿ ತಂಗುತ್ತಾ ಆಯಾ ಊರುಗಳಲ್ಲಿದ್ದ ಪಂಡಿತರು, ಸಿದ್ಧಪುರುಷರಾದ ಫಕೀರರು ಇವರುಗಳ ಪರಿಚಯಮಾಡಿಕೊಂಡನು. ಕೆಲವು ವರುಷ ಹೀಗೆ ಕಳೆಯಿತು. ಅಂಥ ಸತ್ಸಹವಾಸಗಳಿಂದ ಇವನ ಪಾಂಡಿತ್ಯ ಇನ್ನೂ ಹೆಚ್ಚಾಗಲು ಕಾರಣವಾಯಿತು. ಮುಸಲ್ಮಾನರಲ್ಲಿ ಎಂಥ ಪಾಂಡಿತ್ಯವಿದ್ದರೂ ಅದಕ್ಕೆ ಅವರ ಮತದ ಸಂಬಂಧ ಇರುತ್ತಲೇ ಇರುವುದು ವಾಡಿಕೆಯಾಗಿದೆ. ಇದರಿಂದ ಇವನಿಗೆ ಲೋಕವ್ಯವಹಾರದಲ್ಲಿ ವೈರಾಗ್ಯಹುಟ್ಟಿ ಮತಾಭಿಮಾನದಿಂದ ಇವನು ಮಕ್ಕಾಪಟ್ಟಣಕ್ಕೆ ಪ್ರಯಾಣಮಾಡಿದನು. ಪರಿಶುದ್ಧವಾದ ಸ್ಥಳವೆಂದು ಮುಸಲ್ಮಾನರು ಭಾವಿಸಿರುವ ಆ ಮಕ್ಕಾಪಟ್ಟಣದಲ್ಲಿ ದೈವಭಕ್ತಿಯಿಂದಲೂ ಗುರುಭಕ್ತಿಯಿಂದಲೂ ತುರುಕರು ಲೋಕವ್ಯವಹಾರವನ್ನು ಬಿಟ್ಟು ದೇಶದೇಶಗಳಿಂದ ಬಂದು ಅಲ್ಲಿ ವಾಸವಾಗಿರುವುದು ಈಗಲೂ ವಾಡಿಕೆಯಾಗಿದೆ. ಹಾಗೆ ಪಂಡಿತರಾಗಿಯೂ ವಿರಾಗಿಗಳಾಗಿಯೂ ಇದ್ದವರ ಗೋಷ್ಠಿಯಲ್ಲಿ ಗವಾನನು ಗ್ರಂಥವ್ಯಾಸಂಗವನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಾ ಇದ್ದನು.

ಇವನು ಫಾರ್ಸಿಸ್ಥಾನವನ್ನು ಬಿಟ್ಟು ಹೊರಟುಹೋದ ಎರಡುವರುಷಗಳ ತರುವಾಯ ಇವನ ಚಿಕ್ಕಪ್ಪ ಖಾಜಾಷಂಷುದ್ದೀನನು ತನ್ನ ಮಗ ಖಾಜಾಮೊಹದೀನನ್ನು ವಸ್ಸೀರ್ ಕೆಲಸಕ್ಕೆ ನೇಮಿಸಿ ತಾನೂ ಮಕ್ಕಾಕ್ಕೆ ಹೊರಟುಹೋದನು. ಮುಸ

ಲ್ಮಾನರಲ್ಲಿ ಮಕ್ಕಾಕ್ಕೆ ಹೋದವನೆಂದರೆ ವೈರಾಗ್ಯವನ್ನು ವಹಿಸಿದವನೆಂತಲೇ ಅರ್ಥ. ಹಿಂದುಸ್ಥಾನದ ಆರ್ಯರಲ್ಲಿ ಸತ್ಸಂಗದಿಂದ ಜ್ಞಾನಮಾರ್ಗವನ್ನು ಹಿಡಿದು ಮುಕ್ತಿಯನ್ನು ಸಂಪಾದಿಸಬೇಕೆಂದು ಕರ್ಮನಿಷ್ಠರೂ ಜ್ಞಾನನಿಷ್ಠರೂ ಹೇಗೆ ಪುಣ್ಯಸ್ಥಳವಾದ ಕಾಶಿಗೆ ಹೋಗಿ ಅಲ್ಲಿ ವಾಸವಾಗಿರುವರೋ, ಹಾಗೆಯೇ ಸಂಸಾರದ ಪಂದುಗವನ್ನು ಬಿಟ್ಟು ಮಕ್ಕಾಕ್ಕೆ ಮುಸಲ್ಮಾನರು ಹೋಗುವರು. ಸಂಸಾರದ ಗಲಭೆಯೂ ತತ್ಸಂಬಂಧವಾದ ಕ್ಲೇಶವೂ ಸಮೀಪವಾಗಿಲ್ಲದೆ ಕಣ್ಣಿಗೆ ಮರೆಯಾದಷ್ಟು ಮನಸ್ಸಿಗೂ ಮರೆ ಎಂಬ ಮಾತಿಗೆ ಸರಿಯಾಗಿರುತ್ತಾ ಪುಣ್ಯಸ್ಥಳದ ಮಹಿಮೆಯೂ ಸಜ್ಜನಸಹವಾಸವೂ ಅದಕ್ಕೆ ಸೇರಿಕೊಂಡು ಚಿತ್ತವನ್ನು ನಿರ್ಮಲವಾಗಿ ಮಾಡುವ ಆಶೆಯು ಸಹಜವಾದ್ದೇ. ಬಾಹ್ಯಪ್ರಪಂಚವ್ಯಾಪಾರದಿಂದ ಇಂದ್ರಿಯಗಳೂ ಇಂದ್ರಿಯಗಳ ವ್ಯಾಪಾರದಿಂದ ಮನಸ್ಸೂ ಮನಸ್ಸಿನಿಂದ ಕಾಯಕರ್ಮಗಳೂ ಒಳ್ಳೇದಕ್ಕಾಗಲಿ ಕೆಟ್ಟದಕ್ಕಾಗಲಿ ವಿಕೃತಿಯನ್ನು ಹೊಂದುವವು. ಎಲ್ಲಾ ಮತದವರಲ್ಲಿಯೂ ಈ ವಿಧವಾದ ನಂಬಿಕೆಯುಂಟು. ಇದೇ ಮೊದಲಾದ ಕಾರಣಗಳಿಗಾಗಿ ಮೊಹಮ್ಮದ್‌ಗವಾನನು ಹೊರಟು ಹೋದ ಎರಡು ವರುಷದ ಮೇಲೆ ಷಂಸುದ್ದೀನನೂ ಮಕ್ಕಾಕ್ಕೆ ಹೋದನಷ್ಟೆ. ಆದರೆ ಇವನ ಮಗ ಖಾಜಾ ಮೊಹಮ್ಮದನು ರಾಜ್ಯದ ಆಡಳಿತವನ್ನು ನಡಿಸಲು ಶಕ್ತನಾಗಿರಲಿಲ್ಲ. ರಾಜ್ಯಭಾರದ ಬಿಗಿ ಕೆಟ್ಟುಹೋದದ್ದರಿಂದ ದೇಶದಲ್ಲಿ ದಿಕ್ಕು ದಿಕ್ಕಾ ಜನರು ಪುಂಡಿಗೆ ಆರಂಭಿಸಿದರು. ಖಾಜಾಷಂಸುದ್ದೀನನಿಂದ ವಿಶೇಷವಾಗಿ ಉಪಕಾರವನ್ನು ಹೊಂದಿ ಮುಂದಕ್ಕೆ ಬಂದಿದ್ದ ಇಬ್ಬರಲ್ಲಿ ಷೇಕಲ್ಲಿ ಎಂಬುವನು ಮಂತ್ರಿಯಾಗಿಯೂ ಹಾಜಿ ಮೊಹಮ್ಮದನು ದಳವಾಯಿಯಾಗಿಯೂ ನಿಂತು ಖಾಜಾಮೊಹಮ್ಮದನನ್ನು ಮುರಿದರು: ಆಗ ಕೃತಘ್ನರಿಂದ ಸ್ಥಾನಭ್ರಷ್ಟನಾದ ಈ ಮೊಹಮ್ಮದನೂ ಮಕ್ಕಾಕ್ಕೆ ಹೋದನು. ಇವನ ಸ್ಥಿತಿಯನ್ನು ಕಂಡು ಮೊಹಮ್ಮದ್‌ಗವಾನನು ತಮ್ಮ ದೇಶದವರ ವಿಷಯದಲ್ಲಿ ಬಹಳ ಅಸಮಾಧಾನಪಟ್ಟನು.

ಗವಾನನ ಯೋಗ್ಯತೆಯನ್ನೂ ರಾಜಕೀಯವ್ಯಾಪಾರದಲ್ಲಿ ಇವನಿಗಿದ್ದ ವಿವೇಕವನ್ನೂ ಕಂಡು ಅರಬಸ್ಥಾನದ ದೊರೆಯೂ ಖೊರಸಾನಿನ ದೊರೆಯೂ ತಮ್ಮ ರಾಜ್ಯದಲ್ಲಿ ವಸೀರನಾಗಿರಬೇಕೆಂದು ಅವನನ್ನು ಕೇಳಿಕೊಂಡರು. ಇದಕ್ಕೆ ಗವಾನನು ಒಪ್ಪದೆ ಮಕ್ಕವನ್ನು ಬಿಟ್ಟು ದೇಶದಿಂದ ದೇಶಕ್ಕೆ ಹೋಗುತ್ತಾ ವ್ಯಾಪಾರಮಾಡಲು ಆರಂಭಿಸಿದನು. ಆದರೆ ಹೀಗೆ ದೇಶಾಟನ ಮಾಡುವಾಗಲೂ ಕೂಡ ಇವನು ಪೂರ್ವದ ಸ್ವಭಾವವನ್ನು ಬಿಡಲಿಲ್ಲ. ಎಲ್ಲಿ ಹೋದರೂ ಗ್ರಂಥವ್ಯಾಸಂಗ, ಸಜ್ಜನ ಸಂಗ ಇದನ್ನು ಬಿಡಲಿಲ್ಲ; ಎಲ್ಲಿ ಹೋದರೂ ಯಾವ ಹೊಸ ಗ್ರಂಥವಿದೆ ಯಾವ ಸತ್ಪುರುಷರು ಇದಾರೆ ಎಂದು ವಿಚಾರಿಸುತ್ತಾ ಹುಡುಕುತ್ತಾ ಹೋಗುವುದೇ ಇವನ ಮೊದಲ ಕೆಲಸವಾಗಿತ್ತು. ಹೀಗೆ ದೇಶಾಟನ ಮಾಡುತ್ತಾ ಇರುವಾಗ ಹಿಂದುಸ್ಥಾನದಲ್ಲಿ ಆಳುತ್ತಾ ಇದ್ದ ರಾಜರ ಐಶ್ವರ್ಯವನ್ನೂ ಅಲ್ಲಿ ಆಗತಕ್ಕ ವ್ಯಾಪಾರವನ್ನೂ ಮತ್ತು ಅಲ್ಲಿರುವ ಪಂಡಿತರ ಮತ್ತು ಜ್ಞಾನಿಗಳ ಹೆಸರುವಾಸಿಯನ್ನೂ ಕೇಳಿ ಗವಾನನ ಮನಸ್ಸು ಆ ಕಡೆ ತಿರುಗಿತು. ಮುಖ್ಯವಾಗಿ ಕೇವಲ ದೈವಭಕ್ತಿಯುಳ್ಳ ಜ್ಞಾನಿಗಳು ಈ ದೇಶದಲ್ಲಿ ವಿಶೇಷವಾಗಿದಾರೆಂಬ ವರ್ತಮಾನವೇ ಅವನನ್ನು ಈ ಕಡೆಗೆ

ಎಳೆಯಿತು. ದಕ್ಷಿಣದೇಶವನ್ನು ನೋಡಿಕೊಂಡು ದಿಳ್ಳಿಗೆ ಹೋಗೋಣವೆಂದು ಗವಾನನು ನಲವತ್ತನೆಯ ವರುಷದ ವಯಸ್ಸಿನಲ್ಲಿ ಫಾರಸಿಕೊಲ್ಲಿಯ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬಂದು 1455 ರಲ್ಲಿ **ಡಾಬೋಳ್** ಎಂಬ ರೇವುಪಟ್ಟಣದಲ್ಲಿ ಹಡಗು ಇಳಿದನು. ಅಲ್ಲಿಂದ ಹೊರಟು ದಿಳ್ಳಿಗೆ ಹೋಗಬೇಕೆಂದು ಆಶೆ ಇದ್ದರೂ ಆಗ ಬಹಮನಿ ದೊರೆಗಳ ಯಶಸ್ಸು ಬಹಳವಾಗಿದ್ದುದರಿಂದ ಆ ದೊರೆಗಳಿಗೆ ರಾಜಧಾನಿಯಾಗಿದ್ದ ಬೀದರ್ ಪಟ್ಟಣಕ್ಕೆ ಬಂದನು. ತುರ್ಕಸ್ಥಾನ ಪ್ರಾಂತದಲ್ಲಿ ಮೊಹಿಬುಲ್ಲಷಹ ಕರ್ಮಾನಿ ಎಂಬ ಒಬ್ಬ ಮಹಾತ್ಮ ಇದ್ದನಂತೆ. ಅವನಿಗೆ ಬಹಮನಿದೊರೆಗಳಲ್ಲಿ ವಿಶೇಷವಾಗಿ ಅಭಿಮಾನವಿತ್ತು. ಇವನ ಮೊಮ್ಮಗ ಷಹನ್ಯಾಮತ್ತುಲ್ಲ ಕರ್ಮಾನಿ ಎಂಬುವನಿಗೆ ಬಹಮನಿದೊರೆಮಗಳನ್ನು ಕೊಟ್ಟು ಮದುವೆಯಾಗಿತ್ತು.

೩ ನೆಯ ಅಧ್ಯಾಯ.

ದಖನ್ನಿನ ಸ್ಥಿತಿ, ಹೊರ ದೇಶದ ಸ್ಥಿತಿ.

ದಿಳ್ಳಿಯಲ್ಲಿ ಲೋಡಿಮುಸಲ್ಮಾನ ದೊರೆಗಳು ಆಳುತ್ತಿದ್ದರು. ಇವರ ಅಧಿಕಾರವೆಲ್ಲಾ ಉತ್ತರದಲ್ಲಿತ್ತೇ ಹೊರತು ದಕ್ಷಿಣಕ್ಕೆ ವ್ಯಾಪಿಸಿರಲಿಲ್ಲ. ಜೌನಪುರ, ರಾಜಪುಟಾಣ, ಗುಜರಾತು, ಖಾನದೇಶ, ಮಾಳವ. ಈ ದೇಶಗಳಲ್ಲಿ ಸ್ವತಂತ್ರವಾದ ರಾಜರು ಆಳುತ್ತಿದ್ದರು. ದಖನ್ನಲ್ಲಿ ಬಹಮನಿ ಮುಸಲ್ಮಾನರೂ, ವಿಜಯನಗರದಲ್ಲಿ ಹಿಂದೂ ಅರಸರೂ, ಪೂರ್ವಸಮುದ್ರ ಅಥವಾ ಬಂಗಾಳಾಕೊಲ್ಲಿಯ ಕಡೆ ಬೇರೆ ಅರಸರೂ, ಆಳುತ್ತಿದ್ದರು. ಈ ಪೂರ್ವ ದಿಕ್ಕಿನ ಅರಸರಿಗೂ ವಿಜಯನಗರದ ದೊರೆಗಳಿಗೂ ದ್ವೇಷವಿತ್ತು. ಇವುಗಳಲ್ಲದೆ ಇನ್ನೂ ಅನೇಕ ಚಿಕ್ಕಚಿಕ್ಕ ಸಂಸ್ಥಾನಗಳಿದ್ದವು. ಬಹಮನಿದೊರೆಗಳ ರಾಜ್ಯಕ್ಕೆ ಎಲ್ಲಾಕಡೆಯಲ್ಲಿಯೂ ಶತ್ರುರಾಜರೇ ಇದ್ದರು. ಉತ್ತರಕ್ಕೆ ಮಾಳವ ಮತ್ತು ಖಾನದೇಶದರಾಜ್ಯ. ದಕ್ಷಿಣಕ್ಕೆ ವಿಜಯನಗರಸಂಸ್ಥಾನ. ಪೂರ್ವಕ್ಕೆ ಉತ್ಕಲ ಅಥವಾ ಒರಿಸಸಂಸ್ಥಾನ. ಪಶ್ಚಿಮಕ್ಕೆ ಕೊಂಕಣದೇಶದ ಹಿಂದೂ ರಾಜ್ಯಗಳು, ಹೀಗೆ ಇದ್ದವು.

ಬಹಮನಿಸಂಸ್ಥಾನದ ಹೊರಗಿನ ಸ್ಥಿತಿ ಹೀಗಿರಲಾಗಿ, ದೇಶದೊಳಗೆ ಬೇರೆ ವಿಧವಾದ ಶತ್ರುತ್ವ ಹುಟ್ಟಿಕೊಂಡಿತ್ತು: ಒಳದೇಶದ ಶತ್ರುಗಳಲ್ಲಿ ಕೆಲವರು ಸಾಧಾರಣಜನರು ಮತ್ತೆ ಕೆಲವರು ದೊಡ್ಡ ವಂಶೀಯರು. ಇವರುಗಳು, ಅಲ್ಲದೆ ತುರ್ಕಸ್ಥಾನ ಫಾರ್ಸಿಸ್ಥಾನ ಮೊದಲಾದ ತುರುಕರ ರಾಜ್ಯಗಳಿಂದ ಬಹಮನಿರಾಜ್ಯದಲ್ಲಿ

ಜೀವನಕ್ಕಾಗಿ ಬಂದು ಸೇರಿಕೊಂಡಿದ್ದ ಅನ್ಯದೇಶೀಯರು, ಹೀಗೆ ಹಳೇ ತುರುಕರು ಹೊಸ ತುರುಕರು ಎಂದು ಎರಡು ಪಂಗಡವಿತ್ತು. ಇವರುಗಳೆಲ್ಲಾ ಮೊದಲು ಸ್ನೇಹವಾಗಿಯೇ ಇದ್ದರು. ಅಹಮದ್ ಷಹವಲಿಯ ಆಳಿಕೆಯಲ್ಲಿ ಕೆಲವು ಹಿಂದೂ ಸಂಸ್ಥಾನಗಳು ಜಯಿಸಲ್ಪಟ್ಟುವು. ಮುಖ್ಯವಾಗಿ ವಿಜಯನಗರದ ಸಂಸ್ಥಾನದವರ ಮೇಲೆ ಈ ತುರುಕದೊರೆಯು ವಿಶೇಷವಾಗಿ ಕಾದಿ ಕೋಟ್ಯಂತರ ಹಿಂದುಗಳನ್ನು ಕಾಫರರೆಂದು ಕೊಲ್ಲಿಸಿದನು. ಹತ್ತು ಸಾವಿರ ಜನ ಕಾಫರರನ್ನು ಕೊಲ್ಲಿಸಿ ಒಂದು ಹಬ್ಬವನ್ನು ಮಾಡಿಸಿದನು. ಹೀಗೆ ಎಷ್ಟೋ ಹತ್ತುಸಾವಿರ ಜನ ಹೋಗಿ ಅನೇಕ ಹಬ್ಬಗಳು ನಡೆದವು. ಈ ದೊರೆಯು ಅಸಂಖ್ಯಾತವಾದ "ಕಾಫರರ" ನ್ನು ಕೊಲ್ಲಿಸಿದ ಕಾರಣ ಇವನಿಗೆ ವಲಿ ಎಂದು, ಬಿರುದು ಬಂದು ಅದು ಇವನಿಗೆ ಶಾಶ್ವತವಾಗಿ ನಿಂತುಹೋಯಿತಂತೆ. ವಲಿ ಎಂದರೆ ಋಷಿ ಎಂದು ಅರ್ಥವಂತೆ. ಈ ಅಹಮದ್ ಷಹವಲ್ಲಿಯ ಆಳಿಕೆಯಲ್ಲಿ ಗುಜರಾತು ಸಂಸ್ಥಾನದಮೇಲೆ ದಂಡನ್ನು ಹೊರಡಿಸಿದರು. ಈ ದಂಡಿನಲ್ಲಿ ದೇಶೀಯ ತುರುಕರ ತುಕಡಿಗಳೂ ವಿದೇಶೀಯ ತುಕಡಿಗಳೂ ಸೇರಿದ್ದವು. ಬಸರದೇಶಿಯನಾದ ಹಸನ್ ಎಂಬುವನು ಈ ದಂಡಿಗೆಲ್ಲಾ ಮುಖ್ಯ ಸೇನಾಪತಿಯಾಗಿದ್ದನು. ದೇಶೀಯ ತುರುಕರು ವಿದೇಶೀಯ ತುರುಕರು ಪರಸ್ಪರ ವಿರೋಧದಿಂದ ಒಬ್ಬರಿಗೊಬ್ಬರು ಸಹಾಯಮಾಡದೇ ಹೋದಕಾರಣ ಬಹಮನಿ ರಾಜ್ಯದ ದಂಡಿಗೆ ಸೋಲಾಯಿತು. ಆದರೆ ಎರಡನೆಯ ಸಾರಿ ಅದೇ ಸೇನಾಪತಿಯು ಮೊಗಲಾಯಿ ತುಕಡಿಗಳನ್ನು ತೆಗೆದುಕೊಂಡು ಹೋಗಿ ಜಯವನ್ನು ಹೊಂದಿದನು. ಹೀಗೆ ಜಯಶೀಲನಾಗಿ ಬಂದ ಸೇನಾಪತಿಯನ್ನು ದೊರೆಮಗನೇ ಹೋಗಿ ಎದುರುಗೊಂಡು ಕರೆದುಕೊಂಡು ಬಂದನು. ಆ ದಿವಸದಿಂದ ವಿದೇಶೀಯ ತುರುಕರು ತನ್ನ ಬಲಗಡೆ ಇರಬೇಕೆಂತಲೂ ದೇಶೀಯ ತುರುಕರು ಎಡಗಡೆ ಇರಬೇಕೆಂತಲೂ ದೊರೆಯು ಅಪ್ಪಣೆ ಮಾಡಿದನು. ಇದರಿಂದ ಸ್ವದೇಶೀಯರಿಗೂ ವಿದೇಶೀಯರಿಗೂ ಅತಿಯಾಗಿ ದ್ವೇಷಹೆಚ್ಚಿ ಬೀದಿಬೀದಿಗಳಲ್ಲೆಲ್ಲಾ ಇವರುಗಳು ಜಗಳವಾಡುವುದಕ್ಕೆ ಆರಂಭವಾಯಿತು.

ಈ ಸಂದರ್ಭದಲ್ಲಿ ಅಹಮದ್ ಷಹವಲ್ಲಿ ಸತ್ತುಹೋದನು. ಇವನ ಮಗ ಸುಲ್ತಾನ್ ಅಲ್ಲಾಉದ್ದೀನ್‌ಗೆ ಪಟ್ಟವಾಯಿತು. ಈ ಹೊಸದೊರೆಯು ಸ್ವಭಾವದಲ್ಲಿ ಒಳ್ಳೆಯವನು. ನೀಚನಾದ ಇವನ ತಂದೆಯ ಹಾಗೆ ಇವನಲ್ಲಿ ಕ್ರೌರ್ಯವಿಲ್ಲ. ಆದರೆ ರಾಜ್ಯಭಾರವನ್ನೆಲ್ಲ ಮಂತ್ರಿಗಳಿಗೆ ಬಿಟ್ಟು ತಾನು ಕೇವಲಸ್ತ್ರೀಲೋಲನಾಗಿದ್ದನು. ದಖಿಣಿಯವರಿಗೂ ಫಾರ್ಸಿಯವರಿಗೂ ದ್ವೇಷ ದಿನೇ ದಿನೇ ವೃದ್ಧಿಯಾಯಿತು. ಫಾರ್ಸಿಯವರ ಪ್ರತಿಷ್ಠೆ ಹೆಚ್ಚಿಬಿಟ್ಟಿತು. ಈ ದೇಶದ ಸ್ಥಿತಿ ಹೀಗಿರುವಾಗಲೇ ಮಹಮದ್ ಗವಾನನು ಬಹಮನಿ ರಾಜ್ಯಕ್ಕೆ ಬಂದದ್ದು. ದೊರೆಯು ಸ್ವತಃ ತುಂಬ ವಿದ್ಯಾವಂತನಾಗಿದ್ದನು: ವಿದ್ಯಾವಂತರಲ್ಲಿ ತುಂಬ ಅಭಿಮಾನವನ್ನು ಇಟ್ಟುಕೊಂಡಿದ್ದನು. ಗವಾನನಿಗೆ ಇದ್ದ ಶ್ಲಾಘ್ಯವಾದ ಪಾಂಡಿತ್ಯವು ಇವನನ್ನು ದೊರೆಯ ಆಸ್ಥಾನಕ್ಕೆ ಎಳೆದುಕೊಂಡು ಹೋಯಿತು. ಇವನಲ್ಲಿ ರಾಜಾಭಿಮಾನ ವಿಶೇಷವಾಗಿತ್ತು. ಇವನ ದೇಶದ ಜನರೂ ಅಲ್ಲಿ ಬಹಳವಾಗಿದ್ದರು. ಇದಕ್ಕಿಂತಲೂ ಅನುಕೂಲವಾದ ಸ್ಥಳ ಇನ್ನು

ಯಾವುದು ಸಿಕ್ಕೀತು? ದೊರೆಯ ಬಲವಂತದಿಂದ ಇವನೂ ದರ್ಬಾರಿನಲ್ಲಿಯೇ ಸ್ಥಿರವಾಗಿ ನಿಂತನು. ಈ ಗವಾನನಿಗೆ ಒಂದು ಅಧಿಕಾರವೂ ಆಯಿತು.

ಸ. ೧೪೬೩ ರಲ್ಲಿ ಕೊಂಕಣ ದೇಶದ ಕಡೆ ಇದ್ದ ಕೆಲವರು ದೇಶೀಯ ಅರಸುಗಳು ಬಹಮನಿ ರಾಜ್ಯದ ಮೇಲೆ ಕೈಮಾಡಿ ಕದನಕ್ಕೆ ನಿಂತರು. ಇವರನ್ನು ನಿಗ್ರಹ ಮಾಡುವುದು ಸುಲಭವಾದ ಕೆಲಸವಾಗಿ ಕಂಡುಬರಲಿಲ್ಲ. ಆದಕಾರಣ ದೊರೆಯು ಮಲ್ಲಿಕುತುಬ್ಜಾರ್ ಎಂಬ ಸರದಾರನ ಸಂಗಡ ಸೇನೆಯನ್ನು ಕಳುಹಿಸಿದನು. ಈ ಸೇನೆಯಲ್ಲಿ ಒಬ್ಬ ಅಧಿಕಾರಿಯಾಗಿ ಗವಾನನು ಹೋಗಬೇಕೆಂದು ಅಪ್ಪಣೆಯಾಯಿತು. ಸೇನಾಪತಿಯಾದ ಮಲ್ಲಿಕನು ಆ ಪ್ರಾಂತದ ಕೆಲವು ಕೆಲವು ಮರಾಟಿ ಅರಸರನ್ನು ಜಯಿಸಿದನು. ಈ ಸರದಾರರಲ್ಲಿ ಒಬ್ಬನಾದ ಶಿರಕೆ ದೊರೆಯನ್ನು ಮುಸಲ್ಮಾನನಾಗೆಂದೂ ಇಲ್ಲವಾದರೆ ಅವನನ್ನು ಉಳಿಸದೆ ಕಡಿದುಬಿಡುವುದಾಗಿಯೂ ಮಲ್ಲಿಕನು ಹೇಳಿದನು. ಅದಕ್ಕೆ ಹೆದರಿದ ಶಿರಕೆ ರಾಜನು -ಖೇಳ್ಣಾ ಪಟ್ಟಣದ ಸರದಾರ ಶಂಕರರಾವ್ ಎಂಬುವನು ತನ್ನಲ್ಲಿ ಬಹಳವಾಗಿ ಹಗೆತನವನ್ನು ಸಾಧಿಸುತ್ತಿದ್ದಾನೆ, ಅವನನ್ನು ಜಯಿಸಲು ತನಗೆ ಮಲ್ಲಿಕನು ಸಹಾಯ ಮಾಡಿದರೆ, ಆ ಶಂಕರರಾಯನೂ ತಾನೂ ಏಕಕಾಲದಲ್ಲಿ ತುರುಕರಾಗಬಹುದು ಎಂದನು. ಇದಕ್ಕೆ ಒಪ್ಪಿ ಮಲ್ಲಿಕನು ಸೇನೆಯನ್ನು ಖೇಳಣ ಪಟ್ಟಣದ ಕಡೆಗೆ ತಿರುಗಲು ಅಪ್ಪಣೆ ಮಾಡಿದನು. ಆದರೆ ಇವನ ಸೇನೆಯಲ್ಲಿ ವಿಶೇಷ ದಖನಿಮುಸಲ್ಮಾನರೇ ಇದ್ದರು. ಇವರು ವಿದೇಶಿಯಾದ ಮಲ್ಲಿಕನ ಅಪ್ಪಣೆಯಂತೆ ನಡೆಯದೇ ಹೋದರು. ಖೇಳಣಾ ಪಟ್ಟಣವು ದೊಡ್ಡಕಾಡಿನ ಮಧ್ಯೆ ಇತ್ತು. ಈ ಮಹಾರಣ್ಯದಲ್ಲಿ ಹೋಗುವುದು ಸುಲಭವಾದ ಕೆಲಸವಾಗಿರಲಿಲ್ಲ. ಹೀಗೆ ದಖನಿ ಸೇನೆಯು ತಿರುಗಿಬಿದ್ದು ಮುಂದಕ್ಕೆ ಕಾಲಿಡದೆ ಹಿಂದಿರುಗಿ ಮಲ್ಲಿಕನು ಉಳಿದ ಜನರನ್ನು ಕರೆದುಕೊಂಡು ಆ ಕಾಡಿನಲ್ಲಿ ಖೇಳಣಾ ಪಟ್ಟಣವನ್ನು ಹುಡುಕುತ್ತಾ ಹೊರಟನು. ಈ ಕಾಡನ್ನು ದಾಟುವಾಗ ದಾರಿಯಲ್ಲಿ ಅನೇಕರು ಶೀತಜ್ವರ ಬಂದು ಬಲಿಯಾದರು. ಈ ಸಂದರ್ಭವನ್ನು ತಿಳಿದು ಶಿರಕೆ ಸರದಾರನು ಗುಟ್ಟಾಗಿ ಖೇಳಣಾ ಸರದಾರನಿಗೆ ಬೇಹುಗಾರರ ಮೂಲಕ ಹೇಳಿ ಕಳುಹಿಸಿದನು. ಅವರಿಬ್ಬರ ದಂಡೂ ಒಂದು ತುರುಕರ ದಂಡನ್ನು ನಾಶ ಮಾಡಿತು. ಕದನದಲ್ಲಿ ಮಲ್ಲಿಕನೂ ಮಡಿದನು. ಗವಾನನು ಹಾಗೂಹೀಗೂ ಪ್ರಾಣವನ್ನು ಉಳಿಸಿಕೊಂಡು ಓಡಿಬಂದು ಚಾಕಣ ದುರ್ಗವನ್ನು ಸೇರಿದನು. ಈ ಸಮಾಚಾರವನ್ನು ಗವಾನನಿಂದ ವಿಸ್ತಾರವಾಗಿ ಕೇಳಿ ಸುಲ್ತಾನ್ ಅಲ್ಲಾಉದ್ದೀನನು ದಖನಿ ತುರುಕರಲ್ಲಿ ಅನೇಕರನ್ನು ಹಿಡಿಯಿಸಿ ಫಿರಂಗಿ ಬಾಯಿಗೆ ಕಟ್ಟಿಸಿ ಸುಡಿಸಿದನು.

ಸುಮಾರು ಈ ಕಾಲದಲ್ಲಿ ದೊರೆಯ ಭಾವಮೈದುನನಾದ ಜಲಾಲ್‌ಖಾನನು ತಲಗುಂದದ ಪ್ರಾಂತದಲ್ಲಿ ಕೆಲವು ಪುಂಡರನ್ನು ಕಟ್ಟಿಕೊಂಡು ದಂಗೆ ಎದ್ದನು. ಇದನ್ನು ಅಡಗಿಸಲು ಹೊರಡಬೇಕೆಂದು ದೊರೆಯು ಅಪ್ಪಣೆ ಮಾಡಿದ ಪ್ರಕಾರ, ಗವಾನನು ಸೇನಾಸಮೇತನಾಗಿ ಹೋಗಿ ಜಲಾಲನನ್ನು ಜಯಿಸಿ ಬಂದನು. ಈ ರಾಜಕಾರ್ಯವನ್ನು ನಿರ್ವಹಿಸಿದ್ದಕ್ಕಾಗಿ ಆ ಸೇನಾಪತಿಗೆ ಬಾದಷಹನು ವಿಶೇಷವಾಗಿ

ಮರ್ಯಾದೆಯನ್ನು ಮಾಡಿದನು. ಆದರೆ ಗವಾನನು ಯಾವಾಗಲೂ ಪರಹಿತೈಷಿಯಾಗಿಯೇ ಇದ್ದವನಾದಕಾರಣ, ದೊರೆಯು ಸಂತೋಷಸಮಯವನ್ನು ನೋಡಿಕೊಂಡಿದ್ದು ಜಲಾಲನು ಪೃಸ್ತ್ಯದಿಂದ ಆಸ್ಥಾನದಲ್ಲಿ ದೊರೆಯ ಕ್ಷಮಾಪಣೆಯನ್ನು ಬೇಡಿಕೊಳ್ಳುವಂತೆ ಮಾಡಿ, ಅದೇ ತಲಗುಂದವನ್ನು ಅವನಿಗೆ ಜಹಗೀರಿಯಾಗಿ ಕೊಡಿಸಿದನು.

ಎರಡುವರುಷದ ತರುವಾಯ ಅಲ್ಲಾಉದ್ದೀನ್ ಸತ್ತು ಇವನ ಮಗ ಹುಮಾಯೂನ್ ಎಂಬುವನಿಗೆ ದೊರೆತನವಾಯಿತು. ತಂದೆ ಸಾಯುವಾಗ ಮಗನನ್ನು ಕುರಿತು--ಗವಾನನನ್ನು ಗೌರವವಾಗಿ ಕಾಪಾಡು ಎಂದು ಹೇಳಿದ್ದ ಮಾತಿನಪ್ರಕಾರ, ಈ ಹೊಸದೊರೆಯು ಗವಾನನಿಗೆ ಬಿರುದು ಮೊದಲಾದ್ದನ್ನು ಕೊಟ್ಟು ಗೌರವವಾಗಿ ಕಾಣುತ್ತಿದ್ದನು. ಜಲಾಲ್‌ಖಾನನು ಪುನಃ ತಲಗುಂದದಲ್ಲಿ ದಂಗೆ ಎಬ್ಬಿಸಿದನು. ಪುನಃ ಗವಾನನ್ನೇ ದಂಡಿನೊಡನೆ ಕಳುಹಿಸಿದರು; ಇವನು ಸ್ಥಳಕ್ಕೆ ಹೋಗಿ ಪುಂಡನ್ನು ಅಡಗಿಸಿ ಆ ತೆಲಿಂಗಾಣ್ಯದ ಸೀಮೆಯನ್ನು ಸಮಾಧಾನವಾದ ಸ್ಥಿತಿಗೆ ತಂದನು. ಇಂಥಾ ಸ್ವಜನವಮಾಡುತಿದ್ದ ಗಜಾಲಿಸಿಂದ ದೊರೆಗೆ ಅವನ ಮೇಲೆ ಬಹು ದ್ವೇಷಹುಟ್ಟಿತು. ಈ ಯುದ್ಧದ ಕಾರ್ಯಕ್ಕಾಗಿ ಗವಾನನು ಹೊರಟುಹೋಗಿದ್ದ ಕಾಲದಲ್ಲಿ ಹುಮಾಯೂನ್‌ಷಹಸಾಲಿಂ ಬಹಮನಿಯು ತನ್ನ ಸಂಬಂಧಿಗಳನ್ನು ಸುಮಾರು ೭೦೦ ಜನದವರೆಗೆ ಕೊಂದುಹಾಕಿಸಿದನು. ಇವನಿಗೆ ಸಾಲಿಂ ಎಂದು ಹೆಸರು ಬರಲು ಇದೇ ಕಾರಣ. (ಸಾಲಿಂ ಎಂದರೆ ನೀಚನೆಂದು ಅರ್ಥ.) ಗವಾನನು ಆಗ ರಾಜಧಾನಿಯಲ್ಲಿ ಇದ್ದಪಕ್ಷಕ್ಕೆ ದೊರೆಯು ಇಂಥಾ ಅನಾಹುತಕ್ಕೆ ಪ್ರವೇಶಮಾಡಲು ಆ ಮಂತ್ರಿಯು ಆಸ್ಪದಕೊಡುತ್ತಿರಲಿಲ್ಲ. ಈ ಮಹಾ ದುಷ್ಕಾರ್ಯಕ್ಕೆ ಗವಾನನು ಅಡ್ಡಿಯನ್ನು ತಂದು ಹಾಕಿಯಾನೆಂತಲೇ ಅವನು ಇಲ್ಲದ ಹಾಗೆ ಹುಮಾಯೂನ್‌ಷಹನು ಅವನನ್ನು ಯುದ್ಧದ ನೆಪದಿಂದ ಸ್ಥಳಾಂತರಕ್ಕೆ ಕಳುಹಿಸಿರಬಹುದೆಂದು ಯೋಚಿಸಿಕೊಳ್ಳುವುದಕ್ಕೆ ಆಧಾರವಿದೆ. ಹಾಗಿಲ್ಲದಿದ್ದರೆ ಒಂದು ಸಾಧಾರಣ ದಂಗೆಯನ್ನು ಅಡಗಿಸಲು ಮಂತ್ರಿಯೇ ಹೊರಡಬೇಕಾದ ಅಗತ್ಯವೇನೂ ಇರಲಿಲ್ಲ. ಆದಕಾರಣ ಇದು ಪೂರ್ವಭಾವಿ ದೊರೆಯು ಕೃತಸಂಕೇತನಾಗಿ ಮಾಡಿದ ಕಾರ್ಯವೆನ್ನುವುದಕ್ಕೆ ಅನುಮಾನ ಕಾಣುವುದಿಲ್ಲ. ಅತ್ಯಂತ ಕ್ರೂರಿಯಾದ ಈ ದೊರೆಯ ಸ್ವಭಾವವನ್ನು ನೋಡಿ ನೋಡಿ ಸಾಕಾಗಿ ಇಂಥವನ ಕೈಕೆಳಗೆ ಉದ್ಯೋಗದಲ್ಲಿರಬಾರದೆಂದು ಗವಾನನು ಬಹಳವಾಗಿ ಅಸಮಾಧಾನಪಟ್ಟುಕೊಂಡಿದ್ದನು. ಇದು ಸಹಜವೆ. ದೊರೆ ಯಾವ ಕೆಟ್ಟಕಾರ್ಯವನ್ನು ಮಾಡಿದರೂ ಆ ಭಾರವನ್ನು ಮಂತ್ರಿ ವಹಿಸಬೇಕಾಗುವುದು. ಅವನ ಮೇಲೆಯೇ ಆ ತೂಕವನ್ನೆಲ್ಲಾ ಪ್ರಜೆಗಳು ಹಾಕುವರು. ರಾಜನ ಬುದ್ಧಿಯ ಲಗಾಮನ್ನು ಎಳೆದು ಹಿಡಿಯಲು ಮಂತ್ರಿಯೇ ಅಪ್ಪಾರೂಢನಾಗಿದಾನೆ. ಇಂಥಾ ಕಷ್ಟತರವಾದ ಕೆಲಸವನ್ನು ಮಾಡಲು ತನ್ನ ಯತ್ನಮೀರಿದ್ದಕಾರಣ, ಇಂಥಾ ದಣಿಯ ಚಾಕರಿಯಲ್ಲಿ ಎಂದಿದ್ದರೂ ತನಗೆ ಕೆಟ್ಟಹೆಸರು ತಪ್ಪುವುದಿಲ್ಲವೆಂಬ ಭೀತಿಯಿಂದ ಗವಾನನು ತನ್ನ ಮಂತ್ರಿಯ ಕೆಲಸಕ್ಕೆ ರಾಜೀನಾಮೆಯನ್ನು ಕೊಡಬೇಕೆಂದು ಸದಾ ಯೋಚಿಸಿದ್ದನು.

ಈ ಮಧ್ಯೆ ಈ ಹುಮಾಯೂನ್‌ಷಹನೆಂಬುವನು ೧೪೬೧ ರಲ್ಲಿ ಮೃತಪಟ್ಟನು. ಇವನು ತನ್ನ ಅವಸಾನಕಾಲದಲ್ಲಿ ತನ್ನ ಮಗನಾದ ೮ ವರುಷದ ಹುಡುಗ ನಿಸಾಮ ನನ್ನೂ ತನ್ನ ಹೆಂಡತಿಯನ್ನೂ ಸಮೀಪಕ್ಕೆ ಕರೆದು ರಾಜ್ಯದ ಕ್ಷೇಮಕ್ಕೋಸ್ಕರ ಗವಾನನನ್ನು ಮುಖ್ಯಮಂತ್ರಿಯಾಗಿ ಮಾಡಿಕೊಳ್ಳಬೇಕೆಂದು ಹೇಳಿ ೧೪೬೧ ರಲ್ಲಿ ಪ್ರಾಣವನ್ನು ಬಿಟ್ಟನು.

ತರುವಾಯ ಅದೇ ೧೪೬೧ ರಲ್ಲಿ ನಿಸಾಮನಿಗೆ ಪಟ್ಟವನ್ನು ಕಟ್ಟಿದರು. ಅವನ ಬಾಲ್ಯದಶೆಯಲ್ಲಿ ಚತುರಳಾದ ಅವನ ತಾಯಿಯು ಗಂಡನ ಅನುಜ್ಞೆ ಪ್ರಕಾರ ನಡಿ ಸಲು ಉದ್ಯುಕ್ತಳಾದಳು. ಆದರೆ ಹಾಗೆ ಮಾಡುವುದರಲ್ಲಿ ಸ್ವಕೀಯರಾದ ಕೆಲವು ಸರದಾರರು ಅಸಮಾಧಾನದಿಂದ ತಿರುಗಿಬಿದ್ದರೂ ಬೇಕೆಂಬುದೆಂದು ಸೂಚನೆ ತೋರಿದ್ದರಿಂದ ಗವಾನನಿಗೆ ವಸೀರಿ ಕೆಲಸವನ್ನು ಕೊಟ್ಟು ವಕೀಲಿಗಲ್‌ತನತ್ ಎಂಬ ಸರ್ವಾಧಿಕಾರಕ್ಕೆ ಖಾಜಾಜಹಾನ್‌ತರಬ್ ಎಂಬುವನನ್ನು ನೇಮಿಸಿದಳು. ಆಸಂದರ್ಭದಲ್ಲಿ ಹುಟ್ಟಬಹುದಾಗಿದ್ದ ಕಲಹವು ಈ ಏರ್ಪಾಡಿನಿಂದ ತಪ್ಪಿತು. ಈ ರಾಣಿಯು ರಾಜಪ್ರತಿನಿಧಿಯಾಗಿ ದರ್ಬಾರು ಮಾಡಲು ಆರಂಭಿಸಿದಳು. ಇವಳು ಬಹಳ ಒಳ್ಳೆಯವಳು. ಜನರ ಸ್ವಭಾವವನ್ನೂ ತಾರತಮ್ಯವನ್ನೂ ಬಲ್ಲವಳು.

ಈ ಸಂದರ್ಭದಲ್ಲಿ ಒರಿಸ್ಸಾದೇಶದ ದೊರೆಯು ಬಹಮನಿರಾಜ್ಯದ ಮೇಲೆ ದಂಡೆತ್ತಿಬರಲು, ಗವಾನನು ತಾನೇ ಸೇನೆಯೊಡನೆ ಹೊರಟು ಶತ್ರುವನ್ನು ಜೈಸಿ ೫ ಲಕ್ಷ ಹೊನ್ನನ್ನು ಅವನಿಂದ ವಸೂಲ್ಮಾಡಿ ಕರಾರು ಮಾಡಿಕೊಂಡನು. ಇದಾದ ತರುವಾಯ ಮಾಳವ ದೇಶದ ಮಹಮೂದ್‌ಷಹ ಖಿಲ್ಜಿಯು ಬಹಮನಿರಾಜ್ಯಕ್ಕೆ ದಂಡೆತ್ತಿಬಂದನು. ಒರಿಸದ ದೊರೆಯು ಈ ಖಿಲ್ಜಿಯ ಸಂಗಡ ಸೇರಿಕೊಂಡನು. ಈ ಉಭಯ ದೊರೆಗಳ ಸೇನೆಯೂ ಸೇರಿ ಬಹಮನಿಯವರನ್ನು ಪೂರ್ತಿಯಾಗಿ ಸೋಲಿಸಿತು. ಆಗ ಗವಾನನು ಹೇಳಿದಂತೆ ರಾಣಿಯು ಫಿರೋಜಾಬಾದನ್ನು ರಾಜ ಧಾನಿಯಾಗಿ ಮಾಡಿಕೊಂಡಳು. ಆ ಸಮಯದಲ್ಲಿ ಗವಾನನು ತನ್ನ ಮಂತ್ರಿತ್ವದ ಸಾಮರ್ಥ್ಯದಿಂದ ಶತ್ರುಕೂಟದಲ್ಲಿದ್ದ ಗುಜರಾತ್ ದೊರೆಯ ಮಿತ್ರತ್ವವನ್ನು ಬೆಳೆಯಿಸಿ, ತನ್ನ ಸಹಾಯಕ್ಕಾಗಿ ಅವನಿಂದ ೮೦.೦೦೦ ಸಾವಿರ ಕುದುರೆಯನ್ನು ತರಿಸಿದನು. ಈ ವರ್ತಮಾನವನ್ನು ಕೇಳಿ ಖಿಲ್ಜಿಯು ಸೇನೆಯೊಡನೆ ಬಹಮನಿ ರಾಜ್ಯವನ್ನು ಬಿಟ್ಟು ದಿಕ್ಕುಕೆಟ್ಟು ಓಡಿಹೋದನು. ಗವಾನನ ತಂತ್ರದಿಂದ ಶತ್ರುನಿವಾರಣೆ ಯಾಯಿತು. ಇವನ ಪ್ರಯತ್ನವು ಎಲ್ಲಾ ಕಡೆಯಲ್ಲಿಯೂ ಜಯಪ್ರದವಾಯಿತು.

ಈ ಸಮಯದಲ್ಲಿ ನಿಜಾಂಷಹನಿಗೆ ವಯಸ್ಸು ಚಿಕ್ಕದಾದಾಗ್ಯೂ ಅವನಿಗೆ ಮದುವೆ ಮಾಡಬೇಕೆಂದು ರಾಜಪ್ರತಿನಿಧಿಯಾದ ದೊರೆಯ ತಾಯಿಯು ಉದ್ದೇಶ್ಯ ಮಾಡಿದಳು. ಚಿಕ್ಕವಯಸ್ಸಿನಲ್ಲಿ ಮದುವೆ ಮಾಡಬಾರದೆಂಬ ಈಗಿನ ಕಾಲದ ಹೊಸಕಲಿತೆಯು ಆಗ ಹಿಂದುಗಳಲ್ಲಿ ಹುಟ್ಟಿರಲಿಲ್ಲ. ಇವರನ್ನು ನೋಡಿ ಆ ಕಾಲದ ಮುಸಲ್ಮಾನರೂ ಎಗ್ಗಿಲ್ಲದೆ ಬಾಲ್ಯವಿವಾಹವನ್ನು ಆಚರಣೆಯಲ್ಲಿ ತಂದಿದ್ದರು. ಇಂಥಾ ಮದುವೆಯನ್ನು ಮಾಡಕೂಡದೆಂದು ಮುಸಲ್ಮಾನರಲ್ಲಿ ನಿರ್ಬಂಧವೇನೂ ಇರಲಿಲ್ಲ. ಗವಾನನೂ ಸಹಾ ಇದಕ್ಕೆ ಒಪ್ಪಿದನು. ಲಗ್ನನಿಷ್ಕರ್ಷೆಯಾಗಿ ಮದುವೆ

ಬೆಳೆಯಿತು. ಆದರೆ ಆ ದಿವಸವೇ ದೊರೆಯಾದ ನಿಜಾಂಷಹನು ೧೪೬೩ರಲ್ಲಿ ಸತ್ತುಹೋದನು. ಕೂಡಲೆ ಈ ದೊರೆಯ ತಮ್ಮನಾದ ೯ ವರುಷದ ಮೊಹಮ್ಮದ್‌ಷಹನಿಗೆ ಪಟ್ಟವನ್ನು ಕಟ್ಟಿದರು. ಗವಾನನು ಮಂತ್ರಿಯಾಗಿಯೇ ಇದ್ದುಕೊಂಡು ವಿಶೇಷವಾದ ರಾಜಭಕ್ತಿಯಿಂದ ಎಲ್ಲಾ ಕಾರ್ಯಗಳನ್ನೂ ನಿರ್ವಹಿಸಿದನು: ಈ ಮಂತ್ರಿಯು ವಿದ್ವತ್ತಿನ ಮಹಿಮೆಯನ್ನು ಬಲ್ಲ ಪಂಡಿತನಾದ ಕಾರಣ ದೊರೆಯ ವಿದ್ಯಾಭ್ಯಾಸಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದನು. ಈ ಬಹಮನಿ ದೊರೆಗಳಲ್ಲಿ ಫಿರೋಜ್‌ಷಹನು ಒಳ್ಳೆ ಪಂಡಿತನೆಂದು ಖ್ಯಾತಿಪಡೆದಿದ್ದನು. ಅವನ ತರುವಾಯ ಅಂಥಾ ಹೆಸರುವಾಸಿಯು ಅವನ ಮರಿಮಗನಾದ ಈ ಮೊಹಮ್ಮದ್‌ಷಹನಿಗೆ ಬಂತು. ಇದು ಗವಾನನಿಂದಲೇ ಆಯಿತೇ ಹೊರತು ಮತ್ತೆ ಬೇರೆ ಇಲ್ಲ.

ಈ ಬಹಮನಿ ರಾಜ್ಯದಲ್ಲಿದ್ದ ದಖನಿ, ವಿದೇಶಿ, ಎಂಬ ಎರಡು ಪಂಗಡಗಳಲ್ಲಿ ಮೊದಲನೆಯದಕ್ಕೆ ಮುಖಂಡನಾಗಿ ತಾನು ವಜೀರನಾಗಬೇಕೆಂದು ವಿಶೇಷವಾದ ಗಲಭೆಯನ್ನು ನಡಿಸುತ್ತಿದ್ದ ಖಾಜಾಜಿಹಾನ್‌ತರಖನ ನಡತೆಯು ಬಹಳ ಅನುಮಾನಾಸ್ಪದವಾಗಿತ್ತು. ವಕೀಲನಾಗಿ ಮಂತ್ರಾಲೋಚನೆ ಸಭೆಗೆ ಸೇರಿದ್ದ ಇವನನ್ನು ಉಪಾಯವಾಗಿ ಕೊಲ್ಲಿಸುವುದಕ್ಕೆ ದೊರೆಯ ತಾಯಿ ಅಂಗೀಕಾರ ಮಾಡಿದ ಪ್ರಕಾರ ನಿಜಾಮುಲ್‌ಮುಲ್ಕನು ಇವನ ಪ್ರಾಣವನ್ನು ತೆಗೆಯಿಸಿದನು. ರಾಣಿಯು ಖಾಜಾಜಿಹಾನ್ ಎಂಬ ಬಿರುದನ್ನು ಮಂತ್ರಿಯಾದ ಗವಾನನಿಗೆ ಕೊಟ್ಟಳು. ಈ ಮೂಲಕ ವಿದೇಶೀಯರ ಪಕ್ಷ ಬಲವಾಯಿತು. ಯುದ್ಧದಲ್ಲಿ ಒಳ್ಳೇ ಪರಾಕ್ರಮಿ, ವಿದ್ಯಾವಂತರಲ್ಲಿ ಒಳ್ಳೇ ಪಂಡಿತ, ನಡತೆಯಲ್ಲಿ ಪರಮಸಾಧು, ರಾಜಕೀಯ ವಿಚಾರದಲ್ಲಿ ನಿಸ್ಸೀಮ, ಹೀಗೆಂದು ಗವಾನನಿಗೆ ಖ್ಯಾತಿಬಂತು.

೪ನೆಯ ಅಧ್ಯಾಯ.

ಆಡಳಿತಗಳೆಲ್ಲಾ ಸುಮಾರಾಗಿ ಸಮಾಧಾನ ಸ್ಥಿತಿಗೆ ಬರುತಿರಲಾಗಿ, ಕೊಂಕಣ ದೇಶದಲ್ಲಿ ಗಲಾಟೆ ಹೆಚ್ಚಾಯಿತು. ಆ ದೇಶದ ದೊರೆಯು ಹೆಚ್ಚಾಗಿ ಹಡಗುಗಳನ್ನಿಟ್ಟು ಸಮುದ್ರದಮೇಲೆ ಹೋಗತಕ್ಕ ಜಹಜುಗಳನ್ನು ಹೊಡೆಯಿಸಿ ಲೂಟೀಮಾಡಿಸುತ್ತಾ ಇದ್ದನು. ಅವನು ಪಶ್ಚಿಮಘಟ್ಟದ ಕಣಿವೆ ಕೆಳಗಿನಿಂದ ಮೇಲ್‌ಸೀಮೆಗೆ ಬರಲು ಇದ್ದ ಪರ್ವತದ ಸಂದುಗಳನ್ನೆಲ್ಲಾ ಬಿಗಿಮಾಡಿ ಯಾರೂ ಬರದಂತೆ ತಡೆ ಮಾಡಿ ಬಿಟ್ಟನು. ಈ ಹಾವಳಿಯನ್ನು ಪ್ರಬಲರಾದ ಬಹಮನಿ ರಾಜ್ಯದವರು ನೋಡಿಕೊಂಡು ಸುಮ್ಮನಿರಲು ಆದೀತೆ? ಮತ್ತು ಹಿಂದಕ್ಕೆ ಶರಕೇರಾಜನೂ

ಖೇಳಣಪಟ್ಟಣದ ಶಂಕರರಾಯನೂ ತಂತ್ರದಿಂದ ಬಹಮನಿಯವರ ಸೇನೆಯನ್ನು ಆವರಿಸಿಕೊಂಡು ದಿಕ್ಕು ತೋರದಹಾಗೆ ತುರುಕರನ್ನು ಕಾಡಿನಲ್ಲಿ ಸೇರಿಸಿಕೊಂಡು ಕಣ್ಣು ಬಿಟ್ಟಾಡುವಂತೆ ಮಾಡಿ ಅವರನ್ನು ಪೂರ್ತಿಯಾಗಿ ಸೋಲಿಸಿದಾಗ ಪಟ್ಟ ಅವಮಾನವನ್ನು ಮಂತ್ರಿಯು ಮರೆತಿರಲಿಲ್ಲ. ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟು ಕೊಂಡು ಗವಾನನು ಸೇನಾಸಮೇತನಾಗಿ ತಾನೇ ೧೪೬೯ ರಲ್ಲಿ ಕೊಂಕಣದ ಮೇಲೆ ಹೊರಟನು. ಕೂಡಲೆ ರಾಮುಕಳವೆಂಬ ಕೋಟೆಯನ್ನು ಹಿಡಿದುಕೊಂಡು ಶತ್ರುಗಳನ್ನು ಸೋಲಿಸಿದನು. ಕೋಹನವೆಂಬ ಕೋಟೆಯೂ ತುರುಕರ ವಶ ವಾಯಿತು. ಶಂಕರರಾಯನ ರಾಜ್ಯವು ಸಮುದ್ರತೀರದವರೆಗೂ ವ್ಯಾಪಿಸಿತ್ತು. ಈ ರಾಜನಿಗೆ ಸೇರಿದ ३೦೦ ಹಡಗುಗಳು ಹಗೆಗಳೊಡನೆ ಕಾದುವುದಕ್ಕೆ ಯಾವಾ ಗಲೂ ಸಿದ್ಧವಾಗಿದ್ದವು. ವ್ಯಾಪಾರಮಾಡುವ ನೆವದಲ್ಲಿ ಆಗಾಗ ವಿಶೇಷವಾಗಿ ಈ ದೇಶಕ್ಕೆ ಬಂದು ಹಡಗು ಇಳಿಯುತ್ತಾ ಇದ್ದ ತುರುಕರಿಗೆ ಶಂಕರರಾಯನಿಂದ ಬಹಳ ನಿರ್ಬಂಧ ಉಂಟಾಗಿತ್ತು. ಇದನ್ನು ಕಂಡು ಗವಾನನು ಅವನೊಡನೆ ರಾಜಿ ಮಾಡಿಕೊಳ್ಳಬೇಕೆಂದು ಯತ್ನಮಾಡಿದನು. ಆ ದೊರೆಯು ಇದಕ್ಕೆ ಒಪ್ಪ ಲಿಲ್ಲ. ಆದಕಾರಣ ಮಂತ್ರಿಯು ಆ ರಾಯನೊಡನೆ ಯುದ್ಧಕ್ಕೆ ಅನುವಾದನು.

ಇದಲ್ಲದೆ ವಿಜಯನಗರದ ಸಂಸ್ಥಾನದವರು ಬಹು ಪ್ರಬಲರಾಗಿ ತಮ್ಮ ರಾಜ್ಯ ವನ್ನು ಪಶ್ಚಿಮಸಮುದ್ರದವರೆಗೂ ವಿಸ್ತರಿಸಿದ್ದರು. ಅಲ್ಲಿನ ರೇವುಪಟ್ಟಣಗಳೆಲ್ಲಾ ಇವರಿಗೆ ಸೇರಿದ್ದವು. ದೇಶಾಂತರದ ಸರಕುಗಳೆಲ್ಲಾ ಅಲ್ಲಿಗೆ ಹಡಗಿನಮೇಲೆ ಬಂದು ಇಳಿದು ವ್ಯಾಪಾರ ಹೆಚ್ಚಾಗಿ ನಡೆಯುತ್ತಾ, ಆ ದೇಶದ ಪ್ರಸಿದ್ಧವಾದ ಐಶ್ವರ್ಯ ಹೆಚ್ಚು ವುದಕ್ಕೆ ಕಾರಣವಾಗಿತ್ತು. ಇಂಥಾ ವ್ಯಾಪಾರಕ್ಕೆ ಆಗ ಗೋವಪಟ್ಟಣ ಮುಖ್ಯ ಸ್ಥಾನವಾಗಿತ್ತು. ಈ ರೇವುಪಟ್ಟಣವನ್ನು ಗವಾನನು ವಶಮಾಡಿಕೊಳ್ಳದಿದ್ದರೆ ಮರಾಟೀಸರದಾರರನ್ನು ಅಡಗಿಸುವುದು ಸಾಧ್ಯವಾಗಿ ತೋರಲಿಲ್ಲ. ಆದರೆ ಗೋವ ವನ್ನು ಹಿಡಿಯಲು ಯುದ್ಧದ ಹಡಗುಗಳಿಲ್ಲದೆ ಆಗುತಿರಲಿಲ್ಲ. ಬಹಮನಿರಾಜ್ಯ ದವರು ಅದುವರೆಗೆ ಯುದ್ಧದ ಹಡಗುಗಳನ್ನೇ ಅರಿಯರು. ಗವಾನನು ಇದನ್ನು ಯೋಚಿಸಿ ಹೊಸದಾಗಿ ೧೨೦ ಯುದ್ಧದ ಹಡಗುಗಳನ್ನು ಕಟ್ಟಿಸಿ, ಏನೋ ಒಂದು ನೆಪವನ್ನು ತೆಗೆದು ವಿಜಯನಗರದವರೊಡನೆ ಯುದ್ಧಮಾಡಿ ಗೋವಪಟ್ಟಣವನ್ನು ಜೈಸಿಕೊಂಡನು; ಮತ್ತು ಕೊಲ್ಲಾಪುರವನ್ನು ಹಿಡಿದುಕೊಂಡು ಅಲ್ಲಿ ತಮ್ಮ ಮುಖ್ಯ ಪಾಳಯವನ್ನಿಟ್ಟುಕೊಂಡು ಎರಡು ವರುಷಗಳವರೆಗೂ ಕಾದಿ ಅತ್ತ ಗೋವವನ್ನೂ ಇತ್ತ ಖೇಳಣಪಟ್ಟಣವನ್ನೂ ಸಾಧಿಸಿ ಅಲ್ಲಲ್ಲಾ ಹರಡಿಕೊಂಡು ಹಾವಳಿಮಾಡುತ್ತಿದ್ದ ಮರಾಟೀಸರದಾರರೆಲ್ಲರನ್ನೂ ಅಡಗಿಸಿದನು. ಈ ಜಗಳದಲ್ಲಿ ಸಮುದ್ರದಮೇಲಿನ ಯುದ್ಧಕೂಡ ನಡೆಯಿತು. ಯೂರೋಪುಖಂಡದ ಜನರು ಈ ದೇಶಕ್ಕೆ ಬರುವುದಕ್ಕೆ ಮುಂಚೆ ನಮ್ಮವರು ಜಹಜುಗಳನ್ನು ಅರಿಯಲೇ ಅರಿಯರೆಂತಲೂ ಯುದ್ಧದ ಹಡಗುಗಳ ವಿಚಾರವನ್ನಂತೂ ಕಂಡವರೇ ಅಲ್ಲವೆಂತಲೂ ನಮ್ಮ ದೇಶೀಯರ ಪರಾ ಕ್ರಮವನ್ನೂ ಯೋಗ್ಯತೆಯನ್ನೂ ಅಲಗಳೆಯತಕ್ಕ ವಿದೇಶಾಭಿಮಾನಿಗಳಿಗೆ ಮೇಲಿನ ಸಂಗತಿಯು ಉತ್ತರವಾಗಿದೆ.

ಗೋವಸೀಮೆ ತುರುಕರ ವಶವಾಯಿತೆಂದು ಕೇಳಿ ಬಹಮನಿದೊರೆಯಾದ ಮೊಹಮ್ಮದ್‌ಷಹನು ಅತ್ಯಂತ ಸಂತೋಷಭರಿತನಾಗಿ ಗವಾನನ ಮನೆಗೆ ಬಂದು ಅವನಿಗೆ ಅನೇಕ ಬಿರುದುಗಳನ್ನು ಕೊಟ್ಟು ಅಲ್ಲಿಯೇ ಕೆಲವುದಿವಸ ವಾಸವಾಗಿರುತಾ ಆ ಮಂತ್ರಿಯನ್ನು "ಅಣ್ಣಾ ಅಣ್ಣಾ," ಎಂದು ಕರೆಯುತಾ ವಿಶೇಷವಾದ ಅಭಿಮಾನ ವನ್ನು ತೋರಿಸಿದನು. ಈ ರೀತಿಯಲ್ಲಿ ಅತ್ಯಂತ ಆಪ್ತರಾದವರನ್ನು ದೊರೆತನಮಾಡ ತಕ್ಕವರೂ ಮುತ್ತು ಇತರರೂ "ಅಣ್ಣಾ, ಭಾವ," ಎಂದು ವಾವೆಯಿಂದ ಕರೆಯುವ ವಾಡಿಕೆಯು ಮುಸಲ್ಮಾನರಲ್ಲಿಯೂ ನಮ್ಮ ಜನರಲ್ಲಿಯೂ ಹೆಚ್ಚಾಗಿತ್ತು. ಶ್ರೀರಂಗ ಪಟ್ಟಣದ ಹೈದರಲ್ಲಿಗೆ ಪರಮಾಪ್ತನಾಗಿದ್ದ ದಿವಾನ್‌ಪೂರ್ಣಯ್ಯನನ್ನು ಹೈದರಲ್ಲಿಯ ಮಗನಾದ ಟೀಪುಸುಲ್ತಾನನು ಕೇವಲ ಸಲಿಗೆಯಾಗಿ ಚಿಕ್ಕಪ್ಪ ಎಂದು ಕರೆಯು ತಿದ್ದನು. ಈ ದಿವಾನಪೂರ್ಣಯ್ಯನ ಕೂಡ ತನಗೆ ಆಪ್ತರೆನಿಸಿಕೊಂಡಿದ್ದ ಫೌಜು ದಾರ ನಲ್ಲಪ್ಪನನ್ನೂ ಮುತ್ತು ಅವರ ಮನೆಯ ಜನರನ್ನೂ ವಾವೆಯಿಂದ ಅಣ್ಣೈಯ್ಯ, ತಮ್ಮಯ್ಯ' ಭಾವೈಯ್ಯ, ಮಾವ, ಎಂದು ಕರೆಯುತ್ತಿದ್ದರೆಂದು ತಿಳಿದುಬಂದಿದೆ. ದೊರೆಗೆ ಗವಾನನಲ್ಲಿ ಇದ್ದ ಅಭಿಮಾನದ ಶಾಖೆಯು ಗವಾನನ ಗುಲಾಮನಾಗಿದ್ದ ಖುಷ್‌ಖದಂ ಎಂಬುವನಿಗೂ ವ್ಯಾಪಿಸಿತು. ಈ ಗುಲಾಮನಿಗೆ ದೊರೆಯು ಒಂದು ಜಹಗೀರಿಯನ್ನು ಕೊಟ್ಟನು.

ಹೀಗಿರುವಲ್ಲಿ ವಿಜಯನಗರದ ದೊರೆಯು ಗೋವವನ್ನು ತುರುಕರಿಂದ ಕಿತ್ತು ಕೊಳ್ಳುವುದಕ್ಕೆ ಇತರ ದೊರೆಗಳನ್ನು ಎತ್ತಕಟ್ಟಿದನು. ಆಗ ಬೆಳಗಾವಿಗೆ ಮುತ್ತಿಗೆ ಹಾಕಲು ಗವಾನನು ಏರ್ಪಾಡುಮಾಡಿದನು. ತುರುಕರು ಬೆಳಗಾವ್‌ಕೋಟೆಗೆ ಸುರಂಗವನ್ನು ಹಾಕಿ ಕೋಟೆಗೋಡೆಯನ್ನು ಕೆಡವಿದರು. ಸುರಂಗ ಹಾಕುವುದನ್ನು ಈ ದೇಶದವರು ಅರಿಯರು ಎಂತಲೂ ಮದ್ದನ್ನು ಈ ದೇಶಕ್ಕೆ ಮೊದಲು ತಾವೇ ತಂದವರು ಎಂತಲೂ ಹೇಳಿಕೊಳ್ಳುವ ಇಂಗ್ಲಿಷರು ಆಗ ಈ ದೇಶಕ್ಕೆ ಬಂದೇ ಇರಲಿಲ್ಲ; ಮುತ್ತು ಮದ್ದುಮಾಡುವ ಕ್ರಮವನ್ನು ಇವರ ದೇಶೀಯರು ತಿಳಿದೂ ಇರಲಿಲ್ಲ. ಇದು ನಡೆಯುತ್ತಾ ಇರುವಾಗ ವಿಜಯನಗರದಲ್ಲಿ ಪೂರ್ವದ ವಂಶದ ಅರಸರು ಹೋಗಿ ಬೇರೇ ಹೊಸದೊರೆಗಳು ಪದವಿಗೆ ಬಂದರು. ಆಗ ವಿಜಯನಗರಕ್ಕೆ ಬಹಮನಿ ಯವರು ಮುತ್ತಿಗೆಹಾಕಿದರು. ದಾರಿಯಲ್ಲಿ ಒಂದು ಹಾಳುಕೋಟೆ ಸಿಕ್ಕಿತು. ಗವಾನನು ಆ ಕೋಟೆಯನ್ನು ಸರಿಮಾಡಿಸಿ ಜೀರ್ಣೋದ್ಧಾರಮಾಡಿ ದೊರೆಯ ಅಪ್ಪಣೇಪ್ರಕಾರ ಅಲ್ಲಿ ಒಂದು ಅರಮನೆಯನ್ನು ಕಟ್ಟಿಸಿದನು. ಗವಾನನ ಸಾಮರ್ಥ್ಯ ವನ್ನು ಕಂಡು ಮೊಹಮ್ಮದಷಹನು ಬಹಳ ಶ್ಲಾಘನೆಮಾಡಿ ತನ್ನ ಉಡುಪನ್ನು ಗವಾ ನನಿಗೆ ಕೊಟ್ಟು ಅವನ ಉಡುಪನ್ನು ತಾನು ಹಾಕಿಕೊಂಡನು. ಹೀಗೆ ದೊಡ್ಡವರ ಬಟ್ಟೆಯನ್ನು ಸಾಧಾರಣರು ಹಾಕಿಕೊಳ್ಳುವುದರಿಂದ ಸಾಧಾರಣ ಜನರಿಗೇನೋ ಗೌರವಹೆಚ್ಚು. ಈ ಪದ್ಧತಿ ನಮ್ಮಲ್ಲಿಯೂ ಇದೆ. ಮಠಪತಿಗಳ ಶೇಷವಸ್ತ್ರವನ್ನು ಸಾಧಾರಣ ಶಿಷ್ಯರಿಗೆ ಧರಿಸುವುದಕ್ಕೆ ಕೊಡತಕ್ಕದ್ದು ಅದನ್ನು ಅವರು ಧರಿಸತಕ್ಕದ್ದು ಸಹ ನಮ್ಮಲ್ಲಿ ವಾಡಿಕೆಯಾಗಿದೆ. ಆದರೆ ಅಂಥಾ ಸಾಧಾರಣರ ಬಟ್ಟೆಯನ್ನು ಪದವಿಯುಳ್ಳರತಕ್ಕವರು ಪ್ರೇಮಸೂಚಕವಾಗಿ ಧರಿಸತಕ್ಕದ್ದೇನೋ ಮುಸಲ್ಮಾನರಲ್ಲಿ

ಹೆಚ್ಚಿನ ವಿಷಯವಾಗಿ ಕಂಡುಬರುವುದು. ಮತ್ತು ನಮ್ಮಲ್ಲಿ ಕೇವಲ ಪರಿಶುದ್ಧರು ಯೋಗನಿಷ್ಟರು ಜ್ಞಾನನಿಷ್ಟರು ಎನಿಸಿಕೊಂಡಿರುವವರ ವಸ್ತ್ರಕ್ಕೆ ಮೇಲೆಹೇಳಿದ ಪ್ರಾಶಸ್ತ್ಯವಲ್ಲದೆ ಇತರರು ಧರಿಸಿದ ವಸ್ತ್ರಕ್ಕೆ ಅಂಥ ಗೌರವವನ್ನು ನಾವು ಕೊಡುವುದಿಲ್ಲ; ಮುಸಲ್ಮಾನರಲ್ಲಿ ಹಾಗೆ ಗೌರವವನ್ನು ತೋರಿಸತಕ್ಕದ್ದು ಒಂದು ವಿಶೇಷ ವಿಧಿಯಾಗಿ ಕಂಡುಬರುವುದು.

---

೫ ನೆಯ ಅಧ್ಯಾಯ.

ದರಬಾರಿನ ಸ್ಥಿತಿ.

ಇದು ಬಹಮನಿ ದೊರೆಗಳ ಚರಿತ್ರೆಯಲ್ಲಿ ಅವರ ಮಹಾಮಂತ್ರಿಯ ಚರಿತ್ರೆಯಾಗಿದೆ. ಆದರೂ ರಾಜ್ಯಭಾರದಲ್ಲಿ ವಿಶೇಷವಾಗಿ ಆಡಳಿತವನ್ನು ನಡೆಯಿಸಿದ ಆ ವಸೀರನ ಕಾಲದಲ್ಲಿ ದರಬಾರಿನಸ್ಥಿತಿ ಹೀಗಿತ್ತೆಂದು ತಿಳಿಯಬೇಕಾದುದು ಯುಕ್ತವೆಂದುತೋರುವುದು.

ಈ ಬಹಮನಿ ನವಾಬರ ಉಡುಪು ಕರೀ ಬಣ್ಣದ್ದು. ಇವರ ಛತ್ರಿ ಕರೀ ಬಟ್ಟೆಯದು. ಇವರು ಕೂತುಕೊಳ್ಳುತ್ತಿದ್ದ ದರ್ಬಾರಿನ ಆಸನವು ಕರಿಯ ಮರದ್ದು. ಇದಕ್ಕೆ ವಿಶೇಷವಾಗಿ ಬಂಗಾರ ಮತ್ತು ರತ್ನ ಪಡಿ ಕೆತ್ತನೆ ಕೆಲಸವನ್ನು ಮಾಡಿತ್ತು. ಇದಕ್ಕೆ ಮೂರುವರೆ ಕೋಟಿ ವರಹ ಮುಟ್ಟಿತ್ತು. ಇವರು ಇಟ್ಟುಕೊಳ್ಳುತ್ತಿದ್ದ ಚಿನ್ನದ ಕಿರೀಟಕ್ಕೆ ಹದಿನಾಲ್ಕುವರೆ ಲಕ್ಷ ವರಹ ಮುಟ್ಟಿತ್ತು. ದೊರೆಯ ಲಾಯದಲ್ಲಿ ನಾನಾ ವಿಧವಾದ ಕುದುರೆಗಳಿದ್ದವು. ಯಾವಾಗಲೂ ಎರಡು ಸಾವಿರ ಆನೆ ಸಿದ್ಧವಾಗಿರುತಿತ್ತು. ಇವರು ಚಿನ್ನದಲ್ಲಿಯೂ ಬೆಳ್ಳಿಯಲ್ಲಿಯೂ ನಾಣ್ಯಗಳನ್ನು ಹಾಕಿಸಿದ್ದರು. ಇದರಲ್ಲಿ ಭಾರಿನಾಣ್ಯ ಎರಡು ತೊಲೆ ತೂಕವಿತ್ತು, ಕಮ್ಮಿ ನಾಣ್ಯ ಕಾಲು ತೊಲೆ ತೂಕವಿತ್ತು. ಅದರ ಮೇಲೆ ಒಂದು ಕಡೆ ಮುಸಲ್ಮಾನ ಮತಶ್ರೇಷ್ಟವೆಂತಲೂ ಇನ್ನೊಂದು ಕಡೆ ದೊರೆಯ ಹೆಸರೂ ಫಾರ್ಸಿಯಲ್ಲಿ ಕೆತ್ತಿತ್ತು. ಹಿಂದೂ ಪ್ರಜೆಗಳಿಗೆ ಈ ನಾಣ್ಯವನ್ನು ಕಂಡರೆ ಆಗುತ್ತಿರಲಿಲ್ಲ. ಅವರು ಅದನ್ನ ವಿಶೇಷವಾಗಿ ಕರಗಿಸಿಬಿಡುತಿದ್ದರು. ನಾಣ್ಯ ಕರಗಿಸಿದವರನ್ನು ಸರ್ಕಾರದವರು ಶಿಕ್ಷಿಸುತ್ತಿದ್ದರು. ಈ ನಾಣ್ಯ ಈ ದೊರೆಗಳ ದಿವಸದಲ್ಲಿಮಾತ್ರ ಚಲಾವಣೆಯಲ್ಲಿತ್ತು.

ದರಬಾರು.— ಈ ದೊರೆಗಳು ಶುಕ್ರವಾರ ಹೊರತು ಉಳಿದ ದಿವಸದಲ್ಲಿ ಬೆಳಗಿನಿಂದ ಮಧ್ಯಾಹ್ನದವರೆಗೆ ದರಬಾರು ಮಾಡುತಿದ್ದರು. ದರಬಾರು ಖಾನೆಯಲ್ಲಿ ರೇಷ್ಮೆ ತೆರೆಗಳನ್ನು ಅಲ್ಲಲ್ಲಿ ಹಾಕಿ ಶೃಂಗರಿಸಿದ್ದರು. ಫಕೀರರು, ಖಾಸಿಗಳು, ಮೌಲ್ವಿಗಳು ಮೊದಲಾಗಿ ಮತಸಂಬಂಧವಾದ ಜನರು ದೊರೆಯ ಸನ್ನಿಧಿಯಲ್ಲಿ

ಕೂತುಕೊಳ್ಳುತಿದ್ದರು. ಉಳಿದವರೆಲ್ಲಾ ನಿಂತುಕೊಳ್ಳುತಿದ್ದರು. ಜನರು ತಮ್ಮ ಅರ್ಜಿಗಳನ್ನು ಸ್ವತಃ ತಂದು ದರಬಾರಿನಲ್ಲಿ ಕೊಡುತಿದ್ದರು. ಅವರ ವಿಚಾರಣೆ ಯಾಗುತಿತ್ತು. ಆದರೆ ಅರ್ಜಿ ತೆಗೆದುಕೊಂಡು ದೊರೆಯ ಸಮೀಪಕ್ಕೆ ಹೋಗತಕ್ಕ ಜನರನ್ನು ಅಂಗಶೋಧನೆ ಮಾಡಿ ಅವರಲ್ಲಿದ್ದ ಆಯುಧಗಳನ್ನು ಪಹರೇದವರು ತೆಗೆದುಕೊಂಡು ಆ ಜನರನ್ನು ಒಳಕ್ಕೆ ಬಿಡುತಿದ್ದರು. ಸರ್ಕಾರಿ ವಿಷಯವೆಲ್ಲಾ ಬಹಿರಂಗವಾಗಿ ದರಬಾರಿನಲ್ಲಿ ವಿಚಾರಣೆಯಾದ ಕೂಡಲೆ ಫೈಸಲಾಗುತಿತ್ತು.

ಮದುವೆ.—ದೊರೆಯ ಮಕ್ಕಳನ್ನು ದೊರೆಗಳಲ್ಲಿಯೂ ಮತಸಂಬಂಧದ ಜನರಲ್ಲಿಯೂ ಕೊಟ್ಟು ತಂದು ಮಾಡುತಿದ್ದರು. ಸಾಧಾರಣಜನರಲ್ಲಿ ನಂಟತನ ಮಾಡುತಿರಲಿಲ್ಲ. ಈ ದೊರೆಗಳು ಹಿಂದೂ ರಾಜಪುತ್ರಿಯರನ್ನು ಮದುವೆಯಾಗು ತ್ತಿದ್ದರು.

ದೊರೆಗಳು.—ಎಲ್ಲರೂ ಅಕ್ಷರಸ್ಥರು. ಫಿರೋಸ್‌ಷಹನು ಹುಡುಗರಿಗೆ ಪಾಠವನ್ನು ಸಹ ಹೇಳಿಕೊಡುತಿದ್ದನು. ಪಂಡಿತರಾದವರಿಗೆ ಪ್ರೋತ್ಸಾಹ ವಿಶೇಷ ವಾಗಿತ್ತು ದೊರೆಯ ಅಂಗರಕ್ಷಣೆಗಾಗಿ ನಾಲ್ಕುಸಾವಿರ ಕುದುರೆ ಯಾವಾಗಲೂ ಸಿದ್ಧವಾಗಿರುತಿತ್ತು. ದೊರೆಯ ಆಯುಧಶಾಲೆಯನ್ನು ನಿರಂತರವಾಗಿ ಇನ್ನೂರು ಜನ ಸಿಲೇದಾರರು ಕಾದುಕೊಂಡಿರುತಿದ್ದರು. ಒಂದುಸಾವಿರ ಜನ ಅರಮನೆಯಲ್ಲಿ ಪಹರೆ ಕೊಡುತಿದ್ದರು. ಒಂದೊಂದು ತುಕಡಿಯವರು ಇಪ್ಪತ್ತುನಾಲ್ಕುಗಂಟೆ ಪಹರೆ ಕೊಡುತಿದ್ದರು. ತರುವಾಯ ಬದಲಾಯಿಸಿ ಕೊಳ್ಳುತಿದ್ದರು.

ಬಿರುದುಗಳು.—ಈ ದೊರೆಗಳು ಯೋಗ್ಯರಾದವರಿಗೆ ಖಿಲ್ಲತ್ತುಗಳನ್ನೂ ಬಿರು ದುಗಳನ್ನೂ ಕೊಡುತಿದ್ದರು. "ಖಾಜಾಜಿಹಾ‌ನ್" ಎಂಬುವುದೇ ದೊಡ್ಡ ಬಿರುದು. ಇದನ್ನು ಮಹಮೂದ್ ಗವಾನನಿಗೆ ಕೊಟ್ಟಿದ್ದರು.

ದೊಡ್ಡ ಅಧಿಕಾರಿಗಳು.—"ವಕೀಲಿಸಲ್‌ತನತ್" ಎಂಬ ಅಧಿಕಾರಿ ಇದ್ದನು. ಇವನು ದೊರೆಯಿಲ್ಲದವೇಳೆಯಲ್ಲಿ ಹುಕ್ಕುಂಗಳನ್ನು ಕೊಡುತಿದ್ದನು "ವಜೀರೆಕುಲ್" ಎಂಬ ಒಬ್ಬ ಅಧಿಕಾರಿ ಇದ್ದನು. ಇವನು ಅರಮನೆಯ ವಿಚಾರ ವನ್ನು ನೋಡಿಕೊಳ್ಳುತಿದ್ದನು. ಕೊತ್ವಾಲನೆಂಬ ಅಧಿಕಾರಿಯು ಸಾಧಾರಣವಾದ ಅಪರಾಧಗಳನ್ನು ಮಾಡಿದವರಿಗೆ ಸಾಧಾರಣವಾದ ಶಿಕ್ಷೆಯನ್ನು ಕೊಡುತಿದ್ದನು. ನ್ಯಾಯವಿಮರ್ಶೆ ಮಾಡಲು ಖಾಜಿ ಎಂಬ ಒಬ್ಬ ದೊಡ್ಡ ಅಧಿಕಾರಿ ಇದ್ದನು.

ವಿದ್ಯಾಭ್ಯಾಸ.—ಹಸನಾಬಾದು ಎಂಬುವುದು ಹಳೇರಾಜಧಾನಿಯಾಗಿತ್ತು ತರುವಾಯ ಬೀದರನ್ನು ರಾಜಧಾನಿ ಮಾಡಿಕೊಂಡರು. ಈ ಪಟ್ಟಣವನ್ನು ಬಹಳ ಚೆನ್ನಾಗಿ ಕಟ್ಟಿಸಿದರು. ಈ ದೊರೆಗಳು ಜನರ ವಿದ್ಯಾಭ್ಯಾಸಕ್ಕೆ ವಿಶೇಷವಾಗಿ ಗಮನಕೊಟ್ಟರು. ಪ್ರತಿಗ್ರಾಮದಲ್ಲಿಯೂ ಒಂದು ಮಸೀತಿ ಒಂದು ವಿದ್ಯಾಶಾಲೆ ಇರುತಿದ್ದವು. ಈ ಮಠಗಳಲ್ಲಿ ಅರಬ್ಬಿ, ಪಾರ್ಷಿ ಈ ಭಾಷೆಯನ್ನು ಕಲಿಸುತಿದ್ದರು. ಸ್ ೧೪೭೭ ರಲ್ಲಿ ಎಲ್ಲಾ ಕಡೆಯಲ್ಲಿಯೂ ದೊಡ್ಡದಾಗಿ ಬರಕ್ಷಾಮ ಬಂತು. ಅನೇಕ ಜನ ಸತ್ತುಹೋದರು. ಅನೇಕ ಮಕ್ಕಳು ತಬ್ಬಲಿಗಳಾದವು. ಈ ದೊರೆಗಳು

ಗುಲ್ಬರ್ಗ, ಬೀದರು, ಎಲಿಚಪೂರ್, ದೌಲತ್ತಾಬಾದ್ ಮೊದಲಾದ ಪಟ್ಟಣಗಳಲ್ಲಿ ಧರ್ಮಕ್ಕೆ ಪಾಠಶಾಲೆಗಳನ್ನೂ ಅನಾಥಾಲಯಗಳನ್ನೂ ಏರ್ಪಡಿಸಿದರು. ವಿದ್ಯಾವ್ಯಾಸಂಗಕ್ಕೆ ಈ ದೊರೆಗಳು ಹೆಚ್ಚಾಗಿ ಪ್ರೋತ್ಸಾಹವನ್ನು ಕೊಟ್ಟರು.

ಕಟ್ಟಡಗಳು.—ಈ ದೊರೆಗಳು ಭಾರಿಯಾದ ಕಟ್ಟಡಗಳು ಯಾವುದನ್ನೂ ಕಟ್ಟಿಸಲಿಲ್ಲ. ಬೀದರ್ ಪಟ್ಟಣದಲ್ಲಿ ದೊಡ್ಡದಾದ ವೈದ್ಯಶಾಲೆ ಇತ್ತು. ಇದರಲ್ಲಿ ಔಷಧವನ್ನು ಕೊಡುತ್ತಿದ್ದರು. ಅಲ್ಲಿಯೇ ಇದ್ದು ಗುಣಮಾಡಿಕೊಳ್ಳಲು ಇಷ್ಟ ಉಳ್ಳ ರೋಗಿಗಳಿಗೆ ಅಲ್ಲಿಯೇ ಅನ್ನಹಾಕಿ ಬಟ್ಟೆ ಸಹ ಕೊಡುತ್ತಿದ್ದರು. ಅಂಚೆಗಳು, ರಸ್ತೆಗಳು, ಛತ್ರಗಳು ಇರಲಿಲ್ಲ. ಅವರು ಬೆಟ್ಟಗಳಮೇಲೆ ಹಲವು ಕೋಟೆಗಳನ್ನು ಕಟ್ಟಿಸಿದರು.

ಇತರ ಏರ್ಪಾಡು.—ಪೋಲೀಸಿನ ಜವಾನರನ್ನು ಏರ್ಪಡಿಸಿದರು. ಪೂರ್ವದಿಂದಲೂ ರಾಜ್ಯಭಾರ ಕ್ರಮದಲ್ಲಿದ್ದ ಹಳೇ ಏರ್ಪಾಡುಗಳನ್ನು ಇಟ್ಟುಕೊಂಡರು. ಅದರಮೇಲೆ ಹೊಸ ಏರ್ಪಾಡುಗಳನ್ನು ಮಾಡಿದರು. ಸರ್ಕಾರದ ಉದ್ಯೋಗದಲ್ಲಿ ಬ್ರಾಹ್ಮಣರು ವಿಶೇಷವಾಗಿದ್ದರು. ಹಿಂದುಗಳಮೇಲೆ ಜೆಸಿಯಾ ಮೊದಲಾದ ಯಾವ ತಲೆಕಂದಾಯವನ್ನೂ ಹಾಕಿರಲಿಲ್ಲ. ಮಕ್ಕಳು, ಹೆಂಗಸರು, ಮುದುಕರು, ಅಂಗಹೀನರೂ, ಇವರುಗಳಿಗೆ ಯಾವ ಹಿಂಸೆಯನ್ನೂ ಮಾಡಕೂಡದೆಂದು ತಾವು ತಮ್ಮ ರಾಜ್ಯದಲ್ಲಿ ಅಪ್ಪಣೇ ಮಾಡಿದ್ದೂ ಅಲ್ಲದೆ ಇತರ ದೇಶಗಳಲ್ಲಿಯೂಕೂಡ ಇಂಥಾ ಕೆಟ್ಟ ಕೃತ್ಯಗಳನ್ನು ನಿಲ್ಲಿಸಬೇಕೆಂದು ಇತರ ದೊರೆಗಳೊಡನೆ ಕರಾರು ಮಾಡಿಕೊಂಡರು.

ಸೇನೆ.—ಇವರಲ್ಲಿ ಐವತ್ತು ಸಾವಿರ ಸೇನೆ ತಯಾರಾಗಿತ್ತು. ಎರಡು ಸಾವಿರ ಆನೆಗಳನ್ನು ಇಟ್ಟಿದ್ದರು. ವಿಜಯನಗರದ ದೊರೆಗಳು ತಮ್ಮ ಯುದ್ಧಗಳಲ್ಲಿ ಫಿರಂಗಿಗಳನ್ನು ಉಪಯೋಗಿಸುತ್ತಿದ್ದರು. ಇದನ್ನು ನೋಡಿ ಬಹಮನಿ ದೊರೆಗಳೂ ಫಿರಂಗಿಗಳನ್ನು ತಯಾರುಮಾಡಿಸಿ ಉಪಯೋಗಿಸಲು ಮೊದಲು ಮಾಡಿದರು. ತಾವೇ ಮದ್ದನ್ನು ತಯಾರುಮಾಡಿಸುತ್ತಿದ್ದರು. ಇವರ ಸೇನೆಯಲ್ಲಿ ತುರುಕರೂ ಫಾರ್ಸಿಜನರೂ ಇರುತಿದ್ದರು. ಫಿರಂಗಿ ಹಾರಿಸುವ ಗೋಲಂದಾಜ್ ಕೆಲಸಕ್ಕೆ ರೋಮ್ರ ಜನರನ್ನು ಇರಿಸಿಕೊಂಡಿದ್ದರಂತೆ.

ಇವರ ರಾಜ್ಯದಲ್ಲಿ ಹಿಂದುಗಳ ಸಂಖ್ಯೆಯೇ ಬಹಳವಾಗಿತ್ತು; ಅದಕ್ಕೆ ಕಡಮೆಯಾಗಿ ದಖನಿ ಮುಸಲ್ಮಾನರು, ಅದಕ್ಕಿಂತಲೂ ಕಡಮೆಯಾಗಿ ಅನ್ಯದೇಶೀಯರಾದ ಮುಸಲ್ಮಾನರು ಇದ್ದರು. ಜನರು ವಿದ್ಯಾವ್ಯಾಸಂಗ ಮಾಡುತಿದ್ದರು. ವಿದ್ಯಾವಂತರು ಯಾರಾದರೂ ಸರಿಯೆ, ಅವರಿಗೆ ಗೌರವವಿತ್ತು. ದೊಡ್ಡ ದೊಡ್ಡ ಅಂಗಡಿಗಳಿದ್ದವು. ವ್ಯಾಪಾರ ಚೆನ್ನಾಗಿ ನಡೆಯುತಿತ್ತು. ದೊಡ್ಡ ಅಧಿಕಾರಿಗಳೆಲ್ಲಾ ವ್ಯಾಪಾರ ಮಾಡುತಿದ್ದರು. ಇದು ಅವಮಾನವೆಂದು ಭಾವಿಸಿರಲಿಲ್ಲ. ಜನರಲ್ಲಿ ಲಕ್ಷಣವಾದ ರೇಷ್ಮೆಉಡುಪು ವಾಡಿಕೆಯಲ್ಲಿತ್ತು. ಅನೂಚಾನವಾಗಿ ಬಂದ ಮನೆತನಸ್ಥರು ಇರಲಿಲ್ಲ. ಜನರು ತಂತಮ್ಮ ಯೋಗ್ಯತೆ ಇದ್ದ ಹಾಗೆ ಮುಂದಕ್ಕೆ ಬರುತಿದ್ದರು. ಯೋಗ್ಯತಾಪಕ್ಷಪಾತವೇ ಮುಖ್ಯವಾಗಿತ್ತು.

(ಸಶೇಷ)

ಕವಿತಾವರ್ಧನ.

ಈಗಿನ ಶಿಕ್ಷಿತಕರ್ಣಾಟಕರು ತಮ್ಮ ಭಾಷೆಯ ಕಾವ್ಯಗಳನ್ನು ಅಭಿಮಾನದಿಂದ ಪಠಿಸಬೇಕಲ್ಲದೆ ಅಭಿರುಚಿಯಿಂದ ಓದುವುದಿಲ್ಲವೆಂದು ಅನೇಕರ ಅಭಿಪ್ರಾಯವಿದೆ. ಇದು ಅಸತ್ಯವೆಂದು ನಾನು ಪ್ರತಿಪಾದಿಸಲಾರೆ. 'ಪಾಶ್ಚಾತ್ಯರ ಗ್ರಂಥಗಳನ್ನು ಆದಷ್ಟು ಕಡಮೆಯಾಗಿ ಓದಿ ಕನ್ನಡ ಗ್ರಂಥಗಳನ್ನೇ ಹೆಚ್ಚಾಗಿ ಓದುವುದು ಇದಕ್ಕೆ ಔಷಧವೆಂದು ಉಪದೇಶಿಸಿದರೆ ನಗುವರು. ಎರಡರಲ್ಲಿಯೂ ಒಂದೇ ಪ್ರಕಾರದ ಪಕ್ಷಪಾತವಿಡಬೇಕೆಂದು ಸೂಚಿಸಿದರೆ ಅನೇಕರು ಅಸಾಧ್ಯವೆನ್ನಬಹುದು. ಭಾಷೆಯಲ್ಲಿ ಪಲವು ಬಗೆಗಳನ್ನು ಕಿವಿ ಸಹಿಸಲಾರದಿದ್ದರೆ, ಕವಿತಾಗುಣಗ್ರಹಣಕ್ಕೆ ಎದೆ ಕವಲ್ಗೊಂಡು ನಿಲ್ಲಲು ಸಮ್ಮತಿಸುವುದೇ? ಕವಿತೆಯೆಂದರೇನು? ಕನ್ನಡ ಕವಿತೆಗಳಲ್ಲಿ ಯಾವ ದೋಷಗಳಿಗೆ ಅಸಂತುಷ್ಟರಾಗುವರು? ಪಾಶ್ಚಾತ್ಯರ ಕಾವ್ಯಗಳಲ್ಲಿ ಯಾವ ಗುಣಗಳಿಗೆ ಮೆಚ್ಚುವರು?

ರಮಣೀಯಾರ್ಥದ ಕೃತಿಗೆ ಕಾವ್ಯವೆನ್ನಬಹುದು. ರಮಣೀಯತೆಗೆ ಅಲಂಕಾರಗಳೂ ರಸಗಳೂ ಸಾಧನವೆನ್ನುವರು. ಗಣಿತ, ವೈದ್ಯ, ವ್ಯಾಕರಣ ಮುಂತಾದ ಶಾಸ್ತ್ರಗಳನ್ನು ಪಾಶ್ಚಾತ್ಯರು ಪದ್ಯರೂಪವಾಗಿ ಬರೆಯರು; ಅವುಗಳಲ್ಲಿ ರಸಾಲಂಕಾರಗಳಿಗೆ ಅವಕಾಶವಿಲ್ಲ. ಮುದ್ರಾಯಂತ್ರಗಳಿಲ್ಲದ ದಿವಸಗಳಲ್ಲಿ ನಿಘಂಟುಗಳನ್ನೂ ಕೂಡ ಪದ್ಯಾತ್ಮಕವಾಗಿ ರಚಿಸುವ ಪದ್ಧತಿ ಹುಟ್ಟಿತು. ಅಂತಹ ಗ್ರಂಥಗಳಿಗೆ ಉಪಚಾರಭಾವದಿಂದ ಕಾವ್ಯವೆಂದರೂ ಅವು ಈಗ ಆವಶ್ಯಕವಲ್ಲ. ರಸಾಲಂಕಾರಗಳಿಲ್ಲದೆ ಕೇವಲ ನೀತಿಯನ್ನು ಉಪದೇಶಿಸುವ ಗ್ರಂಥಗಳಿಗೂ ಕಾವ್ಯವೆನ್ನಲು ಈಗಿನ ಗುಣವಿಮರ್ಶಕರು ಒಪ್ಪುವುದಿಲ್ಲ.

ಛಂದಸ್ಸಿನಿಂದ ಗದ್ಯಕ್ಕಿಂತಲೂ ಪದ್ಯರಚನೆ ಚೆಂದವಾಗಿ ಶೋಭಿಸುವುದು. ಪ್ರಾಸವಿಲ್ಲದೆ ಪದ್ಯಗಳನ್ನು ಏಕೆ ರಚಿಸಬಾರದು, ಎಂದು ಕೆಲವರು ಕೇಳುತ್ತಾರೆ. ಏಕೆ ಕೂಡದು? ಸೀರೆಗೆ ಸೆರಗಿಲ್ಲದಿದ್ದರೇನು? ಹಣೆಗೆ ಬೊಟ್ಟಿಲ್ಲದಿದ್ದರೇನು? ಒಂದು ರಾಗದಲ್ಲಿ ವಾದಿ ಮತ್ತು ಸಂವಾದಿ ಎಂಬ ಎರಡು ಪ್ರಧಾನಸ್ವರಗಳಿರಬೇಕಂತೆ. ಅವುಗಳನ್ನು ಪದೇಪದೇ ತೋರಿಸಿದರೆ ರಾಗವು ಸ್ಪಷ್ಟವಾಗಿಯೂ ಸುಂದರವಾಗಿಯೂ ಕಾಣುವುದೆಂದು ಸಂಗೀತಜ್ಞರು ಹೇಳುವರು. ಈ ನಿಯಮವನ್ನು ಉಲ್ಲಂಘಿಸಿದರೆ ಸಂಗೀತವೇ ಅಳಿದುಹೋಗದು. ಅಷ್ಟೇಕೆ, ಈ ಮರ್ಯಾದೆಗೆ ಉತ್ತರದಲ್ಲಿರುವ ಪ್ರಾಮುಖ್ಯವು ದಕ್ಷಿಣದಲ್ಲಿಲ್ಲವಂತೆ.

ಕನ್ನಡಕ್ಕೆ "ಸತತಂ ಪ್ರಾಸಂ" ಎಂದು ನೃಪತುಂಗನು ಬರೆದಿರುವನು. ಈ ಪದ್ಧತಿಯೆಷ್ಟು ಹಳೆಯದೆಂದು ಹೇಳಕೂಡದು. ಸಾಂಗತ್ಯದಲ್ಲಿ ನಾಗವರ್ಮನು ವರ್ಣಿಸಿದ ಅಕ್ಷರಮಾತ್ರಾಗಣಗಳ ಕ್ರಮವನ್ನು ಕಿತ್ತುಹಾಕಿದರೂ, ಪ್ರಾಸವನ್ನು

ಬಿಟ್ಟುಬಿಡಲಿಲ್ಲ. ಪ್ರಾಸಕ್ಕೆ ಕನ್ನಡಿಗರು ಇಷ್ಟು ಮರುಳಾದುದಕ್ಕೆ ಕಾರಣವಿಲ್ಲದಿರ ಬಹುದೇ? ಅನುಭವಕ್ಕೆ ಕಂಡು ಬರುವುದೇನು? (೧) ಪ್ರಾಸಕ್ಕಿಂತಲೂ ಅಕ್ಷರ ಗಣಾನುಸರಣವೇ ಕಠಿನ ಒಂದು ಷಟ್ಪದಿಯಲ್ಲಿ ಆರು ಸ್ಥಳಗಳಲ್ಲಿ ಒಂದಕ್ಷರವನ್ನು ಇಟ್ಟರೆ ಸಾಕು. ಒಂದು ಅಕ್ಷರಗಣಗಳ ವೃತ್ತದಲ್ಲಿ ಗುರುಲಘುಗಳನ್ನು ಎಷ್ಟು ನಿರ್ದಿಷ್ಟಸ್ಥಾನಗಳಲ್ಲಿಡಬೇಕು? ಇಷ್ಟು ಪ್ರಯಾಸಪಟ್ಟರೂ ಕನ್ನಡದ ತಾಳಗಳಿಗೆ ಸರಿಯಾಗಿ ಎಷ್ಟು ವೃತ್ತಗಳನ್ನು ಹಾಡಬಹುದು? (೨) ಲೋಕಪ್ರಿಯವಾದ ಕವಿತೆಗ ಳನ್ನು ತಾಳಹಾಕಿ ಹಾಡಲಾಗುವಂತೆ ರಚಿಸುವುದು ಉಚಿತವಾದುದರಿಂದ, ಅವುಗಳಲ್ಲಿ ವಾದಿಸ್ವರದಂತೆ ಕೇಳಿಸುವ ಪ್ರಾಸವನ್ನು ಕಾಪಾಡುವುದು ಉಪಯುಕ್ತ ಪದ್ಧತಿ. (೩) ಅರ್ಥಕ್ಕೆ ತೇಜವಿಲ್ಲದೆಡೆಗಳಲ್ಲಿ ಆ ಕುಂದುಕವನ್ನು ಪ್ರಾಸದಿಂದ ಅಡಗಿಸಿದಷ್ಟು ಸುಲಭ ವಾಗಿ ಬೇರೆ ಶಬ್ದಾಲಂಕಾರಗಳಿಂದಾಗದು.

ವಾದಿಸ್ವರವನ್ನು ಇಂತಹ ಸ್ಥಾನದಲ್ಲಿಡಬೇಕೆಂದು ನಿಯಮವಿಲ್ಲ. ಆದರೆ ಚರಣದ ಬುಡಕ್ಕೂ ಕೊನೆಗೂ ಆದಷ್ಟು ಸಮೀಪವಿದ್ದರೆ ಉತ್ತಮವಂತೆ. ಆಡುವು ದರಲ್ಲಿಯೂ ಹಾಡುವುದರಲ್ಲಿಯೂ ಒಂದೊಂದು ದೇಶದವರಿಗೆ ಒಂದೊಂದು ರೀತಿ ಚಲ್ಲೋದಾಗಿ ಕಾಣಿಸುವುದು. ಎಸ್ಸೋಸಿಯೇಶನ್ ಎಂದು ಉಚ್ಚರಿಸುವಾಗ ತಮಿ ಳರು ಮೊದಲಿನ ಎಕಾರವನ್ನೂ ಬಂಗಾಳಿಗಳು ಎರಡನೆಯ ಏಕಾರವನ್ನೂ ಹ್ರಸ್ವ ಮಾಡಿ ಒತ್ತುವರು. ಹಾಡುವುದರಲ್ಲಿ ಇಂತಹ ವಿವಿಧಪ್ರಾವಣ್ಯಗಳು ಇನ್ನೂ ಸ್ಪಷ್ಟವಾಗಿ ಕಾಣುತ್ತವೆ. ಆದಕಾರಣ ಕನ್ನಡದಲ್ಲಿ ಚರಣದ ಎರಡನೆಯ ಅಕ್ಷರವು ಪ್ರಾಸಕ್ಕೆ ಯುಕ್ತವೆಂದು ಪ್ರಾಚೀನಕವಿಗಳು ನಿರ್ಧರಿಸಿದ್ದು ತಪ್ಪೆಂದು ನಾನು ಸರ್ವಥಾ ಉಸುರಲಾರೆ. ಆದರೆ ಈ ಪ್ರಾಸಕ್ಕೆ ಬದಲಾಗಿ ಅಂತ್ಯಪ್ರಾಸವನ್ನು ಆಚರಿಸಿದರೆ ಇಂಪಾಗಲಾರದೆಂದೂ ಪ್ರತಿಪಾದಿಸಲಾರೆ. ಕೊಡಗರ ಹಾಡುಗಳಲ್ಲಿ ಅಂತ್ಯಪ್ರಾಸವೇ ಪ್ರಧಾನ. ಪ್ರಾಚೀನ ದ್ರಾವಿಡರ ಪದ್ಧತಿ ಹೀಗಿರಬಹುದಿತ್ತು. ನಾನೊಂದು ಸಾವಿರ ಚರಣಗಳನ್ನು ರಚಿಸಿರಬಹುದು. ಇದುವರೆಗೆ ಪ್ರಾಸಮುಂಡನಕ್ಕೆ ನನ್ನ ಕಿವಿ ಒಗ್ಗಲಿಲ್ಲ. ಆದರೆ ಕೇಶವಪನದಿಂದ ಮುಖದ ಲಾವಣ್ಯವು ಸಂಪೂರ್ಣವಾಗಿ ನಾಶ ವಾಗುತ್ತದೆಂದು ಕಂಡವರಾರು?

ಕಾವ್ಯಗಳನ್ನು ಹಳಗನ್ನಡದಲ್ಲಿಯೇ ಬರೆಯಬೇಕೆಂದು ಕೆಲವರ ಅಭಿಪ್ರಾಯ ವಿದೆ. ಇದು ಪಂಡಿತರ ಪರಂಪರೀಣಮತವಾಗಿರಬಹುದು. ದಕ್ಷಿಣದಲ್ಲಿ ಮಾತ್ರ ವಲ್ಲ, ಕೃಷ್ಣಾನದಿಯ ಉತ್ತರದಲ್ಲಿ ಗುಲ್ಬರ್ಗ, ವಿಜಾಪುರ ಜಿಲ್ಲೆಗಳಲ್ಲಿ ದೊರೆತ ಶಾಸನ ಗಳಲ್ಲಿಯೂ ಪದ್ಯಗಳು ಹಳಗನ್ನಡದಲ್ಲಿಯೇ ರಚಿತವಾಗಿವೆ. ಗದ್ಯದಲ್ಲಿಯೂ ಸಮಾನಕಾಲದ ವ್ಯಾಕರಣವು ಒಂದೇ ವಿಧವಾಗಿದೆ. ಲೋಕಪ್ರಿಯವಾದ ಕಾವ್ಯಗ ಳನ್ನು ಈಗ ನಡುಗನ್ನಡವೆನ್ನಿಸಿಕೊಳ್ಳುವ ಹೊಸಗನ್ನಡದಲ್ಲಿ ಬರೆಯುವ ಪದ್ಧತಿ ಪ್ರಶಂ ಸನೀಯವೆಂದು ನಾವು ಹೇಳಬಹುದು. ಕೆಲವು ಹಳಗನ್ನಡ ಮಾತುಗಳನ್ನು ಪದ್ಯ ಗಳಲ್ಲಿ ಜೋಪಾನ ಮಾಡಿ ಇಟ್ಟುಕೊಳ್ಳುವುದು ಕನ್ನಡಿಗರಿಗೆ ಭಕ್ತಿಯ ಕರ್ತವ್ಯ. ಆದರೆ ಹಳಗನ್ನಡ ಗ್ರಂಥಗಳನ್ನು ಹೆಚ್ಚಿಸುವುದರಿಂದ ಸಂಸ್ಕೃತ ಗ್ರಂಥಗಳನ್ನು ಬರೆ

ಯುವಷ್ಟೇ, ಅಥವಾ ಒಂದಿಷ್ಟು ಹೆಚ್ಚು ಉಪಯೋಗವಿರಬಹುದಲ್ಲದೆ ನಾವು ಆಶಿಸು ವಷ್ಟು ಲಾಭವಿಲ್ಲ.

ದೀರ್ಘಕಾವ್ಯಗಳನ್ನು ಸಾದ್ಯಂತವಾಗಿ ರಸಾಲಂಕಾರಗಳಿಂದ ತುಂಬುವುದು ಅಸಾಧ್ಯ. ತುಂಬಿದರೂ ಜುಗುಪ್ಸಾವಹವಾಗುವುದರಿಂದ, ಕಾವ್ಯಗಳು ಸಂಕ್ಷಿಪ್ತ ವಾಗಿರಬೇಕೆಂದು ಹಲವು ಪಾಶ್ಚಾತ್ಯರ ಮತವಿದೆ. ಒಂದು ಕಥೆಯಲ್ಲಿ ಕೆಲವು ಭಾಗಗಳು ಅನುರಂಜಕವಾಗಿರುವುವು. ಇನ್ನೂ ಕೆಲವು ರಸವಿಹೀನವಾಗಿರಬಹುದು. ನಾಟಕಗಳಲ್ಲಿ ಕೆಲವು ಸಂಭಾಷಣಗಳು ಗದ್ಯಾತ್ಮಕವಾಗಿ ಕೆಲವು ಪದ್ಯಾತ್ಮಕವಾಗಿ ರುತ್ತವೆ. ಚಂಪೂಕಾವ್ಯಗಳನ್ನು ರಚಿಸಲಿಕ್ಕೆ ಮೊತ್ತಮೊದಲು ಇದೇ ಕಾರಣವಾಗಿರ ಬಹುದಿತ್ತು. ಈಗ ಉಳಿದಿರುವ ಕಾವ್ಯಗಳಲ್ಲಿ ಗದ್ಯಾಂಶಗಳಲ್ಲಿಯೂ ರಸಾಲಂಕಾರ ಗಳು ಶೋಭಿಸಬಹುದು. ಪದ್ಯಗಳೆಲ್ಲವೂ ರಸಭರಿತವೆನ್ನಲಾಗದು. ಶೂರರಾದ ರವೀಂದ್ರನಾಥಠಾಗೂರ, ಶ್ರೀಮತಿ ಸರೋಜಿನೀ ನಾಯುಡು ಮುಂತಾದವರ ಕವಿತೆ ಗಳು ಸಂಕ್ಷಿಪ್ತವಾಗಿಯೇ ಇವೆ.

ಕವಿಗಳಿಗೆ ಸ್ವತಂತ್ರತೆಯಿರಬೇಕು. ಪುರಾಣದ ಕಥೆಗಳನ್ನು ಅನುವಾದಿಸಿ ಹೇಳು ವುದು ಈಗ ಆವಶ್ಯಕವಲ್ಲ. ಅವುಗಳನ್ನು ಪರಿವರ್ತಿಸಿ, ಅವುಗಳಲ್ಲಿ ಹೊಸ ಪ್ರಸಂಗ ಗಳನ್ನು ಸೇರಿಸಿ, ತಮ್ಮ ನೂತನಮತಿಗೆ ತೋಚಿದಂತೆ ಹೇಳಿದರೆ ಹೇಳಲಿಕ್ಕೆ ಅವಕಾಶವಿದೆ. ಬ್ರಾಹ್ಮಣರೂ ಜೈನರೂ ಇತಿಹಾಸಗಳನ್ನು ತಮಗೆ ಬೇಕಾ ದಂತೆ ಹವಣಿಸಿಕೊಳ್ಳಲಿಲ್ಲವೇ? ಹದಿನೆಂಟು ಅಂಗಗಳನ್ನು ವರ್ಣಿಸಬೇಕೆಂಬ ವಿಧಿಯನ್ನು ನಿರಸಿಸಬೇಕು. ಅಭಿನವವಾದಿವಿದ್ಯಾನಂದಸಂಕಲಿತ ಕಾವ್ಯಸಾರದಲ್ಲಿ ಸುಮಾರು ಐವತ್ತು ವರ್ಣನೆಗಳಿವೆ. ಪ್ರಪಂಚದಲ್ಲಿ ವರ್ಣನೀಯ ಪದಾರ್ಥಗಳಿಗೂ ಭಾವಗಳಿಗೂ ಮಿತಿಯಿದೆಯೇ? ಭಾವಗಳು ಮುಖದಲ್ಲಿಯೂ ಚರಿತದಲ್ಲಿಯೂ ಹೇಗೆ ಕಾಣಿಸಿಕೊಳ್ಳುತ್ತವೆಂದು ಕನ್ನಡ ಕವಿಗಳು ವರ್ಣಿಸದಿರುವುದಿಲ್ಲ. ಕೆಳಗೆ ಅನುವಾದಿಸಿ ಬರೆದ ಕೊಲ್ಲಿನ್ಸ್ ಕವಿಯ ಕೃತಿಯನ್ನು ಓದಿದರೆ ವರ್ಣನೆಗೆ ಎಷ್ಟು ವಿಷಯಗಳು ದೊರೆಯಬಹುದು, ಅವುಗಳನ್ನು ಎಷ್ಟು ವಿಧವಾಗಿ ವರ್ಣಿಸಬಹುದು, ಎಂಬುದು ವಿಶದವಾದೀತು.

ಭಾವಗಣ.

ಕೃತಯುಗದಲೊಂದುದಿನ ಸಂಗೀತದಧಿದೇವಿ ।
ಅತಿಪಟುತೆಯನು ತೋರಿ ಹಾಡುತಿರಲು ॥
ಕುತುಕಪೂರಿತಭಾವಮೂರ್ತಿಗಳು ಬಂದಲ್ಲಿ ।
ಧೃತಿಹೀನವಾದುವು ಸ್ತುತಿಸುತಿರಲು ॥ ೧ ॥

ಗೀತದಾವೇಶದಿಂದಾದ ಪರವಶತೆಯನು ।
ರೀತಿರೀತಿಯಲೊಸನೆ ಕಾಣಿಸಿದುವು ॥

ನೇತಿರಿಸಿದಲ್ಲಿಯು ಸುವಾದಿತ್ರಗಳ ಹಿಡಿದು ।
ಆತುರಿಸಿ ಬಾಜಿಸಲು ಮುಂಬರಿದುವು ॥ ೨ ॥

ಮೊದಲು **ಭಯ** ತನ್ನಚಳಕವ ನೋಡ ವೀಣೆಯಲಿ ।
ಗದಗದನಡುಗಿ ಮಿಡಿದು ತಂತಿಗಳನು ॥
ಉದಿತನಿನದವಕೇಳಿ ಕೆಮ್ಮನಾಕ್ಷಣದಲ್ಲಿ ।
ಬೆದರಿನಿಲ್ಲಿಸಿತು ಗಡ ಬಾಜನೆಯನು ॥ ೩ ॥

ಕಿಡಿಗಳನು ಹಾರಿಸುತ ಕಿಸುಗಂಣಗಳ **ಕೋಪ** ।
ತಡೆಯುದಾಗಡನ ದೊಳಗನ್ವಳಿಸಿತು ॥
ತುಡುಕಿ ಪರಿವಾದಿನಿಯ ಭರಭರನೆ ತಂತಿಗಳ ।
ಬಡಿಯುತ್ತ ಝಾಡಿಸುತ ಸಂಭ್ರಮಿಸಿತು ॥ ೪ ॥

ಗುರುಭಾವಮಿಶ್ರಿತ ವಿಚಿತ್ರ ಸ್ವರೋದಯವು ।
ಅರೆಗಳಿಗೆತಗ್ಗಿ ಬಳಿಕತಿಶಯಿಸುತ ॥
ಕರುಣರಸವನು ತೋರಿಸಿತು **ನಿರಾಶೆ**ಯರಾಗ ।
ಮರವೆಯಿಂದಾಧಿಗಳ ಸಂತವಿಸುತ ॥ ೫ ॥

ಚಾರುನೇತ್ರಗಳ **ಪ್ರತೀಕ್ಷೆ** ಮನವಲರಿಸುತ ।
ಮೂರವ ಪದಾರ್ಥಗಳನಭಿವದಿಸಿತು ॥
ಆರಣ್ಯತರುಶಿಲಾದರಿಗಳಾ ಮಂತ್ರಣಕೆ ।
ಮೂರುದನಿಗೈಯಲದು ವಿಸ್ತರಿಸಿತು ॥ ೬ ॥

ನಕ್ಕುಮನವೊಲಿದು ಪುನರಪಿ ಬಾಜಿಸುತ್ತಿರಲು ।
ಪಕ್ಕದಲಿ **ವಿದ್ವೇಷ** ಪುಟನೆಗೆಯುತು ॥
ಒಕ್ಕೊಟ್ಟು ಕೈಯಿಂದ ರಕ್ತಲಿಪ್ತಾಸಿಯನು ।
ಘಕ್ಕೆರಣ ಕಹಳೆಗಳ ಸೂಳಯಿಸಿತು ॥ ೭ ॥

ನಡುನಡುವೆ ಬಳಿಯಿದ್ದ **ದೈನ್ಯ** ಮನಕರಗಿಸುವ ।
ಬಡಹಾಡಿನಲಿ ದಯೆಯ ಬಿನ್ನನಿಸಿತು ॥
ಬಿಡದದಕೆ ವಿದ್ವೇಷ ಬಿರಿಗಂಣುಗಳ ಬಿಡುತ ।
ಕಡಗಿವಾವೇಶವನು ಹೊಡಕರಿಸಿತು ॥ ೮ ॥

ಆವ ರಾಗವನನ್ವಯಿಸದೆ **ರತಿವಾತ್ಸರ್ಯ** ।
ಲಾವಣಿಯ ಬಾಜಿಸಿತು ಮರುಕಗೊಳುತ ॥
ಭಾವದ್ವಯಕೆ ಸೋತು ಕಾಮುಕೋಪಗಳಿಂದ ।
ಡಾವರಿಸಿತಂತರ್ಯದಲಿ ಕರಗುತ ॥ ೯ ॥

ದೇವಿಯಾವೇಶಬಂದಂತೆ ಕಂಣುಗಳೆತ್ತಿ ।
ಆವೇಳೆ **ಚಿಂತೆ** ಕುಳಿತಿದ್ದಿತಲ್ಲಿ ॥
ಸಾವಕಾಶದಿ ಕೊಳಲನೂದಿ ಹೃದಯದ ಪೂರ್ಣ ।
ಭಾವವನು ಸುರಿಯಿತಾ ವಾದ್ಯದಲ್ಲಿ ॥ ೧೦

ಸುತ್ತಲಿನ ಶಿಲೆಗಳಿಂದೊಗೆದು ಬಹಹಳ್ಳಗಳು ।
ಮೆತ್ತನೆಪ್ರತಿಯ ಕೂಡಿಸಿದುವದಕೆ ॥
ಸುತ್ತಿವನಪಥಗಳಲಿ ಸಾವಗಿಸಿತಾಸ್ವರವು ।
ಇತ್ತುಗಂಭೀರ ಶಾಂತತೆಯ ಮನಕೆ ॥ ೧೧ ॥

ಅದೊ ಚಿತ್ರವೆನಿತು **ಪ್ರಸನ್ನತೆ** ಉಪಾವರ್ಣೆ ।
ಮಧುರತರಮುರಲಿಯನು ನುಡಿಸುತಿರಲು ॥
ಹೊವರುಹಳುಗಳ ತುಂಬಿಯಪ್ಸರರ ಮೃಗಯುಗಳ ।
ಹೃದಯವನು ಸುಸ್ವರವು ನಲಿಸುತಿರಲು ॥ ೧೨ ॥

ಕಡೆಯಲಾಗಡಣದಲಿ **ಹರ್ಷಭರ**ಸಾರಂಗಿ ।
ಪಿಡಿದೆಬ್ಬಿಸಿತು ಸುಕದ ಲಹರಿಗಳನು ॥
ಸಡಗರಿಸಿ ಶೃಂಗಾರ ಹಾಸ್ಯಗಳು ನರ್ತಿಸುತ ।
ಅಡಗಿಸಿದುವಿತರಾನುಚಿಂತೆಗಳನು ॥ ೧೩ ॥

ಈಗಿನ ದಿವಸಗಳಲ್ಲಿ ಶಿಕ್ಷಿತಜನರು ರಾಷ್ಟ್ರೀಯಪ್ರಸಂಗಗಳನ್ನು ಕುರಿತು ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಓದಿದಷ್ಟು ಬೇರೆ ಯಾವ ವಿಷಯದಲ್ಲಿಯೂ ಓದು ವುದಿಲ್ಲ. ವೃತ್ತಪತ್ರಿಕೆಗಳು ಹಳ್ಳಿಪಳ್ಳಿಗಳಲ್ಲಿ ನುಗ್ಗಿ ಎಲ್ಲಾ ಕಡೆಗಳಲ್ಲಿಯೂ ಅಧಿ ಕಾರಿಗಳ ನಡತೆ, ಪ್ರಜೆಗಳ ಸತ್ವ ಮುಂತಾದ ಪ್ರಸ್ತಾವಗಳಲ್ಲಿ ಅಭಿರುಚಿಯನ್ನು ಹುಟ್ಟಿಸುತ್ತವೆ. ಆದಕಾರಣ ವ್ಹಿಟ್ಟಿಯರ್ ಕವಿಯ ಒಂದು ಕೃತಿಯನ್ನು ಅನು ವಾದಿಸಿ ಕೆಳಗೆ ಬರೆದಿದ್ದೇನೆ. ಪ್ರತಿನಿಧಿಗಳ ಚುನಾವಣೆಗೆ ವೃತಿ, ವರಣ; ಚುನಾ ಯಿಸುವವನ "ವೋಟಿ" ಗೆ ವರ; ಅವನಿಗೆ ವರದ—ಈ ಹೆಸರುಗಳನ್ನು ಕೊಟ್ಟಿ ದ್ದೇನೆ. "ವೋಟು" ಮತ್ತು ವ್ರತ, ಇವಕ್ಕೆ ಮೂಲಾರ್ಥವು ಒಂದೇ. ಆದರೆ ಈಗಿನ ಅರ್ಥವು ಬೇರೆಯಾದದ್ದರಿಂದ, ವೃ (= ಆರಿಸು, ಚುನಾಯಿಸು, ಪ್ರತಿನಿಧಿ ಯಾಗಿ ವರಿಸು) ಧಾತುವಿನಿಂದ ಹುಟ್ಟಿದ ಮಾತುಗಳನ್ನು ಪ್ರಯೋಗಿಸಿದ್ದೇನೆ.

ವಿತ್ತಹೀನ ವರದ.

[ಚುನಾವಣೆಯ ಸಮಯ]

ಗುರುವಿಕೆಯವೆಗ್ಗಳಿಗ ಸರಿಯುಹನು ನನಗೀಗ ।
ಇರನುತಾನಿತರರಿಗೆ ಮೇಲೆನುವನು ॥

ವರುಷದೊಳಗೆಲ್ಲ ಬೇಸರದಿಂದ ದುಡಿದರೆಯು ।
ಅರಸನಾಗೀದಿನದಲೊಪ್ಪುತಿಹೆನು ॥ ೧ ॥

ಹಿರಿಯರಾರೀವಾಗ ಕಿರಿಯರವರಿಗೆ ಜೋಡು ।
ದೊರೆತವಿಖ್ಯಾತಿ ಅಖ್ಯಾತವಹುದು ॥
ಪುರಜನರಭವನವೆ ನಗರಮನೆಯ ತೆರನಾಗಿ ।
ವರಣಪತ್ರದ ಪೆಟ್ಟಿಪಟ್ಟವಹುದು ॥ ೨ ॥

ಇಂದುವೃತಿಯಲಿ ರಾಷ್ಟ್ರಸೇವೆಯನು ಮಾಡುವನು ।
ಮಂದಿಯರ ಧನಿಗಳಿಗೆ ಸಂಗಡಿಗನು ॥
ಕುಂದಿಸುರ್ಕಿದ ಕೈಯ ಕೆಂಚನೀಸಮಯದಲಿ ।
ಚಂದತುಡಿಗೆಯ ಚಲುವರೊಂದಿಗಿಹನು ॥ ೩ ॥

ಹೊನ್ನುಹೊಲಕಲ್ಪಿಗಳ ಜಂಭಮಾಡುವರೊಡನೆ ।
ನನ್ನಸತ್ತೆಯನೀಗ ಕಾಣಿಸುವೆನು ॥
ಚಿನ್ನಬಿನ್ನಾಣಗಳುನನಗಿಲ್ಲ ಸಾಧುಮತಿ ।
ಇನ್ನೂಪ್ರಬಲವೆಂದು ತೋರಿಸುವೆನು ॥ ೪ ॥

ಪರಿಹರಿಸಲನ್ಯಾಯ ಕಷ್ಟಗಳು ನಿಂತಿರಲು ।
ಹರಸಿಸದ್ಧರ್ಮವನು ಪಾಲಿಸುವೆನು ॥
ಹರಕುಬಟ್ಟೆಯನುಟ್ಟು ತೇಪೆಯಂಗಿಯತೊಟ್ಟು ।
ನರನೀಗನರನೆಂದು ಸಾಧಿಸುವೆನು ॥ ೫ ॥

ಕವಿರಾಜರು ರಮಣೀಯತೆಯನ್ನು ಕಾಣದ ಸ್ಥಳವೆಲ್ಲಿ? ಅವರು ತಾವು ನೋಡಿದುದನ್ನು ವರ್ಣಿಸಿದರೆ ಸಾಕು. ಸಾಮಯಿಕವರ್ಣನೆಗಳಿಗೆ ಈಗಿನ ಶಿಕ್ಷಿತ ಜನರು ಮೆಚ್ಚುವುದಿಲ್ಲ. ಪೂರ್ವಕವಿಗಳು ಉತ್ಸಾಹದಿಂದ ರಚಿಸಿದ ಕೆಲವು ವರ್ಣನೆಗಳು ಈಗಿನವರಿಗೆ ಬೀಭತ್ಸವಾಗಿವೆ. ಪೂರ್ವಪದ್ಧತಿಗನುಸಾರವಾಗಿ ಏಕಪ್ರಕಾರತೆಯನ್ನು ಆಚರಿಸುವುದರಿಂದ ಓದುವವರಿಗೆ ಬೇಸರವಾಗುತ್ತದೆ.

ಭಾವನೆಯ ಬಿಚ್ಚಿಬಿಡು, ನೋಡಿದುದನೋಡಿದರೆ
ಆವ ರಮಣೀಯತೆಗೆ ತಪ್ಪುವುದು ನಿಯತಜರೆ?
ಮಧುಮಾಸದಾನಂದ ಹೊಗಳೊಡನಳಿಯುವುದು,
ವಿಧುಕಿರಣಗಳ ಸೊಬಗು ಮಬ್ಬಿನೊಳಗಡಗುವುದು.
ನೋಡಿದುದ ನೋಡಿದರೆ ಮೋಹಿಸುವ ಕಂಣೆಲ್ಲಿ?
ಬಾಡದಂತಹಳದವುದಂತ ಮೌಕ್ತಿಕವೆಲ್ಲಿ?
ಕೇಳಿದುದ ಕೇಳಿದರೆ ಸವಿಮಾತಿಗಿಂಪೆಲ್ಲಿ?

ಹೇಳಿದುದ ಹೇಳಿದರೆ ಕಥೆಯು ರಂಜನವೆಲ್ಲಿ?
ಆವಸುಖ ವೃಷ್ಟಿಯಲಿ ಬುದ್ಬುವದಪರಿಯಲ್ಲ?
ಭಾವನೆಯು ಹಾರಗೊಡು, ವಿರತಿಯುಲಿಸುಖವಿಲ್ಲ.

ಹ. ನಾರಾಯಣರಾವ್.

ಕನ್ನಡ ಶಬ್ದದ ವ್ಯುತ್ಪತ್ತಿ.

ಪ್ರೊಫೆಸರ್ ಆರ್. ತಾತಾಚಾರ್ಯರ್, ಎಂ. ಎ., ಎಲ್. ಟಿ.—ಅವರಿಂದ.

೧. ಕನ್ನಡ ಕರ್ನಾಡು (= ಕರ್ + ನಾಡು)

ಕರಿಯ ಮಣ್ಣುಳ್ಳ ದೇಶವೆಂಬ ಅರ್ಥದ **ಕರ್ನಾಡು** ಎಂಬ ಪದದಿಂದ **ಕನ್ನಡ** ಎಂಬ ಹೆಸರು ಬಂದಿದೆಯೆಂದು ಕಿತ್ತಲ್, ಗುಂಡರ್ಟ್, ಕಾಲ್ಡವೆಲ್ ಮೊದಲಾದ ಯೂರೋಪಿಯನ್ ಪಂಡಿತರು ಹೇಳಿರುವರು.

ಕನ್ನಡಿ ಕನ್ನಡು ಎಂದು ರೂಪಾಂತರಗಳೂ ಕೆಲವೆಡೆಗಳಲ್ಲಿ ಕಾಣಬರುವುವು. ಈ ಮೂರು ರೂಪಗಳಲ್ಲಿಯೂ ರೇಫೆ ಕಾಣಿಸುವುದಿಲ್ಲ. ಈ ರೇಫೆಯ ಲೋಪಕ್ಕೆ **ಕರ್ನೆಯ್ದಿಲ್** ಎಂಬುದರಿಂದ **ಕನ್ನೆಯ್ದಿಲ್** ಎಂದಾದಂತೆ ದೃಷ್ಟಾಂತವನ್ನು ಕಿತ್ತಲರವರು ನಿಘಂಟುವಿನಲ್ಲಿ ಹೇಳಿರುವರು. **ಕರ್ನೆಯ್ದಿಲ್ ಕನ್ನೆಯ್ದಿಲ್** ಎಂಬ ರೂಪಗಳೆರಡನ್ನೂ ಕನ್ನಡ ಕಾವ್ಯಗಳಲ್ಲಿ ಕಾಣಬಹುದಾದರೂ **ಕರ್ನೆಯ್ದಿಲ್** ಎಂಬ ಪ್ರಾಚೀನರೂಪವೇ ಪುರಾತನ ಕವಿಗಳ ಪ್ರಯೋಗವೆಂದು ಹೇಳಬಹುದು. ಇದರಂತೆ **ಕರ್ನಡ** ಎಂಬ ರೂಪವನ್ನಾಗಲಿ **ಕರ್ನಾಡೆಂಬ** ರೂಪವನ್ನಾಗಲಿ ನಮ್ಮ ದೇಶಭಾಷೆಯೆಂಬ ಅರ್ಥದಲ್ಲಿ ಪ್ರಯೋಗಿಸಿರುವಂತೆ ತೋರಲಿಲ್ಲ. ಅಂತಹ ಪ್ರಯೋಗವನ್ನು ಹುಡುಕಿ ಸಾಕಾಯ್ತು. ವಾಸ್ತವವಾಗಿ ಕನ್ನಡದಲ್ಲಿ ಕಪ್ಪು (ಕರ್ಪು) ಇಲ್ಲದುದರಿಂದ ಇಂತಹ ವ್ಯುತ್ಪತ್ತಿಯನ್ನು ಬಿಟ್ಟು ಮತ್ತೊಂದು ವ್ಯುತ್ಪತ್ತಿಯನ್ನು ವಿಚಾರಿಸಿ ನೋಡುವ.

* * * * *

೨. ಕರುನಡಂ (= ಕನ್ನಡ) ಕರ್ಣಾಟ.

ಕನ್ನಡಿಗರ ನೆರೆಹೊರೆಯಲ್ಲಿರುವ ತಮಿಳರು ಈ ನಾಡಿಗೂ ನುಡಿಗೂ ಹೆಸರಿಟ್ಟಿದ್ದ ಪಕ್ಷದಲ್ಲಿ, ಅವರು ಕೀಲ್ನಾಡಿನವರಾದುದರಿಂದ ಮೇಲ್ನಾಡನ್ನು **ಕರುನಾಡು ಕರುನಡಂ** ಎಂದು ಹೆಸರಿಟ್ಟಿರಬಹುದು. **ಕರು** ಎಂದರೆ ತಮಿಳಲ್ಲಿ ಬೆಟ್ಟವೆಂದರ್ಥ. ತಮಿಳನಾಡಿನ ಸುತ್ತಲಿದ್ದ ಹನ್ನೆರಡು ನಾಡುಗಳ ಹೆಸರುಗಳು:— ಸಿಂಗಳಂ, ಪಟಿಂದೀವು', ಕೊಲ್ಲಂ, ಕೂಪಂ, ಕೊಂಕಣಂ, ತುಳುವಂ, ಕುಡಗಂ **ಕರುನಡಂ,** ಕೂಡಂ, ವಡು'ಗು', ತೆಲುಂಗು', ಕಳಿಂಗಂ' ಎಂಬಿವು ತೊಲ್ಕಾಪ್ಪಿಯಂ ಶೊಲ್ಲಧಿಕಾರದ ೪೦೦-ನೆಯ ಸೂತ್ರದ ವೃತ್ತಿಯಲ್ಲಿ ಹೇಳಲ್ಪಟ್ಟಿರುವುವು. ನನ್ನೂಲ್ ೨೭೩-ನೆಯ ಸೂತ್ರದ ವೃತ್ತಿಯಲ್ಲಿ ತಮಿಳನಾಡಿನ ಸುತ್ತಲಿದ್ದ ಹದಿನೇಳು ನಾಡುಗಳೊಳಗೆ **ಕನ್ನಡಂ** ಎಂಬುದೊಂದೆಂದು ತಿಳಿಯಬರುವುದು. ಹೂಣಶಕ ೧೮೪೦-ರಲ್ಲಿ ಬರೆದ ಮುರುಗದಾಸರ—ಪುಲವರ್ ಪುರಾಣದ ಕುಮಾರದೇವರ ಪರಿಚ್ಛೇದದಲ್ಲಿ

ಕರುನಾಡದೇಯ ಮುಱುದುಂ ಪುರಂದು'
(= ಕರ್ಣಾಟದೇಶಮನಿತಂ ಪೊರೆದು) ಎಂದು ಹೇಳಿದೆ.

ಹೀಗಿರುವುದರಿಂದ ಕನ್ನಡಶಬ್ದಕ್ಕೆ ಸರೇಫನಾಮವೇ ಮೊದಲೆಂದು ಹೇಳಬೇಕಾಗುವುದು. ಎಂದರೆ ಕೇಶಿರಾಜ ಭಟ್ಟಾಕಳಂಕರಂತೆ ಸಂಸ್ಕೃತದ **ಕರ್ಣಾಟ**ವೆಂಬ ಶಬ್ದವು ಕನ್ನಡವಾಯ್ತೆನ್ನಬೇಕು. ಹೀಗೆಂದರೆ ಕರ್ಣಾಟ ಶಬ್ದಕ್ಕೆ ಅರ್ಥವೇನು? ಕಾಕಿನಾಡದ ಪಾಠಿವೆಂಕಟನಾರಾಯಣ ಪಂಡಿತರು ಆಂಧ್ರಬಾಷಾ ತತ್ತ್ವವೆಂಬ ಗ್ರಂಥದಲ್ಲಿ **ಕರ್ಣ** = ಪರ್ವತ, + **ಅಟ** = ಭ್ರಮಣೇ ಎಂದು ವಿಂಗಡಿಸಿ ಕನ್ನಡಿಗರೆಂದರೆ ಕರ್ಣಾಟರೆಂದರೆ ಕಾಡುಜನರು ಎಂದು ವಾದಿಸಿರುವರು. ಕರ್ಣವೆಂಬ ಸಂಸ್ಕೃತಪದಕ್ಕೆ ಪರ್ವತವೆಂದು ಅರ್ಥವಿದ್ದಲ್ಲಿ ಇವರ ವ್ಯುತ್ಪತ್ತಿ ಸಮಂಜಸವಾಗುತ್ತಿತ್ತು. ಆದರೆ ಕರ್ಣಶಬ್ದಕ್ಕೆ ಸಂಸ್ಕೃತದಲ್ಲಿ ಈ ಅರ್ಥವಿರುವಂತೆ ಕಾಣುವುದಿಲ್ಲವಾದುದರಿಂದ ಪಾಠಿಯವರ ವ್ಯುತ್ಪತ್ತಿಯನ್ನು ಬಿಡಬೇಕಾಗಿದೆ.

ಹಾಗಾದರೆ **ಕರ್ಣ** ಶಬ್ದಕ್ಕೆ ನೌಕರ್ಣವೆಂದು ಅರ್ಥಮಾಡಿದರೆ ಬಾಧಕವೇನು? ಕರ್ಣರಾಘ್ ಕನ್ನರ ಎಂಬ ಅರಸರು ನೌಕರ್ಣಧಾರರಾದುದರಿಂದ ಈ ಹೆಸರು ಬಂದಿರಬಹುದು.

ಕನ್ನರನಾಪರದಿಂ ಕುಡೆ ।
ಪೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ ॥
ಮನ್ನಿಸಿ ಬಲ್ಲಾಳಂ ಕುಡೆ ।
ಜನ್ನಂ ಕವಿಚಕ್ರವರ್ತಿವೆಸರಂ ಪಡೆದಂ ॥ (ಯಶೋ: 1. 21)

ಎಂದು ಜನ್ನನು ಹೇಳಿಲ್ಲವೇ? ಹಾಗಾದರೆ ಕನ್ನಡಿಗರು ಪೂರ್ವಕಾಲದಲ್ಲಿ

ಸ್ವೇಚ್ಛೆಯಾಗಿ ಸಮುದ್ರದಲ್ಲಿ ಸಂಚರಿಸುತ್ತಿದ್ದರೆಂದಾಗುವುದು. ಆಗಬಾರದೇಕೆ? ಹೀಗೆ ನೌಕರ್ಣವೆನ್ನುವುದರಿಂದ ಬಾಧಕವೇನೂ ಇರಲಾರದು. ಆದರೆ ಕನ್ನಡ ಎಂಬ ಮಾತು ಸಂಸ್ಕೃತದ ಅಪಭ್ರಂಶವೆಂಬುದೊಂದೇ ಆಕ್ಷೇಪಣೆ. ಹೇಗಾದರೂ ಸರಿ; ಕನ್ನಡವನ್ನೂ ದ್ರಾವಿಡವನ್ನೂ ಬಗೆಗೆ ಬಂದಂತೆ ತಿರಸ್ಕರಿಸುವ ಪಾಠಿಯವರ ವ್ಯುತ್ಪತ್ತಿಯೆಂತೂ ನಮಗೆ ಸಮಂಜಸವಾಗಿ ತೋರುವುದಿಲ್ಲ.

ಇನ್ನು **ಕರ್ಣ**ವೆಂದರೆ ಕಿವಿ ಎಂದರ್ಥ ಮಾಡುವುದಾದರೆ—

ಕರ್ಣಾಟದೇಶೋ ಯಃ ಪೂರ್ವಂ ಕರ್ಣದೇಶಮಭೂಷಯತ್ ।
ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋಭೂರ್ಷಣಾಯತೇ ॥

ಎಂಬ ವಿಶ್ವಗುಣಾದರ್ಶದ ೨೪೯-ನೆಯ ಶ್ಲೋಕವನ್ನನುಸರಿಸಿ ಕಿವಿಗಿಂಪಾದುದೆಂದು ಅರ್ಥಮಾಡಬೇಕಾಗುವುದು. ಏಕೆ ಮಾಡಬಾರದು? ತಮಿಳಶಬ್ದದ ವ್ಯುತ್ಪತ್ತಿಗೆ ಅಮಿಟ್ಟಮಿಟ್ಟಮಿಟ್ಟು' ಎಂದು ಅಗಸ್ತ್ಯರು (ಅಮೃತ ಅಮೃತ ಅಮೃತ! ಎಂದರ್ಥವಾಗುವಂತೆ) ಹೆಸರಿಟ್ಟರೆಂದು ಹೇಳುವುದಿಲ್ಲವೇ? ಹಾಗಾದರೆ ಮೇಲೆ ಹೇಳಿದಂತೆ ಸಂಸ್ಕೃತದ ಅಪಭ್ರಂಶವೆಂಬುದೊಂದೇ ಆಕ್ಷೇಪಣೆ.

*   *   *   *   *

೩. ಕನ್ನಡ ಎಂಬುದು ದೇಶ್ಯಪದ.

ಮೂಲಪದದಲ್ಲಿ ರೇಫೆಯಿಲ್ಲದೆ ಸಂಸ್ಕೃತದಲ್ಲಿ ಇದಕ್ಕೆ ಕರ್ಣಾಟವೆಂದು ಹೆಸರಾಗಿದ್ದರೆ, ತಮಿಳಕರುನಾಡು ಕರುನಡಂ ಎಂಬ ಮಾತುಗಳು ಈ ಕರ್ಣಾಟವೆಂಬ ಶಬ್ದದಿಂದ ಬಂದಿದ್ದರೆ, ಮೂಲಪದವು ಕನ್ನಡಭಾಷೆಯಲ್ಲಿಯೇ ಇರಬೇಕು. ಕನ್ನಡ ಕವಿಗಳಾರೂ ಕರ್ನಡವೆಂದು ಪ್ರಯೋಗಿಸಿರುವಂತೆ ಕಾಣುವುದಿಲ್ಲವಾದುದರಿಂದ ಕನ್ನಡ ಎಂಬ ಮಾತಿಗೆ ಕನ್ನಡದಲ್ಲಿಯೇ ಅರ್ಥವನ್ನೂ ವ್ಯುತ್ಪತ್ತಿಯನ್ನೂ ಹೇಳಬೇಕು.

ನಮ್ಮ ಕವಿಗಳನೇಕರು ಕನ್ನಡವನ್ನು ಕನ್ನಡಿಯೆಂದೇ ತಿಳಿದು ಬರೆದಿರುವರು. ಆಂಡಯ್ಯನು—

ಕನ್ನಡದೊಳ್ಪಿನ ನುಡಿಯಂ ।
ಮುನ್ನಿದಜಕೊಳೆ ನೋಡಿ ತಿಳಿದು—ಕೊಳ್ವುದು ಚದುರಂ ॥
ರನ್ನದ ಕನ್ನಡಿಯಂ ನಲ ।
ವಿನ್ನೋಡಿದವಂಗೆ ಕುಂದದೇನಾದಪುದೇ? ॥ (ಕಬ್ಬಿಗರ ಕಾವಂ—೭)

ಎಂದುಹೇಳಿರುವನು. ಸಹಜಾನಂದನು ಇನ್ನೂ ಸ್ಪಷ್ಟವಾಗಿ—

ಕನ್ನಡದ ನುಡಿಯೊಂದುಪೇಕ್ಷಿಸ ।
ಲಿನ್ನು ಹಿರಿಯರಿಗಂಜಿ ನುಡಿದೆನು ।
ಕನ್ನಡವೆ ದರ್ಪಣವದಲ್ಲದೆ ಭೇದವೇನಿದಕೆ? ॥
ಮುನ್ನಮುಪನಿಷದರ್ಥವನು ಸಂ ।
ಪನ್ನಮತಿಗಳು ಪೇಳ್ದುದನೆ ನಾಂ ।
ಕನ್ನಡಿಸಿದೆನು ಕೊರತೆಯಿದ್ದೊಡೆ ಮನ್ನಿಸುವುದೊಲಿದು ॥ (ಅನುಭವ—೪)

ಸುಲಿದ ಬಾಳೆಯ ಹಣ್ಣಿನಂದದಿ ।
ಕಳಿದ ಸಿಗುರಿನ ಕಬ್ಬಿನಂದದಿ ।
ಯುಳಿದ ಬಿಸುಪಿನ ಹಾಲಿನಂದದಿ ಸುಲಭವಾಗಿರ್ಪ ॥
ಲಲಿತವಹ ಕನ್ನಡದ ನುಡಿಯುಲಿ ।
ತಿಳಿದು ತನ್ನೊಳು ತನ್ನ ಮೋಕ್ಷವ ।
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು? ॥ (ಅನುಭವ—೫)

ಎಂದು ಹೇಳಿದನು.

ಸಚ್ಚಿದಾನಂದನ ಜ್ಞಾನಸಿಂಧುವಿನಲ್ಲಿ—

ಮಾತು ಕನ್ನಡವೆಂದು ಸಂಸ್ಕೃತ ।
ಮಾತನರಿವವರಿದನು ಹಳಿವುದು ।
ನೀತಿಯುಲ್ಲವು ಮಾತುಗಳು ಮಾಣಿಕಗಳಿಟ್ಟಂತೆ ॥
ಮಾತು ಬಹುಪರಿಯಾಗಿ ಕರೆವರು ।
ಪ್ರೀತಿಯಿಂದೊಂದಾದ ವಸ್ತುವ ।
ಮಾತು ಭಿನ್ನಿಸಲೇನು ವಸ್ತುವಿನನುಭವವೆ ಮುಖ್ಯ ॥
ಕನ್ನಡವು ಕನ್ನಡಿಯು ತೆರದೊಳ ।
ಗಿನ್ನು ಭಾವವ ತೋರ್ಪುದಿದು ಮೇಣ್ ।
ಕನ್ನಡವು ವ್ಯಾಕರಣ ಲಕ್ಷಣ ಶಿಕ್ಷಿತವದಾಗೆ ॥
ಪೊನ್ನಿನಂದದಿ ಬೆಳಗುವುದು ಕೇಳ್ ।
ಚಿನ್ನಮೆಲ್ಲರಿಗೇನು ಸುಲಭವೆ ।
ತನ್ನ ಭಾವವ ಪಾಮರರ್ಗೆಯು ತಿಳಿಸುವುದೆ ಭಾಷೆ ॥
ಕನ್ನಡದ ನುಡಿಯಲ್ಲಿ ಹೇಳಿಹು ।
ದಿನ್ನು ಹಾಗೀಗೆನಲು ಸಲ್ಲದು ।
ತನ್ನ ಮುಂದೆಯೆ ಎಡೆಯ ಬಡಿಸಿಟ್ಟಂತೆಯನುಭೂತಿ ।
ತನ್ನ ತಿಳಿಯಲು ತನ್ನ ನರಿಯಲು ।

ತನ್ನ ಕಾಣಲು ಕನ್ನಡಿಯೆ ಇದು ।
ಮನ್ನಿಸಿಯೆ ಪುಸ್ತ್ಯಾತ್ಮರೋದುವುದಿದನು ಮನವೊಲಿದು ॥

ಹೀಗೆ ಕನ್ನಡವೆಂದರೆ ಕನ್ನಡಿಯೆಂದು ಅಭಿಪ್ರಾಯವಾಗುವುದು. ಇದಲ್ಲದೆ **ಕನ್ನಡಿಸು** ಎಂದರೆ ಕನ್ನಡ ಭಾಷೆಯಲ್ಲಿ ಹೇಳುವುದೆಂದೂ ಪ್ರತಿಬಿಂಬಿಸುವುದೆಂದೂ, ಅರ್ಥವುಂಟು.

ಸತ್ಕೃತಿ ಸಂಸ್ಕೃತದಿಂದೆ ಜ ।
ಗತ್ಖ್ಯಾತಕವಾಗಿ ಮತ್ತೆ ಕರ್ಣಾಟದೊಳಂ ॥
ಸತ್ಕವಿನಿವಹಂ ಪೊಗೞ್ಜ ।
ಮತ್ಕೃತಿಯಂ ಪಡೆದು ಸೊಬಗುವಡೆದತ್ತೀಗಳ್ ॥ (ಕಾದಂಬರಿ—೫)

ಆಕೃತಿ ಮುನ್ನಂ ಚೆಲ್ವಿಂ ।
ಗಾಕರಮೆನಿಸಿರ್ದ್ದ್ದಮತ್ತೆ ಕನ್ನಡಿಸಿತ್ತಿ ॥
ನ್ನೀ ಕವಿತೆಯಿಂ ಪ್ರಗಲ್ಭತೆ ।
ಯಾ ಕಾದಂಬರಿಯ ಸೊಬಗದೇನಚ್ಚರಿಯೋ ॥ (ಕಾದಂಬರಿ—೬)

ಎಂದು ನಾಗವರ್ಮನು ಕಾದಂಬರಿಯಲ್ಲಿ ಹೇಳಿರುವನು.

ಇದಲ್ಲದೆ, **ಕನ್ನಡವಕ್ಕಿ**— ಪಂಡಿತವಕ್ಕಿ ಗಿಳಿ ಎಂಬುದಕ್ಕೆ

ಪೊನ್ನೆಱೆಯ ತಿಸುಳಿಗೆಳೆಯಂ ।
ಕನ್ನ ರಡತಿ ಜೊನ್ನವಕ್ಕಿಯೆಂದು ಚಕೋರಂ ॥
ಕನ್ನಡವಕ್ಕಿಯೆ ಗಿಳಿಯೊಳ್ ।
ಮುನ್ನೀಱೆಱೆಯಂ ಪ್ರಚೇತನೊಳ್ಕಡಲೆಱೆಯಂ ॥

ಎಂದು ಕರ್ಣಾಟಕ ನಿಘಂಟುವಿನಲ್ಲಿದೆ.

ಇವೆಲ್ಲವನ್ನೂ ನೋಡಿದರೆ "ಜಡಧಾರಿ ನೋಂಕೆ ಸಿರಿಗನ್ನಡಿಗೆ ಕಿಲುಂಬೇಟು ವಂತೆ" ಕನ್ನಡಕ್ಕೆ ಕಪ್ಪು ಹತ್ತಿತಲ್ಲದೆ ನೈಜವಾಗಿ ಕನ್ನಡದಲ್ಲಿ ತಪ್ಪಿಲ್ಲ; ಇಂಪೇ ತೋರುವುದು.

ಕಮ್ಮಿತು + ನಡೆ, ನಾಡು... ಕನ್ನಡ.

ಕನ್ನಡಶಬ್ದದ ಮೊದಲಲ್ಲಿ **ಕಂ** ಎಂದರೇನು? ಕಂಪು ಎಂಬ ಭಾವನಾಮ ದಲ್ಲಿ **ಕಂ** ಎಂದರೇನು? **ಕಮ್ಮಿತು, ಕಮ್ಮನೆ ಕಮ್ಮಯಿಸು— ಕಮ್ಮೈಸು** ಎಂಬ ಪದಗಳು ಪ್ರಯೋಗದಲ್ಲಿದ್ದುವು.

ವನಜ ಪರಾಗದೊಳ್ ಪೊರಳ್ದು ಕಮ್ಮನೆ ಕಮ್ಮನೆ ಕೂಡುವಂಚೆಯಿಂ ।
ದಿನ ಶಿಶುದಂಷ್ಟ್ರಿಕೊಳ್ ಸುಗುಳ್ದು ಮೆಲ್ಲನೆ ಮೆಲ್ಲನೆ ಕೆಯ್ಗೆವಂದವಾ ॥
ವಿನ ಸೊನೆದಂಪಲೊಳ್ ನನೆದು ತಣ್ಣನೆ ತಣ್ಣನೆ ಬಂದುದಂದು ಕಂ ।
ಪಿನ ಸಿರಿಗೆಯ್ದೆ ವರ್ಷ ಮದಭೃಂಗವಧೂರುತನೊಂದು ಮಾರುತಂ ॥
ವಸಿತಾಕೇಶಕಲಾಪನವ್ಯಕುಸುಮಾಮೋದಂಗಳಿಂ ಕಮ್ಮ ಕ ।
ಮ್ಮನೆ ಕಾಂತಾಕುಟಿಲಾಳಕಸ್ತನತಟಪ್ರೋದ್ಘಟ್ಟದಿಂ ಮೆಲ್ಲಮೆ ॥
ಲ್ಲನೆ ನಾರೀಸುರತಾಂತಜಾತಬಹುಳಸ್ವೇದಾಂಬುಪಿಂತಣ್ಣತ ।
ಣ್ಣನೆ ತೀಡಿತ್ತು ವಿಳಾಸಿನೀಸದನದಿಂ ಬಂದೊಂದು ಮಂದಾನಿಲಂ ॥
(ಶಬ್ದಾನುಶಾಸನ ೩೪೪ ಸೂ. ೧)

ನೆನೆವರ ಚಿತ್ತಮಂ ನೆರೆಯೆ ಕಮ್ಮನೆ ನೋಳ್ಪರ ಕಣ್ಣುಗಳ್ಗೆ ಕ ।
ಮ್ಮನೆ ಪೊಗೆ ಮಾತನಾಡುವರ ಮೆಲ್ನುಡಿ ಕಮ್ಮನೆ ಮೆಯ್ಗೆಳಿಂಪು ಕ ॥
ಮ್ಮನೆ ಮೆಸೆ ಕೂಡೆ ಕಮ್ಮನೆ ಕರಂ ನವಕಾಮಿನಿ ಕಮ್ಮನಾಗೆ ಕಂ ।
ಪಿನ ಪೊನಲೆತ್ತಲುಂ ಪರಿವ ಪೂಮಿನ ಸಂತೆಯನೆಯ್ದಿದಂ ನೃಪಂ ॥ (ಲೀಲಾವತಿ-II. 28)

ಮದನಂ ಬೆಳ್ಮುಗುಳಂಬಿನಿಂದಿನಿಸ ಬಿಗಿಲ್ತಿರ್ದ್ದಂಬುಗಳ್ ಚಿತ್ತದೊಳ್ ।
ಮೊದೆಯಲ್ ಬಯ್ತ್ತವೊಲಾಗೆ ಮನ್ಮಥಶಿಖಿಜ್ವಾಲಾಳಿ ತಳ್ತೇಱೆ ಬೇ ।
ಯದೆ ಕಾಯ್ಪೇಡಿನ ಜೋಳದಂತಲೆದೊರ್ದಾ ಕಂಪುಂ ಮನಸ್ತಾಪಮುಂ ।
ಪುದಿದೆತ್ತಂ ಬರೆ ಸುಯ್ಯರ್ ಪೊದಳ್ದು ಬಿಸಿಯುಂ ಕಮ್ಮಿತ್ತು ಮಾಯ್ತೋಪಳಾ ॥
(ಶೂದ್ರಕಂ)

ಕವಿಮಾರ್ಗದೊಳೆಬ್ಬಾಣಿಪ ।
ಕವಣಿಪ ಕಮ್ಮೈಸುವದೆಯೊಳೊಬ್ಬಾಣಿಸಲುಂ ॥
ಕವಣಿಸಲುಂ ಕಮ್ಮೈಸಲು ।
ಮಿವನಂತಾರ್ ಬಲ್ಲರೆನಿಸಿದಂ ಕವಿರತ್ನಂ ॥ (ಅಜಿತನಾಥ ಪುರಾಣ-I. 83)

ಇವೆಲ್ಲಾ ‘ಕಂ + ನಡೆ 7 ಕನ್ನಡ ವೆಂದಾಗಿರಬಹುದೆಂದು (ಎಂದರೆ ಕಂ ಎಂಬ ಮೂಲಪದಕ್ಕೆ ನಡೆ ಸೇರಿ ಅದರಿಂದ ಕನ್ನಡ ಶಬ್ದವಾಗಿರಬಹುದೆಂದು) ಹೇಳುವುದಕ್ಕೆ ಅವಕಾಶವನ್ನು ಕೊಡುತ್ತವೆ. ಕಂಪೆಂದರೆ ಕನ್ನಡದಲ್ಲಿ ಎಲ್ಲಿಬೇಕಾದರೂ ಹೇಳಬಹುದು: ನಡೆ, ನುಡಿ, ನಾಡು ಎಲ್ಲಾ ಕಮ್ಮಿತು.

ತಮಿಳ ಶಬ್ದದ ವ್ಯುತ್ಪತ್ತಿಗೆ ಅಗಸ್ತ್ಯರಿಟ್ಟ ಹೆಸರು ಅಮೃತದಿಂದ ವಿಕೃತಿಯಾಗಿ ಬಂದಿತೆಂದು ಬಿಟ್ಟು ತಮಿಳಿಗೆ ತೇನ್ + ಮೊಳಿ (ಜೇನ್ಪಾತು ಸವಿನುಡಿ) ಎಂದು ಡಾಕ್ಟರ್ ಪೋಪ್ ಹೇಳಿರುವುದನ್ನೂ ತೆನುಗು ಎಂಬಲ್ಲಿ ಮಧುವಿಂದು ತಂದೊ

ಡ್ಯದ ವ್ಯುತ್ಪತ್ತಿಯನ್ನೂ, ಹೀಗೆ ಭಾಷೆಗಳ ಹೆಸರುಗಳಿಗೆ ಆ ಆಭಾಷೆಗಳಲ್ಲಿಯೇ ವ್ಯುತ್ಪತ್ತಿಯನ್ನು ಹೇಳುವುದು ಸಹಜವಾಗಿರುವುದರಿಂದ ಕನ್ನಡ ಶಬ್ದಕ್ಕೆ ವ್ಯುತ್ಪತ್ತಿಯನ್ನು ಕಮ್ಮಕಮ್ಮನೆ ಹೇಳಿ ಮಗಮಗಿಸುವಂತೆ ತೊಳತೊಳಗುವಂತೆ ಬೆಳಬೆಳಗುವಂತೆ ಭಾವನೆಯನ್ನುಂಟುಮಾಡುವುದೇ ಸರಿಯೆಂದು ಕೆಲವರ ಅಭಿಪ್ರಾಯ. ಇದಕ್ಕೆಂದು ಕೆಲವು ಪದ್ಯಗಳೂ ಇವೆ:—

ಕಮ್ಮಿತಾದುದು ನಾಡು ನುಡಿಯಿಂ ।
ಕಮ್ಮಿತಾದುದು ನಾಡು ನಡೆಯಿಂ ।
ಕಮ್ಮಿತಾದುದು ಚಂದನೋರ್ವೀರುಹದಿ ನಾಡು ॥
ಕಮ್ಮಿತಾದುದು ಕಮ್ಮಿಯಿಂ ಸುಮನಾ ।
ಕಮ್ಮಿದಳ್ಗಳಿಸಿಸಿತು ಕಂಪಿಂ ।
ಕಮ್ಮಿತಲ್ಲದೆ ಕರ್ಪೂರ ಕನ್ನಡಕೆಂತು ಸಮನಿಸಿತು? ॥
ನಡುಗಂಪಂ ಪೀಡುತಿಕರ್ಪೂರಂ ಸುರತರುತತಿವೊಲ್ ಚಂದನಕ್ಕಾಜವೆತ್ತಂ ।
ಮುಡಿಗುಂ ಭಾಷಂಗಳಂ ಕನ್ನಡಿಸುವ ನಡೆ ಸುಶ್ರಾವ್ಯವೆಂಬನ್ನವೊಂದ ॥
ಕ್ಕಿಡುಸಾಳ್ಗಿಂ ಪಾತು ಕರ್ಣಾಟಕವೆನಿಪುದಱಿಂ ಕಮ್ಮಿತಾದತ್ತು ನಾಡಿಂ ।
ತಡೆಸಿಂ ಕರ್ಪೂರಂತು ನಾಡಿಂಗೊಗೆದುಮೊ ಬಂಧದಿಂ ಶ್ರೈಲಮಲ್ಲೀಮಹೇಶಾ ॥

ಎಂದು ಬಳಿಕ, ನಾಗಚಂದ್ರನು ಹೇಳುವಂತೆ—

ನಯಮಂ ತಮಂಗಱಿದೊಡ ।
ನ್ನಯಮಂ ಬಿಡದನ್ಯರಿಲ್ಲಿ ರಾಗಾದಿಗಳಿಂ ।
ನಿಯತಂಗಳ್ ಕನ್ನಡಿಯಂ ।
ಪ್ರಯತ್ನದಿಂ ಬೆಳಗೆ ಪತ್ತುಬಿಡದೆ ಕಲಂಕಂ ॥ (ಪಂ. ರಾ. XI. 20)

ಮಂಗಲಗ್ರಹ.

ಪ್ರಕೃತಕಾಲದಲ್ಲಿ ನಾವು ಮಂಗಲಗ್ರಹವನ್ನು ಕಣ್ಣಿನಿಂದ ನೋಡುತ್ತ ಎಷ್ಟು ಸಂಗತಿಯನ್ನು ತಿಳಿದಿರುವೆವೊ ಅವೆಲ್ಲವನ್ನೂ ನಮ್ಮ ಆರ್ಯಮಹರ್ಷಿಗಳು ಮೊದಲೇ ತಿಳಿದು ಗ್ರಂಥರೂಪವಾಗಿ ಬರೆದಿಟ್ಟಿರುವರು. ಮಂಗಲಗ್ರಹವು ಕೆಂಡದಂತೆ ಕೆಂಪಾಗಿ ಕಾಣುವುದರಿಂದ ಅದನ್ನು ಅಗ್ನಿಮಯವೆಂದು ಪೂರ್ವಿಕರು ಭಾವಿಸಿರುವರು.

ಪರಾಶರ ಮಹರ್ಷಿಯು—"ಪೂರ್ವಕಾಲದಲ್ಲಿ ಒಂದಾನೊಂದು ಸಮಯದಲ್ಲಿ ಬ್ರಹ್ಮನು ಒಂದು ತೆರನಾದ ತೇಜಸ್ಸನ್ನು ಸೃಷ್ಟಿಸಿದನೆಂತಲೂ ಆ ತೇಜಸ್ಸು ಭೂಮಿ

ಯಲ್ಲಿರುವ ಪಾರ್ಥಿವಾಗ್ನಿಯಲ್ಲಿ ಸೇರಿ ಕಾಲಕ್ರಮದಲ್ಲಿ ಆಕಾಶವನ್ನು ಹೊಂದಿ ಮಂಗಲ ಗ್ರಹವಾಯಿತೆಂತಲೂ ಅದರಿಂದಲೇ ಅದಕ್ಕೆ ಪ್ರಾಜಾಪತ್ಯ ಅಥವಾ ಭೌಮವೆಂಬ ಹೆಸರು ಬಂದಿರುವುದು," ಎಂದು ಹೇಳುವರು. ತದನುಗುಣವಾಗಿ ಪೌರಾಣಿಕರು— "ಭೂಮಿಪುತ್ರ, ಭೂಮಿಸುತ, ಅಂಗಾರಕ, ಲೋಹಿತಾಂಗ" ಎಂದು ಮುಂತಾದ ಹೆಸರನ್ನು ಹೇಳುವರು. ಮತ್ತು ಬ್ರಹ್ಮನ ಆಜ್ಞಾನುಸಾರ ಭೌಮಗ್ರಹವು ವಕ್ರಾನು ವಕ್ರಗತಿಗಳನ್ನು ಹೊಂದಿ ಸುತ್ತುತ್ತಿರುವುದೆಂದೂ ಹೇಳುವರು. ಲಿಂಗಪುರಾಣದಲ್ಲಿ ಮಂಗಲಗ್ರಹವು ಅಗ್ನಿಯಿಂದ ವಿಕೇಶಿಯೆಂಬುವಳಲ್ಲಿ ಜನಿಸಿರುವುದೆಂತಲೂ, ಅದರ ಕಾಂತಿಯು ಲೋಹಿತವೆಂತಲೂ ಹೇಳಿದೆ.

ಗ್ರೀಕ್ ಮತ್ತು ರೋಮ್‌ದೇಶದವರು ಮಂಗಲಗ್ರಹವನ್ನು ಕಾರ್ತಿಕೇಯ ನೊಡನೆಯೂ, ಜಯಂತನೊಡನೆಯೂ, ಹೋಲಿಸಿ ವರ್ಣಿಸುತ್ತಾ ಈ ಗ್ರಹವನ್ನು ದೇವಸೇನಾಪತಿಯೆಂದು ಭಾವಿಸಿರುವರು. ಅದರ ಬಣ್ಣವು ಎಲ್ಲಾ ದೇಶಗಳಲ್ಲಿಯೂ ಲೋಹಿತವಾಗಿಯೇ ಕಾಣುತ್ತಿರುವುದು. ಆದುದರಿಂದಲೇ ಅದಕ್ಕೆ ಲೋಹಿತಾಂಗ ನೆಂಬ ಹೆಸರು ಬಂದಿರುವುದು.

ಈಗಿನ ವೈಜ್ಞಾನಿಕರು (ಸೈಂಟಿಫಿಕ್ ಮೆನ್) ಮಂಗಲಗ್ರಹವು ಸೂರ್ಯನಿಂದ ಜನಿ ಸಿರುವುದೆಂದು ಹೇಳುವರು. ಮತ್ತೆ ಕೆಲವರು ಭೂಮಿಯು ಉತ್ಪನ್ನವಾಗದಿರುವಾಗ ಪಾರ್ಥಿವಭೂತ ಸಮಷ್ಟಿಯು ಸೂರ್ಯನ ಮಧ್ಯದಲ್ಲಿ ಅಡಗಿದ್ದಿತೆಂತಲೂ, ಆಗ ಸೂರ್ಯನ ವಿಸ್ತಾರವು ಮಂಗಲಗ್ರಹದ ಕಕ್ಷಾಪರ್ಯಂತವಾಗಿದ್ದಿತೆಂತಲೂ, ಕಾಲಕ್ರಮದಲ್ಲಿ ಆ ಮಂಗಲಗ್ರಹವು ದೈವದುರ್ವಿಪಾಕದಿಂದ ಚೂರ್ಣವಾಗಿ ಹೋಯಿತೆಂತಲೂ ಹೇಳು ವರು. ಆದರೆ ಈ ವಿಧವಾದ ಪ್ರಲಯವು ಹಿಂದೆಯೂ ಶಾಸ್ತ್ರದಲ್ಲಿಯೂ ವರ್ಣಿತ ವಾಗಿಲ್ಲ. (ಸಾಟರ್ನ್) ಹರ್ಷಲ್, ನೆಪ್‌ಚೂನ್, ಶನಿ ಮುಂತಾದುವು ಜನಿಸಿರು ವಂತೆ ಮಂಗಲಗ್ರಹವೂ ಜನಿಸಿರುವುದು ನೋಡಿದರೆ ಅದು ಅಚಂಚಲವಾಗಿಯೇ ಕಾಣುತ್ತಿರುವುದು.

ಚಂದ್ರ, ಶುಕ್ರ, ಬುಧ ಗ್ರಹಗಳಂತೆ ಮಂಗಲಗ್ರಹವೂ ಸೂರ್ಯಕಾಂತಿ ಯಿಂದಲೇ ಕಾಂತಿಯುಳ್ಳದಾಗಿ ಆಗುವುದು. ಈ ಅಂಶವನ್ನು ಪ್ರಾಮಾಣಿಕರು ಚೆನ್ನಾಗಿ ನಿರೂಪಿಸಿರುವರು. ಬುಧ, ಶುಕ್ರ, ಚಂದ್ರರಲ್ಲಿ ಕಾಣಬರುವ ಚಿಹ್ನೆಗಳು ಮಂಗಲಗ್ರಹದಲ್ಲಿ ಕಾಣಬರುವುದಿಲ್ಲ.

ನಾವು ಭೂಮಿಯಿಂದ ಮಂಗಲಗ್ರಹವನ್ನು ನೋಡಿದರೆ ಈ ತೆರನಾದ ಕೆಲವು ಆಕೃತಿಗಳು ಕಾಣುವುವು. ಮಂಗಲ ಗ್ರಹವು ಭೂಮಿಯ ಸಮೀಪದಲ್ಲಿ ಪ್ಪರೆ ಸಂಪೂರ್ಣ ಗೋಲಾಕಾರವಾಗಿಯೂ, ವಿಶೇಷಜ್ವಾಲಾಮಯವಾಗಿಯೂ ತೋರಿ ಬರುವುದು. ಭೂಮಿಯಿಂದ ಮಧ್ಯಸ್ಥಿತಿಯಲ್ಲಿರುವಾಗ ಅಂಡಾಕಾರವಾಗಿ ಕಾಣುವುದು. ಮಂಗಲ ಗ್ರಹವು ಒಂದೇ ರೀತಿಯಲ್ಲಿದ್ದರೆ ಆಗ ಅದು ಭೂಮಿಯ ಅತಿ ಸಮೀಪದಲ್ಲಿರುವುದು. ರಾತ್ರಿ ಎರಡುಜಾವದ ಸಮಯದಲ್ಲಿ ನಮ್ಮ ತಲೆಗೆ ನೇರಾಗಿ ಆಕಾಶದಲ್ಲಿ ಉಜ್ವಲಿಸುತ್ತಿರುವುದು. ಮಂಗಲಗ್ರಹವು ಎರಡು ಅವಸ್ಥೆ ಗಳಲ್ಲಿಯೂ ಸೂರ್ಯರಶ್ಮಿಮಧ್ಯದಲ್ಲಿ ಅಸ್ತವನ್ನು ಹೊಂದುವುದು.

3ನೆಯ ಮಂಗಲಗ್ರಹವು ತನ್ನ ಸ್ಥಾನದಲ್ಲಿದ್ದಾಗ ಸೂರ್ಯನಿಂದ 159,000,000 ಮೈಲಿಗಳ ದೂರದಲ್ಲಿಯೂ, ಭೂಮಿಯಿಂದ 256,000,000 ದೂರದಲ್ಲಿಯೂ ಇರುವುದು.

1 ನೆಯ ಮಂಗಲ ಗ್ರಹವು ತನ್ನ ಸ್ಥಾನದಲ್ಲಿರುವಾಗ ಸೂರ್ಯನಿಂದ 132,000,000 ಮೈಲಿಗಳ ದೂರದಲ್ಲಿಯೂ, ಭೂಮಿಯಿಂದ 35,000,000 ಮೈಲಿಗಳದೂರದಲ್ಲಿಯೂ ಇರುವುದು. ಮಂಗಲಗ್ರಹವು ತನ್ನ ಕಕ್ಷದಲ್ಲಿ ಕೆಲವು ಸಮಯಗಳಲ್ಲಿ ಮ್ರುತವಾಗಿಯೂ, ಸ್ತಂಭಿತವಾಗಿಯೂ, ವಕ್ರವಾಗಿಯೂ ಕಾಣುವುದು. ಮಂಗಲಗ್ರಹವು ಸೂರ್ಯನ ಸುತ್ತಲೂ ಸಂಚರಿಸುವಾಗ ಪ್ರತಿ ಘಂಟೆಯಲ್ಲಿಯೂ, 54,000 ಮೈಲಿಗಳಷ್ಟು ದೂರ ಹೋಗುವುದು. ಮಂಗಲಗ್ರಹದ ವ್ಯಾಸವು (ಡೆಯಾಮಿಟರ್) 4,113 ಮೈಲಿಗಳಿರುವುವು. ಪ್ರಾಯಕವಾಗಿ ಭೂವ್ಯಾಸದಲ್ಲಿ ಅದನ್ನು ಅರ್ಧವೆಂದು ಹೇಳಬಹುದು. ನಮ್ಮ ಚಂದ್ರಗ್ರಹಕ್ಕಿಂತಲೂ ಮಂಗಲಗ್ರಹವು 7ರಷ್ಟು ದೊಡ್ಡದು.

ಒಂದು ವಸ್ತುವು ತನ್ನ ಪರಿಮಾಣಕ್ಕಿಂತಲೂ 500, ಅಥವಾ 600 ರಷ್ಟು ದೊಡ್ಡದಾಗಿ ಯಾವ ಯಂತ್ರದಿಂದ ಕಾಣುವುದೋ ಅಂತಹ ಯಂತ್ರದಿಂದ ಮಂಗಲ ಗ್ರಹವನ್ನು ನೋಡಿದರೆ ಅದು ಗೋಲಾಕಾರವಾಗಿಯೂ, ಲೋಹಿತವರ್ಣವಾಗಿಯೂ ಕಾಣುವುದು. ಮತ್ತು ಅದರ ಮಧ್ಯದಲ್ಲಿ ನಾನಾವರ್ಣವುಳ್ಳ ಹಸುರಾದ ಚಿಹ್ನೆಗಳು ಕಾಣುವುವು. ಅವುಗಳು ವೃಕ್ಷಸಮಷ್ಟಿಯಾಗಿಯೋ ಅಥವಾ ವನಭೂಮಿಯಾಗಿಯೋ ಇರಬಹುದೆಂದು ಊಹಿಸಬೇಕಾಗಿದೆ. ಜ್ಯೋತಿರ್ವಿತ್ತುಗಳೂ ಇದೇ ರೀತಿಯಾಗಿ ಅಭಿಪ್ರಾಯಪಡುವರು. ಹೆಚ್ಚಾಗಿ ಕೆಂಬಣ್ಣವು ಕಾಣುವ ಸ್ಥಲಗಳಲ್ಲಿ ಸ್ವಲ್ಪ ಸ್ವಲ್ಪ ಪರಿವರ್ತನವು ಆಗಾಗ ಕಾಣಬರುವುದು ಸಹಜ. ವರ್ಷಾಂತದಲ್ಲಿ ಹೇಗೆ ಭೂಮಿಯ ತರುಗಳು ಪುರಾತನಪತ್ರಗಳಿಂದ ಶೂನ್ಯಗಳಾಗಿ ವಸಂತದಲ್ಲಿ ಕೆಂದಳಿರುಗಳಿಂದ ಕಂಗೊಳಿಸುವುವೊ ಹಾಗೆ ಮಂಗಲಗ್ರಹದಲ್ಲಿಯೂ ವಸಂತದಲ್ಲಿ ತರುಗಳೆಲ್ಲವೂ ನವಪತ್ರಗಳಿಂದ ಅಲಂಕೃತಗಳಾಗುವುವು. ಅದುಕಾರಣ ಆ ಸಮಯದಲ್ಲಿ ಮಂಗಲಗ್ರಹವು ಅತಿಲೋಹಿತವಾಗಿ ಕಾಣುವುದು. ಮಂಗಲ ಗ್ರಹದ ಮೇಲಿನ ಭಾಗದಲ್ಲಿ ಕೃಷಿಕಾರ್ಯವೂ ಜರುಗುತ್ತಿರುವುದೆಂಬುದು ಕೆಲವು ಲಕ್ಷಣಗಳಿಂದ ವ್ಯಕ್ತವಾಗುವುದು, ಎಂತೆಂದರೆ ಮೊದಲು ಆ ಗ್ರಹದಲ್ಲಿ ಕೆಂಬಣ್ಣವು ಕಾಣುತ್ತಿರಲಿಲ್ಲ.

ಕೆಲವು ತಿಂಗಳಲ್ಲಿಯೇ ಬಹುದೂರದವರೆಗೂ ಆ ಬಣ್ಣವು ಕಾಣತೊಡಗಿ ಪುನಃ ಕೆಲವು ತಿಂಗಳಲ್ಲಿ ಕಾಣದಂತಾಯಿತು. ಮತ್ತೆ ಕೆಲವು ತಿಂಗಳಾಗುತಲೂ ಕಾಣತೊಡಗಿತು. ಈವಿಧ ಪರಿವರ್ತನವೆಲ್ಲವೂ ನಿಯತಭಾವದಿಂದಲೇ ಕಂಡವು.

ಇವುಗಳೆಲ್ಲವನ್ನೂ ಚೆನ್ನಾಗಿ ಪರ್ಯಾಲೋಚಿಸಿ ಕೆಲವು ವೈಜ್ಞಾನಿಕರು— "ಋತು ಪರಿವರ್ತನದಿಂದುಂಟಾಗುವ ಲೋಹಿತವರ್ಣದ ಆವಿರ್ಭಾವತಿರೋಭಾವಗಳು ಮಂಗಲಗ್ರಹದಲ್ಲಿ ನಡೆವ ಕೃಷಿಕಾರ್ಯವನ್ನು ಸೂಚಿಸುವುವು. ಅಲ್ಲಿಯವರು

ನಮ್ಮಂತೆ ಕೃಷಿಯಿಂದ ತಮಗೆ ಬೇಕಾದಷ್ಟು ಆಹಾರೋಪಯೋಗಿವಸ್ತುಗಳನ್ನು ಉತ್ಪತ್ತಿ ಮಾಡಿಕೊಳ್ಳುವರು. ಮೊದಲು ಕೆಂಬಣ್ಣವಿಲ್ಲದೇ ಇದ್ದ ಸ್ಥಲದಲ್ಲಿ ಹೊಸದಾಗಿ ಕೆಂಬಣ್ಣವು ಕಂಡರೆ ಅಲ್ಲಿ ಸಸ್ಯಾದ್ಯುತ್ಪತ್ತಿಯಾಗಿರುವುದೆಂತಲೂ ಮತ್ತೆ ಕಾಣದೇಹೋದರೆ ಆ ಸಸ್ಯಾದಿಗಳು ಮನೆಗೆ ಸಾಗಿಸಲ್ಪಟ್ಟುವೆಂತಲೂ ತಿಳಿಯಬೇಕು" ಎಂದು ಹೇಳುವರು.

ಮಂಗಲಗ್ರಹದ ಮೇಲಣ ಭೂಖಂಡಗಳೆಲ್ಲವೂ ಪ್ರಾಯಿಕವಾಗಿ ಕೆಂಪಾಗಿಯೇ ಕಾಣುವುವು. ಕೆಳಭಾಗದಲ್ಲಿ ಕಾಣುವ ಹಸುರು ಬಣ್ಣವನ್ನು ನೋಡಿ ಸರ್ಜಾನ್‌ಹರ್ಷೆಲ್, ಗಲ್‌ಮೇನ್ ಲಕ್‌ಸೀಯರ್, ಪ್ರಾಕ್ಟರ್ ಮುಂತಾದ ವೈಜ್ಞಾನಿಕರು ಸಮುದ್ರವೆಂದು ನಿರ್ಧರಿಸಿರುವರು. ಆದುದರಿಂದ ಮಂಗಲಗ್ರಹದ ಸ್ಥಿತಿಯೂ ಹೆಚ್ಚುಕಡಿಮೆ ಪೃಥ್ವಿಯಂತೆ ಇರುವುದು. ಮತ್ತೆ ಕೆಲವರು ಇದುವರೆಗೂ ಅದನ್ನು ಸಮುದ್ರವಲ್ಲವೆಂದು ಭಾವಿಸಿದ್ದರು. ಆದರೆ ಈಗ ಅವರೂಕೂಡ ಸಮುದ್ರವೆಂದೇ ಹೇಳತೊಡಗಿರುವರು.

ಮಂಗಲಗ್ರಹದ ದಕ್ಷಿಣೋತ್ತರಕೇಂದ್ರಸ್ಥಾನಗಳಲ್ಲಿ ಗೋಲಾಕಾರವಾಗಿಯೂ, ಅತ್ಯುಜ್ವಲವಾಗಿಯೂ ಶುಭ್ರವಾಗಿಯೂ ಇರುವ ಎರಡು ಭೂಖಂಡಗಳು ಕಾಣುವುವು. ಆ ಎರಡು ಭೂಖಂಡಗಳೂ ಮಂಗಲಗ್ರಹದ ಮೇರು ಪ್ರದೇಶದಲ್ಲಿರುವ ತುಷಾರಮಯಸ್ಥಾನವು. ಈ ನಮ್ಮ ಭೂಮಿಯಲ್ಲಿಯೂ, ಮೇರು ಸನ್ನಿಹಿತ ಪ್ರದೇಶದಲ್ಲಿ ಆ ಘನವಾದ ತುಷಾರರಾಶಿಯು ಕಾಣುವುದು. ಮಂಗಲಗ್ರಹದ ತುಷಾರಪ್ರದೇಶಗಳಲ್ಲಿ ಸೂರ್ಯರಶ್ಮಿಯು ಬೀಳುವುದರಿಂದ ಆ ಭಾಗವು ಶುಭ್ರವಾಗಿ ಕಾಣುವುದು. ಆದುದರಿಂದ ಅಲ್ಲಿ ಜಲವೂ ಹೇರಳವಾಗಿರುವುದು. ಆ ನೀರಿನ ಹಸರು ಬಣ್ಣವು "ಸಮುದ್ರವಿರಬಹುದೆಂಬ" ಭಾವನೆಯನ್ನು ಹೆಚ್ಚಿಸುವುದು.

ಸ್ವಲ್ಪ ಕಾಲದವರೆಗೂ ದೂರವೀಕ್ಷಣಯಂತ್ರದಿಂದ ಮಂಗಲಗ್ರಹವನ್ನು ಎಡೆಬಿಡದೇ ನೋಡುತ್ತಿದ್ದರೆ ಅಷ್ಟು ಅಲ್ಪಕಾಲದಲ್ಲಿಯೇ ಅನೇಕ ಪರಿವರ್ತನಗಳು ತೋರಿಬರುವುವು. ಈ ಪರಿವರ್ತನೆಗಳಿಗೆ ಸಾಮಾನ್ಯವಾಗಿ ಎರಡು ಕಾರಣಗಳುಂಟು.

(1) ಮಂಗಲಗ್ರಹವು ಭೂಮಿಯಂತೆ 24 ಘಂಟೆ 29 ಮಿನಿಟು 35 ಸೆಕೆಂಡುಗಳಲ್ಲಿ ಒಂದುಸಲ ತನ್ನ ಅಂಗಾವರ್ತನವನ್ನು ಪೂರ್ತಿಗೊಳಿಸುವುದು. ಇದರಿಂದ ಕೆಲವು ಪರಿವರ್ತನೆಗಳಿಗೆ ಸಂಭವವುಂಟು.

(2) ಭೂಮಿಯಂತೆ ಮಂಗಲಗ್ರಹದಲ್ಲಿಯೂ ಮೇಘ, ಪ್ರಬಲಮಾರುತ, ವೃಷ್ಟಿ ಮುಂತಾದುವುಗಳು ಆಗುತ್ತಿರುವುವು. ಆಗಾಗ ಗ್ರಹದಮೇಲಿನ ಭಾಗದಲ್ಲಿ ಒಂದು ಗೋಲಾಕಾರವಾದ ವಸ್ತುವು ಮೆಲ್ಲಮೆಲ್ಲಗೆ ಸರಿದು ಹೋಗುವಂತೆ ಕಾಣುವುದು. ಅದು ವೃಷ್ಟಿಯ ಆವರ್ತವಾಗಿರಬಹುದು. ಹಾಗಾದರೆ ಭೂಮಿಯಲ್ಲಿ ಆಗುವ ವೃಷ್ಟಿಗಿಂತಲೂ ಮಂಗಲಗ್ರಹದಲ್ಲಿ ವೃಷ್ಟಿಯು ಬಹಳ ಕಡಿಮೆಯೆಂದು ತೋರುವುದು. ಆದುದರಿಂದ ಮಂಗಲ ವಾಸಿಗಳು ಬಗೆಬಗೆಯಾದ

ಕಾಲುವೆಗಳನ್ನು ನಿರ್ಮಿಸಿಕೊಂಡು ಅವರಮೂಲಕ ನಾನಾವಿಧಕೃಷಿಕಾರ್ಯಗಳನ್ನೂ ಮಾಡುತ್ತಿರಬೇಕು.

ಭೂಮಿಯಲ್ಲಿ ಉತ್ತರಾಯಣದಕ್ಷಿಣಾಯನಗಳು ಹೇಗೆ ಸಂಭವಿಸುವುವೋ ಹಾಗೆ ಮಂಗಲಗ್ರಹದಲ್ಲಿಯೂ ಉತ್ತರದಕ್ಷಿಣ ದಿಕ್ಕುಗಳಲ್ಲಿ ಸೂರ್ಯಗತಿಯು ಕಂಡು ಬರುವುದು. ಸೂರ್ಯಕಿರಣಗಳು ಉತ್ತರದಲ್ಲಿ ಬಿದ್ದಾಗ ಅತ್ತಕಡೆಯಿರುವ ಹಿಮರಾಶಿಯು ಕರಗಿ ಜಲಪ್ರವಾಹವಾಗುವುದು. ಆ ಪ್ರವಾಹವು ಅಲ್ಲಿಯ ನಗರಾದಿಗಳನ್ನು ಮುಳುಗಿಸಿಬಿಡದೇ ಇರುವಂತೆ ಅಲ್ಲಿಯ ಜನರು ದೊಡ್ಡ ದೊಡ್ಡ ಕಾಲುವೆಗಳ ಮೂಲಕ ಅದನ್ನು ದೂರಸಾಗಿಸುವರು. ಆಗ ದಕ್ಷಿಣದಿಕ್ಕಿನಲ್ಲಿ ಶೈತ್ಯವು ಹೆಚ್ಚುವುದು. ಈವಿಧ ಪರಿವರ್ತನಗಳು ಮಂಗಲಗ್ರಹದಲ್ಲಿ ನಿಯತ ಭಾವದಿಂದ ಆಗುತ್ತಿರುವುವು. ಈಗಿನ ವೈಜ್ಞಾನಿಕರು ಈ ಅಂಶವನ್ನು ಆಗಾಗ ವೃತ್ತಾಂತಪತ್ರಗಳ ಮೂಲಕ ತಿಳಿಸುತ್ತಲೇ ಇರುವರು.

ಇವೆಲ್ಲವನ್ನು ಪರ್ಯಾಲೋಚಿಸಿ ನೋಡಿದರೆ ಭೂಮಿಯೊಡನೆ ಮಂಗಲ ಗ್ರಹಕ್ಕೆ ಅನೇಕ ಭಾಗಗಳಲ್ಲಿ ಸಾದೃಶ್ಯವು ತೋರಿಬರುವುದು. ಭೂಮಿಯು ತನ್ನ ಸುತ್ತಲು ಒಂದುಸಲ ಸುತ್ತುವುದರಿಂದ ಹೇಗೆ ಹಗಲೂ ರಾತ್ರಿಯೂ ಆಗುವುವೋ ಅದೇ ಪ್ರಕಾರ ಮಂಗಲ ಗ್ರಹವು 24 ಘಂಟೆ 29 ಮಿನಿಟು 35 ಸೆಕೆಂಡುಗಳಲ್ಲಿ ಸುತ್ತಿ ಅಹೋರಾತ್ರಗಳನ್ನುಂಟುಮಾಡುವುದು. ಭೂಮಿಯಲ್ಲಿ ಹೇಗೋ ಹಾಗೆ ಮಂಗಲಗ್ರಹದಲ್ಲಿಯೂ, ಸೂರ್ಯತಾಪದಿಂದ ಜಲವು ಬಾಷ್ಪರೂಪವನ್ನು ಧರಿಸಿ ವಾಯುವಿನೊಡನೆ ಸೇರಿ ಮೋಡಕ್ಕೂ ಮಳೆಗೂ ಕಾರಣವಾಗುವುದು. ಭೂಮಿಯಂತೆ ಮಂಗಲಗ್ರಹದಲ್ಲಿಯೂ ಮಳೆ, ಸಿಡಲು, ಅಲೆಗಳು ಮುಂತಾದುವುಗಳು ಸಂಭವಿಸುವುವು. ಮಂಗಲಗ್ರಹದ ಗಗನದಲ್ಲಿ ಮೇಘಗಳಮೇಲೆ ಬೀಳುವ ಸಂಧ್ಯಾಕಾಲದ ಸೂರ್ಯಕಿರಣಗಳು ಬಗೆಬಗೆಯಾದ ಬಣ್ಣಗಳಿಂದ ಕಂಗೊಳಿಸುವುವು.

ಭೂವಾಸಿಗಳಂತೆ ಅಲ್ಲಿಯವರೂ ಕೃಷಿಕಾರ್ಯಗಳಿಂದ ಆಹಾರೋಪಯೋಗಿಯಾದ ಸಾಮಗ್ರಿಯನ್ನು ಸಂಪಾದಿಸಿಕೊಳ್ಳುವರು. ಮಂಗಲಗ್ರಹದಲ್ಲಿರುವ ಪದಾರ್ಥ ಸಮಷ್ಟಿಯ ಘನತ್ವವು ಬಹಳಮಟ್ಟಿಗೆ ಭೂಮಿಯಂತೆಯೇ ಇರುವುದು. ಆದರೆ ಅದರ ಪರಿಮಾಣವು ಭೂಮಿಯ ¼ ಭಾಗವಿರುವುದು. ಅಲ್ಲಿಯ ಮಧ್ಯಾಕರ್ಷಣ (ಗ್ರಾವಿಟೇಷನ್) ಶಕ್ತಿಯು ಭೂಶಕ್ತಿಯಲ್ಲಿ ಅರ್ಧವಾಗಿರುವುದು. ಆದುದರಿಂದ ಮಂಗಲಗ್ರಹವಾಸಿಗಳು ನಮಗಿಂತಲೂ ಚತುರ್ಗುಣ ಬಲಶಾಲಿಗಳೆಂದು ತಿಳಿಯಬೇಕು. ಭೂಮಿಯ ಮಧ್ಯಾಕರ್ಷಣಶಕ್ತಿಯು ಪ್ರಚಂಡಬಲದಿಂದ ನಮ್ಮ ದೇಹವನ್ನು ಸೆಳೆದು ಹಿಡಿದುಕೊಂಡಿರುವುದರಿಂದ ನಮ್ಮ ದೇಹಯಂತ್ರದಲ್ಲಿ ಬಲವು ಕಡಿಮೆಯಾಗಿರುವುದು.

ಮಂಗಲಗ್ರಹದಲ್ಲಿ ವಾಸಿಸುವ ಮನುಷ್ಯರು ಅತ್ಯಂತಶ್ರಮಸಾಧ್ಯವಾದ ಕಾರ್ಯಗಳನ್ನು ಕೂಡ ಅನಾಯಾಸದಿಂದಲೇ ಮಾಡಿ ಬಿಡುವರು. ತಮ್ಮ ತಮ್ಮ ಜೀವನ

ವನ್ನೂ ಸುಲಭವಾಗಿಯೇ ನಡೆಯಿಸಿಕೊಳ್ಳುವರು. ನಮ್ಮಂತೆ ಅವರು ಅಷ್ಟೊಂದು ಕಷ್ಟಗಳನ್ನು ಪಡಬೇಕಾಗಿಲ್ಲ.

ಮಂಗಲಗ್ರಹದಲ್ಲಿಯೂ ಚಂದ್ರ ಸಂಚಾರವಿರುವುದೋ ಇಲ್ಲವೋ ಎಂಬ ವಿಷಯವನ್ನು ನಿರ್ಧರಿಸಲು, ಕ್ರಿ. 1872 ನೆಯ ವರ್ಷ ಅಮೇರಿಕಾದಲ್ಲಿ Professor Asapti Hall ಅಸಪೀಹಾಲ್ ಎಂಬ ವೈಜ್ಞಾನಿಕನು ದೂರವೀಕ್ಷಣಯಂತ್ರ ಮೂಲಕ ಮಂಗಲಗ್ರಹವನ್ನು ನೋಡಲಾರಂಭಿಸಿದನು. ಹಾಗೆ ನೋಡುತ್ತಿರುವಾಗ ಮಂಗಲಗ್ರಹದ ಪಾರ್ಶ್ವದಲ್ಲಿ ಒಂದು ಚುಕ್ಕೆಯು ಕಂಡಿತು. ಅವನ್ನೇ 2—3 ಘಂಟೆಗಳು ಎಡಬಿಡದೇ ನೋಡುತ್ತಿರುವಲ್ಲಿ ಅದು ಬಹುವೇಗದಿಂದ ಸರಿದುಹೋಗುವಂತೆ ಕಂಡಿತು. ಮೊದಲು ಅದನ್ನು ಯಾವುದೋ ಒಂದು ಉಲ್ಕಾಪಿಂಡವಾಗಿರಬಹುದೆಂದು ಭಾವಿಸಿದನು. ಪುನಃ ಮರುದಿನ ಅದೇ ಚುಕ್ಕೆಯು ಮತ್ತೊಂದು ಪಕ್ಕದಲ್ಲಿ ಕಾಣತೊಡಗಿತು. ಆಕ್ಷಣವೇ ನಾನಾದೇಶಗಳಲ್ಲಿರುವ ವೈಜ್ಞಾನಿಕರಿಗೆ ತಂತಿಯ ಮೂಲಕ ಈ ಸಂಗತಿಯನ್ನು ತಿಳಿಸಿ ಅವರ ಅಭಿಪ್ರಾಯವನ್ನೂ ಅನುಸರಿಸಿ ಆ ಚುಕ್ಕೆಯನ್ನು ಮಂಗಲಗ್ರಹದ ಚಂದ್ರನೆಂದು ನಿರ್ಧರಿಸಿದನು. ಆ ಚಂದ್ರನು 60 ಘಂಟೆ 18 ಮಿನಿಟುಗಳಲ್ಲಿ ಮಂಗಲಗ್ರಹದ ನಾಲ್ಕುಕಡೆಗಳಲ್ಲಿಯೂ ಸಂಚರಿಸುವನೆಂದು ವ್ಯಕ್ತವಾಯಿತು.

ಕೆಲವು ದಿನಗಳು ಕಳೆದ ಬಳಿಕ ಪುನಃ ಮಂಗಲಗ್ರಹದ ಪಾರ್ಶ್ವದಲ್ಲಿ ಮತ್ತೊಂದು ಚಂದ್ರನನ್ನು ನೋಡಿದರು. ಅದು 7 ಘಂಟೆ 39 ನಿಮಿಷಗಳಲ್ಲಿ ಮಂಗಲಗ್ರಹವನ್ನು ಒಂದುಸಲ ಸುತ್ತುತ ಇದ್ದಿತು.

ಮೊದಲೇ ಗ್ರೀಸ್‌ದೇಶದ ಒಬ್ಬ ಕವಿಯು ತನ್ನ "ಹೋಮರ್ ಇಲಿಯಡ್" ಎಂಬ ಕಾವ್ಯದಲ್ಲಿ ಮಂಗಲಗ್ರಹಕ್ಕೆ "ಡಿಂಸ್", "ಫೋಬಸ್" ಎಂಬ ಇಬ್ಬರು ಮಕ್ಕಳಿರುವಂತೆ ವರ್ಣಿಸಿರುವರು. ಅದನ್ನು ಜ್ಯೋತಿರ್ವಿತ್ತುಗಳು ಒಪ್ಪಿರುವರು. "ಫೋಬಸ್" ಎಂಬುದು ಮಂಗಲಗ್ರಹದ ಸಮೀಪದಲ್ಲಿಯೂ "ಡಿಂಸ್" ಎಂಬುದು ಅಪೇಕ್ಷಾನುಗುಣವಾಗಿ ದೂರದಲ್ಲಿಯೂ ಇರುವುವು. ಕಾಲಕ್ರಮದಲ್ಲಿ ಈ ವಿಷಯದಲ್ಲಿ ಜ್ಯೋತಿರ್ವಿತ್ತುಗಳು ಬಹುಬಹುವಾಗಿ ವಿಚಾರಮಾಡತೊಡಗಿ ಕೊನೆಗೆ ಮಂಗಲಗ್ರಹದಲ್ಲಿ ಎರಡು ಚಂದ್ರರನ್ನೂ ಒಪ್ಪಿ ಅವುಗಳಿಗೆ ಆ ಹೆಸರುಗಳನ್ನೇ ಸ್ಥಿರಗೊಳಿಸಿದರು.

ಭೂಮಿಯಲ್ಲಿ ನಮಗೆ ಕಾಣುವ ಚಂದ್ರನು ಭೂಮಿಯ ಆಕರ್ಷಣಶಕ್ತಿಗೆ ಸಿಕ್ಕಿ ತಿಂಗಳಿಗೊಂದುಸಲ ಭೂಮಿಯನ್ನು ಸುತ್ತುವನು. ಅದುಕಾರಣ 15 ದಿನಗಳಲ್ಲಿ ಶುಕ್ಲಪಕ್ಷವನ್ನು ನಾವು ನೋಡುತ್ತಿರುವೆವು. ಮಂಗಲಗ್ರಹದಲ್ಲಿರುವ ಫೋಬಸ್ ಎಂಬ ಚಂದ್ರನು ಪ್ರಾಯಕವಾಗಿ 8 ಘಂಟೆಯೊಳಗೆ ಒಂದು ಸಲ ಮಂಗಲಗ್ರಹವನ್ನು ಸುತ್ತಿಬಿಡುವನು. ಅಂದರೆ ಈ ಚಂದ್ರನು 4 ಘಂಟೆಗಳಲ್ಲಿ ಶುಕ್ಲಪಕ್ಷದ 15 ತಿಥಿಗಳನ್ನು 4 ಘಂಟೆಗಳಲ್ಲಿ ಕೃಷ್ಣಪಕ್ಷದ 15 ತಿಥಿಗಳನ್ನು ಪೂರ್ತಿಮಾಡುವನು.

ಮಂಗಲಗ್ರಹದಲ್ಲಿಯೂ ಭೂಮಿಯಂತೆ ಅಹೋರಾತ್ರಗಳು 24 ಘಂಟೆಗಳನ್ನು

ಒಳಕೊಂಡಿರುವುವು. ಅಂದರೆ ಮಂಗಲಗ್ರಹದ ಒಂದು ಅಹೋರಾತ್ರದೊಳಗೆ "ಫೋಬಸ್" ಎಂಬ ಚಂದ್ರನಿಂದ ಮೂರು ಚಾಂದ್ರಮಾಸಗಳು ಕಳೆದು ಹೋಗುವುವು. ನಾಲ್ಕು ನಾಲ್ಕು ಘಂಟೆಗಳಲ್ಲಿಯೇ ಅಲ್ಲಿ ಅಮಾವಾಸ್ಯೆಯೂ ಪೂರ್ಣಿಮೆಯೂ ಕಾಣುವುವು. "ಡಿಮಸ್" ಎಂಬ ಚಂದ್ರನಿಂದ 15 ಘಂಟೆಗಳಲ್ಲಿ ಅಮಾವಾಸ್ಯೆಯೂ 15 ಘಂಟೆಗಳಲ್ಲಿ ಪೂರ್ಣಿಮೆಯೂ ಬರುವುವು. ಈ ದಿವಸ ಸಾಯಂಕಾಲ ನೀವು ಡಿಮಸ್ ಚಂದ್ರನ ಸಂಬಂಧವಾದ ಪೂರ್ಣಿಮೆಯನ್ನು ಕಂಡರೆ ಆ ರಾತ್ರಿ 12 ಘಂಟೆಯೊಳಗೆ ಪೂರ್ವಾಭಿಮುಖನಾಗುವಾಗುತಲೇ ಕೃಷ್ಣಪಕ್ಷದ ಷಷ್ಠೀಚಂದ್ರನಂತೆ ಕಾಣುವನು. ಪ್ರಾತಃಕಾಲ 5 ಘಂಟೆಯ ಸುಮಾರಿನಲ್ಲಿ ಸೂರ್ಯಸಮೀಪವರ್ತಿಯಾಗಿ ಕೃಷ್ಣಪಕ್ಷದ ಏಕಾದಶೀಚಂದ್ರನಂತೆ ಪೂರ್ವ ದಿಕ್ಕಿನಲ್ಲಿ ಕಾಣುವನು. ಮರುದಿನ 9 ಘಂಟೆಯ ಸಮಯದಲ್ಲಿ ಆ ಚಂದ್ರನು ಸೂರ್ಯಸನ್ನಿಹಿತನಾಗುತಲೇ ಅಮಾವಾಸ್ಯೆಯಾಗುವುದು. ಪುನಃ ಸಂಧ್ಯಾಕಾಲವಾಗುತಲೇ ಮಂಗಲಗ್ರಹದ ಮೇಲಿನ ಭಾಗದಲ್ಲಿ ಶುಕ್ಲಪಕ್ಷದ ದಶಮೀಚಂದ್ರನಂತೆ ಕಾಣುವನು.

ರಾತ್ರಿ 2 ಗಂಟೆಯ ಹೊತ್ತಿಗೆ ಪೂರ್ಣಿಮೆಯಾಗಿ ಪೂರ್ಣಮಂಡಲವನ್ನು ಧರಿಸುವನು.

ರಾತ್ರಿಯ ಕೊನೆಯಲ್ಲಿ ಕೃಷ್ಣಪಕ್ಷದ ಷಷ್ಠೀಚಂದ್ರನಂತೆ ಕಂಡು ಮರುದಿನ ಸಾಯಂಕಾಲ ಪಶ್ಚಿಮಗಗನಾಂಗಣದಲ್ಲಿ ಅಸ್ತವಾಗುವನು.

ಮಂಗಲಗ್ರಹದ ದೈನಿಕಗತಿಗೆ ಕಾರಣವಾದ ಡಿಮಸ್ ಎಂಬ ಚಂದ್ರನು ಪೂರ್ವದಿಂದ ಪಶ್ಚಿಮಕ್ಕೆ ಹೋಗುವಂತೆ ಕಂಡರೂ ಪಶ್ಚಿಮದಿಂದ ಪೂರ್ವಕ್ಕೇ ಹೋಗುವನು.

ಫೋಬಸ್ ಎಂಬ ಚಂದ್ರನು ಒಂದು ಅಹೋರಾತ್ರಗಳಲ್ಲಿ ಮಂಗಲಗ್ರಹವನ್ನು ಮೂರುಸಲ ಸುತ್ತಿಬಿಡುವನು. ಅದಕ್ಕೆ ಪಶ್ಚಿಮದಲ್ಲಿ ಉದಯವೂ ಪೂರ್ವದಲ್ಲಿ ಅಸ್ತವೂ ಆಗುವುವು. ಮಂಗಲಗ್ರಹದ ಗಗನದಲ್ಲಿ ರಾತ್ರಿ ಎರಡು ಚಂದ್ರರು ಕಂಗೊಳಿಸುವರು. ನಾವು ಈವಿಷಯವನ್ನು ಇಲ್ಲಿಗೆ ನಿಲ್ಲಿಸಿ ಮತ್ತೊಂದು ವಿಷಯವನ್ನು ಪ್ರಸ್ತಾಪಿಸುವೆವು.

ಕೆಲವು ಜ್ಯೋತಿರ್ವಿತ್ತುಗಳು:—ಮಂಗಲ ಗ್ರಹದ ಮೇಲಿನ ಭಾಗದಲ್ಲಿ ಬಹು ವಿಸ್ತೃತವಾದ ಜಲಪ್ರಣಾಳಿಗಳು ಇರುವುವೆಂತಲೂ ಅವುಗಳನ್ನು ದೂರವೀಕ್ಷಣ ಯಂತ್ರದಿಂದ ನೋಡಿದರೆ ಈಗಿನ ಭೂಪಟದಲ್ಲಿಯ ಲೋಹಮಾರ್ಗಗಳ ರೇಖೆಗಳಂತೆ ಕಾಣುವುವೆಂತಲೂ ಹೇಳುವರು. ಮತ್ತು ಈಚೆಗೆ ಅಲ್ಲಿ ಕೆಲವು ಹಸುರು ರೇಖೆಗಳು ಕಂಡು ಬರುವುವೆಂದು ಪ್ರತಿಬಿಂಬಗ್ರಹಣದ ಮೂಲಕ ನಿರೂಪಿಸುತ್ತಿರುವರು. ಈ ಅಂಶವನ್ನು ಈಚೀಚೆಗೆ ಎಲ್ಲರೂ ಒಪ್ಪಿರುವರು.

ಮಂಗಲ ಗ್ರಹದ ಆಕೃತಿಯು ಭೂಮಿಗಿಂತಲೂ ಬಹಳ ಸಣ್ಣದು. ಭೂಮಿಯಲ್ಲಿರುವ ತಾಪಕ್ಕಿಂತಲೂ ಮಂಗಲ ಗ್ರಹದಲ್ಲಿ ತಾಪವು ಬಹಳ ಕಡಿಮೆಯಾಗಿರು

ವುದು. ಗ್ರಹದ ತಾಪಾನುಗುಣವಾಗಿಯೇ ವೃಷ್ಟಿಯ ನ್ಯೂನಾಧಿಕಭಾವಗಳೂ ಸಂಭವಿಸುವುವು. ಭೂಮಿಯಲ್ಲಿ ಆದಷ್ಟು ವೃಷ್ಟಿಯು ಮಂಗಲ ಗ್ರಹದಲ್ಲಿ ಉಂಟಾಗಲಾರದು. ಮಳೆಇಲ್ಲದಿದ್ದರೆ ಬೆಳೆಯಾಗಲಾರದು. ಬೆಳೆಯಾಗದಿದ್ದರೆ ಅಲ್ಲಿಯ ಜನರು ಬದುಕುವುದು ಕಷ್ಟ. ಆದುದರಿಂದ ಅಲ್ಲಿಯ ಜನರು ಜಲಾಶಯಗಳ ಮೂಲಕ ಪೈರುಪಚ್ಚೆಗಳನ್ನು ಬೆಳೆವರೆಂದು ವೈಜ್ಞಾನಿಕರು ಹೇಳುವರು. ಮತ್ತು ಮಂಗಲ ಗ್ರಹದಲ್ಲಿ ಅತ್ಯಂತವಿಸ್ತೃತವಾದ ಕಾಲುವೆಗಳು ಕಂಡು ಬರುವುವೆಂತಲೂ ಅವು ಮೊದಲಲ್ಲಿರಲಿಲ್ಲವೆಂತಲೂ ಈಚೆಗೆ ಅಲ್ಲಿಯ ಜನರಿಂದ ಬಹುಕೌಶಲದಿಂದ ನಿರ್ಮಿತವಾಗಿರಬೇಕೆಂತಲೂ ಹೇಳುವರು.

ಮಂಗಲಗ್ರಹದ ವಿಷುವದ್ರೇಖೆಯ ಸಮೀಪದಲ್ಲಿ 60 ಅಂಶದ ಮಧ್ಯದಲ್ಲಿಯೇ ಆಕಾಲುವೆಗಳು ನಿರ್ಮಿತಗಳಾಗಿರುವುವು. ಅವನ್ನು ದೂರವೀಕ್ಷಣಯಂತ್ರದ ಸಹಾಯದಿಂದ ನೋಡಬಹುದು. ಅಂತಹವುಗಳು ಆ ಗ್ರಹದ ಸುತ್ತಲೂ ಇರುವುವು. ಆ ಕಾಲುವೆಗಳ ದೈರ್ಘ್ಯವು 12,000 ಮೈಲಿಗಳಷ್ಟು ದೂರವೂ ಕೆಲವೆಡೆಗಳಲ್ಲಿ 50 ಮೈಲಿಗಳಷ್ಟು ಅಗಲವೂ ಕಂಡುಬರುವುವು. ಈ ವಿಷಯದಲ್ಲಿ ಅಮೇರಿಕಾದಲ್ಲಿರುವ ಲೋಕಲ್ ಆಬ್‌ಜರ್‌ವೇಟರಿಯ ಪ್ರದರ್ಶಕರಾದ ಸರ್ ರಾಬರ್ಟ್, ಎಲ್ ಎಲ್. ಡಿ., ಎಫ್. ಆರ್. ಎಸ್., ಎಂಬವರು ತಮ್ಮ ಜ್ಯೋತಿಷಗ್ರಂಥದಲ್ಲಿ ಅಂಕಿಸಿರುವರು.

ಇದನ್ನು ನೋಡಿ ಅನೇಕವೈಜ್ಞಾನಿಕರು ಮಂಗಲಗ್ರಹವಾಸಿಗಳು ಇಂತಹ ಅದ್ಭುತವಾದ ಕಾಲುವೆಗಳನ್ನು ಹೇಗೆ ನಿರ್ಮಿಸಿದರು ಎಂದು ಆಶ್ಚರ್ಯಪಡುತ್ತಿರುವರು. ಮತ್ತೆ ಕೆಲವರು ಗ್ರೀಷ್ಮಕಾಲದಲ್ಲಿ ಮೇರುಪಾರ್ಶ್ವದಲ್ಲಿರುವ ಹಿಮರಾಶಿಗಳು ಕರಗಿ ಹೆಚ್ಚಾಗಿ ಪ್ರವಹಿಸುವುದರಿಂದ ಕೃಷಿ ಮುಂತಾದುವುಗಳಿಗೆ ಬಹಳ ಪ್ರತಿಬಂಧಕವುಂಟಾಗುತ್ತಿರುವುದು. ಆದಕಾರಣ ಅಲ್ಲಿಯ ಇಂಜನೀಯರುಗಳು ಬಹುನೈಪುಣ್ಯದಿಂದ ಇಂತಹ ಕಾಲುವೆಗಳನ್ನು ನಿರ್ಮಿಸಿ ತಮ್ಮ ಕೃಷಿಕಾರ್ಯಗಳನ್ನು ಮಾಡಿಕೊಳ್ಳುವರು ಎಂದು ಹೇಳುವರು.

ಈ ಗ್ರಹವು ಸಣ್ಣದಾಗಿದ್ದರೂ ಅಲ್ಲಿಯ ಜೀವಿಗಳ ಸಂಖ್ಯೆಯು ಅತ್ಯಧಿಕವಾಗಿರುವುದು. ಜನ ಸಂಖ್ಯೆಯು ಹೆಚ್ಚಿದಹಾಗೆಲ್ಲಾ ಅವರ ಜೀವನಯಾತ್ರೆಯು ಕಡಿಮೆಯಾಗುವುದು ಸಹಜ. ಅದಕ್ಕಾಗಿ ಅವರು ಪ್ರಾಣಪಣದಿಂದಲೂ, ಐಕಮತ್ಯದಿಂದಲೂ, ಕೆಲಸಮಾಡುವರು. ಅಲ್ಲಿಯ ಕಾಲುವೆಗಳು ಅವರ ಅದ್ಭುತಬಲ, ಅದ್ಭುತಬುದ್ಧಿ, ಅದ್ಭುತಶಕ್ತಿಗಳನ್ನು ವ್ಯಕ್ತಪಡಿಸುವುವು. ಅವನ್ನು ನೋಡಿ ನಮ್ಮ ಇಂಜನೀಯರುಗಳು ಆಶ್ಚರ್ಯಪಡುತ್ತಿರುವರು.

ಮೊದಲು ಮೊದಲು ಮಂಗಲಗ್ರಹದಲ್ಲಿ ಅತ್ಯಂತಸೂಕ್ಷ್ಮವಾದ ಒಂದು ರೇಖೆಯು ಕಂಡುಬಂದಿತು. ಬಳಿಕ ಎರಡು ತಿಂಗಳೊಳಗಾಗಿಯೇ ಸುಮಾರು 40 ಮೈಲಿಗಳಷ್ಟು ಅಗಲವೂ 6,000 ಸಾವಿರ ಮೈಲಿಗಳಷ್ಟು ಉದ್ದವೂ ಆದ ಒಂದು ಕಾಲುವೆಯು ಗೋಚರವಾಯಿತು. ಅಹಹ! ನಮ್ಮಿಂದ ಎರಡು ತಿಂಗಳೊಳಗಾಗಿ ಅಂತಹ ಕಾಲುವೆಯನ್ನು ಮಾಡಲು ಎಂದಿಗಾದರೂ ಸಾಧ್ಯವೇ?

ಅಂತಹ ಅದ್ಭುತವ್ಯಾಪಾರವನ್ನು ನೋಡಿ ಅವರನ್ನು ದೈವಶಕ್ತಿಸಂಪನ್ನರೆಂದು ಹೇಳಬೇಕಲ್ಲವೆ?

ಇಲ್ಲಿನಂತೆ ಮಂಗಲಗ್ರಹದಲ್ಲಿಯೂ ರೈಲು ಮುಂತಾದುವುಗಳಿರುವುವೋ? ಇಲ್ಲವೋ? ಅದು ನಮಗೆ ತಿಳಿಯದು.

ಆದರೆ ಅಲ್ಲಿಯ ಕಾಲುವೆಗಳ ಜಲವೇಗವು ಘಂಟೆಯೊಂದಕ್ಕೆ ಮುನ್ನೂರು ಹರಿದಾರಿ ಹೋಗುವದರಿಂದ ಅಲ್ಲಿ ನೌಕಾಯೋಗದಿಂದ ಬೇಕಾದ ಕಡೆಗೆ ಸುಖವಾಗಿ ಹೋಗಬಹುದಾಗಿದೆ. ಈ ವಿಧವಾದ ಕಾಲುವೆಗಳಿರುವುದರಿಂದ ಅಲ್ಲಿ ನೌಕಾವಿದ್ಯೆಯು ಬಹಳ ಉನ್ನತಸ್ಥಿತಿಯಲ್ಲಿರಬಹುದೆಂದು ಊಹಿಸಬೇಕಾಗಿದೆ.

ಕೆಲವು ಕಾಲ ಕಳೆಯುತ್ತಲೂ ಕೆಲವು ವೃತ್ತಪತ್ರಗಳಲ್ಲಿ ಕೆಲವುವೈಜ್ಞಾನಿಕರು "ಮಂಗಲಗ್ರಹವಾಸಿಗಳು ಭೂಲೋಕವಾಸಿಗಳಿಗೆ ಸಂವಾದವನ್ನು ಕಳುಹಿಸಲು ಒಂದು ತೆರನಾದ ಚೇಷ್ಟೆಯನ್ನು ಮಾಡುತ್ತಿರುವರೆಂತಲೂ ಅದು ವಯರ್‌ಲೆಸ್ ಟೆಲಿಗ್ರಾಫಿನಂತೆ ವಾಯುಮಂಡಲದಲ್ಲಿ ಕಂಪನವನ್ನುಂಟುಮಾಡುತ್ತಿರುವುದೆಂತಲೂ" ಬರೆಯಲಾರಂಭಿಸಿದರು. ಆದರೆ ಅವನ್ನು ನಾವು ತಿಳಿಯುವ ಬಗೆಯನ್ನು ಮಾತ್ರ ಇಂದಿನವರೆಗೂ ಯಾರೂ ತಿಳಿಯಪಡಿಸಲಿಲ್ಲ.

ಆದುದರಿಂದ ವಿಶ್ವನಿರ್ಮಾಣವನ್ನು ಪರ್ಯಾಲೋಚಿಸಿ ನೋಡಿದರೆ ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ವೃತ್ತಾಂತಗಳ ಆದಾನಪ್ರದಾನಗಳು ವಿಶ್ವನಿಯಾಮಕನಾದ ಭಗವಂತನಿಗೆ ಅಭಿಮತವಲ್ಲವೆಂದು ತೋರುವುದು.

ಆದರೆ ಕಾಲಪ್ರವಾಹದಲ್ಲಿ ಯಾವುದನ್ನೂ ಅಸಂಭವವೆಂದು ಪ್ರತಿಜ್ಞೆಮಾಡಲು ಆಗುವುದಿಲ್ಲ. ವೈಜ್ಞಾನಿಕರ ವಿಜ್ಞಾನದ ಪ್ರಾಬಲ್ಯವು ಹೆಚ್ಚಿದ ಹಾಗೆಲ್ಲಾ ಅಶ್ರುತ ದೃಷ್ಟಚರವಾದ ವ್ಯಾಪಾರಗಳೆಲ್ಲವೂ ಪ್ರತ್ಯಕ್ಷವಾಗುವುವೆಂದು ಪ್ರಕೃತ ಇಲ್ಲಿಗೆ ಲೇಖಿನಿಯನ್ನು ನಿಲ್ಲಿಸುವೆವು.

ಕೆ. ಆರ್.

ಕವಿಚರಿತೆ

ಸಿದ್ಧನಂಜೇಶ (ಸು. ೧೬೫೦)

ಪ್ರಾಕ್ತನವಿಮರ್ಶವಿಚಕ್ಷಣ, ರಾವ್ ಬಹದೂರ್

ಶ್ರೀಮಾನ್ ರಾ. ನರಸಿಂಹಾಚಾರ್ಯ,

ಎಂ. ಎ., ಎಂ. ಆರ್. ಎ. ಎಸ್.—ಅವರಿಂದ.

ಈ ಸಂಚಿಕೆಯಲ್ಲಿ, ಕ್ರಿ. ಶಕ ೧೭-ನೆಯ ಶತಮಾನದ ಮಧ್ಯಭಾಗದಲ್ಲಿ ಬಾಳಿದ ಸಿದ್ಧನಂಜೇಶನೆಂಬ ವೀರಶೈವಕವಿಯ ಚರಿತವು ಕೊಟ್ಟಿದೆ.

ಈತನು ರಾಘವಾಂಕಚಾರಿತ್ರ, ಗುರುರಾಜಚಾರಿತ್ರ ಇವುಗಳನ್ನು ಬರೆದಿದ್ದಾನೆ. ಅಲ್ಲದೆ ತೋಂಟದಸಿದ್ಧದೇಶಿಕನ ಭಾವರತ್ನಾಭರಣ, ಬಸವಶತಕ ಎಂಬ ಗ್ರಂಥಗಳನ್ನೂ ಬರೆದಿರುವಂತೆ ಗುರುರಾಜಚಾರಿತ್ರದಲ್ಲಿಯ

ಭೂವಿನುತಕವಿರಾಘವಾಂಕಚಾರಿತ್ರಮಂ ।
ಪಾವನಾತ್ಮಕ ತೋಂಟದಾ ಸಿದ್ಧದೇಶಿಕನ ।
ಭಾವರತ್ನಾಭರಣಮಂ ಬಸವಶತಕಗಳ ವಸ್ತುಕದ ವರ್ಣಕದೊಳು ॥
ಭಾವಜ್ಞಸತ್ಕವಿಗಳೊಲಿದೆನಲು ಪೇಳ್ದು ಬಳಿ ।
ಕೀ ವಿಮಲಗುರುರಾಜಚಾರಿತ್ರವನ್ನೊರೆದ ।
ನಾವೀರಮಾಹೇಶ್ವರರ ಬಗೆಗೆ ಬರ್ಪಂತೆ ಸಂಜೇಶನೇಂ ಧನ್ಯನೋ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಆದರೆ ಈ ಗ್ರಂಥಗಳು ನಮಗೆ ದೊರೆತಿಲ್ಲ. ಇವನು ವೀರಶೈವಕವಿ. ತನ್ನ ಗುರುಪರಂಪರೆಯನ್ನು ಹೀಗೆ ಹೇಳಿದ್ದಾನೆ:—

ಹೀಲಗುಂದದ ಸಿಂಹಾಸನಾಧೀಶ ಪಂಚವಣ್ಣಿಗೆಯ ಅನ್ನದಾನೇಶ್ವರ; ಅವನ ಶಿಷ್ಯ ಕುರುವೆತ್ತಿಪುರದ ಸಿಂಹಾಸನಾಧೀಶ ನಂಜೇಶ; ಅವನ ಶಿಷ್ಯ ಪೂವಲ್ಲಿಯಪುರದ ಸಿಂಹಾಸನಾಧೀಶ ಸಿದ್ಧನಂಜೇಶ್ವರ; ಅವನ ಶಿಷ್ಯ ನವನಂದಿಮಂಡಲದ ನಂದ್ಯಾಲಪುರದ ಸಿಂಹಾಸನಾಧೀಶ ಕವಿ ಸಿದ್ಧನಂಜೇಶ.

ಈತನಿಗೆ ಚಿಕ್ಕನಂಜೇಶ ಎಂಬ ಹೆಸರೂ ಇದ್ದಂತೆ ತೋರುತ್ತದೆ. ತನ್ನ ಗುರುವಾದ ಸಿದ್ಧನಂಜೇಶ್ವರನನ್ನು "ಆಚಾರ್ಯರೇವಣಾ ಸಿದ್ಧೇಶ ಮರುಳುಸಿದ್ಧಾಚಾರ್ಯ

ರಾಮಿದೇವಾಚಾರ್ಯ ಗುರುಪಂಡಿತಾಚಾರ್ಯ ಚೌಕಮಧ್ಯದಿ ನಿಂದ ಪಂಚವಣ್ಣಿಗೆ ಸಿದ್ಧನಂಜೇಶ್ವರ" ಎಂದು ಚತುರಾಚಾರ್ಯರಿಗೆ ಸಮಾನನೆಂಬ ಭಾವದಿಂದ ಸ್ತುತಿ ಸಿದ್ದಾನೆ: ಈತನಿಗೆ ಮುತ್ತಿನ ಕಂತೆಯ ಗುರುಸಿದ್ಧನಂಜೇಶ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಅವನಿಗೆ ಅನೇಕಜನ * ಶಿಷ್ಯರು ಇದ್ದರೆಂದೂ ಅವನನ್ನು "ಭೂಪತಿಪ್ರಚಯವಡಿಗೆಱಗಿ ಕಪ್ಪವ ತೆತ್ತು ಓಲೈಸಿಮುದು" ಎಂದೂ ಕವಿ ಹೇಳುತ್ತಾನೆ.

ಗುರುರಾಜಚಾರಿತ್ರದಲ್ಲಿ ಬಸವಪೌರಾಣದ ಮಲ್ಲಣಾರ್ಯನಿಂದ ರಚಿತವಾದ ವೀರಶೈವಾಮೃತಪುರಾಣದಿಂದ (೧೫೩೦) ಕೆಲವು ವಿಷಯಗಳನ್ನು ಕವಿ ಸಂಗ್ರಹಿಸಿದಂತೆ ಹೇಳುವುದರಿಂದ ಇವನು ೧೫೩೦ ರಿಂದ ಈಚೆಯವನು ಎಂಬುದು ಸ್ಪಷ್ಟವಾಗಿದೆ. ಸುಮಾರು ೧೬೦೦ ರಲ್ಲಿದ್ದ ಸಂಪಾದನೆಯ ಸಿದ್ಧವೀರಾಚಾರ್ಯನ ಹೆಸರನ್ನು ರಾಘವಾಂಕಚಾರಿತ್ರದ ಅಂತ್ಯಭಾಗದಲ್ಲಿ ಹೇಳಿರುವುದರಿಂದ ಅವನ ಕಾಲಕ್ಕೂ ಈಚೆಯವನಾಗಿರಬೇಕು; ಸುಮಾರು ೧೬೫೦ ರಲ್ಲಿ ಇದ್ದಿರಬಹುದು.

ಪೂರ್ವಕವಿಗಳಲ್ಲಿ ಹರಿದೇವ, ಕೆರೆಯ ಪದ್ಮರಸ, ರಾಘವಾಂಕ, ಪಾಲ್ಕುರಿಕೆ ಸೋಮೇಶ್ವರ, ಭೀಮಕವಿ, ಲಕ್ಕಣ್ಣದಂಡೇಶ, ಚಕ್ರಣಾಚಾರ್ಯ, ಚಾಮರಸ, ಮಗ್ಗೆಯಾಚಾರ್ಯ, ಕಲ್ಲಿಮಠದಾಚಾರ್ಯ, ಸಿಂಗಿರಾಜ, ಬಸವಪೌರಾಣದ ಮಲ್ಲಣಾರ್ಯ ಇವರುಗಳನ್ನು ಸ್ಮರಿಸಿದ್ದಾನೆ. ಅಲ್ಲದೆ ಪದ್ಧತಿಯಪ್ರಕಾರ ಬಾಣ, ಕಾಳಿದಾಸ, ಮಳಯರಾಜ, ಮಲುಹಣ, ಹಲಾಯುಧ, ಗುಜ್ಜರ, ಭೋಜ, ದಂಡಿ, ಮಯೂರ ಇವರುಗಳನ್ನೂ ಸ್ತುತಿಸಿದ್ದಾನೆ.

ಇವನ ಗ್ರಂಥಗಳಲ್ಲಿ

(೧) ರಾಘವಾಂಕಚಾರಿತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ ೧೯, ಪದ್ಯ ೧೫೩೧. ಇದರಲ್ಲಿ ರಾಘವಾಂಕಕವಿಯ (ಸು. ೧೧೬೫) ಚರಿತ್ರವು ಹೇಳಿದೆ. ಈ ಗ್ರಂಥರಚನೆಗೆ "ಸುಶಾಂತಬಂಧುರಸಂಸ್ಕೃತಪ್ರಾಕೃತೋಭಯಕವಿತ್ವಾಯಿಲರ ಶಿರೋಮಣಿಯೆನಿಪ ನಂದೀಶಕವಿಯ ಕೃಪೆಯಿಂ ಪ್ರಕಟಮಂಮಾಡಿಸಂ", "ಕರ್ಣಾಟಕಕವಿತ್ವಕೋವಿದ ಪಂಚವಣ್ಣಿಗೆಯ ಸಿದ್ಧನಂಜೇಶಾಂಘ್ರಿಕಮಲಮಧುಪ ರಾಚವಟ್ಟಿಯಾರಾಧ್ಯನ ಕೃಪೆಯಿಂ ಗ್ರಂಥ ಪೂರ್ಣವಾಯಿತು" ಎಂಬ ಪದ್ಯಭಾಗಗಳಿಂದ ನಂದೀಶಕವಿಯೂ

* ಸಿದ್ಧಭದ್ರೇಶ, ನಂಜಯ್ಯ, ಚೆನ್ನವೀರಯ್ಯ, ವಿಜಯಪುರದ ನಂಜಯ್ಯ, ಮುಖಬೋಳ ಸಿದ್ಧರಾಮಯ್ಯ, ಭೂಷಣದೊಣ್ಣೆಯ ಮಠದ ಮುತ್ತಿನ ಕಂತೆಯಯ್ಯ, ಬೆಳಲಿಗೆ ಸಿದ್ಧರಾಮಯ್ಯ, ಗುರುನಂಜಯ್ಯ, ರಾಯಬಾಗಿಯ ನಂಜಯ್ಯ, ಸೇಮಬಳದ ನಂಜಯ್ಯ, ಜಾವದ ನಂಜಯ್ಯ, ಗಪ್ಪದ ರಾಚವಟ್ಟಯಯ್ಯ, ಗುಮ್ಮಗೋಳದ ನಂಜಯ್ಯ, ಅನ್ನದಾನಯ್ಯ, ಕಲಸ್ಕೂರ ಸುಲಭ ಕಲ್ಲಯ್ಯ, ಗುಂಡಿಪಳ್ಳಿಯ ಚೆನ್ನಮಲ್ಲಿಕಾರ್ಜುನದೇವ, ಮುತ್ತಿನಕಂತೆ ರಾಚವಟ್ಟಿದೇವ, ಜೈನಾಪುರದ ನಂಜಯ್ಯ, ಪುರಾಣದ ರಾಚವಟ್ಟಯದೇವ, ಪಂಚವಣ್ಣಿಗೆ ವಿರೂಪಾಕ್ಷಯ್ಯ, ಮುತ್ತಿನಕಂತೆ ಸಿದ್ಧಮಲ್ಲಯ್ಯ, ಗಿಡ್ಡಮುತ್ತಿನ ಕಂತೆಯಯ್ಯ, ಸೊನ್ನಲಾಪುರದ ಅನ್ನದಾನಯ್ಯ. ಇವರೆಲ್ಲರೂ ಕವಿಯ ಸಮಕಾಲದವರಾಗಿರಬೇಕು.

ರಾಚವಟ್ಟಿಯಾರಾಧ್ಯನೂ ಸಹಾಯಕರಾಗಿದ್ದಂತೆ ತಿಳಿಯುತ್ತದೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ:—

ಇದುವೆ ರಸಿಕರ ರಸಾಯನ ಕಬ್ಬಿಗರ ಹಬ್ಬ।
ವಿದು ಪ್ರೇಮದಿಂ ಕೇಳ್ವ ಜನದ ಕರ್ಣಾಭರಣ।
ವಿದುವೆ ಸೊಬಗರ ಸೊಬಗು ಕೋವಿದರ ಕೊರಲ ಹಾರಂ ಗಮಕಿಗಳ [ಗಮಕವು॥

ಇದುವೆ ಭಾವದ ಪಕ್ಕೆಯಿದುವೆ ನವರಸದಿಕ್ಕೆ।
ಯಿದು ಸದಾಚಾರಸುಖಸದನ ಮೋಹನದ ಧನ।
ವಿದನೋದಿ ಕೇಳಿ ಲಾಲಿಸದರಾರ್ ಧರೆಯೊಳಗೆ ದಿವ್ಯಕಾವ್ಯಾಮೃತವನು॥

ಗ್ರಂಥಾವತಾರದಲ್ಲಿ ನಂಜೇಶ್ವರಸ್ತುತಿ ಇದೆ. ಬಳಿಕ ಕವಿ ಭೃಂಗಿವೀರಭದ್ರ ರನ್ನು ಸ್ತುತಿಸಿ ಅನಂತರ ಬಸವನೇ ಮೊದಲಾದ * ಪುರಾತನರನ್ನೂ † ಕರತಳದ ನಾಗಿದೇವನೇ ಮೊದಲಾದ ಪಿರಕ್ತರನ್ನೂ ಹೊಗಳಿದ್ದಾನೆ. ಕೊನೆಯ ಸಂಧಿ ಯಲ್ಲಿಯೂ ಕೆಲವರು ವೀರಶೈವ ಗುರುಗಳನ್ನೂ ಕವಿಗಳನ್ನೂ ಸ್ತುತಿಸಿದ್ದಾನೆ. ಇವ ರೆಲ್ಲರೂ ಪ್ರಾಯಿಕವಾಗಿ ಕವಿಯಕಾಲಕ್ಕೆ ಹಿಂದೆ ಇದ್ದವರು ಎಂದು ತಿಳಿಯುತ್ತದೆ. ಈ ಹೆಸರುಗಳಲ್ಲಿ ಕೆಲವನ್ನು ಇಲ್ಲಿ ಬರೆಯುತ್ತೇವೆ:—

ಜಿಗುನಿ ಮರುಳಾರ್ಯ; "ಬಸವಾದಿಗಳ ವಚನವಂ ಜಂಗಮಕೆ ಮುದದಿಯಾ ಖ್ಯಾನವಂ ಪೇಳ್ದ" ಗುಮ್ಮಳಾಪುರದ ಸಿದ್ಧಲಿಂಗಾಚಾರ್ಯ; "ಕಲಿಯುಗದೆರಡನೆಯ ಈಶ್ವರನೆನಿಸಿ ಮೆರೆದ" ಕೊಟ್ಟೂರು ಬಸವಗುರು; ಚರಚಕ್ರವರ್ತಿ ಜಡೆಯ ಶಿವಲಿಂಗ ದೇವಾರ್ಯ; "ಶಿವತತ್ವಗಳ ಲೆಕ್ಕವಂ ಮಾಡ್ದ" ಲೆಕ್ಕದ ಕರಿಯ ಸಿದ್ಧಬಸ ವೇಶ; "ಬಸವಾರಾಧ್ಯನೆರಡನೆಯ ಮೂರ್ತಿ ಫಲಾಹಾರನಿಯಮವಾಂತುರುಮಹಿಮ ನೊಪ್ಪುತ್ತಿಹ" ಚೆನ್ನಬಸವೇಶ; "ವೀರಮಾಹೇಶ್ವರಾವಳಿಗೆ ಗುರುಬಸವಮುಖ್ಯ ಪುರಾತನರೊರೆದ ವಚನಗಳ ಬೋಧಿಸುವ" ಗೂಳೂರು ಸಿದ್ಧವೀರೇಶ್ವರ; "ತೋಂಟ ದಾರ್ಯರ ಕೃಪೆಯ ಪಡೆದು ಮೆರೆದ" ಸಪ್ಪೆಯರಾಯಯತಿಪ; ಶಿವಶಂಕರೇಶ; ಆಚಾರ್ಯವರದ ಹರಿತಾಳ ನಂಜೇಶ; ಪಿಮಲಾಚಾರ್ಯ; ಸಂಪಾದನೆಯ ಸಿದ್ಧವೀ ರೇಶ್ವರಾಚಾರ್ಯ; ಮಲ್ಲಿಕಾರ್ಜುನದೇವ; ಸಿಂಗಳದ ಸಿದ್ಧಬಸವ; ಚೆನ್ನವೀರೇಶ; ನಂದೀಶ್ವರ; ಓದುವ ಅನ್ನದಾನೀಶ್ವರ; ಪರಮಾನಂದದೇವ; ನಂದೀಶಕವಿ; ರಾಚ ವಟ್ಟಿಯಾರಾಧ್ಯ.

* ಬಸವ, ಸಿದ್ಧರಾಮ, ಪಂಡಿತಾರಾಧ್ಯ, ರೇವಣ, ಚಾಮಿದೇವ, ಮರುಳಸಿದ್ಧ, ಮಹಾದೇವಿಯಕ್ಕ, ಮಡಿವಳ, ಕಿನ್ನರ, ಪಡಿಹಾರಿ, ಮುದ್ದಯ್ಯ, ಘಟ್ಟಿವಾಳ, ಸೋಳಿಗಯ್ಯ, ಏಕ, ಬಿಬ್ಬ, ಸೊಡ್ಡಳ, ನೀಲ ಲೋಚನೆ.

† ಕರತಳದ ನಾಗದೇವ, ಪ್ರಭುಣಾಚಾರ್ಯ, ಮಹಾಸಿದ್ಧಾರ್ಯ ಮೋಳಿಗೆ, ಭಿತ್ತರೇಶ್ವರ, ಮುಕ್ಕ ನಾಟಕ, ಗಟ್ಟಿಕ, ನಿಜಪಿಲ್ಲ, ಸಿದ್ಧಪ್ರಭಾದಿ ಮಹಾದೇವರು, ಸನ್ಮುಕ್ತಾರ್ ಪ್ರಮಥಗ.

ಇವನ ಬಂಧವು ಧಾರಾಳವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:--

ರಾಘವಾಂಕನ ಸ್ತುತಿ

ಸುರಸಭಾವನಯುತಂ ಕವಿತೆಯೊಳು ಹೃದಯದೊಳು
ಸುರಸಭಾವನಯುತಂ ಮನನದೊಳು ಯಕ್ಷಕನು ।
ಸುರಸಭಾವನಯುತಂ ತಾನಲ್ಲದಿಲ್ಲೆನುತೆ ಸತ್ಪಂಡಿತರು ತುತಿಸಲು ॥
ಹರಿಹರಮಹೋದಯಂ ಶುಶ್ರೂಷೆಗೆಯ್ದು ನರ ।
ಹರಿಹರಮಹೋದಯಂ ಕಾಕತಿಪಸಭೆಯಲ್ಲಿ ।
ಹರಿಹರಮಹೋದಯಂ ಶರಣಾಗತರ್ಗೆನಿಸಿ ಮೆರೆದನಾ ರಾಘವಾಂಕಂ ॥

ಚಂದ್ರೋದಯ

ಕಂದುಗೊರಲಂ ತನ್ನ ಚೆಲುವ ನಿಟ್ಟಿಸುವಡೆ ಪು ।
ರಂದರಂ ಪಿಡಿದ ಮಾಣಿಕಗನ್ನಡಿಯೊ ಪ್ರಾಚಿ ।
ಯೆಂದೆಂಬ ಪೆಣ್ಣ ಬೈತಲೆಮಣಿಯೊ ಸುರಗಜದ ತಲೆಗೆ ಪೂಸಲು ಕಲಸಿದ ॥
ಸಿಂದೂರಪಿಂಡವೋ ಚಕ್ರಯುಗವಿರಹಾಗ್ನಿ ।
ಯೊಂದುರುಳಿಯೋ ಸ್ಮರನ ಕೆಂಬರಲ ಚೆಂಡೊ ತಾ ।
ನೆಂದೆಂಬಭಿಪ್ರಾಯಮಂ ಬೀಱುದುದು ಚಂದ್ರಬಿಂಬವುದಯಾಚಲದೊಳು ॥

ಸೂರ್ಯೋದಯ

ಸಾಱುತ್ತ ಭ್ರಮರ ಶತಪತ್ರದಿಂ ಪಿರಿದಾಗ್ಗಿ ।
ಯೂಱುತ್ತ ಚಕ್ರಕ್ಕೆ ಜೊನ್ನವಕ್ಕಿಗೆ ಮುಗುಡ ।
ಹೇಱುತ್ತ ಚಂದ್ರಕಳೆ ಜಾಱುತ್ತ ಕುಮುದಕಜಲ್ತೋಱುತ್ತ ತಮಕೆ ಕೇಡು ।
ಸಾರಿತ್ತುವುಡುಕಾಂತಿ ತಾಱುತ್ತ ಕಮಲದೊಲ ।
ಮೀಱುತ್ತ ಮುಂಗೋೞು ಚೀಱುತ್ತುವೆಲರ್ತಂಪ ।
ಬೀಱುತ್ತ ಮೂಡಕೆಂಪೇಱುತ್ತ ರವಿಯುದಿಸಲುಜ್ಜುಗಂಗೆಯ್ವಾಗಲು ॥

ಏಳುಬಗೆಯ ಷಟ್ಪದಿ [ಒಂದೇ ಆನುಪೂರ್ವಿಯಲ್ಲಿ ಬರೆದಿದೆ]

(ವಾರ್ಧಕ)

ಶರವಣಜಜನಕಗರಸುರುಚಿರಗರಧರಪುರ ।
ಹರಹರವರದ ಕರರುಷಿರುಜುರುಚಿಗಮರಣರು ।
ಗರಿಮರುತರತರನುಣಡಮರುಗಲಲಿತಭಸಿತವಿಷದನಿಜಲಸದಪಘನ ॥

ಶರಣಜನದಿವಿಜತರುನರಕರಿವರಹರಹರ ।
ಣರುಡುರುತರ ಶರಭರಣರಿಪುರುಧಿರವಿರತ ।
ಪರಿರಸಪರಿಕರ ಕರಣದುರಿತಚಯಹರಸ: ವಿಜಯಜಯಮಹಿಮ
ಶರಸಿಧಿ ॥ ೧ ॥

(ಶರ)

ಶರವಣಜಜನಕ ।
ಗರಸುರುಚಿರಗರ ।
ಧರಪುರ ಹರಹರ ವರದಕರ ॥
ಶರಣಜನದಿವಿಜ ।
ತರುನರಕರಿವರ ।
ಹರಹರಣರುಡುರುತರಶರಭ ॥ ೨ ॥

(ಕುಸುಮ)

ಶರವಣಜಜನಕಗರ ।
ಸುರುಚಿರಗರಧರ ಪುರ ।
ಹರಹರವರದಕರರುಷಿರುಜುರುಚಿಗ ॥
ಶರಣಜನದಿವಿಜತರು ।
ನರಕರಿವರಹರಹರ ।
ಣರುಡುರುತರಶರಭರಣರಿಪುರುಧಿರ ॥ ೩ ॥

(ಭೋಗ)

ಶರವಣಜಜನಕಗರಸುರು ।
ಚಿರಗರಧರಪುರಹರಹರ
ವರದಕರ ರುಷಿರುಜುರುಚಿಗಮರಣರುಗರಿಮ ॥
ಶರಣಜನ ದಿವಿಜತರುನರ ।
ಕರಿವರಹರಹರಣರುಡುರು
ತರಶರಭರಣರಿಪುರುಧಿರವಿರತಪರಿರಸ ॥ ೪

(ಭಾಮಿನಿ)

ಶರವಣಜಜನಕಗರಸುರುಚಿರ
ಗರಧರಪುರಹರಹರವರದಕ
ರರುಷಿರುಜುರುಚಿಗಮರಣರುಗರಿಮರುತರತರಮಣ ॥

* ಈ ಪಾದದಲ್ಲಿ ಒಂದು ಮಾತ್ರೆ ಕಡಮೆಯಾಗಿದೆ.

ಶರಣಜನದಿವಿಜತರುನರಕರಿ
ನರವರಹರಹರಣರುಡುರುತರ
ಭರಣರಿಪುರುಧಿರವಿರತಪರಿರಸಪರಿಕರಕರಣ ॥ ೫ ॥

(ಪರಿವರ್ಧಿನಿ)

ಶರವಣಜಜನಕಗರಸುರುಚಿರಗರ
ಧರಪುರಹರಹರವರದಕರರುಷಿರು
ಜುರುಚಿಗಮುರಣರುಗರಿಮುರುತರತರಮುಣಡಮುರುಗಲಲಿತ ॥
ಶರಣಜನದಿವಿಜತರುನರಕರಿವರ
ಹರಹರಣರುಡುರುತರಶರಭರಣರಿ
ಪುರುಧಿರವಿರತಪರಿರಸಪರಿಕರಕರಣಮುರಿತಚಯುಹರ ॥ ೬ ॥

(ಉದ್ದಂಡ)

೧ನೆಯ ಪದ್ಯದಂತೆಯೇ ಇದೆ.

(೨) ಗುರುರಾಜಚಾರಿತ್ರ

ಇದೂ ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ ೧೬, ಪದ್ಯ ೧೨೭೭. ಇದರಲ್ಲಿ ಪ್ರತಿಪಾದಿತವಾದ ವಿಷಯಗಳು ಈ ಪದ್ಯದಲ್ಲಿ ಹೇಳಿವೆ—

ಬರೆವೆನಾಚಾರ್ಯರುದ್ಭವವನಾಪರಮಸ
ದ್ಗುರುವಂಶವನುಂ ಶಿವನ ಪಂಚವಿಂಶತಿಲೀಲೆ
ಹರಪೂಜೆಯಂ ಪಂಡಿತಾರಾಧ್ಯರೊರೆದ ಗಣಸಾಹಸ್ರನಾಮಂಗಳಂ ॥
ಧರೆಯಲ್ಲಿ ಮತ್ತೆ ಶಿವಕೃಪೆವಡೆದ ನೂತನರ
ಹರಪುರಾತನರ ಕಥೆಗಳ ಸಿದ್ಧನಂಜೇಶ
ಗುರುನಿರೂಪದೊಳೊಲಿದು ಗುರುರಾಜಚಾರಿತ್ರದೊಳು ಬುಧರ ಬಗೆ ಬಯಸಲು ॥

ಈ ವಿಷಯಗಳನ್ನು ತನ್ನ ಗುರುವಾದ ಪಂಚವಣ್ಣಿಗೆಯ ಸಿದ್ಧನಂಜೇಶನು ಅವನ ಹೆಂಡತಿ ಚೆನ್ನವಿರಾಂಬೆಗೆ ಹೇಳಿದಂತೆಯೂ, ಅವುಗಳನ್ನೇ ತಾನು ವಿಸ್ತರಿಸಿ ಅವನ ಆಜ್ಞಾನುಸಾರವಾಗಿ ಬರೆದಂತೆಯೂ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಸಿದ್ಧನಂಜೇಶ, ಬಸವ ಇವರುಗಳ ಸ್ತುತಿ ಇದೆ. ಸಂಧಿಗಳ ಅಂತ್ಯದಲ್ಲಿ ಈ ಪದ್ಯವಿದೆ—

ಧಾತ್ರಿಗುತ್ತಮವೆನಿಪ ಪೂವಲ್ಲಿಪುರಕಧಿಪ
ಚಿತ್ರಗುರು ಪಂಚವಣ್ಣಿಗೆ ಸಿದ್ಧನಂಜೇಶ
ಪುತ್ರ ಸತ್ಕವಿಕುಲಸ್ತೋತ್ರ ಶ್ರೀ ಶೈಲನೈರುತ್ಯಭಾಗದೊಳೊಪ್ಪುವ ॥

ಕ್ಷೇತ್ರನವನಂದಿಮಂಡಲದ ಸಿಂಹಾಸನಕೆ
ಛತ್ರ ಶಿವಕವಿ ಸಿದ್ಧನಂಜೇಶಕೃತ ದಿವ್ಯ
ಸ್ತೋತ್ರ ಗುರುರಾಜಚಾರಿತ್ರದೊಳು.................... ॥

ಈ ಗ್ರಂಥವು ಅನೇಕ ವೀರಶೈವ ಗುರುಗಳ ಮತ್ತು ಕವಿಗಳ ಚರಿತ್ರವನ್ನು ಒಳಕೊಂಡಿರುವುದರಿಂದ ನಮಗೆ ಬಹಳಮಟ್ಟಿಗೆ ಸಹಕಾರಿಯಾಗಿದೆ. ಕೆಲವು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೂ ಈ ಗ್ರಂಥವು ಪ್ರಯೋಜನಕಾರಿಯಾಗಿದೆ. ಇದರಲ್ಲಿ ಅನೇಕ ಪುರಾತನರ * ಮತ್ತು ನೂತನರ † ಹೆಸರುಗಳು ಹೇಳಿವೆ. ವೀರಶೈವ ಪಂಚಾಚಾರ್ಯರಲ್ಲಿ ಕೊನೆಯವನಾದ ವಿಶ್ವೇಶ್ವರಾಚಾರ್ಯನ ಶಿಷ್ಯಪರಂಪರೆಯನ್ನೂ ಅದಕ್ಕೆ ಸಂಬಂಧಪಟ್ಟ ಕೆಲವು ವಿಶೇಷ ಸಂಗತಿಗಳನ್ನೂ ಕವಿ ಈ ರೀತಿಯಾಗಿ ಹೇಳಿದ್ದಾನೆ:—

ಈಶ್ವರನೇ ಕಳಶದಾಚಾರ್ಯ ವಿಶ್ವೇಶ್ವರನಾಗಿ ಧರೆಯಂ ಪಾಲಿಸಿದನು. ಅವನ ಶಿಷ್ಯ ಸದಾಶಿವಾಚಾರ್ಯ; ಇವನಿಗೆ ಪಂಚವಣ್ಣಿಗೆಸ್ವಾಮಿ ಎಂಬ ಹೆಸರೂ ಉಂಟು. ಇವನ ಶಿಷ್ಯ ಬಯಲ ಪಂಚವಣ್ಣಿಗೆಯಾಚಾರ್ಯ; ಇವನ ಶಿಷ್ಯ ಸತ್ಯಶಿವಯೋಗಿ; ಈತನಿಗೆ "ಘೋರತರವಿಷವ ತಂದೆರೆಯಲದನುಂಡು ತೇಗೆ" ಸಿದ್ಧನಂಜ ಎಂಬ ಹೆಸರು ಬಂದಿತು. ಇವನ ಶಿಷ್ಯ ಸಿದ್ಧಮಲ್ಲೇಶ; ಈತನು ಗಜಪತಿಮಹೇಂದ್ರ ರಾಜನಿಗೆ ಶೈವೋಪದೇಶವನಿತ್ತು ಶಿಷ್ಯನನ್ನು ಮಾಡಿಕೊಂಡನು; ಗೋಕರ್ಣೇಶ್ವರದಲ್ಲಿ ನೆಲಸಿ ಸಿಂಹಾಸನಾಧೀಶನೆನಿಸಿದನು. ಪೊಡವಿಡಿಯುಪುರದಲ್ಲಿ ಆಳುತ್ತಿದ್ದ ಹರಿರಾಯನೆಂಬ ವೈಷ್ಣವನರಪತಿ ಮಹೇಂದ್ರರಾಜನ ಮಗಳನ್ನು ಮದುವೆಯಾದನು. ಮಹೇಂದ್ರರಾಜನು ಮಗಳನ್ನು ಹರಿರಾಯನಲ್ಲಿ ಬಿಡುವುದಕ್ಕೆ ಬಂದಾಗ ತನ್ನ ಗುರು ಸಿದ್ಧಮಲ್ಲೇಶನನ್ನು ಕರೆದುಕೊಂಡು ಬಂದನು. ಆ ಗುರುವನ್ನು ಭೂತಾವಿಷ್ಟವಾದ ಒಂದು ಮನೆಯಲ್ಲಿ ಇಳಿಸಿದರು. ಭೂತವು

* ಶ್ರೀಪತಿಪಂಡಿತ. ಮಾದಿರಾಜ. ಧೂರ್ಜಟಿಕೇಶಿ, ಚೆನ್ನಬಸವ. ಕೇಶಿರಾಜ. ವೀರನಾಚಯ್ಯ, ಉದ್ಭಟಯ್ಯ. ಚಾಕಿದೇವ, ಮೌನದ ಮಾರಯ್ಯ, ಅಮರಗುಂಡದ ಮಲ್ಲಿಕಾರ್ಜುನ. ಶಿವನಾಗಮಯ್ಯ. ಗುಂಡಬ್ರಹ್ಮಯ್ಯ, ಉರಿಲಿಂಗ ಪೆದ್ದಯ್ಯ, ಬಿಟ್ಟಿದೇವರಸ. ಗೋವಿಂದ ಭಟ್ಟಾರ. ಗೌಳಭಟ್ಟಾರಕ. ವಿಜಯಾಪುರದ ಸೋಮದೇವಯ್ಯ. ವೀರಸಂಗಯ್ಯ. ಸಿಂಗಿಜೊಪ್ಪಯ್ಯ, ಸ್ವಾದುನರಾಮ. ಸಾಹಿತ್ಯಬ್ರಹ್ಮ, ಹಂಪಿದೇವಯ್ಯ, ಪಟ್ಟಿಪುರದ ಶಂಕರದೇವ. ಭಾಸ್ಕರದೇವ. ಕೊಲ್ಲಿಪಾಕಿಯ ಮಾರಿತಂದೆ. ಸಿಲಸಿಗೆಯ ಶಾಂತಮಲ್ಲಯ್ಯ, ವೈದ್ಯಸಂಗಯ್ಯ. ಶಿವಲೆಂಕಮಂಚಣ್ಣ. ಹಡಪದ ಅಪ್ಪಣ್ಣ. ಎಡೆಮಠದ ನಾಗಯ್ಯ, ನನ್ನಯ್ಯ. ಅಗ್ಗಣಿಯ ಹಂಪಯ್ಯ. ಮಲುಹಣಯ್ಯ. ನಿಜಗುಣಯ್ಯ. ಉರಿಲಿಂಗದೇವಯ್ಯ. ಮುಕ್ತಾಯಕ್ಕ. ನೇರೂರ ಕಣ್ಣ. ಮಲುಹಣಿ. ನಿಂಬಕ್ಕ.

† ಭಂಡಾರಿ ಸೋಮಣ್ಣ, ಪರದಾನಿ ರಾಮಯ್ಯ, ಸಾಸಲುಭೈರವ. ರಾಮಣಯ್ಯ. ನಾಗರಸ. ಸೊಪ್ಪಿನ ಬಸವಣ್ಣ. ಚಿಕ್ಕೋರ್ವಾಹ. ಬಿಟ್ಟಿಗಾಂಡೆಯ ಪ್ರಭು. ಸೋಲೂರ ಚಿಕ್ಕಬಸವ. ಬಯಲ ಪ್ರಭುದೇವ. ಗುಳಮುಳಿಯ ಸಿದ್ಧನಂಜೇಶ. ರಾಮಗಿರಿ ಪರ್ವತಯ್ಯ. ಚಂದ್ರಗುಂಡದ ವಿರೂಪಾಕ್ಷಯ್ಯ. ಮಾಗಡಿಯ ಕರಿಯಬಸವ. ಲಕ್ಷ್ಮೀಭಕ್ತ. ತೋಂಟದ ಸಿದ್ಧಲಿಂಗ. ವಿಷ್ಣು ಬಸವರಾಜ. ದೇವಲಾಪುರದ ಸರ್ಪಯ್ಯ. ಹುಚ್ಚರಾಚಯ್ಯ. ಬಸವಪುರಾಣದ ಸಿದ್ಧಮಲ್ಲೇಶ. ಮಠಿಯ ಮಲ್ಲೇಶ. ಬಿಜ್ಜಾವರದ ಬೋಳಬಸವೇಶ, ಶ್ರೀರಂಗಪಟ್ಟಣದ ಬೋಳಿನ ಮೊಪ್ಪದ ಹಂಪಯ್ಯ ಇತ್ಯಾದಿ.

ಅವನಿಗೆ ನಮಸ್ಕರಿಸಿ ಓಡಿಹೋಗಲು ಹರಿರಾಯನು ಸಂತುಷ್ಟನಾಗಿ ಆ ಮನೆಯಲ್ಲೇ ಮಠವನ್ನು ಮಾಡಿ ಮೌಕ್ತಿಕಾವಳಿಗಳಿಂದ ಕೆತ್ತಿಸಿದ ಕಂತೆಯನ್ನು ಗುರುವಿಗೆ ಹೊದೆಯಿಸಿ ಪಟ್ಟವನ್ನು ಕಟ್ಟಲು ಆತನಿಗೆ ಮುತ್ತಿನ ಕಂತೆಯಯ್ಯ ಎಂಬ ಹೆಸರಾಯಿತು. ಇವನ ಶಿಷ್ಯರು ಅಲ್ಲಲ್ಲಿ ಮಠಗಳನ್ನು ಕಟ್ಟಿಕೊಂಡರು. ಅವರಲ್ಲಿ ಒಬ್ಬ ಮಾಹೇಶ್ವರನು ಚಿನ್ನದಿಂದ ಸಮೆದ ಕಂತೆಯನ್ನು ಧರಿಸಲು ಅವನ ಶಿಷ್ಯರು ಚಿನ್ನದ ಕಂತೆಯ ಅಂಶವೆಂಬರು. ಹೀಗೆಯೇ ಕಬ್ಬುನದ ಕಂತೆಯ ವರ್ಗ, ಪಟ್ಟುಗಂತೆಯ ವರ್ಗ, ಪಚ್ಚೆಯಕಂತೆಯ ವರ್ಗ, ಗೋಣಿಯಕಂತೆಯ ವರ್ಗ, ಜಾಳಿಗೆಗಂತೆಯ ವರ್ಗ, ಕುಪ್ಪಸಗಂತೆಯ ವರ್ಗ, ಹುಲಿಯ ಚರ್ಮದ ಕಂತೆಯ ವರ್ಗ, ಮುತ್ತಿನಪೆಂಡೆಯದ ವರ್ಗ, ಎಂಬ ಪಂಗಡಗಳಾದುವು. ಶಿವಗಂಗೆಯಬೆಟ್ಟದ ಮೇಲಣಗವಿಯಲ್ಲಿ ಒಬ್ಬಯ್ಯನು ನೆಲಸಲು ಅವನ ಶಿಷ್ಯರು ಮೇಗಣಗವಿಯ ಬಗೆಯೆಂಬರು. ಆ ಸಂಪ್ರದಾಯದ ಮಾಹೇಶ್ವರನೊಬ್ಬನು ಮಖ್ಯಕ್ಕೆ ಹೋಗಿ ಖಾಜಿಯೊಡನೆ ಚದುರಂಗವಾಡುತ್ತಿರುವಾಗ ಕೈಸೀಡಿ ಎತ್ತಲು, ಇದೇನೆಂದು ಖಾಜಿ ಕೇಳಲು, ಮುಳುಗಿಹೋಗುತ್ತಿದ್ದ ನಿನ್ನ ಹಡಗನ್ನೆತ್ತಿದೆನೆಂದು ನೆನದಿದ್ದ ತನ್ನ ಅಂಗಿಯನ್ನು ತೋರಿದನು. ಬರಗಾಲದಲ್ಲಿ ಮಳೆಯನ್ನು ಬರಿಸಿದುದರಿಂದ ಇವನಿಗೆ ಮಳೆಯ ಮಲ್ಲೇಶ ಎಂಬ ಹೆಸರಾಯಿತು. ಇವನ ಶಿಷ್ಯರು ಮಳೆಯ ಬಗೆಯವರು. ಕಂಬಾಳ ಮರುಳನು ಕಕುದ್ಗಿರಿಯ ಗಂಗಾಧರೇಶ್ವರನ ತೀರ್ಥಕುಂಡಾಗ್ರದಲ್ಲಿ ಪವಾಡದಿಂದ ಕಲ್ಲ ಕಂಬವನ್ನು ಬರಿಸಿ ನಿಲಿಸಲು ಅವನಿಗೆ ಕಂಬಾಳ ಮರುಳಸಿದ್ದೇಶಗುರು ಎಂದು ಹೆಸರಾಯಿತು. ಇವನ ಶಿಷ್ಯರು ಕಂಬಾಳ ಬಗೆಯವರು. ಹೀಗೆ ಹಲವು ಬಗೆಗಳಾದುವು. ವೀರಶೈವರಲ್ಲಿ ಘನಲಿಂಗಚರ, ಅತೀತಿಚರ, ಉದಾಸಿವೈರಾಗ್ಯಚರ, ಷಟ್ಸ್ಥಲವಿರಕ್ತಿಮೂರ್ತಿ ಎಂದು ನಾಲ್ಕು ಪರ್ಯಾಯ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಅಂಗಡಿಬೀದಿ

ಸರವ ತಿದ್ದುಡುವ ಸರವಂದಿಗರ ಗಂಡಿಗರ ।
ಪಿರಿದು ತ್ರೈಲವ ತೆಗೆವ ಗಾಣಿಗರ ಸೇಣಿಗರ ।
ಇರದೆ ದವಸವನಳೆವ ಆವಟಿಗ ಕೋವಟಿಗ ಓಪಟಿಗ ಕಲ್ಲುಕುಟಿಗ ॥
ಪರಪರಂ ಪುಚ್ಚೆಸುವ ನರ್ತಕರ ವರ್ತಕರ ।
ಕರಸಣ್ಣಗಳ ನೆಯ್ವ ಜೇಡರಾ ಲಾಡರಾ ।
ಪರಿಮಳದ ಪೂವಿನಾ ಮಾಲೆಗಾಜರ ಸೀಲಿಗಾಜರಾ ಪಸರವೆಸೆಗುಂ ॥

ನೀತಿ

ಒಂದುಪಂ ಬಯಸದಿರು ಬಂದುದತಿಗಳಿಯದಿರು ।
ಕುಂದುನಿಂದ್ಯಕ್ಕಳುಕು ಸಂದು ಸುಖದುಃಖ ಬರೆ ।
ಕಂದರ್ಪಹರನಾಜ್ಞೆಯಿಂದು ನಿಕ್ಕಯಿಸೆಡರು ಬಂದೊಪೆದೆಗುಂದದಿಹುದು ॥

ಎಂದೆಂದು ಶಿವನಡಿಯ ನೋಡಿ ಜಾನಿಸು ಭಿಕ್ಷ ।
ವೆಂದೊಡಿಲ್ಲೆನ್ನದಿರು ಮುಂದೆವಂದಿಸಿ ಬಳಿಕ ।
ಹಿಂದೆ ಬಿಟ್ಟಾಡದಿರು ತಂದೆಗುರುದೈವಗಳ ಕಂದಿಸದಿರೆಂದನಾರ್ಯರ್ಗಂ ॥
ಬೇಡದಿರು ನರರ ಕೊಂಡಾಡದಿರು ಹಿಂಸೆಯಂ ।
ಮಾಡದಿರು ಪಾಪಕೆಡೆಯಾಡದಿರು ಕುಚಿತರೊಡ ।
ನಾಡದಿರು ಕಾಮದೊಳು ನೋಡದಿರು ಪರಸತಿಯ ಕೂಡದಿರು ಕನಸಿನಲ್ಲಿ ॥

ಕೇಡೆಣಿಸದಿರು ಪೆಱರಿಗಾಡದಿರು ನಿಷ್ಠುರವ ।
ಪೀಡಿಸದಿರನ್ಯರಂ ರೂಢಿಸದಿರಪಜಯದಿ ।
ಕೂಡಿಸದಿರನ್ಯಾಯದೊಡವೆಯಂ ಸದ್ಗತಿಯ ನಿನಗೆಂದನಾಚಾರ್ಯನು ॥
ಬಿಡು ಪುಸಿಯ ಕಳವು ಪಾರದ್ವಾರವೆಂಬಿವಂ ।
ಕೊಡು ಯಥಾಶಕ್ತಿಯಿಂ ಸತ್ಪಾತ್ರಗಳನಱಿತು ।
ನಡೆ ಸದಾಚಾರಯುತರೊಪ್ಪುವಂದದೊಳು ಗುರುಹಿರಿಯರೊಳು ಹದಿರು ಬೇಡ ॥
ಹಿಡಿ ವ್ರತಾಚಾರದೊಳು ಭಿನ್ನದೋಱದೆ ಸುಜನ ।
ರೊಡನಾಡು ಭೂತದಯವಿರಲಿ ವಿಶ್ವಾಸದಿಂ ।
ತೊಡು ಭಸಿತರುದ್ರಾಕ್ಷಗಳನಿದೇ ಮೋಕ್ಷಪದವೆಂದನಾ ದೇಶಿಕೇಂದ್ರ ॥

ಪಂಡಿತರು ಬ್ರ॥ ಶ್ರೀ॥ ಕಾನಕಾನಹಳ್ಳಿ ವರದಾಚಾರ್ಯರವರಿಂದ.

ಕರ್ಣಾಟಕ ಭಾಷಾಭಿವೃದ್ಧಿ ವಿಚಾರ.

ಭಾಷಾಭಿವೃದ್ಧಿ ವಿಷಯದಲ್ಲಿ ನಮಗೆ ತೋರಿಬಂದ ಸಂಗತಿಯನ್ನು ವಿಜ್ಞಾಪಿಸಿ ಕರ್ಣಾಟಕ ಸಾಹಿತ್ಯ ಸಭೆಯವರ ಉದ್ದೇಶಸಿದ್ಧಿಗೆ ನಮ್ಮ ಶಕ್ತ್ಯನುಸಾರವಾಗಿ ಪ್ರಯತ್ನಿಸೋಣ.

ಭಾಷೆಯು ತತ್ತಜ್ಜನಸಮುದಾಯದಲ್ಲಿ ಮಾತ್ರವೇ ವ್ಯವಹಾರೋಪಯುಕ್ತವಾದಷ್ಟುಮಟ್ಟಿನ ಸ್ಥಿತಿಯಲ್ಲಿದ್ದಮಾತ್ರಕ್ಕೆ ಅಭಿವೃದ್ಧಿಸ್ಥಿತಿಯಲ್ಲಿರುವುದೆಂದು ಹೇಳಲಾಗುವದಿಲ್ಲವು. ಈ ಪೃಥ್ವೀಮಂಡಲದಲ್ಲಿ ಮೂರುಸಾವಿರ ವಿಧವಾದ ಭಾಷೆಗಳಿದ್ದರೂ ಅವು ವ್ಯವಹಾರೋಪಯುಕ್ತವಾದಷ್ಟುಮಟ್ಟಿನ ಸ್ಥಿತಿಯಲ್ಲಿರುವುದರಿಂದಲೇ ಅಭಿವೃದ್ಧಿಗೆ ಬಂದಿಲ್ಲವೆಂದು ಹೇಳಬೇಕಾಗಿರುವುದು, ಅಷ್ಟೇಕೆ? ನಮ್ಮ ಮೈಸೂರು ದೇಶದಲ್ಲಿಯೇ ಸೋಲಿಗರು, ಬಡಗರು, ಲಂಬಾಣಿಗರೇ ಮುಂತಾದವರ ಭಾಷೆಯು ತತ್ತಜ್ಜನಸಮುದಾಯದಲ್ಲಿ ವ್ಯವಹಾರೋಪಯುಕ್ತವಾದಷ್ಟುಮಟ್ಟಿನ ಸ್ಥಿತಿಯಲ್ಲಿ

ಯೇ ಇರುವುದು. ಹಾಗಿದ್ದರೂ ಈ ಭಾಷೆಗಳು ಅಭಿವೃದ್ಧಿಯಸ್ಥಿತಿಯಲ್ಲಿರುವುವೆಂದು ಯಾರೂ ಅಂಗೀಕರಿಸಲಾರರು. ಇದಕ್ಕೆ ದೃಷ್ಟಾಂತವಾಗಿ ಒಂದು ತೋಟವನ್ನು ಹಿಡಿದಲ್ಲಿ ತೋಟವು ವಿಧವಿಧವಾದ ವೃಕ್ಷಾದಿಗಳಿಂದ ತುಂಬಿರಬೇಕಲ್ಲದೆ ಆ ಪ್ರತಿಯೊಂದು ವೃಕ್ಷವೂ ಜನಗಳಿಗೆ ಆವಶ್ಯಕವಾದ ಫಲವನ್ನು ಅಧಿಕವಾಗಿ ಕೊಡುತ್ತಿದ್ದರೆ ತೋಟವು ಅಭಿವೃದ್ಧಿಯ ಸ್ಥಿತಿಯಲ್ಲಿರುವುದೆಂದು ಹೇಳಬಹುದೇ ಹೊರತು ತತ್ತದ್ದಿನದ ಗೃಹಕೃತ್ಯಮಾತ್ರದಲ್ಲಿ ವಿಶ್ರಾನ್ತವಾಗುವ ಒಂದೆರಡು ತರಕಾರಿಯನ್ನು ಬೆಳೆಯುತ್ತಿದ್ದ ಮಾತ್ರಕ್ಕೆ ಅಭಿವೃದ್ಧಿಯ ಸ್ಥಿತಿಯಲ್ಲಿರುವುದೆಂದು ಹೇಳಲಾಗುವುದಿಲ್ಲವು. ಹೀಗೆಯೇ ಭಾಷೆಯೂ ಕೂಡ ಅಧಿಕಫಲಪ್ರದವಾಗದೆ ವ್ಯವಹಾರ ಮಾತ್ರ ಪರ್ಯವಸಾಯಿಯಾಗುವಷ್ಟುಮಟ್ಟಿನ ಸ್ಥಿತಿಯಲ್ಲಿದ್ದರೂ ಅಭಿವೃದ್ಧಿಯಸ್ಥಿತಿಯಲ್ಲಿರುವುದೆಂದು ಹೇಳಲಾಗುವುದಿಲ್ಲವಾದುದರಿಂದ ಭಾಷೆಯಿಂದ ಪಡೆಯಬೇಕಾದ ಅಧಿಕಫಲವು ಯಾವುದೆಂಬ ವಿಷಯವಾಗಿ ಈಗ ವಿಚಾರ ಮಾಡಬೇಕಾಗಿರುವುದು.

ಈ ಸಂದರ್ಭದಲ್ಲಿ ಯಾವ ಭಾಷೆಯನ್ನು ನೋಡಿದರೂ ಜನಗಳಿಗೆ ಜ್ಞಾನೋದಯವನ್ನು ಕಲ್ಪಿಸುವುದೇ ಭಾಷೆಗೆ ಮುಖ್ಯಫಲವಾಗಿ ಕಾಣುವುದು. ಹಾಗೆ ಭಾಷೆಯು ಜ್ಞಾನೋದಯಕ್ಕೆ ಸಾಧಕವಾಗಿರುವಾಗ ಯಾವ ವಿಧವಾದ ಜ್ಞಾನವು ಭಾಷೆಯಿಂದುಂಟಾಗಬೇಕೆಂದು ನೋಡಿದಲ್ಲಿ ಮನುಷ್ಯನಿಗೆ ಆವಶ್ಯಕವಾದ ಧನಧಾನ್ಯಾದಿಗಳ ಸಮೃದ್ಧಿಯೂ, ಲೋಕದಲ್ಲಿ ಮಾನಮರ್ಯಾದೆಗಳೂ, ಪರೋಪಕಾರಪ್ರವೃತ್ತಿಯೂ, ಅಪಾಯನಿವಾರಣನೈಪುಣ್ಯವೂ ಕೂಡ ಯಾವ ಜ್ಞಾನದಿಂದುಂಟಾಗಬಹುದೋ ತಾದೃಶಜ್ಞಾನೋದಯಕ್ಕೆ ಭಾಷೆಯು ಸಾಧಕವಾಗಿರಬೇಕೆಂದು ಯಾರಿಗೂ ತಿಳಿಯದ ಸಂಗತಿಯಲ್ಲವು. ಮನುಷ್ಯನ ಜ್ಞಾನ ಸರ್ವಸ್ವಕ್ಕೂ ಇಹದಲ್ಲಿ ಮೇಲೆ ಹೇಳಿದ ಫಲಚತುಷ್ಟಯವೇ ಫಲವಲ್ಲದೆ ಯಾವುದೋ ಒಂದು ವಿಧದಿಂದ ಜಠರಪಿಠರವನ್ನು ತುಂಬುವದು ಮಾತ್ರವೇ ಫಲವೆಂದು ಬುದ್ಧಿಶಾಲಿಗಳಾದ ಯಾರಿಗೂ ತೋರಲಾರದು.

ಹೀಗೆ ಭಾಷೆಯುಜಠರಪಿಠರಪೂರಣಮಾತ್ರಫಲಕವಾದ ಜ್ಞಾನಕ್ಕಲ್ಲದೆ ಧನಧಾನ್ಯಾದಿಸಮೃದ್ಧಿಗೂ ಮಾನಮರ್ಯಾದೆಗಳಿಗೂ, ಅಪಾಯನಿವಾರಣನೈಪುಣ್ಯಕ್ಕೂ ಪರೋಪಕಾರಪ್ರವೃತ್ತಿಗೂ ಸಾಧಕವಾದ ಜ್ಞಾನವನ್ನು ಉಂಟುಮಾಡಬೇಕಾಗಿರುವ ಸಂದರ್ಭದಲ್ಲಿ ಜಪಾನಿನವರೇ ಮೊದಲಾದ ಅನ್ಯದೇಶೀಯರು ತಮ್ಮ ತಮ್ಮ ಭಾಷಾಬಲದಿಂದ ಪಡೆಯುತ್ತಿರುವ ಧನಾಭಿವೃದ್ಧಿ ಮೊದಲಾದ ಐಹಿಕ ಫಲಗಳಿಗೆ ಸಾಧಕವಾದ ಜ್ಞಾನವನ್ನೂ ಧನಾದಿಗಳ ವಿಷಯದಲ್ಲಿ ಉಪೇಕ್ಷೆಯಮಾಣಾವಸ್ಥೆಯಲ್ಲಿರುವ ನಮ್ಮ ದೇಶೀಯರು ತಮ್ಮ ಭಾಷಾಬಲದಿಂದ ಪಡೆಯುತ್ತಿರುವ ಜ್ಞಾನವನ್ನೂ ನೋಡಿದಲ್ಲಿ ಜಪಾನಿನವರೇ ಮುಂತಾದವರ ಭಾಷೆಯ ಮುಂದೆ ನಮ್ಮ ಭಾಷೆಯು 'ರಂಗನಮುಂದೆ ಸಿಂಗನೇ' ಎಂಬಂತಾಗುವುದು. ಇದರಿಂದ ಜಪಾನಿನವರೇ ಮುಂತಾದವರ ಭಾಷೆಯಲ್ಲಿರುವಂತೆ ನಮ್ಮ ಭಾಷೆಯಲ್ಲಿ ಮೇಲೆ ಹೇಳಿದ ಫಲಗಳಿಗೆ ಸಾಧಕವಾದ ಜ್ಞಾನಸಂಪಾದನೆಗೆ ಅವಕಾಶವಿಲ್ಲದಿರುವುದೆಂದು ಹೇಳಬಹುದಾಗಿರುವುದಲ್ಲದೆ ಹಾಗಾಗುವುದಕ್ಕೆ ಐಹಿಕಫಲ ಸಾಧಕವಾದ ಶಾಸ್ತ್ರಜ್ಞಾನಕ್ಕೆ ಸಾಕಾದಷ್ಟು

ಗ್ರಂಥಗಳಿಲ್ಲದಿರುವುದೇ ಕಾರಣವೆಂದು ಹೇಳಬೇಕಾಗಿರುವುದು. ಆದುದರಿಂದ ಈ ನಮ್ಮ ಕರ್ಣಾಟಕ ಭಾಷೆಯಲ್ಲಿರುವ ಈ ವಿಧವಾದ ನ್ಯೂನತೆಯನ್ನು ಹೋಗಲಾಡಿಸುವುದಕ್ಕಾಗಿ ಲೋಕೋಪಕಾರಕಗಳಾದ ಪಶುಗಜನರಾದಿಗಳ ರೋಗ ನಿವಾರಕವಾಗಿರುವ ವೈದ್ಯಶಾಸ್ತ್ರವೂ, ಖನಿಜಶಾಸ್ತ್ರವೂ, ವ್ಯವಸಾಯಶಾಸ್ತ್ರವೂ, ಯನ್ತ್ರಶಾಸ್ತ್ರವೂ, ಶಿಲ್ಪಶಾಸ್ತ್ರವೆಂದರೆ ಗೃಹಸೇತುದೇವಾಯತನಾದಿನಿರ್ಮಾಣಬೋಧಕಶಾಸ್ತ್ರವೂ ಮೋಹದ ಶಾಸ್ತ್ರವೂ, ಅಭಿನವಪದಾರ್ಥನಿರ್ಮಾಣಬೋಧಕವಾಗಿರುವ ಮೂರ್ತಪದಾರ್ಥಶಾಸ್ತ್ರವೂ (ಕೆಮಿಸ್ಟ್ರಿ) ಇನ್ನೂ ಇತರವಾದ ಧನಾರ್ಜನೋಪಯುಕ್ತಶಾಸ್ತ್ರಗಳೂ, ಹೀಗೆಯೇ ಲೋಕನೀತಿ, ರಾಜನೀತಿ ಚರಿತ್ರೆಯೇ ಮುಂತಾದ ಲೋಕಾನುಭವ ಸಾಧಕವಾಗಿರುವ ಗ್ರಂಥಗಳೂ, ಭೂಗೋಳಶಾಸ್ತ್ರ, ಖಗೋಳಭೂಗರ್ಭಶಾಸ್ತ್ರ, ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರ ಮೂರ್ತದ್ರವ್ಯಶಕ್ತಿಬೋಧಕವಾದ ಭೌತಿಕಶಾಸ್ತ್ರವೇ ಮುಂತಾದ ಬುದ್ಧಿ ವಿಕಾಸಕ ಶಾಸ್ತ್ರಗಳೂ, ಚಿತ್ರಕಥಾಕಾವ್ಯನಾಟಕಾದಿ ಮನೋವಿನೋದಕ ಗ್ರಂಥಗಳೂ ಹೀಗೆಯೇ ಯಾವುದಾದರೂ ಒಂದು ವಿಧದಲ್ಲಿ ಐಹಿಕ ಫಲಪ್ರದವಾದ ಇನ್ನೂ ಇತರ ಗ್ರಂಥಗಳೂ, ಇವಲ್ಲದೆ ಮುಖ್ಯವಾಗಿ ಪರಲೋಕವಿಚಾರೈಕಪರಾಯಣವೆಂದು ಹೇಳಬಹುದಾದರೂ ಸತ್ಕಾರ್ಯಪ್ರವೃತ್ತಿಜನಕವಾಗಿಯೂ ದುಷ್ಕಾರ್ಯಪ್ರವೃತ್ತಿ ನಿವಾರಕವಾಗಿಯೂ ಇದ್ದುಕೊಂಡು ಲೋಕಕ್ಷೇಮಕ್ಕೂ ಸಾಧಕವಾಗಿರುವ ಆತ್ಮವಿಚಾರ ಗ್ರಂಥಗಳೂ ಪರಲೋಕವಿಚಾರಗ್ರಂಥಗಳೂ ಈ ಕರ್ಣಾಟಕ ಭಾಷೆಯಲ್ಲಿ ತುಂಬಿರುವ ಹಾಗೆ ಏರ್ಪಡಿಸಬೇಕಾಗಿರುವುದು.

ಹೀಗೆ ಮೇಲೆಹೇಳಿದ ಗ್ರಂಥಗಳು ಕರ್ಣಾಟಕಭಾಷೆಯಲ್ಲಿ ಪರಿಪೂರ್ಣವಾಗಲಾಗಿ ಈ ಭಾಷೆಯಿಂದ ಪಡೆಯಬೇಕಾದ ಜ್ಞಾನಸರ್ವಸ್ವವನ್ನೂ ಈ ಕರ್ಣಾಟದೇಶೀಯ ಜನಗಳೂ ಪಡೆದು ಇತರ ದೇಶೀಯರಂತೆ ಇವರೂ ಪ್ರಸಿದ್ಧರಾಗಬಹುದಲ್ಲದೆ ಐಹಿಕ ಸುಖಸಾಧಕಜ್ಞಾನಾರ್ಜನೋಪಯುಕ್ತ ಗ್ರಂಥಗಳಿಲ್ಲದಿರುವ ನ್ಯೂನತೆಯು ಸಮಗ್ರವಾಗಿ ನಷ್ಟವಾಗಿ ಐಹಿಕಸುಖಸರ್ವಸ್ವಸಾಧಕವಾದ ಜ್ಞಾನವನ್ನು ಜನಗಳಿಗೆ ಉಂಟು ಮಾಡುವುದರಿಂದ ಈ ಭಾಷೆಯು ಪರಿಪೂರ್ಣವೆನಿಸಿಕೊಂಡು ಪರಮಾಭಿವೃದ್ಧಿಯ ಪರಾಕಾಷ್ಠೆಯನ್ನು ಪಡೆಯಬಹುದೆಂದು ಹೇಳಬಹುದಾಗಿರುವುದು.

ಹೀಗೆ ಐಹಿಕಸುಖಸಾಧಕಜ್ಞಾನಾರ್ಜನೋಪಯುಕ್ತ ಗ್ರಂಥಗಳು ಕರ್ಣಾಟಕ ಭಾಷೆಯಲ್ಲಿ ತುಂಬುವುದರಿಂದ ಭಾಷೆಯು ಪರಿಪೂರ್ಣವಾದಲ್ಲಿ ಏತಾದೃಶಜ್ಞಾನಾರ್ಜನೆಗಾಗಿ ಅನ್ಯದೇಶೀಯಭಾಷಾಜ್ಞಾನವನ್ನು ಪಡೆಯಬೇಕಾದ ಆವಶ್ಯಕತೆಯೇನೂ ಕಂಡುಬರುವುದಿಲ್ಲವಾದಕಾರಣ ಈ ದೇಶೀಯರು ತಮ್ಮ ಹುಟ್ಟುಭಾಷೆಯಾದ ಕರ್ಣಾಟಭಾಷೆಯಿಂದ ಅತ್ಯಲ್ಪಕಾಲದಲ್ಲಿಯೇ ಜ್ಞಾನಸರ್ವಸ್ವವನ್ನೂ ಪಡೆಯಬಹುದಾದ ಸೌಕರ್ಯವೂ ಕಂಡುಬರುವುದು. ಪ್ರಕೃತದಲ್ಲಿ ಈ ವಿಧವಾದ ಗ್ರಂಥಗಳು ಕರ್ಣಾಟಭಾಷೆಯಲ್ಲಿ ಇಲ್ಲವೇ ಇಲ್ಲವೆಂದು ಹೇಳಲಾಗದಂತೆ ಎಲ್ಲಿಯೋ ಒಂದೆರಡು ಗ್ರಂಥಗಳಿರಬಹುದಾದರೂ ಆ ಗ್ರಂಥವೂ ಫಲೋನ್ಮುಖಾವಸ್ಥೆಯಲ್ಲಿರದೆ ಅಂಕುರಾವಸ್ಥೆಯಲ್ಲಿದ್ದುಕೊಂಡು ಗೋಚರಾಗೋಚರವಾಗಿರುವುದರಿಂದ ಹಿಂದೆಹೇಳಿದ ಶಾಸ್ತ್ರ

ಗ್ರಂಥಗಳ ಅಭಿವೃದ್ಧಿಯು ಕರ್ಣಾಟಕಭಾಷೆಯಲ್ಲಿ ಉಂಟಾಗುವುದಕ್ಕಾಗಿ ಅವಶ್ಯವಾಗಿ ಪ್ರಯತ್ನಿಸಬೇಕಾಗಿರುವುದು. ಆದುದರಿಂದ ಲೋಕೋಪಕಾರಾರ್ಥವಾಗಿಯೇ ತಮ್ಮ ತನುಧನಮನಗಳನ್ನೂ ಅನರ್ಘವಾದ ತಮ್ಮ ಕಾಲವನ್ನೂ ವಿನಿಯೋಗಿಸುವ ಕರ್ಣಾಟಕಸಾಹಿತ್ಯಸಭೆಯ ಮಹಾಪುರುಷರು ಈ ಮಹಾಕಾರ್ಯಕ್ಕಾಗಿ ಪ್ರಯತ್ನಿಸಿದಲ್ಲಿ ಏತದ್ದೇಶೀಯರ ಪುರಾತನಪುಣ್ಯವೇ ಈ ಮಹಾಪುರುಷರ ರೂಪದಲ್ಲಿ ಮೂರ್ತೀಭೂತವಾಗಿ ಬಂದಿರುವುದೆಂದು ಹೇಳಬಹುದಾಗಿರುವುದು.

ಎರಡನೆಯದು:—

ಹಿಂದೆ ಹೇಳಿದಂತೆ ಇತರ ಭಾಷೆಗಳಲ್ಲಿರುವ ಶಾಸ್ತ್ರ ವಿಚಾರವನ್ನು ತಿಳಿಯಪಡಿಸುವುದಕ್ಕಾಗಿ ಈ ಕರ್ಣಾಟಕಭಾಷೆಯಲ್ಲಿ ಗ್ರಂಥಗಳನ್ನು ಬರೆದಿಟ್ಟರೂ ಗ್ರಾಹಕರಿಲ್ಲದಿದ್ದರೆ ಆ ಗ್ರಂಥಗಳೂ ಬಿಲವಾಗಬಹುದಾದಕಾರಣ ಹಾಗೆ ಬಿಲವಾಗದೆ ಆ ಗ್ರಂಥಗಳು ಪ್ರಚಾರದಲ್ಲಿರಬೇಕಾದರೂ ಅಥವಾ ಪ್ರಬಲಿಸಬೇಕಾದರೂ ಈಗ ಇಂಗ್ಲಿಷ್ ಭಾಷೆಯಲ್ಲಿರುವಂತೆಯೇ ಈ ಭಾಷೆಯಲ್ಲಿಯೂ ಅನೇಕವಾದ ಪರೀಕ್ಷೆಗಳನ್ನಿಟ್ಟಲ್ಲಿ ಕರ್ಣಾಟಭಾಷೆಗೆ ವಿಶೇಷವಾಗಿ ಉತ್ತೇಜನವನ್ನು ಕೊಟ್ಟಂತಾಗುವುದೆಂದು ತೋರುತ್ತದೆ. ಈ ವಿಧವಾದ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಇಂಗ್ಲೀಷ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಸಮನಾಗಿಯೋ ಅಥವಾ ಯಥೋಚಿತವಾಗಿಯೋ ಕಾಣುತ್ತಿದ್ದರೆ ಭಾಷೆಯು ತನ್ನ ಪೂರ್ಣಪ್ರಕಾಶವನ್ನು ತೋರಿಸಬಹುದಾಗಿರುವುದು. ಒಂದು ತೋಟದಲ್ಲಿ ಒಂದು ಗಿಡವು ಅಭಿವೃದ್ಧಿಗೆ ಬರಬೇಕೆಂದು ತೋರುವ ಪಕ್ಷದಲ್ಲಿ ಆ ಗಿಡಕ್ಕೆ ಬೇರೆ ಗಿಡಗಳಿಗಿಂತಲೂ ಕಡಮೆಯಾಗದಿರುವಷ್ಟು ಮಟ್ಟಿಗೆ ಪೋಷಣವನ್ನು ಮಾಡಬೇಕಲ್ಲವೇ? ಹಾಗೆ ತಕ್ಕ ಪೋಷಕ ಸಾಮಗ್ರಿಯನ್ನು ಒದಗಿಸದಿದ್ದಲ್ಲಿ ಆತಪಾದಿಗಳಿಂದಲೋ ಇತರ ವೃಕ್ಷಗಳ ಬಾಧೆಯಿಂದಲೋ ಆ ಗಿಡವೂ ಕಾಲಕ್ರಮದಲ್ಲಿ ಲೀನಪ್ರಾಯವಾಗಬಹುದಲ್ಲವೇ?—

ಮೂರನೆಯದು—

ಇದುವರೆಗೂ ಜ್ಞಾನಾಭಿವೃದ್ಧಿಯನ್ನು ಮಾಡಲು ಹೊರಟಲ್ಲಿ ಭಾಷೆಯು ಅಭಿವೃದ್ಧಿಗೆ ಬರುವ ಸ್ಥಿತಿಯನ್ನು ಹಿಡಿದು ಇಲ್ಲಿ ವಿಚಾರಮಾಡಲಾಯ್ತು. ಹೀಗೆಯೇ ವ್ಯವಹಾರ ದಶೆಯಲ್ಲಿಯೂ ಭಾಷೆಗೆ ಅಭಿವೃದ್ಧಿಯನ್ನುಂಟುಮಾಡಬಹುದಾಗಿರುವುದು. ಈ ಕಾರ್ಯವೂ ಕೂಡ ಗೌರ್ನಮೇಂಟಿನವರಿಂದಲೇ ನಿರ್ವಹಿಸಬೇಕಾಗಿರುವುದು.

ಸಂಗತವಾಗಿ ನೋಡಿದಲ್ಲಿ ಮೈಸೂರ್ ದೇಶವು ಕರ್ಣಾಟಕ ದೇಶವೆಂಬದಾಗಿಯೂ ಈ ಕರ್ಣಾಟಕ ಭಾಷೆಯು ರಾಜಭಾಷೆಯಾಗಿಯೂ ದೇಶಭಾಷೆಯಾಗಿಯೂ ಇರುವುದರಿಂದ ಪ್ರತಿಯೊಂದು ಕೋರ್ಟು ಕಚೇರಿಗಳಲ್ಲಿಯೂ ತಪ್ಪಿದರೆ ಪರೀಕ್ಷಾರ್ಥವಾಗಿ ಕೆಲವೆಡೆಯಲ್ಲಾದರೂ ಜಡ್ಜ್‌ಮೆಂಟ್ (ಸಿದ್ಧಾಂತ) ಕೈಫಿಯತ್ (ವಾಜ್ಮೂಲ) ಮುಂತಾದುವುಗಳಲ್ಲಿ ಈ ಕರ್ಣಾಟಕ ಭಾಷೆಯನ್ನೇ ಬಳಕೆಗೆ ತಂದಲ್ಲಿ ರಾಜಭಾಷೆಗೆ ಗೌರವವನ್ನು ಕೊಟ್ಟಂತಾಗುವುದಲ್ಲದೆ ಸರ್ವಲೌಕಿಕವ್ಯವಹಾರದಲ್ಲಿಯೂ ಈ ಭಾಷೆಯು ಪರಿಗ್ರಹಿಸಲ್ಪಟ್ಟು ವಿಶೇಷವಾಗಿ ಪ್ರಕಾಶಕ್ಕೆ ಬರಬಹುದಾ

ಗಿರುವುದು. ಮೈಸೂರು ದೇಶದಲ್ಲಿ ಹಿಂದಿನಕಾಲದಲ್ಲಿ ಕನ್ನಡವು ರಾಜಾಧಿಕಾರಸ್ಥಾನ (ಕೋರ್ಟು) ಗಳಲ್ಲಿ ಬಳಕೆಯಾಗಿತ್ತೆಂಬಂಶವು ಚರಿತ್ರಜ್ಞರಿಗೆ ತಿಳಿಯದ ಸಂಗತಿ ಯಲ್ಲವು. ಪ್ರಕೃತದಲ್ಲಿ ಇದಕ್ಕಾಗಿಯೂ ಕೆಲವಾದರೂ ಲಾ (ಧರ್ಮಶಾಸ್ತ್ರಗಳ) ಪುಸ್ತಕ ಗಳನ್ನು ಕನ್ನಡಿಸಬೇಕಾದ ಕ್ರಮವಿರುವುದು. ಆದರೂ ಭಾಷಾಭಿವೃದ್ಧಿಗಾಗಿ ಪ್ರಯತ್ನಿಸಿದ ಬಳಿಕ ಅದಕ್ಕೆ ತಕ್ಕ ಸರ್ವಪ್ರಯತ್ನವನ್ನೂ ಮಾಡಬೇಕಾದುದು ಆವಶ್ಯಕವಲ್ಲವೇ?—ಅದರಲ್ಲಿಯೂ ಗೌರ್ನಮೇಂಟಿನವರೇ ಈ ಭಾಷಾಭಿವೃದ್ಧಿಗೆ ಪ್ರಯತ್ನಿಸಿರುವಾಗ ಯಾವ ಕೆಲಸವನ್ನೂ ನಿರ್ವಹಿಸಬಹುದಾಗಿರುವುದರಿಂದ ಅತ್ಯಲ್ಪಕಾಲದಲ್ಲಿಯೇ ಈ ಕರ್ಣಾಟಭಾಷೆಯೂ ಕೂಡ ಅಭಿವೃದ್ಧಿಯ ತುತ್ತತುದಿಯನ್ನು ಹತ್ತಬಹುದೆಂದು ಹೇಳಬಹುದಾಗಿರುವುದು.

ಹೀಗೆ ಲೋಕೋತ್ತರಜ್ಞಾನಪ್ರದವಾಗುವ ಸ್ಥಿತಿಯೂ ಸ್ವಯಂಪ್ರಕಾಶಕ್ಕೆ ಬರುವ ಸ್ಥಿತಿಯೂ ಕೂಡ ಭಾಷಾಭಿವೃದ್ಧಿಯ ಸ್ಥಿತಿಯೆಂದು ಹೇಳಬಹುದಾಗಿರುವುವೆಂಬಲ್ಲಿಗೆ "ಭಾಷೆಯು ಅಭಿವೃದ್ಧಿಗೆ ಬರುವುದೆಂದರೇನು?"—ಎಂಬ ವಿಚಾರವನ್ನು ಸಾಕುಮಾಡಿ ಭಾಷಾಭಿವೃದ್ಧಿಗಾಗಿ ಆಚರಿಸಬೇಕೆಂದಿರುವ ವಿಷಯವಾಗಿ ಮುಂದೆ ವಿಚಾರಮಾಡೋಣ.

ಹಿಂದೆ ಹೇಳಿದ ಸಭೆಯ ಮಹನೀಯರು ಕರ್ಣಾಟಕ ಭಾಷಾಭಿವೃದ್ಧಿಗಾಗಿ ಪ್ರಯತ್ನಗಳನ್ನು ಮಾಡಬೇಕೆಂದು ಸಂಕಲ್ಪಿಸಿರುವವರಾದಕಾರಣ ಈ ಪ್ರಯತ್ನಗಳು ಎಷ್ಟರಮಟ್ಟಿಗೆ ಭಾಷಾಭಿವೃದ್ಧಿಯ ವಿಷಯದಲ್ಲಿ ಫಲಕಾರಿಯಾಗಬಹುದೆಂದು ವಿಚಾರ ಮಾಡುವುದೂ ಪ್ರಕೃತವಾಗಿರುವುದರಿಂದ ಈ ವಿಚಾರಕ್ಕೂ ಆರಂಭಿಸಿ ವಿಚಾರಮಾಡಿ ನೋಡುವಲ್ಲಿ ಕನ್ನಡ ಭಾಷೆಯು ಪ್ರಚಾರದಲ್ಲಿರುವ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡ ಗ್ರಂಥಕರ್ತೃಗಳಲ್ಲಿ ಐಕಮತ್ಯವನ್ನು ಹೆಚ್ಚಿಸಬೇಕೆಂಬ ಪ್ರಯತ್ನವು ಭಾಷಾಭಿವೃದ್ಧಿಗೆ ಅಷ್ಟೊಂದು ಸಹಕಾರಿಯೆಂದು ಹೇಳಲಾಗುವುದಿಲ್ಲವಾದರೂ ಕರ್ಣಾಟಕಗ್ರಂಥಕಾರರಿಗೆಪರಸ್ಪರ ಸ್ನೇಹಕಾರಿಯಾದರೂ ಆಗಬಹುದು. ಆದರೆ ಇಷ್ಟುಮಾತ್ರವಲ್ಲದೆ ಕರ್ಣಾಟಕ ಗ್ರಂಥಕಾರರಿಗೆ ಧನರೂಪವಾಗಿಯೋ ಮರ್ಯಾದಾರೂಪವಾಗಿಯೋ ಪ್ರೋತ್ಸಾಹವನ್ನು ಕೊಟ್ಟಲ್ಲಿ ಗ್ರಂಥಾಭಿವೃದ್ಧಿಗೂ ತನ್ಮೂಲಕವಾದ ಭಾಷಾಭಿವೃದ್ಧಿಗೂ ಉತ್ತೇಜನವಾದಂತಾಗುವುದೆಂದು ತೋರುತ್ತದೆ.

ಇನ್ನು ಕನ್ನಡ ಭಾಷೆಯು ಪ್ರಚಾರವಲ್ಲಿರುವ ಪ್ರದೇಶಗಳಲ್ಲೆಲ್ಲಾ ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರಬೇಕೆಂಬ ಪ್ರಯತ್ನವನ್ನೂ ಹಾಗೆಯೇ ಆ ಪ್ರದೇಶದಲ್ಲಿರುವ ಕನ್ನಡ ಪಾಠಶಾಲೆಗಳಲ್ಲಿ ಒಂದೇ ವಿಧವಾದ ಪಾಠ್ಯಪುಸ್ತಕಗಳನ್ನಿರಿಸಬೇಕೆಂಬ ಪ್ರಯತ್ನವನ್ನೂ ಹಿಡಿದು ವಿಚಾರಮಾಡೋಣ.

ಹಾಗೆ ವಿಚಾರಮಾಡಿ ನೋಡಿದಲ್ಲಿ ಈ ಕನ್ನಡಭಾಷೆಯು ಹೈದರಾಬಾದು ಸಂಸ್ಥಾನದ ನೈರುತ್ಯಭಾಗದಲ್ಲಿಯೂ ಬೆಳಗಾಂ ಧಾರವಾಡ ಮೊದಲಾದ ಬೊಂಬಾಯಿ ಆಧಿಪತ್ಯದ ದಕ್ಷಿಣದಲ್ಲಿ ಕೆಲವು ಭಾಗದಲ್ಲಿಯೂ ಹೀಗೆಯೇ ಮಂಗಳೂರ್ ಮೊದಲಾದ ಮದ್ರಾಸಾಧಿಪತ್ಯದ ಪಶ್ಚಿಮಭಾಗದಲ್ಲಿ ಕೆಲವೆಡೆಯಲ್ಲಿಯೂ ಮೈಸೂರು

ಸೀಮೆಯಲ್ಲಿ ಸಾಮಾನ್ಯವಾಗಿ ಸರ್ವಭಾಗದಲ್ಲಿಯೂ ಕಾಣಬರುವುದೆಂದು ಹೇಳಬಹುದು. ಹೀಗೆ ಬೇರೆಬೇರೆ ದೇಶಗಳಲ್ಲಿ ಈ ಕನ್ನಡವು ಹರಡಿಕೊಂಡಿರುವುದರಿಂದ ಆಯಾಯಾ ದೇಶದ ಸುತ್ತುಮುತ್ತು ಇರುವ ಇತರ ಭಾಷಾಪದಗಳ ಸಂಪರ್ಕವೂ ವಾಕ್ಯಶೈಲಿಯಸಂಪರ್ಕವೂ ಈ ಭಾಷೆಗೆ ಕೆಲವು ದೇಶಗಳಲ್ಲಿ ಬರಬಹುದಾದುದರಿಂದ ಹಾಗಾಗದೆ ಭಾಷೆಯು ಮಿಶ್ರಭಾಷೆಯಾಗದಿರುವುದಕ್ಕೆ ಈ ಪ್ರಯತ್ನದ್ವಯವೂ ಸಾಧಕವಾಗಬಹುದು, ಆದರೆ ಬೇರೆಬೇರೆ ಆಧಿಪತ್ಯದವರು ಈ ಪ್ರಯತ್ನಕ್ಕೆ ಸಮ್ಮತಿಯನ್ನು ಕೊಡಬೇಕಾಗಿರುವುದು—

ಇದಲ್ಲದೆ ಏಕಾರ್ಥಬೋಧನೆಗಾಗಿ ಒಂದೊಂದು ದೇಶದಲ್ಲಿ ಒಂದೊಂದು ವಿಧವಾದ ಪದಪ್ರಯೋಗವಾಕ್ಯಶೈಲಿಗಳು ಕಾಣಬರುವುದರಿಂದ ಒಂದು ದೇಶದವರು ಬರೆದ ಗ್ರಂಥವನ್ನು ನೋಡಿ ಗೊಣಗುಟ್ಟದೆ ಮತ್ತೊಂದು ದೇಶದವರು ನಿರ್ದುಷ್ಟವಾಗಿರುವುದೆಂದು ಒಪ್ಪಲಾರರಾದರೂ ಪ್ರಯತ್ನಿಸಿದಲ್ಲಿ ತಾದೃಶಗ್ರಂಥವನ್ನು ಸಹೃದಯರಾದ ಅದೇ ಬೇರೆಬೇರೆ ದೇಶದವರೇ ನಿರ್ದುಷ್ಟವಾಗಿರುವುದೆಂದು ಅಂಗೀಕರಿಸುವ ಹಾಗೆ ಮಾಡಿದರೂ ಮಾಡಬಹುದು. ಇದರಿಂದ ಭಿನ್ನಭಿನ್ನ ದೇಶದಲ್ಲಿರತಕ್ಕ ಕರ್ಣಾಟಕರೆಲ್ಲರೂ ತಮ್ಮ ತಮ್ಮ ಗ್ರಂಥಗಳಲ್ಲಿ ದೇಶಭೇದ ಪ್ರಯುಕ್ತವಾದ ಭಿನ್ನ ಕ್ರಮವನ್ನು ಬಿಟ್ಟು ಸರ್ವ ಸಮ್ಮತವಾದ ಒಂದು ಕ್ರಮವನ್ನನುಸರಿಸುವುದರಿಂದ ಒಬ್ಬ ಗ್ರಂಥಕಾರನ ಭಾಷಾಶೈಲಿಯನ್ನು ಮತ್ತೊಬ್ಬರು ಅನುಸರಿಸಿದಂತಾಗಿ ಪರಸ್ಪರಾಭಿಪ್ರಾಯವನ್ನು ಅನುಮೋದಿಸುವಷ್ಟು ಸ್ನೇಹವು ಸಂವರ್ಧಿತವಾಗಬಹುದು. ಆದರೂ ಇದರಿಂದ ದೇಶಭೇದ ಪ್ರಯುಕ್ತವಾದ ಸಂಗತವಾದ ಕೆಲವು ಭಾಷಾಶೈಲಿಯೂ ಕೂಡ ಕಾಲಕ್ರಮದಲ್ಲಿ ನಷ್ಟವಾದರೂ ಆಗಬಹುದಾಗಿ ಕಾಣಬರುವುದು. ಆದುದರಿಂದ ಈ ಪ್ರಯತ್ನವನ್ನು ಭಾಷಾಭಿವೃದ್ಧಿಗೆ ಸಾಧಕವೆಂದು ಭಾವಿಸುವುದಕ್ಕಿಂತಲೂ ಭಾಷಾಸಂಕೋಚೀಕರಣ ಅಥವಾ ಭಾಷಾಸದೃಶೀಕರಣಕ್ಕೆ ಸಾಧಕವೆಂದು ಹೇಳಬಹುದಾಗಿರುವುದು. ಆದುದರಿಂದ ಇದಕ್ಕಿಂತಲೂ ಗ್ರಾಂಥಿಕಭಾಷೆಯು ದೋಷಶೂನ್ಯವಾಗಿರುವಂತೆಯೂ ತಾದೃಶಪಾಠ್ಯಪುಸ್ತಕಗಳನ್ನು ಬಳಸುವಂತೆಯೂ ಪ್ರಯತ್ನಿಸುವುದು ಉತ್ತಮವಾಗಿರುವುದು.

ಇನ್ನು ಈ ವಿಚಾರವನ್ನು ಸಾಕುಮಾಡಿ ಕನ್ನಡಿಗರೆಲ್ಲರಿಗೂ ಪ್ರಯೋಜನಕಾರಿಯಾದ ಜ್ಞಾನವನ್ನು ಹರಡುವುದಕ್ಕಾಗಿ ಸಣ್ಣ ಸಣ್ಣ ಗ್ರಂಥಗಳನ್ನು ಪ್ರಚುರಪಡಿಸಬೇಕೆಂಬ ಪ್ರಯತ್ನವನ್ನು ನೋಡಿದಲ್ಲಿ ಕನ್ನಡಿಗರಿಗೆ ಫಲಕಾರಿಯಾದ ಜ್ಞಾನವು ಆವಶ್ಯಕವಾದುದರಿಂದ ಈ ಪ್ರಯತ್ನವು ಶೀಘ್ರದಲ್ಲಿಯೇ ಕೈಗೂಡಬೇಕೆಂಬುದು ಸರ್ವರಿಂದಲೂ ಅಭಿನಂದನೀಯವಾಗಬಹುದು. ಈ ಸಂದರ್ಭದಲ್ಲಿ ಕನ್ನಡಿಗರು ವಿಶೇಷವಾಗಿ ಅಭಿವೃದ್ಧಿಗೆ ಬರಬೇಕಾದ ಕಾರಣ ಸಣ್ಣ ಸಣ್ಣ ಗ್ರಂಥಗಳಿಗಿಂತಲೂ ದೊಡ್ಡ ದೊಡ್ಡ ಗ್ರಂಥಗಳನ್ನು ಪ್ರಚಾರಪಡಿಸಬೇಕಾಗಿರುವುದಾವಶ್ಯಕವಾದರೂ ಈ ಸಣ್ಣ ಸಣ್ಣ ಗ್ರಂಥಗಳೇ ಉತ್ತರಕಾಲದಲ್ಲಿ ಯಾದರೂ ದೊಡ್ಡ ಗ್ರಂಥಕ್ಕೆ ಅಂಕುರಪ್ರಾಯವಾಗಬಹುದಾದುದರಿಂದ ಈ ಪ್ರಯತ್ನವು ಸರ್ವಾಭಿನಂದನೀಯವಾಗುವುದರಲ್ಲಿ ಸಂದೇಹವಿರಲಾರದು.

ಇನ್ನು ಈ ವಿಚಾರವನ್ನು ಸಾಕುಮಾಡಿ ಕನ್ನಡ ಗ್ರಂಥಗಳಲ್ಲಿ ಉಪಯೋಗಿಸ ಬೇಕಾದ ಪಾರಿಭಾಷಿಕ ಶಬ್ದನಿರ್ಣಯವೆಂಬ ಪ್ರಯತ್ನದ ವಿಷಯವಾಗಿ ವಿಚಾರ ಮಾಡಿದಲ್ಲಿ ಅರ್ಥಬೋಧಕ ಪದವು ಕನ್ನಡದಲ್ಲಿ ದೊರೆಯದಿದ್ದರೆ ಸಂಸ್ಕೃತದಲ್ಲಾದರೂ ಅಥವಾ ಇತರ ಭಾಷೆಯಲ್ಲಾದರೂ ಇರುವ ಶಬ್ದವನ್ನು ತೀರದೆ ಸೇರಿಸಿಕೊಳ್ಳಲು ಅಭ್ಯಂತರವೇನೂ ಬರಲಾರದು. ಹಾಗೆ ಮಾಡದಿದ್ದರೆ ಬೋಧನೀಯಾಂಶಬೋಧ ನವೇ ದುಷ್ಕರವಾಗುವುದಲ್ಲವೇ?

ಇನ್ನು ಕನ್ನಡ ಭಾಷೆಯ ಅಭಿವೃದ್ಧಿಯನ್ನು ಕುರಿತು ಹಿಂದೆ ನಾವು ಹೇಳಿ ರುವ ಮೂರು ಪ್ರಯತ್ನಗಳಲ್ಲದೆ ಬೇರೊಂದು ಪ್ರಯತ್ನವೂ ಕಾಣಬರುವುದು.

ಸಂಗತವಾಗಿ ನೋಡಿದಲ್ಲಿ ಕರ್ಣಾಟಕ ಭಾಷೆಯಲ್ಲಿ ಸಮಸ್ತವಾಗಿಯೂ ಅಸ ಮಸ್ತವಾಗಿಯೂ ಸಂಸ್ಕೃತಪದಗಳನ್ನು ಪ್ರಯೋಗಿಸುವ ರೂಢಿಯು ಅನಾದಿಸಿದ್ಧ ವಾಗಿರುವುದರಿಂದ ಸರಿಯಾದ ಕರ್ಣಾಟಭಾಷಾಜ್ಞಾನವಾಗಬೇಕಾದರೆ ಸಂಸ್ಕೃತ ಭಾಷಾಜ್ಞಾನವಿಲ್ಲದೆ ತೀರದಾದುದರಿಂದ ಕಾರ್ಣಾಟಕರಿಗೆ ಸಂಸ್ಕೃತಭಾಷಾಜ್ಞಾನ ವನ್ನುಂಟುಮಾಡುವುದೂ ಕೂಡ ಕರ್ಣಾಟಕ ಭಾಷಾಭಿವೃದ್ಧಿಗೆ ಸಾಧಕವಾಗಿರುವು ದೆಂದು ಸಹೃದಯರಿಗೆ ತೋರದಿರಲಾರದು.

ಈ ನಮ್ಮ ಲೇಖನವನ್ನು ನೋಡಿದಲ್ಲಿ ಕರ್ಣಾಟಕ ಭಾಷಾಭಿವೃದ್ಧಿಗಾಗಿ ಕರ್ಣಾಟಕಸಾಹಿತ್ಯಸಭೆಯ ಮಹನೀಯರು ಮಾಡಬೇಕೆಂದಿರುವ ಪ್ರಯತ್ನಗಳ ಲ್ಲದೆ (1) ಕನ್ನಡದಲ್ಲಿಯೂ ಅನೇಕವಾದ ಶಾಸ್ತ್ರೀಯ ಗ್ರಂಥಗಳನ್ನು ಬರೆಯಬೇಕೆಂಬ ದಾಗಿಯೂ, (2) ಇಂಗ್ಲಿಷ್ ಭಾಷೆಯಲ್ಲಿರುವಂತೆಯೇ ಈ ಭಾಷೆಯಲ್ಲಿಯೂ ಅನೇಕ ವಾದ ಡಿಗ್ರಿಯ ಪರೀಕ್ಷೆಗಳನ್ನೇರ್ಪಡಿಸಬೇಕೆಂಬದಾಗಿಯೂ ಹಾಗೆ ಪರೀಕ್ಷಿತರಿಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕೆಂಬದಾಗಿಯೂ (3) ಈ ಮೈಸೂರುದೇಶದ ಕೋರ್ಟು ಮುಂತಾದ ಅಧಿಕಾರಸ್ಥಾನಗಳಲ್ಲಿ ಕರ್ಣಾಟಕಭಾಷೆಯು ರಾಜಭಾಷೆಯಾಗಿರುವಂತೆ ರೂಢಿಗೆ ತರಬೇಕೆಂಬದಾಗಿಯೂ (4) ಪ್ರತಿಯೊಂದು ಕರ್ಣಾಟಕ ಪಾಠಶಾಲೆ ಯಲ್ಲಿಯೂ ತಪ್ಪಿದರೆ ತಾಲ್ಲೋಕು ಪಾಠಶಾಲೆಗಳಲ್ಲಿಯಾದರೂ ಕರ್ಣಾಟಭಾಷೆಗೆ ಉಪಯುಕ್ತವಾಗುವಷ್ಟು ಮಟ್ಟಿಗೆ ಸಂಸ್ಕೃತಭಾಷಾಪರಿಚಯಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂಬದಾಗಿಯೂ, ಹೀಗೆ ಮಾಡಿದಲ್ಲಿ ಕರ್ಣಾಟಭಾಷೆಯೂ ಕರ್ಣಾಟದೇಶೀಯರೂ ತಕ್ಕಮಟ್ಟಿಗೆ ಶೀಘ್ರದಲ್ಲಿಯೇ ಅಭಿವೃದ್ಧಿಗೆ ಬರಬಹುದೆಂಬ ದಾಗಿಯೂ ನಮ್ಮ ತಾತ್ಪರ್ಯವೆಂದು ತೋರದಿರಲಾರದು.

ಮುಖ್ಯವಾಗಿ ಕರ್ಣಾಟಕಸಾಹಿತ್ಯ ಸಭೆಯವರ ಉದ್ದೇಶವು ಜನಗಳ ಏಳಿಗೆಗೆ ಮೂಲಾಧಾರವಾಗಿರುವುದರಿಂದ ದೇಶೀಯರಾದ ಸರ್ವಪ್ರಜೆಗಳ ಕೃತಜ್ಞತೆಗೆ ಸರ್ವ ಕಾಲದಲ್ಲಿಯೂ ಇವರು ಪಾತ್ರರಾಗಿರುವಂತೆ ಈ ಮಹನೀಯರ ಉದ್ದೇಶವು ಶೀಘ್ರ ದಲ್ಲಿಯೇ ನೆರವೇರಬೇಕೆಂಬದಾಗಿ ಭಗವಂತನನ್ನು ಪ್ರಾರ್ಥಿಸುವುದು ಜನಗಳೆಲ್ಲರಿಗೂ ಕರ್ತವ್ಯವೆಂಬಂಶವು ಯಾರಿಗೂ ತೋರದಿರಲಾರದು.

ಪ್ರಕಟಣೆ

ಹಂಪೆ ಹರಿಹರದೇವರ ಗಿರಿಜಾ ಕಲ್ಯಾಣವೆಂಬ ಕನ್ನಡ ಚಂಪೂ ಗ್ರಂಥವನ್ನು ವಿಮರ್ಶಿಸಿ ಅದರಲ್ಲಿರತಕ್ಕ ಗುಣದೋಷವಿವೇಚನ ಲೇಖನವನ್ನು ಉತ್ತಮವಾಗಿ ಬರೆದು ಮಾರ್ಚಿ ಆಖೈರೊಳಗಾಗಿ ಪರಿಷತ್ಕಾರ್ಯದರ್ಶಿಯವರಿಗೆ ಕಳುಹಿಸತಕ್ಕ ಲೇಖಕರು ಬಹುಮಾನಕ್ಕೆ ಅರ್ಹರಾಗುತ್ತಾರೆಂದು ಇದಕ್ಕೆ ಮುಂಚೆ ತಿಳಿವಳಿಕೆ ಪತ್ರಿಕೆ ಪ್ರಕಟಿಸಿ ಇದೆ. ಮೇಲ್ಕಂಡ ಲೇಖನದ ವಿಚಾರದಲ್ಲಿ ಈ ಕೆಳಗೆ ಕೆಲವು ಸಂಗತಿಗಳನ್ನು ವಿವರವಾಗಿ ಲೇಖಕರ ತಿಳುವಳಿಕೆಗಾಗಿ ಛಾಪಿಸಿದೆ.

೧. ಈ ಗ್ರಂಥವನ್ನು ಬರೆದ ಕವಿಯ ಚರಿತ್ರೆಯನ್ನು ಸಂಕ್ಷೇಪವಾಗಿ ಬರೆದು ಈತನ ದೇಶ, ಮತ, ತಂದೆತಾಯಿಗಳು, ಇವರ ಸ್ಥಿತಿ ಇವೇ ಮೊದಲಾದುದು ಈ ಕಾವ್ಯದಿಂದ ಎಷ್ಟರಮಟ್ಟಿಗೆ ತಿಳಿದು ಬರುವುದೋ ಅದನ್ನು ನಮೂದಿಸಬೇಕು; ಮತ್ತು ಈ ವಿಷಯಕ್ಕೆ ಸಂಬಂಧಿಸುವಹಾಗೆ ಗ್ರಂಥದಲ್ಲಿ ಬರಬಹುದಾದ ಪದ್ಯಗಳನ್ನು ಅಥವಾ ವಾಕ್ಯಗಳನ್ನು ಲೇಖಕರು ತಮ್ಮ ಅಭಿಪ್ರಾಯಕ್ಕೆ ಅನುಗುಣವಾಗಿ ಅಲ್ಲಲ್ಲಿ ಬರೆಯುತ್ತ ಬರಬೇಕು; ಮತ್ತು ಗ್ರಂಥಕರ್ತನ ಚರಿತ್ರೆಗೆ ಸಂಬಂಧಪಡಬಹುದಾದ ಪದ್ಯಗಳೇನಾದರೂ ಇದ್ದರೆ ಅದನ್ನು ತೋರಿಸಬೇಕು.

೨. ಈ ಗ್ರಂಥದ ಕಥೆಯನ್ನು ಬರೆಯುತ್ತ ಅಲ್ಲಲ್ಲಿ ಆಕ್ಷೇಪಣೆಗಾಗಲೀ ಶ್ಲಾಘನೆಗಾಗಲಿ ಏನಾದರೂ ಸಂಗತಿಗಳು ಅಥವಾ ವರ್ಣನೆಗಳು ಇದ್ದರೆ ಅದನ್ನು ಲಾಕ್ಷಣಿಕರಮತರೀತ್ಯಾ ಚರ್ಚಾರೂಪವಾಗಿಯೋ ಅಥವಾ ಶ್ಲಾಘನೆಯಾಗಿಯೋ ಸಂದರ್ಭಾನುಸಾರ ಬರೆಯುತ್ತಾ ಬರಬೇಕು.

೩. ಕವಿಯು ಅಲ್ಲಲ್ಲಿ ಕೊಡತಕ್ಕ ವರ್ಣನೆಗಳ ಗುಣದೋಷಗಳನ್ನು ಅಲ್ಲಲ್ಲಿ ತೋರಿಸುತ್ತ ಅಭಿಪ್ರಾಯಕ್ಕೆ ಅನುಗುಣವಾದ ಪದ್ಯಗಳನ್ನು ಈ ಗ್ರಂಥದಿಂದ ತೆಗೆದು ಉದಾಹರಣೆಯಾಗಿ ಬರೆಯುತ್ತಾ ಬರಬೇಕು.

೪. ಈ ಕವಿಯು ಅಲ್ಲಲ್ಲಿ ಕೊಡತಕ್ಕ ಉಪಮಾದ್ಯಲಂಕಾರಗಳನ್ನು ವಿವರಿಸುತ್ತ ಅವು ಸಾಧುವೇ? ಅಸಾಧುವೇ? ಎಂಬುದನ್ನು ಚರ್ಚಾರೂಪವಾಗಿ ಬರೆಯುತ್ತಾ ಬರಬೇಕು.

೫. ಈ ಕವಿಯ ಪದ್ಯಗಳು ಸುಶ್ರಾವ್ಯವಾಗಿಯಿರತಕ್ಕ ಕಡೆಯಲ್ಲಿಯೂ ಅಥವಾ ಕರ್ಣಕಠೋರವಾಗಿರುವ ಕಡೆಯಲ್ಲಿಯೂ ಪದ್ಯಗಳ ಗುಣದೋಷಗಳನ್ನು ಛಂದಸ್ಸಿನ ಗುಣದೋಷಗಳನ್ನು ತೋರಿಸುತ್ತಾ ಉದಾಹರಣೆಗಳನ್ನು ತೋರಿಸುತ್ತಾ ಬರಬೇಕು.

೬. ಈ ಕವಿಯು ಯಾವ ಶೈಲಿಯಲ್ಲಿ ಬರೆದಿದ್ದಾನೆ? ಪದಪ್ರಯೋಗ, ಶೈಲಿ ಮೊದಲಾದುದು ಲಾಕ್ಷಣಿಕರ ಮತರೀತ್ಯಾ ಹೇಗಿದೆ? ಯಾವುದಾದರೂ ಕೆಲವು ಪ್ರಯೋಗಗಳನ್ನು ವಿಶೇಷಾರ್ಥದಲ್ಲಿ ಮಾಡಿದಾನೆಯೇ? ಯಾವ ಶಬ್ದಗಳನ್ನು ಯಾವ

ಉಪಮಾನಗಳನ್ನು ಪದೇಪದೇ ಬರೆಯುತ್ತಾನೆಯೋ? ಇದಕ್ಕೆಲ್ಲಾ ಉದಾಹರಣೆಯೊಡನೆ ಅಭಿಪ್ರಾಯವನ್ನು ಒರೆಯಬೇಕು.

೭. ಈ ಗ್ರಂಥದಲ್ಲಿರತಕ್ಕ ನಾಯಕನಾಯಿಕಾದಿಪಾತ್ರಗಳ ಉದಾಹರಣರೂಪವಾಗಿ ಗುಣದೋಷಗಳನ್ನು ತೋರಿಸುತ್ತಾ ಆಯಾ ಪಾತ್ರಾನುಗುಣವಾದ ತಾತ್ಪರ್ಯಗಳು ವಾಕ್ಯಗಳು ತಕ್ಕಹಾಗೆ ಇವೆಯೋ? ಇಲ್ಲವೇ ಎಂಬುದನ್ನು ಉದಹರಿಸಿ ತೋರಿಸುತ್ತ ಬರಬೇಕು.

೮. ಯಾವುದಾದರೂ ದೋಷಗಳಿದ್ದರೆ ಅವುಗಳನ್ನು ಹೋಗಲಾಡಿಸುವುದಕ್ಕೆ ಯಾವ ಪ್ರತೀಕಾರವನ್ನು ಸೂಚಿಸುತ್ತೀರೋ ಅದನ್ನು ಬರೆಯುತ್ತಾ ಬರಬೇಕು.

೯. ಈ ಗ್ರಂಥದಲ್ಲಿ ಸಂಬಂಧವಿಲ್ಲದ ಕವಲೇನಾದರೂ ಹೋಗಿದ್ದರೆ ತೋರಿಸಬೇಕು. ಅಥವಾ ಇರುವುದನ್ನು ಸಾಧಿಸಬೇಕು.

೧೦. ಈ ಗ್ರಂಥದ ಉಪಕ್ರಮವೂ ಉಪಸಂಹಾರವೂ ಮತ್ತು ಮಧ್ಯೆ ಬರುವ ಸಂಗತಿಗಳೂ ಒಂದೇ ಸಮನಾಗಿದೆಯೋ? ಭಿನ್ನಿಸಿದೆಯೋ? ಎಂಬುದನ್ನು ಉದಾಹರಣ ಮೂಲಕ ತೋರಿಸಬೇಕು.

೧೧. ಈ ಕವಿಯು ಮೇಲೆಹೇಳಿದ ಸಂಗತಿಗಳಲ್ಲಿ ಇತರ ಕವಿಗಳ ಗ್ರಂಥಗಳಿಂದ ಅದೇ ಅರ್ಥವನ್ನು ಕೊಡುವ ಪದ್ಯಗಳನ್ನು ಅಥವಾ ಪ್ರಯೋಗಗಳನ್ನು ತೋರಿಸುತ್ತಾ ಈ ಕವಿಗೂ ಇತರ ಕವಿಗಳಿಗೂ ಹೋಲಿಸುತ್ತಾ ಬರಬೇಕು.

೧೨. ಈ ಕವಿಯು ತನ್ನ ಕಾವ್ಯದಲ್ಲಿ ಇತರ ಯಾವುದಾದರೂ ಗ್ರಂಥಗಳಿಂದ ವಿಷಯಗಳನ್ನು ಸಂಗ್ರಹಮಾಡಿ ಬರೆದಿದಾನೆಯೋ? ಅಂಥ ಸಂಗತಿಗಳನ್ನು ಸೂಚಿಸಬೇಕು.

೧೩. ಕರ್ಣಾಟಕಕಾವ್ಯಕಲಾನಿಧಿಮುದ್ರಣಕ್ಕೂ ಮತ್ತು ಪುಸ್ತಕವ್ಯಾಪಾರಿಗಳಲ್ಲಿ ದೊರೆಯುವ ಮುದ್ರಣದ ಪ್ರತಿಗಳಿಗೂ ಇರುವ ವ್ಯತ್ಯಾಸಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು.

ಲೇಖಕರು ಗುಣದೋಷಗಳನ್ನು ನಿಷ್ಪಕ್ಷಪಾತವಾಗಿ ತೋರಿಸದೆ ಇರಲಾರರೆಂದು ನಂಬಿದೆ.

ಮಾರ್ಚಿ ಆಖೈರುವರೆಗೆ ಕೊಟ್ಟಿದ್ದ ಕಾಲವನ್ನು ಜೂನ್ ಆಖೈರುವರೆಗೆ ಹೆಚ್ಚು ಮಾಡಿದೆ.

ಕರ್ಣಾಟಕಸಾಹಿತ್ಯ ಪರಿಷತ್ತು ಬೆಂಗಳೂರು.	M. S. Puttanna
೧೬—೩—೧೯೧೯.	ಕಾರ್ಯದರ್ಶಿ.

ಲಾವಣಿಗಳು.

ಕನ್ನಡಭಾಷೆಯಲ್ಲಿ ಲಾವಣಿಗಳು ಹೇರಳವಾಗಿ ದೊರೆಯುವುವು. ಹೀಗೆ ಲಾವಣಿಗಳನ್ನು ರಚಿಸಲು ಕಾರಣವೇನಿರಬಹುದೆಂದು ಪರ್ಯಾಲೋಚಿಸಿದರೆ ಭಾಷಾ ಪರಿಚಯವಿಲ್ಲದಿರುವ ಕೇವಲ ಗ್ರಾಮ್ಯಜನರಿಗೂ ಕೂಡ, ನೀತಿ, ಚರಿತ್ರೆ ಮುಂತಾದ ವಿಷಯಗಳು ತಿಳಿಯಲಿ ಎಂದು ಹಾಡಿನ ಫಕ್ಕಿಯಲ್ಲಿ ಬರೆದು ಲೋಕೋಪಕಾರವಮಾಡಿರುವಂತೆ ತೋರಿಬರುವುದು. ಇಂತಹ ಲಾವಣಿಗಳು ಹಳ್ಳಿಪಳ್ಳಿಗಳಲ್ಲಿ ಅಕ್ಷರಜ್ಞಾನ ಶೂನ್ಯರಾಗಿರುವ ಹೆಂಗಸರು ಮಕ್ಕಳಿಂದಲೂ ಇಷ್ಟೇ ಅಲ್ಲದೆ ಕಾಡು ಜನರಿಂದಲೂ ಕೂಡ ಕೇಳಬಹುದು. ಆದರೆ ಇಂತಹ ಲಾವಣಿಗಳಲ್ಲಿ ಭಾಷಾಸೌಷ್ಟವವೆಂಬುದು ಗಗನಕುಸುಮಪ್ರಾಯವಾಗಿಯೇ ಇರುವುದು. ಅದು ಹೇಗಾದರು ಇರಲಿ. ಏತಕ್ಕೆಂದರೆ ಇವು ಭಾಷಾಭಿಜ್ಞರಿಗಾಗಿ ಮಾಡಿದುದಲ್ಲವಾದುದರಿಂದ ನಮಗೆ ಅವುಗಳಮೇಲೆ ದೋಷದೃಷ್ಟಿಯಿಲ್ಲ. ಆದರೆ ಶುದ್ಧವಾದ ಭಾಷೆಯಲ್ಲಿ ಇಲ್ಲವೆಂದೂ ಅಥವಾ ಇರಕೂಡದೆಂದೂ ನಮ್ಮ ತಾತ್ಪರ್ಯವಲ್ಲ. ಶುದ್ಧವಾದ ಭಾಷೆಯಿಂದ ರಚಿತವಾದ ಲಾವಣಿಗಳು ಇದ್ದರೂ ಇರಬಹುದು. ಅಂತಹವುಗಳನ್ನು ಯಾರಾದರೂ ಮಹನೀಯರು ನಮ್ಮಲ್ಲಿಗೆ ಕಳುಹಿಸಿಕೊಟ್ಟರೆ ಕೃತಜ್ಞತೆಯಿಂದ ಸ್ವೀಕರಿಸಿ ಮುದ್ರಿಸಲು ಪ್ರಯತ್ನಿಸಲಾಗುವುದು.

ಪ್ರಕೃತ ನಮ್ಮಲ್ಲಿಗೆ ಕೆಲವು ಲಾವಣಿಗಳು ಬಂದವು. ಅವುಗಳಲ್ಲಿ, "ನಂಜನಗೂಡು ಲಾವಣಿ" ಎಂಬುದನ್ನು ನಮ್ಮ ವಾಚಕರ ದೃಷ್ಟಿಗೆ ಗೋಚರವಾಗಲೆಂದು ವಿನೋದಾರ್ಥವಾಗಿ ಪ್ರಕಟಿಸಿರುವೆವು. ಇದಕ್ಕಾಗಿ ವಾಚಕರ ದೃಷ್ಟಿಯು ದೋಷದಕಡೆಗೆ ಹೋಗಲಾರದೆಂದು ಭಾವಿಸಿದೆ.

ನಂಜನಗೂಡು ಲಾವಣಿ.

೧. ಮೂರುಲೋಕಕೆ ಶಿವ ಕಳುಹಿದನು ಮೂರು ಕಣ್ಣಿನ ತೆಂಗಿನಕಾಯಿ
ಭಕ್ತ ಜನಗಳು ಬೇಡಿಕೊಂಬುತಾರೆ । ಕೃಷ್ಣನೆಂಬ ಕುಂಬಳಕಾಯಿ

೨. ಸುತ್ತದೇಶದೊಳು ಎತ್ತಿ ಆಳುತಾರೆ ಒತ್ತಲಾಗೆ ಪರಂಗಿಕಾಯಿ ।
ಸುಳ್ಳು ಮಾತುಗಳನಾಡಲಿಬೇಡ । ಬುದ್ಧಿನೋಡು ಬದನೇಕಾಯಿ ।

೩. ಸರ್ವಜನಗಳಿಗೆ ಬೇಕಾಗುವುದು । ಅನ್ನಮಾಡದು ಸೋರೇಕಾಯಿ ।
ಇಬ್ಬರು ಹೆಂಡಿರ ಕೂಡಬಾರದು । ಜಗಳನೋಡು ಸವತೆಕಾಯಿ

೪. ಸಂಸಾರವೆಂಬುದು ಮಾಯದಪಾರ ಎರಡು ದಿನದ ಬಾಳೇಕಾಯಿ ।
ನಂಬಿಕೆಯಿಲ್ಲವು ಶರೀರವೆಂಬುದು ಹೊಣಗಿಹೋಗುವುದು ಬೆಂಡೇ ಕಾಯಿ ।

೫. ಮನೆಯೊಳಗೆ ಯಜಮಾನನಿದ್ದರೆ ಅದುವೆಂಬುದು ಓರೇಕಾಯಿ ।
ನಾಲ್ವರು ಕುಳಿತು ಹೇಳಿದಮಾತು ಮೀರಬಾರದು ಹಾಗಲಕಾಯಿ ।

೬. ಸಪ್ಪತಿಂದರೆ ಪಥ್ಯಮಾಡಿದಹಾಗೆ ಒಳ್ಳೆ ದೃತೆ ಕಾರಮೆಣಸಿನಕಾಯಿ ।
ಮನೆಹೆಂಡತಿಗೆರಡುಮಕ್ಕಳಿದ್ದರೆ ಅದನೆಂಬರು ಜವಳಿಕಾಯಿ ।

೭. ವರದರಾಜಸ್ವಾಮಿಯಿರುವ ಕಂಚಿಯೊಳಗೆ ಕಂಚೀಕಾಯಿ ।
ನಂಜನಗೂಡು ಸಾಲುತೋಪಿನಾಗೆ ಈಶ್ವರನಪತ್ರೀಯಕಾಯಿ ।

೮. ಹಗಲುಯಿರುಳೂಧ್ಯಾನವಮಾಡುತಾರೆ ಮನಸಿನೊಳಗೆ ರಾಮಫಲ ಕಾಯಿ
ಗಂಡನಅಂಜಿಕೆಮಾಡಿದಳು ಪತಿವ್ರತೆ ಸೀತಾಫಲದಕಾಯಿ ।

೯. ಮಾವನತಲೆಯ ಹೊಯ್ದು ಬಿಟ್ಟನು ರಾಮಸೇನೆ ಮಾವಿನಕಾಯಿ ।
ಸಜ್ಜನಮನುಜರ ಸಂಗತಿಮಾತು ಕೈಯೊಳಗೆ ರುದ್ರಾಕ್ಷಿಕಾಯಿ ।

೧೦. ದುಷ್ಟರಸಂಗವ ಮಾಡಬೇಡಿರೋ ಅಡವಿಯೊಳಗೆ ಮುಕ್ಕೇಕಾಯಿ ।
ಸೂಳೇರಸಂಗವ ಮಾಡಬೇಡಿರೋ ನಾಡಿನೊಳಗೆ ಕವಡೆಕಾಯಿ ।

೧೧. ರಬ್ಬವಾಗುವುದು ಶರೀರವೆಂಬುದು ಕೊಳೆತಹಾಗೆ ಕುಂಬಳಕಾಯಿ ।
ದ್ರೌಪದಿಮಾನವನುಳಿಸಿದನಣ್ಣ ನರಹರಿಯೇ ನೇರಳೆಕಾಯಿ ।

೧೨. ಮದ್ದಗಿರಿ ರಾಜ್ಯಕ್ಕೆ ಹೆಸರು ಕೊಟ್ಟಂಗೈತೆ ಒಳ್ಳೇಕಾಯಿ ।
ವೆಂಕೋಜಿದಾಸಣ್ಣ ಪದಾಹೇಳುತ್ತಾನೆ ದಾಳಿಂಬರೆಕಾಯಿ ।

೧೩. ಕೆಟ್ಟಪದಗಳನಾಡಲಿಬೇಡ ಬಹಳಹುಳೀ ಹುಣಿಸೇಕಾಯಿ ।
ಮನೆಯಹೆಂಡತಿಗೆರಡು ಮಕ್ಕಳಿದ್ದರೆ ಭಗವಂತಗೆ ಅಂಜರುಕಾಯಿ ॥

ಮದರಾಸು ಇಲಾಖೆಯಲ್ಲಿ ರಿಜಸ್ಟರು ಮಾಡಲ್ಪಟ್ಟ ಹೊಸ ಗ್ರಂಥಗಳು.

೧. ಶುಕಶಿಕ್ಷಣ ಮ॥ ರಾ॥ ಎಮ್. ಎನ್. ಕಾಮತರಿಂದ ರಚಿತವಾದ್ದು [ಕ್ರಯ ೪ ಆಣೆ.

೨. ಮೆಣಸಿನಕಾಳಪ್ಪ ,, ಯು. ಶ್ರೀನಿವಾಸ ಕಾಮತರಿಂದ ರಚಿತವಾದ್ದು [ಕ್ರಯ ೯ ಪೈ.

೩. ಹೇನುಸತ್ತುಕಾಗೆ ಬಡವಾಯಿತು ಕ್ರಯ ೬ ಪೈ.

೪. ಅರ್ಗಣಮುಷ್ಟಿ ಕ್ರಯ ೬ ಪೈ.

೫. ಐತಿಹಾಸಿಕದೇಖಾವೆಗಳ ವೃತ್ತಾಂತವು ಕ್ರಯ ೨ ಆಣೆ.

೬. ಸಪ್ತಾಹದಕಥೆ ಎಮ್. ಗೋವಿಂದಪೈ ಕ್ರಯ ೬ ಪೈ.

೭. ಭಾರತ ಭಾಗ್ಯವಿಧಾತ ಕ್ರಯ ೩ ಪೈ.

೮. ಕಲಿತಪ್ರೌಢ ನರಸಿಂಹನಾಯಕನಿಂದ ರಚಿತವಾದ್ದು ಕ್ರಯ ೩ ಆಣೆ.

೯. ಶ್ರೀವೆಂಕಟೇಶ ಭಕ್ತಿಸಾರವು ಅಚ್ಯುತ ಬಾಳಾಜಿ ಪಿ. ಕ್ರಯ ೨ ಆಣೆ.

೧೦. ಶ್ರೀಮದ್ಭಾಗವತವು ಪಂಡಿತ ಅಳಸಿಂಗರಾಚಾರ್ಯರಿಂದ ಪರಿವರ್ತಿಸಿದ್ದು [ಕ್ರಯ ೨ ರೂ.

೧೧. ದೇಯುದಾಸ ವಿರಚಿತ ಮದಚೌಪದಗಳು ಕ್ರಯ ೧ ಆಣೆ.

೧೨. ವೇದಾಂತಿಪಿಸೋಪ ಕೆ. ನಾರಾಯಣಾಚಾರ್ಯ ಕ್ರಯ ೧ ರೂ.

೧೩. ಪದ್ಯಸಂಗ್ರಹ ಎಮ್. ಎನ್. ಕಾಮತರಿಂದ ಶೋಧಿಸಿದುದು ಕ್ರಯ ೧ ಆಣೆ.

೧೪. ಸಂದೋಪ ಸುದಾಖ್ಯಾನ ಎಮ್. ಎಸ್ ರಾಮಪ್ಪಭಟ್ಟ ಕ್ರಯ ೪ ಆಣೆ.

೧೫. ಉಡಪಿಕ್ಷೇತ್ರಮಹಿಮೆ ಬಿ. ಶ್ರೀನಿವಾಸಾಚಾರ್ಯ ಕ್ರಯ ೪ ಆಣೆ.

೧೬. ವೆಂಕಟೇಶ ಕ್ಷಮಾಪನಹಾಡು ಕ್ರಯ ೧ ಆಣೆ.

೧೭. ವೆಂಕಟೇಶ ಮಹಾತ್ಮ್ಯೆಯು ಕ್ರಯ ೨ ಆಣೆ.

೧೮. ಆರೋಗ್ಯವಿಜ್ಞಾನ ರಾಮಚಂದ್ರಜಲಿತಲ ಕ್ರಯ ೬ ಆಣೆ.

ಮೈಸೂರು ಸೀಮೆಯಲ್ಲಿ ಹೊಸದಾಗಿ ಪ್ರಚುರವಾಗಿರತಕ್ಕ ಪುಸ್ತಕಗಳ ಪಟ್ಟಿ.

೧. ಬಾಲಿಕಾಗೀತ ಮುಕ್ತಾ ಕಲಾಪ ಮೈಸೂರು ವಿದ್ಯಾಭ್ಯಾಸದ ಇಲಾಖೆ
ಯಿಂದ ಮೂರನೆಯ ಛಾಪೆಯಾಗಿ ೧೦೦೦ ಪ್ರತಿಗಳು ಕ್ರಯ ೮ ಆಣೆ.

೨. ಗೀತಕುಸುಮಾಕರ ಕೆ. ಸಾಲಿಗ್ರಾಂ ರಾಮಸ್ವಾಮಯ್ಯಂಗಾರ್ಯರಿಂದ
ರಚಿತವಾದ್ದು ಹಾಡಿನಪುಸ್ತಕ ಪ್ರಥಮಮುದ್ರಣ ೧೦೦೦ ಪ್ರತಿಗಳು ಕ್ರಯ ೬ ಆಣೆ.

೩. ಗೋಪಾಲಕೃಷ್ಣ ಗೋಖಲೆಯವರ ಮ॥ ರಾ॥ ಡಿ. ವಿ. ಗುಂಡಪ್ಪನವರಿಂದ
ಚರಿತೆ ಮತ್ತು ಉಪನ್ಯಾಸಗಳು ರಚಿತವಾದದ್ದು ಮೊದಲನೆಯ ಮುದ್ರಣ
೧೦೦೦ ಪ್ರತಿಗಳು ಕ್ರಯ ೬ ಆಣೆ.

೪. ಪ್ರಹ್ಲಾದಚರಿತ್ರನಾಟಕಂ ಮ॥ ರಾ॥ ಕೆ. ಸಾಲಿಗ್ರಾಂ ರಾಮಸ್ವಾಮಯ್ಯಂ
ಗಾರ್ಯರಿಂದ ರಚಿತವಾದ್ದು.
ದ್ವಿತೀಯಮುದ್ರಣ ೧೦೦೦ ಪ್ರತಿಗಳು ಕ್ರಯ ೬ ಆಣೆ.

೫. ಕಿಂಡರ್ ಗಾರ್ಟನ್ ಕ... ಜೆ. ಕೃಷ್ಣಶಾಸ್ತ್ರಿಗಳಿಂದ ರಚಿಸಿದ್ದು ಕ್ರಯ ೧೨ ಆಣೆ.

೬. ಸುಶೀಲೆ ಶ್ರೀಮತಿ ತಿರುಮಲಮ್ಮನವರಿಂದ ರಚಿತವಾದ್ದು ಕ್ರಯ ೬ ಆಣೆ.

೭. ವಿರಾಗಿಣಿ ಶ್ರೀಮತಿ ತಿರುಮಲಮ್ಮ ಗೃಹಸಂಬಂಧವಾದ ಅನುಭವಗಳನ್ನು ತೋರಿಸತಕ್ಕ ಕಲ್ಪನಾಕಥೆ ಕ್ರಯ ೧ ರೂ.

೮. ವಿಕ್ರ... ಶ್ರೀಮತಿ ತಿರುಮಲಮ್ಮನವರಿಂದ ರಚಿತವಾದ್ದು ಬುದ್ಧಿ ಚಮತ್ಕಾರವನ್ನು ತೋರಿಸತಕ್ಕ ಕಲ್ಪನಾಕಥೆ ಕ್ರಯ ೧—೨—೦

೯. ದ...ಲ್ ಫ್ಲಾಗ್ ಸಿಗ್ನಲಿಂಗ್ ಮ॥ ರಾ॥ ರಾಮಸುಬ್ಬಯ್ಯನವರಿಂದ ರಚಿತವಾದ್ದು ಕ್ರಯ ೨೮. ಓಸ್ಟೆ.

೧೦. ಕ್ಷಯರೋಗವು ಮ॥ ರಾ॥ ಎಚ್. ಕೆ. ಮಲ್ಲಪ್ಪನವರಿಂದ ರಚಿತವಾದ್ದು ಕ್ರಿ

೧೧. ಅರ್ಥಸಾಧನ ಎಮ್. ವೆಂಕಟಕೃಷ್ಣಯ್ಯನವರಿಂದ ರಚಿಸಿದ್ದು ಕ್ರಯ ೮ ಆಣೆ

೧೨. ಹುಚ್ಚುವೀರಶಾಸ್ತ್ರಿಸ್ತವನಂ ಮ॥ ರಾ॥ ಜೀರಿಗೆ ಬಸವಲಿಂಗಯ್ಯನವರಿಂದ ರಚಿತವಾದದ್ದು ಕ್ರಯ ೨ ಆಣೆ.

೧೩. ಶ್ರೀನವಬೃಂದಾವನ ಗಡ್ಡೆಯ ಚರಿತ್ರೆ ರಾವ್ ಬಹದ್ದೂರ್ ಹನುಮಂತಗೌಡರಿಂದ ರಚಿತವಾದ್ದು ಕ್ರಯ ೨ ಆಣೆ.

೧೪. ಲೇಖ್ಯಬೋಧಿನಿ ಎಚ್. ವಿ. ನಂಜುಂಡಯ್ಯನವರಿಂದ ರಚಿತವಾದ್ದು ಕ್ರ ೧೦ ಆಣೆ.

೧೫. ಸಟೀಕ ಅರ್ಥಪ್ರಕಾಶ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಯವರಿಂದ ರಚಿತವಾದ್ದು ಕ್ರಯ ೧೨ ಆಣೆ.

೧೬. ಮಾಡಿದ್ದುಣ್ಣೋಮಹರಾಯ ಎಮ್. ಎಸ್. ಪುಟ್ಟಣ್ಣ ಬಿ.ಎ. ಕ್ರಯ ೧೨ ಆಣೆ.

೧೭. ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ ಮುಮ್ಮಡಿಕೃಷ್ಣರಾಜ ಒಡೆಯರ ಆಸ್ಥಾನ ಕ್ರಯ ೧—೦—೦

೧೮. ಸಾಲಾರ ಜಂಗನ ಚರಿತ್ರೆ ಡಿ॥ ೦—೬—೦

೧೯. ಲೇಖನ ಲಕ್ಷಣ ಡಿ॥ ೦—೬—೦

೨೦. ಸುಮತಿ ಮದನಕುಮಾರ ಚರಿತ್ರೆ ಡಿ॥ ೧ನೆಯ ಭಾಗ ೦—೮—೦

ಡಿ॥ ೨ನೆಯ ಭಾಗ ೦—೭—೦

[illegible]

[illegible] ಕನ್ನಡ ಬೋರ್ಡ್ [illegible] ಪರಿಷತ್ತಿನವರ ಕೋರಿಕೆಯಂತೆ ಧಾರವಾಡದ ರಿಟೈರ್ಡ್ [illegible] ಆರ್. ಎಚ್. ದೇಶಪಾಂಡೆ ಎಮ್. ಎ. [illegible] ನಿಯಮಿಸಿರುತ್ತಾರೆ.

* * *

[illegible] ಪತ್ರಿಕಾಕರ್ತರು [illegible] ಕಳುಹಿಸಿಕೊ[illegible] [illegible] ಪತ್ರಿಕೆಗಳನ್ನು [illegible]

ಪುಸ್ತಕ ಭಂಡಾರ.

ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಉಚಿ[illegible]ವಾಗಿ ಬಂದಿರುವ ಗ್ರಂಥಗಳ ಮತ್ತು ದಾ[illegible]ಪಟ್ಟಿ

ಗ್ರಂಥಗಳ ಹೆಸರು. [illegible]

[illegible]
[illegible] ಮ. ರಾ. [illegible] ಬಸವಲಿಂಗ
[illegible] [illegible]
[illegible] ಬೆಂಗಳೂರು.
[illegible]

ಭಕ್ತಿಯೋಗ.

[illegible] ಮ. ರಾ. [illegible] ಸುಬ್ಬರಾಯರು
[illegible] ಬೆಂಗಳೂರು.

ಪರಿಷತ್ಪತ್ರಿಕೆಯನ್ನು ಕೊಂಡುಕೊ[illegible]ವರು.

[illegible] ಮ. ರಾ. [illegible] ಎಚ್. ಕೆ. [illegible]ನವರು. [illegible]—೦—
ಬೆಂಗಳೂರು